ಮಾತೃ ದೇವತಾ ಆರಾಧನೆ

ಉಗಮ ಮತ್ತು ವಿಕಾಸ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಪಿಹೆಚ್.ಡಿ. ಪ್ರಬಂಧ)

ಸಂಶೋಧಕ

ಕಲಮೇಶ ಮಣ್ಣ್ಯಾಚಾರ

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

೨೦೦೨

2

ಪರಾಮರ್ಶೆಗೆ ಮಾತ್ರ

'ಸಿರಿಗನ್ನಡ' ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

'ಸಿರಿಗನ್ನಡ' ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ ೫೮೩ ೨೭೬.

Binding at Creator
Hospet. Ph : 423152

02

ಅಂಗವ್ಯ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

‘ಸಿರಿ

ಕ

Binding at Creator
Hospet. Ph : 423152

02

AKSHARA GRANTHALAYA
ACC.NO. 051661

‘ಸಿರಿ

ಕನ

Binding at Creator
Hospet. Ph : 423152

02

ಮಾತೃ ದೇವತಾ ಆರಾಧನೆ

ಉಗಮ ಮತ್ತು ವಿಕಾಸ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಪಿಹೆಚ್.ಡಿ. ನಿಬಂಧ)

ಸಂಶೋಧಕ

ಕಲವೀರ ಮನ್ವಾಚಾರ

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರವಾಚಕರು ಮತ್ತು ಮುಖ್ಯಸ್ಥರು

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

೨೦೦೨

051661

291.543
MAN

02
ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.



Binding at Creator
Hospet. Ph : 423152

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೃಢೀಕರಣ ಪತ್ರ

ಶ್ರೀ ಕಲವೀರ ಮನ್ವಾಚಾರ ಇವರು 'ಮಾತೃ ದೇವತಾ ಆರಾಧನೆ: ಉಗಮ ಮತ್ತು ವಿಕಾಸ' ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿ, ಜಾನಪದ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಈ ನಿಬಂಧವನ್ನು ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: ೨.೧೨.೨೦೦೨
ವಿದ್ಯಾರಣ್ಯ

(ಡಾ. ಮಂಜುನಾಥ ಬೇವಿನಕಟ್ಟಿ)
ಮಾರ್ಗದರ್ಶಕರು
ಮುಖ್ಯಸ್ಥರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪ್ರಮಾಣ ಪತ್ರ

'ಮಾತೃ ದೇವತಾ ಆರಾಧನೆ: ಉಗಮ ಮತ್ತು ವಿಕಾಸ' ಎಂಬ ಶೀರ್ಷಿಕೆಯ ಈ ನಿಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಡಾ. ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ನಿಬಂಧ ಅಥವಾ ಅದರ ಯಾವುದೇ ಭಾಗವನ್ನು ಹಿಂದೆ ಯಾವುದೇ ಪದವಿಗಾಗಲಿ ಅಥವಾ ಇತರೆ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲ ಎಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೨.೧೨.೨೦೦೨

ಕಲವೀರ ಮನ್ಯಾಚಾರ
ಪಿಎಚ್.ಡಿ. ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೃತಜ್ಞತೆಗಳು

- ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ, ಗುರುಗಳು ಹಾಗೂ ಕುಲಸಚಿವರಾದ ಡಾ. ಕೆ.ವಿ. ನಾರಾಯಣ, ಅಧ್ಯಯನಾಂಗದ ನಿರ್ದೇಶಕರಾದ ಡಾ.ಕರೀಗೌಡ ಬೀಚನಹಳ್ಳಿ ಅವರಿಗೆ.
- ಪಿಎಚ್.ಡಿ. ಮಾರ್ಗದರ್ಶನ ಮಾಡಿದ ಪ್ರೀತಿಯ ಜಾನಪದ ವಿಭಾಗದ ಮುಖ್ಯಸ್ಥರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ.
- ಗುರುಗಳು ಮತ್ತು ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ದೇವರಕೊಂಡಾರೆಡ್ಡಿ ಹಾಗೂ ವಿಶ್ವವಿದ್ಯಾಲಯದ ಎಲ್ಲಾ ಸ್ನೇಹಿತರಿಗೆ,
- ಅಧ್ಯಯನಕ್ಕೆ ಪ್ರೀತಿಯಿಂದ ಸಹಕರಿಸಿದ ಅಣ್ಣ, ಅತ್ತಿಗೆಯವರಿಗೆ, ಮಡದಿ ಮಮತಾ, ಮಗಳು ಮೌನಳಿಗೆ.
- ಸಂಶೋಧನೆಗೆ ಪೂರಕವಾಗಿ ಪುಸ್ತಕಗಳನ್ನು ಒದಗಿಸಿದ ಗ್ರಂಥಾಲಯದ ಸಿಬ್ಬಂದಿಯವರಿಗೆ, ಛಾಯಾ ಚಿತ್ರ ಒದಗಿಸಿದವರಿಗೆ, ರಿಚರ್ಡ್ ಡಿಸೋಜ, ಅನಿತಾ ಡಿಸೋಜ ಅವರಿಗೆ.

ನನ್ನ ಪ್ರೀತಿಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಕಲವೀರ ಮನ್ವಾಚಾರ

ಪರಿವಿಡಿ

ಛಾಯಾಚಿತ್ರಗಳ ವಿವರ

೧ಅ. ತಾಯಿ ಮತ್ತು ಮಗು, ೧೬ನೆಯ ಶತಮಾನದ ವಿಗ್ರಹ, ಕರ್ನಾಟಕ

೧. ಕ್ರಿ.ಪೂ. ಸುಮಾರು ೨೨,೦೦೦ರಿಂದ ೧೮,೦೦೦ ವರ್ಷಗಳ ಪೂರ್ವದಲ್ಲಿಯ ಮಾತೃದೇವತೆಯ ವಿಗ್ರಹ, ಲೌಸ್ಸೆಲ್

೨. ಸುಮಾರು ಅದೇ ಕಾಲದಲ್ಲಿ ಕಂಡು ಬರುವ ಮತ್ತೊಂದು ಮಾತೃದೇವತೆಯ ವಿಗ್ರಹ. ವಿಲ್ಲೆಂಡ್ರೂಫ್

೩. ಡೊಲ್ನಿವೆಸ್ಟೋನ್ನಿ, ಜೆಕೊಸ್ಲೊವಿಕೆಯ, ಸುಮಾರು ಅದೇ ಕಾಲ

೩ಎ. ವಾಯುವ್ಯ ಫ್ರಾನ್ಸನ ಪ್ರೈನೆಸ್ ಪ್ರದೇಶದಲ್ಲಿ ಕಂಡುಬರುವ ವಿಗ್ರಹ. ಇದೇ ಮಾದರಿಯ ವಿಗ್ರಹವು ಸಿಂಧೂ ನಾಗರಿಕತೆಯಲ್ಲಿ ಕಂಡುಬರುತ್ತದೆ.

೪. ಸಿಂಧೂ ನಾಗರಿಕತೆಯಲ್ಲಿಯ ಮಾತೃದೇವತೆಯ ವಿಗ್ರಹ. ಕ್ರಿ.ಪೂ.ಸು. ೨೫೦೦

೫. ಅದೇ ನಾಗರಿಕತೆಯಲ್ಲಿ ಕಂಡುಬರುವ ಮತ್ತೊಂದು ವಿಗ್ರಹ

೬. ಸಿಂಧೂ ನಾಗರಿಕತೆಯ ಮುಂದುವರಿಕೆಯ ರೀತಿಯಲ್ಲಿ ಕ್ರಿ.ಪೂ. ಸು. ೩೦೦ರಲ್ಲಿ ಮಥುರಾದಲ್ಲಿ ಕಂಡುಬಂದ ವಿಗ್ರಹ.

೭. ನಾಟ್ಯ ಸರಸ್ವತಿ, ಹೊಯ್ಸಳ ೧೩ನೆಯ ಶತಮಾನ

೮. ಸರಸ್ವತಿ, ಬಾಗಳಿ. ೧೨ನೆಯ ಶತಮಾನ

೯. ಲಕ್ಷ್ಮಿ, ದೊಡ್ಡಗದ್ದವಳ್ಳಿ. ೧೩ನೆಯ ಶತಮಾನ

೧೦. ಮಹಾಲಕ್ಷ್ಮಿ, ತಂಜಾವೂರು

೧೧. ಲಕ್ಷ್ಮಿ, ಹೈದರಾಬಾದ್ ವಸ್ತುಸಂಗ್ರಾಲಯ

೧೨. ಜಯಲಕ್ಷ್ಮಿ

೧೩. ಸಿಂಧೂ ನಾಗರಿಕತೆ. ದುರ್ಗಾಮಹಿಷಮರ್ದಿನಿಯ ಕಲ್ಪನೆಯ ಪ್ರಾಕ್‌ರೂಪ.

೧೪. ದುರ್ಗಾಮಹಿಷಮರ್ದಿನಿ, ಮಹಿಷ ಮಂಟಪ, ಮಹಾಬಲಿಪುರಂ

೧೫. ದುರ್ಗಾ, ಆದಿವರಾಹ ಮಂಟಪ, ಮಹಾಬಲಿಪುರಂ

೧೬. ಕಾಳಿ, ಆಧುನಿಕ ಬೆಂಗಾಳಿ ಶೈಲಿಯ ವರ್ಣಚಿತ್ರ

೧೭. ಮಹಿಷಮರ್ದಿನಿ, ಓರಿಸ್ಸಾ

೧೮. ಸಿಂಧೂ ನಾಗರಿಕತೆಯಲ್ಲಿಯ ಸುಡಾವೆಯ ಮುದ್ರೆ. ಸಪ್ತಮಾತೃಕೆಯ ಪ್ರಾಚೀನ ರೂಪವೆನ್ನಲಾಗಿದೆ.

೧೯. ಬ್ರಾಹ್ಮಿ

೨೦. ವೈಷ್ಣವಿ

೨೧. ಕೌಮಾರಿ

೨೨. ವಾರಾಹಿ

೨೩. ಮಾಹೇಶ್ವರಿ

೨೪. ಇಂದ್ರಾಣಿ

೨೫. ಚಾಮುಂಡಾ

೨೬. ಚಾಮುಂಡಾಳ ಇನ್ನೊಂದು ಮಾದರಿ

ಆರಾಧನೆ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಷಯ ಪ್ರವೇಶ

ಮಾತೃದೇವತೆಯ ಆರಾಧನೆ ಅಥವಾ ಶಕ್ತಿಯ ಆರಾಧನೆಯು ಭಾರತದ ಧಾರ್ಮಿಕ ಇತಿಹಾಸದಲ್ಲಿ ಪ್ರಮುಖವಾದ ಘಟನೆಯಾಗಿದೆ. ಪ್ರಪಂಚದಲ್ಲಿ ಎಲ್ಲಾ ಕಡೆ ಪ್ರಾಚೀನ ಕಾಲದಿಂದಲೂ ಕಂಡುಬಂದರೂ ಇಂದಿಗೂ ವಿಶಿಷ್ಟವಾಗಿ ಬೆಳೆದು ಬಂದಿರುವುದು ಭಾರತದಲ್ಲಿ ಮಾತ್ರ. ಶಕ್ತಿಯ ಆರಾಧನೆಯು ಗ್ರಾಮದೇವತೆಗಳ ರೂಪದಲ್ಲಿ, ಶಿಷ್ಟದೇವತೆಗಳ ರೂಪದಲ್ಲಿ ವ್ಯಾಪಕವಾದ ಆಚರಣೆಯ ರೂಪದಲ್ಲಿ ಕಾಣಬರುತ್ತದೆ. ಪ್ರಪಂಚದಲ್ಲಿ ಮಾತೃದೇವತೆಯ ಆರಾಧನೆಯು ಬೆಳೆದು ಬಂದದ್ದು ಸಮಾನಗುಣದಿಂದ. ಎಂದರೆ, ಮಾತೃಮೂಲದ ಕುಟುಂಬ ವ್ಯವಸ್ಥೆಯಿಂದ.

ಪ್ರಾಚೀನ ಕಾಲದ ಕುಟುಂಬ ವ್ಯವಸ್ಥೆಯಲ್ಲಿ ತಾಯಿಯೇ ಪ್ರಧಾನ ಪಾತ್ರ ವಹಿಸುತ್ತಿದ್ದಳು. ಗಂಡು ಬೇಟೆ, ಪ್ರಾಣಿಗಳ ಸಾಕಾಣಿಕೆಯ ಕೆಲಸದಲ್ಲಿ ನಿರಂತರವಾಗಿ ತೊಡಗಿಸಿ ಕೊಳ್ಳಬೇಕಾಗುತ್ತಿತ್ತು. ಹೆಣ್ಣಿನ ಪ್ರಕೃತಿಯು ಗಂಡಿನ ರೀತಿಯಲ್ಲಿ ಎಲ್ಲಾ ಕಾಲದಲ್ಲಿ ತಿರುಗಾಟಕ್ಕೆ ಅನುಕೂಲಕರವಾಗಿರುವುದಿಲ್ಲ. ಆ ಕಾರಣಕ್ಕೆ ಕೆಲಸಮಯ ಒಂದೇ ಕಡೆ ನೆಲೆ ನಿಲ್ಲಬೇಕಾಗುತ್ತಿತ್ತು. ಹೀಗೆ ನೆಲೆ ನಿಲ್ಲಬೇಕಾದ ಸಮಯದಲ್ಲಿ ಹೆಣ್ಣು ತನ್ನ ಸಮಸ್ತ ಪರಿವಾರವನ್ನು ಸಂರಕ್ಷಿಸಬೇಕಾಗಿತ್ತು. ಅಲ್ಲದೇ ಹಲವಾರು ಹೊಸ ಹುಡುಕಾಟಗಳಿಗೆ ಇದು ಕಾರಣವಾಗಿರಬೇಕು. ಮಡಿಕೆ ಮಾಡುವುದು, ಅಡುಗೆ ಮಾಡುವುದು, ಮನೆ ಕಟ್ಟುವ, ಧಾರ್ಮಿಕ ಹಾಗೂ ಸಾಂಸ್ಕೃತಿಕವಾದ ಅನೇಕ ಕಾರ್ಯಗಳು ಅವಳಿಂದಲೇ ಮೊದಲುಗೊಂಡವು. ನಿರಂತರವಾಗಿ ಬೇಟೆಯಲ್ಲಿ ನಿರತನಾದ ಗಂಡು ದೂರದ ಪ್ರದೇಶಗಳಿಗೆ ಹೋಗುತ್ತಿದ್ದ. ಆ ಸಮಯದಲ್ಲಿ ಆಹಾರದ ಕೊರತೆಯನ್ನು ನೀಗಿಸಲು ತನ್ನ ಸುತ್ತ ಸಿಗುವ ಸಸ್ಯ ಜನ್ಯ ಆಹಾರ ಪದಾರ್ಥಗಳನ್ನು ಹೆಣ್ಣು ಹುಡುಕಿಕೊಂಡಿರಬೇಕು. ಅಲ್ಲದೆ, ತನಗೆ ಸಿಗುವ ಬಿಡುವಿನ ಸಮಯದಲ್ಲಿ ಅಲ್ಪ ಪ್ರಮಾಣದಲ್ಲಿ ತೋಟಗಾರಿಕೆಯ ಬೆಳೆಗಳನ್ನು ಬೆಳೆಯಲು ತೊಡಗಿಸಿಕೊಂಡಿರ ಬೇಕು. ಅದು ಮುಂದೆ ಕೃಷಿಯ ಆವಿಷ್ಕಾರಕ್ಕೆ ಕಾರಣವಾಯಿತು. ಈ ಆವಿಷ್ಕಾರವು ಅವನ ಜೀವನ ವಿಧಾನವನ್ನು ಬದಲಾಯಿಸಿತು. ವಲಸೆಯ ಜೀವನಕ್ಕೆ ಮುಕ್ತಿದೊರಕಿಸಿಕೊಟ್ಟಿತ್ತಲ್ಲದೆ, ಒಂದು ಕಡೆ ನೆಲೆ ನಿಲ್ಲಲು ಕಾರಣವಾಯಿತು.

ಮಾನವನನ್ನು ಪ್ರಧಾನವಾಗಿ ಕಾಡಿದ್ದು ಎರಡು ಅಂಶಗಳು. ಒಂದು ಹುಟ್ಟುವಿಕೆಯಾದರೆ, ಇನ್ನೊಂದು ಸಾವು. ಈ ಎರಡು ಅಂಶಗಳು ಅವನ ಹುಡುಕಾಟದ ಜೀವನಕ್ಕೆ ಪ್ರೇರಕವಾದ ಶಕ್ತಿಯಾಗಿ ಇಂದಿಗೂ

ಕೆಲಸಮಾಡುತ್ತಿವೆ. ಪ್ರಕೃತಿಯ ವೈಚಿತ್ರದಲ್ಲಿ ಗರ್ಭಧರಿಸುವುದು ಒಂದು ವಿಸ್ಮಯಕಾರಕವಾದ ಅಂಶವಾಗಿದೆ. ಹೆಣ್ಣಿನ ಈ ಸಹಜ ಗುಣವು ಅವಳಿಗೆ ಒಂದು ರೀತಿಯ ಉನ್ನತವಾದ ಸ್ಥಾನ ದೊರಕಿಸಿಕೊಡುವಲ್ಲಿ ಮೊದಲ ಕಾರಣವಾಯಿತು. ಕಾರಣ ಗರ್ಭಧರಿಸುವ ಕ್ರಿಯೆಯಲ್ಲಿ ಗಂಡಿನ ಪಾತ್ರಧ ~~ಅರಿವಿರಲಿಲ್ಲ~~ ಎಂಬುದು ಅವನ ಅರಿವಿಗೆ ಬಂದಿರಲಿಲ್ಲ. ಅದು ತನ್ನ ಹಿಂದಿನ ಪಿತೃಗಳೇ ಬಸಿರಿನಲ್ಲಿ ಸೇರುತ್ತಾರೆ ಎಂಬ ನಂಬಿಕೆ ಬೆಳೆದು ಬಂದಿತ್ತು. ಆದರೆ ಮುಂದೆ ಗರ್ಭಧರಿಸುವ ಕ್ರಿಯೆಯಲ್ಲಿ ತನ್ನ ಪಾತ್ರವೇ ಪ್ರಧಾನವಾದುದು ಎಂಬ ಅರಿವು ಬಂದಾಗ ಪುರುಷನ ಕೈಮೇಲಾಯಿತು. ಇನ್ನೊಂದು ಪ್ರಮುಖವಾದ ಘಟನೆಯೆಂದರೆ, ಸಾವು. ಸಾವು ಒಂದು ಬಗೆಹರಿಯದ ಬಹುದೊಡ್ಡ ಸಮಸ್ಯೆಯಾಗಿ ಕಾಡಿರಬೇಕು. ಯಾಕೆಂದರೆ ಈ ಕ್ಷದಲ್ಲಿ ಇದ್ದ ವ್ಯಕ್ತಿ ಇನ್ನೊಂದು ಕ್ಷಣದಲ್ಲಿ ಮರಗಟ್ಟಿ ಹೊಗುವುದು ಒಂದು ರೀತಿಯ ಕುತೂಹಲ ಹಾಗೂ ಭಯಂಕರವಾದ ಅನುಭವವಾಗಿದೆ. ಈ ಅನುಭವವನ್ನು ಮೀರುವ ಪ್ರಯತ್ನದಲ್ಲಿ ಅವ್ಯಕ್ತ ಶಕ್ತಿಯ ಕಡೆ ಮುಖಮಾಡುವಂತೆ ಮಾಡಿರಬೇಕು. ಅಲ್ಲದೆ ನಿತ್ಯಜೀವನದ ಹೋರಾಟದ ಬದುಕು ಹಾಗೂ ಇದಕ್ಕೆ ಪೂರಕವಾದ ಅನೇಕ ಘಟನೆಗಳು ಅವ್ಯಕ್ತಶಕ್ತಿಯನ್ನು ಹುಡುಕುವಂತೆ ಮಾಡಿತು.

ಮೊದಲು ಅವನಿಗೆ ಕಂಡಿದ್ದು ನಾಶಮಾಡುವ ಶಕ್ತಿಯಾಗಿಯೇ. ಈ ನಾಶಮಾಡುವ ಶಕ್ತಿಯನ್ನು ಪೊರೆಯುವ ಶಕ್ತಿಯನ್ನಾಗಿ ಮಾಡಿಕೊಳ್ಳುವ ಅಥವಾ ಒಲಿಸಿಕೊಳ್ಳುವ ಪ್ರಯತ್ನದಲ್ಲಿ ಅದಕ್ಕೊಂದು ರೂಪಕೊಟ್ಟುಕೊಂಡ. ಯಾವುದು ನಾಶಮಾಡುವುದು ಅಥವಾ ಹುಟ್ಟಿಸುವುದು ಅದೇ ಪೊರೆಯುವ ಶಕ್ತಿಯಾಗಿ ಕಾರ್ಯನಿರ್ವಹಿಸುವ ಗುಣವನ್ನು ಪಡೆದಿರುತ್ತದೆ. ಬೆಂಕಿ, ನೀರು, ಗಾಳಿ, ಮುಂತಾದ ಶಕ್ತಿಗಳು ಮೂಲದಲ್ಲಿ ನಾಶಮಾಡುವ ಗುಣವನ್ನು ಹೊಂದಿರುವಂತವು. ಆದರೆ ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡಾಗ ಅವು ರಕ್ಷಿಸುವ, ಬದುಕನ್ನು ಹಸನಮಾಡುವ ಚೈತನ್ಯಗಳಾಗುತ್ತವೆ. ಅಂತೆಯೇ ತಾಯಿಯು ಸಹ. ಅವಳಿಂದಲೆ ಹುಟ್ಟು, ಅವಳಿಂದಲೆ ರಕ್ಷಣೆ ಹಾಗೂ ಅವಳಲ್ಲಿಯೇ ಸೇರಿ ಮತ್ತೆ ಅವಳಿಂದಲೇ ಹುಟ್ಟಿಬರುವ ಈ ಕ್ರಿಯೆಗಳು ಅವಳನ್ನು ಒಂದು ರೀತಿಯ ದೈವಿಕ ಗುಣಗಳನ್ನು ಹೊಂದಿರುವ ಶಕ್ತಿಯನ್ನಾಗಿ ನೋಡುವಂತೆ ಮಾಡಿತು. ಮುಂದೆ ಅದಕ್ಕೆ ಅವ್ಯಕ್ತ ಶಕ್ತಿಯ ರೂಪವನ್ನು ಕೊಡಲಾಗಿರಬೇಕು. ಕೃಷಿಯ ಆವಿಷ್ಕರದ ನಂತರದಲ್ಲಿ ಹೆಣ್ಣಿ ರೀತಿಯಲ್ಲಿಯೇ ಫಲವಂತಿಕೆಯ ಇನ್ನೊಂದು ರೂಪವಾಗಿ ಭೂಮಿಯು ಕಂಡಿತು. ಹೆಣ್ಣು ಹಾಗೂ ಭೂಮಿಯು ಸಮಾನವಾದ ಗುಣಗಳನ್ನು ಹೊಂದಿರುವುದರಿಂದ ಅವುಗಳನ್ನು ದೇವತೆಯ ರೂಪದಲ್ಲಿ ಆರಾಧಿಸಲು ತೊಡಗಿದನು.

ಈ ಕಲ್ಪನೆ ವಿಸ್ತೃತವಾಗುತ್ತಾ ಹೋದಂತೆ, ನಿಸರ್ಗದ ಪ್ರತಿಯೊಂದನ್ನು ದೈವದ ರೂಪವಾಗಿ ಕಾಣಲಾಯಿತು. ಹೀಗೆ ದೈವದ ಪರಿಧಿ ವಿಸ್ತೃತಗೊಂಡಂತೆ ಆಚರಣೆಗಳು ನಂಬಿಕೆಗಳು ಹುಟ್ಟಿಕೊಳ್ಳತೊಡಗಿದವು. ಮುಂದೆ ಪುರುಷ

ಪ್ರಧಾನ ನೆಲೆಗೆ ಹೋದಾಗಲೂ ಸಹ ಸಾಮಾಜಿಕ ಪದ್ಧತಿಗಳು ಬದಲಾವಣೆಯನ್ನು ಹೊಂದಿದಾಗಲೂ ಮೂಲ ನಂಬಿಕೆಗಳು ಬದಲಾವಣೆ ಹೊಂದಲಾಗಲಿಲ್ಲ. ಅವು ಹಾಗೆಯೇ ಉಳಿದುಕೊಂಡು ಬಂದವು. ಭಾರತದ ಧಾರ್ಮಿಕ ಇತಿಹಾಸದಲ್ಲಿಯಂತೂ ಇದು ನಿಜ. ಪುರುಷ ಪ್ರಾಧಾನ್ಯ ದೈವಗಳ ಮಧ್ಯದಲ್ಲಿಯೂ ಮಾತೃ ದೇವತೆಯರು ಅದು ಶಿಷ್ಟವಾಗಿರಬಹುದು, ಗ್ರಾಮದೇವತೆಗಳಾಗಿರಬಹುದು ಅವು ತಮ್ಮ ಸ್ಥಾನವನ್ನು ಬಿಟ್ಟುಕೊಡದೆ ಉಳಿಸಿಕೊಂಡು ಬಂದಿವೆ. ಮನುಷ್ಯನ ಪಾಲನೆ, ಪೋಷಣೆ, ರಕ್ಷಕ ದೇವತೆಯರಾಗಿ, ಸಮೃದ್ಧಿಯನ್ನು ತಂದುಕೊಡುವ ದೇವತೆಯರಾಗಿ, ಹಾಗೂ ರೋಗಗಳನ್ನು ನಿಯಂತ್ರಿಸುವ ದೇವತೆಯರಾಗಿದ್ದಾರೆ. ಈ ರೀತಿಯ ಬೆಳವಣಿಗೆಗೆ ಪ್ರಧಾನವಾದ ಕಾರಣವೆಂದರೆ ಸಾಮಾಜಿಕ ವ್ಯವಸ್ಥೆ. ಅದರಲ್ಲೂ ಮಾತೃ ಮೂಲೀಯ ಕುಟುಂಬ ವ್ಯವಸ್ಥೆಯೆಂದರೆ ತಪ್ಪಾಗಲಿಕ್ಕಿಲ್ಲ. ದಕ್ಷಿಣ ಏಷ್ಯಾದಲ್ಲಿ ಅದರಲ್ಲೂ ಭಾರತವಂತೂ ಇಂದಿಗೂ ಮಾತೃ ವಂಶೀಯ ಗುಣಗಳನ್ನು ಉಳಿಸಿಕೊಂಡು ಬಂದಿರುವುದು, ಆ ಮೂಲಕ ಶಕ್ತಿ ಆರಾಧನೆಯ ಕೇಂದ್ರವಾಗಿರುವುದಕ್ಕೆ ಕಾರಣವಾಗಿದೆ. ಪಿತೃಪ್ರಧಾನ ವ್ಯವಸ್ಥೆಯು ಅನುಮಾನದ, ಅಥವಾ ಹಮ್ಮಿನ ಅಥವಾ ಧಾರ್ಷ್ಟ್ಯವಾಗಿದ್ದು, ಮಾತೃ ವ್ಯವಸ್ಥೆಯು ನಿಜವಾದ ವ್ಯವಸ್ಥೆಯಾಗಿದೆ (Paternity is a matter of inference as opposed to maternity which is a matter of observation- Sir Henry Maine) ಎನ್ನಲಾಗಿದೆ. ಮಗು ಹುಟ್ಟಿನಿಂದ ಹಿಡಿದು ಬೆಳೆದು ದೊಡ್ಡದಾಗುವ ತನಕ ಅದು ತಾಯಿಯ ಆಶ್ರಯದಲ್ಲಿಯೇ ಇರುತ್ತದೆ. ತಾಯಿಯನ್ನು ಆಶ್ರಯಿಸಿದಷ್ಟು ತಂದೆಯನ್ನು ಅದು ಆಶ್ರಯಿಸುವುದಿಲ್ಲ. ಕುಟುಂಬದಲ್ಲಿಯೂ ಸಹ ತಂದೆ ದುಡಿಯುವ ಕೆಲಸವನ್ನು ಮಾತ್ರ ನಿರ್ವಹಿಸುತ್ತಾನೆ. ಅಂದರೆ ಅವನು ಆರ್ಥಿಕವಾಗಿ ಗಳಿಸುವುದಷ್ಟೆ ಅವನ ಕೆಲಸ. ಉಳಿದಂತೆ ಎಲ್ಲಾ ಸಾಮಾಜಿಕ ಜವಾಬ್ದಾರಿಗಳನ್ನು ಸ್ತ್ರೀಯರೇ ನಿರ್ವಹಿಸುತ್ತಾರೆ. ಈ ಕಾರಣದಿಂದ ವಿದ್ವಾಂಸರು ಪ್ರಾಚೀನ ಜನಾಂಗದಲ್ಲಿ ಪುರುಷನಿಗಿಂತ ಸ್ತ್ರೀಯರೇ ಪ್ರಧಾನ ಪಾತ್ರವಹಿಸುತ್ತಿದ್ದರು ಎಂದಿದ್ದಾರೆ. ಅಲ್ಲದೆ ಮಕ್ಕಳ ಹಾಗೂ ಇತರರ ಬೇಡಿಕೆಗಳಿಗೆ ತಾಯಿಯು ಮಣಿಯುವಷ್ಟು ಬೇಗ ತಂದೆ ಮಣಿಯುವುದಿಲ್ಲ. ಅಂತೆಯೇ

> Mother is more easily propitiated by prayer, flattery, and offerings, more ready to defend from evil, more irritable, uncertain and wayward in her temper and moods, more dangerously spiteful and prone to inflict diseases, if offended by neglect. (Monier-Williams, Brahmanism and Hinduism, p. 222)

ಆ ಕಾರಣದಿಂದ ಭಾರತದಲ್ಲಿ ತಾಯಿಗೆ ಕುಟುಂಬ ವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನವನ್ನು ಕೊಡಲಾಗಿದೆ. ಸಂಸಾರವನ್ನು ತೊರೆದ ಶಂಕರಾಚಾರ್ಯರಂತ ಸನ್ಯಾಸಿಗೂ ಕೂಡಾ ತಾಯಿ ಮಮತೆಯ ಸವಿಯನ್ನು ತಿರಸ್ಕರಿಸಲಾಗಲಿಲ್ಲ. ತಾಯಿಯು ಸತ್ತಾಗ ಅವಳ ಅಂತ್ಯ ಸಂಸ್ಕಾರವನ್ನು ಮಾಡಲು ಬಂದಾಗ ಹೇಳುವ

ಮಾತುಗಳು ಮನನೀಯ. "ತಾಯಿಯು ಪ್ರಸೂತಿ ಸಮಯದಲ್ಲಿ ಅನುಭವಿಸುವ ನೋವು ಅನಂತವಾದುದು. ಅದನ್ನು ಅನುಭವಿಸಿ ಮಗುವಿಗೆ ಜನನವೀಯುತ್ತಾಳೆ. ಅಲ್ಲದೆ, ತನ್ನ ರಕ್ತವನ್ನು ಬಸಿದು ಹಾಲಿನ ರೂಪದಲ್ಲಿ ಕೊಟ್ಟು ದೇಹವನ್ನು ತೇಯುತ್ತಾಳೆ. ಮಕ್ಕಳು ಮಾಡುವ ಮಲಮೂತ್ರಗಳನ್ನು ಯಾವುದೇ ಸಂಕೋಚವಿಲ್ಲದೇ ತೊಳೆದು ಶುಚಿಯಾಗಿಡುತ್ತಾಳೆ. ಅಂತಹ ನೋವುಗಳನ್ನು ಪದೆಪದೆ ಅನುಭವಿಸುವ ತಾಯಿಗೆ ಅನಂತ ನಮನಗಳು" ಎನ್ನುತ್ತಾರೆ. ಅಂತೆಯೇ ಮಹಾಭಾರತ **ನಾಸ್ತಿ ಮಾತೃಃ ಪರೋ ಗುರುಃ** ತಾಯಿಯೇ ಮಹಾಗುರು ಅವಳಿಗೆ ಮಿಗಿಲಾದ ಗುರು ಮತ್ತೊಬ್ಬರಿಲ್ಲ ಎನ್ನುತ್ತದೆ. ಮುಂದೆ ಬರುವ ಪ್ರಸಂಗಗಳಲ್ಲಿ ಮಹಾಭಾರತವು ಅದನ್ನು ಸಾಬೀತು ಪಡಿಸುತ್ತದೆ.

ಭಾರತ ಅನೇಕ ಜನಾಂಗಗಳ ಸಂಮಿಶ್ರಣವಾಗಿದೆ. ದಕ್ಷಿಣ ಭಾರತದಲ್ಲಿ ದ್ರಾವಿಡರ ಪ್ರಾಬಲ್ಯವಿದ್ದರೆ, ಉತ್ತರದಲ್ಲಿ ಆರ್ಯರು, ಪೂರ್ವದಲ್ಲಿ ಬೇರೆಯದೆ ಆದ ಜನಾಂಗಗಳು ಇವೆ. ಇವರು ಒಂದು ಕಾಲದಲ್ಲಿ ಭಾರತವನ್ನು ಪ್ರವೇಶಮಾಡಲಿಲ್ಲ. ಬೇರೆ ಬೇರೆ ಕಾಲದಲ್ಲಿ ಭಾರತವನ್ನು ಪ್ರವೇಶಮಾಡಿದರು. ಮತ್ತೂ ಭಿನ್ನ ಸಂಸ್ಕೃತಿಗಳು ಹುಟ್ಟಲು ಕಾರಣವಾಯಿತು.ಆ ಕಾರಣದಿಂದಲೇ ಇಲ್ಲಿಯ ಸಾಮಾಜಿಕ ಜನಜೀವನವನ್ನು ಗಮನಿಸಿದರೆ ಇಲ್ಲಿ ಅನೇಕ ಸಂಸ್ಕೃತಿಗಳ ಮಿಶ್ರಣವಾಗಿ ಕಂಡುಬರುತ್ತದೆ. ಆರ್ಯ ಪೂರ್ವ ಭಾರತವು ಮಾತೃಪ್ರಧಾನವಾದ ಕುಟುಂಬ ವ್ಯವಸ್ಥೆಯನ್ನು ಹೊಂದಿತ್ತು. ಅದು ಇಂದಿಗೂ ಹಲವಾರು ಬುಡಕಟ್ಟುಗಳಲ್ಲಿ ಉಳಿದುಕೊಂಡು ಬಂದಿದೆ. ಅಂತೆಯೇ ಹರಪ್ಪಸಂಸ್ಕೃತಿಯು ಸ್ತ್ರೀಪ್ರಧಾನವಾದ ಸಮಾಜವನ್ನು ಹೊಂದಿರುವುದನ್ನು ಕಾಣಬಹುದಾಗಿದೆ. ಅಲ್ಲಿ ದೊರಕುವ ಹಲವಾರು ಮಾಹಿತಿಗಳು ಅದನ್ನು ನಿರೂಪಿಸುತ್ತವೆ. ನಂತರ ಬಂದ ಆರ್ಯರು ಪಿತೃಪ್ರಧಾನವಾದ ಸಮಾಜವನ್ನು ಹೊಂದಿದವರಾಗಿದ್ದರೂ ಸಹ ಮೊದಲ ಭಾಗದಲ್ಲಿ ಸ್ತ್ರೀಯರು ಒಳ್ಳೆಯ ಸ್ಥಾನಮಾನವನ್ನು ಹೊಂದಿದವರಾಗಿದ್ದರು. ಆರ್ಯರು ಪುತ್ರಪ್ರಧಾನವಾದ ಕೌಟುಂಬಿಕ ವ್ಯವಸ್ಥೆಯನ್ನು ಹೊಂದಿದ್ದರೂ ಸಹ ತಾಯಿಯ ಬಗೆಗೆ ಒಳ್ಳೆಯ ಭಾವನೆ ಹೊಂದಿದ್ದರು ಎನ್ನುವುದು ಮೇಲ್ನೋಟಕ್ಕೆ ಕಾಣಿಸುತ್ತದೆ. ಅವರ ಮಾತೃದೇವೋಭವ ಎನ್ನುವ ವಾಕ್ಯವು ಪ್ರಸಿದ್ಧವಾದುದು. ಆದರೆ, ಅಂದಿನ ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿ ಹೆಣ್ಣಿಗೆ ಒಳ್ಳೆಯ ಅವಕಾಶಗಳನ್ನು ಕೊಡಲು ತಕ್ಕುದಾಗಿರಲಿಲ್ಲವೆಂದೇ ತೋರುತ್ತದೆ. ಆದರೆ ಇಲ್ಲಿಯ ಮೂಲ ನಿವಾಸಿಗಳಲ್ಲಿ ಹೆಣ್ಣಿಗೆ ಒಳ್ಳೆಯ ಸ್ಥಾನದೊರಕಿತ್ತು ಎಂಬುದು ದೊರಕುವ ಸಾಮಗ್ರಿಗಳಿಂದ ತಿಳಿಯುತ್ತದೆ. ಅಲ್ಲದೆ ಅದು ಇಂದಿಗೂ ಉಳಿದುಕೊಂಡು ಬಂದಿರುವುದು ವಿಶೇಷವೆನ್ನಬಹುದು.

ಈ ಹಿನ್ನೆಲೆಯನ್ನಿಟ್ಟುಕೊಂಡು ಅಧ್ಯಯನದಲ್ಲಿ ನಾಲ್ಕು ಪ್ರಧಾನವಾದ ಆರಾಧನೆಗಳನ್ನು (ಅಧ್ಯಾಯಗಳು) ಮಾಡಿಕೊಳ್ಳಲಾಗಿದೆ. ಮೊದಲನೆಯ ಆರಾಧನೆಯಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಹಾಗೂ ಅಧ್ಯಯನದ ಪ್ರವೇಶಗಳಿದ್ದರೆ, ಎರಡನೆಯ ಆರಾಧನೆಯಲ್ಲಿ, ಮಾತೃದೇವತೆಯ ಉಗಮ ಮತ್ತು ವಿಕಾಸಕ್ಕೆ

ಸಂಬಂಧಪಟ್ಟಿದ್ದಾಗಿದೆ. ಇದರಲ್ಲಿ ಪ್ರಾಕ್ಚಾರಿತ್ರಿಕ ಕಾಲ, ಹರಪ್ಪ ಸಂಸ್ಕೃತಿ, ವೇದ ಕಾಲ, ಹಾಗೂ ಜನಪದ ದೈವಗಳು ಎಂದು ವಿಭಾಗ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಪ್ರಾಕ್ಚಾರಿತ್ರಿಕ ಕಾಲದಲ್ಲಿ ಶಿಲಾಯುಗ, ನವ ಶಿಲಾಯುಗ ಹಾಗೂ ಕಂಚಿನ ಯುಗವೆಂದು ಉಪವಿಭಾಗ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಇದರಲ್ಲಿ ಪ್ರಾಚೀನ ಕಾಲದಲ್ಲಿ ಯಾವ ರೀತಿ ಮನುಷ್ಯನ ಬದುಕು ನಡೆಯುತ್ತಿತ್ತು, ಮಾತೃದೈವಗಳ ಉಗಮಕ್ಕೆ ಪೂರಕವಾದ ಅಂಶಗಳಾವವು, ಹಾಗೂ ಮಾತೃದೇವತೆಗಳು ಯಾವ ರೀತಿ ಉಗಮಹೊಂದಿದವು ಎಂಬುದನ್ನು ಅಧ್ಯಯನ ಮಾಡಲಾಗಿದೆ. ಈ ರೀತಿ ಉಗಮಹೊಂದಿದ ದೇವತೆಗಳು ಯಾವ ರೀತಿಯಲ್ಲಿ ವಿಕಾಸಹೊಂದಿದವು ಎಂಬುದನ್ನು ನಿರ್ವಚಿಸಿಕೊಳ್ಳಲಾಗಿದೆ. ದೈವಗಳ ಉಗಮವು ವಿಶ್ವದ ಬಹುತೇಕ ಕಡೆ ಒಂದೇ ಕಾಲದಲ್ಲಿ ಹಾಗೂ ಏಕಪ್ರಕಾರವಾಗಿ ಕಾಣಬರುವುದಿಲ್ಲ. ಭಾರತದಲ್ಲಿ ಸುಮಾರು ಕ್ರಿ.ಪೂ. ಹತ್ತುಸಾವಿರ ವರ್ಷಗಳಲ್ಲಿ ಪ್ರಾಕ್ಚಾರಿತ್ರಿಕ ದಾಖಲೆಗಳು ಸಿಗುತ್ತವೆ. ಆದರೆ ಯುರೋಪಿನ ಬಹುತೇಕ ಭಾಗಗಳಲ್ಲಿ ಇದಕ್ಕೂ ಪೂರ್ವದಲ್ಲಿಯೇ ಮಾಹಿತಿಗಳು ದೊರಕುತ್ತವೆ. ಇದಕ್ಕೆ ಕಾರಣ ಅಲ್ಲಿ ನಡೆದಿರುವ ವ್ಯವಸ್ಥಿತವಾದ ಶೋಧಕಾರ್ಯ. ಅಂತಹ ಶೋಧಕಾರ್ಯಗಳು ಭಾರತದಲ್ಲಿ ನಡೆಯದೆ ಇರುವುದು ಕಾಣುವುದಿಲ್ಲ. ಆ ಕಾರಣಕ್ಕಾಗಿ ಪ್ರಾಕ್ಚರಿತ್ರಿಕ ಕಾಲದ ದಾಖಲೆಗಳು ದೊರಕುವುದು ಕಡಿಮೆ. ಆದರೆ ಕಂಚಿನ ಯುಗಕ್ಕೆ ಬಂದಾಗ ಹರಪ್ಪ ಸಂಸ್ಕೃತಿಯು ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು. ಹರಪ್ಪ ಸಂಸ್ಕೃತಿಯಲ್ಲಿ ಮಾತೃದೇವತೆಯ ವಿಕಾಸವು ತನ್ನ ಪೂರ್ಣತ್ವವನ್ನು ಹೊಂದಿತ್ತು. ಇಲ್ಲಿ ಕಂಡುಬರುವ ವಿಗ್ರಹಗಳು ಕ್ರಿ.ಪೂ. ಸುಮಾರು ಎರಡು ಶತಮಾನದಲ್ಲಿಯೂ ಕಂಡುಬರುತ್ತವೆ. ಇದು ನಿರಂತರತೆಯನ್ನು ಸೂಚಿಸುತ್ತದೆ. ಆದರೆ ಈ ಕಾಲದ ಶಕ್ತಿ ಆರಾಧನೆಯು ವೇದಗಳ ಕಾಲದಲ್ಲಿ ಕಾಣಬರುವುದಿಲ್ಲ. ಕಾರಣ ಪುರುಷ ಕೇಂದ್ರಿತವಾದ ಸಮಾಜವನ್ನು ಹೊಂದಿದ್ದರಿಂದ ಅಲ್ಲಿ ಪ್ರಧಾನವಾಗಿ ಕಾಣಬರುವ ದೈವಗಳು ಪುರುಷ ದೈವಗಳೇ ಆಗಿವೆ. ಈ ಪುರುಷ ದೈವಗಳ ಸಹಚಾರಿಣಿಯರಾಗಿ ಸ್ತ್ರೀ ದೈವಗಳು ಕಂಡುಬರುತ್ತವೆ. ಋಗ್ವೇದದ ಕಾಲದಲ್ಲಿ ಮಾತ್ರ ಅದಿತಿ, ಸರಸ್ವತಿಯಂತಹ ಸ್ವತಂತ್ರ್ಯವಾದ ದೇವತೆಗಳು ಕಂಡುಬಂದರೂ ಮುಂದೆ ಅವರು ಪುರುಷ ದೈವಗಳ ಹೆಂಡತಿಯರಾಗಿ ಸ್ವತಂತ್ರ್ಯವನ್ನು ಬಿಟ್ಟುಕೊಡುತ್ತವೆ. ಆದರೆ ಸ್ಥಳೀಯ ಎನ್ನಬಹುದಾದ ಅನೇಕ ದೇವತೆಗಳು ವೇದೋತ್ತರ ಕಾಲದಲ್ಲಿ ಹಿಂದೂ ಪರಂಪರೆಯನ್ನು ಪ್ರವೇಶಿಸಿ ಹೆಚ್ಚು ಪ್ರಬುದ್ಧತೆಯನ್ನು ಮೆರೆಯುತ್ತವೆ. ಅಂತಹ ದೈವಗಳೆಂದರೆ ಶಕ್ತಿದೈವಗಳಾದ ಪಾರ್ವತಿ, ಲಕ್ಷ್ಮಿ, ಮುಂತಾದ ದೈವಗಳು. ವೈದಿಕ ದೇವತೆಗಳೆ ಇವರು ಎಂಬಂತೆ ಮುಂದೆ ಕಾಣಿಸಿಕೊಳ್ಳುತ್ತಾರೆ.

ಮೂರನೆಯ ಆರಾಧನೆಯು ದೈವಗಳ ವರ್ಗೀಕರಣ ಎಂದು ಮಾಡಿಕೊಳ್ಳಲಾಗಿದೆ. ಹಲವಾರು ವಿದ್ವಾಂಸರು ಮಂಡಿಸಿದ ವರ್ಗೀಕರಣವನ್ನು ಆಧಾರವಾಗಿಟ್ಟುಕೊಂಡು ವರ್ಗೀಕರಿಸಿಕೊಳ್ಳಲಾಗಿದೆ.ಈ ವರ್ಗೀಕರಣದ ಕೆಲಸ ಬಹುಕಷ್ಟದಾಯಕವಾದ ಕೆಲಸವಾಗಿದೆ. ಆದರೂ ಹಲವಾರು ಮಿತಿಯಿಲ್ಲಿಯೂ ದೇವತೆಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಗ್ರಾಮದೇವತೆಗಳು ಹಾಗೂ ನಾಡ ದೇವತೆಗಳೆಂದು

ವಿಭಾಗಿಸಿಕೊಂಡು ನಂತರ ಅವುಗಳಲ್ಲಿ ಉಪವಿಭಾಗಗಳನ್ನಾಗಿ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಆರಾಧನೆಯಲ್ಲಿ ಶಿಷ್ಟ ಹಾಗೂ ಜನಪದ ದೈವಗಳನ್ನು ಒಂದೊಂದಾಗಿ ತೆಗೆದುಕೊಂಡು ಅಧ್ಯಯನ ಮಾಡಲಾಗಿದೆ. ನೂರಾರು ದೇವತೆಗಳಿರುವಲ್ಲಿ ಕೆಲವೇ ದೇವತೆಗಳನ್ನು ಅಧ್ಯಯನಕ್ಕೆ ತೆಗೆದುಕೊಂಡು ಅಧ್ಯಯನ ಶಿಸ್ತಿಗೆ ಒಳಗುಮಾಡಿಕೊಳ್ಳುವುದು ತುಂಬಾ ಕಷ್ಟದ ಕೆಲಸ. ಆದರೂ ಎಲ್ಲಾ ದೇವತೆಗಳಲ್ಲಿ ಕೆಲವು ಸಮಾನವಾದ ಗುಣಗಳನ್ನು ಹೊಂದಿರುವತ್ತವೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಹಾಗೂ ತುಂಬಾ ಪ್ರಾಬಲ್ಯವನ್ನು ಹೊಂದಿರುವಂತಹ ಕೆಲವು ದೇವತೆಗಳನ್ನು ಅಧ್ಯಯನದ ಶಿಸ್ತಿಗೆ ಬಳಸಿಕೊಳ್ಳಲಾಗಿದೆ. ಅಲ್ಲದೆ ಆ ದೈವಗಳು ಸಾಂಸ್ಕೃತಿಕವಾಗಿ ಹೆಚ್ಚಿನ ಮಹತ್ವವನ್ನು ಹೊಂದಿದ್ದು, ಹಲವಾರು ಸ್ಥಿತ್ಯಂತರಗಳನ್ನು ಹೊಂದಿದ ದೈವಗಳಾಗಿವೆ. ಉದಾಹರಣೆಗೆ ದುರ್ಗಾ, ಕಾಳಿ, ಮುಂತಾದವರು. ಕಾಳಿ ಶಿವನ ಪರಿವಾರ ದೇವತೆಯಾಗಿ ಕಂಡುಬಂದರೂ ಸಹ ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿರುವ ದೇವತೆ. ಕಾಳಿ ದ್ರಾವಿಡ ಪರಂಪರೆಯಿಂದ ಹೋಗಿರುವ ದೇವತೆಯಾಗಿದೆ. ಇದಕ್ಕೆ ಪೂರಕವಾಗಿ ಹಲವಾರು ಅಂಶಗಳನ್ನು ಗಮನಿಸಲಾಗಿದೆ. ಅಂತೆಯೇ ಸರಸ್ವತಿಯು ವೇದಕಾಲೀನ ದೇವತೆಯಾಗಿದ್ದರೂ ಸಹ ಅವಳ ಉಗಮವು ನದಿಯ ರೂಪದಲ್ಲಿ ಕಾಣಲಾಗಿದೆ. ಅದು ಮುಂದೆ ವಾಕ್‌ದೇವತೆಯೊಡನೆ ಸೇರಿಹೋಗುತ್ತಾಳೆ. ಗ್ರಾಮದೇವತೆಗಳಲ್ಲಿ ಈಗಾಗಲೆ ಕನ್ನಡದಲ್ಲಿ ಹೆಚ್ಚು ಕೆಲಸವಾಗಿರುವುದರಿಂದ ಎಲ್ಲಮ್ಮ ಹಾಗೂ ಮಾತಂಗಿಯರನ್ನು ಮಾತ್ರ ತೆಗೆದುಕೊಳ್ಳಲಾಗಿದೆ. ಈ ಎಲ್ಲ ದೇವತೆಗಳ ಉಗಮ, ವಿಕಾಸವನ್ನು ಕುರಿತು ವಿಶೇಷವಾಗಿ ನಿರ್ವಚಿಸಿಕೊಳ್ಳಲಾಗಿದೆ.

ಐದನೆಯ ಆರಾಧನೆಯಲ್ಲಿ ಈ ಎಲ್ಲ ದೇವತೆಗಳ ಉಗಮಕ್ಕೆ ಕಾರಣವಾಗಿರುವ ಅಂಶಗಳನ್ನು ತೆಗೆದುಕೊಳ್ಳಲಾಗಿದೆ. ಈ ಅಧ್ಯಯನದ ವ್ಯಾಪ್ತಿಗೆ ಇದು ಮುಖ್ಯ ಕಾರಣವೂ ಹೌದು. ಯಾಕೆಂದರೆ, ಮಾತೃದೇವತೆಯರ ಉಗಮಕ್ಕೆ ಪೂರಕವಾದ ಅಂಶಗಳನ್ನು ತೆಗೆದುಕೊಳ್ಳದೆ ಅಧ್ಯಯನ ಪೂರ್ಣವಾಗುವುದಿಲ್ಲ. ಮಾತೃದೈವಗಳು ದ್ರಾವಿಡರು, ಅಥವಾ ಬುಡಕಟ್ಟುಗಳಲ್ಲಿ ಹೆಚ್ಚಾಗಿ ಕಂಡುಬರಲು ಕಾರಣಗಳೇನು ಅಥವಾ ಆರ್ಯರಲ್ಲಿ ಈ ದೈವಗಳು ಯಾಕೆ ಹೆಚ್ಚು ಕಾಣಬರುವುದಿಲ್ಲ ಎಂಬ ಪ್ರಶ್ನೆಗಳಿಗೆ ಈ ಅಧ್ಯಾಯವು ಉತ್ತರವನ್ನು ಕೊಡಬಹುದು. ಯಾಕೆಂದರೆ ಸಾಮಾಜಿಕ ವ್ಯವಸ್ಥೆಯು, ಅದರಲ್ಲೂ ಮಾತೃಪ್ರಧಾನ ವ್ಯವಸ್ಥೆಯು ಪ್ರಮುಖವಾದ ಕಾರಣವಾಗುತ್ತವೆ. ಹಾಗೂ ಅದಕ್ಕೆ ಪೂರಕವಾಗಿ ಇತರೆ ಅಂಶಗಳು ಹೇಗೆ ಕೆಲಸಮಾಡುತ್ತವೆ ಎಂಬುದನ್ನು ಸಂಕ್ಷಿಪ್ತವಾಗಿ ಗಮನಿಸಲಾಗಿದೆ.ಆರನೆಯ ಆರಾಧನೆಯಲ್ಲಿ ಸಮಾರೋಪವಿದ್ದು ಅಧ್ಯಯನದ ಮುಖ್ಯವಾದ ಅಂಶಗಳನ್ನು ಪ್ರಸ್ತಾಪಿಸಲಾಗಿದೆ. ಕೊನೆಯಲ್ಲಿ ಅನುಬಂಧಗಳನ್ನು ಕೊಡಲಾಗಿದೆ.

ಕನ್ನಡದಲ್ಲಿ ಮಾತೃದೇವತೆಯ ಕುರಿತ ಅಧ್ಯಯನಗಳು ಇಲ್ಲವೇ ಇಲ್ಲ ಎಂದು ಹೇಳಬಹುದು. ಒಂದು ದೇವತೆಯ ಬಗೆಗೆ ಆಗಲಿ ಅಥವಾ ಸಮಗ್ರವಾಗಿಯೇ ಆಗಲಿ ಅಧ್ಯಯನಗಳು ನಡೆದಿಲ್ಲ. ಆದರೆ

ಗ್ರಾಮದೇವತೆಗಳನ್ನು ಕುರಿತಂತೆ ಹಲವಾರು ಅಧ್ಯಯನಗಳು ನಡೆದಿವೆ. ಶಿಷ್ಟ ಪರಂಪರೆಯಲ್ಲಿ ಸೇರಿಹೋಗಿರುವ ದೇವತೆಗಳು ಗ್ರಾಮಮೂಲದಿಂದಲೇ ಬಂದಿರುವಂತಹವು. ಅವುಗಳ ಅಧ್ಯಯನವು ಕನ್ನಡದಲ್ಲಿ ನಡೆದಿಲ್ಲ. ಆದರೆ ಇಂಗ್ಲೀಷನಲ್ಲಿ ಹುಲುಸಾಗಿ ಬೆಳೆದಿದೆ. ಕನ್ನಡದಲ್ಲಿ ಈವರೆಗೂ ಒಂದು ಸಣ್ಣ ಪ್ರಯತ್ನವು ನಡೆದಿಲ್ಲ. ಸಾಮೂಹಿಕ, ಸಾರ್ವತ್ರಿಕ ವಿಷಯವಾದ ಮಾತೃದೇವತಾ ಆರಾಧನೆಯನ್ನು ಅಂತರ್‌ಶಿಸ್ತೀಯ ನೆಲೆಯಲ್ಲಿ ವಿವೇಚಿಸಬಹುದಾಗಿದೆ. ಪರಂಪರೆಯ ಮಡಿವಂತಿಕೆಯನ್ನು ಮೀರಿ ಹೊಸ ಆಯಾಮಗಳನ್ನು ಮೈಗೂಡಿಸಿಕೊಂಡಾಗ ಹೊಸ ಹೊಳವುಗಳು ಕಾಣಿಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ಮಾತೃದೇವತೆಯ ಅಧ್ಯಯನವು ಯಾವುದೇ ಒಂದು ಶಿಸ್ತಿಗೆ ಒಳಪಟ್ಟು ಅಧ್ಯಯನ ಮಾಡಲು ಶಾಧ್ಯವಾಗುವುದಿಲ್ಲ ಎಂದೇ ತೋರುತ್ತದೆ. ಒಂದು ಶಿಸ್ತಿಗೆ ಒಳಪಟ್ಟು ಅಧ್ಯಯನ ಮಾಡಿದಾಗ ಪೂರ್ಣವಾದ ನೋಟ ದೊರಕುವುದಿಲ್ಲ. ಯಾಕೆಂದರೆ ದೇವತೆಗಳು ಸಾರ್ವತ್ರಿಕವಾದುದು, ಪ್ರಾಚೀನಕಾಲದ್ದು, ಅದಕ್ಕೆ ಮಾನವಶಾಸ್ತ್ರದ ಹಿನ್ನೆಲೆಯು ಬೇಕು. ಅಲ್ಲದೆ ಸಾಮಾಜಿಕ, ಧಾರ್ಮಿಕವಾದ ಹಿನ್ನೆಲೆಯು ಬೇಕಾಗುತ್ತವೆ. ಆಕಾರಣಕ್ಕಾಗಿ ಅಂತರ್‌ಶಿಸ್ತೀಯ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಮಾತೃದೇವತೆಯ ಕಲ್ಪನೆಯು ಗರಿಗಟ್ಟಿದ ರೀತಿಯನ್ನು ಗಮನಿಸುವಾಗ ಪ್ರಾಚ್ಯಾವಶೇಷಗಳನ್ನು ಪ್ರಧಾನವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಅದರ ವಿಕಾಸದ ಹಂತಕ್ಕೆ ಬಂದಾಗ ವೈದಿಕ ಸಾಹಿತ್ಯ, ಜನಪದ ಸಾಹಿತ್ಯವನ್ನು ಹಾಗೂ ಚರಿತ್ರೆಯ ಸಹಾಯವನ್ನು, ಹೇಗೆ ಬೆಳೆಯಿತು ಎಂಬುದನ್ನು ತಿಳಿಯಲು ಸಾಮಾಜಿಕ ಪರಿಸರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಎಲ್ಲವನ್ನು ತೆಗೆದುಕೊಂಡು ಅಧ್ಯಯನ ಮಾಡುವಾಗ ಚರ್ವಿತಚರ್ವಾಣವಾಗುವ ಸಾಧ್ಯತೆಗಳು ಉಂಟು. ಆದರೆ, ವ್ಯವಸ್ಥಿತವಾದ ರೀತಿಯಲ್ಲಿ ಅಧ್ಯಯನಕ್ಕೆ ಒಳಪಡಿಸಿದಾಗ ಈ ರೀತಿಯ ಸಂಕಟದಿಂದ ಪಾರಾಗಬಹುದು. ಈ ಪ್ರಬಂಧದಲ್ಲಿ ಇದನ್ನು ಸ್ವಲ್ಪಮಟ್ಟಿಗಾದರೂ ಸಾಧಿಸಲಾಗಿದೆ ಎಂದು ತಿಳಿಯಲಾಗಿದೆ.

ಈ ಪ್ರಬಂಧದಲ್ಲಿ ಎಲ್ಲಾ ದೇವತೆಗಳನ್ನು ತೆಗೆದುಕೊಂಡು ಅಧ್ಯಯನ ಮಾಡಲು ಸಾಧ್ಯವಾಗಿಲ್ಲ. ಅದು ಸಾಧ್ಯವೂ ಅಲ್ಲ, ಸಾಧುವು ಅಲ್ಲ. ಯಾಕೆಂದರೆ ಅಸಂಖ್ಯೆಯಲ್ಲಿರುವ ಈ ದೇವತೆಗಳು ಭಾವದಲ್ಲಿ ಒಂದೇಯಾಗಿದ್ದು, ರೂಪದಲ್ಲಿ ಬದಲಾವಣೆಯನ್ನು ಹೊಂದಿವೆ. ಆ ಕಾರಣದಿಂದ ಕೆಲವೇ ಆಯ್ದ ದೇವತೆಗಳನ್ನು ತೆಗೆದುಕೊಳ್ಳಲಾಗಿದೆ.ಇಲ್ಲಿ ಎಲ್ಲವನ್ನೂ ಹೇಳಿದ್ದೇನೆ ಎಂಬ ಹುಂಬತನವೂ ಇಲ್ಲ ಅಥವಾ ಎಲ್ಲವನ್ನೂ ಹೇಳಿದ್ದೇನೆ ಎಂಬ ಜಾಣತನವೂ ಇಲ್ಲ. ಯಾಕೆಂದರೆ ಇದೊಂದು ಕನ್ನಡದಲ್ಲಿ ಅಧ್ಯಯನಕ್ಕೆ ತೆರೆದುಕೊಳ್ಳುವ ಹೊಸ ಕ್ಷೇತ್ರವಾಗಿದೆ. ಈ ಕಾರಣಕ್ಕಾಗಿ ಅದೊಂದು ಮಿತಿಯೂ ಆಗಿದೆ.



ಚಿತ್ರ ೧

ಆರಾಧನೆ ೨

ಮಾತೃದೇವತೆಯ ಉಗಮ ಮತ್ತು ವಿಕಾಸ

Every part of this earth is sacred to my people. Every shining pine needle, every sandy shore, every mist in the dark woods, every meadow every humming insect. All are holy in the memory and experience of my people. We know the sap which courses through the trees as we know the blood that courses through our veins. We are part of the earth and it is the part of us. The perfumed flowers are our sisters. The bear, the deer, the great eagle these are our brothers. The rocky crests, the juices in the meadow, the body heat of the pony, and man, all belong to the same family. The shining water that moves in the streams and rivers is not just water, but the blood of our ancestors. Each ghostly reflection in the clear water of the lakes tells of events and memories in the life of my people. The water's murmur is the voice of my father's father. The rivers are our brothers. They quench our thirst. They carry our canoes and feed our children... Remember that the air is precious to us, that the air shares its spirit with all the life it suppors. The wind that gave our grandfather his first breath also receives his last sigh. The wind also gives our children the spirit of life... Will you teach your children what we have taught our children? That the earth is our mother? What befalls the earth, befalls all the sons of the earth. This we know: the earth does not belong to man, man belongs to the earth. All things are conected like the blood which unites us all. Man did not weave the web of life, he is merely a strand in it. Whatever he does to the web, he does to himself.

Chief Seattle, 1855, Quoted in The myth of the Goddess, p. 1

೨.೧.೧. ಪ್ರಾಕ್ಚಾರಿತ್ರಿಕ ಕಾಲ

ಮನುಷ್ಯ ಮಂಗನಿಂದ ಮಾನವನಾಗಿ ವಿಕಾಸಹೊಂದಿರುವುದು ಸುಮಾರು ಕೋಟಿ ವರ್ಷಗಳಿಗೂ ಹಿಂದೆ. ಮಂಗನಿಂದ ಮಾನವನಾಗಿ ವಿಕಾಸಹೊಂದಿದ ಈ ಸುದೀರ್ಘ ಕಾಲದಲ್ಲಿ ಅನೇಕ ಸ್ಥಿತ್ಯಂತರಗಳನ್ನು ದಾಟಿ ಬಂದ ಮಾನವನು ಇಡೀ ಭೂಮಿಯಲ್ಲಿ ಹರಡಿಕೊಂಡ. ನಮ್ಮ ಭೂಮಿಯ ಮೇಲಿರುವ ಸಮಸ್ತ ಬಖಂಡಗಳು ಒಂದು ಕಾಲದಲ್ಲಿ ಒಂದೇಯಾಗಿದ್ದವು. ಅವೂ ಕೂಡ ಬೇರ್ಪಟ್ಟು ಖಂಡಾಂತರಗಳಾಗಿ ವಿಭಾಗ ಹೊಂದಿತು. ಮಾನವ ಬೆಳೆದು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಚಲಸೆ ಹೋಗಿರಬೇಕು. ಹೀಗೆ ಬೆಳೆದ ಮಾನವನು ಹಲವಾರು ಜನಾಂಗಗಳಾಗಿ ಬದಲಾವಣೆಯನ್ನು ಹೊಂದಿ ಬೆಳೆದು ಬಂದಿದ್ದಾನೆ. ಸುಮಾರು ಆರು ಲಕ್ಷ ವರ್ಷಗಳಿಂದಲೂ ಮಾನವನ ವಲಸೆ ನಿರಂತರವಾಗಿ ನಡೆಯುತ್ತಲೇ ಇದೆ. ಮಾನವನ ಉಗಮವು ಆಪ್ರಿಕಾದಲ್ಲಿ ಆಯಿತೆಂದು ವಿಜ್ಞಾನಿಗಳ ಅಭಿಪ್ರಾಯ. ಅಲ್ಲಿಂದ ಈ ವಲಸೆಯ ಪ್ರಕ್ರಿಯೆ ಪ್ರಾರಂಭವಾಗಿ ಅದು ಏಷ್ಯಾ, ಯೂರೋಪ ಮತ್ತಿತರ ಖಂಡಗಳಿಗೆ ಹರಡಿತ್ತು.

ಇಂದಿನ ಮನುಷ್ಯನನ್ನು ಹೋಲುವ ಮಾನವನು ಸುಮಾರು ಎರಡರಿಂದ ಒಂದು ಲಕ್ಷ ವರ್ಷಗಳ ಅಂತರದಲ್ಲಿ ಕಂಡುಬರುತ್ತಾನೆ. ಮನುಷ್ಯನ ಅಸ್ಥಿಪಂಜರಕ್ಕಿಂತ ಅವನ ಅಸ್ತಿ ಪಂಜರ ಗಟ್ಟಿಮುಟ್ಟಾಗಿತ್ತು. ಕಾಲಿನ ಎಲುಬು ನೆಲದ ಮೇಲೆ ನೆಡೆಯುವ ಪ್ರಾಣಿಯ ಲಕ್ಷಣಗಳನ್ನು ಹೊಂದಿತ್ತು. ಅದು ನಿಂತು ನಡೆಯುವಾಗ ಕತ್ತು ಬೆನ್ನುಗಳನ್ನು ತುಸುವೇ ಬಾಗಿಸಿ ನಡೆಯುವ ರೀತಿಯಂತೆ ಕಾಣಿಸುತ್ತಿತ್ತು. ಮಿದುಳು ಸಾಕಷ್ಟು ದೊಡ್ಡದಾದ ಗಾತ್ರವಾಗಿತ್ತು. ಹಣೆ ಹಿಂದಕ್ಕೆ ಸರಿದಂತಿದ್ದು, ಹುಬ್ಬಿನ ಭಾಗ ಉಬ್ಬಿತ್ತು. ಒಸಡು ಸ್ವಲ್ಪ ಮುಂದಕ್ಕೆ ಒತ್ತಿತ್ತು. ಇಂತಹ ದೇಹ ರಚನೆಯನ್ನು ಹೊಂದಿದ್ದ ಮನುಷ್ಯನನ್ನು ಮೊದಲಿಗೆ ಗುರುತಿಸಿ ಜೋಹಾನ್ ಕಾಲ್ ಪುಲ್‌ರಾಟ್ ಎಂಬಾತ 'ನಿಯಂಡರ್ಥಾಲ್' (Homo Sapiens Nearnderthalensis) ಮನುಷ್ಯ ಎಂದು ಕರೆದ.[೧]

ಹೀಗೆ ಕಂಡು ಬಂದ ಮಾನವನು ಕ್ರೂರ ಪ್ರಾಣಿಗಳಿಂದ ರಕ್ಷಣೆ ಪಡೆಯಲು ಹಾಗೂ ನೈಸರ್ಗಿಕ ಕಾರಣಗಳಾದ ಮಳೆ, ಬಿಸಿಲು, ಚಳಿಯಿಂದ ರಕ್ಷಣೆ ಪಡೆಯಲು ಕಲ್ಲಾಸರೆ, ನಿಸರ್ಗ ನಿರ್ಮಿತವಾದ ಗುಹೆಗಳಲ್ಲಿ

ವಾಸಮಾಡಲು ಪ್ರಾರಂಭಮಾಡಿರಬೇಕು. ನಿಯಂಡರ್ಥಾಲ್ ಮಾನವನು ಗುಹೆಗಳಲ್ಲಿ ವಾಸಮಾಡಿದ್ದ ಎಂಬುದಕ್ಕೆ ಅನೇಕ ಪುರಾವೆಗಳು ಸಿಗುತ್ತವೆ. ಅಲ್ಲದೇ ವಸತಿ ಪ್ರದೇಶಗಳು, ಸಮಾಧಿಗಳು, ಅವರು ಬೇಟೆಯಾಡಿ ತಿಂದು ಬಿಸಾಕಿದ ಎಲುಬಿನ ರಾಶಿಗಳೇ ಸಿಕ್ಕಿವೆ. ತನಗಿಂತಲೂ ಎಷ್ಟೋ ಪಟ್ಟು ದೊಡ್ಡದಾದ ಪ್ರಾಣಿಗಳಾದ ಮಮತ್ ಆನೆ, ದೊಡ್ಡದಾದ ಕರಡಿಗಳು, ಖಡ್ಗಮೃಗಗಳನ್ನು ಅಲ್ಲದೆ ಸಣ್ಣ ಪ್ರಾಣಿಗಳಾದ ಜಿಂಕೆ, ಕುದುರೆ,ಮುಂತಾದ ಪ್ರಾಣಿಗಳನ್ನು ಆಹಾರಕ್ಕಾಗಿ ಬೇಟೆಯಾಡಿ ತಿಂದು ಬಿಸಾಡಿದ ಎಲುಬುಗಳ ರಾಶಿಯೇ ಸಿಗುತ್ತವೆ.[7] ಅಲ್ಲದೇ ದಕ್ಷಿಣ ಭಾರತದ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಬಂಗನಪಲ್ಲಿ ಹತ್ತಿರ ಇರುವ ಬಿಲ್ಲಸುರ್ಗಮ್‌ನ ಸಮೀಪದಲ್ಲಿ ಪ್ಲಿಯಿಸ್ಟೋಸೀನ್ (ಸುಮಾರು ಹತ್ತು ಸಾವಿರ ವರ್ಷಗಳ ಹಿಂದೆ) ಕಾಲಕ್ಕೆ ಸೇರಿದ ಗುಹೆಯೊಂದರಲ್ಲಿ ಅಂದಿನ ಮಾನವನ ಗುಹಾಂತರ ಜೀವನ ಕ್ರಮವನ್ನು ಪ್ರತಿನಿಧಿಸುವ ಕಿರುಗುಹೆಗಳ ಗುಂಪನ್ನು ಪತ್ತೆಹಚ್ಚಲಾಗಿದೆ. ವರ್ತಮಾನಕ್ಕೆ ಇಲ್ಲವೆ ಇತ್ತೀಚಿನ ಕಾಲಕ್ಕೆ ಸೇರಿದ ಪ್ರಾಣಿ ಪ್ರಾಕಾರಗಳ ಮೂಳೆಗಳ ಸಮೂಹವನ್ನೆ ಅಗೆದು ತೆಗೆದಿದ್ದಾರೆ. ಕಪಿ, ಹಯನಪ್ರಾಣಿ, ಬೆಕ್ಕುಗಳ ಮೂಳೆ, ಕರಡಿ, ಜಿಂಕೆ, ಕುದುರೆ, ಮುಂಗುಸಿ, ಕಪ್ಪಟ, ಅಳಿಲು,ಮೂಗಿಲಿ, ಸಾಧಾರಣ ಇಲಿಗಳು, ಕಾಡುಹಂದಿ, ಹಾಗೂ ಇದರೊಂದಿಗೆ ಗತವಂಶಿ ರೈನೋಸೆರಾಸ್ ಮತ್ತು ಇರುವೆ ಭಕ್ಷಕ ದೊಡ್ಡಗಾತ್ರದ ಪ್ಯಾಂಗೋಲಿನ್ ಮೂಳೆಗಳು ದೊರತಿವೆ.[8] ಇವು ಅಂದಿನ ಜನರ ಜೀವನ ಅಧ್ಯಯನಕ್ಕೆ ಸಹಾಯಮಾಡುತ್ತವೆ. ಗುಹೆಯಲ್ಲಿ ಅಂದು ಅದೇ ಮಾನವ ಬಿಡಿಸಿದ ಗುಹಾ ಚಿತ್ರಗಳು ಇಂದಿಗೂ ಅಂದಿನ ಅವನ ಜೀವನ ಚರಿತ್ರೆಯನ್ನು ಬರೆಯಲು ಒಳ್ಳೆಯ ಸಾಮಗ್ರಿಗಳಾಗಿ ಉಳಿದು ಬಂದಿವೆ.

ಯುರೋಪ್ ಮತ್ತು ಏಷ್ಯಾ ಖಂಡಗಳಲ್ಲಿ ಎಂಬತ್ತು ಸಾವಿರದಿಂದ ಅರವತ್ತು ಸಾವಿರ ವರ್ಷಗಳ ಅಂತರದಲ್ಲಿ ಹರಡಿಕೊಂಡಿದ್ದ ಹಿಮದ ರಾಶಿಯು ಕರಗಿ ವಿಶಾಲವಾದ ಪ್ರದೇಶಗಳು ಬೆಳಕಿಗೆ ಬಂದವು. ಈ ಕಾಲವನ್ನು ಹಿಮಯುಗ ಎಂದು ಕರೆಯಲಾಗಿದೆ. ಹಿಮಯುಗಗಳು ಈಗಾಗಲೇ ಮೂರು ಭಾರಿ ಕಾಣಿಸಿಕೊಂಡಿದ್ದವು. ಈ ಹಿಮವು ಕರಗಿ ಅದರಿಂದ ಆದ ದಟ್ಟವಾದ ಕಾಡುಗಳು ಹುಟ್ಟಿಕೊಂಡವು. ಹೀಗೆ ಬೆಳೆದ ಹುಲ್ಲುಗಾವಲುಗಳಲ್ಲಿ ಯಥೇಚ್ಛವಾಗಿ ಹುಲ್ಲನ್ನೆ ಆಹಾರವಾಗಿ ಉಳ್ಳ ಪ್ರಾಣಿಗಳು ಬೆಳಕಿಗೆ ಬಂದವು. ಸಾವಿರಾರು ವರ್ಷಗಳಿಂದ ನಿರಂತರವಾಗಿ ಸುರಿದು ಘಟ್ಟಿಯಾಗಿದ್ದ ಪ್ರದೇಶದಲ್ಲಿ ಮಾನವ ಬದುಕಲು ಸಾಧ್ಯವೇ ಇರಲಿಲ್ಲ. ಆದರೆ, ಯಾವಾಗ ಹಿಮಯುಗ ಕರಗಿ ಬಯಲು ಜಾಗ ಸಿಕ್ಕಿತೋ ಆಗ ಅಲ್ಲಿಗೂ ಜನ ವಲಸೆ ಹೋಗಲು ಪ್ರಾರಂಭವಾಯಿತು. ಅಲ್ಲದೆ, ಆಹಾರವು ಸುಲಭವಾಗಿ ದೊರಕುತ್ತಿದ್ದರಿಂದ ಆಹಾರದ ಸಮಸ್ಯೆಯಾಗಿರಲಿಲ್ಲ.

ಸುಮಾರು ಲಕ್ಷ ವರ್ಷಗಳ ಪೂರ್ವದಲ್ಲಿಯೇ ಮಾನವ ಬೆಂಕಿಯ ಉಪಯೋಗ ಕಂಡುಕೊಂಡಿದ್ದ. ಬೆಂಕಿಯ ಬಳಕೆಯು ಅರಿವಿಗೆ ಬರುತ್ತಿದ್ದಂತೆ ಅವನ ಕನಸುಗಳಿಗೆ ರೆಕ್ಕೆ ಪುಕ್ಕಗಳು ಮೂಡಿದ್ದವು. ಬೆಂಕಿಯಲ್ಲಿ

ಮಾಡಿದ ಪದಾರ್ಥಗಳ ರುಚಿ ಅವನಿಗೆ ಬೇರೆಯಾದ ಲೋಕವನ್ನು ತೋರಿರಬೇಕು.[೪] ಹೀಗೆ ಬೆಂಕಿಯ ಆವಿಷ್ಕಾರವು ಅವನ ಜೀವನ ಹಾದಿಯನ್ನು ಬದಲಾಯಿಸಿತು. ಬೆಂಕಿಯಲ್ಲಿ ಬೇಯಿಸಿದ ಮಾಂಸದ ರುಚಿ ಕಂಡುಕೊಂಡ. ಅಲ್ಲದೇ ಬೆಂಕಿಯ ಇನ್ನಿತರೆ ಉಪಯೋಗಗಳು ಅವನ ಅರಿವಿಗೆ ಬರುತ್ತಿರುವುದು ಕಂಡು ಬಂತು. ಪ್ರಾಣಿಗಳು ಅವನ ಜೀವದ ಮೇಲೆ ಆಗಾಗ ಎರಗಿ ಬರುತ್ತಿದ್ದವು. ಆದರೆ, ಯಾವಾಗ ಬೆಂಕಿಯು ಅವನ ಬಳಿ ಇತ್ತೋ ಆಗ ಪ್ರಾಣಿಗಳು ಅವನ ಸಮೀಪಕ್ಕೆ ಬರುತ್ತಿರಲಿಲ್ಲ. ಇದರಿಂದ ಅವನಿಗೆ ನೆಮ್ಮದಿಯಾಗಿ ಬದುಕಲು ಅನುವು ಮಾಡಿಕೊಟ್ಟಿತು. ಅಲ್ಲದೇ ಪ್ರಾಣಿಗಳನ್ನು ಬೇಟೆಯಾಡುವುದು ಒಂದು ಹವ್ಯಾಸ ಹಾಗೂ ಮೋಜಾಗಿ ಮಾಡಿಕೊಂಡಾಗ ಅದಕ್ಕೊಂದು ಆಯುಧ ಬಳಕೆಯ ಉಪಯೋಗ ಅವನ ಅರಿವಿಗೆ ಬಂತು. ಬರೀ ಕೈಯಿಂದಲೇ ಪ್ರಾಣಿಗಳ ಬೇಟೆಯಾಡುವುದು ಸಾಧ್ಯವಾಗದ ಮಾತು. ಚೂಪಾದ ಕಲ್ಲುಗಳನ್ನು ಆಯುಧದ ರೀತಿಯಲ್ಲಿ ಉಪಯೋಗಿಸತೊಡಗಿದ. ದೊಡ್ಡದಾದ ಹಾಗೂ ಚೂಪಾದ ಕಲ್ಲುಗಳನ್ನು ದೊಣ್ಣೆಯೊಂದಕ್ಕೆ ಬಿಗಿದು, ಕೊಡತಿಯಾಕಾರದ ಆಯುಧವನ್ನಾಗಿ ಮಾಡಿಕೊಂಡು ಪ್ರಾಣಿಗಳ ಬೇಟೆಯಾಡುವುದನ್ನು ರೂಢಿಸಿಕೊಂಡ. ಅಲ್ಲದೆ ಚೂಪಾದ ಸಣ್ಣ ಕಲ್ಲುಗಳನ್ನು ಉಪಯೋಗಿಸಿಕೊಂಡು ಪ್ರಾಣಿಗಳ ಚರ್ಮವನ್ನು ಸುಲಿಯಲು ಕಲಿತ. ನೀರಿನಲ್ಲಿ ಮೀನುಗಳನ್ನು ಹಿಡಿಯಲು ತನ್ನದೇ ಆದ ಅನೇಕ ವಿಧಾನಗಳನ್ನು ಕಂಡುಕೊಂಡ. ನೀರಿಗೆ ಯಾವುದೋ ಮರದ ವಿಷವನ್ನು ತಂದು ಕದಡಿದರೆ ಮೀನುಗಳು ಸತ್ತುಬೀಳುತ್ತವೆ. ಅಲ್ಲದೆ, ಉದ್ದವಾದ ಕೋಲಿಗೆ ಹರಿತವಾದ ಕಲ್ಲನ್ನು ಸಿಕ್ಕಿಸಿದರೆ ಈಟಿಯಂತೆ ಅದನ್ನು ಬಳಸಬಹುದು. ಮರದ ಮೇಲಿರುವ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಲು ಅದೇ ರೀತಿಯ ಬಾಣಗಳನ್ನು ಕಂಡುಕೊಂಡ. ಹೀಗೆ ತನ್ನ ಸುತ್ತಲ ಪ್ರಪಂಚದಲ್ಲಿ ಸಿಗುವ ವಸ್ತುಗಳನ್ನೇ ಉಪಯೋಗಿಸಿಕೊಂಡು ತನ್ನ ಹಸಿವೆಯನ್ನು ನೀಗಿಸತೊಡಗಿದನಾದರೂ ಅವನ ಆವಿಷ್ಕಾರದ ಹಸಿವು ಹಿಂಗಿರಲಿಲ್ಲ.

ಸುಮಾರು ಒಂದು ಲಕ್ಷ ವರ್ಷಗಳ ಪೂರ್ವದಲ್ಲಿಯೇ (Ricswurm Interglacial Period) ನಿಯಾಂಡರ್ಥಾಲ್ ಮಾನವನಿಗೆ ಸಾವಿನ ಕಲ್ಪನೆ ಬಂದಿರಬೇಕೆಂದು ತೋರುತ್ತದೆ. ಆ ಕಾಲದ ಮಾನವನು ಸಾವನ್ನು ಗ್ರಹಿಸುವಷ್ಟು ಮೆದುಳು ಬೆಳೆದಿತ್ತು ಎಂಬುದು ದೊರೆತಿರುವ ಸಮಾಧಿಗಳು ಸ್ಪಷ್ಟಪಡಿಸುತ್ತವೆ. ಸುಮಾರು ೬೦,೦೦೦ ವರ್ಷಗಳ ಹಿಂದಿನ ಸಮಾಧಿಯಲ್ಲಿ ಇಡಲಾದ ದೇಹವು ಪೂರ್ವಭಿಮುಖವಾಗಿ ಇದ್ದು, ಅದಕ್ಕೆ ಕೆಂಪು ಅಥವಾ ಕಾವಿಬಣ್ಣವನ್ನು ಚಿಮಿಕಿಸಲಾಗಿದೆ. ಕೆಂಪು ಬಣ್ಣವು ರಕ್ತದ ಪ್ರತಿರೂಪವಾಗಿದ್ದು, ಮನುಷ್ಯ ಮತ್ತೆ ಹುಟ್ಟಿಬರಲೀ ಎಂಬ ಅಭಿಪ್ರಾಯವನ್ನು ಸೂಚಿಸುತ್ತದೆ ಎಂದು ತರ್ಕಿಸಲಾಗಿದೆ. ಅಲ್ಲದೆ ಪೂರ್ವ ಪಶ್ಚಿಮಾಭಿಮುಖಿಯಾಗಿಟ್ಟಿರುವುದು ಚಂದ್ರ ಹಾಗೂ ಸೂರ್ಯನ ಚಲನಾಗತಿಯು ಹುಟ್ಟು ಸಾವಿನ ಸಂಕೇತವಾಗಿರುವುದೆಂದು ಹೇಳಲಾಗಿದೆ.

"Human consciousness had already developed the capacity to recognize death and to give it the status of mystery that required honouring rituals. Bodies have been found, some 60,000 years old, arranged in the foetal position, facing east the direction of the rise of the full moon, the last crescent and of sunrise covered in flowers and sprinkled with the red ochre dye that mimed, perhaps, the renewal of blood and the quickening of the life force for the new life." [೫]

ಆ ಕಾಲಕ್ಕಾಗಲೇ ಸಾವನ್ನು "ಅನುಭವಿಸು"ತ್ತಿದ್ದ ಎಂದ ಮೇಲೆ ಅವನ ಮೆದುಳು ಸಾಕಷ್ಟು ವಿಕಾಸ ಹೊಂದಿರಬೇಕು. ಹೀಗಾಗಿ ತನ್ನ ಸುತ್ತಲಿನ ಪ್ರಪಂಚವನ್ನು ತೆರೆದ ಕಣ್ಣಿನಿಂದ ಅನುಭವಿಸುತ್ತಿದ್ದ. ಬೇಟೆಯ ಈ ಹಂತವು ಮಾನವನ ದೈಹಿಕ ಶಕ್ತಿಯ ಮೇಲೆ ಅವಲಂಬಿತನಾಗದೇ ಮನಸ್ಸಿನ ಶಕ್ತಿಯ ಮೇಲೆ ಅವಲಂಬಿತನಾಗುತ್ತಿದ್ದಂತೆ ತೋರುತ್ತದೆ. ಈ ಕಾಲಕ್ಕಾಗಲೇ ಐತಿಹ್ಯಗಳು ಹುಟ್ಟಿಕೊಂಡಿದ್ದವು. ಅಲ್ಲದೇ ಸೂರ್ಯ ಚಂದ್ರರ ಚಲನೆಯ ಗತಿಗಳನ್ನು ತಿಳಿಯಲಾಗಿತ್ತು ಎನ್ನಲಾಗಿದೆ.

".. as far back as 30,000 BC. the ice age hunter of western Europe was using a system of notation that was already evolved, complex and sophisticated, a tradition that would seem to have been thousands of year old by this point."[೬]

ಜಗತ್ತಿನ ಮಾನವನ ಪೂರ್ವೇತಿಹಾಸವನ್ನು ತಿಳಿದುಕೊಳ್ಳಲು ಉಳಿದಿರುವ ಪಳೆಯುಳಿಕೆಗಳೆಂದರೆ ಪ್ರಾಚ್ಯಾವಶೇಷಗಳು, ಗುಹಾಚಿತ್ರಗಳು, ಹಾಗೂ ಸಮಾಧಿಗಳು, ಮಾನವನು ನೆಲೆನಿಂತ ಜಾಗಗಳು, ಕೊಂದು ತಿಂದ ಪ್ರಾಣಿಗಳ ಎಲಬುಗಳು, ಕೊಲ್ಲಲು ಬಳಸಿದ ಆಯುಧಗಳು, ಹೀಗೆ ಹಲವಾರು ಅಂಶಗಳು ದೊರಕುತ್ತವೆ. ಆದಿ ಮಾನವನು ನೆಲೆನಿಂತ ಪ್ರಮುಖ ಜಾಗವೆಂದರೆ, ಗುಹೆ. ಸುಮಾರು ಕ್ರಿ.ಪೂ. ೬೦,೦೦೦ ದಿಂದ ೫೦,೦೦೦ ವರ್ಷಗಳ ಅವಧಿಯಲ್ಲಿ ಗುಹೆಯನ್ನು ತನ್ನ ವಾಸಸ್ಥಳವನ್ನಾಗಿ ಮಾಡಿಕೊಂಡಿರಬೇಕು. ಮುಂದೆ ಗುಹೆಯು ಮಾನವನ ಸಾಂಸ್ಕೃತಿಕ ಚರಿತ್ರೆಯಲ್ಲಿ ಪ್ರಮುಖವಾಗಿ ಕಾಣುತ್ತದೆ. ಮಾನವನು ಜಗತ್ತಿನ ಹಲವಾರು ಕಡೆ ಗುಹೆಯಲ್ಲಿ ವಾಸಮಾಡಿರುವ ಆಧಾರಗಳು ದೊರಕುತ್ತವೆ. ಅವನು ಬಿಡಿಸಿದ ಗುಹಾ ಚಿತ್ರಗಳು ಇದನ್ನು ಪುಷ್ಟೀಕರಿಸುತ್ತವೆ. ಅದು ಇಡೀ ಮಾನವನ ಚರಿತ್ರೆಯನ್ನು ದಾಖಲಿಸುವಂತೆ ತೋರುತ್ತದೆ. ಆಚರಣೆಗಳು, ಧಾರ್ಮಿಕವಾದ ಚಟುವಟಿಕೆಗಳು, ಸಾವು ನೋವುಗಳ ಆಚರಣಾ ವಿಧಿಗಳು ಇಲ್ಲಿ ನಡೆಯುತ್ತಿರಬೇಕು. ಗುಹೆ ಎನ್ನುವದು ಬರೀ ಸಾಮಾನ್ಯವಾದ ವಾಸಸ್ಥಾನವಾಗಿರದೇ ಅದೊಂದು ದೈವಿಕವಾದ ಭೂಮಿ ತಾಯಿಯ ಪ್ರತೀಕವಾಗಿಯೂ ಹಾಗೂ

ತಾಯಿಯ ಗರ್ಭವಾಗಿ ನೋಡಲಾಗುತ್ತಿತ್ತು. ವಿದ್ವಾಸರೊಬ್ಬರು ಹೇಳುವಂತೆ:

> At least 20,000 years(from 30,000 to 10,000 BC) the Palaeolithic cave seems to the most sacred place, the sanctuary of the Goddess and the source of her regenerative power. Entering one of these caves is the making a journey into another world, one which is *inside* the body of the goddess. To those who would have lived in scared world, the actual hollowed shape would have symbolized her all-containing womb, which brought forth the living and took back the dead. The cave as the place of transformation was the binding link between the past and future of the men and women who lived in the forefront of it and held their religious rites deep in its interior sancturary. Inside the cave were placed the stones that represented the souls of the dead who would be reborn from her womb.[೭]

ಫ್ರಾನ್ಸಿನ ಅರಗೆ ಪ್ರಾಂತ್ಯದ (South-Westren France, Arege)ಲ್ಲಿ ಅತ್ಯಂತ ಪ್ರಾಚೀನವಾದ ಹಾಗೂ ದೊಡ್ಡದಾದ ಗುಹೆಯನ್ನು ೧೯೧೪ರಲ್ಲಿ ಪತ್ತೆಹಚ್ಚಲಾಯಿತು. ಇದು ಭೂಮಿಯ ಮಟ್ಟದಿಂದ ಸುಮಾರು ೬೦ ಅಡಿ ಆಳದಲ್ಲಿದ್ದು ಧಾರ್ಮಿಕ ಆಚರಣೆಯ ಸ್ಥಾನವಾಗಿರಬೇಕೆಂದು ತಿಳಿಯಲಾಗಿದೆ. ಇಂತಹ ಹಲವಾರು ಗುಹೆಗಳು ಯುರೋಪ್ ಅಲ್ಲದೆ, ಭಾರತದಲ್ಲಿಯೂ ಕಂಡು ಬರುತ್ತವೆ. ನಿಸರ್ಗ ನಿರ್ಮಿತವಾದ ಇಂತಹ ಗುಹೆಗಳ ಗೋಡೆಗಳ ಮೇಲೆ, ಛಾವಣಿಯ ಮೇಲೆ ಸಾವಿರಾರು ಚಿತ್ರಗಳನ್ನು ಬಿಡಿಸಲಾಗಿದೆ.

> ಅವರು ಕಂಡು ಬೆದರಿದ, ಆಶ್ಚರ್ಯಪಟ್ಟ, ಬೇಟೆಯಾಡಿದ ಹಲವಾರು ಪ್ರಾಣಿಗಳ ಆಕಾರ! ಕಾಟಿಗಳ ಚಿತ್ರ ಬರೆದಿದ್ದಾರೆ. ಕಾಡುಕುದುರೆ, ಕಾಡು ಹಂದಿ, ಕಾಡು ಜಿಂಕೆ, ಕಾಡಾನೆ ಮೊದಲಾದ ಹಲವಾರು ಪ್ರಾಣಿಗಳ ಚಿತ್ರಗಳನ್ನು ಬರೆದಿದ್ದಾರೆ. ಅಷ್ಟಕ್ಕೆ ಬಿಡಲಿಲ್ಲ. ಅವಕ್ಕೆ ಜೀವಕಳೆ ಬರುವ ರೀತಿಯಲ್ಲಿ ಬಣ್ಣವನ್ನು ಸವರಿದ್ದಾರೆ. ಕಾವಿಬಣ್ಣ, ಗೋಪಿಬಣ್ಣ, ಮಸಿ, ಮೊದಲಾದ ಬಣ್ಣಗಳನ್ನು ಕೊಬ್ಬಿನೊಡನೆ ಅರೆದು, ತಾವು ಬರೆದ ಚಿತ್ರಗಳಿಗೆ ಸವರಿದ್ದಾರೆ.[೮]

ಆದಿ ಮಾನವನ ಮನಸ್ಸಿನಲ್ಲಿ ಪ್ರಮುಖವಾಗಿ ಎರಡು ವಿಷಯಗಳು ಇದ್ದ ವಿಷಯ ಅವನ ಗುಹಾ ಚಿತ್ರಗಳಿಂದ ತಿಳಿಯುತ್ತದೆ. ಒಂದು ಹೆಣ್ಣು, ಇನ್ನೊಂದು ಪ್ರಾಣಿ. ಇವು ಅಂದಿನ ಮನುಷ್ಯ ಅವಶ್ಯಕತೆಗಳಲ್ಲಿ

ಮುಖ್ಯವಾದವು. ಕುಟುಂಬದ ಮುಂದುವರಿಕೆ ಹಾಗೂ ಕಾಮದ ತೃಷೆಯನ್ನು ತೃಪ್ತಿಪಡಿಸಲಿಕ್ಕೆ ಹೆಣ್ಣು ಅಗತ್ಯವಾದರೆ, ಪ್ರಾಣಿಯು ಅವನ ದಿನನಿತ್ಯದ ಆಹಾರವನ್ನು ಒದಗಿಸಲು. ಯಾಕೆಂದರೆ ಅವನು ಬೇಟೆಯನ್ನೆ ನಂಬಿ ಬದುಕುವನಾಗಿದ್ದರಿಂದ ಅವನ ಎಲ್ಲಾ ಕಲೆಗಳಲ್ಲಿ ಇವು ಪ್ರಮುಖವಾಗಿ ಕಂಡುಬರುತ್ತವೆ.

ಹಾಗಾದರೆ ಯಾಕಾಗಿ ಹೀಗೆ ಈ ಗುಹಾ ಚಿತ್ರಗಳನ್ನು ಬಿಡಿಸಿದ? ಎಂದು ಪ್ರಶ್ನಿಸಿಕೊಂಡರೆ ಉತ್ತರಿಸುವುದು ಸುಲಭವೇನಲ್ಲ. ಎರಡರಿಂದ ಮೂರು ಕೀ.ಮೀ ಉದ್ದವಿರುವ ಬೃಹತ್ ಗಾತ್ರದ ನಿಸರ್ಗ ನಿರ್ಮಿತವಾದ ಗುಹೆಗಳನ್ನು ಆಧುನಿಕ ಕಾಲದಲ್ಲೂ ಪ್ರವೇಶಿಸಲು ಸಾಧ್ಯವಾಗಲಾರದೇ ಇರುವಂತ ಗುಹೆಗಳಲ್ಲಿ ಹೋಗಿ ಕೊನೆಯಲ್ಲಿ ಚಿತ್ರಗಳನ್ನು ಬಿಡಿಸಿರುವುದನ್ನು ನೋಡಿದರೆ ಆಶ್ಚರ್ಯವಾಗದೇ ಇರದು. ಇಂತಹ ಗುಹೆಗಳನ್ನು ಪ್ರವೇಶಿಸಲು ಪ್ರಾಚೀನ ಮಾನವನು ಯಾವ ಸಾಧನಗಳನ್ನು ಉಪಯೋಗಿಸುತ್ತಿದ್ದ. ಕಲ್ಲಿನಲ್ಲಿ ಕೊರೆದು ಮಾಡಿದ ದೀಪದ ಬಟ್ಟಲುಗಳ್ನು ಹಾಗೂ ಪ್ರಾಣಿಗಳ ಕೊಬ್ಬನ್ನು ಬತ್ತಿಯನ್ನು ಉಪಯೋಗಿಸುತ್ತಿರಬೇಕು.ಆಹಾರ ಸಂಗ್ರಹಣೆಯು ಅವನ ದಿನನಿತ್ಯದ ಕಾರ್ಯವಾಗಿದ್ದಿತು. ಅಲ್ಲದೆ ಕ್ರೂರ ಮೃಗಗಳ ಬೇಟೆಯನ್ನು ಮಾಡುವುದು ಸುಲಭವಾದ ಕೆಲಸವಾಗಿರಲಿಲ್ಲ. ಅದೊಂದು ನಿತ್ಯ ಜೀವನದ ಹೋರಾಟವಾಗಿರುತ್ತಿತ್ತು. ಅಲ್ಲದೆ, ಅವನು ಬಳಸುತ್ತಿದ್ದ ಆಯುಧಗಳು ಸಾಮಾನ್ಯವಾದ ಕಲ್ಲು ಅಥವಾ ಕಟ್ಟಿಗೆಯಿಂದ ಮಾಡಿದ ಆಯುಧಗಳು. ಇದರಿಂದ ಬೇಟೆಯಾಡುವುದು ಕಷ್ಟಸಾಧ್ಯವಾದ ಕೆಲಸ.

> ಬೇಟೆಗೆ ಹೊರಡುವ ಮೊದಲು ಅಲೌಕಿಕ ಶಕ್ತಿಗಳ ನೆರವನ್ನು ಪಡೆದುಕೊಳ್ಳುವ ಕಾತರ ಅವನಿಗಿದ್ದಿತ್ತು. ಗುಹೆಗಳ ಒಳಭಾಗದಲ್ಲಿ ವನ್ಯಮೃಗಗಳ ನೈಜ ಚಿತ್ರಗಳನ್ನು ಬಿಡಿಸಿ, ಅವು ಗಾಯಗೊಂಡಂತೆ, ಬಲೆಯಲ್ಲಿ ಸಿಕ್ಕುಬಿದ್ದಂತೆ, ಸತ್ತು ಬಿದ್ದಂತೆ ರೂಪಿಸಿಕೊಂಡಿರುವುದು ಈ ಹಂತದಲ್ಲಿಯೆ.[೯]

ಈ ಕಾರಣದಿಂದಲೆ ಬೇಟೆಗೆ ಹೊರಟಾಗ ತಾನು ಬೇಟೆಯಾಡಬೇಕೆಂದಿರುವ ಪ್ರಾಣಿಯ ಚಿತ್ರವೊಂದನ್ನು ಬಿಡಿಸಿ, ಅದಕ್ಕೆ ತನ್ನಲ್ಲಿರುವ ಬಾಣಗಳನ್ನು ತಗಲಿಸುವಂತೆ ಹಾಗೂ ಅದು ಸತ್ತಂತೆ ಚಿತ್ರಿಸತೊಡಗಿದನು. ಅದು ಒಂದು ರೀತಿಯಲ್ಲಿ ಪವಿತ್ರವಾದ ಆಚರಣೆಯಾಗಿ ಪರಿವರ್ತಿತವಾಗಿರಬೇಕು.

ನಿಯಂಡರ್ಥಾಲ್ ಮಾನವ ಆಗಲೇ ಕೂಡಿ ಬಾಳುವುದನ್ನು ಕಲಿತಿದ್ದ. ಆಹಾರವು ಸಿಗದಿದ್ದಾಗ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆಯುತ್ತಿದ್ದ. ಚಳಿಯಿಂದ ರಕ್ಷಣೆಯನ್ನು ಪಡೆಯಲು ತಾನು ಆಹಾರಕ್ಕಾಗಿ ಬಳಸಿದ ಪ್ರಾಣಿಯ ಚರ್ಮವನ್ನೆ ಉಡುಗೆಯಾಗಿ ಉಪಯೋಗಿಸುತ್ತಿರಬೇಕು. ನಿಸರ್ಗದ ವೈಪರೀತ್ಯಗಳು, ಹಗಲು, ರಾತ್ರಿ, ಮಿಂಚು, ಗುಡುಗು, ಮಳೆ, ಗಾಳಿ ಹೀಗೆ ಒಂದಿಲ್ಲೊಂದು ಘಟನೆಗಳು ಅವನ ಯೋಚನಾ ಲಹರಿಗೆ

ಹಚ್ಚಿರಬೇಕು. ಆಲೋಚನಾ ಲಹರಿ ಬೆಳೆದ ಹಾಗೆ ಅವನ ಜೀವನದ ಕ್ರಮ ಬದಲಾಗುತ್ತಾ ಹೋದವು. ಅವನನ್ನು ಅತಿಯಾಗಿ ಕಾಡಿದ ಪ್ರಶ್ನೆಯೆಂದರೆ ಸಾವು. ತನ್ನ ಜೊತೆಯಲ್ಲಿಯೇ ಇದ್ದು ತಕ್ಷಣ ಚಲನೆ ಇಲ್ಲದ ತುಂಡಿನಂತಾಗುವುದು ಬಿಡಿಸಲಾರದ ಒಗಟಾಗಿರಬೇಕು. ಈ ಕ್ಷಣದಲ್ಲಿ ತನ್ನ ಜೊತೆಗೆ ಇದ್ದು ಈಗ ಎಲ್ಲಿಗೆ ಹೋದ ಎಂಬುದನ್ನು ತಿಳಿಯದೆ ಬಹುಶಃ ಆತ ಮರಳಿ ಬರಬಹುದು ಎಂಬ ನಂಬಿಕೆಯಿಂದ ಅವನ ದೇಹವನ್ನು ರಕ್ಷಿಸಲು ಮನಸ್ಸುಮಾಡಿರಬೇಕು. ಅಥವಾ ಅವನು ಮತ್ತೆ ಮರಳಿ ಬರದಿದ್ದರೂ ಅವನ ರೂಪವು (ಆ ಕಾಲಕ್ಕೆ ಆತ್ಮದ ಪರಿಕಲ್ಪನೆ ಬಂದಿರುವ ಸಾಧ್ಯತೆ ಕಡಿಮೆ ಎನ್ನಬಹುದೇನೋ) ಯಾವುದೋ ರೀತಿಯಲ್ಲಿ ಮರಳಿ ಬರಬಹುದು, ಆ ಕಾರಣದಿಂದ ಅವನು ದಿನನಿತ್ಯ ಬಳಸುತ್ತಿದ್ದ ವಸ್ತುಗಳನ್ನು ಆ ದೇಹದ ಜೊತೆಗೆ ಇಡುವುದು ಬೆಳೆದು ಬಂದಿರಬೇಕು. ನಂತರದಲ್ಲಿ ಇದು ಕಾಣದ ಯಾವುದೋ ಶಕ್ತಿಯ ಕಡೆ ಮುಖಮಾಡುವಂತೆ ಮಾಡಿರಬೇಕು. ಮತ್ತೆ ಮರುಹುಟ್ಟು ಪಡೆಯುವುದು ಇದು ಅವನಿಗೆ ನಿಗೂಢವೆನಿಸಿದರು ತನ್ನ ಪೂರ್ವಜರೇ ಮತ್ತೆ ಯಾಕೆ ಹುಟ್ಟಿರಬಾರದು ಏನಿಸಿರಬೇಕು.

> ತಮ್ಮ ಹಿರಿಯರ ಮೇಲೆ ಅವರಿಗೆ ಭಯ, ಭಕ್ತಿ ಬೆಳೆಯಿತು. ಆದುದರಿಂದಲೇ ಮೃತರನ್ನು ಹೂಳುವಾಗ ಬರಿದೇ ಮಣ್ಣಲ್ಲಿ ಕೆಡೆಯಲಿಲ್ಲ. ಅವರ ಶವದ ಬಳಿ ಅವನ ತೊಡಿಗೆಯನ್ನಿರಿಸಿದರು. ಆಭರಣಗಳನ್ನಿರಿಸಿದರು. ತಾವು ಚಂದಕ್ಕೆ ಮೈಗೆ ಬಳಿದು ಕೊಳ್ಳುತ್ತಿದ್ದ ಕಾವಿಮಣ್ಣಿನ ಹೆಂಟೆಗಳನ್ನು ಇರಿಸಿದ್ದೂ ಉಂಟು.[೧೦]

ಸಾವಿನ ಆಚರಣೆಗಳು ಬೆಳೆದು ಬಂದು, ಅದಕ್ಕೆ ತನ್ನದೇ ಆದ ಕ್ರಿಯಾವಿಧಾನಗಳು ಹುಟ್ಟಿ, ಸಮಾಧಿಯ ಕಲ್ಪನೆ ಬೆಳೆದು ಬಂದಿರಬೇಕು. ಆದಿ ಮಾನವನನ್ನು ನಿಸರ್ಗದ ಪ್ರತಿಯೊಂದು ಅಂಶಗಳು ಅವನಿಗೆ ಕುತೂಹಲಕಾರಿಯಾಗಿ ಕಂಡಿರಬೇಕು. ಸೂರ್ಯ-ಚಂದ್ರರು ಪ್ರತಿದಿನವೂ ತಪ್ಪದೇ ಹುಟ್ಟಿ, ಪ್ರತಿದಿನವೂ ಸಾಯುವುದು ಅಥವಾ ಮುಳುಗುವುದು. ಸಾವಿನ ನಂತರದಲ್ಲಿ ಈ ಎರಡು ಅಂಶಗಳು ಮಾನವನ್ನು ಕುತೂಹಲಕ್ಕೆಡೆಮಾಡಿಕೊಟ್ಟಿತು. ಅದರಲ್ಲೂ ಚಂದ್ರನ ಕುಗ್ಗುವಿಕೆ ಹಿಗ್ಗುವಿಕೆಯು ತನ್ನ ಜೀವನದ ರೀತಿಯಲ್ಲಿಯೇ ಇರುವಂತೆ ತೋರಿರಬೇಕು. ಈ ಕಾರಣಕ್ಕಾಗಿಯೆ ಜಗತ್ತಿನ ಎಲ್ಲ ಸಂಸ್ಕೃತಿಗಳಲ್ಲಿ ಚಂದ್ರ ಪ್ರಮುಖನಾಗಿ ಕಂಡುಬರುತ್ತಾನೆ. ಸುಮಾರು ೪೦,೦೦೦ ವರ್ಷಗಳಿಗೂ ಪೂರ್ವದಲ್ಲಿಯೇ ಮಾನವನು ಚಂದ್ರನ ಕಲೆಗಳನ್ನು ಗುರುತಿಸಿದ್ದನ್ನು ಕಾಣಬಹುದು. ಎಲಬು, ಕಲ್ಲು, ಜಿಂಕೆಯ ಕೊಂಬಿನ ಮೇಲೆ ಚಂದ್ರನ ಕಲೆಗಳನ್ನು ಕೊರೆದಿರುವುದನ್ನು ಪತ್ತೆಹಚ್ಚಲಾಗಿದೆ. ಚಂದ್ರನ ಮೂರು ಮುಖಗಳನ್ನು ಅಂದರೆ, ಅಮವಾಸ್ಯೆಯಿಂದ ಹುಣ್ಣಿಮೆಯ ಮಧ್ಯದ ಚಂದ್ರ, ಪೂರ್ಣ ಚಂದ್ರ, ಕಪ್ಪಾದ ಚಂದ್ರನನ್ನು ಗುರುತಿಸಿದ್ದಾರೆ.[೧೧] ಇದು ದಿನಗಳ ಗುರುತಿಸುವಿಕೆಯೂ ಆಗಿರಬಹುದು. ಈ ಕಾಲಕ್ಕಾಗಲೇ ಚಂದ್ರನ ಬಗೆಗೆ ಐತಿಹ್ಯಗಳು, ಕಥೆಗಳು

ಹುಟ್ಟಿಕೊಂಡಿರಬೇಕು. ಚಂದ್ರನ ವೃದ್ಧಿ ಕ್ಷೀಣಿಸುವಿಕೆಯು ಮಾನವನ ವೃದ್ಧಿ - ಕ್ಷೀಣಿಸುವಿಕೆಯ ರೀತಿಯಲ್ಲಿಯೇ ಕಂಡಿರಬೇಕು. ಅಂತಯೇ Joseph Campbell ಅವರು ಹೇಳುವಂತೆ :

> The phases of the moon were the same for Old Stone Age man as they are for us; so also were the processes of the womb. It may therefore be that the initial observation that gave birth in the mind of man to a mythology of one mystery informing erthly and celestial things was the recognition of an accord between these two 'time - factore' orders: the celestial order of the waxing moon and earthly order of the womb.[೧೨]

ಚಂದ್ರನನ್ನು ಹೆಣ್ಣಿನ ಗರ್ಭಕ್ಕೆ ಹೋಲಿಸಲಾಗಿದ್ದನ್ನು ಕಾಣಬಹುದು. ನಿಸರ್ಗದ ಎಲ್ಲವೂ ತಾಯಿಯ ಪ್ರತಿರೂಪದಂತೆ ಕಂಡಿರಬೇಕು. ಆದ್ದರಿಂದಲೇ ಚಂದ್ರನ ಅರೆ ರೂಪವು ಹುಡುಗಿಯಾಗಿ, ಪೂರ್ಣರೂಪವು ತಾಯಿಯ ಸಂಕೇತವಾಗಿ ಮತ್ತು ಕತ್ತಲೆಯು ವೃದ್ಧೆಯಾಗಿ ಕಂಡಿರಬಹುದು.

ಚಂದ್ರನು ವೃದ್ಧಿಸುವಂತೆ ನಿಸರ್ಗದಲ್ಲಿ ನಡೆಯುವ ಎಲ್ಲ ಚಟುವಟಿಕೆಗಳು ನಡೆಯುತ್ತವೆ. ಅಲ್ಲದೆ ಕ್ಷೀಣಿಸುವಂತೆ ನಡೆಯುತ್ತವೆ. ತಾಯಿಯು ಹೇಗೆ ಮಗುವನ್ನು ತನ್ನ ಗರ್ಭದಲ್ಲಿ ಧರಿಸಿ ಹತ್ತುತಿಂಗಳು ಹೊತ್ತು ಮಗುವನ್ನು ಭೂಮಿಗೆ ಕೊಡುವಂತೆ ಈ ನಿಸರ್ಗದಲ್ಲಿ ಬೀಜವು ವೃಕ್ಷವಾಗಿ ರೂಪಾಂತರವಾಗುವುದು ಒಂದೇ ರೀತಿಯಾಗಿ ಕಾಣುತ್ತದೆ. ವೃಕ್ಷವಾಗಿ ಮತ್ತೆ ಬೀಜವಾಗಿ ರೂಪಾಂತರವಾಗುವುದು ಇದು ಮತ್ತೆ ಇದೇ ರೀತಿಯ ಸ್ಥಿತ್ಯಂತರವಾಗುವುದು ಈ ಸೃಷ್ಟಿಕ್ರಿಯೆಯ ನಿರಂತರತೆ. ಈ ನಿರಂತರತೆಯು ಮಾನವನಿಗೆ ಯಾವುದೋ ಅವ್ಯಕ್ತಶಕ್ತಿಯು ಇದರ ಹಿಂದೆ ಇದ್ದು ಇದನ್ನು ನಿಯಂತ್ರಿಸುವಂತೆ ತೋರಿತು.

ಭಯದಿಂದಲೇ ದೈವ ಅಥವಾ ಧರ್ಮ ಹುಟ್ಟಿಕೊಂಡಿರಬೇಕು. ವಾಸ್ತವವಾಗಿ ದೇವರು ಧರ್ಮಬೆಳೆದು ಬಂದಿರುವುದು ಭಯದ ಮತ್ತು ಮೋಸದ ನೆರಳಿನಲ್ಲಿ. ಇಲ್ಲಿ ಒಂದು ಕಾಲ್ಪನಿಕ ಉದಾಹರಣೆಯನ್ನು ಕೊಡಬಹುದು.

> ನಾಗರೀಕತೆಯ ಆರಂಭದ ದಿನಗಳಲ್ಲಿ, ಒಬ್ಬ ವ್ಯಕ್ತಿರಾತ್ರಿಯ ಅಂಧಕಾರದಲ್ಲಿ ಓಡುತ್ತಿದ್ದಾನೆಂದು ಇಟ್ಟುಕೊಳ್ಳಿ. ಅವನು ಇದ್ದಕ್ಕಿದ್ದಂತೆ ಒಂದು ಕಲ್ಲನ್ನು ಎಡವಿ ಬೀಳುತ್ತಾನೆ, ಮತ್ತು ಮೂರ್ಛೆಹೋಗುತ್ತಾನೆ. ನಿಧಾನವಾಗಿ ಅವನಿಗೆ ಮತ್ತೆ ತಿಳಿವು ಮೂಡುತ್ತದೆ. ಅವನು ಆಲೋಚಿಸತೊಡಗುತ್ತಾನೆ. ಇದೇನಿದು ಇದು ನನಗೆ ಏಕೆ ಪೆಟ್ಟನ್ನುಂಟು ಮಾಡಿತು ರಾತ್ರಿಯ ಕತ್ತಲು, ಕಾಡಿನ ನಿಬಿಡತೆ, ಹಳ್ಳಿಯಲ್ಲಿ ಗುಂಪಿನ ನಡುವೆ

ವಯೋವೃದ್ಧರಿಂದ ಕೇಳಿದ ಪಿತೃಗಳ ಬಗೆಗಿನ ನೆನಪು, ಇವೆಲ್ಲಾ ಅವನ ಮೇಲೆ ಆಕ್ರಮಣ ನಡೆಸುತ್ತವೆ. ಪೆಟ್ಟಿಗಿಂತಲೂ ಹೆಚ್ಚಿನ ವೇದನೆ ಅವನಿಗಾಗುವುದು. ಆ ಭಯದ ಪರಿಣಾಮವಾಗಿ, ಭಯದಿಂದ ಊರಿಗೆ ಓಡುತ್ತಾನೆ. ಸಾವಿಗೆ ಮುಂಚೆ ತನ್ನ ಸಾವಿಗೆ ಕಲ್ಲಿನ ಆಕ್ರಮಣವೇ ಕಾರಣ ಎಂದು ತಿಳಿಸುತ್ತಾನೆ. ನಡೆದ ಘಟನೆಯನ್ನು ಕೊನೆಯುಸಿರನ್ನೆಳೆಯುವ ಮುನ್ನ ಸಾವಿಗೆ ಕಾರಣವೇನೆಂಬುದನ್ನು ವಿವರಿಸಿ ಕಲ್ಲಿನ ಆಕ್ರಮಣವೇ ಆ ಕಾರಣವೆನ್ನುತ್ತಾನೆ.

ಮಾರನೆಯ ದಿನ ಬೆಳಿಗ್ಗೆ ಆ ಸಮುದಾಯದ ಜನರೆಲ್ಲ ಅವನ ಶವವನ್ನು ನೋಡುತ್ತಾರೆ. ಕಣ್ಣಿಗೆ ಕಾಣದ ಆ ಶಕ್ತಿಗೆ ಎಲ್ಲರೂ ತಲೆಬಾಗುತ್ತಾರೆ. ಆ ಸಮುದಾಯದ ಛದ್ಮವೇಶಿ ಚಿಂತಕ ಎಚ್ಚೆತ್ತು ಕಾರ್ಯೋನ್ಮುಖನಾಗುತ್ತಾನೆ. ಹೇಳುತ್ತಾನೆ: "ಈ ಶವವನ್ನು ಆ 'ಶಕ್ತಿ'ಯ ಬಳಿಗೆ ಕೊಂಡೊಯ್ಯಿರಿ'. ಬಳಿಕ ಶವವನ್ನು ಕಲ್ಲಿನ ಹತ್ತಿರ ಕೊಂಡೊಯ್ಯುತ್ತಾರೆ. ಸತ್ತ ವ್ಯಕ್ತಿಯ ಹೆಸರನ್ನು ಹಿಡಿದು ಅವನು ಪ್ರಶ್ನಿಸುತ್ತಾನೆ. "ಅವನೆಲ್ಲಿದ್ದಾನೆ?" "ಅವನೆಲ್ಲಿಗೆ ಹೋಗಿದ್ದಾನೆ?" ಯಾರೂ ಉತ್ತರವನ್ನು ಕೊಡುವುದಿಲ್ಲ. ಭೂಮಿ ಮತ್ತು ಆಕಾಶಕ್ಕೆ, ಅಲ್ಲಿಯ ನದಿ ಮತ್ತು ಝರಿಗಳಿಗೆ, ಅಲ್ಲಿರುವ ಪ್ರತಿಯೊಬ್ಬರಿಗೂ ಅದೇ ಪ್ರಶ್ನೆಯನ್ನು ಹಾಕುತ್ತಾನೆ. ಭೂಮ್ಯಾಕಾಶಗಳು ತೆಪ್ಪಗಿರುತ್ತವೆ; ನದಿ ಝರಿಗಳು ಮೌನವಾಗಿರುತ್ತವೆ. ಜನರೂ ಮಾತಿಲ್ಲದವರಾಗುತ್ತಾರೆ. ಅವನೆನ್ನುತ್ತಾನೆ: "ಅವನು ಎಲ್ಲಿಯೋ ಇದ್ದಾನೆ. ಆದರೆ ಎಲ್ಲಿದ್ದಾನೆ ಎಂಬುದು ನಿಮಗೆ ಗೊತ್ತಿಲ್ಲ, ನನಗೆ ಗೊತ್ತಿದ". ಮುಂದುವರಿದು ಹೇಳುತ್ತಾನೆ: "ಅವನು ಎದುರಿಗಿರುವ ಶಕ್ತಿಗೆ ಭೋಜ್ಯವಾಗಿದ್ದಾನೆ. ಆ ಶಕ್ತಿ ಎಷ್ಟು ಕಠೋರ ನೋಡಿ?" ಕಲ್ಲಿನ ಮೇಲೆ ಬಾಣಗಳನ್ನು ಪ್ರಯೋಗಿಸಿ ನೋಡುತ್ತಾರೆ. ಅವುಗಳ ಮೊನೆ ಮುರಿದು ಬೀಳುತ್ತದೆ. ಭರ್ಜಿಗಳನ್ನು ಎಸೆಯುತ್ತಾರೆ. ಅವುಗಳ ತುದಿ ಕೊಂಕುತ್ತದೆ. ಬಾಣಭರ್ಜಿಗಳು ಬಂದು ತಾಗಿದಾಗ ಉಂಟಾಗುವ ಧ್ವನಿಯನ್ನು ಕಲ್ಲಿನ ಅಟ್ಟಹಾಸವೆಂದು ಭಾವಿಸಿ ತಿಳಿಸುತ್ತಾನೆ. ಅ ವ್ಯಕ್ತಿ ಹೇಳುತ್ತಾನೆ: "ಈ ಶಕ್ತಿ ಅನ್ನಾದಿ ದೇವತೆ, ಹೆಣವೇ ಅದಕ್ಕೆ ಅನ್ನ, ಅದೇ ಅದಕ್ಕೆ ಎಡೆ." ಹೆಣವನ್ನು ಅದರ ಮೇಲೆ ಇಡಿ. ಆಗಿಂದಾಗ್ಗೆ ಬದುಕಿರುವ ವ್ಯಕ್ತಿಯನ್ನು ಈ ಶಕ್ತಿಯ ತೃಪ್ತಿಗಾಗಿ ಬಲಿಕೊಡಲು ಏರ್ಪಾಟುಮಾಡು ಇಲ್ಲವಾದರೆ ಅದೇ ಸ್ವತಃ ಜನರನ್ನು ಕೊಂದು ತಿಂದುಹಾಕುತ್ತದೆ. ಅವನು, ಆ ತನ್ನ ಯಾರನ್ನು ಬಲಿಕೊಡಬೇಕೆಂಬುದನ್ನು "ನಾನು" ತಿಳಿಸುತ್ತೇನ". ಈ ಕೊನೆಯ "ನಾನು" ಎಂಬುದು ಅವನಿಗೆ ಸಾಕಷ್ಟು ಶಕ್ತಿಯನ್ನು ತಂದು ಕೊಡುತ್ತದೆ. ಅವನು ಆ ತನ್ನ ಸಮುದಾಯದ ಜನರ ತನು ಮತ್ತು ಧನಗಳಿಗೆ ಒಡೆಯನೇ ಆಗಿ ಪರಿಣಮಿಸುತ್ತಾನೆ. ನದಿಯಲ್ಲಿ ಜೀವವಿಲ್ಲದೇ ಇದ್ದರೆ ಅದು ಹರಿಯುವುದಾದರೂ ಹೇಗೆ ಸಾಧ್ಯ? ಕಾಲ ಅಕಾಲವೆನ್ನದೆ ಜೀವಿಗಳನ್ನು ತನ್ನಲ್ಲಿ ಅಡಗಿಸಿ ಕೊಂಡು ಬಿಡುವುದು ಹೇಗೆ ಸಾಧ್ಯ? ಝರಿಯಲ್ಲಿ ಜೀವವಿಲ್ಲದೆ ಇದ್ದರೆ ಅದು ಕೆಳಕ್ಕೆ ಧುಮುಕಿ, ಸತತವಾಗಿ ಸದ್ದು ಮಾಡುತ್ತ ಇರುವುದಾದರೂ ಹೇಗೆ ಸಾಧ್ಯ? ಈ ಚಿಂತಕನೇ ಮೊದಲ

ಪೂಜಾರಿಯಾಗಿ, ಆ ಹೆಣವೇ ಮೊದಲ ಪಿತೃದೇವತೆಯ ಪರಂಪರೆಯಾಗಿ ಪರಿಣಮಿಸಿರುವುದನ್ನು ನೋಡಬಹುದು. ಈ ಚಿಂತಕನೇ ಇಂಗ್ಲೆಂಡಿನಲ್ಲಿ ಡ್ರೂಯಿಡ್ ಆಗುತ್ತಾನೆ. ಸುಮೇರಿಯಾದಲ್ಲಿ ಪತ್ತೇಸಿಯಾಗುತ್ತಾನೆ. ಆರ್ಯರಲ್ಲಿ ಬ್ರಾಹ್ಮಣನಾಗುತ್ತಾನೆ ಬುಡಕಟ್ಟುಗಳಲ್ಲಿ ಪೂಜಾರಿಯಾಗುತ್ತಾನೆ.[೧೩]

ಹೀಗೆ ಮನುಷ್ಯನ ಇನ್ನೊಂದು ಅದ್ಭುತಗಳಲ್ಲಿ ಒಂದು ಎಂದರೆ ಹೆಣ್ಣು ಅಥವಾ ಜನನ ಕ್ರಿಯೆ. ತಿರುಗಾಟದಲ್ಲಿಯೆ ನಿರತನಾದ ಗಂಡಸಿಗೆ ಪ್ರಜನ ಕಲೆ ತನ್ನಿಂದಲೇ ಆಯಿತು ಎಂಬುದು ಅರಿವೆಗೆ ಬಾರದೆ. ಅದೊಂದು ಅನಿರಿಕ್ಷೀತ ಘಟನೆಯಾಗಿತ್ತು. ಅವರ ಪೂರ್ವಜರ ಆತ್ಮವೇ ಮಕ್ಕಳಾಗಿ ಹುಟ್ಟಿತೆಂದು, ಅದು ಕಲ್ಲಾಸರೆ, ಬೆಟ್ಟಗಳಲ್ಲಿ, ಮರದಲ್ಲಿ,ಮುಂತಾದ ಪವಿತ್ರ ಸ್ಥಳಗಳಲ್ಲಿ ಇದ್ದು, ಮಹಿಳೆಯರ ದೇಹದಲ್ಲಿ ಪ್ರವೇಶಿಸುತ್ತದೆ ಎಂದು, ಇನ್ನು ಕೆಲವರು ಬಾಯಿಯ ಮೂಲಕ ಪ್ರವೇಶಿಸಿ ಮಗುವಾಗಿ ಜನ್ಮತಳೆಯಿತೆಂದು ನಂಬುತ್ತಾರೆ. ಹೆಣ್ಣಿನ ದೇಹವು ಅತ್ಯಂತ ನಿಗೂಢವಾದರೆ, ಅದಕ್ಕಿಂತಲೂ ನಿಗೂಢವಾದದ್ದು ತಾಯ್ತನ. ಹಾಗೆಯೆ ನಿಗೂಢತೆಯು ಅಸ್ಪಷ್ಟತೆ ಸ್ಪಷ್ಟತೆಯ ಸಾಕಾರ ರೂಪವೇ ಈ ನಿಸರ್ಗವಾಗಿದೆ ಎಂಬ ಮಾತು ಮಾತೃತ್ವದ ಮಹತ್ವವನ್ನು ತೋರಿಸುತ್ತದೆ

The mystery of the female body is the mystery of birth, which is also mystery of the unmanifest becoming manifest in the whole of nature [೧೪]

ನಿಸರ್ಗಕ್ಕೂ ಹಾಗೂ ತಾಯಿಗೂ ಇರುವ ಅಂತರ ತುಂಬಾ ಕಡಿಮೆ. ನಿಸರ್ಗವು ತನ್ನಲ್ಲಿರುವ ಸಮಸ್ತವನ್ನು ಮಾನವನಿಗೆ ಕೊಟ್ಟರೆ, ತಾಯಿ ತನ್ನ ಎದೆಯ ಹಾಲಿನಿಂದ ಪೋಷಿಸಿ ಬೆಳೆಸುತ್ತಾಳೆ.

ಹೆಣ್ಣು ತಾನು ವಾಸ ಮಾಡುವ ಪರಿಸರದಲ್ಲಿಯೇ ಹೆಚ್ಚು ಕಾಲಕಳೆಯಬೇಕಾಗಿತ್ತು. ಮಕ್ಕಳನ್ನು ಹೆತ್ತ ನಂತರ ಅದರ ಪಾಲನೆಯಲ್ಲಿಯೇ ಹೆಚ್ಚು ಸಮಯ ವ್ಯಯವಾಗುತ್ತಿತ್ತು. ಅಲ್ಲದೆ ಗಂಡು ದೈಹಿಕವಾಗಿ ಬಲಿಷ್ಟನಾಗಿದ್ದು, ತಿರುಗಾಟ ಹಾಗೂ ಹುಡುಕಾಟದಿಂದ ಬೇಟೆಯಾಡಿ ಆಹಾರ ಸಂಗ್ರಹಿಸಿ ತಂದದ್ದನ್ನು ವ್ಯವಸ್ಥಿತವಾಗಿ ಇಡುವುದು ಹೆಣ್ಣಿನ ಕೆಲಸವಾಗಿರಬೇಕು.

The association of Ancient stone tools and animal bones was proof that eraly humans where hunters and that dating. That early humans became big game hunters and that this activity favoured co-operation among males. That products of hunting were shared with adult females. [೧೫]

ಸುಮಾರು ೩೦,೦೦೦ ವರ್ಷಗಳ ಪೂರ್ವದಲ್ಲಿಯೇ ಅಡುಗೆ ಮಾಡಲು ಉಪಯೋಗಿಸುತ್ತಿದ್ದ ಸಾಮಗ್ರಿಗಳು ದೊರಕುತ್ತವೆ. ಅದರಲ್ಲೂ ಒಳಕಲ್ಲು, ಬೆಳೆಯನ್ನು ಕೊಯ್ದು ಸಂಗ್ರಹಿಸುವ ಸಾಮಗ್ರಿಗಳು ಮುಂತಾದ ಸಾಮಾನುಗಳು ದೊರಕುವುದರಿಂದ ಮಾನವನ ಜೀವನವು ಆ ಕಾಲಕ್ಕಾಗಲೇ ಒಂದು ಹಂತಕ್ಕೆ ಬಂದಿತ್ತು. ತನ್ನ ಸಮೀಪದಲ್ಲಿ ಸಿಗುವ ಗೆಡ್ಡೆಗಳು, ಕಾಳುಗಳ ಉಪಯೋಗದ ಅರಿವು ಕೂಡಾ ಆಗಲೇ ನಿಯಂಡರ್ಥಾಲ್ ಮಾನವನಿಗೆ ಗೊತ್ತಿತ್ತು. ಆದರೂ ನಿಸರ್ಗದಲ್ಲಿ ಸಿಗುವ ಈ ವಸ್ತುಗಳ ಪ್ರಮಾಣವು ಹಾಗೂ ಅವಧಿಯು ಸೀಮಿತವಾದುದು. ಈ ಕಾಲಕ್ಕೆ ಇನ್ನೂ ಕೃಷಿಯ ಆವಿಷ್ಕಾರವಾಗಿರಲಿಲ್ಲ. ಆದರೆ, ಪ್ರಾಣಿಗಳನ್ನು ಸಾಕಲು ಮೊದಲು ಮಾಡಿಕೊಂಡಿರಬೇಕು. ಫಲವತ್ತಾದ ಮತ್ತು ವಿಪುಲವಾಗಿ ಜಲಾನಯನಗೊಂಡ ಮೆಕ್ಕಲು ಮೈದಾನದಲ್ಲಿ ವೈವಿಧ್ಯಮಯ ಹಾಗೂ ಯಥೇಚ್ಛವಾದ ಪ್ರಾಣಿಸಂಖ್ಯಾ ಸಾಂದ್ರತೆ ಇದ್ದುದರಿಂದ, ಅಪಾರ ಮೌಲ್ಯದ ಕೆಲವು ಪ್ರಾಣಿ ಪ್ರಭೇದಗಳನ್ನು ಪಳಗಿಸುವುದರಲ್ಲಿ, ಅವುಗಳ ಒಡನಾಟದಲ್ಲಿ ಹಾಗೂ ಅವುಗಳಿಂದ ಗೃಹಕೃತ್ಯ ಸೇವೆಯನ್ನು ಪಡೆಯುವುದರಲ್ಲಿ ಆದಿಮಾನವರು ಪ್ರಾಣಿಗಳನ್ನು ಪಳಗಿಸಿ ತಮ್ಮ ಸ್ವಂತ ಕೆಲಸಗಳಿಗೆ ಉಪಯೋಗಿಸಲು ಪ್ರಾರಂಭಿಸಿದ.[೧] ಹೀಗೆ ಪ್ರಾಣಿಗಳ ಸಾಕಾಣಿಕೆಯ ಜೊತೆಯಲ್ಲಿಯೇ ಬೇಟೆಯನ್ನು ಉಪಕಸುಬನ್ನಾಗಿ ಮಾಡಿಕೊಂಡು ಜೀವನ ನಡೆಸುವುದನ್ನು ರೂಢಿಸಿಕೊಂಡ. ಅಲ್ಲದೆ ಬೇಟೆಯ ಉಪಲಬ್ದತೆಯ ಪ್ರಮಾಣ ಒಂದೇ ಸಮಾನವಾಗಿ ಇರುತ್ತಿರಲಿಲ್ಲ. ಹಾಗಾಗಿ ತನ್ನ ಸಮೀಪದಲ್ಲಿಯೇ ಇದ್ದ ಕೇಲವು ಪ್ರಾಣಿಗಳನ್ನು ಹಿಡಿದು ಪಳಗಿಸಿ ಅವುಗಳ ಉಪಯೋಗ ಪಡೆದ. ನಿರಂತರ ಆಹಾರದ ಹುಡುಕಾಟ ಹಾಗೂ ಕೆಲವು ಸಾಕು ಪ್ರಾಣಿಗಳ ಸಹವಾಸದಿಂದ ಕೃಷಿಯ ಆವಿಷ್ಕಾರವಾಯಿತು. ಅಲ್ಲದೆ ಗಂಡು ಬೇಟೆಗೆ ಅಥವಾ ಪ್ರಾಣಿಗಳ ಜೊತೆಗೆ ಹೋದರೆ ಹೆಣ್ಣು ಒಬ್ಬಳೆ ಇರಬೇಕಾಗುತ್ತಿತ್ತು. ಅದರಲ್ಲೂ ಗರ್ಭಿಣಿ, ಮುದುಕರು, ಮಕ್ಕಳು ಬಹಳ ಸಮಯದವರೆಗೆ ಒಂದೇ ಕಡೆ ನೆಲೆ ನಿಲ್ಲಬೇಕಾಗುತ್ತಿತ್ತು. ಗುಹೆಗಳನ್ನು ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡಮೇಲೆ ಸಮಯದ ಉಳಿತಾಯವಾಗುತ್ತಿತ್ತು. ಮಕ್ಕಳ ಅಥವಾ ಸಂಸಾರದ ಪೋಷಣೆಯ ಜವಾಬ್ದಾರಿ ಗಂಡಿಗಿಂತ ಹೆಣ್ಣಿನದೆ ಜಾಸ್ತಿಯಾಗಿರಬೇಕು.

ಸುಮಾರು ಕ್ರಿ.ಪೂ. ೩೦,೦೦೦ ವರ್ಷಗಳ ಹಿಂದಿನ (Cape province, South Africa) ಒಂದು ಗುಹಾ ರೇಖಾ ಚಿತ್ರದಲ್ಲಿ ಮೂರು ಚಿತ್ರಗಳನ್ನು ಬಿಡಿಸಲಾಗಿದೆ. ಅವುಗಳಲ್ಲಿ ಒಂದು ಚಿತ್ರವು ಗಂಡಸರು ಮೀನಿನ ಬೇಟೆಯಾಡುತ್ತಿದ್ದರೆ, ಇನ್ನೊಂದು ಚಿತ್ರದಲ್ಲಿ ನಾಯಿಗಳು ಜೊತೆಯಲ್ಲಿರುವ ಚಿತ್ರದಲ್ಲಿ ಗಂಡಸರ ಬೇಟೆಯಾಡಿದ ಪ್ರಾಣಿಯನ್ನು ಹೊತ್ತು ತರುತ್ತಿರುವ ಚಿತ್ರವಿದೆ. ಇನ್ನೊಂದು ಚಿತ್ರದಲ್ಲಿ ಹೆಂಗಸೊಬ್ಬಳು ಚೂಪಾದ ಕಟ್ಟಿಗೆಯ ಸಹಾಯದಿಂದ ಗೆಡ್ಡೆಯೊಂದನ್ನು (Bulbous plant) ಆಗೆಯುತ್ತಿರುವಂತೆ ಚಿತ್ರಿಸಲಾಗಿದೆ.[೨] ಈ ಚಿತ್ರವು ಕೃಷಿಯ ಆರಂಭದ ಚಿತ್ರಣವನ್ನು ನೀಡುತ್ತದೆ. ಅಂದರೆ, ಸ್ತ್ರೀಯು ತನಗೆ ಸಿಕ್ಕ ಸಮಯದಲ್ಲಿ ತನ್ನ ಬಂಧುಗಳಿಗೆ ಆಹಾರವನ್ನು ಒದಗಿಸಲು ಬೇಸಾಯವನ್ನು ಆರಂಭಮಾಡಿರುವಂತೆ ತೋರುತ್ತದೆ. ಹೀಗೆ ಕೃಷಿಯ

ಅನಾವರಣದಿಂದ ಅನುಕೂಲತೆಗಳು ಹೆಚ್ಚಾದವು, ಜೀವನವು ಹೆಚ್ಚು ಸುಭದ್ರವಾಯಿತು. ಅಲ್ಲದೆ ಒಂದೇ ಕಡೆ ನಿಲ್ಲುವಂತೆ ಪ್ರೇರೇಪಿಸಿರಬೇಕು. ಕೈಕಸುಬುಗಳಿಗೆ ಇದು ಒತ್ತಾಸೆಯಾಯಿತು.

> Growing one; food would make possible a settled and more secure life; would provide more leisure for investment in "culture" (such as art and religion....) and in the invention of pottery, weaving and the constrution of permanent buildings.[೧೮]

ಅಂತೆಯೇ ಸಮುದಾಯಗಳಲ್ಲಿ ಸ್ತ್ರೀ ಹಣ್ಣು ಹಂಪಲಗಳನ್ನು ಸಂಗ್ರಹಿಸುವ, ಕೈಯಿಂದ ಭೂಮಿಯನ್ನು ಅಗೆದು ವ್ಯವಸಾಯ ಮಾಡುವ ಕೆಲಸಗಳನ್ನು ಮಾಡುತ್ತಿದ್ದರೆ, ಗಂಡಸು ಬೇಟೆಗೆ ಹೊಗುತ್ತಿದ್ದನು. ಅಂದಿನ ಸಮಾಜದ ಶೇಕಡಾ ೮೦ರಷ್ಟು ಅವಶ್ಯಕತೆಗಳನ್ನು ಸ್ತ್ರೀಯರೇ ಪೂರೈಸುತ್ತಿದ್ದರು. ಪುರುಷರಿಗೆ ಬೇಟೆಯಾಡುವುದು ಒಂದು ಬಗೆಯ ಮೋಜಾಗಿತ್ತು ಎನ್ನಲಾಗಿದೆ.[೧೯]

ಅಲ್ಲದೇ ತಾಯಿ ಬರೀ ಮಕ್ಕಳ ಹುಟ್ಟಿಸುವುದಕ್ಕಷ್ಟೇ ಸೀಮಿತವಾಗದೇ ಮಕ್ಕಳ ಪೋಷಣೆಯನ್ನು ಮಾಡುವುದು ಅವಳಿಗೆ ಪ್ರಕೃತಿ ನೀಡಿದ ಕೊಡುಗೆಯಾಗಿದೆ. ಅಂತೆಯೇ ಮಕ್ಕಳ ಪೋಷಣೆಯಂತೆ ಉಳಿದ ಕೆಲಸಗಳು ಹೆಣ್ಣಿಗೆ ಸಹಜವಾದವು. ಮಡಿಕೆಗಳನ್ನು ಮಾಡುವುದು, ಆರೋಗ್ಯದ ರಕ್ಷಣೆ, ಗಿಡಮೂಲಿಕೆಗಳ ಬಳಕೆ,ಹಲವಾರು ವಿಷಯಗಳು ಹೆಣ್ಣಿನಿಂದಲೇ ಆರಂಭವಾದವು.

> The sowing and reaping of grain the transformation of grin into bread, the making of clay pots and ritual vessels and their decoration, the art of dyeing wool and weaving cloth and the gathering of herbs to transform into healing potions - all these may have been, to begin with the invention of women, whose skills were transmitted from mother to daughter.[೨೦]

ಗಿಡಮರಗಳನ್ನು ನೆಟ್ಟು ಬೆಳೆಯನ್ನು ಬೆಳೆಯುವುದು ಕೂಡ ಮಕ್ಕಳ ಲಾಲನೆ ಪಾಲನೆ ಮಾಡಿದಂತೆ ಮಾಡುತ್ತಿದ್ದಿರಬೇಕು. ಜೊತೆಯಲ್ಲಿ ಕೃಷಿಯನ್ನು ಆರಂಭಿಸಿದ್ದರಿಂದ ಅವಳ ಜವಾಬ್ದಾರಿಗಳು ಹೆಚ್ಚಾದವು. ಮಗುವಿನ ಪೋಷಣೆ, ಸಂಸಾರ ನಿರ್ವಹಣೆಯು ಅವಳ ಮೇಲಿದ್ದವು. ಭೂಮಿಯನ್ನು ಕೈಯಿಂದ ತನಗೆ ಬೇಕಾದಷ್ಟು ಉತ್ತುಬಿತ್ತಿ ಬೆಳೆಯನ್ನು ತೆಗೆದುಕೊಳ್ಳುತ್ತಿರಬೇಕು. ಇದರಿಂದ ಅಂದಿನ ಸಮಾಜದಲ್ಲಿ ಅವಳ ಸ್ಥಾನ ಭದ್ರವಾಗಿರಬೇಕು. ಅಲ್ಲದೇ ಗೌರವ, ಹಾಗೂ ಪೂಜ್ಯ ಭಾವನೆಯನ್ನು ಕೂಡ ಪಡೆದಿರಬೇಕು.

> Women and feminine sacrality are raised to the first rank. Since women played a decisive part in the domestication of plants, they become the woners of the cultivated fields, which raises their social position and creates characteristic institution, such as, for example, matrilocation, the husband being obliged to live in his wife's house.[೨೧]

ಮಹಿಳೆಯ ಸ್ಥಾನ ಹಿರಿದಾಗಿದ್ದರ ಜೊತೆಯಲ್ಲಿಯೆ ಭೂಮಿಯ ಒಡೆತನವೂ ದೊರಕಿತು.ಸಹಜವಾಗಿಯೇ ಹೆಣ್ಣು ಕೃಷಿಯನ್ನು ಮಾಡುತ್ತಿದ್ದರಿಂದ ಆರ್ಥಿಕವಾದ ಅಂಶಗಳನ್ನು ತನ್ನ ವಶದಲ್ಲಿಟ್ಟುಕೊಳ್ಳಲು ಸಹಾಯಕವಾಗಿರಬಹುದು.ಅಲ್ಲದೆ ಬಳಸುತ್ತಿದ್ದ ಸಾಮಗ್ರಿಗಳ ಪ್ರಮಾಣ ತುಂಬಾ ಸಣ್ಣದಾಗಿದ್ದು, ವ್ಯವಸಾಯದ ಕ್ಷೇತ್ರವೂ ಸಣ್ಣ ಪ್ರಮಾಣದಲ್ಲಿತ್ತು. ಪ್ರಾಣಿಗಳ ಸಾಕಾಣಿಕೆ, ದುಡಿಯುವುದು ಗಂಡಿನ ಕೆಲಸವಾಗಿದ್ದರೂ ಸಹ, ಸಮಾಜದ ರೀತಿ ರಿವಾಜುಗಳನ್ನು ನಿರ್ಧರಿಸುವುದು ಅವಳೆ ಆಗಿ ಮಹಿಳಾ ಪ್ರಧಾನವಾದ ಸಮಾಜದ ನಿರ್ಮಾಣವಾಗಿರಬಹುದು.

> The development of agricultural civilization without any interveing pastoral phase enhanced the matriarchal position of women not only as owners and heiresses of the araboe land but also through their traditional association with agricultural magic and religion, which assumed in archaic societies a momentous development in correlation with that of agricultural pursuits, the women retaining for a long period the character of preistess.[೨೨]

ಹೀಗೆ ಕೃಷಿಯ ಆವಿಷ್ಕಾರವಾಗಿ, ಅದು ಹೆಚ್ಚು ಕ್ರಿಯಾಶೀಲವಾದಂತೆ ಅನೇಕ ನಂಬಿಕೆಗಳು ಹುಟ್ಟಿಕೊಂಡಿರಬೇಕು. ಪ್ರಕೃತಿಯ ನಡುವೇ ಇದ್ದು ಬದುಕುತ್ತಿದ್ದ ಇವನಿಗೆ ಅನೇಕ ಕಾಯಿಲೆಗಳು ಕ್ರೂರ ಪ್ರಾಣಿಗಳ ಸಂಪರ್ಕ, ಬೇಟೆಯಲ್ಲಿ ಕಂಡ ಅನುಭವಗಳು ಹೀಗೆ ಅನೇಕ ಘಟನೆಗಳು ಘಟಿಸುತ್ತಿಬೇಕು. ಈ ಘಟನೆಗಳ ಬಗೆಗೆ ಅನೇಕ ಕಲ್ಪನೆಗಳು ಹುಟ್ಟಿಕೊಂಡಿರಬೇಕು. ಅವನ ಅನುಭವಗಳೇ ಮಿಥ್‌ಗಳಾಗಿ ಪರಿವರ್ತನೆಯಾಗಿರಬೇಕು. ಉದಾಹರಣೆಗೆ,ಅನಾರೋಗ್ಯದಿಂದ ಬಳಲುತ್ತಿದ್ದ ವ್ಯಕ್ತಿಗೆ ಯಾವುದೋ ಗಿಡಮೂಲಿಕೆಯಿಂದ ತಕ್ಷಣ ಗುಣವಾದರೆ ಅದು ಆ ಗಿಡದ ಪ್ರಭಾವದಿಂದ ಆಗಿದ್ದಾದರೂ ಅದು ಕೊಟ್ಟವನ ಕೈಯಿಂದ ಆಗಿರಬಹುದು ಎಂಬ ತಿಳವಳಿಕೆಯು ಮಾಟದ ಕಲ್ಪನೆಯನ್ನು ಹುಟ್ಟುಹಾಕಿರಬೇಕು. ಅಲ್ಲದೆ ತನಗೆ ಕೆಲವು ವಿಷಯಗಳು ಗೊತ್ತಾಗಿರದೇ ಇದ್ದಾಗ ಪ್ರಕೃತಿಯನ್ನೇ ದಯಪಾಲಿಸುವಂತೆ ಕೂಗಿಕೊಂಡಿರಬಹುದು. ಹೀಗೆ ಇತರರಿಗೆ ಗೊತ್ತಿರದ ವಿಷಯಗಳಲ್ಲಿ

ಕುತೂಹಲವನ್ನುಂಟು ಮಾಡಿ ತನಗೆ ಗೊತ್ತಿರುವಂತೆ ನಟಿಸಿ ಜನರ ಗಮನ ಸೆಳೆದು ತನ್ನ ಕಾರ್ಯ ನೇರವೇರಿಸಿಕೊಳ್ಳುವುದು ಇಂದಿಗೂ ಇದ್ದೇ ಇದೆ. ಹಾಗೆಯೇ ಏನೂ ಗೊತ್ತಿರದ ಮನುಷ್ಯನಿಗೆ ನಂಬಿಕೆಗಳು ಹುಟ್ಟುವಂತೆ ಮಾಡುವುದು ಇನ್ನೂ ಸುಲಭ. ಪ್ರಕೃತಿಯನ್ನು ಅಥವಾ ಚೈತನ್ಯವನ್ನು ಮಾಂತ್ರಿಕತೆಯಿಂದ ನಿಯಂತ್ರಿಸುವುದರ ಮೂಲಕ ಮುಂದಾಗುವ ಘಟನೆಗಳ ಮೇಲೆ ಪ್ರಭಾವ ಬೀರುವ ಕಲೆಯನ್ನು ಅನಿರ್ವಚನೀಯವಾದ ಅಥವಾ ವಿಶೇಷವಾದ ರೀತಿಯಲ್ಲಿ ಆಶ್ಚರ್ಯಕರ ಪರಿಣಾಮವನ್ನುಂಟು ಮಾಡುವ ಕೃತ್ಯಗಳನ್ನು ಮಾಟ ಮಾಡುತ್ತಿತ್ತು. ಎಸ್.ಕೆ. ರಾಮಚಂದ್ರರಾಯರು ಹೇಳುವಂತೆ

> ಸಾಮಾನ್ಯವಾಗಿ ತನ್ನ ಇಚ್ಛೆಯಂತೆ ನಡೆಯದ ಪ್ರಾಕೃತಿಕ ಪ್ರಸಂಗಗಳನ್ನು ಕೂಡ ಮನುಷ್ಯನು ತನಗೆ ಬೇಕಾದಂತೆ ನಡೆಯುವ ಹಾಗೆ ಮಾಡುವುದು ಮಂತ್ರ ತಂತ್ರಗಳ ಉದ್ದೇಶ; ಯಾವುದಾದರೂ ಒಂದು ನಿರ್ದಿಷ್ಟವಾದ ಕಲ್ಪವನ್ನು ಸರಿಯಾದ ರೀತಿಯಲ್ಲಿ, ಮಂತ್ರಗಳನ್ನು ಸರಿಯಾಗಿ ಉಚ್ಚರಿಸಿ ಮಾಡಿದ್ದೇ ಆದರೆ ಪ್ರಸಂಗಗಳು ನಮಗೆ ಬೇಕಾದ ರೀತಿಯಲ್ಲಿ ನಡೆದೇ ನಡೆಯುತ್ತದೆ ಎನ್ನುವ ವಿಶ್ವಾಸ ಪ್ರಾಚೀನ ಜನರಿಗಿದ್ದಿತು. ಮಳೆಬರಿಸುವುದು ಬೇಟೆಯನ್ನು ಫಲಪ್ರದವಾಗಿಸುವುದು, ಭೂಮಿ ಫಲವತ್ತಾಗುವಂತೆ ಮಾಡುವುದು, ಶತ್ರುಗಳು ತೊಂದರೆಗೀಡಾಗಿ ಸಾಯುವಂತೆ ಮಾಡುವುದು, ರೋಗರುಜಿನಗಳನ್ನು ತಡೆಗಟ್ಟುವುದು, ಆಯುಧವು ಸರ್ವಸಮರ್ಥವಾಗುವಂತೆ ಮಾಡುವುದು, ತಾನು ಹೋದಲ್ಲೆಲ್ಲ ಜಯಶೀಲನಾಗುವುದು.[೨೩]

ಈ ಎಲ್ಲವನ್ನು ಮಾಟ ಅಥವಾ ಮಂತ್ರ - ತಂತ್ರಗಳಿಂದ ಮಾಡಬಹುದು ಎಂದು ತಿಳಿದುಕೊಂಡ. ಇದು ಕೃಷಿಯಲ್ಲಿ ಎದ್ದು ತೋರುತ್ತದೆ. ಮಾತೃದೇವತೆಯ ಆರಾಧನೆಯು ಇಲ್ಲಿಯವರೆಗೆ ಗುಹೆಯನ್ನು ಮೂಲ ಸ್ಥಾನವನ್ನಾಗಿ ಮಾಡಿಕೊಂಡಿತ್ತು. ಆದರೆ ನೂತನ ಶಿಲಾಯುಗದಲ್ಲಿ ಕೃಷಿಕೇಂದ್ರಿತವಾದ ಆರ್ಥಿಕ ಸಮಾಜದತ್ತ ಹೋಗುವುದನ್ನು ನೋಡಿದಾಗ ಮಾತೃವಿನ ಸ್ಥಾನದಲ್ಲೂ ಬದಲಾವಣೆಯನ್ನು ಕಾಣಬಹುದಾಗಿದೆ. ಇಲ್ಲಿ ಮಾತೃದೇವತೆಯ ಗುಣಸ್ವಭಾವವು ಹಿರಿದಾದ ವಿಸ್ತಾರವನ್ನು ಪಡೆಯಿತು. ವಿಶ್ವದ ಜೈವಿಕ ಶಕ್ತಿಯಾಗಿ ಜೀವಂತಿಕೆಯ, ಪವಿತ್ರವಾದ ಹಾಗೂ ಮಾನವೀಯತೆಯನ್ನು ಹೊಂದಿದ ಗ್ರಹಿಕೆಯನ್ನು ಕಾಣಬಹುದು. ಅಲ್ಲದೆ ವಿಶ್ವದ ಎಲ್ಲ ಜೀವಿಗಳು ಅವಳ ಮಕ್ಕಳಾಗಿ, ಹುಟ್ಟು , ಸಾವು ಮತ್ತು ಮುಂದಿನ ಜೀವನದ ತಾಯಿಯಾಗಿದ್ದಾಳೆ. ಅಲ್ಲದೆ, ಸ್ತ್ರೀಯು ಸಮಸ್ತ ಪ್ರಾಣಿಗಳನ್ನು, ಸಸ್ಯಗಳನ್ನು ಹಾಗೂ ಮಾನವರನ್ನು ತನ್ನ ಒಡಲಿನಲ್ಲಿ ತುಂಬಿಕೊಂಡಿರುವ ದೇವತೆಯಾಗಿದ್ದಾಳೆ ಎಂದು ತೊರುವ ಸ್ತ್ರೀವಿಗ್ರಹಗಳು ಕಂಡುಬರುತ್ತವೆ. ಬೇಟೆಯ ಕಾಲದಲ್ಲಿ ಕಂಡು ಬರುವ ಸ್ತ್ರೀ ವಿಗ್ರಹಗಳು ಬರೀ ತಾಯಿಯಾಗಿ ಅಂದರೆ ಮಕ್ಕಳನ್ನು ರಕ್ಷಿಸುವ ಬೆಳೆಸುವ, ಪೋಷಿಸುವ ರೂಪದಲ್ಲಿ ಮಾತ್ರ ಕಂಡುಬಂದರೆ ಇಲ್ಲಿ ಇಡೀ ಜಗತ್ತಿನ ಸೃಷ್ಟಿಕರ್ತೆಯಾಗಿ ಕಂಡುಬರುವುದನ್ನು ನೋಡಬಹುದು.

ನಗ್ನತೆಯು ಪ್ರಧಾನವಾಗಿ ಕಂಡುಬಂದರು ಅದು ನಗ್ನತೆಯ ರೂಪವಾಗಿರದೆ ಸೃಷ್ಟಿಯ ಸಂಕೇತವಾಗಿ ಕಂಡುಬರುತ್ತದೆ.

> "The Mother Goddess, wherever she is found, is an image that inspires and focuses a perception of the universe as an organic, alive and sacred whole, in which humanity, the Earth and all life on Earth participate as 'her children'.[೨೪]


೨.೧.೨.ಪ್ರಾಕ್ಚಾರಿತ್ರಿಕ ಕಾಲ

ಪುರಾತನ ಶಿಲಾಯುಗದಲ್ಲಿ (ಸುಮಾರು ೧೫,೦೦೦ ಪೂರ್ವದಲ್ಲಿ ಇದ್ದಿರಬಹುದಾದ ವಿಗ್ರಹಗಳು) ಯುರೋಪ ಒಂದರಲ್ಲಿಯೆ ಸುಮಾರು ನೂರಾರು ವಿಗ್ರಹಗಳು ದೊರಕುತ್ತವೆ (The Myth of Goddess, 1993, p.6). ಇವುಗಳು ಕಲ್ಲಿನಲ್ಲಿ, ದಂತದಲ್ಲಿ, ಎಲಬಿನಲ್ಲಿ ಹಾಗೂ ಮಣ್ಣಿನಲ್ಲಿ ಮಾಡಿದ ವಿಗ್ರಹಗಳಾಗಿವೆ. ಇವು ಸಾಮಾನ್ಯವಾಗಿ ನಗ್ನವಾಗಿದ್ದು, ದೊಡ್ಡದಾದ ಸ್ತನಗಳನ್ನು ಹಾಗು ದೊಡ್ಡದಾದ ಹೊಟ್ಟೆ (ಗರ್ಭಿಣಿಯರದ್ದಾಗಿರಬಹುದು) ಮತ್ತು ಕುಂಡಿಗಳನ್ನು ಹೊಂದಿರುತ್ತವೆ. ಇವುಗಳಿಗೆ ಕಾಲುಗಳಿರುವುದಿಲ್ಲ. ಆದರೆ ಇವುಗಳಲ್ಲಿ ಕೆಲವೊಂದು ಸಾಮಾನ್ಯ ಸ್ತ್ರೀಯರದ್ದಾಗಿರಬಹುದು, ಇಲ್ಲವೆ ಗರ್ಭಿಣಿಯರಾಗಿರಬಹುದು. ಅಥವಾ ಬಹುತೇಕವಾಗಿ ತಾಯಂದಿರ ವಿಗ್ರಹಗಳಾಗಿರಬೇಕೆಂದು ಊಹಿಸಲಾಗಿದೆ. ಇವುಗಳಿಗೆ ಕೆಂಪನೆಯ ಪುಡಿ ಅಥವಾ ರಕ್ತದಂತಹ ವಸ್ತುವನ್ನು ಹಚ್ಚಲಾಗಿರುವುದು ಕಂಡುಬರುತ್ತದೆ. ಇದು ಜೀವನದ ಹುಟ್ಟುವಿಕೆಯ ಸಂಕೇತವಾಗಿರಬೇಕು (ಕೆಂಪು ಅಥವಾ ರಕ್ತವು ಸಹ ಇದನ್ನೆ ಸಂಕೇತಿಸುತ್ತದೆ). ಅಲ್ಲದೆ ಕಾಲಿನ ಕೆಳಭಾಗವು ಇರುವುದಿಲ್ಲ. ಪೂಜಿಸಲು ಅನುಕೂಲವಾಗುವಂತೆ ಮಾಡಲು ಪಾದಗಳನ್ನು ಇಡದೆ ಇದ್ದು, ಇವುಗಳನ್ನು ನೆಲದಲ್ಲಿ ಅಥವಾ ಯಾವುದಾದರು ವಸ್ತುವಿನಲ್ಲಿ ನೆಟ್ಟಗೆ ಸಿಕ್ಕಿಸಲು ಅನುಕೂಲವಾಗುವಂತೆ ಪಾದಗಳನ್ನು ಹೊಂದಿರದೆ ಇರುವುದೇ ಆಗಿರಬಹುದು.

ಫ್ರಾನ್ಸ್ ನ ಡೋರ್ಡೋಗ್ನೆಯ ಲೌಸ್ಸೆಲ್ ಗುಹೆಯಲ್ಲಿ ಕಂಡುಬರುವ ಒಂದು ವಿಗ್ರಹವು ಸುಮಾರು ಕ್ರಿ. ಪೂ. ೨೦,೦೦೦ದಿಂದ ೧೮,೦೦೦ ವರ್ಷಗಳ ಪೂರ್ವದ್ದೆಂದು ಊಹಿಸಲಾಗಿದೆ (The Myth of Goddess, 1993, p.6). ಇದು ಸುಮಾರು ೧೭ ಅಂಗುಲ ಎತ್ತರವಿದೆ. ಸುಣ್ಣದ ಕಲ್ಲಿನ ಬಂಡೆಯ ಮೇಲೆ ಕೆತ್ತಲಾಗಿರುವ ಈ ವಿಗ್ರಹದ ಕೈಯಲ್ಲಿ ಪ್ರಾಣಿಯ ಕೊಂಬೊಂದನ್ನು ಹಿಡಿದಿದೆ. ಅರ್ಧ ಚಂದ್ರಾಕೃತಿಯ ರೀತಿಯಲ್ಲಿರುವ ಈ ಕೊಂಬಿನಲ್ಲಿ ಹದಿಮೂರು ರೇಖೆಗಳನ್ನು ಕೊರೆಯಲಾಗಿದೆ. ಇದು ಚಂದ್ರನ ಹದಿಮೂರು ಕಲೆಗಳನ್ನು ಸಂಕೇತಿಸುತ್ತಿರಬಹುದು. ಪೈರನೀಸ್‌ನ ಬೆಟ್ಟದ ಬುಡದಲ್ಲಿರುವ ಲೆಸ್ಪುಗು (Lespugue) ಸ್ಥಳದಲ್ಲಿ ದೊರಕಿರುವ ದಂತದ ಗೊಂಬೆಯು ಸುಮಾರು ಅರ್ಧ ಅಡಿ ಎತ್ತರವಿರುವ ಈ ವಿಗ್ರಹವು ಕೂಡಾ ಇದೇ ಕಾಲಕ್ಕೆ ಸೇರಿದುದಾಗಿದೆ.



ಚಿತ್ರ ೧



ಚಿತ್ರ ೨

ಈ ವಿಗ್ರಹವು ಕೂಡಾ ದೊಡ್ಡದಾದ ಮೊಲೆಗಳನ್ನು ಹೊಂದಿದ್ದು, ಅವುಗಳ ಮೇಲೇ ತನ್ನ ಕೈಯನ್ನು ಇಟ್ಟುಕೊಂಡಿದೆ. ಈ ಮೊಲೆಗಳು "the breasts are the entire focus of meaning, and everything else has been abstracted away to render the central theme of nourishment all-inclusive". [೨೫] ಎಂದು ಹೇಳಲಾಗಿದೆ. ಆದರೆ ಮೊಲೆಗಳು ತುಂಬಾ ದೊಡ್ಡದಾಗಿರುವುದರಿಂದ ಹೊಟ್ಟೆಯ ಭಾಗ ಕಂಡುಬರುವುದಿಲ್ಲ. ಆದರೆ ಪೃಷ್ಠದ ಭಾಗವು ಕೂಡಾ ಅಳತೆಮೀರಿ ಇದೆ. ಈ ಎರಡು ಅಂಶಗಳು ತಾಯ್ತನದ ಅಥವಾ ಸೃಷ್ಟಿಯನ್ನು ತನ್ನಲ್ಲಿ ಹೊತ್ತಿರುವ ಹಾಗೆ ವಿಗ್ರಹ ಕಾಣುತ್ತದೆ.

ಅಸ್ಟ್ರಿಯಾದ ವಿಲ್ಲೆಡ್ರೊಫ್‌ನ ಮಾತೃದೇವತೆ ಅತ್ಯಂತ ಪ್ರಸಿದ್ಧವಾದುದು. ಅದು ಸುಮಾರು ಹನ್ನೊಂದು ಅಂಗುಲ ಎತ್ತರವಿರುವ ಈ ವಿಗ್ರಹವು ಸುಣ್ಣದ ಕಲ್ಲಿನಿಂದ ಮಾಡಲಾಗಿದೆ. ಸೊಂಟದ ಭಾಗ ಹಾಗೂ ಎದೆಯ ಭಾಗಗಳು ಅತ್ಯಂತ ವಿಶಾಲವಾಗಿ ರಚಿಸಲಾಗಿದ್ದು, ಎರಡು ಕೈಗಳು ಮೊಲೆಗಳ ಮೇಲೆ ಇಟ್ಟುಕೊಂಡಿವೆ. ಇನ್ನೊಂದು ಈ ವಿಗ್ರಹದ ವಿಶೇಷವೆಂದರೆ ತಲೆಯನ್ನು ಹೊಂದದೆ ಇರುವುದು. ಇಲ್ಲಿ ಮುಖದ ಯಾವುದೇ ಲಕ್ಷಣಗಳನ್ನು ಹೊಂದಿಲ್ಲ. ಬದಲಾಗಿ ಕುಂಬರೂಪವನ್ನು ಕೊಡಲಾಗಿದೆ. ಏಳು ಸುತ್ತಿನಲ್ಲಿ ಗಂಟುಗಳನ್ನು ರೂಪಿಸಲಾಗಿದೆ. ಇದು ಚಂದ್ರನ ತಿಂಗಳಿನ ಕಾಲುಭಾಗವನ್ನು ತೋರಿಸುತ್ತಿರಬಹುದು ಎಂದು ತರ್ಕಿಸಲಾಗಿದೆ. ಅಲ್ಲದೆ ಮುಂದೆ ಕಂಚಿನಯುಗದಲ್ಲಿ ಏಳು ಅತ್ಯಂತ ಪವಿತ್ರವಾದ ಸಂಖ್ಯೆಯಾಗಿರುವುದನ್ನು ಕಾಣಬಹುದು. ಈ ದೇವತೆಯನ್ನು "ವಿಲ್ಲೆಂಡ್ರೊಫ್‌ನ ರತಿ" (Venus of Willendrof) ಎಂದು ಹೆಸರಿಸಲಾಗಿದೆ. ಇವಲ್ಲದೆ ಹಲವಾರು ರೀತಿಯ ಸ್ತ್ರೀ ಪ್ರಧಾನವಾದ ಅಂಶಗಳನ್ನು ಮಾತ್ರ ಎತ್ತಿತೋರಿಸುವ ವಿಗ್ರಹಗಳು (ಮೊಲೆ ಮತ್ತು ಸೊಂಟದ ಭಾಗ) ಸಹ ಕಂಡುಬರುತ್ತವೆ. ಉದಾಹರಣೆಗೆ ಜಕಸ್ಲೋವಿಕಿಯಾದ ವೇಸ್ಟೊನಿಸೆಯ ಡೊಲ್ನಿಯಲ್ಲಿ (Dolni, Vestonice, Czechoslovakia) ಕಂಡು ಬರುವ ವಿಗ್ರಹವನ್ನು ದಂತದಲ್ಲಿ ಕೆತ್ತಲಾಗಿದೆ. ಇದು ಸುಮಾರು ೨೫,೦೦೦ದಿಂದ ೨೦,೦೦೦ ವರ್ಷಗಳ ಪೂರ್ವದ್ದೆಂದು ಹೇಳಲಾಗಿದೆ.

ರಷ್ಯಾದ ಸೈಬಿರಿಯಾದ ಬೈಕಲ್ ಸರೋವರದ ಸಮೀದಲ್ಲಿಯ ಮಾಲ್ಟಾ (Mal'ta, Siberia) ಪ್ರದೇಶದಲ್ಲಿ ಸುಮಾರು ೧೬,೦೦೦ ದಿಂದ ೧೩,೦೦೦ ವರ್ಷಗಳ ಮಧ್ಯದಲ್ಲಿ ಸಮಾದಿಗಳಲ್ಲಿ ಬೃಹತ್‌ಗಾತ್ರದ ಆನೆಯ ದಂತದಿಂದ ಮಾಡಿದ ಸುಮಾರು ಇಪ್ಪತ್ತು ವಿಗ್ರಹಗಳು ದೊರಕುತ್ತವೆ. ಇವು ವಿವಿಧ ರೀತಿಯಲ್ಲಿ ಮಾಡಲಾಗಿರುವ ಮಾತೃದೇವತೆಯ ರೂಪದ ವಿಗ್ರಹಗಳು ಇವಾಗಿವೆ. ಆರಾಧನೆಯ ಪ್ರಾಚೀನ ಪರಂಪರೆಯು ನಡೆದು ಬಂದ ಹಂತಗಳನ್ನು ತೋರಿಸುತ್ತವೆ. ಈ ವಿಗ್ರಹಗಳು ಸಾವಿರಾರು ವರ್ಷಗಳಿಂದ ಅನೇಕ ಮಾರ್ಪಾಟುಗಳೊಂದಿಗೆ ಮುಂದಿನ ಯುಗಗಳಲ್ಲಿ ಕಂಡುಬರುತ್ತವೆ. ಬೇಟೆ ಹಾಗೂ ಕೃಷಿ ಈ ಎರಡರ ಮಧ್ಯದಲ್ಲಿ ಕಂಡುಬರುವ ಈ ವಿಗ್ರಹಗಳು ಕಂಚಿನಯುಗ ಬರುವವರೆಗೂ ಕಂಡುಬರುತ್ತವೆ. ಬೇಟೆಯ ಯುಗದಲ್ಲಿ ಕಂಡುಬರುವ ವಿಗ್ರಹಗಳು





ಚಿತ್ರ ೩೨

ತಾಯ್ತನದ ಪ್ರಾಮುಖ್ಯತೆ ಎದ್ದು ಕಾಣುತ್ತದೆ. ಆದರೆ ಕೃಷಿಯ ಆರಂಭದಿಂದ ಆಚರಣೆಯ ವಿಧಾನಗಳು, ಐತಿಹ್ಯಗಳು ಬದಲಾವಣೆಯನ್ನು ಹೊಂದುತ್ತವೆ. ಭೂಮಿಯ ಪ್ರಾಧಾನ್ಯತೆಯು ಈ ಹಂತದಲ್ಲಿ ಸ್ತ್ರೀಯೊಡನೆ ಸೇರುತ್ತದೆ. ನ್ಯೂಮನ್ ಹೇಳುವಂತೆ "highest and most essntial mysteries of the Feminine are symbolised by the earth and its transformation."[೨೬]

ಈ ವಿಗ್ರಹಗಳು ಮಾತೃದೇವತೆಯದ್ದಾಗಿವೆಯೇ ಅಥವಾ ನಗ್ನತೆ, ಅಶ್ಲೀಲವಾದ ಜೀವನ ಮಾದರಿಯನ್ನು ಹೇಳುವ ನಗ್ನ ಚಿತ್ರಗಳಾಗಿವೆ ಅಥವಾ ಸಾಮಾನ್ಯ ಜನರು ಬಿಡಿಸಿದ ಸಾಮಾನ್ಯ ಚಿತ್ರಗಳಾಗಿವೆಯೇ ಎಂಬ ಪ್ರಶ್ನೆಗಳು ಗೊಂಬೆ ಅಥವಾ ಚಿತ್ರಗಳನ್ನು ನೋಡಿದವರಿಗೆ ಕಾಡುವ ಪ್ರಶ್ನೆಗಳು. ಆದರೆ ಅಷ್ಟು ಸುಲಭವಾಗಿ ಈ ನಿರ್ಧಾರಕ್ಕೆ ಬರಲು ಸಾಧ್ಯವಾಗದು. ಯಾಕೆಂದರೆ ಇಷ್ಟೊಂದು ಪ್ರಮಾಣದಲ್ಲಿ ಗುಹಾ ಚಿತ್ರಗಳಾಗಲಿ, ಅಥವಾ ಕಲ್ಲು ಮಣ್ಣು ದಂತಗಳಲ್ಲಿ ಕೊರೆದು ಮಾಡಿರುವ ಈ ವಿಗ್ರಹಗಳ ಹಿಂದೆ ಧಾರ್ಮಿಕ ಅಂಶ ಇರಲೇ ಬೇಕು. ಇದನ್ನು ಹೀಗೆ ಹೇಳಬಹುದು.

> the goddess figurines were originaly classified as erotic or pornographic art, a conception that would be unthinkable if the feminine principle were recognized as sacred, or, to speak colloquially, if 'GOD' were a Mother as well as a Father that is to say, if our image of the deity contained both feminine and masculine dimensions. Secondly, the many stick and line forms engraved on stone and bone and painted on the walls of the caves were assumed to be weapons for hunting or male signs, but, on colser microscopic examination, proved to be plants, leaves, branches and trees. [೨೭]

೨.೧.೩. ನವ ಶಿಲಾಯುಗ

ಕೃಷಿಯನ್ನು ಆರಂಭಿಸಿ ಅದನ್ನು ಬೆಳಸಿದವಳು ಸ್ತ್ರೀ ಎಂಬುದನ್ನು ಹಿಂದಿನ ಪುಟಗಳಲ್ಲಿ ತಿಳಿಯಲಾಗಿದೆ. ಕೃಷಿಯ ಆವಿಷ್ಕಾರದ ಪರಿಣಾಮವಾಗಿ ಭೂಮಿ ಮತ್ತು ಸ್ತ್ರೀಯರು ಪ್ರಮುಖವಾದ ದೈವೀಕವಾದ ಗುಣಗಳನ್ನು ಹೊಂದಲು ಪ್ರಾರಂಭವಾದವು. ಅಲ್ಲದೇ ಅನೇಕ ಕ್ರಿಯಾ ವಿಧಾನಗಳು ನಂಬಿಕೆಗಳು ಹುಟ್ಟಿಕೊಳ್ಳಲು ಸಹಾಯವಾಯಿತು. ತಾನು ಪಡೆದಿದ್ದಕ್ಕೆ ಬದಲಾಗಿ ಹಿಂದಿರುಗಿಸಬೇಕು ಎಂಬ ನಂಬಿಕೆ ಬೆಳೆಯಿತೆಂದು ತೋರುತ್ತದೆ. ಅಲ್ಲದೆ ಗಂಡಿ ತನ್ನ ಅಂಶಗಳಿಂದ ಮಗು ಜನನವಾಯಿತು ಎಂಬ ತಿಳುವಳಿಕೆ ಇರಲಿಲ್ಲ ಎಂಬುದು ಅನೇಕ

ಅಂಶಗಳಿಂದ ವ್ಯಕ್ತವಾಗುತ್ತದೆ. ಅದೇ ರೀತಿ ಬೀಜದಿಂದ ವೃಕ್ಷವಾಗದೆ ಅದೊಂದು ಪವಾಡದ ರೀತಿಯಾಗಿ ಕಂಡಿರಬೇಕು. ಹೀಗೆ ದೈವೀಕವಾದ ಗುಣಗಳನ್ನು ಹೊಂದಿದಾಗ ಅದರ ವ್ಯಾಪ್ತಿ ಹಿರಿದಾಯಿತು. ಭೂಮಿಯನ್ನು ದೇವರೆಂದು ತಿಳಿದಾಗ ಅದರ ಹೊಟ್ಟೆಯನ್ನು ಬಗೆಯುವುದು ಅಪರಾಧವಾಗುವುದಿಲ್ಲವೆ. ತಾಯಿ ಬರೀ ಒಂದು ಹೆಣ್ಣಾಗುವುದಿಲ್ಲ ಅವಳು ಹಿಂದಿನ ಜನಾಂಗ ಹಾಗೂ ಮುಂದಿನ ಜನಾಂಗದ ಕೊಂಡಿಯಾದವಳು. ತಾನು ಹುಟ್ಟಿದ ಜಾಗ ಹಾಗೂ ತಾನು ತಿನ್ನುವ ಅನ್ನ ಕೊಡುವ ಭೂಮಿಯನ್ನು ತೃಪ್ತಿಪಡಿಸಲು ಆಚರಣೆಗಳು ಹುಟ್ಟಿಕೊಂಡವು. ಅದರಲ್ಲಿ ಬಲಿಯು ಪ್ರಧಾನವಾದ ಅಂಶವಾಗಿದೆ. ಬಲಿಯನ್ನು ಕೊಡುವ ಮುಖಾಂತರ ತಾನು ಕೊಂದ ಪ್ರಾಣಿಗಳು ತಿರುಗಿ ಬೀಳದಂತೆ ಮಾಡುವುದು ಈ ಆಚರಣೆಯ ಹಿಂದಿರುವ ಉದ್ದೇಶವಾಗಿರಬೇಕು. ಅಂತೇಯೇ ನ್ಯೂಮನ್ ಹೇಳುವಂತೆ:

> Because the unity of life is the central phenomenon of the situation of psychic origination, every disturbance of this unity - the felling of a tree, the killing or eating of an animal, and so on- must be compensated by a ritual offering, a sacrifice. For early man all growth and development depend on man's sacrifice and ritual activity, precisely because man's living bond with the world and the human group is projected upon nature as a whole.[೨೮]

ಬಲಿಯ ಅರ್ಪಣೆಯೆಂದರೆ ಜೀವನದ ನಿರಂತರತೆಯನ್ನು ನಿಯತವಾಗಿ ಕಾಪಾಡುವುದೇ ಆಗಿದೆ. ನಿಯತತೆಯನ್ನು ಹೊಂದಲು ಮನುಷ್ಯನ ಅಥವಾ ಪ್ರಾಣಿಗಳ ರಕ್ತವನ್ನು ಅರ್ಪಿಸಬೇಕಾಗುತ್ತಿತ್ತು. ನಾವು ಹಿಂದೆ ನೋಡಿದಂತೆ ರಕ್ತವು ಸಮೃದ್ಧಿ ಹಾಗೂ ಜೀವದ ಹುಟ್ಟುವಿಕೆಯಾಗಿದೆ. ಆದ ಕಾರಣದಿಂದಲೇ ಪ್ರಾಚೀನ ಪರಂಪರೆಯ ಶವಗಳ ಗೋರಿಯಲ್ಲಿ ರಕ್ತವನ್ನು ಹೋಲುವ ಕೆಂಪಾದ ಬಣ್ಣವನ್ನು ಸಿಂಪಡಿಸಲಾಗಿರುವದು ಕಂಡುಬರುತ್ತದೆ.

ಕೃಷಿಯ ಆರಂಭದಿಂದ ಬಲಿಯಂತಹ ಆಚರಣೆಗಳು ಆರಂಭವಾದವು. ಪೂರ್ವ ಶಿಲಾಯುಗದ ಮಾತೃದೇವತೆಗಳು ನೂತನ ಶಿಲಾಯುಗದಲ್ಲಿಯೂ (ಕ್ರಿ. ಪೂ. ಸುಮಾರು ೧೫೦೦೦ ದಿಂದ ೫೦೦೦) ಮುಂದುವರೆಯುವ ರೂಪಗಳಾಗಿ ಗೋಚರಿಸುತ್ತಾರೆ. ಅಲ್ಲದೆ ಚಂದ್ರನು ಪ್ರಮುಖದೇವತೆಯಾಗಿ ಈ ಕಾಲಘಟ್ಟದಲ್ಲಿಯೂ ಸಹ ಪ್ರಮುಖದೇವತೆಯಾಗಿ ಮುಂದುವರೆಯುತ್ತಾನೆ. ಚಂದ್ರನು ಹುಟ್ಟು, ಬೆಳವಣಿಗೆ, ಕ್ಷೀಣಿಸುವಿಕೆ, ಸಾವು ಹಾಗೂ ಮರುಹುಟ್ಟುವಿಕೆಯ ಸಂಕೇತವಾಗಿ ಗೋಚರಿಸುತ್ತಾನೆ. ಅಲ್ಲದೆ ಮನುಷ್ಯನ ಪರಿಸರದ ಕೆಲವು ಪ್ರಾಣಿಗಳು, ಪಕ್ಷಿಗಳುದೇವತೆಯ ರೂಪತಾಳುವುದು ಈ ಹಂತದಲ್ಲಿಯೇ. ಪಕ್ಷಿಗಳಿಗೆ

ಮನುಷ್ಯನ ದೇಹವನ್ನು ಕೂಡಿಸುವುದು. ಹಾವು ಕೂಡ ಈ ಹಂತದಲ್ಲಿ ನೀರಿನ ಮತ್ತು ಮಳೆಯ ರೂಪವಾಗಿ ಗೋಚರಿಸುವುದನ್ನು ಕಾಣಬಹುದು. ಅಲ್ಲದೆ ದೊಡ್ಡ ಪ್ರಾಣಿಗಳಾದ ಎತ್ತು, ಹಸು, ಸಿಂಹ, ಕರಡಿ ಹಾಗೂ ಸಣ್ಣ ಪ್ರಾಣಿಗಳಾದ ಕುರಿ, ನಾಯಿ, ಹಂದಿ, ಮತ್ತು ಮುಂಗುಲಿಯ ರೀತಿಯ ಪ್ರಾಣಿ, ಹಲ್ಲಿ, ಕಪ್ಪೆ, ಸಹಸ್ರಪದಿ ಮುಂತಾದ ಪ್ರಾಣಿಗಳು ಆರಾಧನೆಯ ಪ್ರಪಂಚವನ್ನು ಪ್ರವೇಶಿಸಿದ್ದನ್ನು ಕಾಣಬಹುದು. ಈ ಕಾಲದ ಪ್ರಾಚೀನ ಶಿಲಾಯುಗದಲ್ಲಿ ಕಂಡುಬಂದ ಸ್ತ್ರೀ ದೇವತೆಗಳು ಇಲ್ಲಿಯೂ ಸಹ ತಮ್ಮ ರೂಪವನ್ನು ಅದೇ ರೀತಿ ಉಳಿಸಿಕೊಂಡಿದ್ದರೂ ಸಹ ಕೆಲವು ಹೊಸ ಅಂಶಗಳನ್ನು ಸ್ವೀಕರಿಸುವುದನ್ನು ಕಾಣಬಹುದು. ಅಲ್ಲದೇ ಈ ಕಾಲಕ್ಕೆ ಮಡಿಕೆಯ ಬಳಕೆಯು ವ್ಯಾಪಕವಾಗಿ ಬಳಕೆಯಾಗುತ್ತಿತ್ತು. ನೂರಾರು ಮಣ್ಣಿನಲ್ಲಿ, ದಂತದಲ್ಲಿ ಹಾಗೂ ಕಲ್ಲಿನಲ್ಲಿ ಮಾಡಿದ ವಿಗ್ರಹಗಳು ಈ ಕಾಲದಲ್ಲಿ ದೊರಕುತ್ತವೆ. ಮಣ್ಣು ಅವರ ಆರ್ಥಿಕ ಜೀವನದ ಹಾಗೂ ಧಾರ್ಮಿಕ ಜೀವನದ ಅಂಗವಾಗಿ ಕಂಡುಬರುತ್ತದೆ.

> the attitude is typical of the conventional Mother Goddess figurines found in connection with so many Near Easteren countries of later dates... they are strongly suggestive of a Mother Goddess or fertility cult, very natural for a communtiy closely dependent the productivity of the soil for their existence.[೨೯]

ನವಶಿಲಾಯುಗದ ಸ್ತ್ರೀ ವಿಗ್ರಹಗಳು ಹಾಗೂ ಪ್ರಾಣಿ ವಿಗ್ರಹಗಳು ಕುತೂಹಲಕಾರಿಯಾದವು. ಇಂದಿನ ಟರ್ಕಿಯ ಕೊನ್ಯಯ ಬಯಲು ಪ್ರದೇಶದ ಕೇಟಲ್ ಹೂಯುಕ್‌ನಲ್ಲಿ (Catal Huyuk, Kony, Southern Anatolia, Trkeyಯನ್ನು ಹಿಂದೆ ಇದನ್ನು ಅನತೋಲಿಯಾ ಎಂದು ಕರೆಯಲಾಗುತ್ತಿತ್ತು) ಸುಮಾರು ಕ್ರಿ.ಪೂ. ೭೦೦೦ ದಿಂದ ೫೦೦೦ ವರ್ಷಗಳ ಪೂರ್ವದ ನವಶಿಲಾಯುಗದ ಕ್ಷೇತ್ರವನ್ನು ಕಂಡುಹಿಡಿಯಲಾಯಿತು. ಇದನ್ನು ಜೇಮ್ಸ್ ಮೆಲ್ಲಾರ್ಟ್ ಎಂಬವರು ೧೯೫೭ರಲ್ಲಿ ಕಂಡುಹಿಡಿದರು. ಇದರ ಬಗೆಗೆ ಬರೆಯುತ್ತಾ; shining like a supernova among the rather dim galaxy of contemporary peasant cultures.[೩೦] ಅತ್ಯಂತ ಮುಂದುವರಿದ ಜನಾಂಗವಾಗಿದ್ದ ಇದು ಕೃಷಿಯಲ್ಲಿ, ಮನೆ ಕಟ್ಟುವುದರಲ್ಲಿ, ಬಟ್ಟೆ ನೇಯುವುದರಲ್ಲಿ, ಶಿಲ್ಪಕಲೆಯಲ್ಲಿ ಪ್ರಗತಿಯನ್ನು ಸಾಧಿಸಿದ್ದರೆನ್ನಲಾಗಿದೆ. ನಾಗರಿ ಕತೆಗಳು ಹುಟ್ಟುವ ಮುಂಚೆಯೇ ಇಲ್ಲಿ ಲೋಹಗಳ ಬಳಕೆಯನ್ನು ಕಂಡುಕೊಂಡಿದ್ದರು. ಇಲ್ಲಿ ಸುಮಾರು ನಲವತ್ತಕ್ಕಿಂತ ಹೆಚ್ಚಿನ ದೇವಾಲಯಗಳು ಎಂದು ಹೇಳಬಹುದಾದ ನಿರ್ಮಾಣಗಳು ದೊರಕಿವೆ. ಇಲ್ಲಿ ಎತ್ತಿನ ಕೊಂಬಿನ ಅಲಂಕಾರ ಹೊಂದಿರುವ ದೈತ್ಯಾಕಾರದ ಮುಖ, ದೇಹವನ್ನು ಹೊಂದಿರುವ ದೇವತೆಯು ಇಲ್ಲಿ ಕಂಡುಬರುತ್ತವೆ. ಇಲ್ಲಿಯ ಪ್ರಧಾನ ದೈವ ಎಂದರೆ ಮಾತೃದೇವತೆ. ಈ ದೈವವು ಮೂರು ರೀತಿಯಲ್ಲಿರಬಹುದೆಂದು ಊಹಿಸಲಾಗಿದೆ. ಯುವತಿಯ ರೀತಿಯಲ್ಲಿರುವ

ಹೆಣ್ಣು, ಮಗುವಿಗೆ ಜನ್ಮಕೊಡುತ್ತಿರುವ ಹೆಣ್ಣು, ಹಾಗೂ ವೃದ್ಧತೆಯನ್ನು ಹೊಂದಿದ ಹೆಣ್ಣು, ಈ ಮೂರು ವಿಧದಲ್ಲಿ ಮಾತೃದೇವತೆಯನ್ನು ನೋಡಲಾಗಿದೆ. ಅಲ್ಲದೆ ಗಂಡನ್ನು ಹೋರಿ ಅಥವಾ ಎತ್ತಿನ ರೂಪದಲ್ಲಿ ಚಿತ್ರಿಸಲಾಗಿದೆ. ಪುರುಷನ ರೂಪವೇ ಇಲ್ಲಿ ಹೋರಿಯಾಗಿರುವುದು ವಿಶೇಷ. ಹಿಂದಿನ ಯುಗಗಳಲ್ಲಿ ಕಂಡುಬರುವ ದೊಡ್ಡಗಾತ್ರದ ಮೊಲೆ, ಸೊಂಟದ ಭಾಗಗಳು ಇಲ್ಲಿ ಕಂಡುಬರುವುದಿಲ್ಲ. ಬದಲಾಗಿ ರೂಪದಲ್ಲಿ ಬದಲಾವಣೆ ಹೊಂದಿರುವುದನ್ನು ಗಮನಿಸಬಹುದು. ಎರಡು ತಲೆ, ಎರಡು ಕೈಗಳು, ಹಾಗೂ ನಾಲ್ಕು ಮೊಲೆಗಳನ್ನು ಹೊಂದಿರುವ ವಿಗ್ರಹಗಳು ಕಂಡುಬರುತ್ತವೆ. ಇವುಗಳನ್ನು ತಾಯಿ ಮತ್ತು ಅವಳ ಇನ್ನೊಂದು ರೂಪ ಕನ್ಯೆಯದ್ದೆ ಆಗಿರಬೇಕು. ಇದು ಹೆಣ್ಣಿನ ಎರಡು ಅವಸ್ಥಾಂತರಗಳನ್ನು ಸೂಚಿಸುತ್ತದೆ. ಹೋರಿಗಳಿಗೆ ಜನ್ಮ ಕೊಡುತ್ತಿರುವ ವಿಗ್ರಹಗಳು ಇಲ್ಲಿ ಕಂಡುಬರುತ್ತವೆ. ಚಿರತೆಯನ್ನು ದೇವತೆಯೋಪಾದಿಯಲ್ಲಿ ಆರಾಧಿಸುತ್ತಿದ್ದನ್ನು ಒಂದು ಗುಹೆಯಲ್ಲಿ ಚಿತ್ರಿಸಲಾಗಿದೆ.

ಕೇಟಲ್ ಹೂಯುಕ್‌ನ ವಿಗ್ರಹಗಳು ಗರ್ಭಧರಿಸುವಿಕೆ, ಜನನ, ಆಚರಣೆ ಮತ್ತು ಪ್ರಾಣಿಗಳ ಮೇಲೆ ಹತೋಟಿ ಇವೇ ಮೊದಲಾದ ವಿವಿಧ ಅಂಶಗಳ ಜೊತೆಗೆ ಸಂಬಂಧವನ್ನು ಹೊಂದಿರುವುದೇ ಆಗಿದೆ. ಕೃಷಿಯ ಆಚರಣೆಗಳು ಪ್ರಧಾನವಾಗಿ ಕಂಡುಬರುವುದು ಇಲ್ಲಿಯ ವಿಶೇಷ. ಮೆಲ್ಲಾರ್ಟ್ ಅವರು ಹೇಳುವಂತೆ:

> agriculture finally triumped over the age-old occupation of hunting and with it the power of woman increased: this much is clear from the almost total disappearance of male statues in the cult.[೩೧]

ನವ ಶಿಲಾಯುಗದಲ್ಲಿ ದೊರಕುವ ಈ ವಿಗ್ರಹಗಳು ಪ್ರಮುಖವಾಗಿ ಹಿಂದಿನ ಶಿಲಾಯುಗದಲ್ಲಿ ಕಂಡುಬಂದ ವಿಗ್ರಹಗಳಿಂತ ಭಿನ್ನವಾಗಿರುವುದು ಹಾಗೂ ಹೆಚ್ಚು ಸೂಕ್ಷ್ಮವಾಗಿರುವುದು ಮೇಲ್ನೋಟಕ್ಕೆ ಕಾಣುವ ವಿಷಯ. ಈ ಎರಡು ಕಾಲದಲ್ಲಿ ಅನಾವರಣಗೊಳ್ಳುವ ವಿಷಯ ಒಂದೇ ಆದರೂ ಸಹ ನೂತನ ಶಿಲಾಯುಗದಲ್ಲಿ ಪ್ರಾಣಿ ಪ್ರಪಂಚದ ಜೊತೆಯಲ್ಲಿಯೆ ಸಸ್ಯ ಪ್ರಪಂಚವು ಸೇರಿಕೊಳ್ಳುವುದು ಇಲ್ಲಿಯ ವಿಶೇಷ. ಎರಡು ಸಂಸ್ಕೃತಿಗಳ ಮೂಲ ಆಶಯ ಫಲವಂತಿಕೆಯೆ ಎಂಬುದು ನಿಶ್ಚಿತವಾದದ್ದು. ಬೇಟೆಯ ಹಂತದಲ್ಲಿ ಹೆಣ್ಣಿಗೆ ಮಹತ್ವ ಇತ್ತೇ ಹೊರತು ಅದು ನಿಶ್ಚಿತವಾದ ಒಂದು ಆರಾಧನೆಯ ಸ್ವರೂಪ ಪಡೆದದ್ದು ನೂತನ ಶಿಲಾಯುಗದಲ್ಲಿಯೆ. ಅಲ್ಲದೆ ಕೃಷಿಯ ಆವಿಷ್ಕಾರದಿಂದ ಭೂಮಿಯಲ್ಲಿ ಬಿತ್ತುವ ಬೀಜ ಹಾಗೂ ಹೆಣ್ಣಿನಲ್ಲಿ ನೆಡುವ ವೀರ್ಯವು ಒಂದೆಬಗೆಯಾಗಿ ಕಾಣುತ್ತದೆ. ಈ ಕಾರಣದಿಂದಲೇ ತಾಯಿ ಹಾಗೂ ಭೂಮಿಯು ಸಮಾನವಾದ ಗುಣಗಳನ್ನು ಹೊಂದಿರುವ

ಕಾರಣದಿಂದ ಹಲವಾರು ದೇಶಗಳಲ್ಲಿ ಪ್ರದೇಶಗಳಲ್ಲಿ ಮಾತೃದೇವತೆಯ ಆರಾಧನೆಯ ಮೂರ್ತಿಗಳು ಕಂಡುಬರುವುದು.

೨.೧.೩. ಕಂಚಿನ ಯುಗ

ಮಾತೃದೇವತೆಯ ವಿಕಾಸ ಸಂಪೂರ್ಣವಾಗಿದ್ದು ಈ ಕಾಲದಲ್ಲಿಯೇ ಆದರೂ ಅದರ ಅವನತಿಯತ್ತ ಸಾಗಿದ್ದು ಈ ಕಾಲದಲ್ಲಿಯೇ. ಈ ಕಾಲವು ನಾಗರೀಕತೆಯತ್ತ ದಾಪು ಕಾಲನ್ನಿಡುತ್ತಿರುವ ಸಂಧಿಕಾಲವೂ ಹೌದು. ಬೇಟೆಯ ಹಂತದಿಂದ ಕೃಷಿಯನ್ನಾಧರಿಸಿ ಜೀವನ ನಿರ್ವಹಿಸುತ್ತಾ ಅಲೆಮಾರಿ ಜೀವನ ನಡೆಸುತ್ತಿದ್ದ ಮಾನವ, ಒಂದು ಸಂಘಟಿತನಾಗಿ ಸಮುದಾಯದ ಮೂಲದಲ್ಲಿ ನೆಲೆನಿಂತ. ಹೀಗೆ ನೆಲೆನಿಂತು ಕೃಷಿಯನ್ನು ಪ್ರಾರಂಭಿಸಲಾಯಿತು. ಕೃಷಿ ಮೊದಲು ಸಣ್ಣ ಪ್ರಮಾಣದಲ್ಲಿ ಹಾಗೂ ಕೈಯಿಂದಲೇ ನಡೆಯುತ್ತಿತ್ತು. ಆದರೆ ಯಾವಾಗ ಅದು ಬೃಹತ್ ಪ್ರಮಾಣದಲ್ಲಿ ಭೂಮಿಯ ಬಳಕೆ ಹಾಗೂ ಪ್ರಾಣಿಗಳ ಬಳಕೆಯಿಂದ ಕೃಷಿಯ ವ್ಯಾಪ್ತಿ ಹಿಗ್ಗಿತು. ಅಲ್ಲದೆ ಕಬ್ಬಿಣದ ಬಳಕೆಯು ಈ ಕಾಲಕ್ಕಾಗಲೇ ಬಳಕೆ ಬಂದಿದ್ದರಿಂದ ಸ್ತ್ರೀಯು ಕೃಷಿಯನ್ನು ಮಾಡಲಾರದ ಸ್ಥಿತಿಯನ್ನು ತಲುಪಿ, ಅದು ಪುರುಷನ ಕೆಲಸವಾಗಿ ಪರಿವರ್ತಿತವಾಗಿರಬೇಕು. ಭೂಮಿಯ ಮೇಲಿನ ಒಡೆತನದ ಸ್ವಾಮ್ಯತೆಯ ಅರಿವು ಹಿಂದೆ ಗಂಡಿಗೆ ಇರಲಿಲ್ಲ. ಅಲ್ಲದೆ ಸಮುದಾಯ ಕೇಂದ್ರಿತವಾದ ಸಾಮಾಜಿಕ ವ್ಯವಸ್ಥೆಯು ಗ್ರಾಮಗಳಾಗಿ, ಗ್ರಾಮಗಳು ನಗರಗಳಾಗಿ ಪರಿವರ್ತಿತವಾಗುವುದು ಆ ಮೂಲಕ ಹೋರಾಟದ ಜೀವನ ಪ್ರಾರಂಭವಾಯಿತು. ಆಯುಧಗಳ ಆವಿಷ್ಕಾರವು ವೀರರನ್ನು ಹುಟ್ಟುಹಾಕಲು ಕಾರಣವಾಯಿತು.

ಸಮಾಜದಲ್ಲಿ ಸ್ತ್ರೀಪ್ರಾಧಾನ್ಯತೆ ಕಡಿಮೆಯಾಗಿ ಪುರುಷ ಪ್ರಾಧಾನ್ಯತೆ ಹೆಚ್ಚಾದಂತೆ ಮಾತೃದೇವತೆಯ ಸ್ಥಾನ ಕೂಡ ಕುಸಿಯಲಾರಂಭಿಸಿತು. ಈ ಕಾಲದ ಮತ್ತೊಂದು ಪ್ರಮುಖ ಬದಲಾವಣೆಯೆಂದರೆ ಭೂಮಿ ಹಾಗೂ ಆಕಾಶಗಳನ್ನು ಬೇರೆ ಎಂದು ತಿಳಿಯಲಾಯಿತು. ಈ ಮೂಲಕ ಸಮಾಜದ ಬೆಳವಣಿಯಾಗಿರುವುದು ಕಂಡುಬರುತ್ತದೆ. ಅಲ್ಲದೆ ಸಮಾಜವು ಮಕ್ಕಳನ್ನು ಗುರುತಿಸುವಾಗ ಹೆಣ್ಣಿನ ಕಡೆಯಿಂದಲೇ ಗುರುತಿಸಲಾಗುತ್ತಿತ್ತು. ಈ ಕಾರಣಕ್ಕಾಗಿ ಸಮುದಾಯದಿಂದ ಆಸ್ತಿಯು ತಾಯಿಯ ಹೆಸರಿನಲ್ಲಿಯೇ ಮುಂದಿನ ತಲೆಮಾರಾದ ಹೆಣ್ಣಿಗೆ ವರ್ಗಾಯಿಸಲ್ಪಡುತ್ತಿತ್ತು. ಕೃಷಿ ಮತ್ತು ಲೈಂಗಿಕತೆ ಎರಡು ಸಮಾನಾಂತರವಾದ ಗುಣಗಳನ್ನು ಹೊಂದಿರುವುದು ಈ ಕಾಲಕ್ಕೆ ಕಂಡುಬರುತ್ತದೆಯಾದರೂ,ಅದು ಹೆಚ್ಚು ವ್ಯಾಪಕವಾಗಿ ಕಂಡುಬರುವುದು ಈ ಹಂತದಲ್ಲಿ. ಯಾಕೆಂದರೆ, ಕೃಷಿಯು ನಡೆಯುವುದು ಭೂಮಿಯ ಒಡಲಿನಿಂದ, ಮಗುವು ಜನಿಸುವುದು ತಾಯಿಯ ಗರ್ಭದಿಂದ. ಈ ಕಾರಣದಿಂದ ಭೂಮಿ ಹಾಗೂ ಹೆಣ್ಣಿನ ಸಂಬಂಧವು ಹೆಚ್ಚು ಹತ್ತಿರವಾಯಿತು. ಪದ್ಧತಿಗಳು ಮತ್ತು ಸಾಂಸತಿಕ



ಚಿತ್ರ ೪


ಲಕ್ಷಣಗಳು ಹೆಣ್ಣಿನ ಮೂಲಕವೇ ಸಂಹನಗೊಳ್ಳುತ್ತಿದ್ದವು. ಹೆಣ್ಣು ಒಂದು ಜನಾಂಗದ ಸಂಕೇತವಷ್ಟೇ ಅಲ್ಲ ಜೀವೋತ್ಪತ್ತಿಯ ಮೂಲಶಕ್ತಿಯಾಗಿದ್ದಳು[೨೨] ಎನ್ನಲಾಗಿದೆ. ಆ ಕಾರಣದಿಂದಲೇ ಕೃಷಿಯ ಅನೇಕ ಆಚರಣೆಗಳಲ್ಲಿ ಹೆಣ್ಣು ಪ್ರಧಾನವಾಗಿ ಕಂಡುಬರುವುದು. ಈ ಆಚರಣೆಗಳು ಈಗಲೂ ಕಂಡುಬರುವುದು ಹೆಣ್ಣಿನ ಸ್ಥಾನವನ್ನು ತಿಳಿಸುತ್ತವೆ.

೨.೨.೧. ಸಿಂಧೂ ನಾಗರಿಕತೆ

ಕ್ರಿ. ಪೂ. ಸುಮಾರು ೪೦೦೦ ೨೫೦೦ ವರ್ಷಗಳ ಹಿಂದಿನದೆಂದು ಹೇಳಲಾದ ಈ ಸಂಸ್ಕೃತಿಯು ಭಾರತದ ಸಂಸ್ಕೃತಿಯ ಉಗಮ ಸ್ಥಾನವೂ ಆಗಿದೆ. ಇದು ಸಿಂಧು ನದಿಯ ದಡದ ಮೇಲೆ ಬೆಳೆದುಬಂದುದು. ಜಗತ್ತಿನ ಹಲವಾರು ನಾಗರೀಕತೆಗಳಂತೆ ಇದು ಅತ್ಯಂತ ಪ್ರಸಿದ್ಧವಾದ ಸಂಸ್ಕೃತಿಯಾಗಿದೆ. ತನ್ನದೇ ಆದ ಕಾಣಿಕೆಯನ್ನು ನಮಗೆ ಬಿಟ್ಟು ಹೋಗಿದೆ. ಸಿಂಧೂ ನದಿಯ ಮೋಹೋಂಜೋದಾರದಿಂದ ಪಂಜಾಬಿನ ರೊಪರ್, ಗುಜರಾತ್‌ನ ಲೋತಾಲ್, ಹಾಗೂ ವಿಂಧ್ಯಾಪರ್ವತದ ನರ್ಮಾದಾ ನದಿಯ ತೀರದವರೆಗೂ ಹರಡಿತ್ತು.

ಈ ಸಂಸ್ಕೃತಿಯನ್ನು ಪುನರ್ ನಿರ್ಮಿಸಲು ಇಲ್ಲಿ ದೊರಕುವ ಪ್ರಾಚ್ಯಾವಶೇಷಗಳಾದ ಕಟ್ಟಡಗಳು, ಮುದ್ರೆಗಳು, ಸುಟ್ಟ ಮಣ್ಣಿನ ಗೊಂಬೆಗಳು, ಮುಂತಾದವು ಸಿಂಧು ನಾಗರಿಕತೆಯ ಇತಿಹಾಸವನ್ನು ಪುನರ್ನಿರ್ಮಿಸಲು ಸಹಾಯಕವಾಗಿವೆ. ಅಂದಿನ ಸಾಮಾಜಿಕ ಪರಿಸರ, ಧರ್ಮ, ಆರ್ಥಿಕ ಪರಿಸ್ಥಿತಿ ಮುಂತಾದವುಗಳನ್ನು ಅಧ್ಯಯನ ಮಾಡಲು ಇವು ಆಕರಗಳಾಗಿವೆ. ಇಲ್ಲಿ ದೊರಕಿರುವ ಲಪಿಯ ಬಗೆಗೆ ಇನ್ನೂ ನಿರ್ಧಿಷ್ಮವಾಗಿ ಏನನ್ನೂ ಹೇಳಲು ಸಾಧ್ಯವಾಗಿಲ್ಲ. ಒಂದು ವೇಳೆ ಈ ಲಿಪಿಯನ್ನು ಓದಲು ಸಾಧ್ಯವಾಗಿದ್ದರೆ ಗತಕಾಲದ ಅಂದಿನ ಪರಿಸ್ಥಿತಿಯನ್ನು ಅರಿಯಲು ತುಂಬಾ ಸುಲಭವಾಗುತ್ತಿತ್ತು.

ಸಿಂಧೂ ಕಣಿವೆಯ ಅಥವಾ ಹರಪ್ಪ ಸಂಸ್ಕೃತಿಯು ಪ್ರಧಾನವಾಗಿ ಕಂಡು ಬರುವುದು ಗ್ರಾಮ ಕೇಂದ್ರಿತವಾದ ನಾಗರಿಕತೆಯಾಗಿದೆ. ಈಗಾಗಲೇ ಅಲೆಮಾರಿತನವನ್ನು ಬಿಟ್ಟುಕೊಟ್ಟು, ಗುಂಪಾಗಿ, ಒಟ್ಟಾಗಿ ಬದುಕುವ ಸಮುದಾಯ ಸಂಸ್ಕೃತಿಯನ್ನು ಹೊಂದಿದ್ದು, ಮೊದಲು ಗ್ರಾಮ ಕೇಂದ್ರಿತವಾದ ನಾಗರೀಕತೆಯ ವ್ಯಾಪಾರದತ್ತ ಗಮನ ಹರಿಸಿದಾಗ ಪಟ್ಟಣ ಸಂಸ್ಕೃತಿಯಾಗಿ ಮಾರ್ಪಾಡಾಗಿರಲು ಸಾಧ್ಯ. ಪಟ್ಟಣ ಸಂಸ್ಕೃತಿಗಳು ಹುಟ್ಟುವುದೇ ವ್ಯಾಪಾರದ ಪ್ರಾಮುಖ್ಯತೆ ಹೆಚ್ಚಿದಾಗ. ಕೃಷಿಯಲ್ಲಿ ಮಹಿಳೆಯ ಪ್ರಾಧಾನ್ಯತೆ ಕಡಿಮೆಯಾಗಲು ಲೋಹಗಳ ಆವಿಷ್ಕಾರವು ಕಾರಣವಾಯಿತು. ಇದರಿಂದ ಮಹಿಳೆಯ ಸ್ಥಾನವು ಕಡಿಮೆಯಾಗಿ ಪುರುಷ ಕೇಂದ್ರಿತವಾದ ಸಮಾಜಕ್ಕೆ ದಾರಿಮಾಡಿಕೊಟ್ಟಿತು. ಹೀಗೆ ಸಮಾಜವು ಆರ್ಥಿಕವಾಗಿ ಸಬಲೀಕರಣವಾದಂತೆ ಮನುಷ್ಯನ ಆಶೆ ಆಕಾಂಕ್ಷೆಗಳಿಗೆ ರೆಕ್ಕೆಪುಕ್ಕಗಳು ಮೂಡಿದವು. ಅಂತೆಯೇ ಯುದ್ಧ, ಹೋರಾಟದ ಜೀವನ ಪ್ರಾರಂಭವಾಯಿತು. ಭೂಮಿಯ



ಚಿತ್ರ ೫



ಚಿತ್ರ ೬





ಒಡೆತನದ ಬಗೆಗೆ ಹೆಚ್ಚಿನ ಆಸಕ್ತಿ ಉಂಟಾಗಿ ಪುರುಷ ಸಬಲನಾಗತೊಡಗಿದ. ಬಂಡವಾಳದ ಕ್ರೋಢೀಕರಣದಿಂದ ವ್ಯಾಪಾರದ ಕಡೆ ಮುಖಮಾಡಿದ. ಈ ಹಿಂದೆ ಇದ್ದ ವಸ್ತು ವಿನಿಮಯ ಪದ್ಧತಿ ಮರೆಯಾಗಿ ಹಣದ ವ್ಯವಸ್ಥೆ ರೂಢಿಗೆ ಬಂದಿರಬೇಕು. ವ್ಯಾಪಾರ ಮಾಡುವುದಕ್ಕೆ ಪ್ರಾರಂಭ ಮಾಡಿದಾಗಲೇ ಮನುಷ್ಯನ ಮೂಲ ಆಶಯ ಎನ್ನಬಹುದಾದ ಮಾನವೀಯತೆಯನ್ನು ಮರೆತ. ಗಂಡಿನ ದೈಹಿಕ ಬಲದ ಜೊತೆಗೆ ಆರ್ಥಿಕ ಪರಿಸ್ಥಿತಿಯು ಸೇರಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ಇದರಿಂದ ಹೆಣ್ಣಿನ ಮೇಲಿನ ಅಧಿಕಾರವನ್ನು ಪಡೆಯಲು ಸಾಧ್ಯವಾಯಿತು.

ಈ ಹಿನ್ನೆಲೆಯಲ್ಲಿ ಅಂದಿನ ಸಮಾಜವನ್ನು ಗಮನಿಸಿದರೆ ಪುರುಷ ಪ್ರಧಾನ ವ್ಯವಸ್ಥೆಗೆ ಹೋಗುತ್ತಿರುವ ಸಂಕ್ರಮಣಾವಸ್ಥೆಯ ಸಮಾಜವಾಗಿರಬೇಕೆಂದು ತೋರುತ್ತದೆ. ಇಲ್ಲಿ ಕಂಡುಬರುವ ಬಹುತೇಕ ಮುದ್ರೆಗಳಲ್ಲಿ ಗಂಡು ಎದ್ದು ಕಾಣುತ್ತಾನೆ. ಸಿಂಧೂ ಕಣಿವೆಯ ಪ್ರತಿಮೆಗಳಲ್ಲಿ ಪ್ರಧಾನವೆನಿಸಿರುವುದು ಮಹಾನ್ ದೇವತೆಯನ್ನು ಪ್ರತಿನಿಧಿಸುವಂತಹವು. ಅವು ನಯವಿಲ್ಲದ ಮತ್ತು ನಿಂತ ಭಂಗಿಯಲ್ಲಿರುವ ಸ್ತ್ರೀ ವಿಗ್ರಹಗಳಾಗಿವೆ. ಉನ್ನತ ಸ್ತನಗಳ ಮೇಲೆ ನೇತು ಬಿದ್ದಿರುವ ಸರಗಳಿಂದ ಅಲಂಕೃತವಾಗಿವೆ. ಸಾಮಾನ್ಯವಾಗಿ ತುಂಡು ಬಟ್ಟೆಯನ್ನು ಹಾಗೂ ಡಾಬನ್ನೂ ಧರಿಸಿದಂತವಾಗಿವೆ. ಪ್ರತಿ ಪಕ್ಕದಲ್ಲೂ ಬಟ್ಟಲಿನಂತೆ ಮುಂದೆ ಚಾಚಿ ಕೊಂಡಿರುವ ಬೀಸಣಿಕೆಯಾಕಾರದ ತಲೆಯುಡಿಗೆ, ಸಿಂಧೂ ಕಣಿವೆಯಲ್ಲಿಯ ಮಾತೃದೇವತೆಯ ಪ್ರತಿಮೆಗಳ ವಿಶಿಷ್ಟ ಲಕ್ಷಣವೆನಿಸಿವೆ. ಬಟ್ಟಲಿನಂತೆ ಮುಂದೆ ಚಾಚಿಕೊಂಡಿರುವಂತೆ ಮಾಡಿರುವುದು ಧೂಪವನ್ನೋ ಎಣ್ಣೆಯ ದೀಪವನ್ನೋ ಉರಿಸುವ ಉದ್ದೇಶದಿಂದ ಬಾಯಿಯನ್ನು ಸೀಳುಗಂಡಿಯಿಂದ ಸೂಚಿಸಲಾಗಿದೆ. ಆದರೆ, ಅಷ್ಟೇನೂ ನಯ ನಾಜೂಕಿಲ್ಲದ ಕೆಲಸವಾಗಿದೆ. ಕಾಲಿಬಂಜನ್ ಹಾಗೂ ಲೋಥಲಗಳಲ್ಲಿಯ ಸ್ತ್ರೀ ವಿಗ್ರಹಗಳು, ಹರಪ್ಪ ಮೋಹೊಂಜೋದಾರೋಗಳಲ್ಲಿಯ ಮಾತೃದೇವತೆಯ ವಿಶಿಷ್ಟ ವಿಗ್ರಹಗಳಿಂದ ಬಹಳಮಟ್ಟಿಗೆ ಭಿನ್ನವಾಗಿವೆ.[೩೩]

ಸಿಂಧೂ ಕಣಿವೆಯಲ್ಲಿಯ ಧಾರ್ಮಿಕ ಚರಿತ್ರೆಯನ್ನು ಪುನಾರಚನೆಗೆ ನಿರ್ಧಿಷ್ಟವೆಂದು ಹೇಳುವ ಯಾವುವೇ ಆಧಾರ ಇಲ್ಲಿಯವರೆಗೆ ದೊರತಿಲ್ಲ. ಅಥವಾ ದೇವಾಲಯವೆಂದು ಪರಿಗಣಿಸಿ ಹೇಳಬಹುದಾದ ಯಾವುದೇ ಕಟ್ಟಡಗಳು ದೊರಕಿಲ್ಲ. ಅಲ್ಲದೆ ಇಲ್ಲಿ ದೊರಕಿರುವ ಲಿಪಿಯ ಓದಿನ ಬಗೆಗೆ ಇನ್ನೂ ನಿರ್ಧಿಷ್ಟತೆ ಬಂದಿರದ ಕಾರಣ ಇದೇ ಸತ್ಯವೆಂದು ಹೇಳುವ ಯಾವುದೇ ದಾಖಲೆಗಳು ಸಿಕ್ಕಿಲ್ಲ. ಆದರೆ ಸಿಕ್ಕಿರುವ ಅಲ್ಪ ಮಾಹಿತಿಯಿಂದಲೇ ಹರಪ್ಪ ಸಂಸ್ಕೃತಿಯ ಧಾರ್ಮಿಕ ಚರಿತ್ರೆಯನ್ನು ಪುನಾರಚನೆ ಮಾಡಲು ಪ್ರಯತ್ನಿಸಲಾಗಿದೆ. ಇಲ್ಲಿನ ಜನರ ಧರ್ಮದ ಪುನಾರಚನೆಗೆ ನಾವು ಅವಲಂಬಿಸಬೇಕಾದುದೆಂದರೆ ಮುದ್ರೆ, ಮುದ್ರಿಕೆ, ಪುಟ್ಟಮೂರ್ತಿಗಳು, ಕಲ್ಲಿನ ಪ್ರತಿಮೆಗಳು, ಮುಂತಾದ ವಸ್ತುಗಳ ಸಾಕ್ಷ್ಯಮಾತ್ರವೇ.[೩೪]

ದೇವರ ಮಾತೃತ್ವ ಮತ್ತು ಪ್ರಕೃತಿಯ ದೇವತ್ವ ಪರಿಕಲ್ಪನೆಗಳು ಪ್ರಪಂಚದ ಪ್ರಾಚೀನ ಜನರಲ್ಲಿ ಸಾಕಷ್ಟು ಸಾಮಾನ್ಯವಾಗಿವೆ. ಹಾಗೂ ಭಾರತದಲ್ಲಿ ವ್ಯಾಪಕವಾಗಿ ಹರಡಿದವೂ, ಆಳವಾಗಿ ಬೇರೂರಿದವು ಆಗಿವೆ.ಪ್ರತಿಯೊಂದು

ಹಳ್ಳಿಯಲ್ಲಿಯೂ ಮಾತೃದೇವತೆಯು ಗ್ರಾಮದೇವತೆಯಾಗಿ ಪ್ರತಿನಿಧಿತವಾಗಿವೆ. ಹಾಗೂ ಮಾತಾ, ಅಂಬಾ, ಆಮ್ಮಾ, ಕಾಲೀ, ಕರಾಲೀ, ಮುಂತಾದ ವಿವಿಧ ಹೆಸರುಗಳಿಂದ ಕೆಲವೊಮ್ಮೆ ರೌದ್ರ ರೂಪಿಣಿಯಾಗಿಯೂ ಮತ್ತೆ ಕೆಲವೊಮ್ಮೆ ದುಷ್ಟಶಕ್ತಿಗಳನ್ನು ನಿರ್ನಾಮಮಾಡುವ,ಫಲಶಕ್ತಿ ನೀಡುವ ಈ ಮೊದಲಾದ ಕೆಲಸಗಳನ್ನು ಮಾಡುವ ದೇವತೆಯಾಗಿ ಕಂಡುಬರುತ್ತಾರೆ.

ಸಿಂಧೂ ನಾಗರೀಕತೆಯಲ್ಲಿ ಮಾತೃದೇವತಾ ಆರಾಧನೆಯು ಇತ್ತೇ ಎಂಬುದನ್ನು ಹಲವಾರು ವಿದ್ವಾಂಸರು ಚರ್ಚಿಸಿದ್ದಾರೆ. ಸಾಮಾಜಿಕ ಪರಿಸರದಲ್ಲಿ ಅಂದು ಕಂಡುಬರುವ ಸ್ತ್ರೀಯರ ಜವಾಬ್ದಾರಿಗಳೇನು? ಅದು ಮಾತೃಪ್ರಧಾನ ವ್ಯವಸ್ಥೆಯಾಗಿತ್ತೇ? ಎಂಬಂಥಹ ಹಲವಾರು ಪ್ರಶ್ನೆಗಳನ್ನು ಎತ್ತಿಕೊಂಡು ಚರ್ಚಿಸಿದ್ದಾರೆ. ಅಲ್ಲಿ ಕಂಡು ಬರುವ ಸ್ತ್ರೀ ವಿಗ್ರಹಗಳು ಬಹುತೇಕ ಗೊಂಬೆಗಳು ಬೆತ್ತಲೆಯಾಗಿವೆ. ಇದು ಎಲ್ಲಾ ಪ್ರಾಚೀನವಾದ ವಿಗ್ರಹಗಳಲ್ಲಿ ಕಂಡುಬರುವ ವಿಷಯವೇ ಆಗಿದೆ.

> Nudity is, definitely, a characteristic feature of Mother Goddess. The wide distribution of nude female figures definitely goes to suggest the wide geographical spread of the cult of the Mother Goddess.[೩೫]

ಪುರಾತತ್ವ ಅವಶೇಷಗಳಲ್ಲಿ ದೊರಕುವ ಮಾಹಿತಿಯು ಶಕ್ತಿ ಪರಂಪರೆಯು ಆರ್ಯಪೂರ್ವದ್ದೆಂದು, ಮತ್ತು ಆರ್ಯೇತರ ಪ್ರಭಾವದಿಂದ ಬಂದಿದ್ದೆಂದು ಪೃಥಕ್ಕರಿಸುತ್ತವೆ. ಶಿವ ಅಥವಾ ರುದ್ರ ಶಿವನ ಪರಂಪರೆಯಲ್ಲಿ ಶಕ್ತಿಯ ಪರಂಪರೆಯು ಅಡಗಿದೆ. ರುದ್ರ ವೈದಿಕ ಪರಂಪರೆಯಿಂದ ಬಂದಿದ್ದರೂ ಅವನು ಆರ್ಯೇತರ ದೈವದೊಂದಿಗೆ ಗುರುತಿಸಲಾಗಿದೆ. ಶಕ್ತಿ ಅಥವಾ ದೇವಿಯರ ಪರಂಪರೆಯು ಇಲ್ಲಿಯ ಮೂಲ ಜನಾಂಗದೊಂದಿಗೆಯೆ ಗುರುತಿಸಲಾಗಿದೆ. ಕಾಡು ಮತ್ತು ಬೆಟ್ಟಗಳಲ್ಲಿ ವಾಸಿಸುತ್ತಿದ್ದ ಮೂಲ ಜನಾಂಗದವರು ಆಚರಿಸುವ ಪ್ರಾಣಿಬಲಿ, ಮನುಷ್ಯಬಲಿಯಂತಹ ಆಚರಣೆಗಳಿಂದ ಹುಟ್ಟಿದೆ ಎನ್ನುತ್ತಾರೆ.[೩೬] ಅಲ್ಲದೆ ಶಕ್ತಿಯ ಆರಾಧನೆಯು ಗೌಡ ದ್ರಾವಿಡ ಪರಂಪರೆಯ ಮೂಲದಿಂದ ಬೆಳೆದು ಬಂದಿರಬೇಕು. ಇವರು ಭಾರತದ ಮೂಲ ನಿವಾಸಿಗಳಾಗಿದ್ದು ಇವರಿಂದಲೇ ಈ ಸಂಪ್ರದಾಯ ಬೆಳೆಯಿತೆಂದು ನಂಬಲಾಗಿದೆ.

> The worship of Devi or Sakti, "the principle of Female Energy", was wholly a contribution of the original non-Aryan inhabitants of the land, ಅವರ ಈ ಶಕ್ತಿ ಆರಾಧನೆಯ ರೂಪವನ್ನು ಗೌಡ ದ್ರಾವಿಡವೆಂದು ಅಲ್ಲದೆ ಗರುತಿಸುತ್ತಾರೆ. ಅಲ್ಲದೆ ಮುಂದುವರೆದು, Goddesses occupied an insignifiant position in Vedic myths and

rituals whereas they are still very popular with the Dravidians of the South India.[೩೭]

ಶಕ್ತಿದೇವತೆಯರ ಹೆಸರುಗಳು ಮೂಲ ಜನಾಂಗದ ದ್ರಾವಿಡರ ಹೆಸರುಗಳೇ ಅಗಿವೆ. ಅಮ್ಮ ಎನ್ನುವ ಶಬ್ದ ಅಂಬಾ, ಅಂಬಿಕಾ ಶಬ್ದಗಳ ಮೂಲವೇ ಆಗಿದ್ದು, ಇದು ತಾಯಿ ಎನ್ನುವ ಶಬ್ದಕ್ಕೆ ಸಮಾನವಾಗಿದೆ.[೩೮] ಮಧ್ಯ ಏಷ್ಯಾದಲ್ಲಿ ಅಮ್ಮೈ ಅನ್ನುವ ಶಬ್ದವೂ ಕಂಡುಬರುತ್ತದೆ. ಅಥರ್ವ ವೇದದಲ್ಲಿ ಸಿಂಧೂ ನಾಗರೀಕತೆಯ ಜನರನ್ನು ಮನಸ್ಸಲ್ಲಿಟ್ಟುಕೊಂಡು ಅಂದರೆ ಇಲ್ಲಿಯ ಜನರನ್ನು ಮನಸ್ಸಿನಲ್ಲಿಟ್ಟುಕೊಂಡೇ ಹೀಗೆ ಹೇಳುತ್ತಾರೆ. ಇವರ ಜಗತ್ತು ಕತ್ತಲೆಯಿಂದ ಕೂಡಿದೆ. ಅವರ ದೇವರುಗಳು ಭೂತಗಳಾಗಿವೆ, ಇಲ್ಲಿ ಸೂರ್ಯ ಚಂದ್ರರಿಗೆ ಅವಕಾಶವಿಲ್ಲ ಎನ್ನಲಾಗಿದೆ. ಸಂಸ್ಕೃತಿಯಲ್ಲಿ ದೇವತೆಗಳ ಕಲ್ಪನೆಯು ಆಕಾಶಕಾಯದಿಂದ ಬಂದಿಲ್ಲ, ಅದು ಈ ನೆಲದಲ್ಲಿ ಹುಟ್ಟಿದ ದೇವತೆಗಳು. ಅದು ಮರವಾಗಿರಬಹುದು, ಪ್ರಾಣಿಗಳಾಗಿರಬಹುದು, ಅಥವಾ ಕೃಷಿ ಪ್ರಧಾನವಾದ ಈ ಸಂಸ್ಕೃತಿಯ ಅಂಗವಾಗಿರುವುದರಿಂದ ಸ್ತ್ರೀಯೇ ಪ್ರಮುಖ ದೇವತೆಯಾಗಿರಬಹುದು. ಆರ್ಯರು ಪುರುಷ ಪ್ರಧಾನ ವ್ಯವಸ್ಥೆಯಿಂದ ಬಂದಂತಹವರು.

ಈ ಹಿನ್ನೆಲೆಯನ್ನು ಇಟ್ಟುಕೊಂಡು ಹರಪ್ಪ ಸಂಸ್ಕೃತಿಯಲ್ಲಿ ಮಾತೃದೇವತೆ ಆರಾಧನೆಯನ್ನು ಗಮನಿಸಬಹುದು. ಮಾರ್ಷಲ್ ಅವರು ಹೇಳುವಂತೆ ಸಿಂಧೂ ಸಂಸ್ಕೃತಿಯಲ್ಲಿ ಮಾತೃದೇವತೆಯ ಆರಾಧನೆಯು ಜನಪ್ರಿಯ ಆಚರಣೆಯಾಗಿತ್ತು ಎಂದಿದ್ದಾರೆ.[೩೯] ಇಲ್ಲಿ ದೊರಕುವ ಹಲವಾರು ಸುಡಾವೆಯ (Tereacota) ಗೊಂಬೆಗಳು ಇದನ್ನು ಸಾಬಿತುಪಡಿಸುತ್ತವೆ. ಇನ್ನೊಂದು ಪ್ರಮುಖವಾದ ಅಂಶವೆಂದರೆ, ಗಂಡಿನ ವಿಗ್ರಹಗಳು ಇಲ್ಲಿ ಪ್ರಧಾನವಾಗಿ ಕಂಡುಬಾರದೇ ಇರುವುದು.

There are numerous mother-goddess figurines, probably indicating that there was a popular fertility cult. This feature reappears in later Hinduism in the form of a feminine principle represented in Sakti worship, and the worship of Parvati, wife of Shiva. There are numerous male figures, also probably part of a fetility cult since many of the figures are phallic symbols.[೪೦]

ಯೋನಿಯ ಆರಾಧನೆಯು ಸಿಂಧೂ ನಾಗರಿಕತೆಯ ಪೂರ್ವದ್ದೆಂದು ಹೇಳಲಾಗಿದೆ. ಈ ಆರಾಧನೆಯು ಇಲ್ಲಿಯೂ ಕಂಡುಬರುತ್ತದೆ. ಯೋನಿಯ ಆರಾಧನೆಯ ಜೊತೆಯಲ್ಲಿಯೇ ಶಿಶ್ನುವಿನ ಆರಾಧನೆಯು ùàÛ ÞNÚÞ: Ì ä#bš ; nÚÞ'A ÚÌ; Ì# ÚÞA ÚP 'Ìè] (Ring stones) ಮತ್ತು ವರ್ತುಲಾಕಾರದ ಅಥವಾ

ದುಂಡಗಿನ ಕಂಬದ (Cylidrical stones) ರೀತಿಯಲ್ಲಿರುವ ಕಲ್ಲುಗಳನ್ನು ಯೋನಿ ಮತ್ತು ಲಿಂಗಗಳಾಗಿರಬಹುದೆಂದು ತರ್ಕಿಸಲಾಗಿದೆ. ಈ ಸಂಪ್ರದಾಯವು ಸಂತಾನಾಭಿವೃದ್ಧಿಯ ಅಥವಾ ಫಲವಂತಿಕೆಯ ಸಂಕೇತವಾಗಿರಬೇಕು. ಮಾರ್ಷಲ್‌ರವರು ಈ ಆರಾಧನೆಯು ಇಂದಿಗೂ ಭಾರತದಲ್ಲಿ ಕಂಡುಬರುತ್ತದೆ ಎನ್ನುತ್ತಾರೆ.

> India itself beatylie stones, such as those which guard the fields and cross-ways, are just as numerous as phallic ones and are common objects of worship with the primitive tribes, among whom they are specially assoiated with the Mother - Goddess.[೪೧]

ವೇದಗಳ ಕಾಲದಲ್ಲಿ ಶಿವನು ತನ್ನ ಅಸ್ತಿತ್ವವನ್ನು ಕಂಡುಕೊಂಡಿರಲಿಲ್ಲ. ಅಥವಾ ಅವನು ಇನ್ನು ತನ್ನ ಮೂಲ ರೂಪದಿಂದ ವೈದೀಕರಣ ಹೊಂದಿರಲಿಲ್ಲ. ನಂತರದಲ್ಲಿ ವೈದಿಕ ರುದ್ರ ಅಥವಾ ಅಗ್ನಿಯೊಡನೆ ಸೇರಿಕೊಂಡ. ಶಿವನನ್ನು ಆರ್ಯರು "ಶಿಷ್ನದೇವಾ" ಎಂದು ಕರೆದಿದ್ದಾರೆ. ಅಲ್ಲದೆ ಇವನ ಸಂಗಾತಿಯಾಗಿ ಶಕ್ತಿಯು ಕಂಡುಬರುವುದಿಲ್ಲ. ವೇದಗಳಲ್ಲಿ ಮೊದಮೊದಲು ಶಕ್ತಿದೇವತೆಯಾದ ಅಂಬಿಕೆಯನ್ನು ರುದ್ರ - ಶಿವನ ಸಹೋದರಿಯೆಂದೇ ಕರೆಯಲಾಗಿದೆ. ಆರ್ಯರು ಪುರುಷ ಪ್ರಧಾನ ವ್ಯವಸ್ಥೆಯಿಂದ ಬಂದವರು. ಇಲ್ಲಿ ಸ್ತ್ರೀಯರಿಗೆ ಎನಿದ್ದರೂ ಅದು ಎರಡನೆಯ ಸ್ಥಾನ ಅಥವಾ ಅಡಿಯಾಳು. ಋಗ್ವೇದದ ಮೊದಲ ಘಟ್ಟದಲ್ಲಿ ಅದಿತಿ, ಉಷಸ್ ಮುಂತಾದ ದೇವತೆಗಳು ಸ್ವತಂತ್ರವಾಗಿ ಕಂಡುಬರುತ್ತಾರೆ. ಆದರೆ, ಮೂಲ ಜನಾಂಗಗಳಲ್ಲಿ ಕಂಡುಬರುವಷ್ಟು ಪ್ರಧಾನವಾಗಿ ಸ್ತ್ರೀಯು ಕಂಡುಬರುವುದಿಲ್ಲ. ಆ ಕಾರಣದಿಂದಲೇ ಸಿಂಧೂ ನಾಗರಿಕತೆಯಲ್ಲಿ ಸ್ತ್ರೀ ಪ್ರಧಾನ ಪಾತ್ರವಹಿಸುತ್ತಿದ್ದಳು ಎನ್ನಲಾಗಿದೆ. ಅಲ್ಲದೇ ಧಾರ್ಮಿಕವಾದ ಎಲ್ಲ ಕಾರ್ಯಗಳು ಅವಳ ಮೂಲಕವೇ ನಡೆಯುತ್ತಿರಬೇಕು.

> Women or at least some women were apparently assigned divine qualities in the Indus Valley. The "dancing girl" may represent an assistant priestess, several of whom may have occupied the corridor rooms inside the Great Bath. Together with the "small but terrifying masked female figurines," such symbolism suggests a belief in priestesses an incarnations of a goddess. This deity would have "needed no larger statues, because the hierodules(priestesses) performed all ritual duties on her behalf without the image.[೪೨]

ಹರಪ್ಪ ಸಂಸ್ಕೃತಿಯಲ್ಲಿ ಮಾತೃದೇವತೆಯ ಆರಾಧನೆಯು ಎಲ್ಲಿಂದ ಬಂದಿತು.ಇದು ಬೇರೆ ಕಡೆಯಿಂದ ಎರವಲು ತಂದು ಇಲ್ಲಿ ವಿಕಾಸ ಹೊಂದಿತೆ? ಅಥವಾ ಇಲ್ಲಿಯೇ ಬೆಳೆದು? ಇಲ್ಲಿಯೇ ವಿಕಾಸ ಹೊಂದಿತೆ? ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿಕೊಂಡಿರೆ ಉತ್ತರಿಸುವುದು ಸುಲಭವೇನಲ್ಲ. ಮಾರ್ಷಲ್‌ರವರು ಇದನ್ನು ಫ್ರೈಜಿಯಾದ ಅನಾಟೋಲಿಯಾ ಮೂಲವಾಗಿದ್ದು ನಂತರ ಬೇರೆಕಡೆಗೆ ಪಸರಿಸಿರಬಹುದು ಎಂದು ತರ್ಕಿಸುತ್ತಾರೆ.[೪೩] ಇದೇ ಅಭಿಪ್ರಾಯವನ್ನು ಎಸ್.ಕೆ.ಚಟರ್ಜಿಯವರು ವ್ಯಕ್ತಪಡಿಸುತ್ತಾರೆ. ಅವರ ಪ್ರಕಾರ

> ದ್ರಾವಿಡರಿಗೆ ಜೀವನದ, ವಿಶ್ವದ ಮಹಾಶಕ್ತಿಗಳ ಪರಿಚಯವು ಜಗಜ್ಜನನಿ ಮತ್ತು ಆಕೆಯ ಪತಿ ಪಿತೃದೇವರ ರೂಪದಲ್ಲಿ ಆಗಿತ್ತು. ಲೌಕಿಕವಾದ, ಹೆಚ್ಚು ವ್ಯಾಪಕವಾದ, ಹೆಚ್ಚು ದಾರ್ಶನಿಕವಾದ ಮತ್ತು ಹೆಚ್ಚು ಕಾವ್ಯಾತ್ಮಕವಾದ ಕಲ್ಪನೆ ಇದು. ದ್ರಾವಿಡರು ಇದನ್ನು ಭಾರತಕ್ಕೆ ಈಜಿಯನ್ ದ್ವೀಪಗಳ ತಮ್ಮ ಮೂಲನೆಲೆಯಿಂದ ಹಾಗೂ ಈಜಿಯನ್ ಸಮುದ್ರದ ಅಂಚಿನ ಮುಖ್ಯಭೂಮಿ ಗ್ರೀಸ್ ಮತ್ತು ಏಷ್ಯಾ ಮೈನರ್‌ಗಳಿಂದಲೂ ತಂದರು[೪೪] ಎನ್ನುತ್ತಾರೆ.

ಆದರೆ ಇದನ್ನು ಒಪ್ಪದ ಇನ್ನೊಂದು ವಾದವೂ ಇದೆ. ಸಿಂಧೂ ಕಣಿವೆಯಲ್ಲಿ ಕಂಡುಬರುವ ಪುಟ್ಟ ಮೂರ್ತಿಗಳ ರೀತಿಯಲ್ಲಿಯೇ ದಕ್ಷಿಣ ಭಾರತದಲ್ಲಿಯ ದಾರಿ ಪಕ್ಕದ ಮರಗಳ ಸುತ್ತಲಲ್ಲಿ ಹಾಗೂ ಗ್ರಾಮಗಳ ಗುಡಿಯಲ್ಲಿ ಕಂಡುಬರುತ್ತವೆ.ಇವು ಮಾತೃದೇವತೆಯ ಅಥವಾ ಪ್ರಕೃತಿ ದೇವತೆಗಳನ್ನು ಪ್ರತಿನಿಧಿಸುತ್ತವೆಂದು ಪರಿಗಣಿಸಲಾಗಿದೆ. ಇದೇ ರೀತಿಯಲ್ಲಿ ಏಷ್ಯಾದ ಹಲವಾರು ಕಡೆ ಕಂಡುಬರುತ್ತದೆಯಾದರೂ ಪ್ರಾಚೀನ ಮಾನವನ ಕಲ್ಪನೆಯು ಇದೇ ಪ್ರದೇಶದಿಂದ ಬೆಳೆದು ಬೇರೆ ಪ್ರದೇಶಗಳಿಗೆ ಹರಡಿತೆಂದು ಹೇಳುವುದು ಅಷ್ಟು ಸೂಕ್ತವಲ್ಲವೆಂದು ತೋರುತ್ತದೆ. ಮಾನವನ ಮೂಲ ಕಲ್ಪನೆಯು ಬೀಜರೂಪದಲ್ಲಿಯೇ ಇದ್ದು ಅದು ಯಾವ ಕ್ಷಣದಲ್ಲಾದರೂ ಮೊಳಕೆಯೊಡೆದು ವೃಕ್ಷವಾಗಿರಬಹುದು. ಅಲ್ಲದೇ ಭಾರತದಲ್ಲಿ ಹಲವಾರು ಜನಾಂಗಗಳ ಮಿಶ್ರಣವಾಗಿದೆ. ದ್ರಾವಿಡರು ಒಂದೇ ಕಾಲಕ್ಕೆ ಬರಲಿಲ್ಲ. ಅಲ್ಲದೆ ಅವರು ಬರುವ ಮುನ್ನವೆ ಇಲ್ಲಿ ಮಾತೃದೇವತೆಯ ಆರಾಧನೆ ಇತ್ತೆಂದು ನಂಬಲಾಗಿದೆ. ಹೀಗಾಗಿ ಯಾವುದೇ ಒಂದು ನಿರ್ದಿಷ್ಟ ಪ್ರದೇಶದಿಂದ ಮಾತೃದೇವತೆಯ ಆರಾಧನೆಯು ಬೆಳೆಯಿತು ಎಂದು ಭಾವಿಸುವುದು ಅಷ್ಟು ಸೂಕ್ತವಲ್ಲವೆಂದು ತೋರುತ್ತದೆ. ಮಾತೃದೇವತಾ ಆರಾಧನೆಯ ಕಲ್ಪನೆಯು

> ಭಾರತದಲ್ಲಿ ವ್ಯಾಪಕವಾಗಿ ಹರಡಿದವೂ, ಆಳವಾಗಿ ಬೇರೂರಿದವೂ ಆಗಿವೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಮಾತೃದೇವತೆಯು ಗ್ರಾಮದೇವತೆಯಾಗಿ ಪ್ರತಿನಿಧಿತವಾಗಿವೆ. ಹಾಗೂ ಮಾತಾ, ಅಂಬಾ, ಅಮ್ಮಾ ಎಂದೂ, ಕಾಲೀ, ಕಪಾಲೀ ಮುಂತಾದ ವಿವಿಧ ಹೆಸರುಗಳಿಂದ ಕೆಲವೊಮ್ಮೆ

ರೌದ್ರ ರೂಪಿಣಿಯಾಗಿಯೂ,ಮತ್ತೆ ದುಷ್ಟಶಕ್ತಿಯ ನಿರ್ನಾಮ ಮಾಡುವ, ಫಲಶಕ್ತಿಯನ್ನು ನೀಡುವ ಮೊದಲಾದ ಕೆಲಸಗಳನ್ನು ಮಾಡುವ ದೇವತೆಯಾಗಿಯೂ ಪರಿಚಿತವಾಗಿವೆ.[೪೫]

ಎಂಬ ಮಾತುಗಳು ಇದರ ಮೂಲರೂಪವನ್ನು ಇದೇ ನೆಲದಿಂದ ಮೂಡಿಬಂದಿರುವ ಸಾಧ್ಯತೆಯನ್ನು ಬಿಂಬಿಸುತ್ತವೆ. ವೈದಿಕ ಪರಂಪರೆಯು ನಂತರದ ಕಾಲಘಟ್ಟಗಳಲ್ಲಿ ಈ ಸಂಸ್ಕೃತಿಯಿಂದ ಅನೇಕ ಅಂಶಗಳನ್ನು ತನ್ನಲ್ಲಿ ಅಳವಡಿಸಿಕೊಂಡಿತು. ಮೊದಲು ಆರ್ಯರು ಮೂರ್ತಿ ಆರಾಧನೆಯನ್ನು ಒಪ್ಪಿಕೊಂಡಿರಲಿಲ್ಲ. ವಿಗ್ರಹಾರಾಧನೆಯನ್ನು ನಂತರದಲ್ಲಿ ತನ್ನದೆಂಬಂತೆ ಅಂತಸ್ಥಗೊಳಿಸಿಕೊಂಡಿತು. ಹರಪ್ಪಾ ಸಂಸ್ಕೃತಿಯ ಪಥನಾಂತರದಲ್ಲಿ ದೇವಿಯ ಆರಾಧನೆಯು ಸ್ವತಂತ್ರವಾಗಿ ಕಂಡುಬರುವುದು ಕ್ರಿಸ್ತಶಕದ ಆರಂಭಕಾಲದಲ್ಲಿ.

> religion of Harappa people had some features suggesting those characteristics of later Hinduism which are not to be found in the earliest stratum of Indian religions literature and the Mother Goddess for instance, reappears only after the lapse of over a thousand years from the fall of Harappa.[೪೬]

ಸಿಂಧೂ ಕಣಿವೆಯಲ್ಲಿ ಪ್ರಧಾನವಾಗಿ ಕಂಡುಬರುವ ವಿಗ್ರಹಗಳೆಂದರೆ ನಗ್ನ ಸ್ತ್ರೀ ಪ್ರತಿಮೆಗಳು. ಅವುಗಳಲ್ಲಿ ಕೆಲವು ವಿಗ್ರಹಗಳು ನಗ್ನವಾಗಿರದೆ ಬಟ್ಟೆಯನ್ನು ಧರಿಸಿಕೊಂಡಿವೆ. ಅವುಗಳನ್ನು ಗಟ್ಟಿಯಾದ ಜೇಡಿ ಮಣ್ಣಿನಿಂದ ಅಥವಾ ಫಿಯಾನ್ಸ್ ನಿಂದ ಮಾಡಿದ ಮೂರ್ತಿಗಳಾಗಿವೆ. ನಯವಿಲ್ಲದ ಹಾಗೂ ನಿಂತ ಭಂಗಿಯಲ್ಲಿರುವ ವಿಗ್ರಹಗಳಾಗಿವೆ. ಒಂದರಿಂದ ಇನ್ನೊಂದಕ್ಕಿರುವ ರೂಪ ಸಾಮ್ಯ, ಅತ್ಯಂತ ಕಲಾತ್ಮಕವಾದ ಕೇಶಾಲಂಕಾರ, ಹಾಗೂ ಆಭರಣಗಳ ತೊಡುವಿಕೆ ಇವೆಲ್ಲಾ ಅಂಶಗಳು ಮಾತೃದೇವತೆಯ ಆರಾಧನೆಯನ್ನು ಪುಷ್ಟಿಕರಿಸುತ್ತವೆ. ಅಲ್ಲದೆ ಹೆಚ್ಚು ಪುಷ್ಟೀಕರಿಸುವ ಅಂಶಗಳೆಂದರೆ, ಝುಮಿಕಿಯ ರೀತಿಯಲ್ಲಿ ತೂಗು ಹಾಕಿರುವ ಕಿವಿಯ ಆಭರಣಗಳು, ಪೂಜೆಯ ಕಾಲದಲ್ಲಿ ಆದ ಹೊಗೆಯ ಗುರುತುಗಳು, ಅಲ್ಲದೆ, ಎಣ್ಣೆಯ ದೀಪ ಅಥವಾ ಧೂಪವನ್ನು ಉರಿಸಿರುವ ಗುರುತುಗಳು ಇವೆಲ್ಲವು ದೇವಿಯನ್ನು ಮಾತೃ ರೂಪದಲ್ಲಿ ಆರಾಧಿಸಲ್ಪಡುತ್ತಿದ್ದುದನ್ನು ಹೇಳುತ್ತವೆ.

ಜಾನ್ ಮಾರ್ಷಲ್‌ರವರು ಇಲ್ಲಿ ಕಂಡುಬರುವ ವಿಗ್ರಹಗಳು ಮಾತೃದೇವತಾ ಪರಂಪರೆಯಲ್ಲಿ ಬಂದ ದೇವತೆಗಳ ವಿಗ್ರಹಗಳಾಗಿರಬೇಕು ಎಂದು ಹೇಳುತ್ತಾರೆ. ತಮ್ಮ ಈ ವಾದವನ್ನು ಸಮರ್ಥಿಸಲು ಎರಡು ಊಹೆಗಳನ್ನು ಮಾಡುತ್ತಾರೆ. ಒಂದು, ಸಿಂಧೂ ನಾಗರಿಕತೆಯು ಬೆಳೆದು ಬಂದ ಪರಿಸರ ಹಾಗೂ ಪಶ್ಚಿಮ ಏಶಿಯಾದ ಸಮಕಾಲೀನ ಸಂಸ್ಕೃತಿಗಳಲ್ಲಿ ಕಂಡು ಬರುವ ಮಾತೃದೇವತಾ ಕಲ್ಪನೆಗಳು ಹೇಗಿದ್ದವು ಎಂಬುದನ್ನು ತಮ್ಮ ವಾದಕ್ಕೆ ಪೂರಕವಾಗಿ ತೆಗೆದುಕೊಂಡು ಚರ್ಚಿಸುತ್ತಾರೆ. ಸಿಂಧೂ ನಾಗರಿಕತೆಯಲ್ಲಿ ಸಿಗುವ ದೇವತೆಯ

ಪ್ರಾಚೀನ ವಿಗ್ರಹಗಳಿಗೂ ಹಾಗೂ ಇಂದು ಆ ಪ್ರದೇಶದಲ್ಲಿ ಕಂಡುಬರುವ ವಿಗ್ರಹಗಳಿಗೂ ಒಂದೇ ಸೂತ್ರವನ್ನು ಕಲ್ಪಿಸುತ್ತಾರೆ. ಪಾಶ್ಚಾತ್ಯ ಕಲ್ಪನೆಗಳಿಗೂ ಇಲ್ಲಿನ ಮಾತೃದೇವತೆಗಳ ಫಲವಂತಿಕೆ, ಹಾಗೂ ಮಾತೃತ್ವ ಕಲ್ಪನೆಗಳಿಗೆ ಹೊಂದಿಕೆಯಾಗುತ್ತದೆ. ಅಲ್ಲದೆ ಈಜಿಪ್ತ್, ಮೆಸಪೊಟೇಮಿಯಾ ಮತ್ತು ಈಜಿಯನ್ ತೀರದಲ್ಲಿ ಕಂಡುಬರುವ ವಿಗ್ರಹಗಳಿಗೂ ಸಾಮಾನ್ಯವಾದ ಹೋಲಿಕೆಯನ್ನು ಅವರು ಗುರುತಿಸುತ್ತಾರೆ. ಅಂದರೆ, ತಾಯಿ ಮತ್ತು ಮಗು, ಗರ್ಭಿಣಿ ಹೆಣ್ಣು ಹಾಗೂ ಮಾಂತ್ರಿಕ ಲಕ್ಷಣಗಳನ್ನು ಹೊಂದಿರುವ ವಿಗ್ರಹಗಳೆಂದು ಗುರುತಿಸುತ್ತಾರೆ. ಅಲ್ಲದೆ, ಇಲ್ಲಿ ಕಂಡುಬರುವ ಸುಡು ಆವೆಯ ಎಲ್ಲಾ ವಿಗ್ರಹಗಳು ಮಾತೃದೇವತೆಯದ್ದಾಗಿರಲಿಲ್ಲ, ಕೆಲವು ಮಕ್ಕಳು ಆಡುವ ಆಟಿಕೆಗಳಾಗಿರಬೇಕು ಎನ್ನುತ್ತಾರೆ. ಆಗರೂ ಅವುಗಳಲ್ಲಿ ಬಹುಪಾಲು ದೇವತೆಗಳ ವಿಗ್ರಹವಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವುದಿಲ್ಲ. ಎರಡನೆಯದಾಗಿ, ಆರ್ಯರಲ್ಲಿ ಮಾತೃದೇವತೆಯ ಸ್ಥಾನ ಹೇಗಿತ್ತು ಎಂಬ ಪ್ರಶ್ನೆಯನ್ನು ಎತ್ತಿಕೊಳ್ಳುತ್ತಾರೆ. ಮಾತೃದೇವತೆಯ ಸ್ಥಾನ ಆರ್ಯರಲ್ಲಿ ಪ್ರಮುಖವಾಗಿರಲಿಲ್ಲ. ಅಲ್ಲದೆ ಅವರಲ್ಲಿ ಕಂಡುಬರುವ ದೇವತೆಗಳು ಸ್ವರ್ಗ ಅಥವಾ ಆಕಾಶ ದೇವತೆಗಳಾಗಿವೆ. ಈ ನೆಲದಲ್ಲಿ ಹುಟ್ಟಿ ಬೆಳೆದ ದೇವತೆಗಳು ಅವರಲ್ಲಿ ಕಂಡುಬರುವುದಿಲ್ಲ. ಇಲ್ಲಿ ಏನಿದ್ದರೂ ಸೂರ್ಯ, ವರುಣ, ಇಂದ್ರ ಮುಂತಾದ ದೇವತೆಗಳಿಗೆ ಇಲ್ಲಿ ಪ್ರಮುಖವಾದ ಸ್ಥಾನವನ್ನು ಕೊಡಲಾಗಿದೆ. ಸ್ತ್ರೀದೇವತೆಗಳಿಗೆ ಇಲ್ಲಿ ಎರಡನೆಯ ಸ್ಥಾನ. ಸಮಕಾಲೀನ ಬುಡಕಟ್ಟುಗಳಲ್ಲಿ ಮಾತೃದೇವತೆಯ ಕಲ್ಪನೆ ಪ್ರಧಾನವಾಗಿರುವುದನ್ನು ಗುರುತಿಸಿ, ಸಿಂಧೂ ನಾಗರಿಕತೆಯು ಪ್ರಧಾನವಾಗಿ ಮಾತೃದೇವತಾ ಕಲ್ಪನೆಯಿಂದಲೇ ಬಂದಿರಬೇಕು ಎಂಬ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾರೆ. ದೇವತೆಯರ ಆರಾಧನೆಯು ವೇದಕಾಲನಂತರದಲ್ಲಿ ಹಿಂದು ಸಂಸ್ಕೃತಿಯಲ್ಲಿ ಹಿರಿದಾದ ಸ್ಥಾನ ಸಿಕ್ಕರೂ, ಸ್ವತಂತ್ರವಾದ ಅಸ್ತಿತ್ವ ಸಿಕ್ಕಿರಲಿಲ್ಲ. ಆದರೆ, ಸಿಂಧೂ ನಾಗರಿಕತೆಯ ಪ್ರಭಾವದ ಪರಿಣಾಮವಾಗಿ ದೇವತೆಗಳಿಗೆ ಸ್ಥಾನ ಸಿಕ್ಕಿರಬಹುದು ಎಂದು ತರ್ಕಿಸುತ್ತಾರೆ.[೪೨]

ಸಿಂಧೂ ನಾಗರಿಕತೆಯಲ್ಲಿ ಕಂಡುಬರುವ ಮಣ್ಣಿನ ವಿಗ್ರಹಗಳು ಹಲವಾರು ರೀತಿಯಲ್ಲಿ ಕಂಡುಬರುತ್ತವೆ. ಇಲ್ಲಿ ಕಂಡುಬರುವ ವಿಗ್ರಹಗಳು ಸ್ತ್ರೀಯರ ವಿಗ್ರಹಗಳು ಗಂಡಸರ ವಿಗ್ರಹಗಳಿಗಿಂತ ಎದ್ದುಕಾಣುವ ರೀತಿಯಲ್ಲಿವೆ. ಸಾಮಾನ್ಯವಾಗಿ ಇಲ್ಲಿ ಕಂಡುಬಂದಿರುವ ಎಲ್ಲಾ ವಿಗ್ರಹಗಳು ಸುಂದರವಾಗಿ ಅಲಂಕರಿಸಲ್ಪಟ್ಟಿವೆ. ಈ ಅಲಂಕಾರದ ರೀತಿಯನ್ನು ನೋಡಿದರೆ ದೇವತೆಯ ವಿಗ್ರಹಗಳಾಗಿರಬೇಕು. ಇಲ್ಲಿಯ ವಿಗ್ರಹಗಳು ಗರ್ಭಿಣಿಯ ಹಾಗೂ ಮಗುವನ್ನು ಹೊಂದಿರುವ ವಿಗ್ರಹಗಳಾಗಿವೆ. ಇವು ತಾಯಿ, ಮಗುವನ್ನು ಲಾಲಿಸುವ, ಪಾಲಿಸುವ ಮಾತೃ ಸ್ವರೂಪಿಣಿಯಾದ ದೇವತೆಯನ್ನು ಪ್ರತಿನಿಧಿಸುವ 'ಅಮ್ಮ'ನ ರೂಪವಾಗಿರುವ ಸಾಧ್ಯತೆ ಇದೆ. ಕೆಲವು ವಿಗ್ರಹಗಳು ಭೂಮಿಯ ಫಲವಂತಿಕೆಯನ್ನು ಸೂಚಿಸುವ ರೀತಿಯಲ್ಲಿ ಕಂಡುಬರುತ್ತವೆ. ಇಲ್ಲಿ ಕಂಡುಬರುವ ಮತ್ತೊಂದು ರೂಪವೆಂದರೆ, ವೃಕ್ಷ ಮತ್ತು ದೇವತೆಯದ್ದು. ಇವುಗಳನ್ನು ಗ್ರಾಮದೇವತೆಯ ಅಥವಾ ವೃಕ್ಷಾರಾಧನೆಯ ರೂಪದಲ್ಲಿರುವ ವಿಗ್ರಹಗಳೆಂದು ಹೇಳಬಹುದಾಗಿದೆ. ವೃಕ್ಷವು ಮಾನುಷಾಕಾರವನ್ನು ಹೊಂದುತ್ತಿರುವ

ರೀತಿಯಲ್ಲಿ, ಅದು ಸ್ತ್ರೀರೂಪವನ್ನು ಧರಿಸುತ್ತಿರುವ ಹಾಗೆ ಚಿತ್ರಿಸಲಾಗಿದೆ. ಸ್ತ್ರೀವಿಗ್ರಹಗಳಿಗೆ ಕೊಂಬಿನಿಂದ ಅಲಂಕಾರವನ್ನು ಮಾಡಲಾಗಿದೆ. ಇವು ಪೂಜಾರಿಣಿಯು ಧಾರ್ಮಿಕ ಕ್ರಿಯೆಗಳನ್ನು ಹಾಗೂ ಇನ್ನು ಕೆಲವು ಬಲಿಯನ್ನು ತೆಗೆದುಕೊಳ್ಳುತ್ತಿರುವ ಸಾವು ಅಥವಾ ಸಾವಿನ ದೇವತೆಗಳಾಗಿರುವ ಸಾಧ್ಯತೆಗಳು ಇವೆ. ಈ ರೀತಿಯ ಹಲವಾರು ರೂಪಗಳನ್ನು ಸಿಂಧೂ ನಾಗರಿಕತೆಯಲ್ಲಿ ಕಾಣಬಹುದು. ಪಪುಲ್ ಜಯ್ಕರ್ ಅವರು ಹೇಳುವಂತೆ,

> The intimate relationship of primitive man to the earth, to plants and animals, and their use as catalysts for initiating the secret mysteries of metamorphosis, is evident in many of the rituals revealed on the Indus Vally seals. The magician-priests of the Indus Valley must have has access ot the secrets of a highly developed plant chemistry and alchemy. The ritual scenes project a fluid movement and a free changebility of form and identity between plant, animal and human.[೪೮]

ಇಲ್ಲಿಕಂಡು ಬರುವ ವಿಗ್ರಹಗಳನ್ನು ಮುರೆಯವರು ಮೂರು ರೀತಿಯಲ್ಲಿ ವಿಂಗಡಿಸಿಕೊಂಡಿದ್ದಾರೆ.[೪೯] ಅವರ ಪ್ರಕಾರ

೧. ಪೂಜ್ಯನೀಯ ಸ್ತ್ರೀ

೨. ಪೂಜ್ಯನೀಯ ತಾಯಿ

೩. ಮಾನುಷಾಕಾರಗೊಂಡ ಯೋನಿ

ಕಂಡುಬರುವ ವಿಗ್ರಹಗಳಲ್ಲಿ ಹೆಚ್ಚಿನವು ಪೂಜ್ಯನೀಯ ಸ್ತ್ರೀ ವಿಗ್ರಹಗಳ ರೀತಿಯಲ್ಲಿರುವವು. ಸಿಂಧೂ ನಾಗರಿಕತೆಯು ಮೂಲತಃ ಕೃಷಿ ಪ್ರಧಾನವಾದುದು. ಈ ಕೃಷಿ ಪ್ರಧಾನ ಸಂಸ್ಕೃತಿಯಲ್ಲಿ ಯಾವಾಗಲೂ ಸ್ತ್ರೀಯರು ಹೆಚ್ಚಿನ ಮನ್ನಣೆಯನ್ನು ಗಳಿಸಿರುತ್ತಾರೆ. ಆದ್ದರಿಂದ ಸ್ತ್ರೀಯರಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿರುವುದನ್ನು ಇದು ತೋರಿಸುತ್ತದೆ. ಅಲ್ಲದೆ, ಸ್ತ್ರೀಯರು ಪೂಜಾರಿಣಿಯರಾಗಿ ಕಾರ್ಯನಿರ್ವಹಿಸುತ್ತಿರಬೇಕು. ವಿಗ್ರಹವು ತನ್ನ ಒಂದು ಕೈಯನ್ನು ಮೇಲೆತ್ತಿದ್ದು, ಇನ್ನೊಂದು ಕೈಯಿಂದ ತನ್ನ ಹಣೆಯನ್ನು ಒತ್ತಿಕೊಳ್ಳುತ್ತಿದೆ. ಮಾರ್ಷಲ್‌ರವರ ಪ್ರಕಾರ ಇದು ಪೂಜಾರಿಣಿಯಾಗಿರಬೇಕು, ಇವಳು ಭಕ್ತಿಯಿಂದ ಪೂಜೆಯನ್ನು ಸಲ್ಲಿಸುತ್ತಿರಬೇಕೆಂದು ತರ್ಕಿಸುತ್ತಾರೆ.[೫೦] ಅಥವಾ ದೇವತಾ ವಿಗ್ರಹವಾಗಿರಬೇಕು. ಅಲ್ಲದೆ ಹರಪ್ಪ ಸಂಸ್ಕೃತಿಯಲ್ಲಿ ಮಾಂತ್ರಿಕತೆ ಹಾಗೂ ರಸವಿದ್ಯೆ ಕೂಡಾ ಪ್ರಮುಖವಾದ ಒಂದು ವಿದ್ಯೆಯಾಗಿತ್ತು. ಅದನ್ನು ಸ್ತ್ರೀಯರೇ ನಿರ್ವಹಿಸುತ್ತಿದ್ದರು ಎನ್ನಲಾಗಿದೆ.

ತಾಯಿ ಮತ್ತು ಮಗುವಿನ ವಿಗ್ರಹಗಳು ಸಿಂಧೂ ನಾಗರಿಕತೆಯಲ್ಲಿ ಕಂಡುಬರುತ್ತವೆ. ಎಡ ಅಥವಾ ಬಲಬದಿಯಲ್ಲಿ ಮೊಲೆಯೂಡಿಸುತ್ತಿರುವ ತಾಯಿಯ ವಿಗ್ರಹಗಳು ಮಕ್ಕಳ ಮೇಲೆ ಮಮತೆಯ ಕಾರುಣ್ಯವನ್ನು ಹರಿಸುವುದೇ ಆಗಿದೆ. ಕೆಲವು ವಿಗ್ರಹಗಳು ಗರ್ಭಧರಿಸಿರುವ ಹಾಗೆ ಕಂಡುಬರುತ್ತವೆ. ಶಿಲಾಯುಗದಲ್ಲಿ ಬರೀ ಮೊಲೆಗಳನ್ನು ದೊಡ್ಡದಾಗಿ ಮಾತ್ರ ಸೂಚಿಸಲಾಗುತ್ತಿತ್ತು. ಮಗುವಿಗೆ ಮೊಲೆಯನ್ನು ಉಣಿಸುವುದಷ್ಟನ್ನೆ ಈ ವಿಗ್ರಹಗಳು ಹೇಳುತ್ತಿರದೆ, ಇಡೀ ಜನಾಂಗದ ಸೃಷ್ಟಿಯ ಸಂಕೇತದ ರೀತಿಯಲ್ಲಿ ಕಾಣುತ್ತಾಳೆ. ಇಂದಿಗೂ ಈ ರೀತಿಯ ವಿಗ್ರಹಗಳು ಭಾರತದ ಗ್ರಾಮಗಳಲ್ಲಿ ಕಂಡುಬರುವುದನ್ನು ಜೇಮ್ಸ್‌ರವರು ಉಲ್ಲೇಖಿಸುತ್ತಾರೆ.

> Divine Mother is represented by a child suckling the breast of the female figurine, though this type is comparatively few. These clay figurines were kept in every house and streets of Mohengodaro and Harappa, as a tutelary divinity much as the Mother Goddess which is taken to be still the guardian of the house and village in India presiding over child birth and daily needs.[೫೧]

ಇನ್ನೊಂದು ಬಗೆಯ ವಿಗ್ರಹಗಳು ದೊರಕುತ್ತವೆ. ಅವುಗಳೆಂದರೆ, ಕಾಲು ಇಲ್ಲದೇ ಇರುವಂತಹ ವಿಗ್ರಹಗಳು. ಇವುಗಳು ಬಹುಶಃ ಭೂಮಿತಾಯಿಯ ವಿಗ್ರಹಗಳಾಗಿರಬೇಕು. ಈ ರೀತಿಯ ವಿಗ್ರಹಗಳು ಪ್ರಾಚೀನ ಕಾಲದಿಂದಲೂ ಜಗತ್ತಿನೆಲ್ಲಡೆಯಲ್ಲಿಯೂ ಕಂಡುಬರುತ್ತವೆ. ಇವುಗಳನ್ನು ಭೂಮಿಯಲ್ಲಿ ಅಥವಾ ಕಟ್ಟೆಗೆಯ ಮೇಲೆ ಬಿಗಿಯಾಗಿ ಇರುವಂತೆ ಮಾಡಲು ಈ ಮಾದರಿಯನ್ನು ಅನುಸರಿಸುತ್ತಿರುವುದೆ ಆಗಿದೆ. ಈ ವಿಗ್ರಹಗಳು ಕೂಡಾ ನಗ್ನವಾಗಿವೆ. ಆಭರಣಗಳಿಂದ ಹಾಗೂ ಕೇಶಾಲಂಕಾರಯುಕ್ತವಾಗಿವೆ. ಕೃಷಿಯ ಆರಂಭವು ಸ್ತ್ರೀಯಿಂದಲೇ ಆರಂಭವಾಯಿತೆಂದು, ಹಾಗೂ ಸಾಮಾಜಿಕ ವ್ಯವಸ್ಥೆಯ ಅನೇಕ ಘಟನೆಗಳು ಅವಳಿಂದಲೇ ಆರಂಭಗೊಂಡವೆಂದು ಈ ಹಿಂದೆ ನೋಡಲಾಗಿದೆ. All nature seemed to him like a mother; the land is woman and in woman abide the dark powers as in the earth[೫೨] ಎಂದು ತಿಳಿದ ಮೇಲೆ ಅವನ ಹುಟ್ಟು ಭೂಮಿಯಿಂದಲೇ ನಡೆಯಿತು, ಅಂತೆಯೆ ಅಂತ್ಯವು ಕೂಡಾ ಭೂಮಿಯ ಗರ್ಭದಲ್ಲಿ ಸೇರುತ್ತೇನೆ ಎಂದು ತಿಳಿದ. ಅಲ್ಲದೆ ಉಡಲು ಬಟ್ಟೆ, ಹೊಟ್ಟೆತುಂಬಲು ಭೂಮಿಯು ತನಗೆ ಬೇಕಾದ ಸಮಸ್ತವನ್ನು ಕೊಡುತ್ತದೆ. ಹೀಗೆ ಭೂಮಿ ಹಾಗೂ ಹೆಣ್ಣು ಒಂದೇ ರೂಪದಲ್ಲಿರುವ ಹಾಗೆ ಕಂಡುಕೊಂಡಿದ್ದರಿಂದ ಅವೆರಡನ್ನು ಒಂದಾಗಿ ನೋಡಿದ ಕಾರಣ ಪೂಜ್ಯವಾದವುಗಳಾದವು. ಇದೇ ಅಂಶಗಳನ್ನು ಈ ಸಂಸ್ಕೃತಿಯಲ್ಲಿ ಹೆಚ್ಚು ವ್ಯಾಪಕತ್ವವನ್ನು ಪಡೆದುಕೊಂಡಿದೆ. ಅಲ್ಲದೆ ಅದು ಇಂದಿಗೂ ಹಲವಾರು ರೂಪಗಳಲ್ಲಿ ಉಳಿದುಕೊಂಡು ಬಂದಿರುವುದನ್ನು ಗಮನಿಸಬಹುದು.

ಸಿಂಧೂ ನಾಗರಿಕತೆಯಲ್ಲಿ ದೇವತೆಯನ್ನು ಇನ್ನೂ ಕನ್ನೆಯ ರೂಪದಲ್ಲಿ ಆರಾಧಿಸುತ್ತಿದ್ದರು ಎಂದು ಊಹಿಸಲು ಅವಕಾಶಗಳುಂಟು. ಯಾಕೆಂದರೆ, ಇಲ್ಲಿ ಕಂಡುಬರುವ ವಿಗ್ರಹಗಳು ಹೆಚ್ಚು ವಯಸ್ಸಾದವರಂತೆ ಕಂಡುಬರುವುದಿಲ್ಲ. ಮೊಲೆ, ದೇಹದ ಮಧ್ಯಭಾಗವು ದೊಡ್ಡದಾಗಿ ಬಿಂಬಿತವಾಗಿಲ್ಲ. ಆ ಕಾರಣದಿಂದ ಅವು ಇನ್ನು ಕನ್ನೆಯ ರೂಪದಲ್ಲಿರುವುವೆಂದು ಊಹಿಸಬಹುದು.

.. the virgin mother was worshipped in Indus Valley; she being a direct representation of Earth. The legless type may hint at the conception of immovable earth around which sun revolved.[೫೩]

ಹರಪ್ಪಾದಲ್ಲಿ ದೊರಕಿರುವ ಮುದ್ರೆಗಳಲ್ಲಿ ಕೆಲವು ಫಲವಂತಿಕೆಯನ್ನು ಸೂಚಿಸುವ ನಗ್ನ ಸ್ತ್ರೀಯ ಆಕೃತಿಗಳು ದೊರಕಿವೆ. ಹರಪ್ಪಾದಲ್ಲಿ ದೊರಕಿರುವ ಮುದ್ರೆಯು ಮೇಲೆ ತಲೆಕೆಳಗಾಗಿ ತಿರುಗಿಕೊಂಡ ನಗ್ನ ಸ್ತ್ರೀ ಆಕೃತಿಯೊಂದು ಚಿತ್ರಿತವಾಗಿದೆ. ಕಾಲುಗಳು ಹರಡಿಕೊಂಡಿದ್ದು, ಗರ್ಭದಿಂದ ಸಸ್ಯವೊಂದು ಹೊರಬಂದಿದೆ. ಹಿಂಭಾಗದಲ್ಲಿ ಕೈಯಲ್ಲಿ ಕುಡುಗೋಲಿನಾಕಾರದ ಆಯುಧವನ್ನು ಹಿಡಿದ ವ್ಯಕ್ತಿಯೋರ್ವನು ಇದ್ದು, ಯಾಚನೆಯ ಭಂಗಿಯಲ್ಲಿ ಕೈ ಮೇಲೆತ್ತಿ ಹಿಡಿದಿರುವ ಸ್ತ್ರೀಯೋರ್ವಳು ನೆಲದ ಮೇಲೆ ಕುಳಿತಿದ್ದಾಳೆ.ಮುಂಭಾಗದಲ್ಲಿ ಚಿತ್ರಿತವಾದ ಭೂತದ್ವಯ ಸಹಿತವಾದ ಭೂದೇವತೆಗೆ ಮಾಡಲಾದ ನರಬಲಿಯನ್ನು ಇದು ನಿರೂಪಿಸುತ್ತಿರಬಹುದು ಎನ್ನಲಾಗಿದೆ.[೫೪] ಇದು ಕೃಷಿಯ ಆಚರಣೆಯ ಆರಂಭವನ್ನು ಸೂಚಿಸುತ್ತದೆ. ಯಾಕೆಂದರೆ, ಹಿಂದೆ ನೋಡಿದಂತೆ ಕೃಷಿಯನ್ನು ಆರಂಭಿಸುವ ಮುನ್ನ ಬಲಿಯನ್ನು ಕೊಡಲಾಗುತ್ತಿತ್ತು. ಈ ಮುದ್ರೆ ಬಲಿ ಆಚರಣೆಯ ವಿಧಿಯನ್ನು ನಿರೂಪಿಸುತ್ತದೆ ಎನ್ನಬಹುದು. ಇದೇ ರೀತಿಯಲ್ಲಿರುವ ವಿಗ್ರಹವನ್ನು ದಕ್ಷಿಣ ಫ್ರಾನ್ಸ್‌ನ ಪ್ರೈನೆಸ್ ಪ್ರಾಂತ್ಯದಲ್ಲಿ ಒಟನಲ್ಲಿ ಕಾಣಬಹುದು. ಇಲ್ಲಿ ಹೆಣ್ಣಿನ ಯೋನಿಯಿಂದ ವೃಕ್ಷದ ಬದಲಾಗಿ ಹಾವು ಹೊರಬರುತ್ತಿದೆ. ಇದಕ್ಕೆ ವಿವರಣೆಯು ಕೂಡಾ ಇದೇ ರೀತಿಯಲ್ಲಿಯೇ ಇದೆ ಎಂಬುದು ಗಮನಾರ್ಹವಾದುದು. Serpent is the power of beneath of the earth that makes the plant grow. The goddess is sculpted giving birth to life as a snake that she nourishes with her breasts.[೫೫]

ಇದು ಸ್ಪಷ್ಟವಾಗಿ ಭೂಮಿಯ ಆರಾಧನೆಯ ಪ್ರತೀಕವಾಗಿರುವುದೇ ಆಗಿದೆ. ಅದರಂತೆ ಗುಪ್ತರ ಕಾಲದಲ್ಲಿ ಇದೇ ರೀತಿಯ ವಿಗ್ರಹಗಳು ಕಂಡುಬರುತ್ತವೆ. ಮಾರ್ಕಂಡೇಯ ಪುರಾಣದಲ್ಲಿ ಕಾಣುವ ಶಾಕಾಂಬರಿಯ ಕಲ್ಪನೆಯು ಕೂಡಾ ಭೂಮಿಯ ಫಲವಂತಿಕೆಯ ಆರಾಧನೆಯ ಫಲವಾಗಿದೆ. ಅದೇ ರೀತಿಯ ಇನ್ನೊಂದು ಮುದ್ರಿಕೆಯೊಂದರಲ್ಲಿ ಅಶ್ವತ್ಥ ವೃಕ್ಷದ ಕವಲೊಡೆದ ಶಾಖೆಯಲ್ಲಿ ನಿಂತ ಆಕೃತಿಯ ಚಿತ್ರಣವು ಮಾತೃದೇವತೆಯನ್ನು ಸೂಚಿಸುವಂತೆ

ಕಾಣುತ್ತದೆ*. (*ಇದರ ವಿವರಣೆಯು ಐದನೆಯ ಅಧ್ಯಾಯದಲ್ಲಿ ಸಪ್ತಮಾತೃಕೆಯರ ವಿಷಯದಲ್ಲಿ ಬರುತ್ತದೆ.) ಈ ದೇವತೆಯ ಉಪಾಸಕನು ಪ್ರಾಯಶಃ ಬಲಿಗಾಗಿ ಮೇಕೆಯೊಂದನ್ನು ತರುತ್ತಿದ್ದಾನೆ. ಮತ್ತು ಅದರ ಕೆಳಗೆ ನಿಂತಿರುವ ಏಳು (ಬಹುಶಃ ಸ್ತ್ರೀಯರಿರಬೇಕು) ಜನರು ಈ ಆರಾಧನೆಯಲ್ಲಿ ಭಾಗವಹಿಸುತ್ತಿದ್ದಾರೆ.[೫೬] ಈ ಮುದ್ರಿಕೆಯಲ್ಲಿ ಕಂಡುಬರುವ ವಿಗ್ರಹವು ಭೂಮಿಯ ಆರಾಧನೆಯನ್ನು ಅಥವಾ ವೃಕ್ಷಾರಾಧನೆಯನ್ನು ನಿರೂಪಿಸುತ್ತಿರವುದಾಗಿದೆ. ಪ್ರಾಚೀನ ಪರಂಪರೆಯಲ್ಲಿ ಮನುಷ್ಯನನ್ನೆ ಬಲಿಕೊಡಲಾಗುತ್ತಿತ್ತು, ಆದರೆ ಮನುಷ್ಯನ ಬದಲಾಗಿ ಪ್ರಾಣಿಗಳನ್ನು, ಅದರ ರಕ್ತವನ್ನು ಭೂಮಿಯನ್ನು ತೃಪ್ತಿಗೊಳಿಸಲು ಅಥವಾ ಬೆಳೆಯನ್ನು ಬೆಳೆಯುವ ಮುನ್ನ ಸಾಮೂಹಿಕ ನೃತ್ಯದ ಮೂಲಕ ಬಲಿಯನ್ನು ಕೊಡಲಾಗುತ್ತಿತ್ತು. ಅದರ ಪ್ರಾಚೀನ ಪ್ರತೀಕವಾಗಿ ಇದು ಕಂಡುಬರುತ್ತದೆ.

ಸಿಂಧೂ ನಾಗರಿಕತೆಯಲ್ಲಿ ಕಂಡುಬರುವ ಮತ್ತೊಂದು ಆರಾಧನೆಯೆಂದರೆ, ವೃಕ್ಷಾರಾಧನೆ. ವೃಕ್ಷಾರಾಧನೆಯನ್ನು ಹಲವಾರು ಮುದ್ರಿಕೆಗಳಲ್ಲಿ ಕಾಣಬಹುದು. ಮೊದಮೊದಲು ವೃಕ್ಷವು ಒಂದು ವೃಕ್ಷವಾಗಿದ್ದು, ನಂತರದಲ್ಲಿ ವೃಕ್ಷವು ಮಾನುಷಾಕಾರವನ್ನು ಹೊಂದುತ್ತಿರುವಂತೆ ಹಲವು ಮುದ್ರೆಗಳಲ್ಲಿ ಚಿತ್ರಿಸಲಾಗಿದೆ. ಎರಡು ಮುದ್ರಿಕೆಗಳಲ್ಲಿ ಒಂದರಲ್ಲಿ ಓರ್ವ ಸ್ತ್ರೀಯು ಬಹುಶಃ ಬೇವು ಅಥವಾ ಬನ್ನಿಯ ಮರದ ಕೆಳಗೆ ಕುಳಿತಿದ್ದು, ನೀಳವಾದ ದೇಹವನ್ನು ಹಾಗೂ ಕೈಗಳನ್ನು ಪಡೆದಿದ್ದಾಳೆ. ಅವಳ ದೇಹವು ಬಳ್ಳಿಯ ಮಾದರಿಯಲ್ಲಿಯೇ ಇದ್ದು, ವೃಕ್ಷವೇ ಅವಳಾಗಿದ್ದಾಳೆ. ಅವಳ ಮುಂದೆ ಹುಲಿಯು ನಿಂತಿದ್ದು, ಅದು ಅವಳನ್ನು ದಿಟ್ಟಿಸಿ ನೋಡುತ್ತಿದೆ.[೫೭]

ಇನ್ನೊಂದು ಮುದ್ರೆಯಲ್ಲಿ ಮರದಿಂದ ಬೇರ್ಪಟ್ಟು ಹೊರಬಂದು ನಿಂತಿದ್ದಾಳೆ. ಮರವಾಗಿದ್ದವಳು ರೂಪಾಂತರಗೊಂಡು ಮಾನುಷಾಕಾರವನ್ನು ಪಡೆದುಕೊಂಡಿದ್ದಾಳೆ. ಹಿಂದೆ ಮುದ್ರೆಯಲ್ಲಿ ಕಂಡುಬಾರದ ಅವಳ ಅಂಗಗಳು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಮೊಲೆಗಳು ಹಿಂದಿನ ಮುದ್ರೆಯಲ್ಲಿ ಕಂಡುಬರುವುದಲ್ಲಿ. ಆದರೆ ಈ ಮುದ್ರೆಯಲ್ಲಿ ಮೊಲೆಗಳು ಎದ್ದುಕಾಣುತ್ತವೆ. ಅಲ್ಲದೆ ದೇಹವು ಮನುಷ್ಯನದ್ದಾಗಿದ್ದರೆ, ಕೆಳಗಿನ ಭಾಗವು ಬಾಲವನ್ನು ಹೊಂದಿರುವ ಪ್ರಾಣಿಯದ್ದಾಗಿದೆ. ಕೊಂಬಿನಿಂದ ತಲೆಯು ಅಲಂಕರಿಸಲ್ಪಟ್ಟಿದೆ. ಮುಂದೆ ನಿಂತಿರುವ ಹುಲಿಯನ್ನು ಮುಟ್ಟುವಂತೆ ಬಾಗಿದ್ದಾಳೆ. ಇದು ವೃಕ್ಷದೇವತೆಯಾಗಿರುವಂತೆ ಪ್ರಾಣಿಗಳ ದೇವತೆಯಾಗಿಯೂ ಕಂಡುಬರುತ್ತದೆ.[೫೮]

ಹರಪ್ಪ ಸಂಸ್ಕೃತಿಯಲ್ಲಿ ಬೇರೆಲ್ಲಿಯೂ ಕಂಡುಬಾರದ ಇನ್ನೊಂದು ಆರಾಧನೆಯು ಕಂಡುಬರುವುದು. ಅದು ಯೋನಿ ಆರಾಧನೆ. ಹಿಂದಿನ ಮಾತೃ ಪರಂಪರೆಯಲ್ಲಿ ಮೊಲೆ, ದೊಡ್ಡದಾದ ಗರ್ಭ ಹಾಗೂ ದೊಡ್ಡದಾದ ಸೊಂಟದ ಭಾಗಗಳನ್ನು ಹೆಚ್ಚಾಗಿ ತೋರಿಸಲಾಗುತ್ತಿತ್ತು. ಅವು ಪೋಷಣೆ, ರಕ್ಷಣೆ ಹಾಗೂ ಹೊಸ ಸೃಷ್ಟಿಯನ್ನು

ಸಂಕೇತಿಸುತ್ತವೆ. ಎಲ್ಲವನ್ನು ಒಂದರಲ್ಲಿ ತೋರಿಸಿದರೆ, ಇಲ್ಲಿ ಯೋನಿಯೊಂದನ್ನು ವಿಶೇಷವಾಗಿ ತೋರಿಸಲಾಗಿದೆ. ಯೋನಿಯು ಹೊಸದನ್ನು ಸೃಷ್ಟಿಸುವ, ಆ ಮೂಲಕ ಎಲ್ಲಕ್ಕೂ ಚೈತನ್ಯತ್ವವನ್ನುಂಟು ಮಾಡುವುದಾಗಿದೆ. ಅಲ್ಲದೆ ಯೋನಿಯು ಭೂಮಿಯ ರೂಪವೇ ಆಗಿದೆ. ಇದರಿಂದ ಫಲವನ್ನು ಪಡೆಯಬಹುದು, ರಕ್ಷಣೆಯನ್ನು ಹೊಂದಬಹುದು, ತಾಯಿ ಹಾಲನ್ನು ಕೊಡುವ ರೀತಿಯಲ್ಲಿ ನೀರನ್ನು ಭೂಮಿಯಿಂದಲೇ ಪಡೆಯಬಹುದು. ಹೀಗೇ ಭೂಮಿ ಮತ್ತು ಯೋನಿಯ ಆರಾಧನೆಯು ಒಂದೇ ರೂಪವನ್ನು ಪಡೆಯಲಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಸಿಂಧೂ ನಾಗರಿಕತೆಯ ಜನರು ಮಾತೃದೇವತೆಯ ಆರಾಧನೆಯನ್ನು ಎಲ್ಲಾ ರೂಪಗಳಲ್ಲಿ ನೋಡಿದ್ದಾರೆ. ಭೂಮಿ ತಾಯಿಯಾಗಿ, ಮನುಷ್ಯನ ತಾಯಿಯಾಗಿ, ದೇವತೆಗಳ ತಾಯಿಯಾಗಿ, ವನ ದೇವತೆಯಾಗಿ, ಪ್ರಾಣಿಗಳ ದೇವತೆಯಾಗಿ, ವೃಕ್ಷ ದೇವತೆಯಾಗಿ, ಪಕ್ಷಿಗಳ ದೇವತೆಯಾಗಿ, ಹೀಗೆ ಅನೇಕ ರೂಪಗಳಿಂದ ಶಕ್ತಿಯ ಆರಾಧನೆಯನ್ನು ಮಾಡಿದ್ದಾರೆ.[೫೯]

೨.೩.೧. ವೇದಯುಗ

051661

ಆರ್ಯರು ಭಾರತಕ್ಕೆ ಸುಮಾರು ಕ್ರಿ.ಪೂ. ಸುಮಾರು ೨೦೦೦ದಿಂದ ೧೫೦೦ ವರ್ಷಗಳ ಪೂರ್ವದಲ್ಲಿ ಬಂದಿರಬೇಕೆಂದು ಅಂದಾಜಿಸಲಾಗಿದೆ. ಮೊದಲು ಉತ್ತರ ಭಾರತ ಹಾಗೂ ವಾಯುವ್ಯ ಭಾರತದಲ್ಲಿ ನೆಲಸಿದರು. ಹೀಗೆ ನೆಲೆನಿಂತ ಇವರು ತಮ್ಮದೇ ಆದ ಧರ್ಮ, ಸಂಸ್ಕೃತಿ ಹಾಗೂ ರಾಜಕೀಯ ಇತಿಹಾಸವನ್ನು ನಿರ್ಮಾಣ ಮಾಡಿದರು. ಅಲ್ಲದೆ ಮುಂದೆ ಇಡೀ ಭಾರತವನ್ನು ತಮ್ಮ ಪರಿಧಿಗೆ ತೆಗೆದುಕೊಂಡು ತಮ್ಮದೇ ಆದ ಛಾಪನ್ನು ಮೂಡಿಸಿ, ಹಿಂದೆ ಇದ್ದ ಎಲ್ಲ ಸಂಸ್ಕೃತಿಗಳು ಮಸುಕಾಗುವಂತೆ ಮಾಡಿದರು. ಸಿಂಧೂ ಸಂಸ್ಕೃತಿಯು ಇವರ ದಬ್ಬಾಳಿಕೆಯಿಂದಲೇ ನಾಶವಾಯಿತು ಅಥವಾ ಕ್ಷೀಣಿಸಿತಲ್ಲದೆ ದಕ್ಷಿಣಕ್ಕೆ ಸರಿಯಿತು. ಆರ್ಯರ ಇತಿಹಾಸವನ್ನು ಪುನಾರಚಿಸಲು ಯಾವುದೇ ಪ್ರಾಚ್ಯಾವಶೇಷಗಳು ಸಿಂಧೂ ನಾಗರಿಕತೆಯಲ್ಲಿ ದೊರಕುವಂತೆ ದೊರಕುವುದಿಲ್ಲ. ಈ ಸಂಸ್ಕೃತಿಯು ನೆಲೆನಿಂತ ಸಂಸ್ಕೃತಿಯಲ್ಲ. ಅಲೆಮಾರಿಗಳಾದ ಪಶುಪಾಲನೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡಿದ್ದವರು. ಇವರ ಇತಿಹಾಸವನ್ನು ನೋಡುವ ಆಕರವೆಂದರೆ ವೇದಗಳು. ಇವರದು ಮೂಲತಃ ತೋಂಡಿ ಸಂಸ್ಕೃತಿ. ಬಾಯಿಮಾತಿನಿಂದಲೇ ವೇದಗಳು ಉಳಿದುಬಂದಿವೆ.

ಗ್ರಂಥಾಲಯ
ವಿಶ್ವವಿದ್ಯಾಲಯ,

ವೈದಿಕರು ಅಥವಾ ಆರ್ಯರು ಮೂಲತಃ ಕೃಷಿಕರಲ್ಲ. ಅವರಿನ್ನೂ ಪ್ರಾಣಿಗಳ ಸಾಕಾಣಿಕೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡವರು. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ತಿರುಗುವ ವಲಸೆಗಾರರ ವರ್ಗಕ್ಕೆ ಸೇರಿದವರು. ಪೂರ್ಣವಾಗಿ ಪುರುಷ ಪ್ರಧಾನವಾದ ಈ ಸಂಸ್ಕೃತಿಯಲ್ಲಿ ಪುರುಷ ಕೇಂದ್ರಿತವಾದ ವ್ಯವಸ್ಥೆಯೇ ಇವರ ಸಾಹಿತ್ಯದಲ್ಲಿ ಕಂಡುಬರುತ್ತದೆ. ಇವರ ಬಗೆಗೆ ದೊರೆತಿರುವ ಅತೀ ಪ್ರಾಚೀನ ಆಕರವೆಂದರೆ

'ಋಗ್ವೇದ'. ಋಗ್ವೇದ ಸಾಹಿತ್ಯದಲ್ಲಿ ಸುಮಾರು ೧೦,೪೬೨ ಋಕ್ಕುಗಳಲ್ಲಿ ಕೃಷಿಯನ್ನು ಉಲ್ಲೇಖಿಸುವುದು ೨೫ ಬಾರಿ ಮಾತ್ರ. ಅದರಲ್ಲೂ ೨೨ ಋಕ್ಕುಗಳು ನಂತರದ ಕಾಲಕ್ಕೆ ಸೇರಿದವು. ಆದ್ದರಿಂದ ಆರ್ಯರು ಪೂರ್ಣವಾಗಿ ಕೃಷಿಯೇತರ ಸಮಾಜದವರು, ಅದರಲ್ಲೂ ಪಶುಪಾಲಕರಾಗಿದ್ದವರು. ಗ್ರಾಮ ಕೇಂದ್ರಿತವಾದ ವ್ಯವಸ್ಥೆಯನ್ನು ಇನ್ನು ಅವರು ಹೊಂದಿರಲಿಲ್ಲ ಎಂಬುದು ಗೋಚರಿಸುತ್ತದೆ. ಆದರೆ ಇಲ್ಲಿಯ ಮೂಲ ಜನಾಂಗವೆಂದು ಕರೆಯುವ ನಿವಾಸಿಗಳು ಈಗಾಗಲೇ ಗ್ರಾಮವ್ಯವಸ್ಥೆಯನ್ನು ಮೀರಿ ನಗರ ಸಂಸ್ಕೃತಿಯತ್ತ ಹೋದವರಾಗಿದ್ದವರು. ಅಲ್ಲದೆ, ಕೃಷಿಪ್ರಧಾನ ವ್ಯವಸ್ಥೆಯನ್ನು ಹೊಂದಿದವರಾಗಿದ್ದ ಇವರದು ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಾಗಿತ್ತು.[೬೧] ಆರ್ಯರು ಮೂಲತಃ ನಿಸರ್ಗದೇವತೆಗಳ ಆರಾಧಕರು. ಗಾಳಿ, ಮಿಂಚು, ಬೆಂಕಿ, ಬೆಳಕನ್ನೆ ಮನುಷ್ಯನ ರೂಪಕೊಟ್ಟು ಅಥವಾ ರೂಪಾಂತರಗೊಳಿಸಿಕೊಂಡು ಆರಾಧಿಸುವುವರಾಗಿದ್ದವರು.ಸೂರ್ಯ, ಅಗ್ನಿ, ವರುಣ, ಮುಂತಾದವರು ಇಲ್ಲಿ ಪ್ರಮುಖರು. ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಆರ್ಯರ ಇತಿಹಾಸ ಮಬ್ಬಾಗಿದೆ ಎನ್ನಲಾಗಿದೆ. ಕಾರಣ ವೇದಗಳಲ್ಲಿ ಹೆಚ್ಚಾಗಿ ಕಾಣಬರುವುದು ಧಾರ್ಮಿಕ ವಿಚಾರಗಳು ಮಾತ್ರ. ಬಹುಪಾಲು ಮಂತ್ರಗಳು ದೇವತೆಗಳನ್ನು ಕುರಿತು ಪ್ರಾರ್ಥನೆ ಹಾಗೂ ಸೋಮದ ತಯಾರಿಕೆಯನ್ನು ಕುರಿತಂತೆ ಇವೆ. ಸಾಮಾಜಿಕ ಅಂಶಗಳು ಅಲ್ಲಿ ಇಲ್ಲಿ ಚದುರಿದಂತೆ ಇದ್ದು ಅವುಗಳನ್ನು ಹೆಕ್ಕಿ ತೆಗೆದು, ಅವುಗಳಿಗೆ ಒಂದು ರೂಪವನ್ನು ಕೊಡಬೇಕಾಗುತ್ತದೆ.

ಆರ್ಯರ ಸಮಾಜವು ಪಿತೃಪ್ರಧಾನ ಸಮಾಜವಾಗಿತ್ತು ಎಂಬುದು ತಿಳಿದ ವಿಷಯ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿಗೆ ಅಂತಹ ಒಳ್ಳೆಯ ಸ್ಥಾನ ಇರುವುದಿಲ್ಲ. ಆದರೂ ಋಗ್ವೇದ ಕಾಲದ ಮಹಿಳೆಯರ ಬಗೆಗೆ ಅಷ್ಟೊಂದು ನಿಖರವಾದ ಮಾಹಿತಿ ದೊರೆಯದು. ಇರುವ ಆಧಾರಗಳಿಂದ ನೋಡುವುದಾದರೆ, ಋಗ್ವೇದದಲ್ಲಿ ಮಹಿಳೆಯರು ಧಾರ್ಮಿಕ ಕ್ರಿಯೆಗಳಲ್ಲಿ ಭಾಗವಹಿಸುತ್ತಿದ್ದರು.ಯುದ್ಧದಲ್ಲಿ ಸಹ ಭಾಗವಹಿಸಿದ ಉಲ್ಲೇಖಗಳು ಋಗ್ವೇದದಲ್ಲಿ ಕಂಡುಬರುತ್ತವೆ. ಗಂಡನಷ್ಟೆ ಪ್ರಮುಖವಾದ ಸ್ಥಾನವನ್ನು ಕೆಲವು ಕಡೆ ಪಡೆದಿರುವುದಿದೆ. ಆದರೆ, ಅದು ಅವನ ಸಹಧರ್ಮಿಣಿಯಾಗಿ ಮಾತ್ರ. ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿರುವುದು ಸಾಧ್ಯವಾಗಿಲ್ಲ ವೈದಿಕ ಮಹಿಳೆಯರಿಗೆ.(ಕೊನೆಯ ಅಧ್ಯಾಯದಲ್ಲಿ ಸಮಾಜವನ್ನು ಕುರಿತು ನೋಡುವಾಗ ವಿವರವಾದ ಚರ್ಚೆ ಬರುತ್ತದೆ.) ಆದರೆ ಸ್ಥಾನೀಯ ಮಹಿಳೆಯರು ಸಮಾಜದಲ್ಲಿ ಪ್ರಧಾನವಾದ ಪಾತ್ರವಹಿಸಿದ್ದರು. ಅಲ್ಲದೆ, ಮಾತೃದೇವತೆಯ ಆರಾಧನೆಯು ಅವ್ಯಾಹತವಾಗಿ ಮುಂದುವರೆದಿತ್ತು. ಟೈಲರ್ ಅವರು ಹೇಳುವಂತೆ; there is no doubt that Mother-goddess worship continued among the lower orders and non-Aryans right through the period of Aryan predominance.[೬೧]

ಋಗ್ವೇದದ ಕಾಲಕ್ಕಾಗಲೇ ದೇವತೆಗಳು ಮಾನುಷಾಕಾರವನ್ನು (objectified personifications of natural forces) ಪಡೆಯುತ್ತಿದ್ದು ನಿಸರ್ಗದಲ್ಲಿ ಕಾಣುವ ವಸ್ತುಗಳೇ ಅವರಿಗೆ ದೇವರ ರೂಪವಾಗಿ

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಂಡುಬರುತ್ತವೆ. ಉದಾಹರಣೆಗೆ ಗಾಳಿ ಮಿಂಚು, ಬೆಂಕಿ ಆಕಾಶ. ಟೋಟೆಮ್, ಅಥವಾ ಕುಲದೇವತಾ ಪದ್ಧತಿ ಯಾವುದೋ ಒಂದು ದೇಶದ ವಿಶಿಷ್ಟ ಸಾಂಪ್ರದಾಯವಾಗಿ ಎಂದೂ ಇದ್ದದ್ದಿಲ್ಲ. ಪ್ರತಿಯೊಂದು ನಾಡಿನ ಪ್ರಾಚೀನ ನಿವಾಸಿಗಳೂ ತಮ್ಮ ಕಲ್ಪನೆಯನ್ನು ವಿವಿಧ ರೂಪಗಳಲ್ಲಿ ಚಿತ್ರಿಸಿದರು. ಪಶುಗಳು, ವೃಕ್ಷಗಳು ಅಥವಾ ಪರ್ವತಗಳು, ನದಿಗಳು ಮತ್ತು ಝರಿಗಳ ಉಪಾಸನೆ ಪ್ರತಿಯೊಂದು ಧರ್ಮಕ್ಕೂ ಸಾಮಾನ್ಯವಾಗಿ ಆಧಾರ ಭೂತವಾಗಿವೆ. ಇಡೀ ಮಧ್ಯ ಏಷ್ಯದಲ್ಲಿ ಬಹುಶಃ ದಕ್ಷಿಣ ಐರೋಪ್ಯ ರಾಷ್ಟ್ರಗಳಲ್ಲಿ, ಪೂರ್ವದಲ್ಲಿ ಸಿಂಧು ಪ್ರಾಂತ್ಯದವರೆಗೆ ಒಂದಲ್ಲ ಒಂದು ರೂಪದಲ್ಲಿ ಮಾತೃದೇವತೆಯ ಉಪಾಸನೆ ನಡೆಯುತ್ತಲೇ ಇತ್ತು. ಆರ್ಯರಂತೆಯೇ ಇತರ ಸಮುದಾಯಗಳು ಪ್ರಕೃತಿಯ ದೇವತೆಗಳನ್ನು ಪೂಜಿಸುತ್ತ ಬಂದಿದ್ದಾರೆ.

ಋಗ್ವೇದದ ಕಾಲದಲ್ಲಿ ಹಲವಾರು ಸ್ತ್ರೀಯರನ್ನು ದೇವತೆಯ ರೂಪದಲ್ಲಿ ನೋಡಲಾಗಿದೆ. ಇಲ್ಲಿ ಕೆಲವು ಬಾರಿ ಗಂಡನ ಮಡದಿಯಾಗಿ ಬಂದರೆ, ಕೆಲವು ಸಲ ಅದೇ ಹೆಣ್ಣು ದೇವತೆಯ ರೂಪದಲ್ಲಿ ಕಾಣುತ್ತಾಳೆ. ಪ್ರಧಾನವಾಗಿ ನೋಡುವುದಾದರೆ, ಮಾತೃದೇವತೆಯರು ನಿಸರ್ಗದಿಂದಲೇ ಬಂದಿರುವ ದೇವತೆಯರಾಗಿದ್ದಾರೆ. ವಿಶ್ವಸೃಷ್ಟಿಯ ರಚನೆಯಲ್ಲಿ ಕೆಲವು ದೇವತೆಗಳು ಕಂಡುಬಂದರು ಪ್ರಧಾನ ಪಾತ್ರವಹಿಸದೇ ಗಂಡಿನ ಅಧೀನತೆಯಲ್ಲಿ ಬರುತ್ತಾಳೆ. ಅದಿತಿಯಂತಹ ದೇವತೆಯು ಸ್ವತಂತ್ರವಾಗಿ ಕಂಡುಬಂದರು, ಅದು ನಂತರದ ಕಾಲದಲ್ಲಿ ಬ್ರಹ್ಮನ ನಂತರದ ಸ್ಥಾನವನ್ನು ಪಡೆಯುತ್ತಾಳೆ. ಆದರೂ, ಇಲ್ಲಿ ಕಂಡುಬರುವ ದೇವತೆಗಳು ಬೀಜ ರೂಪದ ದೇವತೆಗಳಾಗಿದ್ದಾರೆ. ಅದು ಮುಂದೆ ಹಿಂದು ಪರಂಪರೆಯು ರೂಪುಗೊಂಡಾಗ ಸ್ಥಳೀಯ ದೇವತೆಗಳೊಂದಿಗೆ ಕೆಲವು ದೇವತೆಗಳು ಸೇರಿಕೊಂಡು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಾರೆ. ಆರ್ಯರ ಕೆಲವು ದೇವತೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾರೆ.

ಋಗ್ವೇದದಲ್ಲಿ ಹಲವಾರು ದೇವತೆಯರನ್ನು ಗುರುತಿಸಬಹುದು. ಡೆವಿಡ್ ಕಿನ್ಸ್ಲೆ ಅವರು ಈ ಆರು ಪ್ರಧಾನ ದೇವತೆಗಳನ್ನು ಕೆಳಗೆ ಕಾಣಿಸಿರುವ ರೀತಿಯಲ್ಲಿ ವಿಂಗಡಿಸಿಕೊಳ್ಳುತ್ತಾರೆ.[೮]

೧. ಉಪಕಾರ ಮಾಡುವ, ಕರುಣೆ, ಮಮತೆ ಹಾಗೂ ಕ್ಷಮಿಸುವ ತಾಯಿಯ ರೂಪದಲ್ಲಿರುವ ದೇವತೆಗಳು. ಇಲ್ಲಿ ಅದಿತಿ, ವಾಕ್, ವಿರಾಜ್, ಮುಂತಾದವರು.

೨. ಸೌಂದರ್ಯ, ಕನ್ಯೆಯಾಗಿದ್ದು, ತಾಯ್ತನ ತೋರಿಸುವ ದೇವತೆಗಳು. ಉಷಸ್ ರೀತಿಯ ದೇವತೆಗಳು

೩. ಇನ್ನೊಂದು ಮಾತೃದೇವತೆಯರೆಂದರೆ, ಪಾಲನೆ, ಪೋಷಣೆ, ಅಥವಾ ರಕ್ಷಣೆಯನ್ನು ಕೊಡುವ ದೇವತೆಗಳು. ಸರಸ್ವತಿ, ಆಪ್‌ದೇವತೆ, ಮುಂತಾದವರು.

ಲ್ಯಾನ್ಸ್ ಗಟ್‌ಊಡ್ ಅವರು ವೇದಗಳಲ್ಲಿ ಕಂಡು ಬರುವ ದೇವತೆಗಳನ್ನು ಸ್ವತಂತ್ರ, ಅರೆ ಸ್ವತಂತ್ರ, ಹಾಗೂ ಸಂಪೂರ್ಣವಾಗಿ ಅಧಿನದಲ್ಲಿ ಇರುವ ದೇವತೆಗಳೆಂದು ನೋಡುತ್ತಾರೆ. ಅಥವಾ ಮದುವೆಯಾಗದ, ಮದುವೆಯಾದ ಹೆಂಡತಿಯರ ರೂಪದಲ್ಲಿ ನೋಡುತ್ತಾರೆ. ಅದಿತಿ, ಉಷಸ್ ದೇವತೆಯರು ಸ್ವತಂತ್ರವಾಗಿ ಕಂಡುಬಂದರೆ, ಪೃಥುವಿಯು ದ್ಯೌದ ಪತ್ನಿಯಾಗಿದ್ದಾಳೆ. ಅದೇ ರೀತಿ ಸಚಿ ಸಂಪೂರ್ಣವಾಗಿ ಇಂದ್ರನ ಅಧೀನ ದೇವತೆಯಾಗಿದ್ದಾಳೆ. ಋಗ್ವೇದದಲ್ಲಿ ಕಂಡುಬರುವ ದೇವತೆಗಳು ಸಂಪೂರ್ಣವಾಗಿ ತಮ್ಮದೆ ಆದ ಅಸ್ತಿತ್ವವನ್ನು ಹೊಂದಿರುವುದು ಕಂಡುಬರುವುದಿಲ್ಲ. ಉಷಸ್ ದೇವತೆಯು ಸ್ವತಂತ್ರವಾಗಿ ಕಂಡುಬಂದರೂ ಸಹ ಇಂದ್ರನ ಗಧಾಘಾತಕ್ಕೆ ಅವಳು ಬಲಿಯಾಗಬೇಕಾಗಿ ಬರುತ್ತದೆ. ಮುಂದೆ ಯುದ್ಧವೊಂದರಲ್ಲಿ ಇಂದ್ರನಿಗೆ ಸೋತು ಶರಣಾಗುತ್ತಾಳೆ.

ಉಷಸ್

ಋಗ್ವೇದದಲ್ಲಿ ಎದ್ದುಕಾಣುವ ದೇವತೆಯೆಂದರೆ ಉಷಸ್ ದೇವತೆ. ಆರ್ಯರಿಗೆ ಅತ್ಯಂತ ಪ್ರಿಯವಾದ ದೇವತೆಯಾಗಿ ಕಾಣುತ್ತಾಳೆ. ಮುಂಜಾವಿನ ಬೆಳಕನ್ನು ಉಷಸ್ ಎಂದು ಕರೆಯಲಾಗಿದೆ. ತೆರದ ವಾತಾವರಣದಲ್ಲಿ ಜೀವಿಸುತ್ತಿದ್ದ ಆರ್ಯರಿಗೆ ಪ್ರಕೃತಿಯ ಈ ಚೈತನ್ಯದಾಯಕವಾದ ಪ್ರಾತಃಕಾಲದ ಉಷಾಕಿರಣವು ಮನಸ್ಸನ್ನು ಸೆಳೆದದ್ದರಲ್ಲಿ ಅನುಮಾನವಿಲ್ಲ. ಪ್ರಾತಃಕಾಲದ ಕಿರಣಗಳನ್ನು ಮಾನುಷ ರೂಪಕೊಟ್ಟು ಆರಾಧಿಸಲಾಗಿದೆ. ಸುಮಾರು ನಲವತ್ತಕ್ಕೂ ಹೆಚ್ಚು ಮಂತ್ರಗಳಲ್ಲಿ ಉಷಸ್ ದೇವತೆಯನ್ನು ಸ್ಮರಿಸಲಾಗಿದೆ. ಅಲ್ಲದೆ ೨೦ ಸ್ವತಂತ್ರವಾದ ಋಕ್‌ಗಳಲ್ಲಿ ಸ್ತುತಿಸಲಾಗಿದೆ. ವೇದಗಳಲ್ಲಿ ಇಷ್ಟೊಂದು ವ್ಯಾಪಕವಾದ ಪ್ರಮಾಣದಲ್ಲಿ ಇತರ ದೇವತೆಯರನ್ನು ಸ್ತುತಿಸಿರುವುದು ಕಂಡುಬರುವುದಿಲ್ಲ. ಮ್ಯಾಕ್ಡೊನೆಲ್ ಅವರು ಹೇಳುವಂತೆ; Usas is the most graceful creation of Vedic poetry and there is no more charming figure in the descriptive religious lyrics of any other literature.[೬೩]

ಋಗ್ವೇದದಲ್ಲಿ ಉಷಸ್ ದೇವತೆಯನ್ನು ದಿವ್ಯಕನ್ಯೆಯೆಂದು, ಪ್ರತಿನಿತ್ಯವೂ ಹೊಸತನವನ್ನು ತರುವ ಚಕ್ರಗತಿಯನ್ನು ಹೊಂದಿದವಳೆಂದು ವರ್ಣಿಸಲಾಗಿದೆ.[೬೪] ಜಗತ್ತಿನ ಚರಾಚರಗಳಿಗೆ ನವಶಕ್ತಿಯನ್ನು ಕೊಡುವವಳು, ಆ ಮೂಲಕ ಜೀವಿಗಳ ಉಸಿರಾಗಿರುವವಳು ಹಾಗೂ ಜೀವಾಳವಾಗಿರುವವಳು ಉಷಸ್ ದೇವತೆಯೆಂದು ಕರೆಯಲಾಗಿದೆ.[೬೫]ಉಷಸ್ ದೇವತೆಯು ಚಲಿಸುವ ಚೈತನ್ಯದಾಯಕಳಾಗಿದ್ದು, ಪ್ರತಿಯೊಂದನ್ನು ಚೇತನಗೊಳಿಸುವವಳಾಗಿದ್ದಾಳೆ. ಯಾಕೆಂದರೆ ಬೆಳಕು ಎಲ್ಲಾ ಜೀವಿಗಳಿಗೂ ಚೈತನ್ಯದಾಯಕವಾದುದಾಗಿದೆ.[೬೬] ಪ್ರತಿಯೊಂದು ದಿನವು ನಿಯತವಾಗಿ ತನ್ನ ದಿಕ್ಕನ್ನು, ಚಲನೆಯನ್ನು ಕರಾರುವಾಕ್ಕಾಗಿ ನಡೆಸುವವಳು ಆಗಿದ್ದಾಳೆ.[೬೭] ವಿಶ್ವದ ಜನತೆಯು

ದೇವರಿಗೆ ಹವಿಸ್ಸನ್ನು ಅರ್ಪಿಸುವುದು, ಅದು ತಪ್ಪದಂತೆ ನಿಯತವಾಗಿ ನಡೆಯುವಂತೆ ಮಾಡುವ ಹಾಗೂ ಆ ಮೂಲಕ ದೇವತೆಗಳನ್ನು ತೃಪ್ತಿಪಡಿಸುವವಳಾಗಿದ್ದಾಳೆ.[೨೮] ಉಷಸ್ ದೇವತೆಯು ಅತ್ಯಂತ ಸುಂದರವಾಗಿದ್ದು, ಉಲ್ಲಾಸವನ್ನುಂಟುಮಾಡುವ ಉಡುಗೆಯೊಂದಿಗೆ ಕಂಗೊಳಿಸುತ್ತಾಳೆ.[೨೯] ಕನ್ಯೆಯಾಗಿರುವ ಇವಳು, ತನ್ನ ತಾಯಿಯಿಂದ (ಸೂರ್ಯ್ನ) ಅಲಂಕರಿಸಲ್ಪಟ್ಟಿದ್ದಾಳೆ.[೩೦] ಪ್ರತಿ ನಿತ್ಯವೂ ಪೂರ್ವದಿಂದ ಅನಾವರಣಗೊಳ್ಳುತ್ತಾಳೆ.[೩೧] ಆಗತಾನೆ ಶುಭ್ರವಾಗಿ ಮೈತೊಳದಂತೆ ದೇದೀಪ್ಯಮಾನವಾಗಿ ಕಂಗೊಳಿಸುವ ಮನೋಹರವಾದ ಬೆಳಕಿನಿಂದ ಕತ್ತಲನ್ನೋಡಿಸಿ ಜಗತ್ತಿಗೆ ಬೆಳಕನ್ನುಂಟುಮಾಡುವ ಶಕ್ತಿಯನ್ನು ಹೊಂದಿರುವವಳು ಆಗಿದ್ದಾಳೆ.[೩೨] ಮನುಷ್ಯರನ್ನು ಮಕ್ಕಳಂತೆ ಜೋಪಾನಮಾಡುವವಳಾಗಿದ್ದಾಳೆ.[೩೩] ಅಂತೆಯೇ ಜಗತ್ತನ್ನು ಕೂಡಾ. ಜನರಿಗೆ ಒಳಿತನ್ನು ತರುವವಳು,[೩೪] ಅನ್ನವನ್ನುಂಟುಮಾಡುವವಳಾಗಿದ್ದಾಳೆ.[೩೫] ಮನುಷ್ಯರನ್ನು ವೈರಿಗಳಿಂದ, ರೋಗಗಳಿಂದ ರಕ್ಷಿಸುವವಳು, ಮಾರ್ಗದರ್ಶಕಳೂ ಕೂಡಾ ಆಗಿದ್ದಾಳೆ.[೩೬]

ಉಷಸ್ ದೇವತೆ ಮಾನವನ ಪ್ರತಿನಿತ್ಯದ ಜೀವನಕ್ಕೆ ಅತ್ಯಂತ ಅವಶ್ಯಕವಾದವಳೇ ಆಗಿದ್ದಾಳೆ. ಪ್ರಕೃತಿಯ ಅದಮ್ಯತೆ ಇರುವುದೇ ಬೆಳಕಿನಲ್ಲಿ. ಅದಮ್ಯ ಶಕ್ತಿಯ ಪೂರ್ವಭಾವಿಯಾಗಿ ಬರುವ ಉಷಸ್ ದಿನನಿತ್ಯದ ಚಟುವಟಿಕೆಗಳ ಪ್ರಾರಂಭದ ಸಂಕೇತ. ಸೂರ್ಯನಿಗೂ ಉಷಸ್‌ಳಿಗೂ ವೇದಗಳಲ್ಲಿ ಸಂಬಂಧವನ್ನು ಕಲ್ಪಿಸಲಾಗಿದೆ. ಸೂರ್ಯನು ಉಷೆ ಬಂದ ನಂತರದಲ್ಲಿ ಬರುವುದರಿಂದ ಸೂರ್ಯನನ್ನು ಮಗನೆಂದು ಭಾವಿಸಲಾಗಿದೆ.[೩೭] ಅಲ್ಲದೆ ಉಷೆಯನ್ನು ಸೂರ್ಯನ ಮಡದಿ ಎಂದು ಕರೆಯಲಾಗಿದೆ.[೩೮] ಉಷಸಳು ಸೂರ್ಯನಿಗೆ ದಾರಿಯನ್ನು ತೋರಿಸುವುದರಿಂದ. ರಾತ್ರಿಯೂ ಇವಳ ಅಕ್ಕನೆಂದು, ಆಕಾಶದಲ್ಲಿ ಜನ್ಮಿಸಿದ ಸಂಬಂಧ ಸ್ವರ್ಗದೇವತೆಯಾಗಿದ್ದಾಳೆ. ಇಂದ್ರನ ಕೂಡ ಇವಳ ಸಂಬಂಧ ಅಷ್ಟೇನೂ ಸುಮಧುರವಾಗಿ ಇಲ್ಲ. ಇಂದ್ರನು ಇವಳ ಮೇಲೆ ಆನೇಕ ಭಾರಿ ಆಕ್ರಮಣ ಮಾಡಿದಂತೆ ಋಗ್ವೇದದಲ್ಲಿ ವರ್ಣಿಸಲಾಗಿದೆ. ಋಗ್ವೇದದ ಹನ್ನೊಂದನೆಯ ಮಂಡಲದ ೩ಂನೆಯ ಸೂಕ್ತದಲ್ಲಿ "ಬಲಿಷ್ಠನು ಬಲಾಢ್ಯನು ಆದ ಇಂದ್ರನು ಆಕಾಶಪುತ್ರಿಯನ್ನು ಹೊಡೆದು ಅಪಮಾನ ಮಾಡಿದನು. ಘನತೆಯನ್ನು ಹೊಂದಿದ ಅವಳ ರಥವನ್ನು ಹಾಳುಮಾಡಿದನು, ಅಲ್ಲಿಂದ ಉಷಸ್ ಓಡಿಹೋದಳು." ಇಂದ್ರ ಹಾಗೂ ಅಗ್ನಿಯು ಕಳೆದು ಹೋದ ಉಷೆಯನ್ನು ಬೇಡಿ ಪಡೆದರು.

ಒಂದು ಕಾಲಕ್ಕೆ ಅದು ಋಗ್ವೇದದ ಆರಂಭಕಾಲದಲ್ಲಿ ಅತ್ಯಂತ ಹೆಮ್ಮೆಯಿಂದ ಮೆರೆದ ಉಷಾಳು ಇಂದ್ರನ ಪ್ರಾಭಲ್ಯದಿಂದ ಮರೆಯಾಗಲು ಕಾರಣವಾಯಿತು.ಇದು ಅವಳ ಅವನತಿಯ ಸೂಚನೆಯು ಆಗಿದೆ. ಉಷಸ್ ದೇವತೆಯು ಇಂದ್ರನ ಅಧೀನ ದೇವತೆಯಾಗಿಯೂ ನಂತರದಲ್ಲಿ ಸೂರ್ಯನ ಪಕ್ಕಕ್ಕಿರುವ ಪರಿವಾರ ದೇವತೆಯಾಗಿ ಹೋಗುತ್ತಾಳೆ. ಋಗ್ವೇದದ ಆರಂಭಕಾಲದಲ್ಲಿ ಸ್ತ್ರೀಯರಿಗೆ ಸ್ವಲ್ಪ ಮಟ್ಟಿನ ಸ್ವಾತಂತ್ರ್ಯವಾದರೂ ಇತ್ತು. ಅದನ್ನು ಇಂದ್ರ ಕಿತ್ತುಕೊಂಡ. ಇದು ಎಲ್ಲಾ ಸ್ತ್ರೀ ದೇವತೆಗಳಿಗೂ ಅನ್ವಯವಾಗುತ್ತದೆ.

ಆಪ್ ದೇವತೆ

ವೇದಗಳಲ್ಲಿ ಕಂಡುಬರುವ ಮತ್ತೊಂದು ಪ್ರಮುಖ ದೇವತೆಯೆಂದರೆ, ಅಪ್ ದೇವತೆ. ಭಾವನಾ ಸ್ವರೂಪದ ದೇವತೆಗಳಲ್ಲಿ ಇವಳು ಒಬ್ಬಳು. ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿರುವ ಕೆಲವೇ ದೇವತೆಗಳಲ್ಲಿ ಇವಳು ಒಬ್ಬಳು. ವೇದಗಳು ಇವಳನ್ನು ಆಕಾಶದೇವತೆಯಾಗಿ, ಭೂಮಿಯ ಆಳದಲ್ಲಿರುವ ಹಾಗೂ ಭೂಮಿಯ ಮೇಲಿರುವ ರೂಪಗಳಲ್ಲಿ ನೋಡಿದೆ. ನದಿ,ತೊರೆಗಳ ರೂಪದಲ್ಲಿ, ಹಾಗೂ ಭೂಮಿಯ ಆಳದಲ್ಲಿರುವ, ಮಳೆಯ ರೂಪದಲ್ಲಿ ನೆಲಕ್ಕೆ ನೀರಿನ ರೂಪದಲ್ಲಿ ಬೀಳುವ ದೇವತೆಯಾಗಿದ್ದಾಳೆ. ಆಪ್ ಅಥವಾ ನೀರು ಮನುಷ್ಯನ ಕಲ್ಮಶಗಳನ್ನು ತೊಳೆಯುತ್ತದೆ. ಅಲ್ಲದೆ ಮನುಷ್ಯನನ್ನು ಸಂಸ್ಕರಿಸುತ್ತದೆ, ಅಥವಾ ಪರಿಶುದ್ಧಮಾಡುತ್ತದೆ. ಮನುಷ್ಯ, ಸಸ್ಯವರ್ಗಕ್ಕೆ ಹಾಗೂ ಪ್ರಾಣಿ ಪ್ರಪಂಚಕ್ಕೆ ನೀರನ್ನು ಅಥವಾ ಚೈತನ್ಯದಾಯಕವಾದ ಜೀವರಸವನ್ನು ಧಾರೆಯೆರೆಯುತ್ತದೆ. ರೋಗಗಳನ್ನು ತೊಳೆಯುವ ಗುಣವನ್ನು ನೀರು ಹೊಂದಿದೆ. ನೀರು ಸಮೃದ್ಧಿಯನ್ನು ತನ್ನಲ್ಲಿ ಅಂತಸ್ಥಗೊಳಿಸಿಕೊಂಡಿರುವುದರಿಂದ ಇದನ್ನು ದೇವತೆಯನ್ನಾಗಿ ನೋಡಲಾಯಿತು. ನೀರು ಭದ್ರತೆ, ಶಕ್ತಿ, ವಾಸಿಮಾಡುವ ಅಥವಾ ಗುಣಪಡಿಸುವ ಹಾಗೂ ಪರಿಶುದ್ಧಗೊಳಿಸುವ ಶಕ್ತಿ ಅಥವಾ ಅಮೃತತತ್ತ್ವವನ್ನು ಹೊಂದಿದ್ದಾಳೆ. ಋಕ್‌ನಲ್ಲಿ ನೀರನ್ನು ದೇವಿಯೆಂದು ಕರೆದು, ತಮ್ಮ ದನಕರುಗಳಿಗೆ ಕುಡಿಯುವ ನೀರಾಗಿ ತೊರೆಗಳಲ್ಲಿ ಹರಿದು ಬಾ ಎಂದು ಕರೆಯಲಾಗಿದೆ. ನೀರಿನಲ್ಲಿ ಅಮೃತವಿದ್ದು, ಅದು ಮಾನವನಲ್ಲಿರುವ ರೋಗ ರುಜಿನಗಳನ್ನು ವಾಸಿಮಾಡುವಂತೆ ಕೋರುತ್ತದೆ.[೭೮] ಮತ್ತೊಂದು ಋಕ್‌ನಲ್ಲಿ "ಓ, ಮಾತೃಸಮಾನಳಾದ ಆಪ್ ದೇವತೆಯೇ, ನಮ್ಮನ್ನು ಪವಿತ್ರಗೊಳಿಸು, ನಮ್ಮಲ್ಲಿರುವ ಎಲ್ಲಾ ಕಲ್ಮಶಗಳನ್ನುತೊಳೆದು ಹಾಕು. ಶುಭ್ರರನ್ನಾಗಿ ಮಾಡು"[೭೯] ಎಂದು ವೈದಿಕ ಋಷಿಗಳು ಮೊರೆ ಇಟ್ಟಿದ್ದಾರೆ.

ನೀರನ್ನು ಜಗತ್ತಿನ ಪ್ರಥಮ ಸೃಷ್ಟಿಯೆಂದು ವೇದಗಳಲ್ಲ ನೋಡಳಾಗಿದೆ. ಅಂತೆಯೆ ಜಗತ್ತು, ಸ್ವರ್ಗ ಯಾವುದು ಇಲ್ಲದಂದು ಸರ್ವವೂ ನೀರಿನಿಂದ ಆವೃತ್ತವಾಗಿತ್ತು. ಅದರ ಗರ್ಭದಿಂದ ಅಸುರರು, ದೇವರು ಹುಟ್ಟಿಬಂದರು ಎಂದು ಮತ್ತೊಂದು ಋಕ್‌ನಲ್ಲಿ ಹೇಳಿದರೆ,[೮೦] ಇನ್ನೊಂದು ಋಕ್‌ನಲ್ಲಿ ನೀರಿನಿಂದ ಸರ್ವ ಜಗತ್ತು ಹುಟ್ಟಿತಂತೆ, ಅದೇ ಗರ್ಭದಿಂದ ಅಗ್ನಿಯು ಹುಟ್ಟಿ ಬಂದ. ಆ ಕಾರಣದಿಂದ ಆಪ್ ದೇವತೆಯು ಅಗ್ನಿಯ ತಾಯಿಯಾಗಿದ್ದಾಳೆ. ಸತ್ ಆಗಲಿ, ಅಸತ್ ಆಗಲಿ ಇಲ್ಲದಂದು, ಗಾಳಿ, ಆಕಾಶಗಳಿಗೂ ಅತೀತವಾದಂದು, ಅಂತ್ಯ ಆದಿಯಿಲ್ಲದಂದು, ಕತ್ತಲೆ ಬೆಳಕು ಇಲ್ಲದಂದು ಈ ಸಲೀಲದಿಂದ ತದ್ ಏಕಂ ಹುಟ್ಟಿತು. ಈ ಒಂದು ಅನೇಕವಾಗಿ ವಿಶ್ವಸೃಷ್ಟಿಯಾಯಿತು. ಹೀಗೆ ವೇದ ಕಾಲೀನ ಋಷಿಗಳು ಆಪ್ ದೇವತೆಗೆ ಜಗತ್ತಿನ ಸೃಷ್ಟಿಯಲ್ಲಿ ಮೊದಲನೆಯ ಸ್ಥಾನವನ್ನು ಕೊಟ್ಟಿದ್ದಾರೆ.

ಅದಿತಿ

ಅದಿತಿ ವೇದಕಾಲದ ಪ್ರಮುಖ ದೇವತೆ. ನಂತರದ ಪರಂಪರೆಯಲ್ಲಿ ಶಕ್ತಿಸ್ವರೂಪಿಣಿಯಾದ ಮಹಾದೇವಿಯು ಹೇಗೋ ಹಾಗೆ ಅದಿತಿಯು ವೇದಕಾಲದಲ್ಲಿ ಉಚ್ಛಸ್ಥಾನವನ್ನು ಹೊಂದಿದವಳಾಗಿದ್ದಳು. ಜಗತ್ತಿನ ಸೃಷ್ಟಿಕರ್ತೆಯಾಗಿ, ಆಕಾರ ರಹಿತಳಾಗಿ, ದೇವತೆಗಳ ತಾಯಿಯಾಗಿ, ಹಾಗೂ ಭೂಮಿಯ ಹಾಗೆ ಸಮೃದ್ಧಿಯ ಸಂಕೇತವಾಗಿ, ಹಸುವಿನ ರೀತಿಯಲ್ಲಿ ಸಮಸ್ತವನ್ನು ಕೊಡುವವಳಾಗಿ ವೇದಗಳಲ್ಲಿ ಕಂಡುಬರುತ್ತಾಳೆ. ಅದಿತಿ ಎಂಬುದೇ ಆದಿ ಇಲ್ಲದ್ದು, ಅಂತ್ಯವಿಲ್ಲದ್ದು, ದಿಶೆ ಇಲ್ಲದ್ದು, ಹೀಗೆ ಅದಕ್ಕೆ ಆಕಾರ, ಅಂತ್ಯ ಆದಿ ಯಾವುದು ಇಲ್ಲದ್ದು ಅದೆ ಅದಿತಿ. ವೇದದಲ್ಲಿ ಕಂಡುಬರುವ ಈ ಅದಿತಿ ರೀತಿಯ ದೇವತೆ ವೈದಿಕ ಸಾಹಿತ್ಯದಲ್ಲಿ ಮತ್ತೊಬ್ಬ ದೇವತೆ ಕಂಡುಬರುವುದಿಲ್ಲ. ಆ ಕಾರಣದಿಂದಲೆ; The Mother-Goddess conception may be said to reach its culmination when the abstract idea of the cosmic principle as the source of all creation is conceived as female.[೯]

ಅದಿತಿಯನ್ನು ದ್ಯಾವ, ಅದಿತಿ ಅಂತರಿಕ್ಷ, ಅದಿತಿ ಮಾತೃ, ಅದಿತಿ ಪಿತೃ, ಅವಳೆ ಮಗಳು, ಎಲ್ಲಾ ದೇವತೆಗಳೇ ಅವಳು, ಅವಳೆ ಪಂಚಕುಲಗಳು, ಅದಿತಿಯಿಂದ ಏನು ಹುಟ್ಟಲಿಲ್ಲ (ಜಾತ), ಏನು ಹುಟ್ಟಿತು(ಜನಿತ್ವಾ)[೧೦] ಎಂದು ಋಗ್ವೇದದ ಮಂತ್ರ ಆಶ್ಚರ್ಯಪಡುತ್ತದೆ. ಜಗತ್ತಿನ ಚರಾಚರಗಳೆಲ್ಲವು ಅದಿತಿಯೆ ಆಗಿದ್ದಾಳೆ. ಅವೆಲ್ಲವೂ ಅವಳ ಸೃಷ್ಟಿಯಾಗಿವೆ. ಅಥರ್ವವೇದದಲ್ಲಿ ಇದೇ ರೀತಿಯಲ್ಲಿ ಹೊಗಳಲಾಗಿದೆ. ಅಲ್ಲದೆ ವಾಜಸನೇಯಿ ಸಂಹಿತಾದಲ್ಲಿ ಅದಿತಿಯನ್ನು ಗರ್ಭಧರಿಸಬಲ್ಲ ವಾಜ(ಶಕ್ತಿ)ಯು ನೀನು, ನಿನ್ನನ್ನು ವಾಕ್‌ನಿಂದ ಸ್ತುತಿಸುತ್ತೇನೆ. ನಿನ್ನಲ್ಲಿ ವಿಶ್ವವೇ ಅಡಗಿದೆ (೫೧. ೯.೫) ಎಂದು ಹೊಗಳಲಾಗಿದೆ. ಅವಳನ್ನು ಪ್ರಾರ್ಥಿಸಿದರೆ ಮಕ್ಕಳನ್ನು, ಪಶುಸಂಪತ್ತನ್ನು, ಮತ್ತು ಸಂಪತ್ತನ್ನು ರಕ್ಷಿಸುತ್ತಾಳೆ ಎಂದು ಒಂದು ಮಂತ್ರದಲ್ಲಿ ಹೇಳಿದೆ. ಅದಿತಿ ಎಂಬುದೇ ಬಂದಗಳಿಲ್ಲದ್ದು, ಇಡೀ ವಿಶ್ವಕ್ಕೆ ವ್ಯಾಪಿತವಾದದ್ದು ಎಂಬರ್ಥಕೊಡುತ್ತದೆ. ಜಗತ್ತಿನ ಚರಾಚರಗಳನ್ನು ತನ್ನಲ್ಲಿ ಅಂತಸ್ತಗೊಳಿಸಿಕೊಂಡಿರುವ ಅದಿತಿಯು ಮಿತ್ರ ವರುಣರ ಹಾಗೂ ಆರ್ಯಮಾನ್‌ರ ತಾಯಿಯಾಗಿದ್ದಾಳೆ. ಅಷ್ಟೆ ಅಲ್ಲ, ಎಲ್ಲಾ ರಾಜರುಗಳ ತಾಯಿಯಾಗಿದ್ದಾಳೆ. ಶಕ್ತಿಶಾಲಿ, ವೀರರು, ಅತ್ಯಂತ ಶ್ರೇಷ್ಠರಾದ ಅಷ್ಟಾವಸುಗಳು ಅವಳ ಮಕ್ಕಳೇ.[೧೧] ಅದಿತಿಯನ್ನು ದಕ್ಷನ ತಾಯಿಯಾಗಿ ಕೆಲವು ಕಡೆ ಕಂಡುಬಂದರೆ, ಇನ್ನು ಕೆಲವು ಕಡೆ ಮಗಳಾಗಿ ಕಂಡುಬರುತ್ತಾಳೆ. ಋಗ್ವೇದದ ಕೊನೆಯ ಕಾಲಕ್ಕೆ ಬಂದಾಗ ಅದಿತಿಯ ಪ್ರಭಾವ ಕಡಿಮೆಯಾಗಿರುವುದನ್ನು ನೋಡಬಹುದು. ಅಲ್ಲದೆ ಹಿಂದೂ ಪರಂಪರೆಯ ನಂತರದಲ್ಲಿ ಶಕ್ತಿಯ ರೂಪದಲ್ಲಿ ಅದಿತಿಯು ಹೂತುಹೋಗುತ್ತಾಳೆ.

ಭೂಮಿ ಅಥವಾ ಪೃಥ್ವಿ

ಭೂಮಿ ಅಥವಾ ಪೃಥ್ವಿಯನ್ನು ವೇದಗಳಲ್ಲಿ ಮಾತೃ ಅಥವಾ ದೇವಿಯೆಂದು ಕರೆಯಲಾಗಿದೆ. ಭೂಮಿಯನ್ನು ಮಾತೃಸ್ವರೂಪಿಣಿಯೆಂದು ಶಿಲಾಯುಗದಿಂದಲೂ ತಿಳಿಯಲಾಗಿದೆ. ಸಿಂಧೂ ನಾಗರಿಕತೆಯಲ್ಲಿ ಕೂಡ ಭೂಮಿಯ ಆರಾಧನೆಯು ಪ್ರಬಲವಾಗಿತ್ತು. ಭೂಮಿಯನ್ನು ಹುಟ್ಟು ಸಾವುಗಳ ಪ್ರತೀಕವಾಗಿಯೇ ನೋಡಲಾಗಿದೆ. ಭೂಮಿಯನ್ನು ಮಾತೃದೇವತೆಯನ್ನಾಗಿ ನೋಡುವಲ್ಲಿ ಆರ್ಯರು ಹಿಂದೆ ಬಿದ್ದಿಲ್ಲ. ವೈದಿಕ ಪರಂಪರೆಯಲ್ಲಿ ಸಹ ಭೂಮಿಯು ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದ್ದಾಳೆ [೮೪] ಎಂದು ಹೇಳಲಾಗಿದೆ. ಈ ಮಾತು ನಿಜಕೂಡ. ಋಗ್ವೇದದಲ್ಲಿ ಭೂಮಿಯನ್ನು ತಮ್ಮ ಜೀವನ ನಡೆಸುವ ಮೂಲಭೂತ ವಸ್ತುವನ್ನಾಗಿ ನೋಡಲಾಗಿದೆ. ಹಾಗೂ ಭೌತಿಕವಾಗಿ ಮಾತೃ ಸ್ವರೂಪಿಣಿಯಾಗಿ, ವಿಶ್ವರೂಪಿಯಾಗಿ ನೋಡಲಾಗಿದೆ. ಅಲ್ಲದೆ ಅಥರ್ವವೇದದಲ್ಲಿ ಬರುವ ಪೃಥ್ವಿ ಸೂಕ್ತದಲ್ಲಿ ಪೃಥ್ವಿಯನ್ನು ತುಂಬಾ ಸೊಗಸಾಗಿ ಹೊಗಳಲಾಗಿದೆ.

> ... May Prthivi, who bears (osadhi) having varied powers, spread forth and accommodate us. . . may this earth on which what breathes and moves is active assign us precedence in drinking. There are four regions of this earth, on which food and men have sprung up and which bears abundantly breathing and moveing; may this earth bestow on us cattle, indeed, inexhaustibleness... May she yield precious nectar; may she sprinkle us with vital power(ವರ್ಚಸ್); May this earth having many streams yield milk for us... may this earth, a mother to me her son, pour forth milk for us... let us always move along on the firm earth, Prthivi, all-producing mother of plants, sustained by order (ಧರ್ಮ), all gracious.[೮೫]

ಋಗ್ವೇದಕ್ಕಿಂತ ಅಥರ್ವ ವೇದದಲ್ಲಿ ಭೂಮಿಯನ್ನು ಹೆಚ್ಚು ಹೊಗಳಲಾಗಿದೆ. ಭೂಮಿಯನ್ನು ಅಮೃತ ಹಾಗೂ ಹಾಲನ್ನು ತನ್ನ ಸ್ವರ್ಣಸ್ತನಗಳಿಂದ ತನ್ನ ಮಕ್ಕಳಿಗೆ ಉಣಬಡಿಸುತ್ತಾಳೆ ಎಂದಿದೆ. ಇಂತಹ ವಿಷಯವೇ ಈ ವೇದದಲ್ಲಿ ಹಲವಾರು ಕಡೆ ಬಂದಿದೆ. ತಾಯಿಯಾಗಿ ವಿಶ್ವವೆಂಬ ಗರ್ಭವನ್ನು ಹೊಂದಿದ್ದಾಳೆ. ಲೋಕವನ್ನು ಧರಿಸಿದ್ದಾಳೆ. ಆದ್ದರಿಂದ ಇವಳನ್ನು ಲೋಕಧಾರಿಣಿ ಎಂದು, ವಿಶ್ವಂಭರೆಯೆಂದು, ಹೀಗೆ ನಾನಾ ರೀತಿಯಲ್ಲಿ ಪೃಥ್ವಿಯನ್ನು ಕರೆಯಲಾಗಿದೆ. ಋಗ್ವೇದದ ಒಂದು ಮಂತ್ರದಲ್ಲಿ "ಪೃಥ್ವಿಯೇ ನಮ್ಮನ್ನು ವಿಜಯಶಾಲಿಗಳಾಗುವಂತೆ

ಹರಸು, ಭಯಂಕರವಾದ ಕಷ್ಟಗಳಿಂದ ನಮ್ಮನ್ನು ರಕ್ಷಿಸು"[೮೬] ಎಂದು ಕೇಳಿಕೊಳ್ಳಲಾಗಿದೆ. ಪೃಥ್ವಿ ದೇವತೆಯನ್ನು ಕನ್ಯಾದೇವತೆಯೆಂದು ಅಥವಾ ಅವಳಿಗೆ ಸಂಗಾತಿಯು ಇರಲಿಲ್ಲವೆಂದೇ ಗ್ರಹಿಸಿಲಾಗಿದೆ. ಪ್ರಾಚೀನ ಕಾಲದಿಂದಲೂ ಭೂಮಿಯನ್ನು ಕನ್ಯಾ ಎಂದೇ ನೋಡಲಾಗಿದೆ. ಕಾರಣ, ಪ್ರತಿನಿತ್ಯವೂ ಹೊಸತನ್ನು ಉಂಟುಮಾಡುವ ಶಕ್ತಿಯನ್ನು ಭೂಮಿಯು ಹೊಂದಿದೆ. ಪ್ರತಿವರ್ಷವು ಹಳೆಯದು ಬಿದ್ದು ಹೊಸ ಸೃಷ್ಟಿಯನ್ನು ಮಾಡುತ್ತದೆ. ಹಳೆಯ ಮರ ಬಿದ್ದು, ಅಥವಾ ಎಲೆ ಉದುರಿ ಹೊಸವೃಕ್ಷವಾಗಿ ನಿಲ್ಲುತ್ತದೆ. ಅದೇ ರೀತಿ ಭೂಮಿಯು ಪ್ರತಿವರ್ಷವು ಬೆಳೆಯನ್ನು ಕೊಡುತ್ತದೆ. ಹೀಗೆ ಅವಳಿಗೆ ಮುದಿತನವೆಂಬುದೇ ಇಲ್ಲ. ಗಂಡಿನ ಸಂಸರ್ಗದಿಂದ ಹೆಣ್ಣು ಗರ್ಭಧರಿಸುತ್ತಾಳೆ ಎಂಬ ಅರಿವು ಇರದ ಕಾಲದಿಂದಲೂ ಈ ನಂಬಿಕೆ ಉಳಿದುಬಂದಿದೆ. ಆದರೆ ವೇದಗಳ ಕಾಲದಲ್ಲಿ ಸಹ ಅವಳನ್ನು ಕನ್ಯೆಯಾಗಿಯೆ ನೋಡಲಾಗಿದೆಯಾದರೂ ಈ ನಂಬಿಕೆ ಬದಲಾವಣೆಯನ್ನು ಹೊಂದಿರುವ ಹಾಗೆ ಕಂಡುಬರುತ್ತದೆ. ವೇದಗಳಲ್ಲಿ ಆಕಾಶ ಅಥವಾ ದ್ಯೌಸ್ ಭೂಮಿಯ ಗಂಡನೆಂದು ಕರೆಯಲಾಗಿದೆ. ಸರ್ವಮಾತಾ ಎಂದು ಕರೆದಿದ್ದರು, ಸಜೋಷಾ ಅಥವಾ ಸುಂದರವಾದ ಹುಡುಗಿ ಅಥವಾ ಕನ್ಯಾ ಎಂಬರ್ಥದಲ್ಲಿ ನಿತ್ಯ ಯುವತಿಯಾಗಿರುವವಳು ಎಂದು ತಿಳಿಯಲಾಗಿದೆ. ಋಗ್ವೇದದ ಮೊದಲ ಮಂತ್ರಗಳಲ್ಲಿ ಪೃಥ್ವಿ ಹಾಗೂ ದ್ಯೌಸ್‌ರು ವಿಶ್ವದ ತಂದೆ ತಾಯಿಯರೆಂದು, ಗಂಡನ ಕೈಹಿಡಿದು ಜಗತ್ತನ್ನು ಸಂಚರಿಸುತ್ತಾಳೆ ಎಂದು ಹೇಳಲಾಗಿದೆ. ಭೂಮಿಯನ್ನು ಗೋವಿಗೆ ಹೋಲಿಸಲಾಗಿದೆ. ಗೋವು ಇಂಡೋ ಯುರೋಪಿಯನ್ ಮೂಲದಿಂದ ಬಂದಿದ್ದಾದರೂ, ಗೋಮಾತೆಯಾಗಿ ಪೂಜಿಸುವುದು ಆರ್ಯರ ಕಲ್ಪನೆಯಾಗಿರಲಿಲ್ಲ. ಇಲ್ಲಿಯೆ ಇದ್ದ ಮೂಲ ಜನಾಂಗದ ಕಲ್ಪನೆಯಾಗಿದೆ. ಪ್ರಾಣಿಗಳನ್ನು ಪೂಜಿಸುವುದು ಸಿಂಧೂ ಕಣಿವೆಯಲ್ಲಿಯೆ ಕಾಣುತ್ತೇವೆ. ಅದೆ ಮಾದರಿಯನ್ನು ಆರ್ಯರು ತೆಗೆದುಕೊಂಡಿರಬಹುದು.

ಒಟ್ಟಿನಲ್ಲಿ ಹೇಳುವುದಾದರೆ, ಭೂಮಿಯು Prithivi was conceived as a powerful Mother Goddess during Vedic period and definitely acquired higher status during later period, since we find a powerful hymn attributed to her in the Atharvaveds.[೮೭] ನಂತರದ ಕಾಲದಲ್ಲಿ ಪೃಥ್ವಿಯನ್ನು ವಿಷ್ಣುವಿನೊಂದಿಗೆ ಸಮೀಕರಿಸಲಾಗಿದೆ. ಲಕ್ಷ್ಮಿಯ ಒಡನಾಡಿಯಾಗಿದ್ದಾಳೆ.

ಸರಸ್ವತಿ ಅಥವಾ ವಾಕ್‌ದೇವತೆ

ವೇದಗಳಲ್ಲಿ ಪ್ರಮುಖವಾಗಿ ಹಾಗೂ ಇಂದಿಗೂ ಕಂಡುಬರುವ ಮತ್ತೊಂದು ಪ್ರಮುಖವಾದ ದೇವತೆಯೆಂದರೆ ಸರಸ್ವತಿ, ಅಥವಾ ವಾಕ್‌ದೇವತೆ. ಮೊದಲು ಸರಸ್ವತಿ ಹಾಗೂ ವಾಕ್ ದೇವತೆಯರು ಬೇರೆಬೇರೆಯೇ ಆಗಿ ಕಂಡುಬರುತ್ತಾರೆ. ಒಂದು ನದಿ ದೇವತೆಯಾದರೆ, ಇನ್ನೊಂದು ಮಾತನಾಡುವ, ಭಾಷೆಯ

ದೇವತೆಯಾಗಿದ್ದಾಳೆ. ಸರಸ್ವತಿಯನ್ನು ಇಡಾ, ಭಾರತೀಯರೊಡನೆ ಕೆಲವು ಕಡೆ ಹೋಲಿಸಲಾಗಿದೆ. ಭಾರತವನ್ನು ಪ್ರವೇಶ ಮಾಡಿದ ಆರ್ಯರು ಸರಸ್ವತಿ ತೀರದಲ್ಲಿ ನೆಲೆನಿಂತರು. ಹೀಗೆ ನೆಲೆನಿಂತ ಆರ್ಯರಿಗೆ ಸರಸ್ವತಿಯು ಎಲ್ಲರಿಗಿಂತ, ಎಲ್ಲಕ್ಕಿಂತ ಮಿಗಿಲಾಗಿ ಕಂಡಿದ್ದಾಳೆ. ಋಗ್ವೇದದ ಒಂದು ಮಂತ್ರದಲ್ಲಿ ಸರಸ್ವತಿಯನ್ನು ಎಲ್ಲ ಶಕ್ತಿಗಳಿಗಿಂತಲೂ ಈ ಶಕ್ತಿಯೇ ಮಿಗಿಲೆಂದು, ಎಲ್ಲ ಕ್ರಿಯೆಗಳಿಗಿಂತಲೂ ಸರಸ್ವತಿಯೆ ಹೆಚ್ಚೆಂದು ಹಾಗೂ ಅವಳನ್ನು ಕರುಣೆಯಿಂದ ಬೇಡಿದರೆ ನಿರಂತರವಾಗಿ ಹಾಲನ್ನು ಧಾರೆಯೆರೆಯುತ್ತಾಳೆಂದು ಹೇಳುತ್ತದೆ.[೫೮] ಸರಸ್ವತಿಯನ್ನು ಒಂದು ತೊರೆಯಾಗಿ, ಅದು ನಿರಂತರವಾಗಿ ತುಂಬಿ ಹರಿಯುವ ದೇವತೆಯಾಗಿ ನೋಡಲಾಗಿದೆ. ಅಲ್ಲದೆ ಅವಳ ಸ್ತನಗಳೆಂಬ ತೊರೆಯಲ್ಲಿ ಸದಾ ಅಮೃತವೆಂಬ ನೀರು ಉಕ್ಕುತ್ತದೆ. ಅದನ್ನು ನಮಗೆ ನಿರಂತರವಾಗಿ ಕೊಟ್ಟು ಪೋಷಿಸು ಎಂದು ಕೇಳಿಕೊಳ್ಳಲಾಗಿದೆ. ಸರಸ್ವತಿಯನ್ನು ಎರಡು ರೂಪಗಳಿಂದ ನೋಡಲಾಗಿದೆ. ಒಂದು ಉಗ್ರರೂಪದಿಂದ, ಇನ್ನೊಂದು ಸೌಮ್ಯರೂಪದಿಂದ. ಸರಸ್ವತಿಯನ್ನು ವಿಶ್ವಶಕ್ತಿಯಲ್ಲಿ ಒಂದೆಂಬ ರೀತಿಯಲ್ಲಿ ವೇದಕಾಲದ ಋಷಿಗಳು ನೋಡಿದ್ದಾರೆ. "ನಾನು ದ್ಯೌಸ್, ಪೃಥ್ವಿಯನ್ನು ದಾಟಿ ಹೋಗಬಲ್ಲೆ, ಈ ಸೃಷ್ಟಿಯನ್ನು ಮುಂದೆ ತರಬಲ್ಲೆ, ನನ್ನ ಮೂಲ (ಯೋನಿ)ವು ಆಪ್‌ನಲ್ಲಿದೆ. ಸಮುದ್ರದಿಂದ ವಿಶ್ವದ ಎಲ್ಲಾ ಕಡೆ ಪಸರಿಸಬಲ್ಲೆ. ಆಕಾಶವನ್ನು ಕೂಡಾ ಮುಟ್ಟಬಲ್ಲೆ" [೫೯] ಎಂದು ಹೇಳುವುದು ವಿಶ್ವಶಕ್ತಿಯಲ್ಲಿ ಸರಸ್‌ನ ಪಾತ್ರ ಎಂತಹದು ಎಂಬುದು ತಿಳಿಯುತ್ತದೆ.

ಸರಸ್ವತಿಯನ್ನು ಋಗ್ವೇದದಲ್ಲಿ ವಾಕ್‌ನೊಂದಿಗೆ ನೋಡಿಲ್ಲ. ಋಗ್ವೇದದಲ್ಲಿ ವಾಕ್ ದೇವತೆಯನ್ನು ಮನುಷ್ಯನ ಮಾತನಾಡುವ ಶಕ್ತಿಯ ರೂಪದಲ್ಲಿ ಹಾಗೂ ವಿಶ್ವನಿಯಾಮಕದಲ್ಲಿಅಥವಾ ವಿಶ್ವಸೃಷ್ಟಿ ಕ್ರಿಯೆಯ ದೇವತೆಯಾಗಿ ನೋಡಲಾಗಿದೆ. ಜಗತ್ತಿನ ಎಲ್ಲಾ ಪ್ರಾಣಿಗಳು, ಮಾನವರು ಮಾತನ್ನು ಬಲ್ಲರು. ಆದರೆ ಋಷಿಗಳು ಮಾತ್ರ ಅವಳನ್ನು ಅತ್ಯಂತ ಮನೋಹರವಾದ ಶಬ್ದಗಳಿಂದ ಬಂಧಿಸಬಲ್ಲರು. ಯಾಕೆಂದರೆ ವಾಕ್ ದೇವತೆಯು ನಾಲ್ಕು ಗುಣಗಳನ್ನು ಹೊಂದಿದ್ದಾಳೆ. ಸಾಮಾನ್ಯರು ಅವಳ ಮೊದಲನೆಯ ಗುಣವನ್ನು ಮಾತ್ರ ಅರಿಯಬಲ್ಲರು. ಉಳಿದ ಮೂರು ಗುಣಗಳನ್ನು ಋಷಿಗಳು ಮಾತ್ರ ತಿಳಿಯಬಲ್ಲರು ಎನ್ನುತ್ತದೆ ಋಗ್ವೇದ.[೬೦] ಋಗ್ವೇದವು ವಾಕ್‌ಅನ್ನು ದೇವತೆಗಳ ರಾಣಿಯೆಂದು ಕರೆಯುತ್ತದೆ. ಅಲ್ಲದೆ ವಾಕ್‌ಗೆ ಮಾನುಷರೂಪವನ್ನು ಕೊಡುತ್ತದೆ. ಮೊದಲಲ್ಲಿ ವಾಕ್‌ಗೂ ಹಾಗೂ ಸರಸ್ವತಿಗೂ ಯಾವುದೇ ಸಂಬಂಧ ಇರುವ ಹಾಗೆ ಕಾಣುವುದಿಲ್ಲ. ಆದರೆ ಸರಸ್ವತಿಯನ್ನು ಕುರಿತು ಹೇಳುವಾಗ ಅಕ್ಷರಗಳು ಸರಸ್‌ಮೂಲಕ ಹರಿದು ಬರುತ್ತವೆ ಎಂಬ ಮಾತು ಬರುತ್ತದೆ. ಒಂದು ಕಾಲದಲ್ಲಿ ಸರಸ್ವತಿ ನದಿ ತಟವನ್ನು ಆಶ್ರಯಿಸಿ ವೇದಾಧ್ಯಾಯನ ನಿರತರಾಗಿದ್ದ ಆರ್ಯರು ವಾಕ್ ಮತ್ತು ಸರಸ್ವತಿಯರು ಒಂದೇಯಾಗಿ ಕಂಡಿವೆ. ಮುಂದೆ ಆರ್ಯರು ಗಂಗಾ ನದಿಯ ಬಯಲಿಗೆ ಬರುವ ತನಕ ಸರಸ್ವತಿಯು ಪ್ರಧಾನವಾದ ದೇವತೆಯಾಗಿ ನಂತರದಲ್ಲಿ ಈ ಸ್ಥಾನವನ್ನು ಗಂಗೆ ಪಡೆದಿರುವದನ್ನು ಗುರುತಿಸಬಹುದು. ಅಲ್ಲದೆ

ಉಪನಿಷತ್ತುಗಳ ಕಾಲಕ್ಕಾಗಲೇ ಸರಸ್ವತಿ ಬತ್ತಿಹೋಗಿರುವ ಸಾಧ್ಯತೆಗಳಿವೆ. ಯಾಕೆಂದರೆ, ಈ ಕಾಲಕ್ಕೆ ಸರಸ್ವತಿ ನದಿಯ ರೂಪದಲ್ಲಿ ಕಾಣುವುದೇ ಇಲ್ಲ. ಅದು ಏನಿದ್ದರೂ ವಾಗ್‌ದೇವತೆಯಾಗಿದ್ದಾಳೆ. ಮೂಲದಲ್ಲಿ ಸ್ವತಂತ್ರವಾಗಿ ಕಂಡುಬಂದು ಈ ದೇವತೆಯು ನಂತರದಲ್ಲಿ ಇಂದ್ರನ ಅರಸಿಯಂತೆ ನೋಡಲಾಗಿದೆ. ಉಪನಿಷತ್ತು ಹಾಗೂ ಬ್ರಾಹ್ಮಣಗಳ ಕಾಲದಲ್ಲಿ ಬ್ರಹ್ಮನ ಮಗಳಂತೆಯು, ನಂತರದಲ್ಲಿ ಬ್ರಹ್ಮನ ಮಡದಿಯಾಗಿ ಸ್ಥಾಪಿತವಾಗಿದ್ದಾಳೆ.

ಇಂದ್ರಾಣಿ ಅಥವಾ ಸಚಿ

ಋಗ್ವೇದ ಕಾಲದಲ್ಲಿ ಕಂಡುಬರುವ ಮತ್ತೊಬ್ಬ ದೇವತೆಯೆಂದರೆ, ಇಂದ್ರಾಣಿ ಅಥವಾ ಶಚಿ. ಇಂದ್ರನ ಶಕ್ತಿಯ ಸ್ವರೂಪವೇ ಇಂದ್ರಾಣಿ ಎಂದು ಬಿಂಬಿತವಾಗಿದೆ. ಹಿಂದೆ ನೋಡಿದ ದೇವತೆಗಳು ಹೆಂಡತಿಯ ಸ್ಥಾನ ನಿರ್ದಿಷ್ಟವಾದುದಲ್ಲ. ಆದರೆ, ಇಂದ್ರಾಣಿಯ ಸ್ಥಾನ ಈಗಾಗಲೆ ನಿಗದಿತಗೊಂಡಿದೆ. ಗಂಡನ ಅಡಿಯಾಳಾಗಿ ಕಂಡುಬಂದರೂ ಮುಂದೆ ಕಾಣುವ ಪ್ರಕೃತಿ ಮತ್ತು ಪುರುಷ ಕಲ್ಪನೆಯ ಬೀಜ ಇಲ್ಲಿದೆ. ಆ ಕಾರಣಕ್ಕಾಗಿ ಶಚಿ ಪ್ರಮುಖಳಾಗುತ್ತಾಳೆ. ಹಾಗೆಯೇ ಇಂದ್ರನನ್ನು ಕುರಿತು ಹೇಳುವಾಗ 'ಶಚೀವತ್' ಎಂದು ಕರೆಯಲಾಗಿದೆ. ಎಂದರೆ ಶಕ್ತಿಯನ್ನು ವಶಪಡಿಸಿಕೊಂಡವನು ಎಂದು. ಆ ಕಾರಣದಿಂದಲೇ ಶಚಿಪತಿ ಎನ್ನಲಾಗಿದೆ. ಇಂದ್ರನ ಶಕ್ತಿಯ ಸಾಕಾರ ರೂಪವೇ ಶಚಿಯಾಗಿದ್ದಾಳೆ. ಇಂದ್ರನಿಗೆ ಶಕ್ತಿ ಎಂದು ಹಲವಾರು ಕಡೆ ಕರೆಯಲಾಗಿದೆ. ಇಂದ್ರಾಣಿ ಅವನ ಹೆಂಡತಿಯಾಗಿ ಮಾತ್ರ ಇದ್ದಾಳೆ.

ಶ್ರೀ

ಶ್ರೀದೇವತೆಯು ಋಗ್ವೇದದಲ್ಲಿ ಕಂಡುಬರುವ ಮತ್ತೊಬ್ಬ ದೇವತೆ. ಅಷ್ಟೇನು ಪ್ರಮುಖವಲ್ಲದ ದೇವತೆಯಾಗಿದ್ದಾಳೆ. ಋಗ್ವೇದದಲ್ಲಿ ಸಂಪತ್ತನ್ನು ಅನುಗ್ರಹಿಸುವ ದೇವತೆಯಾಗಿ ಕಂಡುಬರುತ್ತಾಳೆ.[೬೦] ಋಗ್ವೇದದಲ್ಲಿ ಲಕ್ಷ್ಮಿಯ ಹೆಸರು ಕಂಡುಬರುವುದಿಲ್ಲ. ಅದು ನಂತರದ ಬ್ರಾಹ್ಮಣ ಸಾಹಿತ್ಯದಲ್ಲಿ ಕಂಡುಬರುತ್ತದೆ. ಅಥರ್ವಣ ವೇದದಲ್ಲಿ ಒಳಿತು ಹಾಗೂ ಪಾಪಿ ಲಕ್ಷ್ಮಿಯೆಂದು ಕರೆಯಲಾಗಿದೆ.[೬೧] ಶತಪತ ಬ್ರಾಹ್ಮಣದಲ್ಲಿ ಶ್ರೀ ಮತ್ತು ಲಕ್ಷ್ಮಿಯರು ಆದಿತ್ಯನ ಹೆಂಡತಿಯರಾಗಿದ್ದಾರೆ ಎಂದು ಹೇಳಲಾಗಿದೆ.[೬೨] ಶ್ರೀ ಮತ್ತು ಲಕ್ಷ್ಮಿಯರನ್ನು ನಂತರದ ಕಾಲದಲ್ಲಿ ಒಟ್ಟಿಗೆ ಸೇರಿಸಲಾಗಿದೆ. ಆದಿತ್ಯ ವಿಷ್ಣುವಿನೊಂದಿಗೆ ಸೇರಿಹೋಗುವುದರಿಂದ ಲಕ್ಷ್ಮಿಯು ವಿಷ್ಣುವಿನ ಹೆಂಡತಿಯಾಗುತ್ತಾಳೆ. ಲಕ್ಷ್ಮಿಯು ಮೂಲತಃ ಜನಪದ ದೈವವಾಗಿದ್ದವಳು. ವಿಶೇಷವಾಗಿ ಕೃಷಿದೇವತೆಯೆಂದೇ ಪೂಜಿಸಲಾಗುತ್ತದೆ. ಭೂಮಿಯಲ್ಲಿ ಬೆಳೆಯುವ ಬೆಳೆಯ ವೃದ್ಧಿ ದೇವತೆಯಾಗಿದ್ದಳು. ಅಲ್ಲದೆ ಬೆಳೆಗೆ, ಪ್ರಾಣಿಗಳಿಗೆ ಫಲತ್ವವನ್ನು ಕೊಡುವವಳಾಗಿದ್ದವಳು.

ವೇದಕಾಲದಲ್ಲಿ ನಿಸರ್ಗದಲ್ಲಿ ಕಾಣುವ ಪ್ರತಿಯೊಂದನ್ನು ದೇವತೆಯಾಗಿ ಕಾಣಲಾಗಿದೆ. ಅಂತೆಯೇ ಹಗಲಿಗೆ ಸೂರ್ಯನಾದರೆ, ಇರುಳಿಗೆ ರಾತ್ರಾ ದೇವತೆಯಾಗುತ್ತಾಳೆ. ರಾಕಾ ಮತ್ತು ಸಿನೀವಾಲಿ ದೇವತೆಗಳು ಚಂದ್ರದೇವತೆಯರಾಗಿದ್ದಾರೆ.[೯] ಸುಂದರವಾದ ಹಾಗೂ ಸಮೃದ್ಧವಾದ ರಾಕಾ ದೇವತೆಯನ್ನು ಋಗ್ವೇದದಲ್ಲಿ ನೋಡಬಹುದು. ಪರೋಪಕಾರ ಮನೋಭಾವನೆಯನ್ನು ಹೊಂದಿರುವ ರಾಕಾಳನ್ನು ಸಂಪತ್ತು ಹಾಗೂ ಮಕ್ಕಳನ್ನು ದಯಪಾಲಿಸುವಂತೆ ಅಥರ್ವವೇದದಲ್ಲಿ ಕೇಳಿಕೊಳ್ಳಲಾಗಿದೆ.[೧೦] ರಾಕಾ ಜೊತೆಗೆ ಕುಹೂ, ಗುಂಗೂ ಎಂಬಿಬ್ಬರನ್ನು ಚಂದ್ರನ ರೂಪದಲ್ಲಿಯೇ ನೋಡಲಾಗಿದೆ. ವೇದಯುಗದಲ್ಲಿಯೇ ಇನ್ನೂ ಅನೇಕ ದೇವತೆಗಳನ್ನು ನೋಡಬಹುದಾಗಿದೆ. ದಿತಿ, ಸ್ವಸ್ತಿ, ಸೀತಾ, ಶ್ರಾದ್ಧಾ, ದಿಶಸಾ, ಇಳಾ ನಿರೃತಿ, ಸುನೃತಿ, ಧನು, ವಿನಿತಾ, ಕದ್ರು ಮುಂತಾದವರು. ಋಗ್ವೇದದಲ್ಲಿ ಕಡಿಮೆಯಿದ್ದ ದೇವತೆಗಳು ವೇದಕಾಲದ ಅಂತ್ಯಕ್ಕೆ ಬಂದಾಗ ಅನೇಕ ದೇವತೆಗಳಾಗಿ ಬೆಳೆದಿರುವುದನ್ನು ಕಾಣಬಹುದಾಗಿದೆ.

ಋಗ್ವೇದದ ಕಾಲದ ಜನರು ಸರಳ ರೀತಿಯಲ್ಲಿ ಜೀವನ ಮಾಡುವವರಾಗಿರಬೇಕು. ಅಂದರೆ, ನಿಸರ್ಗದಲ್ಲಿ ಬದುಕುತಿದ್ದ ಅವರು ಗ್ರಾಮ ಜೀವನಕ್ಕೆ ಅಥವಾ ಕೃಷಿ ಜೀವನಕ್ಕೆ ಇನ್ನೂ ತಮ್ಮನ್ನು ತೊಡಗಿಸಿಕೊಂಡಿರಲಿಲ್ಲ. ನದಿ, ಕೆರೆಗಳ ಪಕ್ಕದಲ್ಲಿ ವಾಸಮಾಡುತ್ತಿದ್ದ ಅವರು ಪ್ರಕೃತಿಯ ಆರಾಧಕರಾಗಿದ್ದವರು. ಸಿಂಧೂ ನಾಗರಿಕತೆಯಲ್ಲಿ ಕಂಡುಬರುವ ಮನೆದೇವತೆಗಳಂತ ದೇವತೆಗಳು ವೈದಿಕ ಸಮಾಜದಲ್ಲಿ, ಅಥವಾ ಸಾಹಿತ್ಯದಲ್ಲಿ ಕಾಣುವುದಿಲ್ಲ. ಮೇಲಾಗಿ ವೈದಿಕ ಆರ್ಯರು ಪುರುಷ ಕೇಂದ್ರಿತವಾದ ಸಾಂಸಾರಿಕ ಚೌಕಟ್ಟನ್ನು ಹೊಂದಿದ್ದರಿಂದ ಅವರ ದೇವತೆಗಳ ಸಮೂಹದಲ್ಲಿ ಕಾಣುವುದು ಪುರುಷದೇವತೆಗಳನ್ನು. ಋಗ್ವೇದದಲ್ಲಿ ಉಷಸ್‌ಳನ್ನು ತುಂಬಾ ವೈಭವೀಕರಿಸಿದ್ದರೂ ಸಹ ಅವಳು ಸೂರ್ಯನ ಸಂಗಾತಿಯಾಗಿಯೇ ಮುಂದುವರಿಯುತ್ತಾಳೆ. ಕಾಡಿನಲ್ಲಿ ವಾಸಿಸುವ ಜನರಿಗೆ ಬೆಳಗಿನ ಪೂರ್ವ ಸ್ಥಿತಿ ಅತ್ಯಂತ ಆಹ್ಲಾದಕರವಾಗಿ ಕಂಡು ಅನುಭವಿಸಿ ಪುನಃಪುನರ್ ಜಾಯಮಾನ ಪೂರ್ಣೆ ಎಂದು ಹಾಡಿದ್ದಾರೆ. ಅಲ್ಲದೆ ವೈದಿಕ ಪರಂಪರೆಯಲ್ಲಿ ಮಗಳನ್ನು ತಂದೆ ಹೆಂಡತಿಯಾಗಿ ಸ್ವೀಕರಿಸುವುದು, ಹೆಂಡತಿಯೆ ಮಗಳಾಗುವುದನ್ನು ಪ್ರಜಾಪತಿ ಬ್ರಹ್ಮ, ದಕ್ಷ, ಮುಂತಾದವರು, ತಮ್ಮ ಮಗಳನ್ನಾಗಿ, ಹೆಂಡತಿಯನ್ನಾಗಿ ಸರಸ್ವತಿ, ಅದಿತಿಯರನ್ನು ಸ್ವೀಕರಿಸುತ್ತಾರೆ. ಇದೊಂದು ಪ್ರಶ್ನೆಯಾದರೂ ಇಲ್ಲಿ ಹೆಣ್ಣು ಒಂದು ರೂಪವಾಗಿ ಕಾಣುವುದಿಲ್ಲ. ಹಲವಾರು ವ್ಯಕ್ತಿತ್ವಗಳ ಮೊತ್ತವಾಗಿ ಕಂಡುಬರುತ್ತದೆ. ಜೇಮ್ಸ್ ಅವರು ಹೇಳುವಂತೆ; like most mother goddess, the one being dividing herself into a duality of male and female, husband and wife.[೧೨]

೨.೨.೨. ವೇದೋತ್ತರ ಕಾಲ

ಈ ಕಾಲವನ್ನು ಕ್ರಿ.ಪೂ. ಸು. ೮೦೦ ನಂತರದ ಕಾಲವೆಂದು ಇಟ್ಟುಕೊಳ್ಳಬಹುದು. ಈ ಕಾಲವು ಸೂತ್ರ ಸಾಹಿತ್ಯದ ಕಾಲವಾಗಿದೆ. ಕಲ್ಪಸೂತ್ರಗಳು ಧಾರ್ಮಿಕ ಕ್ರಿಯಾ ಆಚರಣೆಗಳಿಗೆ ನಿರ್ಧಿಷ್ಟವಾದ ಚೌಕಟ್ಟನ್ನು ಅಳವಡಿಸುವ ಸಲುವಾಗಿ ಹುಟ್ಟಿಕೊಂಡ ಸಾಹಿತ್ಯವಾಗಿದೆ. ಇಲ್ಲಿ ಶ್ರೌತ, ಗ್ರಿಹ್ಯ ಹಾಗೂ ಧರ್ಮಶಾಸ್ತ್ರಗಳು ಸಾಂಪ್ರದಾಯಿಕ ಸಮಾಜಕ್ಕೆ ಒಂದು ಮಿತಿಯನ್ನು ಅಳವಡಿಸುವ ಧಾರ್ಮಿಕ ಗ್ರಂಥಗಳ ನಿರ್ಮಾಣಕಾಲ. ಈಗ ನಾವು ಹಿಂದೂ ಪರಂಪರೆಯೆಂದು ಕರೆಯುವ ಈ ಪರಂಪರೆಯು ರೂಪುಕೊಳ್ಳುತ್ತಿರುವ ಕಾಲವು ಇದಾಗಿದೆ. ಸಂಕೀರ್ಣವಾದ ಸಾಮಾಜಿಕ ಹಾಗೂ ಧಾರ್ಮಿಕವಾದ ರಚನೆಗಳು ಸಿದ್ಧವಾಗುತ್ತಿದ್ದ ಕಾಲ. ಅಲ್ಲದೆ ಈ ಕಾಲಕ್ಕಾಗಲೇ ಸಾಮ್ರಾಜ್ಯಗಳ ಉಗಮವಾಗಿ ಅಧೀಕಾರಕ್ಕಾಗಿ ಹೋರಾಟ, ಯುದ್ಧಗಳು ಆಗುತ್ತಿದ್ದಂತಹ ಕಾಲವು ಇದಾಗಿದೆ. ಆರ್ಯರು ಸರಸ್ವತೀ ತೀರದಿಂದ ಗಂಗಾ ನದಿ ತೀರಕ್ಕೆ ಬಂದು ನೆಲೆನಿಂತ ಒಂದು ರೀತಿಯ ಸೆಟ್ಲಡ್ ಸಂಸ್ಕೃತಿಯೆನ್ನಬಹುದಾದ ಕಾಲ ಇದು. ಅಲ್ಲದೆ ಇದೊಂದು ವಿಸ್ಮೃತಿಯ ಕಾಲವೂ ಆಗಿದೆ. ಜೊತೆಯಲ್ಲಿ ತಾನು ನೆಲೆನಿಂತ ಜನರೊಡನೆ ಸಂಬಂಧವನ್ನು ಹೊಂದುವ ಕಾಲವಾಗಿದೆ. ಮೊದಲು ಬಂದಾಗ ಇಲ್ಲಿಯ ಮೂಲ ಜನರೊಡನೆ ಜಗಳವಾಡಿದರು, ಯುದ್ಧಮಾಡಿದರು, ಗೆದ್ದರು. ಹಾಗೆಯೇ ಯುದ್ಧವನ್ನು ಮುಂದುವರಿಸಲು ಸಾಧ್ಯವಾಗಿರಲಿಕ್ಕಿಲ್ಲ. ಅಲ್ಲದೆ ದ್ರಾವಿಡರು ದಕ್ಷಿಣಕ್ಕೆ ಸರಿದ ಹಾಗೆ ಇವರು ಉತ್ತರ ಭಾರತವನ್ನು ಆಕ್ರಮಿಸಿಕೊಂಡರು. ತಮ್ಮದೇ ಆದ ಸಂಸ್ಕೃತಿಯನ್ನು ಬಿತ್ತಿದವರಾದರೂ, ಅದು ಇಲ್ಲಿಯ ಜನರ ಸಂಸ್ಕೃತಿಯೊಡನೆ ಮಿಳಿತವಾಗಲೇ ಬೇಕಾಯಿತು. ಇಲ್ಲಿಯ ಅನೇಕ ಆಚರಣೆಗಳು, ಪದ್ಧತಿಗಳು, ದೈವಗಳು ವೈದಿಕ ಸಂಸ್ಕೃತಿಯಲ್ಲಿ ಸೇರಿಹೋದವು. ಹಾಗೆಯೇ ಅವರ ಅನೇಕ ಆಚರಣಾ ಪದ್ಧತಿಗಳು ಬುಡಕಟ್ಟುಗಳಲ್ಲಿ ಬಂದು ಸೇರಿಕೊಂಡವು. ಹೀಗೆ ತಾನು ನೆಲೆನಿಂತ ಪ್ರದೇಶದ ಜನರ ಸಹವಾಸದಿಂದ ಆದ ಹೊಸ ಜೀವನ ಶೈಲಿಯಿಂದ ಆದ ಬದಲಾವಣೆಗಳು ಏಕಕಾಲದಲ್ಲಿ ನೆಡೆದವು. ಋಗ್ವೇದದಲ್ಲಿ ಕಂಡುಬರುವ ಹಲವಾರು ದೇವತೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು. ಹಾಗೂ ಅನೇಕ ದೇವತೆಗಳು ಹೊಸದಾಗಿ ಪ್ರವೇಶಪಡೆದದ್ದನ್ನು ಗುರುತಿಸಲಾಗಿದೆ.[೬] ವೇದಗಳ ನಂತರದಲ್ಲಿ ಕಂಡುಬರುವ ದೇವತೆಗಳು ದೇವತೆಗಳಾಗಿರದೆ, ವೈದಿಕ ಋಷಿಗಳಿಗೆ ಕಾಡು ಜನರು ಪೂಜಿಸುವ ಭೂತ, ಕ್ರೂರವಾದಂತಹ ರೂಪಗಳೇ ಆಗಿವೆ. ಆರ್ಯರಿಗೆ ಅವುಗಳನ್ನು ದೇವತಾ ರೂಪದಲ್ಲಿ ನೋಡಲು ಸಾಧ್ಯವಾಗಿಲ್ಲ. ಅಂತಹ ಬುಡಕಟ್ಟು ದೇವತೆಗಳಿಗೆ ಮೊದಲು ಯಾವುದೇ ಬಲಿಹರಣ ಕ್ರಿಯೆಗಳು ಮಾಡುತ್ತಿರಲಿಲ್ಲ. ಆದರೆ ನಂತರದ ಸಾಹಿತ್ಯದಲ್ಲಿ ಬಲಿಹರಣ, ಬಲಿಯಜ್ಞ ಹಾಗೂ ಹಲಾಭಿಯೋಗಗಳಂತಹ ಬಲಿ ಆಚರಣೆಗಳು ಕಂಡುಬರುತ್ತವೆ. ಯಾಕೆಂದರೆ ಅವರಿಗೂ ಅವುಗಳ ಕಿರುಕುಳವನ್ನು ತಡೆದುಕೊಳ್ಳಲು ಬಲಿಕೊಡಲೇ ಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿರಬೇಕು. ಅಂತಯೇ ಅಂಬಿಕಾ, ಕಾಳಿ,ದುರ್ಗಾ, ಮುಂತಾದ

ದೇವತೆಗಳು ಕಂಡುಬರುವುದು ಕ್ರೂರದೇವತೆಗಳಾಗಿಯೇ ಎಂಬುದು ಗಮನಿಸಬೇಕಾದದು. ಹೀಗೆ ಜಾಗ ಪಡೆದ ಈ ದೇವತೆಗಳು ಅವರ ಸಾಹಿತ್ಯದ ಅವಿಭಾಜ್ಯಅಂಗವಾಗಿಯೆ ಬೇರೆತುಹೋದವು. ಭಟ್ಟಾಚಾರ್ಯ ಅವರು ಹೇಳುವಂತೆ;

> The name of these goddesses appear originally to indicate different tribal deities who were afterwards identified with the Siva Pasupati, the pre-Vedic god known to have been worshipped by the Mohenjodaro peoples. The revival of the pre-Vedic Mother Goddess cult in the post-Rgvedic age was evidently due to the initiation of the Vedic tribes into the agricultural way of life. With this they also adopted numerous rituals, mainly sexual in character, designed to secure the fertility of the fields, which must have played a very significant part among the neighbouring agricultural societies.[೯೦]

ಈ ಕಾಲಕ್ಕಾಗಲೇ ಹೆಚ್ಚುಕಡಿಮೆ ಸಂಪೂರ್ಣವಾಗಿ ಆರ್ಯರ ಮನಸ್ಸಿನಿಂದ ಮರೆಯಾದವಳೆಂದರೆ ಉಷಸ್ ದೇವತೆ. ನಂತರದಲ್ಲಿ ಅಲ್ಲೊಂದು ಇಲ್ಲೊಂದು ಬಾರಿ ಕಂಡುಬರುವುಳಾದರೂ ಅದು ಪರಿಣಾಮಕಾರಿಯಾದ ರೀತಿಯಲ್ಲಿ ಅಲ್ಲ. ವೇದಗಳ ಕಾಲದಲ್ಲಿ ಪ್ರಭಲವಾಗಿ ಮೆರೆದ ಉಷಸ್ ದೇವತೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಿಲ್ಲ. ಬ್ರಾಹ್ಮಣಗಳ ಕಾಲದಲ್ಲಿಯಾಗಲೀ ಉಪನಿಷತ್ತುಗಳ ಕಾಲದಲ್ಲಿಯಾಗಲಿ ಉಷಸ್‌ದೇವತೆಯು ಕಾಣಬರುವುದಿಲ್ಲ. ಆದರೆ, ಸರಸ್ವತಿ ಹಾಗೂ ವಾಕ್ ದೇವತೆಗಳು ಬ್ರಾಹ್ಮಣಗಳ ಕಾಲಕ್ಕಾಗಲೇ ಒಂದೇ ರೂಪವನ್ನು ಪಡೆದಾಗಿತ್ತು.[೯೧] ಆದರೂ ಕೆಲವು ದೇವತೆಗಳು ತಮ್ಮ ರೂಪವನ್ನು ಹಾಗೆಯೆ ಇಟ್ಟುಕೊಂಡಿವೆ. ಉದಾಹರಣೆಗೆ ಇಂದ್ರಾಣಿ, ಪೃಥ್ವಿಯಂತ ದೇವತೆಗಳು ಯಾವುದೇ ಮಾರ್ಪಾಡನ್ನು ತೋರಿಸದೇ ಇವೆ. ಈ ಕಾಲಕ್ಕಾಗಲೇ ಪುರುಷ ದೇವತೆಗಳು ದ್ವಿಗುಣಗೊಳ್ಳುತ್ತಿರುವದು ಕಂಡುಬರುತ್ತದೆ.

ಈ ಕಾಲಕ್ಕಾಗಲೇ ಶೈವ ಪರಂಪರೆ ಹಾಗೂ ವೈಷ್ಣವ ಪರಂಪರೆಗಳು ಉನ್ನತೀಕರಣಗೊಳ್ಳುವುದು ಹಾಗೂ ತಮ್ಮ ಪಾರಮ್ಯವನ್ನು ತೋರಿಸಲು ಅನೇಕ ಪುರಾಣಗಳು ಹುಟ್ಟಿಹಾಕಲಾರಂಭಿಸಿದ್ದರು. ಈ ಕಾಲಕ್ಕಾಗಲೆ ದ್ರಾವಿಡದೇವತೆ ಶಿವನು ವೈದಿಕ ದೇವತೆಯಾದ ರುದ್ರನೊಡನೆ ಸಮೀಕರಣವಾಗಿರುವುದನ್ನು ಸೂತ್ರಸಾಹಿತ್ಯದಲ್ಲಿ ಕಾಣಬಹುದು. ಶಿವನ ಜೊತೆಯಲ್ಲಿಯೇ ಅವನ ಕುಟುಂಬವು ಅಂದರೆ ಸ್ತ್ರೀ ದೇವತೆಗಳು ವೈದಿಕ ಪರಂಪರೆಯನ್ನು ಸೇರಿಕೊಂಡು ವೈದಿಕ ದೇವತೆಗಳೊಡನೆ ಸಮಾನ ಸ್ಥಾನಮಾನವನ್ನು ಹೊಂದಿದವು. ಅಂಬಿಕಾ ಅಮ್ಮಾ ಎಂಬ

ರೂಪದಿಂದ ಬಂದಿರುವುದನ್ನು ಮುಂದೆ ನೋಡುತ್ತೇವೆ. ಅಂಬಿಕಾ ಶಿವನ ಮಡದಿಯಾಗಿ ಕಾಣುವುದಿಲ್ಲ. ಬದಲಾಗಿ ಅವನ ಸಹೋದರಿಯಾಗಿದ್ದಳೆಂದು ವಾಜಸನೇಯಿ ಸಂಹಿತವು ತಿಳಿಸುತ್ತದೆ. ಮುಂದೆ ತೈತ್ತರೀಯ ಆರಣ್ಯಕವು ಇವಳನ್ನು ಶಿವನ ಹೆಂಡತಿಯೆಂದು ತಿಳಿಸುತ್ತದೆ.[೧೦೦] ಗೃಹ್ಯ ಸೂತ್ರದಲ್ಲಿ ಅಂಬಿಕಾಳಿಗೆ ಬಲಿಗ್ರಹಣ ಎಂಬ ಬಲಿಯನ್ನು ಕೊಡುವ ಕ್ರಿಯೆಯನ್ನು ಮಾಡುವುದನ್ನು ಉಲ್ಲೇಖಿಸುತ್ತದೆ. ಬಲಿಯ ಮೂಲಕ ಈ ದೇವತೆಗಳನ್ನು ಒಲಿಸಿಕೊಳ್ಳುವುದೇ ಆಗಿದೆ. ಅದೇ ರೀತಿ ಭದ್ರಕಾಳಿ, ಮುಂತಾದ ದೇವತೆಗಳಿಗೂ ಕೂಡಾ ಈ ಬಲಿಹರಣವನ್ನು ಕೊಡಲಾಗುತ್ತಿತ್ತು. ಮೃಡಾಣಿ, ರುದ್ರಾಣಿ, ಶರ್ವಾಣಿ, ಭವಾನಿ, ಮೊದಲಾದವರು ಶಿವನ ಪತ್ನಿಯರೆಂದು ಇದೆ ಸಂಹಿತವು ತಿಳಿಸುತ್ತದೆ.[೧೦೧] ಹರಿ, ಪುಷ್ಟಿ, ಕಾಳೀ, ಷಷ್ಠಿ, ಭದ್ರಕಾಳಿ, ಮಹಿಷಿಕಾ ಮುಂತಾದ ದೇವತೆಗಳನ್ನು ಕೆಲವು ಸೂತ್ರಗಳಲ್ಲಿ ಉಲ್ಲೇಖಗೊಂಡ ಮಾಹಿತಿಯು ದೊರಕುತ್ತದೆ.[೧೦೨] ಷಷ್ಠಿಯು ಮುಂದೆ ಶ್ರೀಲಕ್ಷ್ಮಿಯಾಗಿ ಪರಿವರ್ತಿತವಾಗುತ್ತಾಳೆ. ಅಲ್ಲದೆ ಲಕ್ಷ್ಮಿಯನ್ನು ಷಷ್ಠಿಯೆಂದು ಕರೆಯಲಾಗಿದೆ.

ಇವಲ್ಲದೆ ಕೆಲವು ಹೊಸ ರೀತಿಯ ದೇವತಾ ಗುಂಪುಗಳು ಬೆಳಕಿಗೆ ಬಂದಿವೆ. ನಾಗಾರಾಧನೆ, ಯಕ್ಷಾರಾಧನೆ ಹಾಗೂ ಅಪ್ಸರೆ ಗಂಧರ್ವರ ಕಲ್ಪನೆಗಳು ವೈದಿಕ ಸಾಹಿತ್ಯದಲ್ಲಿ ಪ್ರವೇಶ ಪಡೆದಿವೆ. ಈ ಆರಾಧನಾ ಪಂಥಗಳು ಆರ್ಯರಿಗೆ ಹೊಸದು ಎನ್ನಬಹುದು. ಯಾಕೆಂದರೆ ವೇದಗಳಲ್ಲಿ ಎಲ್ಲಿಯೂ ಇವುಗಳ ಉಲ್ಲೇಖ ಬರುವುದಿಲ್ಲ. ಹೊಸ ಪರಿಕಲ್ಪನೆಗಳು ಬುಡಕಟ್ಟುಗಳಿಂದ ಎರವಲು ಪಡೆದಿರಬೇಕು. ಕೌಶಿಕ ಸೂತ್ರದಲ್ಲಿ ನಾಗಾರಾಧನೆಯು ಮೊದಲ ಉಲ್ಲೇಖವಾಗಿದೆ. ಇಲ್ಲಿ ವಾಸುಕಿಗೆ ಬಲಿಯನ್ನು ಕೊಡುವ ಆಚರಣೆಯು ಬರುತ್ತದೆ. ಅಲ್ಲದೆ ಯಜ್ಞದ ಸಂದರ್ಭದಲ್ಲಿ ನಾಗಪಾಶ ಅಥವಾ ನಾಗಬಂಧ ಎನ್ನುವ ಹೆಸರಿದೆ. ವಾಜಸನೇಯಿ ಸಂಹಿತೆಯಲ್ಲಿ ದೇವತೆಗೆ ಒಪ್ಪಿಸಲ್ಪಡುವ ಬಲಿಯನ್ನು ಹಗ್ಗದಿಂದ ಕಟ್ಟುವ ಮಾತು ಬರುತ್ತದೆ. ಕಟ್ಟುವ ಹಗ್ಗಕ್ಕೆ ನಾಗಪಾಶ ಎಂದೇ ಅರ್ಥಮಾಡಲಾಗಿದೆ.[೧೦೩] ಯಕ್ಷ ಮತ್ತು ಯಕ್ಷಿಯರ ಕಲ್ಪನೆ ಸಹ ಆರ್ಯೇತರ ಕಲ್ಪನೆಯೇ ಆಗಿದೆ. ಯಕ್ಷಿ ಎನ್ನುವುದು ತಾಯ್ತನದ ಪ್ರತೀಕವೆ ಆಗಿದೆ. ಹೆಣ್ಣಿನ ಸ್ವಭಾವಕ್ಕೆ ಮತ್ತು ಪ್ರಕೃತಿಗೆ ಸಹಜವಾದುದು ಮತ್ತು ವಿಶಿಷ್ಟವಾದುದು ತಾಯ್ತನ. ತಾಯ್ತನವೆಂದರೆ, ಯೋನಿ, ಮೊಲೆಗಳು ಹಾಗೂ ಹಿರಿದಾದ ಸೊಂಟದ ಭಾಗ ಇವು ಫಲವಂತಿಕೆಯ ರೂಪಕಗಳು. ಕೃಷಿಯನ್ನು ನಂಬಿದ ಜನಾಂಗದಲ್ಲಿ ಹೆಣ್ಣಿಗೆ ಹಿರಿದಾದ ಸ್ಥಾನ ಇತ್ತು. ಮಾತೃದೇವತೆಯರ ಉಗಮವು ಈ ವಿಶಾಲವಾದ ತಳಹದಿಯ ಮೇಲೆ ಬೆಳೆದು ಬಂದಿದೆ. "ಪೂರ್ಣಕುಂಭ, ಕಲಶ, ವೃಕ್ಷಪೂಜೆ, ನಾಗಪೂಜೆ, ಯಕ್ಷಿಯರ ಪೂಜೆ, ಅವೆಲ್ಲವೂ ಇದರ ಫಲಗಳೆ."[೧೦೪] ಎಂದು ಹೇಳಲಾಗಿದೆ. ಬೌದ್ಧ ಹಾಗೂ ಜೈನರಲ್ಲಿ ಯಕ್ಷ ಮತ್ತು ಯಕ್ಷಿಯರು ವ್ಯಾಪಕವಾಗಿ ಕಂಡುಬರುತ್ತಾರೆ. ವೇದೋತ್ತರ ಕಾಲದಲ್ಲಿ ದೇವತೆಗಳ ಗಡಣ ಬೆಳೆಯುತ್ತಲೆ ಸಾಗಿತ್ತು. ಜೊತೆಯಲ್ಲಿ ಕೆಲವು ದೇವತೆಗಳ ಸ್ಥಾನ ಬದಲಾವಣೆಯನ್ನು ಹೊಂದುತ್ತಿದ್ದವು.

ಇದೇ ಕಾಲದಲ್ಲಿ ಪ್ರಾಚ್ಯಾವಶೇಷಗಳಲ್ಲಿ ಮಾತೃದೇವತೆಯ ಪರಂಪರೆಯು ಸಿಂಧೂ ನಾಗರಿಕತೆಯ ಮುಂದುವರಿಕೆಯ ಹಲವಾರು ಕುರುಹುಗಳು ದೊರಕುತ್ತವೆ. ತಕ್ಷಶಿಲೆ,ಕೂಸಂ, ಗಾಜಘಾಟ್,ಪಟಾಣ, ನವಡಾತೋಲಿ, ಮಹೇಶ್ವರಿ, ನೇವಸಾ, ಮುಂತಾದ ಕಡೆಗಳಲ್ಲಿ ಮೌರ್ಯ ಪೂರ್ವಕಾಲದ ಸುಡಾವೆಯ ಗೊಂಬೆಗಳು ದೊರಕುತ್ತವೆ.[೧೦೫] ಇವು ಹೆಚ್ಚಾಗಿ ನಗ್ನವಾಗಿದ್ದು, ರೂಪದಲ್ಲಿ ಹರಪ್ಪ ಪ್ರದೇಶದಲ್ಲಿ ಕಂಡುಬರುವ ವಿಗ್ರಹಗಳ ಮಾದರಿಯಲ್ಲಿ ಕಂಡುಬರುವುದು ವಿಶೇಷವೆನ್ನಬಹುದು. ದಕ್ಷಿಣ ಭಾರತವಂತು ಈ ಕಾಲಕ್ಕೆ ಶಕ್ತಿಯ ಆರಾಧನೆಯ ಪ್ರಬಲ ತಾಣವಾಗಿತ್ತು. ಗ್ರಾಮದೇವತೆಗಳ ರೂಪದಲ್ಲಿ ಆರಾಧಿಸುತ್ತಿದ್ದರು. ಆಂಧ್ರಪ್ರದೇಶದ ಘಂಟಸಾಲದಲ್ಲಿ ದೊರಕಿದ ಕ್ರಿ. ಪೂ. ಸುಮಾರು ೩ನೆಯ ಶತಮಾನಕ್ಕೆ ಸೇರಿದ ಒಂದು ವಿಗ್ರಹವು ಶಾರದೆಯ ವಿಗ್ರಹವಾಗಿರಬೇಕು ಎನ್ನಲಾಗಿದೆ.[೧೦೬] ಇದು ಶಕ್ತಿ ಆರಾಧನೆಯ ಪ್ರಾಚೀನ ಆಕರವಾಗಿದೆ. ಅಲ್ಲದೆ ಈ ಕಾಲಕ್ಕೆ ಹಲವಾರು ಆಕರಗಳಲ್ಲಿ ಮಾತೃ ಆರಾಧನೆಯು ಹೆಚ್ಚು ವ್ಯಾಪಕವಾಗಿ ಇತ್ತು ಎಂಬುದು ದ್ರಾವಿಡ ಸಾಹಿತ್ಯದಲ್ಲಿ ಉಲ್ಲೇಖಗಳು ಬರುತ್ತವೆ.

ಇತಿಹಾಸ ಮತ್ತು ಪುರಾಣಗಳ ಕಾಲಕ್ಕೆ ಬಂದಾಗ ದೇವತೆಗಳ ಸಮೂಹವೇ ಎದ್ದು ನಿಲ್ಲುತ್ತದೆ. ಇಲ್ಲಿಯವರೆಗೆ ಅಸ್ಪಷ್ಟ, ಆಕಾರ ರಹಿತವಾಗಿ, ಹಾಗೂ ಸಾಹಿತ್ಯದ ಕೊರತೆಯಿಂದ ಗ್ರಹಿಸಲು ಸಾಧ್ಯವಾಗದ ಕೆಲವು ನ್ಯೂನ್ಯತೆಗಳು ಈ ಹಿಂದೆ ಕಂಡುಬಂದರೆ, ಈಗ ಅದು ಸ್ಪಷ್ಟವಾದ ರೂಪವನ್ನು ಹಾಗೂ ದೇವಿಯರನ್ನು ಕುರಿತ ಸ್ವತಂತ್ರ ಕೃತಿಗಳು ಹೊರಬಂದವು. ಶಕ್ತಿದೇವತೆಗಳು ಶಿಷ್ಟೀಕರಣಗೊಂಡು ಶಿವನ, ವಿಷ್ಣುವಿನ ಜೊತೆಯಲ್ಲಿ ನಿಂತಿದ್ದಾರೆ. ತಾಂತ್ರಿಕ ಪಂಥಗಳು, ದೇವಿಮಹಾತ್ಮ್ಯೆಯಂತಹ ಕೃತಿಗಳು ಕಂಡುಬರುವುದು ಈ ಕಾಲದಲ್ಲಿ.

ಮಹಾಕಾವ್ಯವಾದ ಮಹಾಭಾರತದಲ್ಲಿ ಪ್ರಾಚೀನ ಸ್ವರೂಪವೆಂದು ಹೇಳಬಹುದಾದ ಕ್ರೂರರೂಪ ಹಾಗೂ ಸೌಮ್ಯರೂಪದ ದೇವತೆಗಳನ್ನು ಈ ಮಹಾಕಾವ್ಯಗಳಲ್ಲಿ ಕಾಣಬಹುದು. ಮಹಾಭಾರತದಲ್ಲಿ ದೇವಿ ದುರ್ಗಾಳನ್ನು ಪ್ರಾರ್ಥಿಸುವ ಎರಡು ಪ್ರಸಂಗಗಳು ಬರುತ್ತವೆ. ವಿರಾಟ ಪರ್ವದಲ್ಲಿ[೧೦೭] ಧರ್ಮರಾಯನು ದೇವಿಯನ್ನು ಪ್ರಾರ್ಥಿಸಿದರೆ, ಭೀಷ್ಮಪರ್ವದಲ್ಲಿ[೧೦೮] ಅರ್ಜುನ ದೇವಿಯನ್ನು ವಿಜಯ ತಂದುಕೊಡುವಂತೆ ಮೊದಲು ಪ್ರಾರ್ಥಿಸುತ್ತಾನೆ. ಈ ಕಾಲಕ್ಕೆ ದೇವಿಯ ಹಲವಾರು ಗ್ರಾಮನಾಮಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ. ಮತ್ತು ದೇವಿಯನ್ನು ಕೃಷ್ಣ ಅಥವಾ ವಿಷ್ಣುವಿನ ಸಹೋದರಿ ಎಂಬ ಕಲ್ಪನೆ ಗರಿಗೆದರಿ ನಿಂತಿದೆ. ಅಂದರೆ, ಯಶೋದ ಗರ್ಭಸಂಭೂತಾ, ನಂದಗೋಪ ಕುಲಜಾತಾ, ಕಂಸವಿದ್ರಾವಣಕರೀ, ಶಿಲಾತವಿನಿಕ್ಷಿಪ್ತಾಮಾಕಾಶಂ, ಪ್ರತಿಗಾಮಿನಿಂ ವಾಸುದೇವ ಭಗಿನಿ ಮುಂತಾಗಿ ಹೇಳಲಾಗಿದೆ. ಅಲ್ಲದೆ ಜಯಾ, ವಿಜಯಾ, ಮಹಾಕಾಲಿ, ಹರಿ, ಶ್ರೀ, ಕೀರ್ತಿ, ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಜಯವನ್ನು, ಸಂಪತ್ತು, ಸಂತೋಷ, ಸಂತಾನ, ರೋಗರುಜಿನಗಳಿಂದ ಮುಕ್ತಗೊಳಿಸುವಂತೆ ಧರ್ಮಜ ಪ್ರಾರ್ಥಿಸುತ್ತಾನೆ. ಮತ್ತೊಂದು ಹೊಸ ಸೇರ್ಪಡೆಯೆಂದರೆ,

ಮಹಿಷಮರ್ದಿನಿಯ ರೂಪ. ಸಿಂಧೂ ನಾಗರಿಕತೆಯಲ್ಲಿ ಬೀಜ ರೂಪದಲ್ಲಿದ್ದ ಈ ಕಲ್ಪನೆಯು ಸಾಕಾರಗೊಂಡು ಪಾಶ, ಧನು, ಚಕ್ರ, ಶೂಲ ಹಿಡಿದು ನಾಲ್ಕು ಕೈಗಳನ್ನು ಹೊಂದಿರುವ ದುರ್ಗೆಯಾಗಿ ಕಂಡುಬರುತ್ತಾಳೆ. ದುರ್ಗೆಯು ಶಿವನ ಮಡದಿಯಾಗಿ ಇನ್ನು ಪರಿವರ್ತನೆಯಾಗಿಲ್ಲ. ಬದಲಾಗಿ ತಾಮಸ ಸ್ವಭಾವದ ಕನ್ಯೆಯಾಗಿ,ಕುಮಾರಿಯಾಗಿ, ಬ್ರಹ್ಮಚರ್ಯವನ್ನು ಹೊಂದಿದ ಸ್ವತಂತ್ರ್ಯ ದೇವತೆಯಾಗಿದ್ದಾಳೆ. ಭೀಷ್ಮಪರ್ವದಲ್ಲಿ ಈ ಹಿಂದೆ ಹೇಳದ ಅನೇಕ ಹೆಸರುಗಳು ಹೊಸದಾಗಿ ಕಂಡುಬರುತ್ತವೆ. ಭದ್ರಕಾಳಿ, ಮಹಾಕಾಳಿ, ಕರಾಳಿ, ಚಂಡಿ, ಚಂಡಾ, ಕಾಪಾಲಿ, ಕೌಶಿಕಿ, ಉಮಾ, ಶಾಕಾಂಬರಿ, ವಿರೂಪಾಕ್ಷಿ, ಜಾತವೇದಸಿ, ಬ್ರಹ್ಮವಿದ್ಯಾ, ಮಹಾನಿದ್ರಾ, ಸ್ವಾಹಾ, ಸರಸ್ವತಿ, ವೇದಮಾತಾ,ಮಾಯಾ, ಮುಂತಾದ ಹೆಸರುಗಳು ಇಲ್ಲಿ ಕಂಡುಬರುತ್ತವೆ.

ಮುಂದೆ ಹರಿವಂಶದಲ್ಲಿ೨ ೩.೩೨ ಬರುವ ಆರ್ಯಸ್ತವದಲ್ಲಿ ದೇವಿಯನ್ನು ಮಹಾಭಾರತದಲ್ಲಿ ನೋಡಿರುವಂತೆ ಇಲ್ಲಿಯು **ಸಹ ಬಲದೇವಸ್ಯ ಭಗಿನಿ, ನಂದ ಭೂಪಸುತಾ ಹಾಗೂ ನಾರಾಯಣಿ** ಎಂದು ಕರೆಯಲಾಗಿದೆ. ಮೇರುಪರ್ವತ (ಪಶ್ಚಿಮದ ಪಾಮರ ಬೆಟ್ಟಸಾಲು ಈಗೀನ ಅಪಘಾನಿಸ್ತಾನದಲ್ಲಿ) ಪ್ರದೇಶವನ್ನು ಬಿಟ್ಟು ಮಧ್ಯಭಾರತದ ವಿಂದ್ಯಾಪರ್ವತಕ್ಕೆ ಸ್ಥಳಾಂತರಗೊಂಡಿದ್ದಾಳೆ. ವಿಂಧ್ಯಾವಾಸಿನಿ ದೇವಿ ಎಂದು ಕರೆದಿರುವುದು ಈ ಕಾರಣದಿಂದ. ಅಲ್ಲದೆ **'ಶಬರೈರ್ಬರ್ಬರೈಶ್ಚೈವ ಪುಲಿಂದೈಶ್ಚ ಸಂಪೂಜಿತಾ'** ಎನ್ನುವ ಮಾತು ಅವಳ ಪೂರ್ವಾಪರವನ್ನು ತಿಳಿಸುತ್ತದೆ.ಅಂದರೆ ಬೇಟೆಗಾರರ ದೇವತೆಯಾಗಿದ್ದವಳು, ದುರ್ಗೆಯಾಗಿ ಪರಿವರ್ತಿತವಾಗಿದ್ದಾಳೆ. ಬೆಟ್ಟಗುಡ್ಡಗಳೇ ಅವಳ ವಾಸಸ್ಥಾನವಾಗಿದ್ದು, ವ್ಯಾಧರೆ ಅವಳ ಭಕ್ತರಾಗಿದ್ದಾರೆ. ನಗ್ನಶಬರಿ, ಪರ್ಣಶಬರಿ, ಅಪರ್ಣಾ, ನಗ್ನಿಕಾ, ದಂಡಿನಿ, ಕಾಮಚಾರಿಣಿ, ಮಾರ್ಗದಾಯಿನಿ, ಮುಂತಾದ ಹೆಸರುಗಳು ಅವಳ ಪ್ರಾಚೀನ ರೂಪವನ್ನು ಹಾಗೂ ಸ್ವಭಾವವನ್ನು ತಿಳಿಸುತ್ತವೆ. **ಮಹಿಷಾಶ್ರಿಕ್ಪ್ರಿಯೇ...** ಎಂದರೆ ಕೋಣದ ರಕ್ತವನ್ನು ಇಷ್ಟಪಡುವವಳಾಗಿದ್ದಾಳೆ.ಅಲ್ಲದೆ ಮಧ್ಯ, ಮೀನು ಹಾಗೂ ಮಾನವ ಬಲಿಯನ್ನು ಕೇಳಿ ಪಡೆಯುವ ದೇವತೆಯಾಗಿದ್ದಾಳೆ. ಈ ಎಲ್ಲ ಅಂಶಗಳು ದೇವಿಯ ಪ್ರಾಚೀನ ರೂಪವನ್ನೇ ಸಂಕೇತಿಸುತ್ತದೆ. ಚಟ್ಟೋಪಾದ್ಯಾಯ ಅವರು ಹೇಳುವಂತೆ;

> The association of the goddess with the Vindhyas region is interesting, for the range was the home of various Proto-Austroloid tribes, while else where the goddess is expressedly associated with the Sabaras and the Pulindas who lived on the same range. The description clearly shows that a Mother Goddess of the Proto-Austroloid tribes was now being merged with the great Aryan Mother Goddess and the Saktas were imbibing un-Aryan habits.[೧೧೦]

ಅಲ್ಲದೆ, ರೌದ್ರಿ, ಪ್ರಕೀರ್ಣ ಕೇಶಿ,ಮೃತ್ಯುಸುರಾ, ಮಾಂಸಬಲಿಪ್ರಿಯಾ, ಕಲಹಪ್ರಿಯಾ ಎಂದಾದರೂ ಅವಳ ಇನ್ನೊಂದು ರೂಪದಲ್ಲಿ ಅವಳು ದುಷ್ಟಹನನೀ ಭಕ್ತಾನಾಂ ಪರಿರಕ್ಷಿಣಿಯಾಗಿ ಕಾಣುತ್ತಾಳೆ. ಇದು ಆದಿಮ ಸ್ವರೂಪವೇ ಆಗಿದೆ.

ನಂತರದಲ್ಲಿ ಬಂದು ಮಾರ್ಕಂಡೇಯ ಪುರಾಣದಲ್ಲಿ ಬರುವ ಚಂಡಿಪಾಠ ಅಥವಾ ಸಪ್ತಸತೀ, ಅಥವಾ ದೇವಿಮಹಾತ್ಮೆಯು ದೇವಿಗೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಕೃತಿಯಾಗಿದೆ. ಸುಮಾರು ಒಂದೂವರೆ ಸಾವಿರ ವರ್ಷಗಳ ಅವಧಿಯಲ್ಲಿ ದೇವಿಯನ್ನು ಅಲ್ಲೊಂದು ಇಲ್ಲೊಂದು ಬಾರಿ ಸ್ಮರಿಸಿದ್ದನ್ನು ಬಿಟ್ಟರೆ, ಒಂದು ಕೃತಿಯಾಗಿ ಕಂಡಿದ್ದು ಇಲ್ಲಿಯೆ. ಅಂತೆಯೆ ಸಿಂಧೂ ನಾಗರಿಕತೆಯ ತದನಂತರದಲ್ಲಿ ಇಷ್ಟೊಂದು ವ್ಯಾಪಕವಾಗಿ ಪ್ರಭಾವ ಬೀರಿದ ಕಾಲವೆಂದರೆ ಇದೆಯಾಗಿದೆ. ವಾಮಾಚಾರಕ್ಕೆ ಒಂದು ಚೌಕಟ್ಟನ್ನು ಹಾಕಿಕೊಟ್ಟದ್ದು ಈ ಕಾಲವೇ ಆದ್ದರಿಂದ ಈ ಕಾಲವನ್ನು ಶಕ್ತಿ ಆರಾಧನೆಯ ಪರಮಸ್ಥಿತಿ ಎಂದು ಹೇಳಬಹುದು. ವಿಶ್ವೇಶ್ವರಿ, ಜಗದ್ಧಾತ್ರಿ, ಸ್ಥಿತಿಸಂಹಾರಕಾರಿಣಿಯಾದ ದೇವಿಯು ಸೌಮ್ಯ ಹಾಗು ಘೋರರೂಪಗಳಲ್ಲಿ ಚಂಡಮುಂಡ ಹಾಗೂ ಮಹಿಷ ಎಂಬ ದೈತ್ಯರನ್ನು ಕೊಂದು ಮಹಾದೇವಿಯಾಗಿ ಕಾಣಿಸಿಕೊಳ್ಳುತ್ತಾಳೆ. ಅಂಬಿಕಾ, ಚಂಡಿಕಾ, ಭದ್ರಕಾಳಿ, ದುರ್ಗಾ, ಕಾತ್ಯಾಯಿನಿಯಾಗಿ ದುಷ್ಟ ಜನರನ್ನು ಸಂಹರಿಸುವವಳಾಗಿಯು ಅವಳ ಶಕ್ತಿ ಅಥವಾ ಅವಳ ಹಲವಾರು ರೂಪಗಳಾದ ರಕ್ತಾಕ್ಷಿ, ಶಾಕಾಂಬರಿ ಭೀಮಾ, ಭ್ರಮರಿ, ಮುಂತಾದ ದೇವತೆಗಳು, ಹಾಗೂ ಸಪ್ತಮಾತೃಕೆಯರು ಅವಳಿಗೆ ತಮ್ಮಲ್ಲಿರುವ ಶಕ್ತಿಯನ್ನು ದಾನವರನ್ನು ಕೊಲ್ಲಲು ದಾನ ಮಾಡುತ್ತಾರೆ. ಹೀಗೆ ದೈತ್ಯರನ್ನು ನಿಗ್ರಹಿಸಲು ದೇವಿಯ ಆವಿಷ್ಕಾರವಾಯಿತು.

ಮಾತೃದೇವತೆಯ ಅಥವಾ ದೇವತಾ ಆರಾಧನೆಯು ತನ್ನ ಅನೂನ್ಯತೆಯನ್ನು ಹೊಂದಿದ ಕಾಲವೆಂದರೆ ಗುಪ್ತರ ಆಜುಬಾಜಿನ ಕಾಲವಾಗಿದೆ. ಹಲವಾರು ಬುಡಕಟ್ಟುಗಳ ದೇವತೆಗಳು ಈಗಾಗಲೇ ಹಿಂದೂ ಪರಂಪರೆಯಲ್ಲಿ ಪ್ರವೇಶ ಪಡೆದಿದ್ದವಾದರೂ ಅವುಗಳಿಗೆ ಒಂದು ನಿರ್ಧಿಷ್ಟವಾದ ರೂಪವನ್ನು ಕೊಟ್ಟಿರಲಿಲ್ಲ. ಆದರ ಈ ಕಾಲಕ್ಕೆ ಎಲ್ಲಾ ದೇವತೆಗಳಿಗೆ ರೂಪನಿರ್ದೇಶನ ಮಾಡುವ ಕೃತಿಗಳು ರಚಿತವಾದವು. ಹಲವಾರು ಬುಡಕಟುಗಳ ದೇವತಾ ಮೂರ್ತಿಗಳನ್ನು ಒಂದು ರೂಪಕ್ಕೆ, ಒಂದು ರೂಪದಿಂದ ಹಲವಾರು ರೂಪಗಳಿಗೆ ದೇವತಾ ಮೂರ್ತಿಗಳು ಸ್ಥಿತ್ಯಂತರಗೊಳ್ಳಲಾರಂಭಿಸಿದವು. ಉದಾಹರಣೆಗೆ ಬುಡಕಟ್ಟು ದೇವತೆಯರಾದ ಕಾಳಮ್ಮ, ಎಲ್ಲಮ್ಮ, ದುರುಗಮ್ಮ, ಮುಂತಾದ ದೇವತೆಗಳು ದುರ್ಗಾ ಅಥವಾ ಮಹಿಷಮರ್ದಿನಿಯಲ್ಲಿ ಕಂಡುಬಂದರೆ, ಅದೆ ಮಹಿಷಮರ್ದಿನಿಯು ಅಂಬಿಕಾ, ದುರ್ಗಾ, ಕಾಳಿ, ಪಾರ್ವತಿ, ಮಹೇಶ್ವರಿ, ರುದ್ರಾಣಿ, ಗೌರಿ, ಹೀಗೆ ಅನೇಕ ಗೌರವಾನ್ವಿತವಾದ ಹೆಸರುಗಳನ್ನು ಪಡೆದವು. ಬೆಟ್ಟದಲ್ಲಿ ವಾಸಮಾಡುವ ಬೆಟ್ಟದಮ್ಮ ದೇವತೆಯು ಗಿರಿರಾಜಪುತ್ರಿ, ಗಿರಿಜಾ, ಶೈಲರಾಜತನಯಾ, ಶೈಲರಾಜಪುತ್ರಿ, ಪರ್ವತರಾಜಪುತ್ರಿ ಮುಂತಾಗಿ ಮಾಡಿ

ಉನ್ನತೀಕರಣಗೊಂಡಿತು. ಅಲ್ಲದೆ ಶಿವ, ವಿಷ್ಣು ಹಾಗೂ ಬ್ರಹ್ಮ ತ್ರಿಮೂರ್ತಿಗಳಿಗೆ ಶಕ್ತಿಯರನ್ನು ಪತ್ನಿಯರನ್ನಾಗಿ ಮಾಡಲಾಯಿತು. ಲಕ್ಷ್ಮಿ ಹಾಗೂ ಸರಸ್ವತಿಯರು ಈ ಪತ್ನಿಯರ ಕೆಲಸವನ್ನು ವೈದಿಕ ಸಾಂಪ್ರದಾಯಗಳಿಗೆ ಅನುಗುಣವಾಗಿ ಶ್ರದ್ಧೆಯಿಂದ ನಿರ್ವಹಿಸಿದರೆ, ದುರ್ಗೆಯ ವಿಷಯದಲ್ಲಿ ಹಾಗೂ ನೋಡುವುದಕ್ಕಾಗುವುದಿಲ್ಲ. ಕಾಳಿಯು ಕೆಲವು ಭಾರಿ ಶಿವನನ್ನು ಮೆಟ್ಟನಿಲ್ಲುವ ಸಾಹಸವನ್ನು ತೋರಿಸುತ್ತಾಳೆ. ಪ್ರಕೃತಿ ಮತ್ತು ಪುರುಷರ ಸಾಮರ್ಥ್ಯದಲ್ಲಿ ಪ್ರಕೃತಿಯ ಶ್ರೇಷ್ಠತೆಯನ್ನು ತೋರಿಸುತ್ತಾಳೆ.

ವಿಶೇಷವಾಗಿ ಗುಪ್ತರ ಕಾಲದಲ್ಲಿ ಮೂರ್ತಿಶಿಲ್ಪವು ಅತ್ಯುನ್ನತವಾಗಿ ಬೆಳೆಯಿತು. ಗುಪ್ತರ ಕಾಲವು ಧಾರ್ಮಿಕ ಕ್ಷೇತ್ರದಲ್ಲಿ "... Gupta age radically changed the whole religious outlook of India" ಹಾಗೂ ಧಾರ್ಮಿಕ ಕ್ಷೇತ್ರದಂತೆ ಎಲ್ಲಾ ಕ್ಷೇತ್ರಗಳಲ್ಲಿಪ್ರಭಾವ ಬೀರಿದ ಕಾಲವಾಗಿದೆ. ಗುಪ್ತರ ಕಾಲದ ಆರ್ಥಿಕ ಸಮೃದ್ಧತೆಯ ಪರಿಣಾಮವಾಗಿ ವಾಸ್ತುಶಿಲ್ಪ ತನ್ನ ಪ್ರಖರತೆಯನ್ನು ಹಾಗೂ ವ್ಯಾಪಕತ್ವವನ್ನು ಹೊಂದಿತು. ಶಿವ,ವಿಷ್ಣು, ಜೈನ, ಬುದ್ಧರ ವಿಗ್ರಹಗಳು ಅವುಗಳ ಜೊತೆಗೆ ಅವರ ಪತ್ನಿಯರ ವಿಗ್ರಹಗಳೂ ಪೂಜೆಗೊಳ್ಳಲು ದೇವಾಲಯಗಳ ನಿರ್ಮಾಣವಾಯಿತು. ಮೂರ್ತಿಗಳ ಪ್ರಮಾಣವನ್ನು ನಿರ್ಧರಿಸಲು ಶಾಸ್ತ್ರಬದ್ಧವಾದ ಆಕರ ಗ್ರಂಥಗಳು ಹುಟ್ಟಿಕೊಂಡವು. ಈ ಕಾಲದಲ್ಲಿಯೂ ಸಹ ಹೊಸದಾದ ದೇವತೆಗಳು ಹುಟ್ಟಿಕೊಳ್ಳುತ್ತಿರುವುದನ್ನು ನೋಡಬಹುದು. ಉದಾಹರಣೆಗೆ ತುಳಸಿ. ತುಳಸಿಯು ವಿಷ್ಣುವಿನ ಪತ್ನಿಯಾಗಿದ್ದಾಳೆ. ಅಲ್ಲದೆ ಗೋವು ಈ ಹಿಂದೆ ಪವಿತ್ರವಾದುದಾದರೂ ಅದಕ್ಕೆ ಒಂದು ನಿರ್ದಿಷ್ಟವಾದ ಸ್ಥಾನ ದೊರಕಿರಲಿಲ್ಲ. ಆದರೆ ಈ ಕಾಲಕ್ಕಾಗಲೆ ಗೋವು ಅತ್ಯಂತ ಪವಿತ್ರವಾದ, ದೈವಸ್ವರೂಪಿಯಾದ ಸ್ಥಾನವನ್ನು ಪಡೆಯಿತು. ಗೋವನ್ನು ಮಹಾಭಾರತದಲ್ಲಿ ಸುರಭಿ ಎಂದು ಕರೆಯಲಾಗಿದೆ. ಬೇಡಿದ್ದನ್ನು ಕೊಡುವ ದೇವತೆಯಾಗಿದ್ದಾಳೆ. ಇವಳು ದಕ್ಷನ ಮಗಳೆಂದು, ಹಸುಗಳ ತಾಯಿ ಗಾವಂ ಮಾತರ್‌ಯೆಂದು ಹೇಳಲಾಗಿದೆ. ಸರೂಪಾ, ಹಂಸಿಕಾ, ಸುಭದ್ರಾ, ಸರವರಕಾ ಮಧುಘಾ ಎಂಬ ನಾಲ್ಕು ರೂಪಗಳಿಂದ ದಿಗ್‌ಭಾಗವನ್ನು ಹೊತ್ತಿದ್ದಾಳೆ. ಹಸುವಿನಿಂದ ದೊರಕುವ ಹಾಲು ಹಾಗೂ ಉಪತ್ಪನ್ನಗಳಿಂದ ಅತ್ಯಂತ ಪವಿತ್ರವಾದ ಪ್ರಾಣಿಯಾಗಿತ್ತು. ಅದನ್ನು ಕೊಲ್ಲುವುದು ಪಾಪದ ಕೆಲಸವೆಂದು, ಅದರ ದೇಹದಲ್ಲಿ ಸಮಸ್ತ ದೇವತೆಗಳು ನೆಲಸಿದ್ದಾರೆ ಎಂಬ ಕಲ್ಪನೆ ಬೆಳೆಯಿತು. ಈ ಬೆಳವಣಿಗೆಯಿಂದ ಹಿಂದೂ ಪರಂಪರೆಯೆಂದರೆ ಗೋವು ಎಂಬಷ್ಟು ವಿಶಾಲವಾದ ಅರ್ಥದಲ್ಲಿ ಬೆಳವಣಿಯನ್ನು ಪಡೆಯಿತು.

ದಕ್ಷಿಣ ಭಾರತದಲ್ಲಿ ಈ ಕಾಲದಲ್ಲಿ ಮಾತೃದೇವತಾ ರೂಪಗಳು ವ್ಯಾಪಕವಾಗಿ ಕಾಣಬರುತ್ತವೆ. ತಮಿಳು ಸಂಗಮ್ ಸಾಹಿತ್ಯದಲ್ಲಿ ಶುದ್ಧವೆಂದು ಹೇಳಬಹುದಾದ ರೂಪಗಳು ದೊರಕುತ್ತವೆ. ಈ ದೇವತೆಗಳು ಇನ್ನೂ ಆರ್ಯೀಕರಣ ಗೊಂಡವುಗಳಾಗಿರದೆ, ಮೂಲ ರೂಪವನ್ನು ಪಡೆದವುಗಳಾಗಿರುವುದು. ಅಮರೀ, ಕುಮಾರಿ, ಗೌರಿ, ಶಮರೀ, ಶೂಲಿ, ನೀಲಿ,ಐಯ್ಯೆ, ಸೇಯ್ಯವಳ್, ನಲ್ಲಾಲ್, ಕನ್ನಿ, ಶಂಕರಿ, ಮೊದಲಾದ ದೇವತೆಗಳು ಸಂಗಮ

ಸಾಹಿತ್ಯದಲ್ಲಿ ಕಂಡುಬರುತ್ತವೆ. ಈಗಿನ ಕನ್ಯಾಕುಮಾರಿ ಅತೀ ಪ್ರಾಚೀನವಾದ ದೇವತೆಯಾಗಿದ್ದಾಳೆ. ಕೇರಳದಲ್ಲಿ ಕಾಳಿ ಅಥವಾ ಭದ್ರಕಾಳಿಯ ಆರಾಧನೆಯು ಪ್ರಭಲವಾಗಿತ್ತು. ಕ್ರಿ.ಶ. ಸು ೧೧೫೮ರ ಸುಮಾರಿನಲ್ಲಿ ಭಗವತಿ ದೇವಾಲಯವೊಂದನ್ನು ಸೆಂಗುತ್ತುವನ್ ಪೆರುಮಾಳ್ ಎಂಬುವನು ಕಟ್ಟಿಸಿದಂತೆ ತಿಳಿಯುತ್ತದೆ. ಮೀನಾಕ್ಷಿ ಎಂದು ಕರೆಯುವ ಮಧುರೆಯ ದೇವತೆಯು ಒಂದು ಕಾಲದಲ್ಲಿ ಕಾಳಿಯಾಗಿದ್ದಳೆಂದು ಜನಪದ ನಂಬಿಕೆಗಳು ತಿಳಿಸುತ್ತವೆ. ದಕ್ಷಿಣ ಭಾರತದಲ್ಲಿ ಕಂಡು ಬರುವ ದೇವತೆಗಳನ್ನು ಮುಂದಿನ ಅಧ್ಯಾಯದಲ್ಲಿ ದುರ್ಗೆಯನ್ನು ವಿವರಿಸುವಾಗ ವಿವರವಾಗಿ ಚರ್ಚಿಸಲಾಗಿದೆ

ಸಂಸ್ಕೃತ ಕಾವ್ಯ ಮತ್ತು ನಾಟಕಗಳಲ್ಲಿ ಶಕ್ತಿ ದೇವತೆಗಳನ್ನು ಕಾಣಬಹುದು. ಇಲ್ಲಿ ದ್ರಾವಿಡ ಪೂಜಾರಿಗಳು ಆರಾಧಿಸುತ್ತಿದ್ದುದನ್ನು ಉಲ್ಲೇಖಿಸುತ್ತವೆ. ಶೂದ್ರಕನ ಮೃಚ್ಛಕಟಕದಲ್ಲಿ ಹತ್ತನೆಯ ಅಂಕದಲ್ಲಿ ದುರ್ಗೆಯನ್ನು ಕಾಣಬಹುದು. ಚಾರುದತ್ತನನ್ನು ವಧಿಸಲು ಕರೆದುಕೊಂಡು ಬಂದಾಗ ದುರ್ಗೆಯು ಚಾಂಡಾಲ ಮನೆಯಲ್ಲಿ ಆರಾಧಿಸುವ ದೇವತೆಯಾಗಿ ಕಾಣುತ್ತಾಳೆ. ಬಾಣಭಟ್ಟನ ಹರ್ಷಚರಿತೆಯಲ್ಲಿ ಹರ್ಷನು ಮಲ್ಲಕೂಟ ಗ್ರಾಮವನ್ನು ಹಾದು ಹೋಗುವಾಗ **".. ಪಥಿಕಾ ಜನ ನಮಸ್ಕರೀಯಮಾಣ ಪ್ರವೇಶ ಪಾದಪೋತ್ಕೀರಣ ಕಾತ್ಯಾಯನೀ ಪ್ರಟಿಯಾತನಂ ಶನೈಶ್ಚಂಡಿಕಾ ಕಾನನಮತಿಕ್ರಮ್ಯ ಮಲ್ಲಕೂಟನಾಮಾನಂ ಗ್ರಾಮಮಾಗಾತ್"** (ಎರಡನೆಯ ಉಚ್ಛ್ವಾಸ) ಕಾತ್ಯಾಯನಿಯ ವಿಗ್ರಹಗಳನ್ನು ಮರದಲ್ಲಿ ಕೆತ್ತಿದ್ದರೆಂದು ಹೇಳುತ್ತಾನೆ. ಈ ರೀತಿಯ ಆಚರಣೆಗಳು ಇಂದಿಗೂ ನಮ್ಮಲ್ಲಿ ಕಂಡುಬರುತ್ತವೆ. ಕಾದಂಬರಿಯಲ್ಲಿ ಚಂಡಿದೇವತೆಯ ಆರಾಧನೆಯು **"ಅನವರತ ದಹ್ಯಮಾನ ಗುಗ್ಗುಲು ಬಹುಲ ಧೂಮಾಂಧಕಾರಿತೇಶು ಚಂಡಿಕಾ ಗ್ರಹೇಶು ಧವಲಾಂಬರೇಣ ಶುಚಿಮೂರ್ತಿರೂಪೋಶಿತಾ ಹರಿತ"** ಹೀಗೆ ಪೂಜಿಸುವ ವ್ಯಕ್ತಿಯು ಅಂಧ್ರದ ವ್ಯಕ್ತಿಯಾಗಿದ್ದನೆಂದು ಬಾಣ ಹೇಳುತ್ತಾನೆ. **"ಕ್ವಚಿದಾಂಧ್ರಿಯಮಾಣ ಬಾಹು ವಪ್ರೋಪಯಾಚ್ಯಮಾನ ಚಂಡಿಕಾಂ "**. ಮಕ್ಕಳನ್ನು ಪಡೆಯಲು ಈ ದೇವತೆಯನ್ನು ಪೂಜಿಸಲಾಗುತ್ತಿತ್ತು. ವಿಲಾಸವತಿ ರಾಣಿಯು ಮಕ್ಕಳನ್ನು ಪಡೆಯಲು ಆ ದೇವಾಲಯದಲ್ಲಿ ಇದ್ದು ಪೂಜಿಸುವ ವಿಷಯ ಇಲ್ಲಿ ಬರುತ್ತದೆ. ಮೃಚ್ಛಕಟಕದಲ್ಲಿ ಮೂರು ದಾರಿಗಳು ಸೇರುವ ಜಾಗದಲ್ಲಿ ಬಲಿಯನ್ನು ಅರ್ಪಿಸಲಾಗುತ್ತಿದ್ದ ವಿಷಯ ಬರುತ್ತದೆ. ದರಿದ್ರ ಚಾರುದತ್ತನು ತನ್ನ ಗೆಳೆಯನಾದ ವಿಧೂಷಕನಿಗೆ ರಾತ್ರಿ ದಾರಿಯ ಮಧ್ಯದಲ್ಲಿ ಬಲಿಯನ್ನು ಕೊಟ್ಟು ಬರುವಂತೆ ತಿಳಿಸುತ್ತಾನೆ. ಇದು ಇಂದಿಗೂ ಆಚರಣೆಯಲ್ಲಿರುವ ಒಂದು ವಿಧಾನವಾಗಿದೆ.

೨.೩.೧. ಜನಪದ ದೇವತೆಗಳು

ಮಾತೃದೇವತೆಯ ಆರಾಧನೆಯೆಂದರೆ ಅದು ಒಂದು ರೀತಿಯಲ್ಲಿ ಗ್ರಾಮದೇವತೆಗಳ ಅಧ್ಯಯನವೇ ಆಗಿದೆ. ಯಾಕೆಂದರೆ ಭಾರತೀಯ ಸಮಾಜದ ಸುಮಾರು ತೊಂಬತ್ತು ಭಾಗ ಗ್ರಾಮದೇವತೆಗಳೆ ಆಕ್ರಮಿಸಿದ್ದಾರೆ. ಈ ಎಲ್ಲ

ದೇವತೆಗಳು ಅನಾಗರೀಕ ಸಂಸ್ಕೃತಿಯಾಗಿ ಕಂಡುಬಂದರೂ ವಾಸ್ತವವಾಗಿ ಅದೊಂದು ಜೀವನ ಕ್ರಮವಾಗಿ ಕಂಡುಬರುತ್ತದೆ. ಶಿಷ್ಟರಿಗೆ ಇದು ಅನಾಗರಿಕತೆಯ ಲಕ್ಷಣದ ಪ್ರತೀಕವಾದರೆ, ಗ್ರಾಮದ ಜೀವಿಗೆ ಅದೊಂದು ಪವಿತ್ರ ಜೀವನದ ವಿಧಾನವಾಗಿದೆ. "ಗ್ರಾಮದೇವತೆಗಳು ಗ್ರಾಮೀಣರ ಮಾನಸಿಕ ಅಗತ್ಯವೆನ್ನಬಹುದು. ದೇವತೆಯಿಲ್ಲದೆ ಅವರು ಯಾವುದನ್ನೂ ಆರಂಭಿಸುವುದಿಲ್ಲ. ಬೆಳಗಿನಿಂದ ಸಂಜೆಯ ತನಕದ ದುಡಿಮೆಯಲ್ಲಿ, ಇನ್ನಿತರ ಸಮಯದಲ್ಲಿ ದೇವರ ಆಸರೆ ಅವರಿಗೆ ಬೇಕು. ಅವರ ಎಲ್ಲಾ ಚಿಂತನೆಗಳೂ ಕ್ರಿಯೆಗಳೂ ಆಣೆ ಪ್ರಮಾಣಗಳೂ ದೇವತೆಯ ಸಾಕ್ಷಿಯಲ್ಲಿ ಸಾಗುತ್ತವೆ. ಗ್ರಾಮದೇವತೆಗೆ ಸಂಬಂಧಿಸಿದಂತೆ ಊರಿನ ಎಲ್ಲ ಜಾತಿಗಳ ಜನಕ್ಕೂ ಒಂದೊಂದು ಜವಾಬ್ದಾರಿ ವಿತರಣೆಯಾಗಿರುತ್ತದೆ. ಈ ಜವಾಬ್ದಾರಿಯನ್ನು ಸಂಬಂಧಪಟ್ಟವರು ಆನುವಂಶಿಕವಾಗಿ ನಿರ್ವಹಿಸುತ್ತಾ ಬಂದಿರುತ್ತಾರೆ. ಇಡೀ ಗ್ರಾಮದ ಐಕ್ಯತೆ ಸಾಮರಸ್ಯದ ಜೀವಾಳ ಈ ಗ್ರಾಮದೇವತೆಯೇ ಆಗಿರುತ್ತದೆ. ಆದ್ದರಿಂದ ಪರೋಕ್ಷವಾಗಿ ವ್ಯಕ್ತಿಯ ಮತ್ತು ಗ್ರಾಮದ ಸಮೂಹದ ಮಾನಸಿಕ ನಿಯಂತ್ರಣ ಈ ದೇವತೆಯದೇ ಆಗಿರುತ್ತದೆ." [೧೧೧]

ಗ್ರಾಮದೇವತೆಗಳು ಈ ರೀತಿ ಜನಪದ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಗ್ರಾಮದೇವತೆಗಳ ಆರಾಧನೆ ಕೃಷಿ ಪ್ರಧಾನವಾದ ಸಮಾಜದಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ಕೃಷಿ ಸಮಾಜವಾದ ಸಿಂಧೂ ನಾಗರಿಕತೆಯಲ್ಲಿ ಶಕ್ತಿಯ ಆರಾಧನೆಯ ಕುಡಿಗಳು ಕಂಡುಬರುತ್ತವೆ. ಇದನ್ನು ಗ್ರಾಮದೇವತೆಗಳ ಮೂಲ ರೂಪವೆಂದು ತಿಳಿಯಲಾಗಿದೆ. ಕೃಷಿ ಬೆಳೆದು ಬಂದಿರುವುದು ಸ್ತ್ರೀಯಿಂದಲೇ ಎಂಬುದು ಸ್ಥಾಪಿತವಾದ ವಿಷಯವಾಗಿದೆ. ಇಲ್ಲಿಯೂ ಕೆಲವು ಸಂಶಯಗಳಿದ್ದರೂ ಅವು ವ್ಯಾಪಕತ್ವವನ್ನು ಹೊಂದಿಲ್ಲ. ಸ್ತ್ರೀಯರು ಕೃಷಿಕ ಸಮಾಜದಲ್ಲಿ ಹೆಚ್ಚು ಅಧಿಕಾರಗಳನ್ನು ಹೊಂದಿರುತ್ತಾರೆ. ಅಲ್ಲದೆ ಅವರ ಸಂತತಿಯನ್ನು ಗುರುತಿಸುವುದು ತಾಯಿಕಡೆಯಿಂದಲೆ. ಅದೇ ಪರಂಪರೆಯಲ್ಲಿ ದ್ರಾವಿಡರ ಬಹುತೇಕ ಬುಡಕಟ್ಟುಗಳು ಹಾದು ಬಂದಿವೆ. ಅದರ ಅನೇಕ ಅಂಶಗಳು ದ್ರಾವಿಡ ಜನಾಂಗದಲ್ಲಿ ಇಂದಿಗೂ ತನ್ನಲ್ಲಿ ಅಂತರ್ಗತಮಾಡಿಕೊಂಡು ಬಂದಿವೆ.

ಗ್ರಾಮದೇವತೆಗಳನ್ನು ಈ ಹಿನ್ನೆಲೆಯಲ್ಲಿ ನೋಡಿದಾಗಲೂ ಸಹ ಅವು ಆದಿಮ ರೂಪದ ಕೊಂಡಿಗಳಾಗಿ ಕಂಡುಬರುತ್ತವೆ. ಶಿಷ್ಟೀಕರಣಗೊಂಡ ದೇವತೆಗಳಲ್ಲಿ ಈ ಅಂಶ ಸೂಕ್ಷ್ಮವಾಗಿ ಹೆಣೆದು ಕೊಂಡು ಅನೇಕ ಮಾರ್ಪಾಡುಗಳನ್ನು ಹೊಂದಿ ರೂಪಾಂತರಗೊಂಡಿದ್ದರೆ, ಇಲ್ಲಿ ಅದು ಪ್ರಾಕೃತ ರೂಪವನ್ನು ಉಳಿಸಿಕೊಂಡು ಬಂದಿದೆ. ತಾನು ಜೀವಿಸುವ ಸುತ್ತಲಿನ ಪರಿಸರ ಪ್ರಪಂಚವೇ ಅವನ ಆರಾಧನೆಯ ಮೂಲವಸ್ತುವಾಗಿದೆ. ನಿಸರ್ಗದ ಕಾಡು, ಪ್ರಾಣಿಗಳು, ಮಣ್ಣು, ಮರ, ಕಲ್ಲು, ಅಥವಾ ಇನ್ನಾವುದರ ಮೂಲಕ ಕಾಣುವ ಪ್ರಕೃತಿಯ ವೈಚಿತ್ರಗಳು ಸಾಕಾರ ರೂಪ ಪಡೆಯುತ್ತವೆ. ತನ್ನೊಡನೆ ನಿನ್ನೆ ಇದ್ದು ಇಂದು ಇಲ್ಲವಾದ ತನ್ನ ಬಂಧುಗಳ ಆತ್ಮ ಅವನ ಆರಾಧನೆಯ ಸಂಕೇತವಾಗಬಹುದು. ಅಥವಾ ತನ್ನ ಸತ್ತ ಗಂಡನೊಡನೆ ಬೆಂಕಿಯಲ್ಲಿ ಬೆಂದ ಸತಿಯಾಗಿರಬಹುದು

ಅಥವಾ ತನ್ನ ಮೇಲೆ ಪದೆಪದೆ ಬಂದೆರಗುವ ಪ್ರಾಣಿಗಳಾಗಿರಬಹುದು, ಆರೋಗ್ಯವಂತ ಮಗು ಇತರರಿಗೆ ಗೊತ್ತಿರದ ಕಾಯಿಲೆ ಬಿದ್ದಾಗ ಅದು ಯಾವುದೋ ದುಷ್ಟ ಶಕ್ತಿಯಿಂದ ಬಂದಿದೆ ಎಂದು ಭಾವಿಸುವ, ಹೀಗೆ ಅವನ ಜೀವನದಲ್ಲಿ ಘಟಿಸುವ ಘಟನಾವಳಿಗಳೇ ಅವನ ಈ ದೇವತ್ವದ ಹುಡುಕಾಟಕ್ಕಾಗಿ ಕಾರಣವಾಗಿರಬೇಕು. ಈ ದುರ್ಘಟನೆಗಳು ಘಟಿಸದಂತೆ ಕೇಳುವುದಾಗಿರಲಿಲ್ಲ. ಅವು ಬರದಿರಲು ಅವುಗಳನ್ನು ತೃಪ್ತಿ ಪಡಿಸುವುದು ಆ ಮೂಲಕ ಘಟನೆಗಳು ಸಂಭವಿಸದಂತೆ ಮಾಡುವುದೇ ಆಗಿದೆ. ವೈದಿಕ ದೇವತೆಗಳಲ್ಲಿ ಅಥವಾ ಗ್ರಾಮದೇವತೆಗಳಲ್ಲಿ ಕಂಡುಬರುವ ಅಂಶವೇ ಇದಾಗಿದೆ. ಗಣೇಶ ಅಥವಾ ಸ್ತ್ರೀ ದೈವಗಳಿಗೆ ಮೊದಲು ಪೂಜೆ ಸಲ್ಲಿಸಲಾಗುತ್ತಿತ್ತು, ಅದು ಅವುಗಳನ್ನು ತೃಪ್ತಿಪಡಿಸಲು ಅಲ್ಲ. ಅವುಗಳು ತಮ್ಮ ಕೆಲಸಕ್ಕೆ ಅಡೆತಡೆ ತೊಂದರೆಗಳನ್ನು ಉಂಟುಮಾಡದಿರಲಿ ಎಂಬುದೇ ಆಗಿದೆ ಎಂಬುದನ್ನು ಗಮನಿಸಬಹುದು.

"ಮಾತೃದೇವತೆಗಳು ಅತೀ ಪ್ರಾಚೀನವಾದ ಭೂಮಿಪೂಜೆ ಅಥವಾ ಮಾತೃಪೂಜೆಯ ಕುರುಹುಗಳಲ್ಲದೆ ಬೇರೆಯಲ್ಲ. ಕೆಲವೊಮ್ಮೆ ಅವು ಫಲಶಕ್ತಿಯ ಸ್ಪಷ್ಟ ಪ್ರತೀಕಗಳಂತೆ ಕಾಣುತ್ತವೆ. ಅರಣ್ಯ ವಾಸಿಗಳಾದ ಬುಡಕಟ್ಟು ಜನಾಂಗಗಳು ಪೂಜಿಸುವ ಪ್ರೇತಾತ್ಮಗಳು ಗ್ರಾಮಸಮುದಾಯಗಳು ಬೆಳೆದ ಮೇಲೆ ಗ್ರಾಮದೇವತೆಗಳಾಗಿ ಮಾರ್ಪಾಟು ಹೊಂದಿರುವ ಸಾಧ್ಯತೆಗಳಿವೆ. ಅಥವಾ ಐತಿಹಾಸಿಕ ಕಾಲದಲ್ಲಿ ನಡೆದ ಕೆಲವು ಘಟನೆಗಳು ಹಾಗೂ ಆಕಸ್ಮಿಕಗಳು ಕೂಡ ಅಂಥ ದೇವತೆಗಳನ್ನು ಸೃಷ್ಟಿಸಿರಬಹುದು. ಕೆಲವೊಮ್ಮೆ ಕಾಲುಜಾರಿ ಬಿದ್ದ ಅಥವಾ ಸಿಡಿಲು ಬಡಿದು ಅಥವಾ ಇತರ ಆಕಸ್ಮಿಕಗಳಿಗೆ ಸಿಕ್ಕು ಅಪಮೃತ್ಯುವಿಗೆ ತುತ್ತಾಗಿರಬಹುದು, ಇಂತಹ ಇನ್ನೂ ಹಲವಾರು ಬಗೆಗಳಲ್ಲಿ ನಿರಪರಾಧಿಗಳು ಸಾಯಬಹುದು. ಹೀಗೆ ಸತ್ತವರ ಪ್ರೇತಾತ್ಮಗಳು ಜನರಲ್ಲಿ ಭಯಭಕ್ತಿಯನ್ನು ಹುಟ್ಟಿಸಿ ಅವರಿಂದ ಪೂಜೆಯನ್ನು ಪಡೆಯಬಹುದು."[೧೧.೨] ಹೀಗೆ ಅವನ ಸುತ್ತಣ ಪ್ರಪಂಚವೇ ಆರಾಧನೆಯ ವಸ್ತುವಾಗಿ ಪರಿಣಮಿಸಿತು. ಒಂದು ರೀತಿಯಲ್ಲಿ ಮೊದಲು ಆರಂಭವಾಗಿದ್ದು ಅವುಗಳ ಮೇಲಿನ ನಿಯಂತ್ರಣವಾದರೂ ನಂತರದ ಆರಾಧನೆಯಲ್ಲಿ ಅವುಗಳಿಂದ ಸಹಾಯ ಪಡೆಯುವುದೆ ಆಗಿದೆ. ಕೃಷಿಯನ್ನು ಪ್ರಧಾನವಾಗಿ ಇಟ್ಟುಕೊಂಡ ಸಮುದಾಯಗಳಲ್ಲಿ ಆಕಾಶದೇವತೆಗಳಿಗೆ ಮೊದಲ ಸ್ಥಾನ ಇದ್ದ ಹಾಗೆ ಕಾಣುವುದಿಲ್ಲ. ಇಲ್ಲಿ ಏನಿದ್ದರೂ ಭೂಮಿಯ ಮೇಲಿನ ದೇವತೆಗಳಿಗೆ ಮಾತ್ರ ಸ್ಥಾನ ದೊರಕಿರುವ ಹಾಗೆ ಇದೆ.

ಮಾತೃದೇವತೆ ಉಗಮವು ಕೃಷಿಯ ಜೊತೆಯಲ್ಲಿಯೇ ಪ್ರಾರಂಭವಾಯಿತು. ಗಂಡು ಯಾವಾಗಲು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆಮಾರಿಯಾಗಿ ಅಲೆಯುತ್ತಿದ್ದಾಗ ಮನೆಯ ಸಮಸ್ತ ಜವಾಬ್ದಾರಿಯು ಹೆಣ್ಣಿನದಾಗಿತ್ತು. ಸ್ತ್ರೀ ಮತ್ತು ಭೂಮಿಯ ಸಮಾನ ಗುಣಗಳಾದ ಫಲವಂತಿಗೆ, ಗರ್ಭಧರಿಸುವುದು ಇವು ಪೂಜ್ಯತೆಯ ಅಂಶಗಳಾಗಿ ಕಾಣುತ್ತವೆ. ಸಮೃದ್ಧಿಯ ಆಚರಣೆಯ ಆಚರಣೆಗಳು ಸ್ತ್ರೀ ಆರಾಧನೆಯೇ ಆಗಿವೆ. ಭೂಮಿಯ ಫಲವಂತಿಕೆ ಹೆಚ್ಚಾಗಬೇಕಾದರೆ ಅದಕ್ಕೆ ರಕ್ತವನ್ನು ಕೊಟ್ಟು ಅಥವಾ ಬಲಿಯನ್ನು ಕೊಡುವುದರಿಂದ

ಬೆಳೆಯು ಹೆಚ್ಚಾಗುತ್ತದೆ ಎಂಬ ನಂಬಿಕೆ ಬೆಳೆಯಿತು. ಈ ನಂಬಿಕೆಗಳು ದೃಢಪಟ್ಟಂತೆ ದೇವತೆಗಳು ಹುಟ್ಟಿಕೊಳ್ಳಲಾರಂಭಿಸಿದವು. ಅವುಗಳಿಂದ ತನಗೆ ಒದಗುವ ಸಂಕಷ್ಟಗಳು ಪರಿಹಾರವಾಗುತ್ತವೆ ಎಂಬ ನಂಬಿಕೆಗಳು ಬೆಳೆಯುತ್ತಲೆ ಅವುಗಳ ಮೇಲೆ ತನ್ನ ನಿಯಂತ್ರಣವನ್ನು ಸಾಧಿಸಲು ಪ್ರಯತ್ನಪಡತೊಡಗಿದ. "ಪ್ರಕೃತಿಯ ಎಲ್ಲ ವೈಚಿತ್ರ್ಯಗಳನ್ನು, ಬಿಡಿಸಲಾಗದ ನಿಗೂಢಗಳನ್ನು ಗಮನಿಸಿದ ಆದಿಮ ಮನುಷ್ಯ ತನ್ನನ್ನೂ ಮೀರಿದ ಅಗೋಚರ ಶಕ್ತಿಯೊಂದಿದೆ ಎಂದು ನಂಬಿದ. ಈ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನ್ನ ಒಳ್ಳೆಯದನ್ನು ಸಾಧಿಸಿಕೊಳ್ಳಬೇಕು ಎಂಬುದು ಅವನ ಉದ್ದೇಶವಾಯಿತು. ಯಾಕೆಂದರೆ ನಿಸರ್ಗದ ಒಡಲಲ್ಲಿ ಬಾಳುತ್ತಿದ್ದ ಅವನಿಗೆ ಸಹಜವಾಗಿಯೇ ನೂರೆಂಟು ಕಂಟಕಗಳು ಎದುರಾಗುತ್ತಿದ್ದವು. ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನಗೆ ಒದಗುವ ಕಂಟಕಗಳಿಂದ ಪಾರಾಗಬೇಕು ಎಂಬುದು ಅವನ ತರ್ಕವಾಗಿತ್ತು. ಹೀಗಾಗಿ ಆರಂಭದ ಅವನ ದೇವರ ಕಲ್ಪನೆಯು ಒಂದೆ ತಾನು ದೇವರ ಕೃಪೆಯಿಂದ ದೊಡ್ಡವನಾಗಬೇಕು, ಸಂಪಾದಿಸಬೇಕು, ಎಂಬ ಸ್ವಾರ್ಥಕ್ಕಿಂತ ತನಗೆ ಒದಗುವ ಸಂಕಷ್ಟಗಳಿಂದ ಪಾರಾಗಬೇಕು ಎಂಬ ಸಹಜ ಉದ್ದೇಶವಿತ್ತು.

ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಬಗೆ ಹೇಗೆ ಎಂಬ ಪ್ರಶ್ನೆಗೆ ಅವನು ಎರಡು ರೀತಿಯಲ್ಲಿ ದೈವವನ್ನು ಅಥವಾ ಶಕ್ತಿಯನ್ನು ಗೆಲ್ಲುವ ಪ್ರಯತ್ನ ಮಾಡಿದ. ಗೆಲ್ಲುವ ಪ್ರಯತ್ನದ ಫಲವಾಗಿ ರೂಪಗೊಂಡದ್ದು,

೧. ಮಾಟದ ಮೂಲಕ ನಿಯಂತ್ರಿಸುವುದು

೨. ಆರಾಧನೆಯ ಮೂಲಕ ಒಲಿಸಿಕೊಳ್ಳುವುದು [೧೧೩]

ಮಾಟ ಅಥವಾ ಮಾಂತ್ರಿಕತೆಯು ಮನಸ್ಸಿನ ಮೇಲೆ ಹೇರುವ ಒತ್ತಡದ ತಂತ್ರವಾಗಿದೆ. ಅಪೇಕ್ಷಿತ ಅಥವಾ ಉದ್ದೇಶಿತವಾದ ಗುರಿಯನ್ನು ಹೊಂದಲು ಇಂಥದ್ದನ್ನೇ ಮಾಡು ಎಂದು ಆಜ್ಞೆ ನೀಡುವುದು ವಿಧ್ಯರ್ಥಕ ಮಾಟವಾದರೆ, ಸಾಮೂಹಿಕ ಜೀವನದ ಮೇಲೆ ಆಗಬಹುದಾದ ದುಷ್ಪರಿಣಾಮವನ್ನು ತಡೆಗಟ್ಟುವುದಕ್ಕಾಗಿ ಇಂಥದ್ದನ್ನು ಮಾಡಬೇಡ ಎಂದು ಹೇಳುವುದು ನಿಷೇಧಾತ್ಮಕ ಮಾಟವಾಗಿದೆ. ಹೀಗೆ ವಿಧಿ ನಿಷೇಧಗಳು ಕಟ್ಟುಪಾಡುಗಳಾಗಿ, ನಂಬಿಕೆಗಳಾಗಿ ರೂಪುಗೊಂಡವು. ಈ ತಂತ್ರವನ್ನು ಒಳಿತಿಗಾಗಿ ಬಳಸಬಹುದು, ಅಥವಾ ಕೆಡಿಕಿಗಾಗಿ ಬಳಸಬಹುದು. ಪರಿಣಾಮ ಮಾತ್ರ ಒಂದೇಯಾಗಿರುತ್ತದೆ. ಹೀಗೆ ಮಾಂತ್ರಿಕ ಆಚರಣೆಗಳ ಮೂಲಕ ಪ್ರಕೃತಿಯನ್ನು ಒಲಿಸಿಕೊಳ್ಳುವ ಮೂಲಕ ನಡೆಸುವ ಕ್ರಿಯೆಗಳು ಮುಂದೆ ದೇವರುಗಳ ಅಸ್ತಿತ್ವಕ್ಕೆ ಬುನಾದಿಯಾಗಿರಬೇಕು.

ದೇವತೆಗಳು ಕಾಣಿಸಿಕೊಳ್ಳುವುದೇ ಎರಡು ಚೈತನ್ಯ ಅಥವಾ ಶಕ್ತಿರೂಪದಲ್ಲಿ, "ಒಂದು ಪೊರೆಯುವ ಚೈತನ್ಯ ಅಥವಾ ಶಕ್ತಿಯಾದರೆ, ಇನ್ನೊಂದು ನಾಶಮಾಡುವ ಅಥವಾ ಶಕ್ತಿಯಾಗಿದೆ. ಮಳೆ, ಗಾಳಿ,ಬೆಂಕಿ ಇಂಥ ಚೈತನ್ಯ ಪಡೆದಿದ್ದವು ಮನುಷ್ಯನ ಹುಟ್ಟಿಗೆ ಕಾರಣವಾಗುವ ನಿಸರ್ಗವೇ ಅವನ ಸಾವಿಗೂ ಕಾರಣವಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಆ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಅಥವಾ ನಿಯಂತ್ರಿಸುವ ಪ್ರಕ್ರಿಯೆಯಲ್ಲಿ, ಆ ಶಕ್ತಿಗೆ ಅವನೊಂದು ರೂಪ ಕೊಟ್ಟು, ತನ್ನ ಕಲ್ಪನೆಯನ್ನು ವಿಸ್ತರಿಸಿದ."[೧೧೪] ಆಹಾರಸಂಗ್ರಹಣೆಯ ಕಾಲದಿಂದ ಕೃಷಿ ಆರಂಭಗೊಂಡ ಯುಗದಲ್ಲಿ ದೇವತೆಗಳ ಉಗಮ ಮತ್ತು ವಿಕಾಸನಿರಂತರವಾಗಿ ನಡೆಯುತ್ತಲೆ ಅದು ಕೃಷಿಯ ಯುಗದ ಅಂತ್ಯದಲ್ಲಿ ಸ್ಪಷ್ಟವಾದ ರೂಪವನ್ನು ಪಡೆಯಿತು.

ಗ್ರಾಮ ದೇವತೆಗಳನ್ನು ನೋಡುವುದಾದರೆ, ಮಾತೃದೇವತೆಯ ಪ್ರತಿನಿಧಿಗಳಾಗಿ ಈ ಗ್ರಾಮದೇವತೆಗಳು ಕಂಡುಬರುತ್ತಾರೆ. ಗ್ರಾಮದೇವತೆಗಳು ಗ್ರಾಮಗಳಲ್ಲಿ ಆರಾಧಿಸುವ ದೇವತಾ ರೂಪಗಳಾಗಿವೆ. ಅಲ್ಲದೆ ಕೃಷಿಗೆ ಸಂಬಂಧಪಟ್ಟ ಸಮೃದ್ಧಿಯ ಆಚರಣೆಗಳು ಸ್ತ್ರೀಗೆ ಸಂಬಂಧಪಟ್ಟ ಆಚರಣೆಗಳಾಗಿವೆ. "ಎಲ್ಲ ಪದ್ಧತಿಗಳು ಮತ್ತು ಸಾಂಸತಿಕ ಲಕ್ಷಣಗಳು ಹೆಣ್ಣಿನ ಮೂಲಕವೇ ಸಂವಹನಗೊಳ್ಳುತ್ತಿದ್ದವು. ಹೆಣ್ಣು ಒಂದು ಜನಾಂಗದ ಸಂಕೇತವಷ್ಟೇ ಅಲ್ಲ ಜೀವೋತ್ಪತ್ತಿಯ ಮೂಲ ಶಕ್ತಿಯಾಗಿದ್ದಳು. ಆಕೆಯ ಅಂಗಾಂಗಗಳು ಮತ್ತು ಗುಣಶಕ್ತಿಗಳಿಗೆ ಸೃಷ್ಟಿಶಕ್ತಿಯ ಸಾಮರ್ಥ್ಯವಿದೆಯೆಂದು ಭಾವಿಸಲಾಯಿತು. ಅವುಗಳನ್ನು ಚೈತನ್ಯ ಶಕ್ತಿಯ ಸಂಕೇತಗಳೆಂದು ತಿಳಿಯಲಾಯಿತು. ಸಮಾಜದ ಬೆಳವಣಿಗೆಯ ಮೊದಲ ಹಂತದಲ್ಲಿ ಮಾತೃವೇ ಧರ್ಮದ ಕೇಂದ್ರಸ್ಥಾನದಲ್ಲಿದ್ದಳು.... ಪ್ರಾರಂಭದಲ್ಲಿ ಕೃಷಿಕಳಾಗಿದ್ದ ಹೆಣ್ಣು ಸಮೃದ್ಧಿಗೋಸ್ಕರ ನಡೆಯುವ ಕೃಷಿಯ ಆಚರಣೆಗಳನ್ನು ನಡೆಸಿಕೊಡುವ ಹೊಣೆಗಾರಿಕೆಯನ್ನು ಹೊತ್ತಳು."[೧೧೫] ಗರ್ಭಧರಿಸುವ ಕ್ರಿಯೆಯಲ್ಲಿ ಗಂಡಿನ ಪಾತ್ರವೇ ಇಲ್ಲ ಎಂಬ ತಿಳುವಳಿಕೆಯೊಂದಿತ್ತು. ಆದರೆ ಗಂಡಿನ ಪಾತ್ರದ ಅರಿವಾದಾಗಲೂ ಸಹ ಹೆಣ್ಣಿನ ಪಾರಮ್ಯವೇನೂ ಕಡಿಮೆಯಾಗಲಿಲ್ಲ. ಬದಲಾಗಿ ಗಂಡು ಹೆಣ್ಣಿನ ವೇಷದಲ್ಲಿ ಆರಾಧನಾ ಕ್ರಿಯೆಯಲ್ಲಿ ಹೆಣ್ಣಿನ ರೂಪದಲ್ಲಿ ಪ್ರವೇಶ ಪಡೆದ. ಹೀಗೆ ಮಾತೃಪ್ರಧಾನ್ಯತೆಯ ಸಮಾಜವನ್ನು ಹೊಂದಿದ್ದರಿಂದ ಆ ವ್ಯವಸ್ಥೆಯಿಂದ ರೂಪತಳೆದ ಮಾತೃದೇವತೆಯರು ಶಿಷ್ಟದೇವತೆಯ ರೂಪದಲ್ಲಿ, ಗ್ರಾಮದೇವತೆಯ ರೂಪದಲ್ಲಿ ಕಂಡುಬರುತ್ತಾರೆ. ಶಿಷ್ಟ ದೇವತೆಗಳ ಅಧ್ಯಯನಕ್ಕೆ ಸಾಹಿತ್ಯ ಹಾಗೂ ಇತರೆ ಆಕರಗಳು ದೊರಕುತ್ತವೆ. ಆದರೆ,ಗ್ರಾಮದೇವತೆಗಳ ಅದ್ಯಯನಕ್ಕೆ ಆಕರವೆಂದರೆ ನಂಬಿಕೆಗಳು. ಈ ನಂಬಿಕೆಗಳೇ ಮುಂದೆ ಐತಿಹ್ಯಗಳಾಗಿ ಅಥವಾ ಸ್ಥಳಪುರಾಣಗಳಾಗಿರುವುದು. ಇವು ಬರೀ ಮಿಥ್‌ಗಳಿಂದ ತುಂಬಿದವಲ್ಲ. ಜೀವನಾನುಭವಗಳೇ ಇವಾಗಿವೆ. ಇಂದಿನ ಕಾಲಕ್ಕೆ ಮಾತ್ರ ಸೀಮಿತವಾಗಿರದೇ ಕಾಲಕಾಲದಿಂದ ಬೆಳೆದು ಬಂದವುಗಳಾಗಿವೆ. ಇವನ್ನು living memory ಎಂದು ಕರೆಯಬಹುದು. ಅವುಗಳು ಎಂದು ಜನರ ನೆನಪಿನಿಂದ ಮರೆಯಾಗುವುದಿಲ್ಲ. ನಿರಂತರವಾಗಿ ಮುಂದುವರೆಯುತ್ತಲೇ ಇರುತ್ತವೆ. ಅಂತೆಯೆ "ಪುರಾಣ

ಅನಾಗರಿಕ ಜನರು ಕೇವಲ ಹೇಳಿದ ಕಥೆಯಲ್ಲ. ಅತ್ಯಂತ ಕ್ರಿಯಾಶಾಲಿಯಾದ ಸಾಂಸತಿಕ ಶಕ್ತಿ ಎಂಬ ಮಾತನ್ನು ಜಾನಪದ ಪುರಾಣಗಳಿಗೂ ಅನ್ವಯಿಸಬಹುದಾಗಿದೆ."[೧೧೬]

ಹಾಗಾದರೆ ಈ ಐತಿಹ್ಯಗಳು ಹೇಗೆ ಹುಟ್ಟುತ್ತವೆ ಎಂದರೆ ಪ್ರಾಪಂಚಿಕ ವ್ಯವಹಾರದಲ್ಲಿ ಸಾಮಾನ್ಯ ಘಟನೆಗಳಿಗಿಂತ ಅಘಟಿತ ಘಟನೆಗಳು ನಡೆದಾಗ ಅದರ ಸುತ್ತಲು ಒಂದು ಅ-ಮಾನುಷವಾದ ಶಕ್ತಿಯ ಕಲ್ಪನೆ ಮೂಡುತ್ತದೆ. ಈ ಅ-ಮಾನುಷವಾದ ಕಲ್ಪನೆಯನ್ನು ವೈಭವೀಕರಿಸುತ್ತಾ ಘಟನೆಯ ಸುತ್ತ ಒಂದು ಕತೆಯನ್ನು ಹೆಣೆಯಲಾಗುತ್ತದೆ. ಉದಾಹರಣೆಗೆ ಹೇಳಬೇಕೆಂದರೆ, ನಾವು ಅತಿಯಾಗಿ ಗೌರವಿಸುವ ಹೆಂಗಸೊಬ್ಬಳು ಗಂಡಸತ್ತ ನಂತರದಲ್ಲಿ ಕೊಂಡಕ್ಕೆ ಹೋದರೆ, ಅಥವಾ ಕರೆಗೆ ಹಾರವಾದ ಹೆಂಗಳೆಯ ಕತೆಯಾಗಿರಬಹುದು, ಇತ್ಯಾದಿ ಘಟನೆಗಳ ಸುತ್ತ ಹೆಣೆಯುವ ಕತೆಗಳು ರೂಪಾಂತರಗೊಂಡು ಐತಿಹ್ಯಗಳಾಗುತ್ತವೆ. ಈ ಘಟನೆಗಳ ಸುತ್ತ ಒಂದು ನಿರ್ಧಿಷ್ಟವಾದ ಪ್ರದೇಶ, ವ್ಯಕ್ತಿ, ಸಾಮಾಜಿಕ ಅಂಶಗಳು ಅಡಕವಾಗಿರುತ್ತವೆ. ಆದ್ದರಿಂದಲೇ ಚರಿತ್ರೆಗೆ ಸ್ಥಳೀಯರು ತಮ್ಮ ಪರಿಸರದ ಸಂಬಂಧವನ್ನು ಕಲ್ಪಿಸುವ ಕಥೆಯೆ ಐತಿಹ್ಯವಾಗಿದೆ. ಇದರಲ್ಲಿ "ಮನುಷ್ಯ ಸಾಮರ್ಥ್ಯದ ಅತ್ಯಧೀಕ ಪ್ರಮಾಣ ಪುರಾಣದಲ್ಲಿ ಅಡಕವಾಗಿರುತ್ತದೆ"[೧೧೭] ಎನ್ನಲಾಗಿದೆ. ಪುರಾಣಗಳು ಪುರುಷ ಪ್ರಧಾನವಾದ ಘಟನೆಗಳ ಸುತ್ತ ಹೆಣೆದುಕೊಂಡಿರುವುದನ್ನು ಕಾಣಬಹುದು. ಈ ಪ್ರಪಂಚದ ಮೇಲೆ ತನ್ನ ಹಿಡಿತವನ್ನಿಟ್ಟುಕೊಳ್ಳುವ, ಅತಿಮಾನುಷನಾಗುವ ಕಲ್ಪನೆಗಳಿದ್ದರೆ, ಜನಪದ ಪುರಾಣಗಳು ಹಾಗಲ್ಲ. ಅವು ಒಂದು ಕಾಲಕ್ಕೆ ಸೀಮಿತವಾಗಿರುವುದಿಲ್ಲ. ಕಾಲಕಾಲಕ್ಕೆ ಬದಲಾವಣೆಯನ್ನು ಹೊಂದುವ ಸಾಧ್ಯತೆಗಳಿರುತ್ತವೆ. "ಇತಿಹಾಸದ ವ್ಯಕ್ತಿಗೆ ಊರು, ಘಟನೆಗಳನ್ನು ಅಲೌಕಿಕಗೊಳಿಸುವ ಕಥಾಪ್ರಕ್ರಿಯೆ" ಎನ್ನಲಾಗಿದೆ. ಐತಿಹ್ಯಗಳು ಹುಟ್ಟುವುದೇ ಅನುಭವಗಳಿಂದ. "Myths are products of beliefs, and beliefs are proudcts if experiences",

ಗ್ರಾಮದೇವತೆಗಳ ಆರಾಧನೆಯ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕಾದುದು ಐತಿಹ್ಯಗಳ ಮೂಲಕವೇ. ಇಡೀ ಗ್ರಾಮವನ್ನು ರಕ್ಷಿಸುವ ಮೂಲಕ ಗ್ರಾಮದೇವತೆಯಾಗಿ ಜನ್ಮತಾಳುತ್ತಾಳೆ. ತನಗೆ ಉಪದ್ರವ ಕೊಡುವ ಎಲ್ಲವನ್ನೂ ಆರಾಧಿಸುವ ಮೂಲಕ ಅವಳನ್ನು ಶಾಂತಗೊಳಿಸಿ ಅವಳನ್ನು ತನ್ನೆಡೆಗೆ ಸೆಳೆಯುವುದು ಮೊದಲ ಹಂತವಾದರೆ, ಎರಡನೆಯ ಹಂತದಲ್ಲಿ ಸಮಸ್ತವನ್ನು ಅವಳಿಗೆ ಅರ್ಪಿಸುವ ಸಮರ್ಪಣಾ ಭಾವ ಇರುತ್ತದೆ. ತನಗೆ, ತನ್ನ ಬಂಧುಗಳಿಗೆ, ಜಾನುವಾರುಗಳಿಗೆ ರೋಗ ಹರಡದಂತೆ ಮಾಡುವ ದೇವತೆಗಳನ್ನು ಕಂಡುಕೊಂಡು ಅವುಗಳಿಗೆ ನಾಮರೂಪಗಳನ್ನು ಕೊಟ್ಟ. ಪ್ಲೇಗಿನಮ್ಮ, ಕಾಲರದಮ್ಮ, ಸಿಡಿಬಿನಮ್ಮ, ದಡಾರದಮ್ಮ, ಮುಂತಾಗಿ ಹೆಸರುಗಳನ್ನು ಕೊಟ್ಟ. ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಹುಲಿಯಮ್ಮ, ಹಂದಿಯನ್ನು ವಾರಾಹಿ ಎಂದು ಅಥವಾ ಪಂಜುರ್ಲಿ ಎಂದು ಹೆಸರನ್ನಿಟ್ಟ. ಬಿಸಿಲಿನಿಂದ ರಕ್ಷಿಸಲು ಬಿಸಿಲಮ್ಮ, ದೆವ್ವ ಭೂತಗಳಿಂದ ಬೆಂಕಿಯಿಂದ ರಕ್ಷಿಸಲು ಗಾಳಮ್ಮ, ಉರಿಮಾರಮ್ಮ, ಚೌಡಮ್ಮ, ಮುಂತಾದ ದೈವಗಳನ್ನು ಹುಟ್ಟಿಸಿಕೊಂಡ. ಕಾಡಿನ ರಕ್ಷಕರಾಗಿ ಆ

ಮೂಲಕ ತಮ್ಮನ್ನು ಪೊರೆಯುತ್ತಿದ್ದ ಮಾತೃವಿನ ರೂಪದಲ್ಲಿ ಕಾನಮ್ಮ, ದೇವಿಕಾನಮ್ಮ, ಕರಿಕಾನಮ್ಮ, ಎಂಬ ನಿಸರ್ಗ ದೇವತೆಯರು, ಮಾಸ್ತಿ, ಅರೆಮಾಸ್ತಿ, ಹುಚ್ಚಮಾಸ್ತಿಎಂಬ ಹೆಸರಿನ ಮಹಾಸತಿಯರಾದವರು, ಇವರ ಜೊತೆ ಗ್ರಾಮದೇವತೆಗಳಾದ ಕಾಳಿಕಾಂಬೆ, ಮಾರಿಕಾಂಬೆ, ಚೌಡಿ, ಕೋಗ್ತಿ, ಮುಂತಾದ ರಕ್ಷಕ ದೇವತೆಗಳು ಬುಡಕಟ್ಟುಗಳಲ್ಲಿ ಆರಾಧನೆಗೊಳ್ಳುವುದನ್ನು ನೋಡಬಹುದು.[೧೧೮] ಇವಲ್ಲದೆ ಸಾವಿರಾರು ದೇವತೆಗಳು ಗ್ರಾಮದೇವತೆಗಳಲ್ಲಿ ಕಂಡಬರುತ್ತವೆ. ಅವು ಹಲವಾದರೂ ಅವುಗಳ ಗುಣ ಮಾತ್ರ ಒಂದೇ ಯಾಗಿರುವುದು ಒಂದು ವಿಶೇಷ.

೨.೩.೨. ಗ್ರಾಮದೇವತೆಯ ಲಕ್ಷಣಗಳು

ಜನಪದ ದೈವಗಳಿಗೆ ತಮ್ಮದೆ ಆದ ವಿಶೇಷ ಗುಣಗಳನ್ನು ಹೊಂದಿರುವುದು ಕಂಡುಬರುತ್ತದೆ. ಜನಪದ ದೈವಗಳಿಗೆ ಸಾಮಾನ್ಯವಾಗಿ ನಿರ್ದಿಷ್ಟವಾದ ರೂಪು ಇರುವುದಿಲ್ಲ. ಶಿಷ್ಟದೇವತೆಗಳಿಗೆ ಇರುವಂತಹ ಯಾವುದೇ ರೀತಿಯ ಶಿಲ್ಪನಿರ್ದೇಶನವುಳ್ಳ ಪೌರಾಣಿಕವಾದ ಅಥವಾ ಪ್ರಮಾಣ ಬದ್ಧವಾದ ಶಾಸ್ತ್ರಗ್ರಂಥಗಳಿರುವುದಿಲ್ಲ. ವೈದಿಕ ಮೂರ್ತಿಗಳಿಗೆ ಅಂತಹ ಒಂದು ಪರಂಪರೆಯಿರುವುದನ್ನು ಕಾಣಬಹುದು. ನಿರ್ದಿಷ್ಟವೆಂದು ಹೇಳಬಹುದಾದ ಮೂರ್ತಿಗಳು ಗ್ರಾಮದೇವತೆಗಳಲ್ಲಿ ಕಾಣಬರುವುದಿಲ್ಲ. ಅದು ಒಂದು ಸಾಮಾನ್ಯವಾದ ಕಲ್ಲಿನ ಗುಂಡಾಗಿರಬಹುದು. ಅದಕ್ಕೆ ಕಣ್ಣು ಮೂಗು ಬಾಯಿಗಳನ್ನು ತೋರಿಸಿ ವಿಗ್ರಹವನ್ನಾಗಿ ಮಾಡಿ ಪೂಜಿಸಲಾಗುತ್ತದೆ. ಬಹುತೇಕವಾಗಿ ಗ್ರಾಮದೇವತೆಗಳು ಮುಖವನ್ನು ಹೊಂದಿರುವುದನ್ನು ಕಾಣಬಹುದು. ನೆರಳು ನೀಡುವ ಮರಗಳು, ಅದು ಬೇವಾಗಿರಬಹುದು, ಬನ್ನಿಯಾಗಿರಬಹುದು, ಅಥವಾ ಆಲವೋ ಮತ್ತೊಂದು ಮರವಾಗಿರಬಹುದು, ಅದು ಅವರ ದೈವವಾಗಿ ಆರಾಧಿಸಲ್ಪಡುತ್ತದೆ. ಅಲ್ಲದೆ ಗ್ರಾಮದೇವತೆಗಳ ಮತ್ತೊಂದು ಪ್ರಸಿದ್ಧ ರೂಪವೆಂದರೆ ಕುಂಬ ಅಥವಾ ಕಲಶದಲ್ಲಿ ನೋಡಲಾಗಿರುವುದು. ಇದು ವೈದಿಕ ಪ್ರಭಾವವೆಂದು ತೋರಿದರು, ಮೂಲತಹ ಅದು ಗ್ರಾಮದೇವತೆಯ ಆರಾಧನೆಯ ರೂಪವೇ ಆಗಿರುವುದನ್ನು ಭಾರತದ ಎಲ್ಲಾ ಪ್ರದೇಶಗಳಲ್ಲಿ ಕಾಣಬಹುದು. ನಿಸರ್ಗದಲ್ಲಿ ಕಾಣುವ ಪ್ರತಿಯೊಂದು ವಸ್ತುವು ಅವರ ಆರಾಧನೆಯ ಮೂಲವಾಗಿವೆ. ಕಾಡಾಗಿರಬಹುದು, ಅಥವಾ ಹುತ್ತವಾಗಿರಬಹುದು, ಹಾವಾಗಿರಬಹುದು, ಪ್ರಾಣಿಪಕ್ಷಿಗಳಾಗಿರಬಹುದು, ಅವುಗಳಿಗೆ ತಮ್ಮದೆ ಆದ ರೂಪಕೊಟ್ಟು ಆರಾಧಿಸುವುದನ್ನು ನೋಡಬಹುದು. ಸಾಮಾನ್ಯವಾಗಿ ಗ್ರಾಮದೇವತೆಗಳನ್ನು ಮರವನ್ನು ಬಳಸಿ ಮೂರ್ತಿಗಳನ್ನು ಮಾಡಲಾಗಿರುತ್ತದೆ. ಹಲವಾರು ಕೈಗಳನ್ನು ಹೊಂದಿರುವ ಉಗ್ರವಾದ ರೂಪವನ್ನು ಹೊಂದಿರುವ ದೇವತೆಗಳಾಗಿರುತ್ತವೆ. ಗ್ರಾಮದೇವತೆಗಳು ಶಿಷ್ಟಪರಂಪರೆಯಲ್ಲಿ ಕಂಡುಬರುವ ರೀತಿಯಲ್ಲಿ ಕಲ್ಲಿನಲ್ಲಿ ಮಾಡಿದ ಮೂರ್ತಿಗಳಂತೆ ಇರದೆ, ಕಲ್ಲಿನ ಬಂಡೆಯಾಕಾರದಲ್ಲಿ ರೂಪು ರಹಿತವಾಗಿ ಕಂಡುಬರುತ್ತವೆ.

ಜನಪದರ ಆರಾಧನೆಯಲ್ಲಿ ಮತ್ತೊಂದು ಅಂಶವೆಂದರೆ ಮಂಡಲಗಳನ್ನು ಬರೆದು ಅದರಲ್ಲಿ ದೇವತೆಗಳ ರೂಪದಲ್ಲಿ ಆರಾಧಿಸುವುದು ಪ್ರಾಚೀನ ರೂಪವಾಗಿದೆ. ಭಾರತದ ತುಂಬಾ ಕಂಡುಬರುವ ಈ ಆಚರಣೆಯನ್ನು ಕುರಿತು ಜಯಕರ್ ಅವರು ಹೇಳುವಂತೆ

> The archetypal diagram is the channel through which the energy of living things, the storehose of nature, can be tapped and made operative in rites of transformation. Nurtured on archais homeopathic magic, the root of the Vrata ritual lies in the belief that desire, when visualized and made concrete through mandala and activized through spell and ritual gesture, generates an energy that ensures its own fulfilment. The diagrams are symbols through which the memories of the race are abstacted and preserved, to be communicated in group participation as visual statements of thousands of years of man's history. [೧೧೯]

ಉತ್ತರ ಭಾರತದಲ್ಲಿ ಗ್ರಾಮಗಳಲ್ಲಿ ಈ ರೀತಿಯ ಮಂಡಲಗಳ ಮೂಲಕ ಸ್ತ್ರೀಯುರು ಮಾತ್ರ ಆಚರಿಸುವ ಈ ಆಚರಣೆಗಳು ಸಂತಾನ, ಮಕ್ಕಳ ಆರೋಗ್ಯದ ಸಲುವಾಗಿಯಾಗಿವೆ. ಬೆಂಗಾಳ ಮತ್ತು ಬಿಹಾರದಲ್ಲಿ ಈ ಆಚರಣೆಯನ್ನು ಅಲ್ಪೆನ್ ಅಂದರೆ, ಒರಿಸ್ಸಾದಲ್ಲಿ ಒಸಾ, ಎಂದು ಉತ್ತರ ಪ್ರದೇಶದಲ್ಲಿ ಚೌಕಾ, ರಾಜಸ್ಥಾನದಲ್ಲಿ ಸೆಹಮದಿ, ಸತಿಯಾ ಎಂದು ಗುರಾತಿನಲ್ಲಿ, ತಮಿಳುನಾಡಿನಲ್ಲಿ ಕೊಲಂ ಎಂದು ಕರೆಯಲಾಗುತ್ತದೆ. ಕರ್ನಾಟಕದಲ್ಲಿ ರಂಗವಲ್ಲಿಯ ರೂಪದಲ್ಲಿ ಆಚರಣೆ ನೆಡೆಯುತ್ತದೆ. ಗೊಂಡರ ಮಂಡಳ ಕುಣಿತವನ್ನು ಗಮನಿಸಬಹುದು. ಇದು ಪ್ರಾಚೀನ ಮಾತೃ ಆರಾಧನೆಯ ಪ್ರಾಚೀನ ರೂಪವಾಗಿ ಕಾಣುತ್ತದೆ. ಮಂಡಲದ ಆರಾಧನೆಯು ಸಾಮಾನ್ಯವಾಗಿ ದೇವಾಲಯದ ಹೊರ ಆವರಣದಲ್ಲಿ ನೆಡೆಯುತ್ತದೆ. ಮಂಡಲವು ಎರಡು ಅಡಿ ಸುತ್ತಳತೆಯನ್ನು ಹೊಂದಿರುತ್ತದೆ.

> "ಮಂಡಲವನ್ನು ಬರೆಯುವ ಗೆರೆಗಳನ್ನು ಗರಿಗಳೆಂದು ಕರೆಯುತ್ತಾರೆ. ಕಪ್ಪು, ಕೆಂಪು, ಹಳದಿ, ನೀಲಿ, ಹಸಿರು ಮುಂತಾದ ಎಲ್ಲ ಬಣ್ಣಗಳ ಗರಿಯನ್ನು ಬರೆಯಲಾಗುತ್ತದೆ. ಹೀಗೆ ಮಂಡಲ ಬರೆಯುವಾಗ ಅಕ್ಕಿಹಿಟ್ಟು, ಅರಿಶಿಣ, ಕುಂಕುಮ, ಮೊದಲಾದವುಗಳ ಮಿಶ್ರಣವನ್ನು ಬಳಸುತ್ತಾಳೆ. ಮಂಡಲವು ಒಂದೇ ಆಗಿದ್ದು, ನಾಲ್ಕು ಬದಿಗಳಲ್ಲಿ ನಾಲ್ಕು ರೀತಿಯ ಚೌಕವಿರುತ್ತದೆ. ಮಂಡಲದ ಮೇಲೆ ಹಾವಿನ ಆಕಾರವೊಂದನ್ನು ಬರೆದಿರುತ್ತಾರೆ. ಅದೇ ಸಂದರ್ಭದಲ್ಲಿ ಗುಡಿಯ ಹೊರಗೆ ಬಾಗಿನಲ್ಲಿ ಒಂದು ಚೊಂಬಿನಲ್ಲಿ ಸ್ವಲ್ಪ ನೀರನ್ನು ತುಂಬಿಸಿ ಅದಕ್ಕೆ ಹಿಂಗಾರದ ಕೊನೆಯೊಂದನ್ನು ಇಟ್ಟು ನೆಲದ ಮೇಲೆ

ಇಟ್ಟಿರುತ್ತಾರೆ. ಕಳಶ ಎಂದು ಕರೆಯಲಾಗುವ ಇದರಲ್ಲಿ ಮಂಡಲವನ್ನು ನಿಲ್ಲಿಸಲಾಗುತ್ತದೆ. ಇದಕ್ಕೆ ಅಬ್ಬಲಿಗೆ ಹೂಗಳನ್ನು ಹಾಗೂ ಹಿಂಗಾರವನ್ನು ಪ್ರಭಾವಳಿಯ ರೀತಿಯಲ್ಲಿ ಕಟ್ಟಲಾಗುತ್ತದೆ. ಈ ಮಂಡಲದ ಮೇಲೆ ಚಪ್ಪರವಿರುತ್ತದೆ. ಚಪ್ಪರದ ಒಳಭಾಗಕ್ಕೆ ಮೇಲುಕಟ್ಟೊಂದನ್ನು ಕಟ್ಟಿರುತ್ತಾರೆ. ಮೇಲು ಕಟ್ಟಿನಲ್ಲಿ ತೆಂಗಿನ ಹಸಿರು ಗರಿಗಳಿಂದ ಮಾಡಿದ ಹಾವು ಮತ್ತು ಹಕ್ಕಿಗಳನ್ನು ತೂಗುಹಾಕಲಾಗಿರುತ್ತದೆ.

.... ಗುಡಿಯೊಳಗೆ ಪೂಜೆಯಾದ ನಂತರ ದೆವ್‌ಕರೆಯುವ ಹಾಡನ್ನು ಹಾಡಲಾಗುತ್ತದೆ. ಗೊಂಡರ ದೇವತೆಗಳಾದ ಮಾಸ್ತಿ ಮತ್ತು ಜಟ್ಟಿಗರನ್ನು ಈ ಹಾಡಿನ ಮೂಲಕ ಕರೆಯಲಾಗುತ್ತದೆ. ಆಗ ಪೂಜಾರಿಗೆ ದೆವ್ವ ಮೈಮೇಲೆ ಬಂದು ನಂತರ, ಅವನನ್ನು ಮಂಡಲದ ಬಳಿಗೆ ಕರೆತರಲಾಗುತ್ತದೆ.... ಢಕ್ಕೆ ಬಾರಿಸುತ್ತಾ, ಕಳಸದ ಸುತ್ತ ಕುಣಿಯುತ್ತ ಹಾಡಲು ಪ್ರಾರಂಭಿಸಿದಾಗ ಆ ಬದಿಯವರು ಇವರು ಎತ್ತಿಕೊಟ್ಟ ಹಾಡನ್ನು ಪುನರುಚ್ಚರಿಸುತ್ತಾರೆ. ಮೊದಲಿಗೆ ಕಳಸಕ್ಕೆ ಅಡ್ಡಬಿದ್ದು ಹೊನ್ನಮ್ಮ ಮಾಸ್ತಿ, ಸೋಡಿಗದ್ದೆ ಮಾಸ್ತಿ, ಕೋಗ್ತಿಕಟ್ಟೆ ಮಾಸ್ತಿ, ಜಟ್ಟಿಗ ಹಾಯ್ಗೂಳಿ ಮೊದಲಾದ ದೇವರುಗಳ ಸ್ತುತಿ ಮಾಡುತ್ತಾರೆ. ಈ ನಾಲ್ಕು ಜನರ ಕುಣಿತ ಜೊತೆ ಪೂಜಾರಿಯು ಕುಣಿಯುತ್ತಿರುತ್ತಾನೆ. ಅವನು ದೆವ್‌ಕರೆಯುವ ರೀತಿ ಹಾಗೂ ದೇವಿಯ ಉಪಾಸನೆಯ ರೀತಿ ವಿಶಿಷ್ಟವಾಗಿರುತ್ತದೆ." ಅಲ್ಲದೆ ಮುಂದುವರೆದು, "ಇದು ಅನಾದಿ ಕಾಲದ ಹಲವು ಸಾಂಸ್ಕೃತಿಕ ವಿಶೇಷಗಳನ್ನು ತನ್ನೊಳಗೆ ಪ್ರತಿನಿಧಿಸುತ್ತಿರುವ ಒಂದು ಆಚರಣೆ. ಕೃಷಿ ಮತ್ತು ಪಶುಸಂಗೋಪನೆ ಎರಡನ್ನೂ ಒಟ್ಟೊಟ್ಟಿಗೆ ನಿಭಾಯಿಸಿಕೊಂಡು ಬರುತ್ತಿರುವ ಗೊಂಡರು, ಕೃಷಿ ಹಂತದ ಸಮೃದ್ಧಿ ದೇವತೆಯರು ಹಾಗೂ ಪಶುಸಂಗೋಪನೆ ಹಂತದ ವೀರ ಪುರುಷರನ್ನು ಒಟ್ಟಾಗಿ ಆರಾಧಿಸುವಲ್ಲಿ ಗೊಂಡರ ಸಾಂಸ್ಕೃತಿಕ ವಿಕಸನದ ಇತಿಹಾಸವಿದೆ"[೧೨೦] ಎಂದು ಹೇಳುತ್ತಾರೆ.

ಈ ಆಚರಣೆಯು ಪ್ರಾಚೀನ ಮಾತೃಆರಾಧನೆಯ ಚಿತ್ರಣವಾಗಿದೆ. ಆಲಯಗಳು ಇಲ್ಲದ ಹಾಗೂ ದೇವತಾ ಮೂರ್ತಿಗಳು ಇಲ್ಲದ ಒಂದು ಪ್ರಾಚೀನ ಪದ್ಧತಿಯ ಪಳಯುಳಿಕೆಯ ರೀತಿಯಲ್ಲಿ ಕಂಡುಬರುತ್ತದೆ. ಗ್ರಾಮದೇವತೆಗಳ ಮತ್ತೊಂದು ಲಕ್ಷಣವೆ ಆಲಯಗಳಿಲ್ಲದ ಒಂದು ಸ್ಥಿತಿಯಾಗಿದೆ. ಕ್ಷುದ್ರ ದೇವತೆಗಳೆಂದೇ ಕರೆಯುವ ಗ್ರಾಮದೇವತೆಗಳಿಗೆ ಯಾವುದೇ ರೀತಿಯ ಆಲಯಗಳಿರುವುದಿಲ್ಲ. ಸಾಮಾನ್ಯವಾಗಿ ಜನಪದ ದೈವಗಳಿಗೆ ಆವರಣ ಅಥವಾ ಬಯಲು ಜಾಗವೇ ಅವರ ಧಾರ್ಮಿಕ ಆಚರಣೆಗಳ ಕೇಂದ್ರವಾಗಿರುತ್ತದೆ. ಒಂದು ಕಟ್ಟೆ ಮೇಲೋ, ಮಂಟಪ ಎಂದು ಕರೆಯುವ ಚಪ್ಪರವೋ ಅವರ ಆರಾಧನೆಯ ತಾಣವಾಗಿರುತ್ತದೆ. ಧಾರ್ಮಿಕ ಕುಣಿತ ಮುಂತಾದ ಕಟ್ಟಳೆಗಳಲ್ಲಿ ಬಳಕೆಗೆ ಬರುವ ಆಯುಧಗಳು, ಅಲಂಕರಣಗಳ ಮುಖವಾಡಗಳು, ವಾದ್ಯಗಳು, ಮುಂತಾದ ಧಾರ್ಮಿಕ ವಸ್ತುಗಳನ್ನು ಇರಿಸುವ ಜಾಗವಾಗಿದ್ದ ಚಪ್ಪರವು ಮುಂದೆ ಪಾವಿತ್ರತೆಯ ವಾತಾವರಣ ಸೃಷ್ಟಿಯಾಗಿ ಇದನ್ನು ಯಾರೂ ಪ್ರವೇಶಿಸುವಂತಿರಲಿಲ್ಲ. ಧಾರ್ಮಿಕ ಆಚರಣೆಗಳನ್ನು ಮಾಡುವ ವ್ಯಕ್ತಿ ಮಾತ್ರ

ಪ್ರವೇಶ ಮಾಡಬಹುದಾಗಿತ್ತು. "ಇಂತಹ ಜಾಗಗಳನ್ನು 'ಕೊಟ್ಟಿಗೆ' ಎನ್ನಲಾಗಿದೆ. ಮಣ್ಣುಗೋಡೆಗಳು, ಕಡ್ಡಿಗಳ ಸೂರು, ಎಲೆಯ ಹಂದರ, ಗಿಡ್ಡಬಾಗಿಲು ಇರುವ ಸಣ್ಣದೊಂದು ಕತ್ತಲೆಯ ಕೋಣೆ ದೈವಕ್ಕೆ ಕಟ್ಟಳೆಗಳ ಸಂಬಂಧಪಟ್ಟ ಸಾಮಾನುಗಳನ್ನು ಇರಿಸಿಕೊಳ್ಳುವುದೇ ಇದರ ಮುಖ್ಯ ಪ್ರಯೋಜನ, ಇವುಗಳನ್ನೆ ಗುಡಿಗಳೆಂದು"[೧೨] ಕರೆಯಲಾಗಿದೆ. ದೇವಾಲಯಗಳು ರೂಪಗೊಳ್ಳುವುದಕ್ಕೆ ಮೊದಲು ಸಾಮಾನ್ಯವಾಗಿ ನೆರಳು ಹೆಚ್ಚು ಒತ್ತಾಗಿರುವ ಮರಗಳಬುಡದಲ್ಲಿ ಜಾಗವನ್ನು ಅರಸಿಕೊಂಡರು. ಮರ ವಿಶಾಲವಾಗಿ ಹರಡಿಕೊಂಡಿದ್ದರೆ, ಬಿಸಿಲು ಮಳೆಗಳಿಂದ ರಕ್ಷಣೆ ದೊರಕುತ್ತಿತ್ತು. ಅಲ್ಲದೇ ಅವರ ಏಕಾಂತಕ್ಕೆ ಭಂಗತರುತ್ತಿರಲಿಲ್ಲ. ಹೀಗೆ ಮರಕ್ಕೂ ದೈವಕ್ಕೂ ಒಂದು ರೀತಿಯ ಸಾಮಿಪ್ಯ ಉಂಟಾಗಿ ವೃಕ್ಷಾರಾಧನೆ ಹುಟ್ಟಿಕೊಂಡಿರಬೇಕು. ಕೆಲವು ಕಡೆ ಹುತ್ತವು ದೇವರಾಗಿ, ಅವುಗಳಿಗೆ ನೆರಳನ್ನು ಒದಗಿಸುವ ಗುಡಿಸಲುಗಳು ರೂಪುಗೊಂಡವು. ಗ್ರಾಮದೇವತೆಗಳು ಸಾಮಾನ್ಯವಾಗಿ ಮರದಲ್ಲಿ ಮಾಡಿದ ಮೂರ್ತಿಗಳಾಗಿರುತ್ತವೆ. ಅವುಗಳನ್ನು ಕಲ್ಲಿನಲ್ಲಿ ಮಾಡಿರುವುದಿಲ್ಲ. ಅದು ಕಲ್ಲಿನದ್ದಾಗಿದ್ದರೂ ಅದಕ್ಕೆ ಸ್ಪಷ್ಟವಾದ ರೂಪ ಇರುವುದಿಲ್ಲ.

ಹೀಗೆ ಕಂಡು ಬರುವ ಗ್ರಾಮದೇವತೆಗಳಿಗೆ ಅರ್ಚನೆಯ ವಿಧಾನವು ಸಹ ಬಲು ಸರಳವಾಗಿರುತ್ತವೆ. ಈ ದೇವತೆಗಳಿಗೆ ದಿನನಿತ್ಯದಲ್ಲಿ ಸ್ನಾನಪೂಜಾದಿಗಳು ನಿಯತವಲ್ಲ. ಅದು ಶಿಷ್ಟದೇವತೆಗಳಲ್ಲಿ ಕಂಡುಬರುವ ರೀತಿಯಲ್ಲಿ ಒಬ್ಬ ಅರ್ಚಕನಿದ್ದು ಅವನು ದಿನನಿತ್ಯದ ಪೂಜಾದಿಗಳನ್ನು ಮಾಡುವ ರೀತಿಯಲ್ಲಿ ಇಲ್ಲಿ ಇರುವುದಿಲ್ಲ. ಬದಲಾಗಿ ಎಲ್ಲರೂ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಪೂಜೆಯನ್ನು ನೆರವೇರಿಸಿಕೊಳ್ಳಬಹುದು. ಆದರೆ, ಗ್ರಾಮದೇವತೆಗಳಲ್ಲಿ ಆರಾಧನೆಯು ಅಥವಾ ಹಬ್ಬಗಳು ಸಾರ್ವತ್ರಿಕ ಹಾಗೂ ಸಾಮುದಾಯಕವಾದ ಆಚರಣೆಗಳೆ ಆಗಿರುತ್ತವೆ. ಇಲ್ಲಿ ಎಲ್ಲರೂ ಭಾಗವಹಿಸಲೇ ಬೇಕು. ತಪ್ಪಿಸಿಕೊಳ್ಳುವುದಾಗಲಿ, ಊರಿಂದ ಓಡಿಹೋಗುವಹಾಗಿಲ್ಲ. ಬದಲಾಗಿ ತನಗೆ ಇಷ್ಟವಿಲ್ಲದಿದ್ದಾಗಲೂ ಅವರು ಇರಲೇಬೇಕಾಗುತ್ತದೆ. ಆಚರಣೆಗಳು ನಡೆಯುವುದು ಗ್ರಾಮದ ಒಳಿತಿಗಾಗಿ, ರೋಗರುಜಿನಗಳಿಂದ ರಕ್ಷಣೆ ಪಡೆಯಲು, ಮಳೆ ಬಾರದಿದ್ದಾಗ, ಊರಿಗೆ ಯಾವುದೋ ಸಂಕಷ್ಟ ಬಂದಾಗ ದೇವತೆಯ ಪ್ರೀಯನ್ನು ಪಡೆಯಲು ಬಲಿಯ ರೂಪದಲ್ಲಿ ಪ್ರಾಣಿಗಳನ್ನು ಬಲಿಕೊಡಬಹುದು.

ಬಲಿಮಾತೃದೇವತೆಯ ಆರಾಧನೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಬಲಿ ಪ್ರಾಚೀನ ಪರಂಪರೆಯೇ ಆಗಿದೆ. ಬಲಿಯ ಆಚರಣೆಯು ಮಾನವನ ನಿರಂತರ ಹೊಸ ಸೃಷ್ಟಿಯನ್ನು, ಹೊಸತನವನ್ನು ಕಾಣುವುದೇ ಆಗಿದೆ. ಅಂದರೆ ಬಲಿಯ ಮುಖಾಂತರ ಹೊಸದನ್ನು ಹುಟ್ಟುಹಾಕುವುದೇ ಆಗಿದೆ. ಅಂದರೆ ಒಂದನ್ನು ಕೊಟ್ಟು ಇನ್ನೊಂದನ್ನು ಪಡೆಯುವುದೇ ಆಗಿದೆ. ಫ್ರೇಜರ್ ಅವರು ಹೇಳುವಂತೆ;

... from his own sensations he conceives of life as an indestructible kind of energy, which when it disappears in one form must necessarily reappear in another, though in the new form it need not be immediately perceptible by us; in other words he infers that death does not destroy the vital principle nor even the conscious personality, but it merely transforms both of them into other shapes, which are not the less real because they commonly elude the evidence of our senses.[೧೨೨]

ಕೊಲ್ಲುವ ಹಾಗೂ ತಿನ್ನುವ ಪ್ರಕ್ರಿಯೆಯಲ್ಲಿ ಭೂಮಿಯನ್ನು ಅಪವಿತ್ರಗೊಳಿಸುತ್ತಿದ್ದೇವೆ ಎಂಬ ಭಾವನೆ ಬಂದಿರಲೇ ಬೇಕು. ಯಾಕೆಂದರೆ ಭೂಮಿಯನ್ನು ಅಗೆದು ಅದರಿಂದ ಬೆಳೆಯುವ ವಸ್ತುಗಳನ್ನು ಕಡಿದು, ಕಿತ್ತು ತಿನ್ನುವುದು ಪಾಪದ ಕೆಲಸವಾಗಿದೆ. ಈ ಪಾಪದ ಕೆಲಸದ ಬದಲಿಗೆ ಬಲಿಯನ್ನು ಅರ್ಪಿಸುವುದರಿಂದ ಪಾಪದಿಂದ ವಿಮುಕ್ತಿಯನ್ನು ಹೊಂದಬಹುದು ಎಂಬ ನಂಬಿಕೆ ಬೆಳೆದು ಬಂದಿರಬೇಕು. ಆ ಕಾರಣದಿಂದ ಬಲಿಯನ್ನು ಕೊಡುವ ಪದ್ಧತಿ ಬೆಳೆದು ಬಂದಿರುವ ಹಾಗೆ ಕಾಣುತ್ತದೆ. ನ್ಯೂಮನ್ಸ್ ಅವರು ಹೇಳುವಂತೆ

"-the felling of a tree, the killing or eating of an animal, and so on- must be compensated by a ritual offering, a sacrifice. For early man all growth and development depend on man's sacrifice and ritual activity, precisely because man's living bound with the world and the human group is projected upon nature as a whole.[೧೨೩]

ಬಲಿಯನ್ನು ಕೊಡುವುದರಿಂದ ಮಾನವನ ಜೀವನ ಸುಖ ಸಮೃದ್ಧಿಯನ್ನು ಹೊಂದಬಹುದು ಎಂಬುದು ಅಂದಿನ ಸಮುದಾಯಗಳಲ್ಲಿ ಇಟ್ಟು ಕೊಂಡ ನಂಬಿಕೆಯಾಗಿತ್ತು. ಅಲ್ಲದೇ ಅದು ಭೂಮಿಯ ಶಕ್ತಿಯನ್ನು ಇಮ್ಮಡಿಗೊಳಿಸುತ್ತದೆ. ರಕ್ತವು ಭೂಮಿಗೆ ಬಿದ್ದರೆ ಮುಂದಿನ ಫಸಲು ಹೆಚ್ಚಾಗುತ್ತದೆ ಎಂಬ ಅರಿವು ಬಹು ಹಿಂದಿನಿಂದಲೂ ಇದ್ದೆ ಇತ್ತು. ಇದಕ್ಕೆ ಮಾಂತ್ರಿಕತೆಯ ಮುಖವಾಡವನ್ನು ಹಾಕಲಾಗಿತ್ತು. ಆದ್ದರಿಂದಲೇ ರಕ್ತವು ಜೀವದ ಉಗಮದ ಕೇಂದ್ರವೂ ಆಗಿದ್ದು, ಹೆಣ್ಣಿನ ರಕ್ತವು ಅಂತಹ ಜೀವ ಸೃಷ್ಟಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ನಂಬಲಾಗಿದೆ.

If the blood of an animal slain is returned to the soil, it will carry the life principle back to Mother Earth for rebirth, and the same beast will return next season to yield its temporal body again. The animals of the hunt are regarded in this way as willing

victims who give their bodies to mankind with the understanding that adequate rites are to be performed to return the life principle to its source.[೧೨೪]

ಈ ನಂಬಿಕೆಯು ಮುಂದೆ ಬೆಳೆದು ಮಾನವನ ಬದಲಾಗಿ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿಯಾಗಿರಬೇಕು. ಬಲಿಯಾಗುವ ಪ್ರಾಣಿ ಯಾ ಮಾನವರು ದೈವದ ಪ್ರತೀಕವಾಗಿ ಕಾಣಲಾಯಿತು. ರಾಜರನ್ನು ಬಲಿಯ ರೂಪದಲ್ಲಿ ಕೊಡಲಾಗುತ್ತಿತ್ತು. ರಕ್ತವು ಭೂಮಿಯನ್ನು ಸೇರಿದರೆ ಭೂಮಿಯನ್ನು ಹುಲುಸುಮಾಡುವ ಶಕ್ತಿಯನ್ನು ಹೊಂದಿದ್ದು, ಅದು ತನ್ನ ಮಾಂತ್ರಿಕ ಶಕ್ತಿಯಿಂದ ಆಹಾರ ಮತ್ತು ಮಳೆಯ ಮೂಲಕ ರಸವಾಗಿ ಸೇರುತ್ತದೆ ಎಂಬ ನಂಬಿಕೆ ಇಂದಿಗೂ ಕೆಲವು ಬುಡಕಟ್ಟುಗಳಲ್ಲಿ ಇದೆ. ಒರಿಸ್ಸಾದ ಕೊಂಡಾ ಎಂಬ ಬುಡಕಟ್ಟಿನಲ್ಲಿ ಹಾಗೂ ದಕ್ಷಿಣ ಭಾರತದ ಹಲವಾರು ಕಡೆ ರಕ್ತದ ಅದರಲ್ಲೂ ಮಾನವನ,ಅದರಲ್ಲೂ ಗಂಡಿನ ರಕ್ತವನ್ನು ಬಲಿಕೊಡುವುದರಿಂದ ಭೂಮಿ ತನ್ನ ಫಲವಂತಿಕೆಯನ್ನು ಹೆಚ್ಚಿಸುತ್ತದೆ ಎಂಬ ನಂಬಿಕೆ ಇಂದಿಗೂ ಉಳಿದುಕೊಂಡು ಬಂದಿದೆ. ಅಲ್ಲದೆ ಮಾನವ ಅಂಗಾಂಗಳನ್ನು ತುಂಡುಮಾಡಿ ಭೂಮಿಯಲ್ಲಿ ಬಿತ್ತಲಾಗುತ್ತಿತ್ತು. ಅಲ್ಲದೆ ಹೆಣ್ಣಿನ ಹಾಗೂ ಗಂಡಿನ ಮರ್ಮಾಂಗಕ್ಕೆ ಗಿಡದ ರೆಂಬೆಯಿಂದ ಮುಟ್ಟಿಸಿ ಅದನ್ನು ಭೂಮಿಗೆ ಹೊಡೆಯುವುದರಿಂದ ಆ ಮೂಲಕ ಭೂಮಿಗೆ ಶಕ್ತಿ ಹೋಗುತ್ತದೆ ಎಂಬ ನಂಬಿಕೆ ಇದೆ.

ಆದರೆ ನಂತರದ ಕಾಲದಲ್ಲಿ ಇದು ಸಂಪೂರ್ಣವಾಗಿ ಬದಲಾವಣೆ ಹೊಂದಿತು. ಹಾಗೂ ಫಲವಂತಿಕೆಯು ಬರೀ ಹೆಣ್ಣಿನಿಂದ ಸಾಧ್ಯವಿಲ್ಲ. ಅದರಲ್ಲಿ ಗಂಡಿನ ಪಾತ್ರವು ಇದೆ ಎಂಬ ತಿಳುವಳಿಕೆ ಬಂದಾಗ, ಪುರುಷನ ಶಕ್ತಿಗೆ ಹೆಚ್ಚು ಅಧಿಕಾರ ಬಂದಿತು. ಗಂಡು ತನ್ನ ಪ್ರಭಾವವನ್ನು ಸಮಾಜದ ಮೇಲೆ ಬೀರಿದನೋ ಆಗ ಪೂಜಾರಿಣಿಯ ಬದಲಾಗಿ ಪೂಜಾರಿಯ ಪ್ರವೇಶವಾಯಿತು. ಆದರೆ ಹಿಂದೆ ಇದ್ದ ಬಲಿಯನ್ನು ಕೊಡುವ ಪದ್ಧತಿ ಕ್ರಮೇಣ ತನ್ನ ಮೂಲರೂಪವನ್ನು ಕಳೆದುಕೊಂಡು ಒಂದು ಆಚರಣೆಯ ವಿಧಾನವಾಗಿ ಬೆಳೆದು ಬಂದಿದೆ. ತನ್ನವರನ್ನು ಬಲಿಕೊಡದೆ ವೈರಿಗಳನ್ನೂ ಈ ಕಾರಣಕ್ಕಾಗಿ ಬಲಿಕೊಡುವುದು ಕಂಡುಬರುತ್ತದೆ. ಫ್ರೇಜರ್ ಅವರು ಹೇಳುವಂತೆ

> The divine character of the animal or man is forgotten and he comes to be regarded merely as an ordinary victim.... When a nation becoms civilized, if it does not drop human sacrifices altogether, it at least selects as victims only such wretches as would be put to death at any rate. Thus the killing of a god may sometimes be confounded with the execuation of a criminal.[೧೨೫]

ಮಾತೃ ಪದ್ಧತಿಯ ಅವನತಿಯ ನಂತರದಲ್ಲಿ ಪುರುಷ ವೀರನೇ ಸಾಮಾಜಿಕವಾಗಿ ಹಿರಿಯ ಸ್ಥಾನ ಪಡೆದಿದ್ದ.

ಈ ಹಂತದಲ್ಲಿ ಗಂಡು ಮತ್ತು ಹೆಣ್ಣಿನ ನಡುವೆ ಒಂದು ರೀತಿಯ ಸಂಘರ್ಷವೇರ್ಪಟ್ಟಿರುವ ಹಾಗೆ ಕಾಣುತ್ತದೆ. ಗಂಡಿನ ಸೊಕ್ಕನ್ನು ಮುರಿಯುವ ಹಾಗೆ ಕಂಡುಬರುವ ಈ ಬಲಿಯು ಒಂದು ಹಂತದಲ್ಲಿ ಗಂಡು ಅದರಲ್ಲೂ ರಾಜನೆ ಬಲಿಯಾಗಬೇಕಾಗಿತ್ತು. ರಾಜನ ಬದಲಿಯಾಗಿ ಕೋಣ ಅಥವಾ ಪ್ರಾಣಿ ಬಲಿಯ ರೂಪದಲ್ಲಿ ಪರಿವರ್ತನೆಯಾಗಿ, ತನ್ನ ಮೂಲ ಆಶಯವನ್ನು ನಿರಾಕರಿಸಿ ಕ್ಷುಲ್ಲಕ ಆಚರಣೆಯಾಗಿ ಪರಿವರ್ತಿತವಾಯಿತು. ಕೋಣ ಮನುಷ್ಯನ ಪ್ರತಿರೂಪವಾಗಿ ಅಥವಾ ವೀರತ್ವದ ಪ್ರತೀಕವಾಗಿ, ದೇವಿಯು ಅವನ ಸೊಕ್ಕನ್ನು ಮುರಿಯುವ ಹೆಣ್ಣಾಗಿ ಬರುತ್ತಾಳೆ. ಕೋಣನ ಮುಖವಾಡ ಹಾಕಿಕೊಳ್ಳುತ್ತಿದ್ದ ಕಾಡು ಜನರ ಮುಖ್ಯಸ್ಥನ ಕೊಂದುದರ ಸಾಂಕೇತಿಕ ರೂಪವೇ ಮುಂದೆ ಮಹಿಷಮರ್ದಿನಿಯ ರೂಪವಾಗಿರಲೂ ಕಾರಣವಾಗಿರಬೇಕು.

ಕಾಮದಹನವನ್ನು ಇಲ್ಲಿಯೆ ನೋಡಬಹುದು. ಕಾಮದಹನ ಈ ಹಿನ್ನೆಲೆಯಲ್ಲಿ ಬಂದಿರುವ ಆಚರಣೆಯಾಗಿದ್ದು, ಇದು ಇಂದು ಸಂಕೇತರೂಪದಲ್ಲಿ ಉಳಿದುಕೊಂಡಿರುವ ಆದಿಮ ರೂಪವಾಗಿ ಕಾಣಬರುತ್ತದೆ. ಹೆಣ್ಣು ಗಂಡು ಸ್ವಚ್ಛಂದವಾಗಿ ಕೂಡುವುದು ಬರೀ ಕಾಮದ ತೃಷೆಯಲ್ಲ. ಅದೊಂದು ಅಲೌಕಿಕವಾದ ಶಕ್ತಿಯ ಬಿಡುಗಡೆಯಾಗಿದೆ. ಆ ಕಾರಣದಿಂದಲೇ ವಾಮಾಚಾರದಲ್ಲಿ ಮೈಥುನಕ್ಕೆ ಮಹತ್ವದ ಸ್ಥಾನ ಕೊಡಲಾಗಿದೆ. ಅಲ್ಲದೆ ಪ್ರಾಚೀನರಲ್ಲಿ ಕಾಮದ ಬಗೆಗೆ ಮುಜುಗರ ಪಡುವಂತ ಘಟನೆಯಾಗಿರಲಿಲ್ಲ. ಅದೊಂದು ಧಾರ್ಮಿಕವಾದ ಆಚರಣೆಯಾಗಿತ್ತು. ದೇವತೆಯ ಎದುರು, ಅಥವಾ ಕೃಷಿಯ ಆರಂಭದಲ್ಲಿ ಸಂಭೋಗ ನೆಡೆಯುತ್ತಿತ್ತು. ಇದು ಹೆಣ್ಣು ಗಂಡುಗಳು ತಮ್ಮನ್ನು ಸಂಪೂರ್ಣವಾಗಿ ಸಂಭೋಗದ ಮೂಲಕ ಅರ್ಪಿಸಿಕೊಳ್ಳುವುದು ಆ ಮೂಲಕ ಮುಂದಿನ ಜನಾಂಗದ ವಾಹಕವಾಗಬೇಕಾಗಿತ್ತು. ಇದು ಗಂಡಿನ ಮೇಲೆ ಸಾಧಿಸಿದ ಆದಿಮ ಶಕ್ತಿಯ ಬಿಡುಗಡೆಯ ಸಂಕೇತವಾಗಿದೆ. ಆದಿಮಶಕ್ತಿಯ ಬಿಡುಗಡೆಯ ನಂತರದಲ್ಲಿ ಗಂಡು ಅನಾವಶ್ಯಕವಾದ ವಸ್ತುವಾಗುತ್ತಾನೆ. ಈ ಅನಾವಶ್ಯಕವಾದ ವಸ್ತುವನ್ನು ಬಲಿಕೊಟ್ಟು ಎಲ್ಲರೂ ಆ ಪುರುಷನ ಶಕ್ತಿಯನ್ನು ಮಾಂಸವನ್ನು ಆಹಾರದ ರೂಪದಲ್ಲಿ ಹಂಚಿಕೊಂಡು ತಿನ್ನುತ್ತಿದ್ದರು. ಕೊಂಡಾ ಜನಾಂಗದಲ್ಲಿ ಇಂದಿನವರೆಗೂ ಹೋಳಿಯ ಆಚರಣೆಯು ಇದೆ ಹಿನ್ನೆಲೆಯಲ್ಲಿ ಕಂಡುಬರುತ್ತದೆ. ಹಾಗೂ ಈ ವಾಹಕವಾದ ವ್ಯಕ್ತಿಯನ್ನು ಬಲಿ ಕೊಡುವುದರ ಮೂಲಕ ಹೊಸ ಬೆಳೆ ಹಾಗೂ ಜಗತ್ತು ಸೃಷ್ಟಿಯಾಗುತ್ತದೆ ಎಂಬ ನಂಬಿಕೆ ಬೆಳೆದಿರುವ ಹಾಗೆ ಕಾಣುತ್ತದೆ. ಕಾಮದಹನದಲ್ಲಿ ಕಾಮನ ದಹನವಾಗಿಲ್ಲ. ಅದು ಮುಂದಿನ ಜನಾಂಗವನ್ನು ಬೆಳೆಸುವ ವ್ಯಕ್ತಿಯ ಬಲಿಯಾಗಿದೆ. ಕಾಮದಹನದಲ್ಲಿ ಕಂಡುಬರುವ ಅಶ್ಲೀಲವೆನ್ನಬಹುದಾದ ಹಾಡುಗಳು ಅಂಗಚೇಷ್ಟೆಗಳು ಇದನನ್ನೇ ಸೂಚಿಸುತ್ತವೆ. ಇಲ್ಲಿ ಗಂಡಿನ ಬಲಿ ಪುರುಷನ ಹತ್ಯೆಯಲ್ಲ.ಕಾಮದಹನದ ನಂತರ ಮಳೆ ಬರುತ್ತದೆ ಎಂಬ ನಂಬಿಕೆಯನ್ನು ಇಂದು ಕಾಣಬಹುದು. ಕಾಮನು ಮಳೆ ಮತ್ತು ಮಳೆಯ ಮೂಲಕ ಸಮೃದ್ಧವಾದ ಬೆಳೆಯನ್ನು ತರುವನೆಂದು ಜನಪದರಲ್ಲಿ ನಂಬಿಕೆ ಇದು. ಕಾಮದಹನದ ಬೂದಿಯನ್ನು ಹೊಲಕ್ಕೆ ಹಾಕುವುದು ಮುಂತಾದ ಅಂಶಗಳು ಪ್ರಾಚೀನವಾದ ಬಲಿ

ಪದ್ಧತಿಯ ಆದಿಮ ರೂಪವೇ ಆಗಿದೆ.ಭಟ್ಟಾಚಾರ್ಯ ಅವರು ಹೇಳುವಂತೆ ಕಾಮದಹನ ಹಾಗೂ ದೀಪಾವಳಿಯ ಹಬ್ಬಗಳು ಹುಟ್ಟು, ಸಾವು ಹಾಗೂ ಜೀವನ ಸೃಷ್ಟಿಯನ್ನು ತಿಳಿಸುತ್ತವೆ ಎನ್ನುತ್ತಾರೆ. The present forms of the Holi and Divali festivals contain relics of primitive rituals, connected with the concepts of fertility, death and renewal of life. [೧೭]

ಕೋಣವನ್ನು ಬಲಿಕೊಡುವುದನ್ನುಹಲವಾರು ದೃಷ್ಟಿಕೋನಗಳಿಂದ ವಿವರಿಸಲಾಗಿದೆ. ಅದೊಂದು ವರ್ಣಸಂಕರವೆಂದು, ಹಿಂದೂ ಧಾರ್ಮಿಕ ಪರಂಪರೆಯ ಪ್ರಭಾವದಿಂದ ಬಂದಿದ್ದೆಂದು ವಿವರಿಸಲಾಗಿದೆ. ಎಲ್ಮೋರ್ ಅವರು ಇದನ್ನು ಕುಲದೇವತಾ ಆರಾಧನೆಯ ಹಿನ್ನೆಲೆಯಲ್ಲಿ ವಿವರಿಸುವುದಕ್ಕಿಂತ ಶತ್ರುವಿನ ಸಿದ್ಧಾಂತ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಅವರು

> The Buffalo has a garland placed about its neck, botlu (ಬೊಟ್ಟು) are placed on its head, and as it is led about the village, people bow before it placing their hands in the attituds of worship, ... may very possibly be the remnant of a triumphal procession in which the enemy was exhibited before the disgraceful death.[೧೨]

ಎಲ್ಮೋರರ ಈ ವಾದದಲ್ಲಿ ಎರಡು ವೈರುಧ್ಯಗಳಿರುವ ಹಾಗೆ ತೋರುತ್ತದೆ. ಒಂದು ಯುದ್ಧದಲ್ಲಿ ಸೋತು ಸೆರೆಸಿಕ್ಕಿದ ಶತ್ರುವನ್ನು ಯಾರು ವೀರೋಚಿತವಾಗಿ ಸತ್ಕರಿಸುವುದಿಲ್ಲ. ಅವನನ್ನು ಅಮಾನುಷವಾಗಿ ನಡೆಸಿಕೊಳ್ಳುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಎರಡನೆಯದಾಗಿ ಪ್ರಾಣಿಗಳ ಆರಾಧನೆಯು ಹಿಂದೂ ಧರ್ಮದಿಂದ ಬಂದಿರಬೇಕು may very possibly be a later addition, arising from the Hindu idea of pantheism and the sacredness of all life. ಎನ್ನುವ ಅವರ ವಾದವನ್ನು ಒಪ್ಪಲು ಸಾಧ್ಯವೇ ಇಲ್ಲ. ಯಾಕೆಂದರೆ ಪ್ರಾಣಿಗಳ ಆರಾಧನೆಯು ದ್ರಾವಿಡರ ಕಲ್ಪನೆಯೆ ಆಗಿದೆ. ವೈದಿಕ ಪರಂಪರೆಯಲ್ಲಿ ಎಲ್ಲಿಯೂ ಪ್ರಾಣಿಗಳ ಆರಾಧನೆಯು ಕಂಡುಬರುವುದಿಲ್ಲ. ಎತ್ತಿನ ಆರಾಧನೆಯು ಅವರಿಗೆ ಹೊಸದಾಗಿಯೆ ಕಂಡಿದೆ. ಹಲವಾರು ಪ್ರಾಚೀನ ಬುಡಕಟ್ಟುಗಳಲ್ಲಿ ಕೋಣವನ್ನು ಅರೆ ದೈವವಾಗಿ ನೋಡಲಾಗುತ್ತದೆ. ತೋಡ ಜನಾಂಗದಲ್ಲಿ ಕೋಣವನ್ನು ದೇವರ ರೂಪದಲ್ಲಿಯೇ ನೋಡಲಾಗಿದೆ. ಅದು ನಂತರದಲ್ಲಿ ಕೋಣದ ಸ್ಥಾನದಲ್ಲಿ ಎತ್ತು ಬಂದಿರಬೇಕು. ದಕ್ಷಿಣ ಭಾರತದಲ್ಲಿ ಕೋಣವನ್ನು ಮಹಿಷನ ರೂಪವೆಂದು ಪೂಜಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ ಕೋಣವನ್ನು ಮಹೋಬ ಎಂದು ಆರಾಧಿಸುತ್ತಾರೆ. ಭಯ ಮತ್ತು ಗೌರವಗಳಿಂದ ಉನ್ನತೀಕರಣಗೊಂಡ ಮಹಿಷನು ಆದಿಮರೂಪದ ಕೃಷಿ ಜೀವನದ ಜನರ ಪ್ರತೀಕವಾಗಿ ಕಂಡುಬರುತ್ತದೆ. ಮಹಿಷ ಎಂಬುದು ವ್ಯಕ್ತಿಯ

ವ್ಯಕ್ತಿತ್ವವೆ ಆಗಿದೆ. ಇದು ದೇವಿಮಹಾತ್ಮ್ಯೆಯಲ್ಲಿ ಸಾಕಾರಗೊಂಡಿದೆ. ಮಹಿಷ ದೇವಿಯನ್ನು ಮದುವೆಯಾಗುವಂತೆ ಪೀಡಿಸುವುದು ಆದಿಮ ರೂಪವೆನ್ನುವುದನ್ನು ಸ್ಪಷ್ಟಪಡಿಸುತ್ತದೆ. ಮದುವೆಯೆನ್ನುವುದು ಪ್ರಾಚೀನ ಕಾಲದಲ್ಲಿ ಯುದ್ಧವೆ ಆಗಿತ್ತು. ಮೀನಾಕ್ಷಿ ಕಲ್ಯಾಣದಲ್ಲಿಯೂ ಸಹ ಮದುವೆ ಎನ್ನುವುದು ಯುದ್ಧವೆ ಆಗಿದೆ. ಯುದ್ಧದಲ್ಲಿ ಸೋತ ವ್ಯಕ್ತಿಯನ್ನು ಬಲಿಕೊಡುವ ಆಚರಣೆಯ ರೂಪವಾಗಿರುವ ಹಾಗೆ ಕಂಡುಬರುತ್ತದೆ. ಮೂಲತಃ ಇದು ಆದಿಮ ಶಕ್ತಿಯ ಬಿಡುಗಡೆಯ, (ಪ್ರಜನನ) ಆ ಮೂಲಕ ಗಂಡಿನ ಆಧ್ಯತೆಯನ್ನು ತೀರಸಕ್ಕರಿಸುವುದೇ ಆಗಿದೆ. ಹಾಗೂ ತಿರಸ್ಕರಿಸಲ್ಪಟ್ಟ ವ್ಯಕ್ತಿಯು ಬಲಿಯಾಗಲೇ ಬೇಕಾದುದು ಅನಿವಾರ್ಯ ಘಟನೆಯಾಯಿತು. ಆ ನಂತರದಲ್ಲಿ ನರನ ಬದಲಿಗೆ ಕೋಣವು ಆ ಸ್ಥಾನವನ್ನು ತುಂಬಿಕೊಟ್ಟಿರಬೇಕು. ಅಲ್ಲದೆ ವರ್ಣಸಂಕರದ ತಂತುಗಳು ನಂತರದಲ್ಲಿ ಸೇರಿಕೊಂಡಿರಬೇಕು. ಆರ್ಯರ ಪ್ರಭಾವದಿಂದ ಸಂಸ್ಕೃತೀಕರಣಗೊಂಡಿದ್ದರೂ ಸಹ ಅಲ್ಲಿಯೂ ಮೂಲರೂಪದ ಅನೇಕ ಸೂಕ್ಷ್ಮತೆಗಳು ಅಡಗಿಕೊಂಡಿವೆ. ಮಹಿಳಾ ಆಧ್ಯಯನಕಾರರಿಗೆ ಇಲ್ಲಿ ವಿಪುಲವಾದ ಅವಕಾಶಗಳುಂಟು.

ಗ್ರಾಮದೇವತೆಗಳ ಆಚರಣೆಗಳು ಪ್ರಧಾನವಾಗಿ ಜಾತ್ರೆಯ ಆಚರಣೆಗಳು, ಹಬ್ಬದ ಆಚರಣೆಗಳು, ಸೇವೆಯ ಆಚರಣೆಗಳಾಗಿವೆ. ದೇವಿಯ ಕೃಪೆಗಾಗಿ ಕೆಂಡ ತುಳಿಯುವುದು, ಸಿಡಿಯಾಡುವುದು, ದೇಹವನ್ನು ದಂಡಿಸಿಕೊಳ್ಳುವುದು, ಕರಗಹೊರುವುದು, ಬಾಯಿಗೆ ಬೀಗಹಾಕಿಕೊಳ್ಳುವುದು, ಮಂಡೆಸೇವೆ, ಉರುಳುಸೇವೆ, ಗಾವುಸಿಗಿಯುವುದು, ಘಟಕೊಡುವುದು, ಬೆತ್ತಲೆ ಸೇವೆ, ಬಸವಿ ಬಿಡುವುದು, ಹೀಗೆ ಅನೇಕ ವಿಧದ ಸೇವೆಗಳ ಮೂಲಕ ದೇವತೆಯ ಆರಾಧನೆ ನಡೆಯುತ್ತದೆ. ಈ ಸೇವೆಗಳಿಗಾಗಲಿ, ಜಾತ್ರೆಗಳಿಗೆ ಒಂದು ನಿಗದಿತವಾದ ಸಮಯವಿರುವುದಿಲ್ಲ, ಪೂಜಾ ವಿಧಾನದಲ್ಲಿ ಏಕರೂಪತೆ ಇರುವುದಿಲ್ಲ. ಬದಲಾಗಿ ಪ್ರತಿವರ್ಷವೂ ನಡೆಯಬಹುದು, ಅಥವಾ ಮೂರು ವರ್ಷಗಳಿಗೊಮ್ಮೆ, ಐದು, ಏಳು, ಒಂಬತ್ತು ಅಥವಾ ಹನ್ನೊಂದು ವರ್ಷಗಳಿಗೊಮ್ಮೆ ಈ ಉತ್ಸವಗಳು ನಡೆಯಬಹುದು. ಇವನ್ನು ಸಾಮಾನ್ಯವಾಗಿ ಸುಗ್ಗಿಯ ಕಾಲದಲ್ಲಿ ಆಚರಿಸಲಾಗುತ್ತದೆ. ಕೆಲವು ಸಲ ನಿಗದಿತವಾದ ಸಮಯಕ್ಕೆ ಮಳೆ ಬಾರದಿದ್ದರೆ, ರೋಗರುಜಿನಗಳು ಹರಡಿದಾಗ, ಅವುಗಳ ನಿವಾರಣೆಗಾಗಿ ವಿಶೇಷವಾದ ಆಚರಣೆಗಳು ನಡೆಯಬಹುದು. ಆಗ ಕೋಣವನ್ನು ಬಲಿಕೊಡಲಾಗುತ್ತದೆ. ಅಲ್ಲದೆ ತಾನು ಬಳಸುವ ಎಲ್ಲಾ ಪರಿಕರಗಳು ದೇವತೆಯ ಆರಾಧನೆಗಾಗಿ ಬಳಸಬಹುದು. ಅದು ಅಕ್ಕಿಯಾಗಿರಬಹುದು, ಹೂ ಹಣ್ಣು, ಕಾಯಿ, ಹಾಲು, ಭಟ್ಟಿಯಿಳಿಸಿದ ಮಧ್ಯವಾಗಿರಬಹುದು, ಅವೆಲ್ಲವೂ ದೇವಿಯ ನೈವೇದ್ಯದ ವಸ್ತುಗಳಾಗುತ್ತವೆ.

ಗ್ರಾಮದೇವತೆಗಳ ಮತ್ತೊಂದು ಪ್ರಮುಖ ಗುಣವೆಂದರೆ, ಶಿಷ್ಟದೇವತೆಗಳಂತೆ ಅವತಾರವನ್ನು ಎತ್ತುವುದಿಲ್ಲ. ಬದಲಾಗಿ ತನ್ನನ್ನು ಯಾರು ಹೆಚ್ಚು ಪ್ರಿತಿಸುತ್ತಾರೋ ಅಥವಾ ಒಬ್ಬ ವ್ಯಕ್ತಿಯ ದೇಹದಲ್ಲಿ ಪ್ರವೇಶಿಸಿ, ಅಥವಾ ಮೈಮೇಲೆ ಬಂದು ತನ್ನ ಭಕ್ತರೊಡನೆ ಮಾತನಾಡಬಹುದು. ಆವಾಹಿಸಿ ಕೊಳ್ಳುವ ಅಥವಾ

ಪೂಜಾರಿಯು ಸಾಮಾನ್ಯವಾಗಿ ಸಮಾಜದ ಕೆಳ ವರ್ಗ ಅಥವಾ ಮೂಲ ನಿವಾಸಿಗಳಾದ ಜನರು ಮಾತ್ರ ಇರುತ್ತಾರೆ. ತಮಗೆ ಬೇಕಾದ ಆಹಾರವನ್ನು ಕೇಳಿ ಪಡೆಯುತ್ತವೆ. ಅಲ್ಲದೆ ಒಬ್ಬ ವೈದ್ಯನಾಗಿ, ಹೆಂಡತಿಯನ್ನು ಪ್ರೀತಿಸುವ ಗಂಡನೋಪಾದಿಯಲ್ಲಿ, ಸಂತಾನ ಕೊಡುವ ದೇವತೆಯಾಗಿ, ಜಗಳಗಳನ್ನು ನಿವಾರಿಸುವ ನ್ಯಾಯದೇವತೆಯಾಗಿ, ಮುಂದಿನ ಆಗುಹೋಗುಗಳನ್ನು ತಿಳಿಸುವ ಜ್ಯೋತಿಷಿಯಾಗಿ ಈ ಆವಾಹನೆಯು ಕೆಲಸಮಾಡುತ್ತವೆ. ಅಂದರೆ ಈ ಎಲ್ಲ ಕೆಲಸಗಳನ್ನು ದೇವಿಯೇ ಮಾಡಿಸುತ್ತಾಳೆ. ಒಂದು ವೇಳೆ ಭಕ್ತಕೊಡುವ ಸೇವೆಗಳನ್ನು ಪಡೆದು ಅದಕ್ಕೆ ಪ್ರತಿಫಲವಾಗಿ ಕಾರ್ಯಗಳು ನಡೆಯದೆ ಹೋದರೆ, ಆಗ ದೇವತೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಬಹುದು. ಅಥವಾ ತನ್ನ ಭಕ್ತರಿಂದಲೇ ಅಪಮಾನವನ್ನು ಅನುಭವಿಸಬೇಕಾಗುತ್ತದೆ. ಅಲ್ಲದೆ ಶಿಕ್ಷೆಯನ್ನು ಕೂಡಾ ಅನುಭವಿಸಬೇಕಾಗುತ್ತದೆ. ಅದು ಬಿಸಿಲಿನಲ್ಲಿ ನಿಲ್ಲುವ, ಖಾರದ ಪುಡಿಯನ್ನು ತಿಕ್ಕಿಸಿಕೊಳ್ಳುವ, ಅಥವಾ ಪೊರಕೆಯ ಸೇವೆಯನ್ನು ಕೂಡಾ ಅನುಭವಿಸಬಹುದು. ಒಂದು ರೀತಿಯಲ್ಲಿ ಅವರ ಸಂಬಂಧ ಮನೆಯವರೊಡನೆ ಇರುವ ಸಂಬಂಧವೇ ಆಗಿದೆ. ಅಥವಾ ಭಕ್ತನಿಂದ ದೂರವಾಗಲೂ ಬಹುದು. ಆದರೆ ಈ ಅದೃಷ್ಟ ಶಿಷ್ಟದೇವತೆಗಳಿಗೆ ಇಲ್ಲ. ಇಲ್ಲಿ ಭಕ್ತನೆ ತನ್ನಲ್ಲಿಯ ನ್ಯೂನ್ಯತೆಗಳನ್ನು ಕಂಡುಕೊಂಡು ದೇವರನ್ನು ಬಿಟ್ಟುಬಿಡುತ್ತಾನೆ.

ವೈದಿಕ ದೇವತೆಗಳು ಸಾರ್ವಕಾಲಿಕವಾದ ಒಂದು ಸ್ಥಳವನ್ನು ಹೊಂದಿ, ಆ ಸ್ಥಳಮಹಿಮೆಯಿಂದ ಕೂಡಿರುತ್ತವೆ. ಅದಕ್ಕೆ ವಿಶೇಷವಾದ ಭಕ್ತವೃಂದವನ್ನು ಹೊಂದಿರುತ್ತವೆ. ಆದರೆ ಗ್ರಾಮದೇವತೆಗಳಿಗೆ ಈ ರೀತಿಯ ಪ್ರಸಕ್ತಿ ಇರುವುದಿಲ್ಲ. ಅವುಗಳಿಗೆ ಯಾವುದೇ ರೀತಿಯ ನಿಗದಿತವಾದ ಸ್ಥಳವಿರುವುದಿಲ್ಲ. ಬದಲಾಗಿ ಈ ಜಾಗವನ್ನು ಬಿಟ್ಟು ಮುಂದಿನ ಮತ್ತಿನ್ನಾವುದೋ ಪ್ರದೇಶವನ್ನರಸಿ ಹೋಗಲು ಬಹುದು. ಬಹುತೇಕ ದೇವತೆಗಳು ಈ ರೀತಿಯಲ್ಲಿ ಬಂದಿರುವಂತಹವರು. ಸಿರಸಿಯ ಮಾರಿಕಾಂಬೆ ಈ ರೀತಿಯಲ್ಲಿ ಬಂದಿರುವಂತವಳು. ತನ್ನ ಒಡೆಯನೊಡನೆ ಒಂದೂರಿಂದೂರಿಗೆ ತಿರುಗಾಟವಾಡುವ ದೇವತೆಯರಾಗಿರುತ್ತಾರೆ. ಅಥವಾ ವರ್ಷಕ್ಕೊಮ್ಮೆ ಮಾತ್ರ ತಮ್ಮ ಇರವನ್ನು ಪ್ರಕಟಿಸಬಹುದು. ಉಳಿದಂತೆ ಪೆಟ್ಟಿಗೆಯಲ್ಲಿಯೋ, ದೇವಾಲಯದ ಮೂಲೆಯಲ್ಲಿಯೋ ಬಚ್ಚಿಟ್ಟುಕೊಂಡಿರಬಹುದು. ಅವರ ಸ್ವರೂಪವೇ ನಿಗದಿತವಾದುದಲ್ಲ. ಆರಾಧನೆಯ ಸಮಯದಲ್ಲಿ ಇದ್ದಕ್ಕಿದ್ದಂತೆ ಕಂಬದ ರೂಪದಲ್ಲಿಯೋ ಅಥವಾ ಮರವನ್ನು ಕಡಿದು ಅದಕ್ಕೆ ಆ ಕ್ಷಣದಲ್ಲಿ ರೂಪವನ್ನು ಕೊಟ್ಟು ವಿಸರ್ಜಿಸಬಹುದಾದ ರೂಪವನ್ನು ಹೊಂದುತ್ತಾರೆ.

ಶಾಶ್ವತವಾಗಿರುವ ದೇವತೆಗಳು ವರ್ಷದ ಎಲ್ಲಾ ದಿನಗಳಲ್ಲೂ ಒಂದೇ ಕಡೆ ನೆಲೆನಿಂತು ಪೂಜೆಗೊಂಬ ದೇವತೆಗಳು ಇರುವಂತೆ ಕೆಲವು ದೇವತೆಗಳು ಕೆಲವು ದಿನಗಳ ಮಟ್ಟಿಗೆ ಪೂಜೆಗೊಂಡು ನಂತರ ಅವುಗಳನ್ನು ವಿಸರ್ಜಿಸುವಂತ ದೇವತೆಗಳನ್ನು ಜನಪದರಲ್ಲಿ ಕಾಣಬಹುದು. ಪ್ರಕೃತಿಯ ಎಲ್ಲಾ ವಸ್ತುಗಳು ಪೂಜೆಗೊಳ್ಳುವುದು ಹಾಗೂ ಮಳೆಗಾಲ, ಚಳಿಗಾಲ, ಹಾಗೂ ಬೇಸಿಗೆಯ ಕಾಲಗಳನ್ನು ಅನುಲಕ್ಷಿಸಿ ಕೆಲವು ದೇವತೆಗಳು

ಕಂಡುಬರುತ್ತವೆ. ಅವರು ನಿರಂತರವಾಗಿ ಪೂಜೆಗೊಂಬುವುದಿಲ್ಲ. ಬದಲಾಗಿ ಕೆಲವು ದಿನಗಳಷ್ಟೆ ಇದ್ದು ಮರೆಯಾಗುತ್ತಾರೆ. ಪ್ರಕೃತಿಯ ಬದಲಾವಣೆಯು ಮಾನವನ ಮೇಲೆ ಮೊದಲಿನಿಂದಲೂ ಪ್ರಭಾವ ಬೀರಿದೆ. ಆ ಪರಿಣಾಮವಾಗಿ ಕುಂತಿಪೂಜೆ, ಗೌರಿಪೂಜೆ, ಭೂಮಿಪೂಜೆ,ಬಲಿಪೂಜೆ, ದುರ್ಗಾಪೂಜೆ, ಕಾಮನ ಹಬ್ಬ, ಮುಂತಾದವುಗಳನ್ನು ಉದಾಹರಿಸಬಹುದು. ಈ ಆಚರಣೆಗಳು ವರ್ಷಕ್ಕೊಂದು ಸಾರಿ ನಡೆಯುತ್ತವೆ. ಮತ್ತೆ ಅವುಗಳ ಆಚರಣೆಯು ಮುಂದಿನ ವರ್ಷ. ಕುಂಭರೂಪದಲ್ಲಿ ಮಾಡುವ ಆಚರಣೆಯೂ ಅತೀ ಪ್ರಾಚೀನವಾದ ಫಲವಂತಿಕೆಯ ಆರಾಧನೆಯಾಗಿದೆ. ಇಂತಹ ದೇವತೆಗಳನ್ನು ಸಾಯುವ ದೇವತೆಗಳೆಂದು ಕರೆಯಲಾಗಿದೆ.

ಸಂಕ್ಷಿಪ್ತವಾಗಿ ಶಿಷ್ಟ ಹಾಗೂ ಗ್ರಾಮದೇವತೆಗಳ ಲಕ್ಷಣಗಳನ್ನು ಹೀಗೆ ಹೇಳಬಹುದು. ಶಿಷ್ಟದೇವತೆಗಳು ಮಾನುಷಾಕಾರದ ಸ್ವರೂಪವನ್ನು ಹೊಂದಿರುವುದಲ್ಲದೇ, ನಿರ್ಧಿಷ್ಟವಾದ ನಿಯಮಗಳಿಗೆ ಅನುಗುಣವಾಗಿ ತಮ್ಮ ಸ್ವರೂಪವನ್ನು ಹೊಂದಿರುತ್ತವೆ. ಹಾಗೂ ಈ ಸ್ವರೂಪಗಳನ್ನು ಶಿಲ್ಪಗ್ರಂಥಗಳು ನಿಖರಗೊಳಿಸುತ್ತವೆ. ಆದರೆ ಗ್ರಾಮದೇವತೆಗಳಿಗೆ ಈ ರೀತಿಯ ಯಾವುದೇ ಶಿಷ್ಟಾಚಾರದ ಹಂಗು ಇಲ್ಲ. ದೇವರು ಇಲ್ಲಿ ಜ್ಞಾನದ ಸ್ವರೂಪವಾಗಿ ಕಂಡುಬರುತ್ತಾನೆ. ಅಂದರೆ, ದೇವತೆಗಳು ವಿಗ್ರಹದಲ್ಲಿ, ಮನುಷ್ಯನಿಗೆ ತನ್ನ ಇರುವನ್ನು ತೋರಿಸುತ್ತಾನೆ. ಶಾಸ್ತ್ರದ ಪ್ರಕಾರ ಅವನು ಅಮೂರ್ತನು, ಆದಿ ಅಂತ್ಯವಿಲ್ಲದವನು. ' ಇಲ್ಲಿ ಪೂಜೆಯು ನಿಯತವಾದುದು ಹಾಗೂ ನಿರ್ಧಿಷ್ಟವಾದ ಆಗಮಗಳಿಗೆ ಒಳಪಟ್ಟಿದ್ದು. ಭಕ್ತನು ತಾನೊಬ್ಬನೆ ಪೂಜೆಯನ್ನು ಮಾಡಬಹುದು. ಅಪರಿಮಿತವಾದ ಶಕ್ತಿಯನ್ನು ಹೊಂದಿ ಇಡೀ ವಿಶ್ವವನ್ನು ತಮ್ಮ ವಶದಲ್ಲಿರಿಸಿಕೊಂಡಿರುತ್ತಾರೆ. ಹಾಗೂ ಕರುಣಾದ್ರವಾದ ರೂಪವನ್ನು ಹೊಂದಿರುತ್ತಾರೆ. ಬ್ರಾಹ್ಮಣ ಪೂಜಾರಿಗಳನ್ನು ಮಾತ್ರ ಹೊಂದಿರುತ್ತಾರೆ. ಕೆಲವು ದೇವತೆಗಳನ್ನು ಹೊರತು ಪಡಿಸಿದರೆ ಉಳಿದಂತೆ ಸಸ್ಯಹಾರವೇ ಪ್ರಮುಖವಾದ ನೈವೇದ್ಯವಾಗಿರುತ್ತದೆ. ವಿಶ್ವಕುಟುಂಬಿಯ ಕಲ್ಪನೆಯ ಲೋಕವಾಗಿರುತ್ತದೆ. ನಿಶ್ಚಿತವಾದ ಕಲ್ಪನೆಯ ಶಾಸ್ತ್ರ ಬದ್ಧವಾದ ಕಟ್ಟಡವನ್ನು ಹೊಂದಿರುತ್ತದೆ. ಪುರಾಣಗಳಿಂದ ಕೂಡಿದ ಕಲ್ಪನೆಗಳನ್ನು ಹೊಂದಿರುತ್ತವೆ. ಅಲ್ಲದೆ, ಜಾತ್ರೆ, ಹಬ್ಬಗಳು ನಿಗದಿತಗೊಂಡಿರುತ್ತವೆ. ಸಾಮಾನ್ಯವಾಗಿ ಶಿಷ್ಟ ಸ್ತ್ರೀ ದೇವರುಗಳು ಪುರುಷ ದೇವರುಗಳ ಅಡಿಯಲ್ಲಿರುವವರು, ಅಲ್ಲದೆ ಪರಲೋಕವೇ ಅವರ ಉಗಮಸ್ಥಾನವಾಗಿರುತ್ತದೆ. ಇದಕ್ಕೆ ವಿರುದ್ಧವಾಗಿ ಗ್ರಾಮದೇವತೆಗಳು ಇರುತ್ತಾರೆ.

ದಕ್ಷಿಣ ಭಾರತದಲ್ಲಿ ಪ್ರಧಾನವಾಗಿ ಕಂಡುಬರುವ ದೈವವೆಂದರೆ, ದೇವಿಯದು. ಇಲ್ಲಿ ಸೌಮ್ಯರೂಪದಲ್ಲಿಯೂ ಕ್ರೂರರೂಪದಲ್ಲಿಯೂ ನೋಡಲಾಗಿದೆ. ಸೌಮ್ಯರೂಪದಲ್ಲಿ ಕಾಮಾಕ್ಷಿಯೆಂದು, ಚಾಮುಂಡಾ, ಕನ್ಯಾ, ಮೂಕಾಂಬಿಕಾ,ಮುಂತಾದ ರೂಪಗಳನ್ನು ಕಾಣಬಹುದು. ಕೇರಳಾದಲ್ಲಿ ಭಗವತಿ ಅಥವಾ ಭದ್ರಕಾಳಿಯ ರೂಪದಲ್ಲಿ ಪ್ರಾಚೀನ ಕಾಲದಿಂದಲೂ ಆರಾಧಿಸುವ ದೇವತೆಯಾಗಿದ್ದಾಳೆ. ಕರ್ನಾಟಕವೊಂದನ್ನೆ ತೆಗೆದುಕೊಂಡರೆ ಸಾವಿರಾರು ಗ್ರಾಮದೇವತೆಗಳು ಸಿಗುತ್ತಾರೆ. ಕಬ್ಬಾಳದ ದುರಗಮ್ಮ, ಮಧುಗಿರಿ ಮಾರಮ್ಮ, ಹಾಲ್ಕೋಟೆ

ಮಾರಮ್ಮ, ಬೆಟ್ರಳ್ಳಿ ಮಾರಮ್ಮ, ದಂಡಿನ ಮಾರಿ, ಉರಿಮಾರಿ, ಸೀಗುಮಾರಿ, ಕುಂಟ್ಮಾರಿ, ಕೆಮ್ಮಾರಿ, ಕಿವುಡ್ಮಾರಿ, ಅರಕೇರಿ ಬಿಸಿಲಮಾರಿ, ಉಳ್ಳೇನಳ್ಳಿ ಮಾರಿ, ಅಂಕಾಲಮ್ಮ, ಸುಂಕಾಲಮ್ಮ, ಕ್ಯಾತಮ್ಮ, ಏಳುನಾಲುಗೆ ದುರುಗಿ, ದೇವಮ್ಮ, ದ್ಯಾಮವ್ವ, ದ್ಯಾವಮ್ಮ, ಮದ್ದೂರಮ್ಮ, ಸಿದ್ದಮ್ಮ, ಹಟ್ಟಿಲಕ್ಕಮ್ಮ, ಉಜಿನಿ ಚೌಡಮ್ಮ, ಚೌಡಿ, ಚೌಡಮ್ಮ, ಕಾಳಮ್ಮ, ಹಾಸನಮ್ಮ, ಹುಂತುರಮ್ಮ, ಬಾಚಳ್ಳಿಅಮ್ಮ, ಬ್ಯಾಲಕಮ್ಮ, ಬಿಸಾಳಿಯಮ್ಮ, ಚಿಕ್ಕಮ್ಮ, ದೊಡ್ಡಮ್ಮ, ಕಿಕ್ಕೇರಮ್ಮ, ಗಂಗಮ್ಮ, ಹೊನ್ನಾಲದಮ್ಮ, ಮುದ್ದಮ್ಮ, ಮಾಸ್ತ್ಯಮ್ಮ, ಹಟ್ಟೀಲಕ್ಕಮ್ಮ, ಹಟ್ಟೀಕಲ್ಲಮ್ಮ, ಗಂಗಮ್ಮ, ದೇವಿರಮ್ಮ, ಬೆಟ್ಟದಮ್ಮ,ಮಹದೇವಮ್ಮ, ಮೊಗಯಮ್ಮ, ಮುತ್ತಮ್ಮ, ಮಾಯಮ್ಮ, ಹುಟ್ಟಮ್ಮ, ಮಸಣಮ್ಮ, ರಾಕಾಸಮ್ಮ, ಕಗ್ಗಲಿಯಮ್ಮ, ಚಿಕುದೇವಿ, ಮೂಗೂರು ತಿಬ್ಬಾದೇವಿ, ಕಲ್ಲೂರ ಮಲ್ಲಗುದಮ್ಮ, ಮುಡಗುಂಡದಮುಳ್ಳಾಚಿ, ಹುಚ್ಚನಳ್ಳಿ ಉರಿಕಾತಿ, ಬನ್ನೂರ ಹ್ಯಾಮಾದ್ರಿ, ಉತ್ತನಳ್ಳಿ ಉರುಕಾತಿ, ಗೊಂಡನಳ್ಳಿಗೊತ್ತುಗಾತಿ, ಕೊಡಗಿನ ಮಮ್ಮಾಯಿನಿ, ಪಿರಿಯಾಪಟ್ಟಣದ ಬರಿಮಸಣಿ, ದೂರದ ದುಬ್ಬಮ್ಮ, ಬಂಡಿಮಾಕಾಳಿ, ಏಕನಾಥೇಶ್ವರಿ, ಅಣ್ಣಮ್ಮ, ಉಡಸಲಮ್ಮ, ಪಟ್ಟಲದಮ್ಮ, ಕಾಳಗಟ್ಟಮ್ಮ, ಕುದುರಮ್ಮ, ಹುಲಿಕೇರಮ್ಮ, ಮುಳುಕಟ್ಟಮ್ಮ, ಕಾಳಗಟ್ಟಮ್ಮ, ದಂಡಮ್ಮ, ಪ್ಲೇಗಮ್ಮ,ಸೀತಾಳಮ್ಮ, ಕೋಲಾರಮ್ಮ, ಸಪ್ಪಮ್ಮ, ಕರಗಮ್ಮ, ಚೇಳೂರಮ್ಮ, ನಾಣ್ಯಾರಮ್ಮ, ಗಿಡದಮ್ಮ, ಸಿಡಿಬಿನಮ್ಮ, ಜಿನ್ನಾರದಮ್ಮ, ಹಳೇಮಾರಮ್ಮ, ಆಲದಮರದಮ್ಮ, ಸತ್ಯಮ್ಮ, ಹುತ್ತಮ್ಮ, ಕೆರೆಚೌಡಿ, ಬೆಸ್ತರಗಂಗಮ್ಮ, ಎಲ್ಲವ್ವ, ದ್ಯಾಮವ್ವ, ದುರಗಮ್ಮ, ಹುಲಿಗಮ್ಮ, ಕರಿಯಮ್ಮ, ಸೆಟಿಗವ್ವ, ಲಕುಮವ್ವ, ಕುಮುದವ್ವ, ಕಾಳವ್ವ, ಮಾರೆಮ್ಮ, ಮಾಕಮ್ಮ, ತುಳುಜಮ್ಮ, ಮಾತಂಗಿ, ಬನಶಂಕರಿ, ಏಳುತಾಯಮ್ಮ,ಮುಂತಾದ ದೇವತೆಗಳು ಕರ್ನಾಟಕದ ತುಂಬೆಲ್ಲಾ ಕಂಡುಬರುತ್ತವೆ. ಸಾವಿರ ಹೆಸರಾದರೂ ಅವುಗಳ ಗುಣಸ್ವಭಾವ ಒಂದೇ ಆಗಿರುವುದು ವಿಶೇಷವೆನ್ನಬಹುದು.

ಅಡಿ ಟಿಪ್ಪಣಿಗಳು

೧. ಶಿವರಾಮ ಕಾರಂತ, ೧೯೬೯, ನಾಗರಿಕತೆಯ ಹೊಸ್ತಿಲಲ್ಲಿ , ಪು. ೫

೨. ಅದೇ, ಪು. ೫

೩. ವೇದಯುಗ, ೧೯೯೭, ಪುಟ.೬೪

೪. *AnneBaring and Jules Cashford, 1993, The myth of the Goddess, p.1*

೫. ಅದೇ, ಪು.೨೨

೬. ಅದೇ, ಪು.೨೨

೭. ಅದೇ, ಪು. ೧೬

೮. ಶಿವರಾಮ ಕಾರಂತ, ಪೂರ್ವೋಕ್ತ, ಪು. ೧೨

೯. ರಾಮಚಂದ್ರರಾವ್, ಎಸ್.ಕೆ.,೧೯೭೫, ಮೂರ್ತಿಶಿಲ್ಪ: ನೆಲೆ ಮತ್ತು ಹಿನ್ನೆಲೆ, ೨೨೮

೧೦. ಶಿವರಾಮ ಕಾರಂತ, ಪೂರ್ವೋಕ್ತ, ಪು. ೧೬

೧೧. *Alexander Marshack, 1993, The Roots of Civilization,quoted in The Myth of the Goddess, p. 22*

೧೨. *The Mask of God: Primitive Mythology, 1976, penguin books, p.330*

೧೩. ಉಪಾಧ್ಯಾಯ, ೧೯೮೯, ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ಉಧೃತ ಡಾ. ಮಂಜುನಾಥ ಬೇವಿನಕಟ್ಟಿ, ೧೯೯೪, ಜನಪದ ಸಂಸ್ಕೃತಿ,೪

೧೪. ಪೂರ್ವೋಕ್ತ, *The myth of the Goddess, p. 16*

೧೫. *Encyclopedia of human Evolution, 1995, p.365*

೧೬. ವೇದಯುಗ, ೧೯೯೭, ಪುಟ.೬೪

೧೭. ಈ ಗುಹಾ ಚಿತ್ರದ ಕಾಲವನ್ನು ಸಿ.೧೪ ರ ಸಹಾಯದಿಂದ ನಿರ್ಧರಿಸಲಾಗಿದೆ. Encyclopedia of human Evolution. pp 370

೧೮. *Encyclopedia of human evolution. pp 38 0*

೧೯. ಛಾಯಾ ದಾತಾರ್,ಕನ್ನಡಕ್ಕೆ ಸರಸ್ವತೀ ರಿಸಬೂಡ, ೧೯೯೨, ಸ್ತ್ರೀ ಪುರುಷ, ೪೨

೨೦. ಪೂರ್ವೋಕ್ತ, The Myth of Goddess, 1993, p.50

೨೧. Robert Briffault, 1952, The Mothers, Vol. II, Ch 8

೨೨. ಅದೇ, *p. 251*

೨೩. ರಾಮಚಂದ್ರರಾವ್, ಎಸ್.ಕೆ., ೧೯೭೫, ಮೂರ್ತಿಶಿಲ್ಪ: ನೆಲೆ ಮತ್ತು ಹಿನ್ನೆಲೆ,೨೨೮

೨೪. The Myth of Goddess, 1993, **pag xi**

೨೫. ಅದೇ, p.10

೨೬. Neumann, E., 1955, The great Mother , p 51

೨೭. The Myth of Goddess, 1993, *p. 25*

೨೮. Neumann, E., 1970, The Origins and History of consciousness,1970, 279

೨೯. Kenyon, Digging up Jericho, p. 60

೩೦. Mellaart, James., 1965, Earliest Civilizations of the Near East, p. 77

೩೧. ಅದೇ, 176

೩೨. ಸಿದ್ಧಲಿಂಗಯ್ಯ, ೧೯೯೭,ಗ್ರಾಮದೇವತೆಗಳು, ಪು.೧೭

೩೩. ರಾವ್, ಎಸ್.ಆರ್., ೧೯೯೪, ಲೋಥಲ್ ಮತ್ತು ಸಿಂಧೂ ನಾಗರಿಕತೆ, ಪು.೮೭

೩೪. ವೇದಯುಗ, ೧೯೯೯, ಪು.೨೧೬

೩೫. Srivastava, M.C.P., 1979, Mother Goddess, p.21

೩೬. ಬಂಡಾರಕರ್, ಆರ್.ಜಿ., ೧೯೬೫, ವೈಷ್ಣವಿಸಂ ಶೈವಿಸಮ್ ಅಂಡ್ ಮೈನರ್ ರಿಲೀಜನ್ ಸಿಸ್ಟಮ್. ಪು. ೧೪೨

೩೭. Oppert, 1893, The Original Inhabitants of Bharatavarsa, p viii and p 397

೩೮. ಅದೇ, p viii and p 397

೩೯. Marshall, J., Mohengo daro and the Indus Civilization, Vol. I, p. 49

೪೦. Tyler, Stephen A., 1973, India: An Anthropological Perspective, p no 33

೪೧. Marshall, ಅದೇ, I. 49-50

೪೨. Kosambi D.D., 1965, Ancient India: A History of its Culture and Civilization, New York; Random House, p 68

೪೩. Marshall, ಅದೇ, I. 49-50

೪೪. ವೇದಯುಗ, ೧೯೯೬, ೧೭೫

೪೫. ಅದೇ. ೨೧೭

೪೬. Marshall, J., ಅದೇ, I, p. 50

೪೭. Marshall, J., ಅದೇ, I, p. 50-1

೪೮. Jayakar, Papul., 1989, The Earth Mother, p.

೪೯. Murray, M., Female Fortility Figurines, JRAI, Vol. LXIV, 1334

೫೦. Marshall, J., ಅದೇ, Vol. I, p. 50, Pl. no. XII-1

೫೧. James, E.O., 1959, The cult of the Mother Goddess, p. 82

೫೨. Simone de Beauvoir, Trans,and ed.Parshley, H.M., 1999, The Second Sex, p.99

೫೩. Srivastava, M.C.P., 1979,Mother Goddess, p. 26

೫೪. ವೇದಯುಗ, ೧೯೯, ಪುಟ.೨೧೭; Vats, M.S., Excavations of Harappa, p. 42, pl.XCIII. 304

೫೫. ಪೂರ್ವೋಕ್ತ, The Myth of Mother Goddess, p. 66

೫೬. Mackay, E.J., Further Excavation at Mohejodaro, pl. XVIV, p. 430; ವೇದಯುಗ, ೨೧೭

೫೭. Vats, M.S., 1940, Excavations of Harappa, p. 42, pl.XCIII. 304

೫೮. ಅದೇ, p. 43, pl.XCI. 249)

೫೯. Srivastava, M.C.P., 1979, Mother Goddess, p. 30

೬೦. Machenzie, Indian Myth and Legend. p. XL.

೬೧. ಪೂರ್ವೋಕ್ತ, Tyler, Stephen.A., p.100

೬೨. Kinsly, David., 1986, Hindu Goddess; Vision of the Divine Femininein the Hindu Tradition, p.58-9

೬೩. Macdonell, 1974 reprint, Vedic Mythology, p. 46

೬೪. ಋ.೩.೬೧.೩

೬೫. ಋ.೧.೪೮.೩,೫

೬೬. ಋ.೧.೯೨.೯

೬೭. ಋ.೧.೯೨.೧೨, ೧.೧೨೩.೯, ೭.೭೬.೫.

೬೮. ಋ.೧.೧೧೩.೯,೪.೫೨.೪

೬೯. ಋ.೧.೯೨.೪

೭೦. ಋ.೧.೧೨೩.೧೧

೭೧. ಋ.೧.೧೨೪.೩

೭೨. ಋ.೫.೮೦.೫,೬

೭೩. ಋ.೧.೧೨.೩

೭೪. ಋ.೭.೭೫.೨

೭೫. ಋ.೭.೭೯.೩.

೭೬. ಋ.೭.೮೧.೧, ೬

೭೭. ಋ.೧.೧೧೫.೨,೨.೧೧೩.೧೬

೭೮. ಋ.೧.೧೨೪.೮

೭೮. ಋ.೧.೨೩.೧೮ ೧೯

೭೯. ಋ.೧೦.೧೭.೧೦

೮೦. ಋ.೧೦.೮೨.೫,೬

೮೧. Choudhary, Indian Culture, Vol. VIII, p. 75

೮೨. ಋ. ೧.೮೯.೧೦

೮೩. ಋ. ೧೦.೭೨.೮, ಅ.ವೇ.೮.೯.೨೧

೮೪. Srivasthva,M.C.P., 1979, Mother Goddess, p. 51

೮೫. ೧೨.೧.೨,೧೭ ಇಂಗ್ಲೀಷ್ ಅನುವಾದವನ್ನು ಈ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ. The Feminie principle in the Vedas, p. 30

೮೬. ಋ. ೧.೧೮೫.೭

೮೭. Srivasthva,M.C.P., 1979, Mother Goddess, p.54

೮೮. ಋ. ೬.೬೧.೧೩

೮೯. ಋ. ೧೦.೧೨೫.೬,೭

೯೦. ಋ. ೧.೧೬೪.೪೫

೯೦. ಋ. ೮.೨.೧೯

೯೨. ಅ.ವೇ.೭.೧೧೫.೧

೯೩. ಶತಪತ ಬ್ರಾಹ್ಮಣ ೧.೪೩.೧

೯೪. ಋ. ೨.೩೨.೫

೯೫. ಅ.ವೇ.೭.೪೭.೧

೯೬. James, E.O., ಪೂರ್ವೋಕ್ತ, ಪು.110

೯೭. RamGopal, 1959, India of Vedic Kalpa Sutras, p.1

೯೮. Bhattacharyya, N.N., 1992, History of the Tantric Religion, p.204

೯೯. ಶತಪತ ಬ್ರಾ. ೫.೨೨.೧೩,೪; ೫.೩.೪; ೫.೪.೫,೭; ೧೩.೧.೮,೫; ೧೪.೨.೧.೧, ೨; ಜೈಮಿನಿ ಭ್ರಾ.೧.೮.೨; ಪಂಚವಿಂಶಾ ಬ್ರಾ.೬.೭.೭.

೧೦೦. ತೈ.ಆ.೧೦.೧೮

೧೦೧. ವಾ.ಸಂ.೩.೫೭

೧೦೨. ಕಾಟಕ ಗೃಹ್ಯಸೂತ್ರ, ೧೭.೧, ಮಾನವ ಗೃಹ್ಯಸೂತ್ರ ೧೧.೧೩

೧೦೩. ರಾಮಚಂದ್ರ ರಾವ್, ಎಸ್.ಕೆ., ೧೯೭೫, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಪು.೨೨

೧೦೪. ಅಲ್ಲೇ, ಪು.೨೫

೧೦೫. ASI AR., 1927-28, p.66

೧೦೬. JIH, vol. Pt.III, p. 689-90

೧೦೮. ವಿರಾಟಪರ್ವ, ೪.೬.೨೩

೧೦೯. ಭೀಷ್ಮಪರ್ವ,೬

೧೧೦. Chattopadhyaya, S., 1962, The Evolution of Theistic Sects in Ancient India, 101

೧೧೧. ಸಿದ್ಧಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಪು.೨

೧೧೨. ನಾಗೇಶ್, ಎಚ್.ವಿ., ೧೯೮೧, ಗ್ರಾಮವ್ಯಾಸಂಗ, ಪು. ೧೪-೫

೧೧೩. ಬೋರಲಿಂಗಯ್ಯ, ಹಿ.ಚಿ., ೨೦೦೦, ಬುಡಕಟ್ಟು ದೈವಾರಾಧನೆ, ಪು. ೧೦

೧೧೪. ಅಲ್ಲೇ. ಪು. ೧೩

೧೧೫. ಸಿದ್ಧಲಿಂಗಯ್ಯ, ಡಾ., ೧೯೯೭, ಗ್ರಾಮದೇವತೆಗಳು, ಪು. ೧೭

೧೧೬. ಅಲ್ಲೇ, ಪು. ೪೨

೧೧೭. ಅಲ್ಲೇ, ಪು. ೪೨

೧೧೮. ಬೋರಲಿಂಗಯ್ಯ, ಹಿ.ಚಿ., ೨೦೦೦, ಬುಡಕಟ್ಟು ದೈವಾರಾಧನೆ, ಪು. ೨೪

೧೧೯. Jayakar, Pupul., 1989,The Earth Mother, p. 117

೧೨೦. ಬೋರಲಿಂಗಯ್ಯ, ಹಿ.ಚಿ., ಪೂರ್ವೋಕ್ತ, ಪು. ೩೯

೧೨೧. ರಾಮಚಂದ್ರ ರಾವ್,ಎಸ್.ಕೆ., ಪೂರ್ವೋಕ್ತ, ಪುಟ.೨೦

೧೨೨. Frazer, Sir. James G., 1911 -15, The Golden Bough, Vol. 8, The Sprits of the corn and the wild, p. 261-2

೧೨೩. Neumann, Erich, 1970, The Origins and History of Consciousness, p. 170

೧೨೪. Campbell, Joseph, 1970, The masks of God: Oriental Mythology, 72

೧೨೫. Frazer, Sir. James G., 1911-15, The Golden Bough, Vol. 9, The Scapegoet, p. 227

೧೨೬. Bhattacharyya, N.N., 1974, History of the Tantric Religion, p. 140

೧೨೭. Elmore, W.T., 1984(AES), Dravidian Gods in Modern Hinduism, p.134-5

ಆರಾಧನೆ ೩

ದೇವತೆಗಳ ವರ್ಗೀಕರಣ

ಭಾರತದ ಸಂದರ್ಭದಲ್ಲಿ ದೇವತೆಗಳ ವರ್ಗೀಕರಣವೆಂದರೆ ಅದೊಂದು ಬೃಹತ್ ಸಮಸ್ಯೆಗಳ ಆಗರವೇ ಆಗಿದೆ. ಇಲ್ಲಿ ಶಿಷ್ಟದೇವತೆಗಳು ಹಾಗೂ ಗ್ರಾಮದೇವತೆಗಳ ಅತ್ಯಧಿಕ ಪ್ರಮಾಣದಲ್ಲಿ ಕಂಡುಬರುತ್ತಾರೆ. ಅವರ ಮೂಲ ಆಶಯಗಳು ಒಂದೇ ರೀತಿಯಲ್ಲಿ ಕಾಣಬರುತ್ತವೆ. ದೇವತೆಗಳ "ಪರಿಕಲ್ಪನೆಯ ಮೂಲ ಆಶಯಗಳಾದ ಒಳಿತಿನ ಪ್ರೇರಣೆ, ಕೆಡುಕಿನ ನಿವಾರಣೆ ಇವು ಎಲ್ಲಾ ಕಾಲ, ಜನಾಂಗ, ಪ್ರದೇಶಗಳಲ್ಲಿಯೂ ಸಾಮಾನ್ಯವಾಗಿ ಪ್ರಚಲಿತವಿರುವ ಕಾರಣ ಈ ದೇವತೆಗಳನ್ನು ಯಾವುದೇ ಒಂದು ವೈಜ್ಞಾನಿಕ ತಳಹದಿಯ ಮೇಲೆ ವರ್ಗೀಕರಿಸುವುದು ಕಷ್ಟ ಸಾಧ್ಯವಾದುದು"[೧] ಅನ್ನಲಾಗಿದೆ.ಜಗತ್ತಿನ ಎಲ್ಲಾ ಜನಾಂಗಗಳ ಮೂಲ ಸಲೆಯಾಗಿರುವ ಮಾತೃದೇವತೆಯ ಆರಾಧನೆಯು ಅನೇಕ ಅವಸ್ಥಾಂತರಗಳನ್ನು ಕಂಡಿದ್ದರೂ ಸಹ ತನ್ನ ಇರುವನ್ನು ಯಾವುದೋ ರೂಪದಲ್ಲಿ ಇಟ್ಟುಕೊಂಡಿದ್ದು ಕಂಡುಬರುತ್ತದೆ.

ಕ್ರೈಸ್ತ ಧರ್ಮ ಜಗತ್ತಿನ ದೊಡ್ಡ ಧರ್ಮವಾಗಿದ್ದು, ಪುರುಷನ ಪ್ರಾಬಲ್ಯದ ಮೂಲಕವೇ ಏಳಿಗೆಗೆ ಬಂದಿದೆಯಾದರೂ ಇಲ್ಲಿಯೂ ಸಹ ಮಾತೃದೇವತೆಯ ಮೂಲರೂಪವನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಂಡಿದೆ. ಹಳೆಯ ಒಡಂಬಡಿಕೆಯಲ್ಲಿ;

> the poetic vision of Mary- in icon, painting or hymn, brings her to life in the old images of the past. Here she is drawn as the Great Mother of Life and Death, Queen of Heaven, Earth and Underworld, Goddess of the Animals, and Plants, and Goddess of the Wisdom of the Soul.[೨]

ಹಿಂದೆ ಇದ್ದ ಸೈಬೆಲೆ, ಅಪ್ರೋದಿತೆ, ಡೆಮಿಟರೇ, ಅಸ್ಟಾರ್ಟೆ, ಈಶಿಸ್, ಹತೊರ್, ಇನಾನ್ನ, ಹಾಗೂ ಈಸ್ತಾರ ದೇವತೆಗಳ ರೀತಿಯಲ್ಲಿ ಅಥವಾ ಸರಸ್ವತೀ, ದುರ್ಗೆ, ಪಾರ್ವತಿಯರ ರೀತಿಯಲ್ಲಿ ಕನ್ಯೆಯಾಗಿ, ತಾಯಿಯಾಗಿ ಮೇರಿಯು ಕಂಡುಬರುತ್ತಾಳೆ. ಅಲ್ಲದೇ ಅರೆದೈವವೂ, ಅರೆ ಮಾನವ ರೂಪಿನ ದೇವತಾ ಮನುಷ್ಯನಿಗೆ ಜನ್ಮವಿತ್ತಿದ್ದಾಳೆ. ಹೀಗೆ ಮೇರಿ ಕ್ರೈಸ್ತರಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದಾಳೆ. ಅಂತೆಯೇ

ಮುಸ್ಲಿಮರಲ್ಲಿ ಸ್ತ್ರೀ ದೇವತೆಗಳನ್ನು ಕಾಣಲು ಸಾಧ್ಯವೇ ಇಲ್ಲ. ಆದರೂ ಅರೇಬಿಯನ್ ಕತೆಗಳಲ್ಲಿ ಸ್ತ್ರೀ ದೇವತೆಗಳು ಜೋಡಿಯಾಗಿ ಬರುತ್ತಾರೆ. ಇಲ್ಲಿ ಸ್ತ್ರೀ ದೇವತೆಯು ಹಿರಿದಾದ ಸ್ಥಾನವನ್ನು ಪಡೆದಿದ್ದು, ದೇವರು ಅವಳ ಮಿಥ್ಯಾ ರೂಪವಾಗಿರುವುದಿಲ್ಲ. ಅಲ್ಲದೆ ಹಲವು ಬಾರಿ ಮಾತೃದೇವತೆಯು ಪತ್ನಿಯಾಗಿ, ತಾಯಿಯಾಗಿ ಕಾಣುತ್ತಾಳೆ. ದೇವರು ಅವಳ ಮಗುವಾಗಿದ್ದಾನೆ. ಮುಂದುವರೆದು ಸ್ತ್ರೀ ದೇವತೆಯು ಪುರುಷದೇವತೆಯಾಗಿ ಮಾರ್ಪಾಡಾಗುತ್ತಾರೆ. ಮುಂದೆ ಅವಳು ತಿರಸ್ಕಾರಕ್ಕೂ ಕಾರಣವಾಗುತ್ತಾಳೆ. ಇಜಿಪ್ಟಿನಲ್ಲಿಯೂ ಮಾತೃವಿನ ಸ್ಥಾನ ಇದೇ ರೀತಿಯ ಬೆಳವಣಿಗೆಯನ್ನು ಹೊಂದಿದೆ. ಈಜಿಪ್ಟಿನಲ್ಲಿ ಮೊದಲು ಅನೇಕ ಸ್ತ್ರೀ ದೇವತೆಗಳು ಕಂಡುಬರುತ್ತಾರೆ. ಆಕಾಶದೇವತೆಯನ್ನು ನಟ್ ಎಂದು ಕರೆಯಲಾಗಿದೆ. ಇವಳು ತನ್ನ ನಾಲ್ಕು ಕಾಲುಗಳಿಂದ ಆಕಾಶವನ್ನು ಎತ್ತಿ ಹಿಡಿದಿದ್ದಾಳೆ. ಅಲ್ಲದೆ, ಸೂರ್ಯನಾಗಿ ಹಗಲು ಇರುಳುಗಳನ್ನು ಇವಳು ತನ್ನ ಕೊಂಬಿನ ಮಧ್ಯದಲ್ಲಿ ಹೊತ್ತು ನಡೆಸುತ್ತಿದ್ದಾಳೆ. ಅಲ್ಲದೆ ಹಸುವಿನ ರೀತಿಯಲ್ಲಿ ಈ ದೇವತೆಯನ್ನು ನೋಡಲಾಗಿದೆ. ರಾಜರು ಇವಳ ಎದೆಯ ಹಾಲನ್ನು ಹೀರುತ್ತಾ ತಮ್ಮ ಬಲವನ್ನು ವೃದ್ಧಿಸಿಕೊಳ್ಳುತ್ತಾರೆ.

ಈಜಿಪ್ತನ ಇನ್ನೊಂದು ಪ್ರಮುಖ ದೇವತೆಯೆಂದರೆ, ಈಸೀಸ್. ಆದಿಮ ಕಾಲದಲ್ಲಿ ನೀರಿನಲ್ಲಿದ್ದ ಹಾವಾಗಿ, ನಕ್ಷತ್ರಗಳ ದೇವತೆಯಾದ ಸಿರಿಯುಸ್ ಆಗಿ, ವರಾಹರೂಪವಾಗಿ, ಪಕ್ಷಿದೇವತೆಗಳಾಗಿ, ಶಕ್ತಿ ಸಮೃದ್ಧಿಯನ್ನು ಒದಗಿಸುವ ದೇವತೆಯಾಗಿದ್ದಾಳೆ. ಅಲ್ಲದೇ ಹಸುವಿನ ರೂಪದಲ್ಲಿರುವ ದೇವತೆಯಾಗಿ ಕಾಣುತ್ತಾಳೆ. Isis was the Great Mother Goddess of the Universe, from whom all gods and goddesses, worlds and humanity where born [೩] ಈಸಿಸ್ ದೇವತೆಯ ಆರಾಧನೆಯು ಆ ಕಾಲಕ್ಕೆ ಈಜಿಪ್ಟಿನಿಂದ ಗ್ರೀಸ್‌ವರೆಗೆ ಇಡೀ ರೋಮ್ ಸಾಮ್ರಾಜ್ಯವನ್ನು ಕೂಡಾ ಆವರಿಸಿತ್ತು. ಸುಮೇರಿಯಾ ಸಂಸ್ಕೃತಿಯ ಇನಾನ್ನಾ ಈಸ್ತರ್ ದೇವತೆಯು ಪ್ರಸಿದ್ಧವಾದ ಮಾತೃದೇವತೆಯಾಗಿದೆ. ಚೀನಾ, ಜಪಾನ ದೇಶಗಳಲ್ಲೂ ಸಹ ಮಾತೃ ದೇವತೆಯ ಬೀಜಗಳನ್ನು ಕಾಣಬಹುದಾಗಿದೆ. ಭಾರತವಂತೂ ಮಾತೃದೇವತೆಯ ಪ್ರಾಚೀನತೆಯಿಂದ ಅರ್ವಾಚೀನದವರೆಗೂ ಹರಡಿಕೊಂಡು ಬಂದಿದೆ. ಅದು ಶಿಷ್ಟ ರೂಪದಲ್ಲಿ ಗ್ರಾಮದೇವತೆಯ ರೂಪದಲ್ಲಿ ಕಾಣಬಹುದು. ಹೀಗೆ ಮಾತೃ ಆರಾಧನೆಯು ಜಾಗತಿಕ ಆಚರಣೆಯಾಗಿರುವುದನ್ನು ಕಾಣಬಹುದು.

ಹೀಗೆ ಕಂಡುಬರುವ ದೇವತೆಯ ಸ್ವರೂಪವನ್ನು ಯಾವರೀತಿಯಲ್ಲಿ ವರ್ಗೀಕರಿಸಿಕೊಳ್ಳಬಹುದು, ಭಾಷೆಯ ಆಧಾರದ ಮೇಲೆಯೋ? ಬಣ್ಣದ ಆಧಾರದ ಮೇಲೆಯೋ? ಭಾವನೆಗಳ ಆಧಾರದ ಮೇಲೆಯೋ? ಜನಾಂಗಗಳ ಆಧಾರದ ಮೇಲೆಯೋ? ಅಥವಾ ಗುಣಸ್ವಭಾವ, ಲಿಂಗ, ಆಹಾರವನ್ನು ಆಧಾರವಾಗಿಟ್ಟುಕೊಂಡು ಈ ಮಾತೃದೇವತೆಗಳನ್ನು ವಿಂಗಡಿಸಿಕೊಳ್ಳಬೇಕೆ? ಸ್ಥಳ, ದೇಶ, ಕಾಲವನ್ನು ಆಧಾರವಾಗಿಟ್ಟುಕೊಂಡು ಮಾತೃದೇವತೆಗಳನ್ನು ವಿಂಗಡಿಸಿಕೊಳ್ಳಬಹುದೆ ಎಂಬ ಪ್ರಶ್ನೆಗಳನ್ನು ಹಾಕಿಕೊಂಡಾಗ ಬಿಡಿಸಲಾರದ ಸಮಸ್ಯೆಯಾಗಿ

ಕಾಣಬರುತ್ತದೆ. ಯಾಕೆಂದರೆ ಶಕ್ತಿ ಆರಾಧನೆಯು ಭಾಷೆ, ಗಡಿ, ಕಾಲವನ್ನು ಮೀರಿ ಬೆಳೆದ ಪರಂಪರೆಯಾಗಿದೆ. ಭಾಷೆ ಭಿನ್ನವಾದರೂ ಭಾವನೆ ಒಂದೇಯಾಗಿರುವುದು ಭಾರತದ ಶಿಷ್ಟ ಹಾಗೂ ಗ್ರಾಮ ದೇವತೆಗಳ ಪರಿಕಲ್ಪನೆಯಲ್ಲಿ ಸತ್ಯವಾದುದು. ಅರ್ಚನೆಯ ಅಥವಾ ಪೂಜಾ ವಿಧಾನದಲ್ಲಿ ಗ್ರಾಮದೇವತೆಗಳು ಸಂಸ್ಕೃತದ ಬದಲಾಗಿ ದೇಶಿಯ ಭಾಷೆಗಳನ್ನು ಬಳಸಬಹುದು, ಶಿಷ್ಟದೇವತೆಗಳು ರಕ್ತದ ಬದಲಿಗೆ ರಕ್ತದ ರೀತಿಯಲ್ಲಿರುವ ಬಣ್ಣವನ್ನು ಬಳಸಬಹುದು. ಈ ಬಳಸುವ ವಿಧಾನಗಳಲ್ಲಿ ಮೂಲ ರೂಪ ಮಾತ್ರ ಬದಲಾವಣೆಯಾಗಿದೆ, ಭಾವನೆಯೂ ಹಾಗೆಯೆ ಉಳಿದಿರುವುದು.

ಒಂದು ಕಾಲಕ್ಕೆ ಕೆಲವೇ ಕೆಲವು ದೇವತೆಗಳು ಕಂಡು ಬಂದರೆ, ಕಾಲಾನಂತರದಲ್ಲಿ ನೂರಾರು ದೇವತೆಗಳಾಗಿ ಬೆಳೆದಿವೆ. ವೈದಿಕ ಪರಂಪರೆಯಲ್ಲಿ ಕಂಡುಬರಾದ ದೇವತೆಗಳು ಮಹಾಕಾವ್ಯಗಳ ಕಾಲಕ್ಕೆ ಬಂದ ತಕ್ಷಣ ಕಾಣುತ್ತಾರೆ. ವೇದಗಳ ಕಾಲದಲ್ಲಿ ಅಥವಾ ಆರ್ಯರು ಎಷ್ಟೇ ಪ್ರಭಲವಾಗಿ ಇಲ್ಲಿ ಸಂಸ್ಕೃತಿಯನ್ನು ವಿರೋಧಿಸಿದರೂ ಇದು ಇಲ್ಲಿಂದ ದೂರ ಹೋಗಲಿಕ್ಕಾಗಲಿಲ್ಲ. ಸ್ಥಳೀಯ ಪರಂಪರೆಯತ್ತ ಮುಖ ಮಾಡಲೇ ಬೇಕಾದ ಒತ್ತಡಗಳಿಗೆ ಅದು ಒಳಗಾಯಿತು. ಗ್ರಾಮದೇವತೆಗಳೆಂದು ಕರೆಯ ಬಹುದಾದ ಅನೇಕ ದೇವತೆಗಳು ವೈದೀಕರಣಗೊಂಡಿವೆ. ಸರ್ವಾಂಭಾ, ಫಲಗೌರಿ, ರೇಣುಕಾ, ಮಾರಿಕಾ, ಭವಾನಿ, ಮೂಕಾಂಬಾ, ತೃಣಾಂಬಾ, ಸಂಗಮೇಶಿ, ಏಕಮಾತಾ, ಭೇರುಂಡಾ, ಬಗಲಾ, ಶುಕಹಸ್ತಾ, ಮಯೂರಿ, ವಾರುಣೆ, ಸಿಂಹವಾಹಿನಿ, ತುಲಸಿ, ಶುಷ್ಕಲೀ, ವ್ಯಾಘ್ರೇಶಿ, ಚಾಲಿನೀ ಶೂರ್ಪಿಕಾ, ಅಂಜನಾ, ಅರ್ಗಲಾಂಬಿಕಾ, ಮಹಾಮುಂಡಾ, ಓಷದೇಶ್ವರಿ, ಸ್ಫೋಟಾಂಬಾ, ಮುಕ್ತಾಂಬಾ, ನಗ್ನಿಕಾ, ತಾರಾ, ಗಂಗಾ, ಲಕ್ಷ್ಮಿ, ಪುಲ್ಲಲೋಚನಾ, ನಾಗರೂಪಾ, ಜಟಿ, ಮಸೂರಿಕಾಹಿಫೇನಾ, ಪೂತನಾ, ಲಂಕಿಣಿ, ರಾಕ್ಷಸಿ,[೪] ಮುಂತಾದ ಅನೇಕ ದೇವತೆಗಳು ಜನಪದ ಮೂಲದಿಂದ ಹೋಗಿವೆ.

ಹಿಂದೂ ಪರಂಪರೆ ಎಂದು ಕರೆಯುವ ಭಾರತದ ಧಾರ್ಮಿಕ ಚರಿತ್ರೆಯಲ್ಲಿ ತೊಂಬತ್ತು ಭಾಗ ಶಕ್ತಿದೇವತೆಗಳು ವೈದಿಕೇತರ ದೇವತೆಗಳೇ ಆಗಿವೆ. ಸರಸ್ವತಿಯನ್ನು ವೈದಿಕ ದೇವತೆಯೆಂದು ಕರೆಯಬಹುದಾದರೂ ಅದೂ ಕೂಡಾ ಎಲ್ಲ ಮೂಲದಲ್ಲಿ ಸ್ಥಳೀಯ ಅಂಶಗಳನ್ನು ಮೈಗೂಡಿಸಿಕೊಂಡಿದೆ ಎಂದು ನಂಬಲಾಗಿದೆ. ಅಲ್ಲದೆ ಅಂದಿನ ಕಾಲದಲ್ಲಿ ಸರಸ್ವತಿ ನದಿತೀರದಲ್ಲಿ ವಾಸಿಸುತ್ತಿದ್ದ ಜನಾಂಗದ ಫಲವಂತಿಕೆಯ ದೇವತೆಯಾಗಿದ್ದವಳು. ಆರ್ಯರು ಅವಳನ್ನು ತಮ್ಮ ಕಾಲಕ್ಕಾಗಲೇ ತೆಗೆದು ಕೊಂಡಿದ್ದರೆಂದು ನಂಬಲಾಗಿದೆ. ಇನ್ನು ಪಾರ್ವತಿ ಹಾಗೂ ಲಕ್ಷ್ಮಿಯರ ಸಂಪ್ರದಾಯಗಳು ಈ ನೆಲದ ವಿವಿಧ ಬುಡಕಟ್ಟುಗಳಿಂದ ಅರಳಿಬಂದು ಆರಾಧನಾ ಪಂಥಗಳಾಗಿವೆ. ಲಕ್ಷ್ಮಿ ರೈತರ, ಕೃಷಿಕರ ಆರಾಧ್ಯದೇವತೆಯಾಗಿದ್ದವಳು. ಪಾರ್ವತಿ, ಅಥವಾ ದುರ್ಗಾ ಪರಂಪರೆಯ ಬಗೆಗೆ ಈ ನೆಲವನ್ನು ಬಿಟ್ಟು ಮಾತನಾಡುವುದಂತೂ ಸಾಧ್ಯವೆ ಇಲ್ಲ. ಅಷ್ಟೊಂದು ವ್ಯಾಪಕವಾಗಿ ಹಾಗೂ ಸ್ಥಿರವಾದ

ನೆಲೆಯನ್ನು ಹೊಂದಿದ್ದಾಳೆ.

ಮಾತೃಪ್ರಧಾನವಾದ ವ್ಯವಸ್ಥೆಯನ್ನು ಇನ್ನೂ ಆಳವಾಗಿ ತನ್ನಲ್ಲಿ ಇಟ್ಟುಕೊಂಡಿರುವ ದಕ್ಷಿಣ ಭಾರತವು ಗ್ರಾಮದೇವತೆಗಳ, ಅಥವಾ ಶಕ್ತಿ ಆರಾಧನೆಯ ಕೇಂದ್ರವಾಗಿ ಕಂಡುಬರುತ್ತದೆ. ಅದು ಕಾಳಮ್ಮ, ಕಾಳಿಯಮ್ಮ, ದುರುಗಮ್ಮ, ಮಾರಮ್ಮ, ಮಾರಿಯಮ್ಮ, ಮುತ್ಯಾಲಮ್ಮ, ದ್ರೌಪದಿಯಮ್ಮ, ಭಗವತಿ, ಅಂಗಾಲಮ್ಮ, ಅಂಕಮ್ಮ, ಚೌಡಮ್ಮ, ಮಹಾಲಕ್ಷ್ಮಿ, ಶಷ್ಠಿ, ಮಾನಸ, ಜೇಷ್ಠಾ ಅಥವಾ ಕೊಟವಿ, ಕೊಜ್ಜವಿ ಪ್ರಾಚೀನ ಸಂಪ್ರದಾಯಗಳಾಗಿರಬಹುದು, ಇವೆಲ್ಲವೂ ಶಕ್ತಿ ಆರಾಧನೆಯ ರೂಪಗಳಾಗಿವೆ. ಗ್ರಾಮದೇವತೆಯೆಂದು, ಶಿಷ್ಟದೇವತೆಯೆಂದು ನಾವು ಇಂದು ಕರೆದರೂ ಅದು ಮೂಲ ರೂಪದಲ್ಲಿ ಮಾತೃ ದೇವತೆಯ ರೂಪವೇ ಆಗಿದೆ. ಆದ್ದರಿಂದ ಮಾತೃದೇವತೆಯರನ್ನು ವರ್ಗೀಕರಿಸಿಕೊಳ್ಳುವಾಗ ಈ ಚಲನೆಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಸೂಕ್ತವೆಂದು ತೋರುತ್ತದೆ. ಪುರುಷದೇವತೆಗಳು ವೈದಿಕ ಪರಂಪರೆಯಲ್ಲಿ ಎಲ್ಲವೂ ಪುರುಷಾಕಾರದಲ್ಲಿಯೇ ನೋಡಲಾಗಿದೆ. ಚಂದ್ರನಿರಬಹುದು, ಸೂರ್ಯನಿರಬಹುದು, ಗಾಳಿಯಿರಬಹುದು, ಎಲ್ಲವೂ ಪುರುಷತ್ವವೇ ಆಗಿದೆ. ನೀರನ್ನು ಮಾತ್ರ ಪುರುಷಾಕಾರದಲ್ಲಿ ನೋಡಲಾಗಿಲ್ಲ. ಆದರೆ, ಪುರುಷನ ಅಧೀನತ್ವದಲ್ಲಿಯೇ ನೋಡಲಾಗಿದೆ. ಆರ್ಯರು ಪುರುಷ ಪ್ರಾಧಾನ್ಯವಾದ ಸಮಾಜವನ್ನು ಹೊಂದಿದ್ದರಿಂದ ಅಲ್ಲಿ ಕಾಣುವ ದೇವತೆಗಳು ಪುರುಷ ದೇವತೆಗಳೆ ಆಗಿವೆ. ಶಿವನ ಪರಂಪರೆಯನ್ನು ಹೊರತು ಪಡಿಸಿದರೆ ಉಳಿದ ದೇವತೆಗಳು ಅಲ್ಲಿಯೆ ಬೆಳೆದ ದೇವತೆಗಳಾಗಿವೆ. ಸ್ತ್ರೀ ದೇವತೆಗಳ ರೀತಿಯಲ್ಲಿ ಮೇಲ್ಮುಖ ಚಲನೆಯನ್ನು ಅಲ್ಲಿ ಕಾಣುವುದಿಲ್ಲ.

ಈ ಹಿನ್ನೆಲೆಯಲ್ಲಿಯೇ ಮಾತೃದೇವತೆಯ ವರ್ಗೀಕರಣವನ್ನು ಗಮನಿಸಬಹುದು. ಜಗತ್ತಿನ ಬಹುತೇಕ ದೇವತೆಗಳು ರೋಗರುಜಿನಗಳಿಂದ ರಕ್ಷಣೆ, ಮಾನವ ಪ್ರಾಣಿಗಳಿಗೆ ರಕ್ಷಣೆ, ಫಲವಂತಿಕೆಯನ್ನು ಅಥವಾ ಸಮೃದ್ಧಿಯನ್ನು ವೃದ್ಧಿಸುವ ದೇವತೆಗಳು ಹಾಗೂ ಪಿತೃದೇವತೆಗಳು ಆತ್ಮಗಳ ಆರಾಧನೆಯ ಫಲವಾಗಿ ದೇವತೆಗಳು ಹುಟ್ಟಿಕೊಂಡಿರುವಂತಹವುಗಳಾಗಿವೆ. ಭಾರತದ ಬಹುಪಾಲು ದೇವತೆಗಳು ಈ ನೆಲೆಯಲ್ಲಿಯೇ ಹುಟ್ಟಿಕೊಂಡಿರುವಂತವು. ಡಾ. ಸಿದ್ಧಲಿಂಗಯ್ಯನವರು ಗ್ರಾಮದೇವತೆಗಳು ಪುಸ್ತಕದಲ್ಲಿ ವಿಸ್ತೃತವಾಗಿ ಜಗತ್ತಿನ ದೇವತೆಗಳ ವರ್ಗೀಕರಿಸಿಕೊಳ್ಳುವುದನ್ನು ಕೊಟ್ಟಿದ್ದಾರೆ.[೫] ಸಂಕ್ಷಿಪ್ತವಾಗಿ ನೋಡುವಾ.

ಆಫ್ರಿಕಾದ ಚಿರಿಕಾಹುವಾಸ್ ಜನಾಂಗದಲ್ಲಿ ದೇವತೆಗಳ ಕಲ್ಪನೆಯು ಮೂರು ರೀತಿಯಲ್ಲಿದೆ, ದೇವರುಗಳು, ಶಕ್ತಿಗಳು ಹಾಗೂ ಪ್ರೇತಗಳು ಎಂದು ವಿಂಗಡಿಸಿಕೊಳ್ಳುತ್ತಾರೆ. ಅದೇ ರೀತಿ ಬಗಾಂಡಾ ಸಂಸ್ಕೃತಿಯಲ್ಲಿ ದೇವತೆಗಳ ವಿಭಜನೆಯು ಸಹ ಚಿರಿಕಾಹುವಾ ಜನಾಂಗದಲ್ಲಿ ಕಂಡುಬರುವ ರೀತಿಯಲ್ಲಿರದೆ, ಸ್ವಲ್ಪ ಭಿನ್ನರೀತಿಯಲ್ಲಿ ನೋಡಲಾಗಿದೆ. ಕುಲದೇವತೆಗಳು, ರಾಜರ ಪ್ರೇತಗಳು, ಹಾಗೂ ರಾಷ್ಟ್ರೀಯ ದೇವತೆಗಳೆಂದು ವಿಭಜಿಸಿಕೊಳ್ಳುತ್ತಾರೆ.

ಈ ಎರಡು ವಿಧದಲ್ಲಿ ಪ್ರೇತಗಳು ಪ್ರಮುಖವಾಗಿವೆ. ಬಗಾಂಡ ಸಂಸ್ಕೃತಿಯಲ್ಲಿ ರಾಷ್ಟ್ರೀಯ ದೇವತೆಗಳು ಪ್ರಮುಖ ಪಾತ್ರವಹಿಸಿವೆ ಎನ್ನಲಾಗಿದೆ.ಇಲ್ಲಿಯೂ ಸಹ ರೋಗಗಳಿಂದ ರಕ್ಷಣೆಯನ್ನು ಕೊಡುವಂತಹ ಕಾಂಪುಲಿ ದೇವತೆ (ಪ್ಲೇಗ ದೇವತೆ) ಕಂಡುಬಂದರೆ, ನಿಸರ್ಗದಿಂದ, ಪ್ರಾಣಿಗಳಿಂದ ಅಥವಾ ತನ್ನವರೆ ಆದ ಜನಾಂಗದವರಿಂದ ರಕ್ಷಣೆಯನ್ನು ಕೊಡುವ ದೇವತೆಗಳು ಇಲ್ಲಿ ಕಂಡುಬರುತ್ತಾರೆ. ಕಿಬುಕು ನೆಂಡೆ ದೇವತೆಗಳು ಯುದ್ಧ ದೇವತೆಗಳಾದರೆ, ದುಂಗು ಎಂಬ ದೇವತೆ ಬೇಟೆಯ ದೇವತೆಯಾಗಿದೆ. ನಬುಜಾನ ಮಕ್ಕಳನ್ನು ಹೆರುವ ಹೆಂಗಳೆಯರ ರಕ್ಷಣೆಯನ್ನು ಮಾಡುವ ದೇವತೆಯಾಗಿದ್ದಾಳೆ. ಕಟಕ ದೇವತೆಯು ಸಮೃದ್ಧಿಯ ಅಥವಾ ಭೂದೇವಿಯಾಗಿದ್ದಾಳೆ.

ಚಾರ್ಲ್ಸ್ ವಿನಿಕ್ ಅವರು ಒಟ್ಟು ದೇವತೆಗಳ ಸಮೂಹವನ್ನು ಆರು ಪ್ರಮುಖ ವಿಭಾಗಗಳನ್ನಾಗಿ ಮಾಡಿಕೊಂಡು ಅವುಗಳಿಗೆ ಮತ್ತೆ ಉಪ ವಿಭಾಗಗಳನ್ನಾಗಿ ಮಾಡಿಕೊಳ್ಳುತ್ತಾರೆ. ಇಲ್ಲಿ ಬರುವ ದೇವತೆಗಳ ಗುಂಪುಗಳು ಶಿಷ್ಟಪರಿಕಲ್ಪನೆಯ ಪುರುಷದೇವತೆಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡಿರುವ ಹಾಗೆ ಕಂಡುಬರುತ್ತದೆ. ಅವರ ಪ್ರಕಾರ ೧.ಪ್ರಕೃತಿಯ ದೇವತೆಗಳು, ೨. ಸಮೃದ್ಧಿಯ ದೇವತೆಗಳು, ೩. ಚಟುವಟಿಕೆಯ ದೇವತೆಗಳು ಅಥವಾ ಯುದ್ಧ ದೇವತೆಗಳು, ೪. ಅವತಾರಗಳನ್ನು ಹೊಂದುವ ದೇವತೆಗಳು, ೫. ಉನ್ನತ ದೇವತೆಗಳು, ಹಾಗೂ ೬. ಜಗದಾಧಿಕಾರ ದೇವತೆಗಳೆಂದು ವರ್ಗಿಕರಿಸಿಕೊಳ್ಳುತ್ತಾರೆ. ಇಲ್ಲಿ ಮೊದಲ ಮೂರು ದೇವತೆಗಳು ಮಾತೃ ಆರಾಧನೆಯಲ್ಲಿ ಕಂಡುಬರುವ ಪ್ರಮುಖ ದೇವತೆಗಳು. ಅವುಗಳ ಮೂಲ ಸ್ವರೂಪವೇ ಈ ಅಂಶಗಳನ್ನು ಒಳಗೊಂಡಿರುವಂತಹವು. ನಂತರದ ಮೂರು ವರ್ಗದ ದೇವತೆಗಳು ಪುರುಷದೇವತೆಗಳಿಗೆ ಹೋಲಿಸಬಹುದಾದ ಗುಣಗಳನ್ನು ಹೊಂದಿರುವ ಹಾಗೆ ಇದೆ. ಇದನ್ನು ನಾವು ಹಿಂದು ಪರಂಪರೆಯಲ್ಲಿ ಕಂಡುಬರುವ ಪುರುಷದೇವತೆಗಳಿಗೆ ಹೋಲಿಸಬಹುದು. ಇಲ್ಲಿ ಪುರುಷ ದೇವತೆಗಳು ಅವತಾರವನ್ನು ಎತ್ತಿಬರುವ, ಜಗದ ಸಮಸ್ತವನ್ನು ನಿಯಂತ್ರಿಸುವ ಹಾಗೂ ಉನ್ನತವಾದ ಸ್ಥಾನವನ್ನು ಹೊಂದಿರುವ ದೇವತೆಗಳಾಗಿವೆ. ಆದರೆ ಇಲ್ಲಿ ಸ್ತ್ರೀ ದೇವತೆಗಳು ಈ ರೀತಿಯ ಅವತಾರವನ್ನು ಎತ್ತುವ ಸಮಸ್ತವನ್ನು ನಿಯಂತ್ರಿಸುವ ಶಕ್ತಿಯನ್ನು ಹೊಂದಿರುವುದಿಲ್ಲ. ಆದರೆ ಅದು ಪುರುಷನ ಮಾಯಾ ರೂಪವಾಗಿ ಕಂಡುಬರುತ್ತಾಳೆ. ಆದರೆ, ಶಕ್ತಿ ಅಥವಾ ವಾಮಾಚಾರದಲ್ಲಿ ಇದಕ್ಕೆ ರೀಯಾಯತಿ ಸಿಗಬಹುದು. ವೇದಗಳಲ್ಲಿ ಕಂಡುಬರುವ ದೇವತೆಗಳನ್ನು ಆಕಾಶ ದೇವತೆ ಅಥವಾ ಅಂತರಿಕ್ಷ ಸ್ಥಾನ ದೇವತೆಗಳೆಂದು, (Inermediator or Aerial) ಭೂಮಿದೇವತೆಗಳೆಂದು,(Terrestrial) ಹಾಗೂ ದ್ಯೌಸ್ಥಾನ ದೇವತೆಗಳೆಂದು (Celestial) ವಿಂಗಡಿಸಿಕೊಳ್ಳಲಾಗಿದೆ. ವೇದಕಾಲೀನ ದೇವತೆಗಳು ಪ್ರಧಾನವಾಗಿ ಕಂಡುಬರುವುದು ಅವುಗಳು ನೆಲದ ದೇವತೆಗಳಾಗಿರದೆ, ಆಕಾಶದೇವತೆಗಳಾಗಿ. ಈ ನೆಲವನ್ನು ಮುಟ್ಟದೆ ಸಮಸ್ತವನ್ನು ದಯಪಾಲಿಸುವ ದೇವತೆಗಳಾಗಿ ಕಾಣುತ್ತಾರೆ. ಚಾರ್ಲ್ಸ್ ವಿನಿಕ್ ಅವರ ಕೊನೆಯ ಮೂರು ವರ್ಗದ ದೇವತೆಗಳಾಗಿ ಕಾಣುತ್ತಾರೆ. ಶಕ್ತಿ ದೇವತೆಗಳಿಗಿರುವ ಈ ನೆಲದ ಸಂಬಂಧ ಇಲ್ಲಿ ಇಲ್ಲವೇ ಇಲ್ಲ.

ಅದೇನಿದ್ದರೂ ಅಂತರಿಕ್ಷದ ನೆಲೆಯಲ್ಲಿಯೆ ಕಾಣುತ್ತಾರೆ. ಇಂದ್ರ ಎನ್ನುವ ವ್ಯಕ್ತಿತ್ವವೇ ಸ್ವರ್ಗದ ಅಧಿದೇವತೆಯಾಗಿದ್ದಾನೆ.

ಗ್ರಾಮದೇವತೆಗಳನ್ನು ಕನ್ನಡ ವಿದ್ವಾಂಸರು ಅನೇಕ ವಿಧದಲ್ಲಿ ವಿಂಗಡಿಸಿಕೊಂಡಿದ್ದಾರೆ. ೧೯೬೮ರಲ್ಲಿ ಕನ್ನಡ ಜಾನಪದ ಗೀತೆಗಳು ಮಹಾಪ್ರಬಂಧವನ್ನು ರಚಿಸಿದ ಡಾ. ಗದ್ದಿಮಠ ಅವರು ಒಟ್ಟಾರೆಯಾಗಿ ದೇವತೆಗಳನ್ನು ಆರು ವಿಭಾಗಗಳಾಗಿ ವಿಂಗಡಿಸಿಕೊಳ್ಳುತ್ತಾರೆ. ಮೊದಲ ಪ್ರಾಕಾರದಲ್ಲಿ ಶಿಷ್ಟವಾದ ದೇವರು ಎನ್ನುವುದಕ್ಕಿಂತ ಒಟ್ಟಾರೆಯಾಗಿ ಕಂಡುಬರುವ ಗಂಡು ದೇವರುಗಳನ್ನು ಉಲ್ಲೇಖಿಸುತ್ತಾರೆ. ಇಲ್ಲಿ ಶಿವನ ಹಲವಾರು ರೂಪಗಳಾದ ವಿರೂಪಾಕ್ಷ, ಮಲ್ಲಿಕಾರ್ಜುನ, ಕಲ್ಲೇಶ್ವರ, ಸಂಗಮೇಶ್ವರ, ಮಹಾಕೂಟೇಶ್ವರ, ವೀರಭದ್ರ, ಹಾಗೂ ವಿಷ್ಣುವಿನ ರೂಪಗಳು, ಆಂಜನೆಯ ಮುಂತಾದ ದೇವರುಗಳನ್ನು ಹೇಳುತ್ತಾರೆ. ಎರಡನೆಯ ವಿಭಾಗದಲ್ಲಿ ದೇವತೆಗಳನ್ನು ಉಲ್ಲೇಖಿಸುತ್ತಾರೆ. ಇದರಲ್ಲಿ ಬನಶಂಕರಿ, ಎಲ್ಲಮ್ಮ, ದುರುಗಮ್ಮ, ದ್ಯಾಮವ್ವ, ರೇಣುಕಾ ಮುಂತಾದ ದೇವತೆಗಳನ್ನು ಇಲ್ಲಿ ಕಾಣಬಹುದು. ಸಂಪ್ರದಾಯದ ದೇವತೆಯೆಂದು ವಿಭಾಗಿಸಿಕೊಂಡು ಇದರಲ್ಲಿ ಅನಿಯತಕಾಲಿಕವಾಗಿ ಪೂಜಿಸುವ ದೇವರುಗಳನ್ನು ತಿಳಿಸುತ್ತಾರೆ. ಮಳೆಯನ್ನು ತರಿಸುವ ಸಲುವಾಗಿ ಆಚರಿಸುವ ಮಳೆದೇವತೆಗಳು,ಸಮೃದ್ಧಿಯನ್ನು ಕೊಡುವ ಭೂಮಿತಾಯಿಯ ಪೂಜೆ, ಬನದಮ್ಮ, ಕಾಮನ ಹಬ್ಬಗಳನ್ನು ಈ ವಿಭಾಗದಲ್ಲಿ ಸೂಚಿಸುತ್ತಾರೆ. ನಾಲ್ಕನೆಯ ವಿಭಾಗದಲ್ಲಿ ಶಿವಶರಣರಾದ ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಅಲ್ಲಮ,ಮುಂತಾದ ಶಿವಶರಣರನ್ನು ಹೇಳುತ್ತಾರೆ. ಐದನೆಯ ವಿಭಾಗದಲ್ಲಿ ಸಾಧು ಸತ್ಪುರುಷರನ್ನು, ಆರನೆಯ ವಿಭಾಗದಲ್ಲಿ ಭೂತಗಳೆಂದು ವಿಭಾಗಿಸಿಕೊಂಡು ಇಲ್ಲಿ ಭೂತಗಳು, ರಾಕ್ಷಸರು, ಕೊಳ್ಳಿದೆವ್ವಗಳು, ಮಕ್ಕಳಿಗೆ, ದನಕರುಗಳಿಗೆ ತೊಂದರೆಯನ್ನುಂಟು ಮಾಡುವ ದೆವ್ವಗಳನ್ನಾಗಿ ವಿಭಾಗಿಸಿಕೊಂಡಿದ್ದಾರೆ. ಗದ್ದಿಮಠ ಅವರ ವಿಭಾಗವು ಯಾವ ರೀತಿಯೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಇಲ್ಲಿ ಅವರಿಗೆ ಗ್ರಾಮಗಳಲ್ಲಿ ಕಂಡುಬರುವ ಎಲ್ಲಾ ದೇವತೆಗಳು ಅವರಿಗೆ ಗ್ರಾಮದೇವತೆಗಳಾಗಿ ಕಂಡಿವೆ. ಅದು ಶಿವಶರಣರಾಗಿರಬಹುದು, ಸಾಧು ಸತ್ಪುರುಷರಾಗಿರಬಹುದು ಅವರೆಲ್ಲರೂ ಅವರಿಗೆ ದೇವತೆಗಳಾಗಿ ಕಂಡಿದ್ದಾರೆ. ಅದು ಅಂದಿನ ಮಿತಿಯಲ್ಲಿಯೂ ಅವರು ಮಾಡಿಕೊಂಡಿರುವ ವರ್ಗೀಕರಣವಾಗಿದೆ. [೬]

ನಂತರದಲ್ಲಿ ಗೌರೀಶ ಕಾಯ್ಕಿಣಿಯವರು ದೇವತೆಗಳನ್ನು ಗ್ರಾಮಗಳಲ್ಲಿ ಆರಾಧಿಸುವ ಜನರ ಪ್ರಭಾವ ಹಾಗೂ ಆರ್ಥಿಕ ಪ್ರಾಬಲ್ಯವನ್ನು ಅನುಲಕ್ಷಿಸಿ ಗ್ರಾಮದೇವತೆಗಳನ್ನು ಎರಡು ವಿಭಾಗವಾಗಿ ಮಾಡಿಕೊಂಡಿದ್ದಾರೆ. ಹಿರಿಯ ದೇವತೆಗಳೆಂದು ಹಾಗೂ ಕಿರಿಯ ದೇವತೆಗಳೆಂದು. ಹಿರಿಯ ದೇವತೆಗಳು ಎಲ್ಲಾ ಗ್ರಾಮಗಳಲ್ಲಿ ಬಹುಸಂಖ್ಯಾತರು ಆರಾಧಿಸುವ ಮತ್ತು ಹೆಚ್ಚು ಉತ್ತಮವಾದ ಆರ್ಥಿಕ (ಚಾಜ) ಸ್ಥಿತಿಯನ್ನು ಹೊಂದಿರುವ ದೇವತೆಗಳಾದ, ಮಾರಮ್ಮ, ದುರುಗಮ್ಮ, ದ್ಯಾಮವ್ವ, ಮುಂತಾದ ದೇವತೆಗಳು ಇಲ್ಲಿದ್ದಾರೆ. ಕಿರಿಯ

ದೇವತೆಗಳಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವ ಹಾಗೂ ಕಡಿಮೆ ಜನರು ಅಥವಾ ಸಮುದಾಯಗಳು ಆರಾಧಿಸುವ ದೇವತೆಗಳಾದ ಕಾಳಮ್ಮ, ಚೌಡಮ್ಮ, ಮುಂತಾದ ದೇವತೆಗಳನ್ನು ಇಲ್ಲಿ ಕಿರಿಯದೇವತೆಗಳೆಂದು ಕರೆದಿದ್ದಾರೆ. ಇವರ ವಿಂಗಡಣೆಯು ನಿಂತಿರುವುದು ಆರ್ಥಿಕವಾದ ಸ್ಥಿತಿಯ ಮೇಲೆ. ಹೆಚ್ಚು ಆದಾಯ ತರುವ ಹಾಗೂ ಹೆಚ್ಚು ಜನರಿರುವ ಸಮುದಾಯಗಳು ಪೂಜಿಸುವ ದೇವತೆಗಳನ್ನು ಹಿರಿಯ ದೇವತೆಗಳೆಂದು ಕರೆದರೂ ಸಹ ಕೆಲವು ದೇವತೆಗಳು ಇಲ್ಲಿಯೂ ದುರ್ಬಲವಾಗಿರುವುದು ಕಂಡುಬರುತ್ತದೆ. ಅಲ್ಲದೆ ಸಣ್ಣ ಸಮುದಾಯಗಳು ಪೂಜಿಸುವ ಕೆಲವು ದೇವತೆಗಳು ಆರ್ಥಿಕವಾಗಿ ಹೆಚ್ಚಿನ ಗಳಿಕೆಯನ್ನು ಹೊಂದಿರಬಹುದು. ಆರ್ಥಿಕ ಸ್ಥಿತಿಯನ್ನು ನೋಡಿ ಗ್ರಾಮದೇವತೆಗಳನ್ನು ವಿಂಗಡಿಸಿಕೊಳ್ಳುವುದು ಅಷ್ಟು ಸೂಕ್ತವಲ್ಲವೆಂದು ತೋರುತ್ತದೆ.[೭]

ಡಾ. ಎಚ್.ವಿ. ನಾಗೇಶ ಅವರು ದೇವತೆಗಳನ್ನು ಸಾಮಾಜಿಕ ನೆಲೆಯಲ್ಲಿ ನಿರ್ವಚಿಸಿಕೊಳ್ಳುತ್ತಾರೆ.[೮] ಪ್ರದೇಶ, ಭಾಷೆ, ಸಮುದಾಯಗಳ ನೆಲೆಯು ಅವರ ವಿಂಗಡಣೆಯ ಮೂಲವಾಗಿದೆ. ದೇವತೆಗಳನ್ನು ಐದು ವಿಭಾಗಗಳನ್ನಾಗಿ ಮಾಡಿಕೊಂಡಿದ್ದಾರೆ. ಅದರಲ್ಲಿ ಸ್ಥಳೀಯ ಮೂಲವೆಂದು ಮೊದಲ ವಿಭಾಗದಲ್ಲಿ ಗ್ರಾಮದೇವತೆಗಳ ಮೂಲ ಇರುವುದೆ ಸ್ಥಳೀಯತೆಯಲ್ಲಿ. ಅವರ ಹುಟ್ಟು ಗ್ರಾಮದಲ್ಲಿಯೇ ಆಗಿದ್ದು, ಅವರು ಆ ಸ್ಥಳದಿಂದಲೇ ತಮ್ಮ ಅಧಿಕಾರವನ್ನು ನಡೆಸುತ್ತಾರೆ. ಅವುಗಳಿಗೆ ವಿಶ್ವದ ಸೃಷ್ಟಿ ಕ್ರಿಯೆಯನ್ನು ಮಾಡುವುದಿಲ್ಲ. ಆ ಸ್ಥಳದಲ್ಲಿಯೆ ಅವರು ಹುಟ್ಟಿ ಆ ಸ್ಥಳದಲ್ಲಿಯೆ ಅವರ ಯಜಮಾನ್ಯ ನಡೆಯುತ್ತದೆ. ಮತ್ತೊಂದು ಊರಿನಲ್ಲಿ ಮತ್ತೊಂದು ದೇವತೆ ಕಾರ್ಯನಿರ್ವಹಿಸುತ್ತದೆ. ಎರಡನೆಯ ವರ್ಗವೆಂದರೆ, ಮಾನವ ಮೂಲದ್ದು, ಇಲ್ಲಿ ಗ್ರಾಮದೇವತೆಗಳು ಹುಟ್ಟಿಕೊಳ್ಳುವುದು ಮಾನವನಿಂದ. ಅಂದರೆ ಸತಿಯಾದ ಹೆಣ್ಣು, ಅಥವಾ ತನ್ನ ಒಳ್ಳೆಯ ಗುಣದಿಂದ ಮೆಚ್ಚಿಸಿ ಜನಪ್ರಿಯವಾಗಿ ಸತ್ತ ನಂತರದಲ್ಲಿ ಆರಾಧಿಸಲ್ಪಡುವವಳಾಗಿರಬಹುದು. ಅವರು ಕೂಡಾ ಕಾಲಾನಂತರದಲ್ಲಿ ಗ್ರಾಮದೇವತೆಗಳಾಗಿ ಮಾರ್ಪಾಡಾಗುತ್ತಾರೆ. ಮೂರನೆಯ ವಿಭಾಗದಲ್ಲಿ ಕೆಳಜಾತಿಯವರ ದೇವತೆಗಳೆಂದು ವಿಂಗಡಿಸಿಕೊಳ್ಳುತ್ತಾರೆ. ಅವರ ಪ್ರಕಾರ ಗ್ರಾಮದೇವತೆಗಳಾದ ಮಾರಮ್ಮ, ದುರುಗಮ್ಮ, ಎಲ್ಲಮ್ಮ,ಮುಂತಾದ ದೇವತೆಗಳು ಬಹು ಸಂಖ್ಯಾತರಾದ ಕೆಳಜಾತಿಯವರಿಂದ ಆರಾಧಿಸಲ್ಪಡುತ್ತವೆ. ಆ ಕಾರಣಕ್ಕಾಗಿ ಈ ದೇವತೆಗಳು ಕೆಳಜಾತಿಯವರ ದೇವತೆಗಳೆಂದು ಹೇಳುತ್ತಾರೆ. ಸಾಮಾನ್ಯವಾಗಿ ದಕ್ಷಿಣ ಭಾರತದಲ್ಲಿ, ಒಟ್ಟಾರೆಯಾಗಿ ಭಾರತದಲ್ಲಿ ಗ್ರಾಮದೇವತೆಗಳು ಆರಾಧಿಸಲ್ಪಡುವುದು ಕೆಳಜಾತಿಯವರಿಂದಲೇ. ಯಾಕೆಂದರೆ, ಕೃಷಿ ಎಲ್ಲಿ ಪ್ರಧಾನವಾಗಿರುತ್ತದೆಯೋ ಅಲ್ಲಿ ಗ್ರಾಮದೇವತೆಗಳು ಹೆಚ್ಚು. ಆ ಕಾರಣದಿಂದ ಇದು ನಿಜಕೂಡ. ನಾಲ್ಕನೆಯ ವಿಭಾಗದಲ್ಲಿ ಮೇಲ್ವರ್ಗದ ಪೂಜಾರಿಗಳು ಪೂಜಿಸುವ ದೇವತೆಗಳು ಎಂದು ವರ್ಗೀಕರಣಮಾಡಿಕೊಳ್ಳುತ್ತಾರೆ. ಅಂದರೆ ಮಾಂಸಾಹಾರಿಯಾದ ದೇವತೆಯಾಗಿದ್ದರೂ ಸಹ ಅವುಗಳ ಆರಾಧಕರು ಬ್ರಾಹ್ಮಣರಾಗಿರುವದು. ಗ್ರಾಮದೇವತೆಗಳ ಆರಾಧಕರು ಸಾಮಾನ್ಯವಾಗಿ ಕಾಣುವಂತೆ ಕೆಳಜಾತಿಯವರು ಪೂಜಾರಿಗಳಾಗಿರುವುದು ರೂಢಿ ಅಥವಾ ಅದು ಸಾಮಾನ್ಯ. ಆದರೆ ಬ್ರಾಹ್ಮಣರು ಗ್ರಾಮದೇವತೆಗಳ

ಪೂಜಾರಿಗಳಾಗುವುದು ಆರ್ಥಿಕ ಕಾರಣಕ್ಕಾಗಿಯೇ ವಿನಹ ಮತ್ತೇನೂ ಇಲ್ಲ. ಇದು ಎಲ್ಲಾ ಕಡೆ ಕಂಡುಬರುವ ಸತ್ಯ. ಎಲ್ಲಿ ಆದಾಯ ಹೆಚ್ಚು ಬರುತ್ತದೆಯೋ ಅಂತ ಕಡೆ ಬ್ರಾಹ್ಮಣರು ಪೂಜಾರಿಗಳಾಗಿದ್ದಾರೆ. ಅಥವಾ ಈ ದೇವತೆಗಳನ್ನು ವೈದೀಕರಣಗೊಳಿಸುವ ಮೂಲಕ ತಮ್ಮ ಒಳಗು ಮಾಡಿಕೊಳ್ಳುತ್ತಾರೆ. ಇಂತಹ ಕೆಲಸ ಪುರಿಯ ಜಗನ್ನಾಥನಲ್ಲಿಯೂ ನಡೆದಿದೆ. ಮೈಸೂರಿನ ಚಾಮುಂಡಿಯಲ್ಲಿಯೂ ನಡೆದಿದೆ. ಕೊನೆಯ ವಿಭಾಗದಲ್ಲಿ ಸ್ಥಳೀಯ ಭಾಷೆಯ ದೇವತೆಗಳು ಎಂದು ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಗ್ರಾಮದೇವತೆಗಳು ತಮ್ಮ ಬಯಕೆ ಅಥವಾ ಭಕ್ತನ ಕಷ್ಟಗಳನ್ನು ಪರಿಹರಿಸುವುದು ಹಿಂದೆ ನೋಡಿದಂತೆ ಅವು ಇನ್ನೊಬ್ಬನ ದೇಹದಲ್ಲಿ ಆವಾಹನೆಗೊಂಡು ಅಥವಾ ಮೈದುಂಬಿ, ಮೈಮೇಲೆ ಬಂದು. ಇದು ಶಿಷ್ಟದೇವತೆಗಳು ಮಾಡಲಾರದ ಮಹತ್ವದ ಕೆಲಸ. ತನ್ನಭಕ್ತರೊಡನೆ ಸಂಭಾಷಣೆ ಮಾಡಿ ಅವರ ಕಷ್ಟಗಳನ್ನು ಪರಿಹರಿಸಬಲ್ಲವು. ಈ ರೀತಿಯ ಸಂಭಾಷಣೆಯು ತಾನು ಮಾತನಾಡುವ ಭಾಷೆಯಲ್ಲಿಯೆ ನೆಡೆಯುತ್ತದೆ.

ನಾಗೇಶ ಅವರ ವಿಂಗಡಣೆಯಲ್ಲಿ ಪುನರಾವರ್ತನೆಯ ದೋಷ ಕಾಣಿಸಿಕೊಳ್ಳುವ ಹಾಗೆ ಕಂಡುಬರುತ್ತದೆ. ಸ್ಥಳೀಯ ಮೂಲ ಎಂದಾಗಲೂ ಕೆಳಜಾತಿಯವರ ದೇವತೆಗಳು ಎಂದಾಗಲೂ, ಅಥವಾ ಸ್ಥಳೀಯ ಭಾಷೆಯನ್ನಾಡುವ ದೇವತೆಗಳೆಂದಾಗಲೂ ಒಂದೇಯಾಗಿರುವ ಹಾಗೆ ಕಾಣುತ್ತದೆ. ಅವುಗಳಲ್ಲಿ ಹೆಚ್ಚು ಅಂತರಕಾಣುವುದಿಲ್ಲ. ಅಲ್ಲದೆ ಬ್ರಾಹ್ಮಣರು ಪೂಜಿಸುವ ದೇವತೆಗಳು ಎಂದು ಹೇಳಲಿಕ್ಕಾಗದು ಎಂದು ತೋರುತ್ತದೆ. ಅದು ಆರ್ಥಿಕವಾದ ಕಾರಣಕ್ಕಾಗಿ ಹಾಗೂ ಸಾಮಾಜಿಕ ಬದಲಾವಣೆಗಳು ಪ್ರವೇಶಪಡೆಯುವುದರಿಂದ ಈ ರೀತಿಯ ಬದಲಾವಣೆಗಳಿಗೆ ಕಾರಣವಾಗಿರಬಹುದು. ಆದರೆ ಆಚರಣೆಯ ವಿಧಾನದಲ್ಲಿ ತಮ್ಮ ಮೂಲರೂಪವನ್ನೆ ಇಟ್ಟುಕೊಂಡಿರುತ್ತವೆ.

ಡಾ. ಹಿ.ಚಿ.ಬೋರಲಿಂಗಯ್ಯನವರು ಗ್ರಾಮದೇವತೆಗಳನ್ನು[೯] ಎರಡು ರೀತಿಯಲ್ಲಿ ವಿಂಗಡಿಸಿಕೊಳ್ಳುತ್ತಾರೆ. ದೇವಗಣ ಹಾಗೂ ರಾಕ್ಷಸಗಣವೆಂದು. ದೇವಗಣದಲ್ಲಿ ದೇವತೆಗಳು ಗ್ರಾಮದ ಪರಿಧಿಯಲ್ಲಿ ಬರುವುವಾದರೂ ಇಲ್ಲಿ ಮೇಲ್ವರ್ಗದವರು ಆರಾಧಿಸುವ ದೇವತೆಗಳಾಗಿರುವವು. ಅಲ್ಲದೆ ದೇವಗಣದಲ್ಲಿ ಇರುವ ದೇವತೆಗಳು ಸ್ವಲ್ಪಮಟ್ಟಿಗೆ ಸೌಮ್ಯವಾದ ಸ್ವಭಾವವನ್ನು ಹೊಂದಿರುವ ರೀತಿಯಲ್ಲಿ ನೋಡಲಾಗಿದೆ. ರಾಕ್ಷಸ ದೇವತೆಗಳು ಕೆಳವರ್ಗದವರು ಆರಾಧಿಸುವ ದೇವತೆಗಳಾಗಿದ್ದಾರೆ. ಸ್ವಭಾವದಲ್ಲಿ ಕ್ರೂರವಾಗಿ ಕಾಣುವ ಈ ದೇವತೆಗಳಾದ ಮಾರಮ್ಮ, ದುರುಗಮ್ಮ, ದ್ಯಾವಮ್ಮ, ಎಲ್ಲಮ್ಮ, ಮುಂತಾದ ದೇವತೆಗಳನ್ನು ಈ ವರ್ಗಕ್ಕೆ ಸೇರಿಸುತ್ತಾರೆ. ಡಾ. ಬೋರಲಿಂಗಯ್ಯನವರ ವರ್ಗಿಕರಣವು ಸಾಮಾಜಿಕವಾದ ನೆಲೆಯಲ್ಲಿ ನೋಡದೆ ಆರ್ಥಿಕ ನೆಲೆಯಲ್ಲಿ ನೋಡಲಾಗಿರುವ ಹಾಗೆ ಕಾಣುತ್ತದೆ. ಯಾಕೆಂದರೆ ದೇವಗಣದಲ್ಲಿ ಬರುವ ದೇವತೆಗಳು ಕೂಡಾ ರಾಕ್ಷಸ ಗಣದ ದೇವತೆಗಳೇ ಆಗಿದ್ದು, ಅವುಗಳನ್ನು ಪೂಜಿಸುವ ಜನರು ಸಾಮಾನ್ಯವಾಗಿ ಮೇಲ್ಜಾತಿಯವರಾಗಿರುವುದಿಲ್ಲ.ಬದಲಾಗಿ

ಮೇಲ್ವರ್ಗದವರಾಗಿರುತ್ತಾರೆ. ರಾಕ್ಷಸ ಗಣದ ದೇವತೆಗಳು ದೇವಗಣದಲ್ಲಿ ಬರುತ್ತವೆ. ಗ್ರಾಮದೇವತೆಗಳು ಒಂದೇ ಕಾಲಕ್ಕೆ ಕ್ರೂರವಾಗಬಲ್ಲವು, ಅಂತೆಯೆ ಸೌಮ್ಯವಾಗಬಲ್ಲವು. ಅವುಗಳನ್ನು ತೃಪ್ತಿ ಪಡಿಸಿದಾಗ ಸೌಮ್ಯತೆಯನ್ನು ಹೊಂದಿ ಒಳಿತನ್ನು ತರಬಲ್ಲವು. ಅವುಗಳಿಗೆ ತೃಪ್ತಿಪಡಿಸುವಲ್ಲಿ ವ್ಯತ್ಯಯವಾದಾಗ ಅವು ಕ್ರೂರವಾಗಿ ವರ್ತಿಸಬಲ್ಲವು. ಆದ್ದರಿಂದ ಇಲ್ಲಿ ದೇವಗಣ ಹಾಗೂ ರಾಕ್ಷಸ ಗಣವೆಂದು ವಿಂಗಡಿಸಿಕೊಂಡಾಗಲೂ ಅವರ ಮನಸ್ಸಿನಲ್ಲಿ ವರ್ಗದ ಕಲ್ಪನೆ ಇರುವುದರಿಂದ, ದೇವತೆಗಳನ್ನು ದೇವಗಣದ ರೀತಿಯಲ್ಲಿ ಕಾಣಲಾಗಿದೆ.

ಡಾ. ಚೆನ್ನಣ್ಣ ವಾಲೀಕಾರ ಅವರು ಎರಡು ಮುಖ್ಯವಾದ ಪ್ರಕಾರಗಳನ್ನು ಮಾಡಿಕೊಳ್ಳುತ್ತಾರೆ.[೧೦] ಜನಪದ ಪೌರಾಣಿಕ ಗ್ರಾಮದೇವತೆಗಳು (Folk Mythological Goddesses) ಹಾಗೂ (ಪಂಡಿತ ಪರಿಕಲ್ಪನೆಯ) ವ್ಯವಸ್ಥಿತ ಪೌರಾಣಿಕ ಗ್ರಾಮದೇವತೆ (Organised Mythological Goddesses)ಗಳೆಂದು ವಿಂಗಡಿಸುವುದು ಅವರ ಅಭಿಪ್ರಾಯದಲ್ಲಿ ಹೆಚ್ಚು ಸಮರ್ಪಕವಾಗಿ ತೋರಿದೆ. ಡಾ.ಹಿಚಿಬೋ ಅವರ ಅಭಿಪ್ರಾಯದ ರೀತಿಯಲ್ಲಿಯೆ ಕಂಡುಬಂದರೂ ಅದು ವಿಸ್ತೃತವಾಗಿರುವ ಹಾಗೆ ಕಾಣುತ್ತದೆ. ಜನಪದ ಪರಿಕಲ್ಪನೆಯ ದೇವತೆಗಳು ನಿರಕ್ಷರಿಗಳ, ಮುಗ್ಧರ ಉಪಾಸನಾ ದೇವತೆಗಳಾಗಿವೆ. ಇವರಿಗೆ ಯಾವುದೇ ರೀತಿಯ ಪುರಾಣಪರಿಕಲ್ಪನೆಗಳಿಲ್ಲ. ಜನಪದರು ಅದರಲ್ಲೂ ಕೆಳವರ್ಗದವರು ರೂಢಿಸಿಕೊಂಡುಬಂದ ಆಚರಣೆಗಳು, ಸೇವಾ ವಿಧಾನಗಳು ಇವರ ಪ್ರಾಚೀನ ಸ್ವರೂಪವನ್ನು ತಿಳಿಸುತ್ತವೆ. ಅವರಿಗೆ ಗ್ರಾಂಥಿಕವಾದ ಯಾವುದೇ ಪುರಾಣಗಳಿರದೆ ತೋಂಡಿಯಲ್ಲಿ ಪುರಾಣಗಳು ಸೃಷ್ಟಿಯಾಗಿವೆ. ಆ ಕಾರಣದಿಂದ ಇವರನ್ನು ಜನಪದ ಪರಿಕಲ್ಪನೆಯ ಗ್ರಾಮದೇವತೆಗಳೆಂದು ಕರೆಯಬಹುದು ಎಂಬುದು ಅವರ ಅಭಿಪ್ರಾಯವಾಗಿದೆ. ಈ ವರ್ಗದಲ್ಲಿ ದ್ಯಾವಮ್ಮ, ಮರಗಮ್ಮ, ಪಾಲಕಮ್ಮ, ಪೋಚಮ್ಮ, ಮುಂತಾದ ದೇವತೆಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತಾರೆ. ಮುಂದಿನ ವರ್ಗದಲ್ಲಿ ಶಕ್ತಿದೇವತೆಗಳಾದ ಎಲ್ಲಮ್ಮ, ಕಾಳಮ್ಮ, ಚೌಡಮ್ಮ, ಮೊದಲಾದ ದೇವತೆಗಳಿಗೆ ಪಂಡಿತರು ಕಥೆಕಟ್ಟಿ, ಪುರಾಣಗಳನ್ನು ಸೃಷ್ಟಿಸಿ ಗ್ರಾಮಗಳಲ್ಲಿ ಪ್ರತಿಷ್ಠಾಪನೆಯನ್ನು ಮಾಡಿದ್ದರಿಂದ ಅವುಗಳಿಗೆ ಪಂಡಿತ ಪರಿಕಲ್ಪನೆಯ ದೇವತೆಗಳೆಂದು ಗುರುತಿಸುತ್ತಾರೆ.[೧೧]

ಡಾ. ಮಂಜುನಾಥ ಬೇವಿನಕಟ್ಟಿಯವರು ಗ್ರಾಮದೇವತೆಗಳನ್ನು ಮೂರು ರೀತಿಯಲ್ಲಿ ವಿಭಜಿಸಿಕೊಳ್ಳುತ್ತಾರೆ. ಮೊದಲನೆಯ ವರ್ಗದಲ್ಲಿ ಪಿತೃದೇವತೆಗಳಿದ್ದು, ಇವು ಸಾಮಾನ್ಯವಾಗಿ ಎಲ್ಲರಿಂದಲೂ ಆರಾಧಿಸಲ್ಪಡುವುದಿಲ್ಲ. ಬದಲಾಗಿ ಕುಟುಂಬ ಅಥವಾ ಒಂದು ಜಾತಿಯವರು ಆರಾಧಿಸುವ ದೇವತೆಗಳಾಗಿದ್ದಾರೆ. ಅಜ್ಞಾನ ಹಾಗೂ ಮಾಂತ್ರಿಕಾಚರಣೆಗಳ ಮೂಲದಿಂದ ಉಳಿದು ಬಂದಿರುವ ಹಾಗೂ ಬಲಿಯಿಂದ ಸಂತೃಪ್ತಿಗೊಳ್ಳುವ ಕಷ್ಟ ಅನಿಷ್ಟಗಳ್ನು ತಂದೊಡ್ಡುವ ದೇವತೆಗಳು. ಹಾಗೂ ಊರನ್ನು ರಕ್ಷಿಸಲು ಹೋಗಿ ಜೀವತೆತ್ತ ವೀರರ ಪತ್ನಿಯರು ಕೊಂಡಕ್ಕೆ ಹೋದ ಮಹಾಸತಿಯರು ಎಂದು ವರ್ಗೀಕರಿಸಿಕೊಳ್ಳುತ್ತಾರೆ.[೧೨]

ಡಾ. ಸಿದ್ಧಲಿಂಗಯ್ಯನವರು ಗ್ರಾಮದೇವತೆಗಳನ್ನು ಮೂರು ರೀತಿಯಲ್ಲಿ ವರ್ಗೀಕರಿಸಿಕೊಂಡಿದ್ದಾರೆ. ಅವರ ಪ್ರಕಾರ ಆಹಾರ, ಜನಾಂಗ, ಭಾಷೆ, ಕಾಲ, ಹಾಗೂ ಲಿಂಗ, ಹೀಗೆ ಅಸಂಖ್ಯಾತ ವರ್ಗಗಳನ್ನು ಸೃಷ್ಟಿಸಿಕೊಳ್ಳಲು ಅವಕಾಶಗಳುಂಟು. ಆದರೆ ಅಧ್ಯಯನದ ದೃಷ್ಟಿಯಿಂದ ಈ ರೀತಿಯ ವರ್ಗೀಕರಣವು ತುಂಬಾ ಸರಳೀಕರಣಗೊಳಿಸಿಕೊಂಡಂತಾಗುತ್ತದೆ. ಆಕಾರಣದಿಂದ ಗ್ರಾಮದೇವತೆಗಳ ಅಧ್ಯಯನವನ್ನು ಮಾಡಬೇಕಾದರೆ ಪ್ರಾದೇಶಿಕ ವೈಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ವಿಭಜಿಸಿಕೊಂಡರೆ ಹೆಚ್ಚು ಸೂಕ್ತವೆಂದು ಅವರ ವಾದವಾಗಿದೆ. ಈ ಹಿನ್ನೆಲೆಯಲ್ಲಿಯೇ ಅವರು ಗ್ರಾಮದೇವತೆಗಳನ್ನು ಮೂರು ಭಾಗ ಮಾಡಿಕೊಂಡಿದ್ದಾರೆ. ಏಕಪುರಾಣ, ಏಕ ಆಚರಣೆಯಿದ್ದು ಕರ್ನಾಟಕದ ಹಾಗೂ ಭಾರತದ ವಿವಿಧ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ದೇವತೆಗಳನ್ನು ರಾಷ್ಟ್ರೀಯ ದೇವತೆಗಳೆಂದು, ಭಿನ್ನ ಆಚರಣೆ ಹಾಗೂ ಪುರಾಣಗಳನ್ನು ಹೊಂದಿದ್ದು, ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಮಾತ್ರ ಕಂಡುಬರುವ ದೇವತೆಗಳನ್ನು ಪ್ರಾಂತೀಯ ದೇವತೆಗಳೆಂದು ಮತ್ತೂ ಕೆಲವೇ ತಾಲ್ಲೂಕು, ಗ್ರಾಮಗಳಲ್ಲಿ ಮಾತ್ರ ಆಚರಣೆಯಲ್ಲಿರುವ ವಿವಿಧ ದೇವತೆಗಳನ್ನು ಸ್ಥಳೀಯ ದೇವತೆಗಳೆಂದು ವರ್ಗೀಕರಿಸಿಕೊಂಡಿದ್ದಾರೆ.[೧೩]

ಮಾತೃದೇವತಾ ಆರಾಧನೆಯ ಪರಿಕಲ್ಪನೆಯನ್ನು ನೋಡಿದರೆ, ಅದು ಭೂಮಿಯ ಅಥವಾ ನಿಸರ್ಗದ ಆರಾಧನೆಯ ರೂಪವಾಗಿ ಕಾಣುತ್ತದೆ. ಅದಕ್ಕೆ ಹಲವಾರು ಪುರಾವೆಗಳನ್ನು ಒದಗಿಸಬಹುದು. ನಿಸರ್ಗವನ್ನು ಮಾನವಾಕೃತಿಯ ರೂಪದಲ್ಲಿ ಆರಾಧಿಸಲಾಗುತ್ತದೆ. ಅಲ್ಲದೆ ಸ್ತ್ರೀಗೂ ಹಾಗೂ ಭೂಮಿಗೂ ಸಂಬಂಧವನ್ನು ಕಲ್ಪಿಸಿಕೊಂಡು ಈ ಆರಾಧನೆ ಉಗಮವಾಗಿದೆ. ಮಾನವನ ದಿನನಿತ್ಯದ ಆಹಾರ ಸಂಗ್ರಹಣೆ ಹಾಗೂ ರಕ್ಷಣೆಯು ಪ್ರಮುಖವಾಗಿದ್ದ ಕಾಲದ ನಂತರ ಕೃಷಿಗೆ ಪರಿವರ್ತಿತವಾಯಿತು. ನಂತರ ಈ ಕಲ್ಪನೆ ಪುರುಷಾಕಾರಕ್ಕೆ ಅಥವಾ 'ವೀರತ್ವ'ದ ಕಲ್ಪನೆಗೆ ವರ್ಗಾಂತರಗೊಂಡಿರಬೇಕು. "ಒಂದು ಸಮಾಜವನ್ನು ರಕ್ಷಿಸುವ ದೇವತೆ ವೀರನಂತೇ ಚಿತ್ರಿತವಾಗಿರುತ್ತದೆ. ಆಯಾ ದೇವತೆ ಸಂಹರಿಸಿದ ವೈರಿಯ ಕಲ್ಪನೆ ಅಂಥ ಜನಪದ ದೇವತೆಗಳ ಪುರಾಣಗಳಲ್ಲಿರುತ್ತದೆ. ಇಂಥ ದೇವತೆ ಹಾಗೂ ವೈರಿ ಎರಡೂ ಕಲ್ಪನೆಗಳೂ ಆಯಾ ಸಮಾಜದ ಹಾಗೂ ನಿಸರ್ಗದ ನಡುವಿನ ಸಂಬಂಧಕ್ಕೆ ಸೇರಿರಬಹುದು. ಇಲ್ಲಿ ಆಯಾ ಸಮಾಜ ಹಾಗೂ ಅದು ಸಂಘರ್ಷಿಸಿದ ಇತರೆ ಸಮಾಜದ ಸಂಬಂಧಿಸಿಯೂ ಇಂಥ ಕಲ್ಪನೆ ಇರಬಹುದು. ಒಟ್ಟಿನಲ್ಲಿ ಅಂಥ ವೀರದೇವತೆ ತನ್ನ ಸಮಾಜವನ್ನು ನಿಸರ್ಗ ಹಾಗೂ ವೈರಿಗಳಿಂದ ರಕ್ಷಿಸುತ್ತದೆ."[೧೪] ದೇವತೆಗಳ ಉಗಮವು ನಿಸರ್ಗದಿಂದ ಉಗಮವಾದರೂ ಅವುಗಳ ಮೂಲದಲ್ಲಿ ಮಾನವನ ರಕ್ಷಣೆಯೇ ಪ್ರಧಾನವಾಗಿ ಇರುವುದು. ಅದು ನಿಸರ್ಗದಿಂದ ಆಗಿರಬಹುದು, ರೋಗರುಜಿನಗಳಿಂದ ಅಥವಾ ಪ್ರಾಣಿ ಯಾ ಮನುಷ್ಯರಿಂದಲೂ ಆಗಿರಬಹುದು. ವಾಲೀಕಾರ ಅವರು ಹೇಳುವಂತೆ, "ಒಂದು ಗ್ರಾಮದೇವತೆಗಿರುವ ಎಲ್ಲಾ ಆಚಾರ ವಿಚಾರ ಪೂಜಾ ವಿಧಿವಿಧಾನಗಳನ್ನು ಇನ್ನೊಂದು ದೇವತೆಗೆ ಸೇರಿಸಿ, ಪೂಜಿಸುವುದರಿಂದ ಎಲ್ಲಾ ದೇವತೆಗಳ ಶಕ್ತಿ, ಸ್ವರೂಪ ಒಂದೇ ಪ್ರಮಾಣವೆಂದು

ಗೊತ್ತಾಗುತ್ತದೆ. ಆರೋಗ್ಯ ಭಾಗ್ಯವನ್ನುಂಟುಮಾಡುವುದು, ರೋಗರುಜಿನ, ಸಾವು ನೋವುಗಳಿಂದುಳಿಸುವುದು" [೧೫] ಈ ಗ್ರಾಮದೇವತೆಗಳ ಕರ್ತವ್ಯವಾಗಿರುತ್ತದೆ.

ದೇವತೆಗಳ ಉಡುಪು, ಆಹಾರ, ಭಾಷೆ ಎಲ್ಲಾ ಆ ಪ್ರದೇಶದ್ದೇ ಆಗಿರುತ್ತದೆ, ದೇವತೆಯ ದೈಹಿಕ ಸ್ವರೂಪ ಕೂಡಾ ಆಯಾ ಜನರನ್ನೇ ಹೋಲುತ್ತದೆ. ಆದ್ದರಿಂದ ಪ್ರಾದೇಶಿಕತೆಯನ್ನು [೧೬] ಇಟ್ಟುಕೊಂಡಾಗಲೂ ಸಹ ಅವುಗಳ ಮೂಲ ರೂಪ ಒಂದೇ ಆಗಿರುವಾಗ ಪ್ರಾದೇಶಿಕ ವೈರುಧ್ಯತೆ ಕಾಣುವುದಿಲ್ಲ. ಬದಲಾಗಿ ಆಚರಣೆಯ ವಿಧಿವಿಧಾನಗಳು ಬದಲಾಗಿವೆ. ದಕ್ಷಿಣದಲ್ಲಿ ಕಂಡುಬರುವ ನಾಗಾರಾಧನೆಯು ಉತ್ತರ ಭಾರತದಲ್ಲಿಯೂ ಕಾಣುತ್ತದೆ. ಬಂಗಾಳದ ಮಾನಸಾ ದೇವಿಯ ಆರಾಧನೆಯ ಮೂಲವು ದಕ್ಷಿಣ ಭಾರತದ ಮಂಚಮ್ಮ ನಾಗಾರಾಧನೆಯ ಸ್ವರೂಪವೇ ಆಗಿದೆ. ಅಂದರೆ ಬಂಗಾಳದ ನಾಗಾರಾಧನೆಯ ಮೂಲ ಕರ್ನಾಟಕವೇ ಆಗಿದೆ. ಅಂತೆಯೇ ಮಂಡಲಗಳ ರೂಪದಲ್ಲಿ ಆರಾಧಿಸುವ ಕ್ರಿಯೆ ಭಾರತದ ಎಲ್ಲಾ ಪ್ರದೇಶಗಳಲ್ಲಿ ಕಂಡುಬರುತ್ತದೆ. ಆದರೆ ಅದನ್ನು ಆಚರಿಸುವ ವಿಧಾನಗಳಲ್ಲಿ ಬದಲಾವಣೆಯನ್ನು ಕಾಣುತ್ತೇವೆ. ಆದೇ ರೀತಿ ಕರ್ನಾಟಕದಲ್ಲಿ ಕಂಡುಬರುವ ದ್ಯಾಮವ್ವ, ಮಾರಿಕಾಂಬಾ, ಮಾರಮ್ಮ, ಮುಂತಾದ ದೇವತೆಗಳ ಕುರಿತು ಹೇಳುವ ಐತಿಹ್ಯಗಳು ಇದಕ್ಕೆ ಇನ್ನೊಂದು ಪ್ರಮುಖವಾದ ಉದಾಹರಣೆಯಾಗಿ ಕೊಡಬಹುದು. ಹೊಲೆಯರ ತರುಣ ತಾನು ಬ್ರಾಹ್ಮಣನೆಂದು ಹೇಳಿಕೊಂಡು ಮೇಲ್ವರ್ಗದ ಹೆಣ್ಣನ್ನು ಮದುವೆಯಾಗಿ ನಂತರದಲ್ಲಿ ಆತ ಹೊಲೆಯನೆಂದು ಅರಿವಿಗೆ ಬಂದು ಶಾಪಕೊಟ್ಟು ತಾನು ಸಾಯುತ್ತಾಳೆ. ಇದು ಸಾಮಾನ್ಯವಾಗಿ ದಕ್ಷಿಣ ಭಾರತದಲ್ಲಿ ಕಂಡು ಬರುವ ಐತಿಹ್ಯವಾಗಿದೆ. ಆದರೆ ಇದೇ ಉತ್ತರ ಭಾರತದಲ್ಲಿ ಈ ದೇವಿಯ ಆಚರಣೆಯ ಸಂದರ್ಭದಲ್ಲಿ ವರ್ಣಸಂಘರ್ಷಯೆನ್ನಬಹುದಾದ ಕಥೆ ಕಂಡುಬರುವುದಿಲ್ಲ. ಆದರೆ ಆಚರಿಸುವ ಆಚರಣೆಗಳು ಮಾತ್ರ ಒಂದೇಯಾಗಿವೆ. ಮಹಾರಾಷ್ಟ್ರದ ನಾಸಿಕ್ ಅಮರಾವತಿ, ವಾಣಿಯ ಸಪ್ತಸುಂಗಿ, ನೇಪಾಳ, ಮುಂತಾದ ಕಡೆಗಳಲ್ಲಿ ಆಚರಿಸುವ ಆಚರಣೆಗಳಲ್ಲಿ ಹೊಲೆಯರೇ ಪ್ರಮುಖವಾಗಿರುತ್ತಾರೆ. ದಕ್ಷಿಣ ಭಾರತದ ಜನರು ಆರ್ಯರನ್ನು ವಿರೋಧಿಸುತ್ತಿರುವ ಹಾಗೆ ಕಂಡುಬರುತ್ತದೆ. ಇದನ್ನು ಈ ಕತೆಯ ಮೂಲಕ ವ್ಯಕ್ತಪಡಿಸುವ ಹಾಗೆ ಕಾಣುತ್ತದೆ. ಉತ್ತರದಲ್ಲಿ ಅವರೊಡನೆ ಇರಬೇಕಾದ ಬುಡಕಟ್ಟುಗಳು ಹೊಂದಾಣಿಕೆಯನ್ನು ಮಾಡಿಕೊಳ್ಳಲೇ ಬೇಕಾಯಿತು. ಆ ಕಾರಣಕ್ಕಾಗಿ ಮೂಲ ಆಚರಣೆ ಕಂಡುಬರುತ್ತದೆ. ಆದರೆ ದಕ್ಷಿಣದಲ್ಲಿ ಕಂಡುಬರುವ ಸಂಘರ್ಷ ಇಲ್ಲಿ ಕಾಣಸಿಗದು. ಆಚರಣೆಯ ರೂಪ ಒಂದೇ ಆಗಿರುವುದನ್ನು ನೋಡಬಹುದಾಗಿದೆ.

ಮಾತೃದೇವತೆಯ ವರ್ಗೀಕರಣವನ್ನು ಅವುಗಳ ಮೂಲ ಸ್ವರೂಪ ಹಾಗೂ ಅವುಗಳ ಆಚರಣೆಯ ವಿಧಾನಗಳನ್ನು ಇಟ್ಟುಕೊಂಡರೆ ಹೆಚ್ಚು ಸೂಕ್ತವೆಂದು ತೋರುತ್ತದೆ. ಈ ಹಿನ್ನೆಲೆಯಲ್ಲಿ ಮಾತೃದೇವತೆಯರನ್ನು ಎರಡು ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು. ಗ್ರಾಮದೇವತೆಗಳೆಂದು ಹಾಗೂ ನಾಡದೇವತೆಗಳೆಂದು

ವಿಂಗಡಿಸಿಕೊಂಡು ಅವುಗಳಲ್ಲಿ ಗ್ರಾಮದೇವತೆಗಳನ್ನು ಮೂರು ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು.

೧. ಫಲವಂತಿಕೆ ಅಥವಾ ಸಮೃದ್ಧಿಯ ದೇವತೆಗಳೆಂದು,

೨. ರಕ್ಷಣೆಯ ದೇವತೆಗಳೆಂದು ಹಾಗೂ

೩. ಮಾನುಷ ರೂಪದ ದೇವತೆಗಳೆಂದು ವಿಂಗಡಿಸಿಕೊಳ್ಳಬಹುದು.

ನಾಡದೇವತೆಗಳಲ್ಲಿ ಮತ್ತೆ ಎರಡು ವಿಭಾಗ ಮಾಡಿಕೊಂಡು

೧. ವೈದಿಕ ದೇವತೆಗಳೆಂದು

೨. ಶಿಷ್ಟೀಕರಣಗೊಂಡ ದೇವತೆಗಳೆಂದು ವಿಂಗಡಿಸಿಕೊಳ್ಳಬಹುದು.

ಸೃಷ್ಟಿಸುವ, ಪೊರೆಯುವ ಹಾಗೂ ರಕ್ಷಿಸುವ ಹೊಣೆ ದೇವತೆಗಳದ್ದಾಗಿದೆ. ಅದು ಮಾತೃ ಆರಾಧನೆಯಲ್ಲಿ ಸ್ಪಷ್ಟವಾಗಿದೆ. "ನಿಸರ್ಗದಲ್ಲಿ ಎರಡು ರೀತಿಯ ಚೈತನ್ಯಗಳಿವೆ.ಒಂದು ಪೊರೆಯುವ ಚೈತನ್ಯವಾದರೆ, ಇನ್ನೊಂದು ನಾಶ ಮಾಡುವ ಚೈತನ್ಯ. ಮನುಷ್ಯನ ಹುಟ್ಟಿಗೆ ಕಾರಣವಾಗುವ ನಿಸರ್ಗವೇ ಅವನ ಸಾವಿಗೂ ಕಾರಣವಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಆ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಅಥವಾ ನಿಯಂತ್ರಿಸುವ ಪ್ರಕ್ರಿಯೆಯಲ್ಲಿ, ಆ ಶಕ್ತಿಗೆ ಅವನೊಂದು ರೂಪಕೊಟ್ಟು ತನ್ನ ಕಲ್ಪನೆಯನ್ನು ವಿಸ್ತರಿಸಿದ... . . ಅವರು ದ್ರಾವಿಡರೋ, ಆರ್ಯರೋ ಅಥವಾ ಮಂಘೋಲಿಯನ್ನರೋ ಎಲ್ಲರ ಕಲ್ಪನೆಯ ಕಿಡಿ ಒಡೆದದ್ದು, ಹೀಗೆಯೆ. ಬುಡಕಟ್ಟು ಪರಿಸರದಲ್ಲಿ ದೈವ ಅಥವಾ ದೆವ್ವಗಳು ರೂಪು ತಾಳಿದ್ದು ಹೀಗೆ. ಬರಬರುತ್ತಾ ದೈವಗಳು ದೆವ್ವ ಭೂತಗಳ ನಿಯಂತ್ರ ರೂಪದ ಆಚರಣೆಗಳನ್ನು ಪಡೆಯುತ್ತಾ ಬಂದವು. ಇಂದು ನಮ್ಮ ಮುಂದಿರುವ ಅನೇಕ ಆರಾಧನೆ ಮತ್ತು ಆಚರಣೆಯ ಹಿನ್ನೆಲೆಯನ್ನು ಈ ರೀತಿಯಲ್ಲಿ ನಾವು ಅರ್ಥೈಸಬೇಕಾಗುತ್ತದೆ "[೧೫] ಎನ್ನುವ ಹಿಚಿಬೋ ಅವರ ಮಾತುಗಳು ದೇವತೆಗಳ ವರ್ಗೀಕರಣಕ್ಕೂ ಅನ್ವಯವಾಗುವಂತಹವು. ಅಲ್ಲದೆ ಒಂದು "ನಿರ್ದಿಷ್ಟ ದೇವತೆಯನ್ನು ಗ್ರಾಮವೊಂದರ ಜನರಷ್ಟೇ ಆರಾಧಿಸುತ್ತಾರೆಂಬ ಕಾರಣದಿಂದ ಅದನ್ನು 'ಸ್ಥಳೀಯ ದೇವತ'ಯೆಂದು ಕರೆಯುತ್ತೇವೆ. ಒಂದು ಕುಲದವರಷ್ಟೇ ಆರಾಧಿಸುತ್ತಾರೆಂದ ಕಾರಣಕ್ಕೆ 'ಕುಲದೇವತೆ' ಎಂದು ಕರೆಯುತ್ತೇವೆ. ಅದೇ ರೀತಿ ಒಂದು ಮನೆಯವರಷ್ಟೇ ಆರಾಧಿಸುತ್ತಾರೆಂಬ ಕಾರಣದಿಂದ 'ಮನೆ ದೇವತೆ'ಯೆನ್ನುತ್ತೇವೆ. ಆದರೆ ಆರಾಧಕ ಜನಪದರ ದೃಷ್ಟಿಯ ಹಿನ್ನೆಲೆಯಿಂದ ನೋಡಿದಾಗ ಸ್ಥಳೀಯ ದೇವತೆಯಾಗಿರಲಿ, ಮನೆದೇವತೆಯಾಗಿರಲಿ, ಕುಲದೇವತೆಯಾಗಿರಲಿ, ಅದು ಇಡೀ ಜಗತ್ತನ್ನು ಸೃಷ್ಟಿಮಾಡಿದ ದೇವತೆಯಾಗಿರುತ್ತದೆ, ಲೋಕದ ಚರಾಚರಗಳೆಲ್ಲವನ್ನೂ ಕಾಯುವ ದೇವತೆಯಾಗಿರುತ್ತದೆ.[೧೬]

ಗ್ರಾಮದೇವತೆಗಳು ಏಕಕಾಲದಲ್ಲಿ ಅವು ಕ್ರೂರದೇವತೆಗಳೂ ಹೌದು, ಸೌಮ್ಯದೇವತೆಗಳು ಹೌದು.ತಮಗೆ ತೃಪ್ತಿಯನ್ನು ಮಾಡದಿದ್ದರೆ ಅವುಗಳು ಕ್ರೂರವಾಗಬಹುದು. ಅಥವಾ ಅವುಗಳಿಗೆ ಸೂಕ್ತವಾಗಿ ಸೇವೆ ಮಾಡಿದರೆ ಸಂತೃಪ್ತಿಹೊಂದಿ ನಮ್ಮ ನೆರವಿಗೆ ಬರಬಹುದು. ಇದು ಗ್ರಾಮದೇವತೆಗಳಿಗೂ ಶಿಷ್ಟದೇವತೆಗಳೆಂದು ಕರೆಯಲಾಗುವ ದೇವತೆಗಳಲ್ಲಿಯೂ ನಿಜ. ಆದ್ದರಿಂದ ಗ್ರಾಮದೇವತೆಗಳೂ ಕ್ರೂರ, ಶಿಷ್ಟದೇವತೆಗಳು ಸೌಮ್ಯವೆಂದೂ ಹೇಳುವುದು ಕಷ್ಟ. ಫಲೋತ್ಪತ್ತಿ ಮಾಡುವುದರ ಜೊತೆಗೆ ಫಲರಕ್ಷಣೆಯನ್ನು ಮಾಡುವುದು ಎಲ್ಲಾ ದೇವತೆಗಳ ಕರ್ತವ್ಯವಾಗಿದೆ. ಗ್ರಾಮದೇವತೆಗಳ ಮೂಲ ಸ್ವರೂಪವೇ ಫಲೋತ್ಪತ್ತಿಯನ್ನು ಕೊಡುವುದು. ಸಮೃದ್ಧವಾದ ಮಳೆಯನ್ನು ತಂದು ಆ ಮೂಲಕ ಬೆಳೆಯನ್ನು ಉಂಟುಮಾಡುವುದು, ಊರಿಗೆ ಬಂದೊದಗುವ ಆಪತ್ತುಗಳನ್ನು ನಿವಾರಿಸುವುದು, ಸಾಮೂಹಿಕ ಮಟ್ಟದ್ದಾದರೆ ವೈಯಕ್ತಿಕ ಮಟ್ಟದಲ್ಲಿ ಮಕ್ಕಳು ಇಲ್ಲದವರಿಗೆ ಮಕ್ಕಳನ್ನು ಕೊಡುವುದು, ದನಕರುಗಳು ಹೆಚ್ಚಾಗುವಂತೆ ಮಾಡುವುದು ಇವೆಲ್ಲಾ ಗ್ರಾಮದೇವತೆಗಳ ಮೂಲ ಕರ್ತವ್ಯವಾಗಿವೆ. ಅಂತಹ ಸಮೃದ್ಧಿಯನ್ನು ದ್ಯಾಮವ್ವ, ಮರುಗಮ್ಮ, ಎಲ್ಲಮ್ಮ, ಮಾರಮ್ಮ, ಕಾಳಮ್ಮ,ಚೌಡಮ್ಮ, ಮುಂತಾದ ದೇವತೆಗಳು ಮಾಡುತ್ತಾರೆ.

ರಕ್ಷಣೆಯ ದೇವತೆಗಳು ಗ್ರಾಮದೇವತೆಯರಲ್ಲಿ ಎದ್ದುಕಾಣುವ ದೇವತೆಗಳೆನ್ನಬಹುದು. ಪ್ರತಿಯೊಂದು ದೇವತೆಯೂ ಸಹ ರಕ್ಷಣೆಯ ದೇವತೆಯಾಗಿವೆ ಎನ್ನಬಹುದು. ಸಸ್ಯಸಂಪತ್ತು ,ಬೆಳೆದು ನಿಂತ ಪೈರು,ದನಕರುಗಳು, ವೈರಿಗಳಿಂದ ರಕ್ಷಣೆ, ಮಕ್ಕಳ ರಕ್ಷಕರೆಂದರೆ ಗ್ರಾಮದೇವತೆಗಳು. ಅವರು ರೋಗದ ಪರಂಪರೆಯನ್ನು ತಂದೊಡ್ಡಬಹುದು. ಆ ದೇವತೆಗಳನ್ನು ತೃಪ್ತಿಪಡಿಸುವ ಮೂಲಕ ರೋಗರುಜಿನಗಳು ಬರದಂತೆ ತಡೆಯುವುದಾಗಿದೆ. ಕಟಿ ಅಂಕಮ್ಮ ಸ್ಮಶಾನವನ್ನು ವಾಸಸ್ಥಾನಮಾಡಿಕೊಂಡು, ಸತ್ತ ವ್ಯಕ್ತಿಯ ದೇಹವನ್ನು ವಾಹನಮಾಡಿಕೊಂಡು, ಮಕ್ಕಳಿಗೆ ತೊಂದರೆ ಕೊಡುವ ದೇವತೆಯಾಗಿದೆ. ಅಲ್ಲದೇ ಮನೆಗಳಿಗೆ ಬೆಂಕಿಯನ್ನು ಹಚ್ಚುವ ಕೆಲಸವನ್ನು ಮಾಡುತ್ತಾಳೆ. ದನಗಳನ್ನು ಕೊಲ್ಲುವ ಕೆಲಸವನ್ನು ಮಾಡುತ್ತಾಳೆ. ಆ ಕಾರಣದಿಂದಲೇ ಅವಳಿಗೆ ಕೋಣ, ಕುರಿಯನ್ನು ಬಲಿಕೊಟ್ಟು, ಶಾಂತಿಮಾಡಿದರೆ ನಮಗೆ ತೊಂದರೆ ಕೊಡುವುದಿಲ್ಲ. ಬದಲಾಗಿ ರಕ್ಷಣೆಯನ್ನು ಕೊಡುತ್ತಾರೆ. ಪ್ಲೇಗು, ಕಾಲರಾ, ದಡಾರ, ಮುಂತಾದ ರೋಗಗಳಿಂದ ರಕ್ಷಿಸಲು ಪ್ಲೇಗಮ್ಮ, ಕಾಲರಾದಮ್ಮ, ದಡಾರದಮ್ಮ, ಮುಂತಾದ ದೇವತೆಗಳಿದ್ದರೆ, ಪ್ರಾಣಿಗಳಿಂದ ರಕ್ಷಿಸಲು ಹುಲಿಯಮ್ಮ, ಕಾಡಿನ ದೇವತೆಗಳು, ಎಲ್ಲೆಯನ್ನು ರಕ್ಷಿಸುವ, ಗ್ರಾಮಗಳನ್ನು ರಕ್ಷಿಸುವ ದೇವತೆಗಳು ಕಂಡುಬರುತ್ತಾರೆ. ಭತ್ತದ ಕೃಷಿಯನ್ನು ಹಾಳುಮಾಡುವ ಕಾಡುಹಂದಿಗಳ ಆರಾಧನಾ ರೂಪವೇ ಪಂಜುರ್ಲಿ, ಕೃಷಿಗೆ ಉಪಯುಕ್ತ ಪ್ರಾಣಿಗಳಾದ ಎತ್ತು ದನಗಳನ್ನು ಕೊಂದು ತಿನ್ನುವ ಹುಲಿಗಳ ಆರಾಧನಾ ರೂಪವಾದ ಪಿಲಿಭೂತ, ಕೃಷಿಗೆ ಪೂರಕವಾದ ಪ್ರಾಣಿಗಳಾದ ಎತ್ತು, ಕೋಣಗಳ ಆರಾಧನಾ ರೂಪವಾದ ಮೈಸಾಂದಯ, ಇವು ಪ್ರಾಣಿಗಳ ಆರಾಧನಾ ರೂಪಗಳಾಗಿವೆ. ಇಲ್ಲಿ ಪ್ರಾಣಿಗಳ ಕೊಲ್ಲುವ ಹಾಗೂ ಆರಾಧಿಸುವ ಕ್ರಿಯೆಗಳು ಒಟ್ಟಿಗೆ ನಡೆಯುತ್ತವೆ. ಕೊಲ್ಲುವ ಮೂಲಕ ತಮ್ಮ

ಸ್ವತ್ತುಗಳ ರಕ್ಷಣೆಯಾದರೆ, ಕೊಂದ ಪ್ರಾಣಿಗಳು ಮುಂದೆ ಅದರ ಸಂತತಿ ತಮ್ಮ ಸ್ವತ್ತಿನ ಮೇಲೆ ಬಾರದಿರುವ ಪ್ರಕ್ರಿಯೆಯಾಗಿ ಅಥವಾ ತನ್ನ ಕೃಷಿಗೆ ದುಷ್ಟಶಕ್ತಿಗಳು ಬಾರದಿರುವಂತೆ ನಿಯಂತ್ರಿಸುವುದೇ ಆಗಿದೆ.

ಮೇಲಿನ ಎರಡು ವರ್ಗಗಳನ್ನು ಹೊರತು ಪಡಿಸಿ, ಮೂರನೆಯ ವರ್ಗದ ದೇವತೆಗಳೆಂದರೆ, ಮನುಷ್ಯರೂಪದ ದೇವತೆಗಳು. ಮೊದಲನೆಯ ವರ್ಗದಲ್ಲಿ ಭೂಮಿಯೇ ಪ್ರಧಾನವಾಗಿದ್ದರೆ, ಎರಡನೆಯ ವರ್ಗದಲ್ಲಿ ಮನುಷ್ಯನನ್ನು ಕಾಡುವ ಆ ಮೂಲಕ ರಕ್ಷಿಸುವ ದೇವತೆಗಳಾದರೆ, ಮೂರನೆಯ ವರ್ಗದಲ್ಲಿ ಸತ್ತವ್ಯಕ್ತಿಗಳು, ಸತಿಯಾದ ಸ್ತ್ರೀಯರು, ಭೂತಗಳ ರೂಪದಲ್ಲಿ ಒಳಿತು ಕೆಡಕಿನ ರೂಪದಲ್ಲಿಯೆ ಕಾಣುತ್ತಾರೆ. ಎಲ್ಮೋರ ಅವರು ಹೇಳುವಂತೆ "....most of the local sotries in that the goddess is a Sakti who was incarnated as a woman and is worshipped after her death.[೧೮] ಬಲವಂತವಾಗಿ ಅಥವಾ ಸ್ವ ಇಚ್ಛೆಯಿಂದ ಸತಿಯಾದ ವ್ಯಕ್ತಿಗಳು, ಆಶೆಗಳು ಇಡೇರದೆ ಸತ್ತ ವ್ಯಕ್ತಿಗಳು ತಮ್ಮ ಆಸೆ ಆಕಾಂಕ್ಷೆಗಳನ್ನು ಇಲ್ಲಿಗೆ ಬಂದು ತೋಡಿಕೊಂಡು ಪ್ರತಿಕಾರವನ್ನು ಎಸಗುತ್ತಾರೆ. ಹೀಗೆ ಕಾಟಕೊಡುವ ಇವರನ್ನು ಸಂತೃಪ್ತಿ ಪಡಿಸಲು ಬಲಿ ಕೊಡಬೇಕಾಗುತ್ತದೆ. ಈ ಹಿನ್ನಲೆಯಲ್ಲಿಯೆ ಭೂತಾರಾಧನೆಯು ಬೆಳೆದು ಬಂದಿರುವ ಹಾಗೆ ಕಂಡುಬರುತ್ತದೆ. ಪಶ್ಚಿಮ ಕರಾವಳಿಯಲ್ಲಿ ಭಗವತಿ ಆರಾಧನೆ ಅಥವಾ ದೈವಾರಾಧನೆ, ಭೂತಾರಾಧನೆಯನ್ನು ಸಹ ನೋಡಬಹುದು. ನೇಪಾಳದ ಕುಮಾರಿ ಆರಾಧನೆ, ಆಂಧ್ರಪ್ರದೇಶದಲ್ಲಿ ಕಂಡುಬರುವ ಮಾತಂಗಿ ಆಚರಣೆಯು ಸ್ತ್ರೀ ಆರಾಧನೆಯ ಪ್ರಾಚೀನ ರೂಪಗಳಾಗಿವೆ.

ಮಾತೃದೇವತೆಯ ಇನ್ನೊಂದು ರೂಪವೆಂದರೆ, ಶಿಷ್ಟದೇವತೆಯ ರೂಪ. ನಾನು ಶಿಷ್ಟದೇವತೆಯೆಂದು ಕರೆಯದೆ ನಾಡದೇವತೆ ಎಂದು ಕರೆಯುತ್ತೇನೆ. ಕಾರಣ ಶಿಷ್ಟೀಕರಣಗೊಂಡಿರುವ ಈ ದೇವತೆಗಳು ಒಂದು ಕಾಲದಲ್ಲಿ ಈ ನಾಡಿನ ಅಥವಾ ಮಣ್ಣಿನ ದೇವತೆಗಳೆ ಆಗಿದ್ದಾರೆ. ಎಲ್ಲಾ ದೇವತೆಗಳು ಆರ್ಯರಿಂದ ಬಂದ ದೇವತೆಗಳಾಗಿಲ್ಲ. ಶೇಕಡಾ ತೊಂಬತ್ತರಷ್ಟು ದೇವತೆಗಳು ಗ್ರಾಮದೇವತೆಗಳೆ ಆಗಿದ್ದಾರೆ. ಅವರ ಮೂಲಕ್ಕೆ ಹೋದಾಗಲೇ ಗೊತ್ತಾಗುವುದು. ಉನ್ನತೀಕರಣಗೊಂಡು ಅಥವಾ ಸಂಸ್ಕೃತೀಕರಣಗೊಂಡ ದೇವತೆಗಳೆ ಇವರಾಗಿದ್ದಾರೆ. ಎಷ್ಟೇ ಸಂಸ್ಕೃತೀಕರಣಗೊಂಡಿದ್ದರೂ ಸಹ ಈ ನೆಲದ ಅನೇಕ ಅಂಶಗಳನ್ನು ತಮ್ಮ ಒಡಲಲ್ಲಿ ಬಯಿಚಿಟ್ಟುಕೊಂಡಿದ್ದಾರೆ. ಲಕ್ಷ್ಮಿಯು ಪಕ್ಕಾ ಶಿಷ್ಟದೇವತೆಯೆಂದಾಗಲೂ ಅವಳ ಹುಟ್ಟು ಅವೈದಿಕವೇ ಆಗಿದೆ. ನಾಡದೇವತೆ ಎಂಬುದು ಸೀಮಿತವಾದ ಅರ್ಥವಾದರೂ ಈ ಮಣ್ಣಿನ ದೇವತೆಗಳು ಎಂಬರ್ಥದಲ್ಲಿ ಇಲ್ಲಿ ಬಳಸಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ನಾಡದೇವತೆಯ ವರ್ಗೀಕರಣವು ಅಷ್ಟೊಂದು ಕಷ್ಟವಾಗುವುದಿಲ್ಲ. ಇಲ್ಲಿ ಎರಡು ಉಪ ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಒಂದರಲ್ಲಿ ವೈದಿಕ ದೇವತೆಗಳೆಂದು, ಇನ್ನೊಂದು ಶಿಷ್ಟೀಕರಣಗೊಂಡ

ದೇವತೆಗಳೆಂದು ವರ್ಗೀಕರಿಸಿಕೊಳ್ಳಬಹುದು. ಆರ್ಯರ ಪುರುಷ ಪ್ರಧಾನವಾದ ನೆಲೆಯಿಂದ ಬಂದ ದೇವತೆಗಳು ಸ್ವತಂತ್ರವಾದ ಅಸ್ತಿತ್ವವನ್ನುಹೊಂದಿರುವುದು ತುಂಬಾ ಕಡಿಮೆ. ಅಲ್ಲದೆ ಇಲ್ಲಿ ಕಂಡುಬರುವ ದೇವತೆಗಳು ಮನುಷ್ಯನ ರೂಪಿನಿಂದ ನೋಡಲಾಗಿಲ್ಲ. ಪ್ರಕೃತಿಯಲ್ಲಿ ಕಂಡುಬರುವ ವೈಚಿತ್ರಗಳೆ ಅವರ ದೇವತೆಗಳಾಗಿದ್ದಾರೆ. ವೈದಿಕ ದೇವತೆಗಳಲ್ಲಿ ವಾಕ್ ಅಥವಾ ಸರಸ್ವತಿ, ಇಂದ್ರಾಣಿ, ಭೂಮಿ, ಹರಿ, ಶ್ರೀ, ಧೃತಿ, ಸ್ಮೃತಿ, ಪುಷ್ಟಿ, ಕ್ರಿಯಾ, ಬುದ್ಧಿ, ಲಜ್ಜಾ ಮತಿ, ಆಶಾ, ಅನುಮತಿ, ಮುಂತಾದ ದೇವತೆಗಳನ್ನು ತೆಗೆದುಕೊಂಡರೆ, ಶಿಷ್ಟೀಕರಣಗೊಂಡ ದೇವತೆಗಳ ವಿಭಾಗದಲ್ಲಿ ಲಕ್ಷ್ಮಿ, ಹಾಗೂ ಶಕ್ತಿ ಪರಂಪರೆಯನ್ನು ತೆಗೆದು ಕೊಳ್ಳಬಹುದಾಗಿದೆ.ಎರಡನೆಯ ವರ್ಗದಲ್ಲಿ ಮೂರ್ತೀಕರಣಗೊಂಡ ದೇವತೆಗಳು ಹೆಚ್ಚಾಗಿ ಕಾಣುತ್ತೇವೆ. ಆರ್ಯರು ಗಂಗಾನದಿಯ ತಟಕ್ಕೆ ಬಂದನಂತರದಲ್ಲಿ ಇಲ್ಲಿಯ ಮೂಲ ನಿವಾಸಿಗಳಾದ ದ್ರಾವಿಡರು, ಹಾಗೂ ನಿಷಾದರೊಡನೆ ಸಂಬಂಧಗಳನ್ನು ಬೆಳಸಲೆ ಬೇಕಾಯಿತು. ಆ ಮೂಲಕ ಇಲ್ಲಿಯ ಸಮಾಜದೊಡನೆ ಮುಖಾಮುಖಿಯ ನಂತರದಲ್ಲಿ ಧಾರ್ಮಿಕವಾದ ಆಚರಣೆಗಳು, ದೈವಗಳು ಈ ಪರಂಪರೆಯಲ್ಲಿ ಸೇರಿಹೋಗಿವೆ. ವೈದಿಕರ ಶ್ರೀಯು ದೇವತೆಯು ಮೂಲನಿವಾಸಿಗಳ ಲಕ್ಷ್ಮಿಯೊಡನೆ ಸೇರಿ ಶ್ರೀಲಕ್ಷ್ಮಿಯಾಗಿದ್ದಾರೆ. ಒಂದು ರೀತಿಯಲ್ಲಿ ಸಾಮರಸ್ಯವನ್ನು ಸಾಧಿಸಿದರೂ ಸ್ಥಳೀಯ ದೇವತೆಗಳು ಪ್ರಭುತ್ವವನ್ನೇ ಸಾಧಿಸಿರುವ ಹಾಗೆ ಕಾಣುತ್ತದೆ. ಅದಿತಿಯಂತಹ ವೈದಿಕ ದೇವತೆ ತನ್ನ ಸಂಪೂರ್ಣವಾದ ಅಸ್ತಿತ್ವವನ್ನು ಕಳೆದುಕೊಂಡು ಶಕ್ತಿ ಪರಂಪರೆಯಲ್ಲಿ ಲೀನವಾಗಿಹೋಗಿದ್ದಾಳೆ. ದುರುಗಮ್ಮ ಅಥವಾ ಕೋಟೆಯನ್ನು ರಕ್ಷಿಸುವ ಕೊಟವಿ, ಕೊಜ್ಜವಿ ದುರ್ಗಾ ಆಗಿ, ಅಂಬಾ, ಮಹಿಷಾಸುರಮರ್ದಿನಿ, ಚಾಮುಂಡಾ, ಸಪ್ತಮಾತೃಕೆಯರು ಹೀಗೆ ಅನೇಕ ದೇವತೆಗಳು ಮೂಲತಃ ಕ್ರೂರದೇವತೆಗಳಾಗಿಯೇ ವೈದಿಕ ಪ್ರಪಂಚವನ್ನು ಪ್ರವೇಶಿಸಿದ್ದಾರೆ. ಮಹಾಭಾರತದಲ್ಲಿ ಈ ರೀತಿಯ ಉದಾಹರಣೆಗಳನ್ನು ಕಾಣಬಹುದು. ನಂತರದ ಕಾಲದಲ್ಲಿ ಈ ಎಲ್ಲಾ ದೇವತೆಗಳನ್ನು ಸೇರಿ ಒಂದು ಮಹಾ ಸ್ವರೂಪವಾಗಿ , ಮಹಾ ದೇವಿಯಾಗಿ, ದೇವಿಯಾಗಿ ಕಂಡುಬರುತ್ತಾಳೆ. ಸ್ವತಂತ್ರವಾದ ಪರಂಪರೆ ಅಥವಾ ಶಾಕ್ತಪರಂಪರೆಯು ಶಕ್ತಿ ಆರಾಧನೆಯ ಫಲವಾಗಿ ಹುಟ್ಟಿಕೊಂಡಿರುವುದನ್ನು ಹಾಗೂ ನಂತರದಲ್ಲಿ ಪ್ರಭಲವಾದ ಸಂಪ್ರದಾಯವಾಗಿ ಬೌದ್ಧ ಹಾಗೂ ಜೈನ ಧರ್ಮಗಳಲ್ಲಿ ಪ್ರವೇಶ ಪಡೆದಿರುವುದನ್ನು ನೋಡಬಹುದಾಗಿದೆ.

ಈ ವರ್ಗೀಕರಣದಲ್ಲಿ ಕೆಲವು ಮಿತಿಗಳಿವೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ವರ್ಗೀಕರಣವನ್ನು ಮಾಡಲಾಗಿದೆ. ಹಾಗೂ ಈ ವರ್ಗೀಕರಣವೇನು ಅಂತಿಮವಲ್ಲ. ಒಂದು ದೇವತೆ ಹಲವು ಗುಣಗಳ ಆಗರವಾಗಿರುತ್ತದೆ. ಅವು ಏಕಕಾಲಕ್ಕೆ ಹಲವಾರು ಗುಣಗಳ ಸಂಗಮವಾಗಿರುತ್ತವೆ. ರೋಗವನ್ನು ತರಬಲ್ಲುದು, ಸಮೃದ್ಧಿಯನ್ನು ತರಬಲ್ಲುದು. ಅಥವಾ ಬರಗಾಲವನ್ನು ಉಂಟುಮಾಡಬಲ್ಲದು. ಅದೇ ದೇವತೆ ರಕ್ಷಣೆಯನ್ನು ಕೊಡಬಲ್ಲದು. ಉದಾಹರಣೆಗೆ ದುರ್ಗಾ ಅಥವಾ ದುರುಗಮ್ಮ ಯುದ್ಧದೇವತೆ, ಕೋಟೆಯ ದೇವತೆಯು ಹೌದು, ರೋಗವನ್ನು ತರುವ ದೇವತೆಯು ಹೌದು. ಒಂದು ಪ್ರದೇಶದಲ್ಲಿ ಅದರ ರೂಪ ಸ್ವಲ್ಪ ಬದಲಾವಣೆಯನ್ನು

ಹೊಂದಿರಬಹುದು, ಅದೆ ಇನ್ನೊಂದು ಕಡೆ ಬೇರೆ ರೀತಿಯಲ್ಲಿ ಕಾಣಬಹುದು. ಆದರೆ ಒಂದು ಮೂಲಭೂತವಾದ ಎಳೆಯೊಂದು ಅಲ್ಲಿ ಇದ್ದೇ ಇರುತ್ತದೆ. ಅದು ಅದರ ಮೂಲಭೂತವಾದ ಅಂಶವಾಗಿರುತ್ತದೆ.

ಅಡಿ ಟಿಪ್ಪಣಿಗಳು

೧. ವಾಲೀಕಾರ ಚೆನ್ನಣ್ಣ, ೧೯೮೮, ಹೈ. ಕ.ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ಪು.೭೪

೨. Anne Baring and Jules Cashford, 1994, The Myth of the Goddess, p. 547

೩. ಅದೇ, p. 225

೪. ರಾಮಚಂದ್ರ ರಾವ್, ಎಸ್.ಕೆ., ೧೯೭೫, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಪು.೧೬೪

೫. ಸಿದ್ಧಲಿಂಗಯ್ಯ, ೧೯೯೯, ಗ್ರಾಮದೇವತೆಗಳು, ಪು. ೩೪

೬. ಗದ್ದಿಮಠ, ಬಿ.ಎಸ್., ೧೯೬೯, ಕನ್ನಡ ಜಾನಪದ ಗೀತೆಗಳು, ಪು.೧೨

೭. ವೃಷಭೇಂದ್ರಸ್ವಾಮಿ, ಎಸ್.ಎಂ., (ಸಂ). ೧೯೮೩, ಜಾನಪದ ಸಾಹಿತ್ಯ ದರ್ಶನ, ಪು. ೮

೮. ಅದೇ, ಪು. ೧೮

೯. ಬೋರಲಿಂಗಯ್ಯ, ಹಿ.ಚಿ., ೧೯೭೯, ಉಜ್ಜನಿ ಚೌಡಮ್ಮ, ಪು.೬

೧೦. ವಾಲಿಕಾರ, ಚೆನ್ನಣ್ಣ., ೧೯೮೮, ಹೈ. ಕ. ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ಪು. ೮೫

೧೧. ಅದೇ, ಪು. ೯೪

೧೨. ಬೇವಿನಕಟ್ಟಿ, ಡಾ. ಮಂಜುನಾಥ., ೧೯೯೪, ಜನಪದ ಸಂಸ್ಕೃತಿ, ಪು.೯

೧೩. ಸಿದ್ಧಲಿಂಗಯ್ಯ, ಡಾ., ೧೯೯೭, ಗ್ರಾಮದೇವತೆಗಳು, ಪು. ೩೮

೧೪. ಹೆಗಡೆ, ಜಿ.ಎಂ., ಅಪ್ರಕಟಿತ ಲೇಖನದಿಂದ

೧೫. ವಾಲಿಕಾರ, ಚೆನ್ನಣ್ಣ., ೧೯೮೮, ಹೈ. ಕ. ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ಪು. ೯೪

೧೬. ಸಿದ್ಧಲಿಂಗಯ್ಯ, ಡಾ., ೧೯೯೭, ಗ್ರಾಮದೇವತೆಗಳು, ಪು. ೩೭

೧೭. ಬೋರಲಿಂಗಯ್ಯ, ಹಿ.ಚಿ., ೨೦೦೦,ಬುಡಕಟ್ಟು ದೈವಾರಾಧನೆ, ಪು.೧೪

೧೮. ಸುಬ್ಬಣ್ಣರೈ, ಎ., ೧೯೯೮, ಗಾಳೆಮ್ಮ, ಪು. ೪

೧೯. Elmore, W.T., Dravidian Goddess in Modern Hinduism, p. 109)

ಆರಾಧನೆ ೪

ಶಿಷ್ಟ ಹಾಗೂ ಜನಪದ ಪರಂಪರೆಯ ದೈವಗಳು

೪.೧. ಶಿಷ್ಟ ದೈವಗಳು

೪.೧.೧. ಸರಸ್ವತಿ

೪.೧.೨. ಲಕ್ಷ್ಮಿ

೪.೧.೩. ದುರ್ಗಾ

೪.೧.೪. ಕಾಳಿ

೪.೧.೫. ಮಹಿಷಾಸುರಮರ್ದಿನಿ

೪.೧.೬. ಸಪ್ತಮಾತೃಕೆಯರು

೪.೨. ಜನಪದ ದೈವಗಳು

೪.೨.೧. ಎಲ್ಲಮ್ಮ

೪.೨.೨. ಮಾತಂಗಿ

ಈ ಅಧ್ಯಾಯದಲ್ಲಿ ದೇವತೆಗಳ ಸ್ಪಷ್ಟವಾದ ರೂಪವನ್ನು ಅದರ ಬೆಳವಣಿಗೆಯನ್ನು ಅಧ್ಯಯನಮಾಡಲಾಗಿದೆ. ಅದರಲ್ಲೂ ಅನೇಕ ದೇವತೆಗಳು ಈ ನೆಲದಿಂದ ಬೆಳೆದು ಬಂದ ದೇವತೆಗಳಾಗಿದ್ದು, ಕೆಲವೊಂದು ದೇವತೆಗಳು ಗ್ರಾಮದೇವತೆಗಳ ರೂಪವನ್ನು ತಮ್ಮಲ್ಲಿ ಅಡಗಿಸಿಕೊಂಡಿವೆ. ಲಕ್ಷ್ಮಿಯನ್ನು ಸಂಪೂರ್ಣವಾಗಿ ಶಿಷ್ಟವೆಂದು ನೋಡಿದಾಗಲೂ ಅದರ ಅಂತರಾಳದಲ್ಲಿ ಜನಪದ ಸ್ವರೂಪವನ್ನೇ ಉಳಿಸಿಕೊಂಡಿದೆ. ವೈದಿಕ ದೇವತೆಯೆಂದು ಹೇಳಬಹುದಾದ ದೇವತೆಯೆಂದರೆ ಸರಸ್ವತಿಯೊಬ್ಬಳೆ. ಉಳಿದ ಎಲ್ಲದೇವತೆಗಳು ಒಂದಿಲ್ಲೊಂದು ರೀತಿಯಲ್ಲಿ ಗ್ರಾಮ ಸ್ವರೂಪವನ್ನು ಉಳಿಸಿಕೊಂಡಿವೆ. ಫಲವಂತಿಕೆಯ ಅಥವಾ ರಕ್ಷಣೆಯ ದೇವತೆಗಳಾಗಿ ಕಂಡುಬರುತ್ತಾರೆ.

ಸರಸ್ವತಿ, ಲಕ್ಷ್ಮಿ, ದುರ್ಗಾ, ಕಾಳಿ, ಮಹಿಷಮರ್ದಿನಿ, ಸಪ್ತಮಾತೃಕೆಯರನ್ನು ಸಾಂಕೇತಿಕವಾಗಿ ಶಿಷ್ಟರೂಪದಿಂದ ಅದರ ಉಗಮ ಹಾಗೂ ಬೆಳವಣಿಗೆಯನ್ನು ನೋಡಲಾಗಿದೆ. ಜನಪದರು ಆರಾಧಿಸುವ ಸಾವಿರಾರು ದೇವತೆಗಳನ್ನು ಅಧ್ಯಯನ ಮಾಡಲಿಕ್ಕೆ ಬೇರೆ ರೀತಿಯ ಅಧ್ಯಯನ ಬೇಕಾಗಬಹುದು. ಮಾತಂಗಿ, ಎಲ್ಲಮ್ಮ ದೇವತೆಗಳನ್ನು ತೆಗೆದುಕೊಂಡು ಅಧ್ಯಯನ ಮಾಡಲಾಗಿದೆ. ಎಲ್ಲಾ ದೇವತೆಗಳನ್ನು ಇಲ್ಲಿ ತೆಗೆದು ಕೊಂಡು ನೋಡಲಿಕ್ಕಾಗದ ಕಾರಣ ಈ ದೇವತೆಗಳನ್ನು ಮಾತ್ರ ತೆಗೆದುಕೊಳ್ಳಲಾಗಿದೆ.



ಚಿತ್ರ 2

೪.೧.೧. ಸರಸ್ವತಿ

> ಓ ಸರಸ್ವತಿಯೇ, ನೀನು ತಾಯಿಯರಲ್ಲಿ ಶ್ರೇಷ್ಠಳು, ನದಿಗಳಲ್ಲಿ
> ದೇವತೆಗಳಲ್ಲಿ ಶ್ರೇಷ್ಠಳು, ನಾವು ಅಷ್ಟು ಪ್ರಸಿದ್ಧರಲ್ಲವೆಂದು
> ತಿಳಿಯಲಾಗಿದೆ. ನಮಗೆ ಸರ್ವೋಚ್ಚ ಪ್ರಶಸ್ತಿಯನ್ನು ದಯಪಾಲಿಸು.
>
> (*ಋಗ್ವೇದ ೧೧. ೪೧. ೧೬*)

ಮೂಲತಃ ನದಿದೇವತೆಯಾದ ಸರಸ್ವತಿಯನ್ನು ಋಗ್ವೇದದ ಈ ಮಂತ್ರದಲ್ಲಿ ಹೀಗೆ ಸ್ತುತಿಸಲಾಗಿದೆ. ನದಿಮೂಲದ ದೇವತೆಯಾದ ಇವಳು ಎಲ್ಲಾ ದೇವತೆಗಳಿಗಿಂತ ಶ್ರೇಷ್ಠಳೆಂದು ಭಾವಿಸಿ ಸ್ತುತಿಸಲಾಗಿದೆ. ಆರ್ಯರು ಪಶುಪಾಲಕ ವೃತ್ತಿಯವರು ಎಂಬುದು ತಿಳಿದ ವಿಷಯ. ಪಶುಪಾಲಕರಾದ ಇವರಿಗೆ ಆಹಾರದಷ್ಟೇ ನೀರು ಆವಶ್ಯಕ ವಸ್ತುವಾಗಿದೆ. ಪಶುಸಂಪತ್ತು ಬೆಳೆಯಲು ನೀರು ಮೂಲ ಧಾತುವಾಗಿದೆ. ಅಲ್ಲದೆ ಆರ್ಯರು ಸರಸ್ವತಿ ನದಿಯ ತಟದಲ್ಲಿ ವಾಸಿಸುತ್ತಿದ್ದರಿಂದ ಸರಸ್ವತಿ ನದಿ ಶ್ರೇಷ್ಠಳೆಂದೇ ಭಾವಿಸಿ ಸ್ತುತಿಸಲಾಗಿದೆ. ವೇದಗಳಲ್ಲಿ ವಾಕ್ ದೇವತೆಯನ್ನು ಜ್ಞಾನದ ದೇವತೆಯನ್ನಾಗಿಯೂ ಕಾಣಲಾಗಿದೆ. ವಾಕ್ ಹಾಗೂ ಸರಸ್ವತಿಯರು ಭಿನ್ನ ಭಿನ್ನವಾದವರು. ಅವರು ನಂತರದ ಸಾಹಿತ್ಯದಲ್ಲಿ ಒಂದೇಯಾಗಿ ಕಂಡುಬರುತ್ತಾರೆ. ಅಲ್ಲದೆ ವೇದಗಳ ತಾಯಿ ಹಾಗೂ ಎಲ್ಲಾ ಹೊಸತರ ಸೃಷ್ಟಿಗೆ ಸರಸ್ವತಿಯೆ ಕಾರಣವೆಂದು ಹೇಳಲಾಗಿದೆ. ಅಲ್ಲದೆ ಜ್ಞಾನ, ವಾಕ್ಸಂಪತ್ತು,ಜ್ಞಾನಾರ್ಜನೆ, ಕಲೆ ಮತ್ತು ಸಂಗೀತಗಳಿಗೆ ಆಧಾರವಾಗಿದ್ದಾಳೆ. ಅಲ್ಲದೆ ಭಾಷೆ ಹಾಗೂ ಲಿಪಿಗಳ ದ್ವಾರವಾಗಿದ್ದಾಳೆ ಎಂದು ಎಲ್ಲಾ ಸಾಹಿತ್ಯಗಳು ಹೊಗಳುತ್ತವೆ. ವಶಿಷ್ಠನ ಆಧ್ಯಾತ್ಮ ರಾಮಾಯಣವು ಸರಸ್ವತಿಯನ್ನು ಕುರಿತು ಹೇಳುತ್ತಾ, ಬ್ರಹ್ಮರಂಧ್ರದಿಂದ ನಿರಂತರವಾಗಿ ಹರಿಯುವುದರಿಂದ ಸರಸ್-ಸರಸ್ವತಿಯಾಗಿದ್ದಾಳೆ ಎನ್ನುತ್ತಾನೆ. ನೀರಿನಂತೆ ಮಾತನ್ನು ಅಥವಾ ವಾಗ್ಝರಿಯನ್ನು ಹರಿಸುವವಳು ಸರಸ್ವತಿ. ಶ್ರೀ ಅರವಿಂದರು ಹೇಳುವಂತೆ :

She is the stream, the flowing movement and is therefore a natural name both for a river and for the goddess inspiration, with it a psychological significance for the whole symbol of the vedic waters.[೧]

ವೇದೋತ್ತರದ ಕಾಲಕ್ಕೆ ಬಂದಾಗ ಸರಸ್ವತಿಯು ಬ್ರಹ್ಮನ ರಾಣಿಯಾಗಿ ಮಾರ್ಪಾಡಾಗಿರುವುದನ್ನು ಕಾಣಬಹುದು. ಬ್ರಹ್ಮನು ವಿಶ್ವಸೃಷ್ಟಿಯಲ್ಲಿ ಪ್ರಧಾನ ಪಾತ್ರವಹಿಸಿದ್ದಾನೆ. ಪ್ರಜಾಪತಿ ಬ್ರಹ್ಮನ ಮಡದಿಯಾದ ಸರಸ್ವತಿಯು ಪ್ರಧಾನವಾಗಿ ಜ್ಞಾನದ ಸಂಕೇತವಾದ ಇವಳಿಗೆ ಶಕ್ತಿತ್ರಯರಲ್ಲಿ ಗಣನೀಯವಾದ ಸ್ಥಾನ ದೊರಕಿರುವುದನ್ನು ಕಾಣಬಹುದು. ಆದರೂ ಶಕ್ತಿಯ ಅಂಶವಾಗಿ ಬಂದಾಗ ಸೃಷ್ಟಿಕಾರಕಳಾಗಿ ಕಾಣುತ್ತಾಳೆ. ಸ್ವತಂತ್ರವಾಗಿ ಬಂದಾಗ ಅವಳಿಗೆ ಯಾವುದೇ ಸ್ಥಾನದೋರಕದಿರುವುದು, ಆ ಮೂಲಕ ಪ್ರಧಾನ ದೇವತೆಯಾಗಿ ಅರ್ಚನೆಯನ್ನು ಹೊಂದದೇ ಇರುವುದನ್ನು ಸರಸ್ವತಿಯ ಆರಾಧನೆಯಲ್ಲಿ ವಿಶೇಷ ಅಂಶವಾಗಿದೆ. ಇಲ್ಲಿ ಸರಸ್ವತಿಯನ್ನು ನಮ್ಮ ಜನ ಅಷ್ಟೊಂದು ಪ್ರಮುಖ ದೇವತೆಯಾಗಿ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ಅದು ಅಕ್ಷರದೇವತೆ ಮತ್ತು ಜನಪದರ ಸಮೀಪಕ್ಕೆ ಬಾರದೇ ಹೋದ ದೇವತೆಯಾಗಿದ್ದಾಳೆ. ಅಲ್ಲದೆ ಸ್ವತಂತ್ರವಾದ ದೇವಾಲಯವನ್ನು ಕೂಡಾ ಹೊಂದದೇ ಇರುವುದು ಇದೇ ಕಾರಣವಾಗಿರಬಹುದು.

"ಅಂಬಿತಮೇ ನದೀತಮೇ ದೇವಿ ತಮೇ ಸರಸ್ವತೀ" (ಋ.೧.೪.೪೧), "ನದೀನಾಂ ಶುಚಿರ್ವತೀ ಗಿರಭ್ಯ ಆಸಮುದ್ರಾತ್" (ಋ.೭.೬.೯೫) ನದಿಗಳಲ್ಲೆಲ್ಲಾ ತುಂಬಾ ಶುಚಿಯಾದವಳು ಎಂಬ ಪ್ರಸಿದ್ಧಿಯನ್ನು ಹೊಂದಿದ್ದರೂ ಸಹ ಒಂದು ನದಿ ದೇವತೆಯನ್ನಾಗಿ ಇಲ್ಲಿ ನೋಡಲಾಗಿದೆ.[೨] ಆದರೆ ಸರಸ್ವತಿಗೆ ಖ್ಯಾತಿಯನ್ನು ತಂದು ಕೊಟ್ಟದ್ದು ಋಗ್ವೇದದ ಪ್ರಕ್ಷಿಪ್ತಭಾಗವೆಂದು ಊಹಿಸಲಾಗಿರುವ ಅಂಬಣನ ಮಗಳು ಹೇಳಿದ ಅಂಬಣೆ ಸೂಕ್ತ ಅಥವಾ ದೇವಿಸೂಕ್ತ (ಋ.೧೦.೧.೨೫)ದಿಂದ ವಾಕ್‌ದೇವತೆಯು ಸರಸ್ವತಿಯಾಗಿ ಸರಸ್ವತಿಯು, ವಾಕ್‌ದೇವತೆಯಾಗಿ ಪರಿವರ್ತಿತವಾದರು.

ಸರಸ್ವತಿಯನ್ನು ಸಾವಿತ್ರಿ ಎಂದೂ ಕರೆಯಲಾಗಿದೆ. ಸಾವಿತ್ರಿ ಹಾಗೂ ಗಾಯತ್ರಿಯರು ಕೂಡಾ ಬ್ರಹ್ಮನ ಹೆಂಡತಿಯರೆಂದು ಪದ್ಮಪುರಾಣವು ಹೇಳುತ್ತದೆ. ಅಲ್ಲದೆ ಸಾವಿತ್ರಿ ಹಾಗೂ ಗಾಯತ್ರಿಯರು ಸ್ನೇಹಭಾವದಿಂದ ಇರುವರೆಂದು ಹೇಳಿದೆ. ವರಾಹ ಪುರಾಣವು ಸರಸ್ವತಿಯನ್ನು ಗಾಯತ್ರಿ, ಮಹೇಶ್ವರಿ, ಸಾವಿತ್ರಿ ಮುಂತಾಗಿ ಕರೆದಿದೆ. ಸಾವಿತ್ರಿಯು ಒಂದು ಯಜ್ಞದ ಸಂದರ್ಭದಲ್ಲಿ ಕೋಪಗೊಂಡದ್ದನ್ನು ಸ್ಕಂದ ಪುರಾಣವು ಉಲ್ಲೇಖಿಸುತ್ತದೆ. ಬ್ರಹ್ಮನು ಪುಸ್ಕರದಲ್ಲಿ ಯಜ್ಞಕಾರ್ಯದಲ್ಲಿ ನಿರತನಾಗಿದ್ದ, ಅಲ್ಲಿಗೆ ಸಾವಿತ್ರಿಯು ಬರುವುದು ತಡವಾಯಿತು. ಅಲ್ಲದೆ ಲಕ್ಷ್ಮಿ, ಇಂದ್ರಾಣಿ, ಗಂಗಾ, ಮೊದಲಾದ ದೇವತೆಗಳು ತಡವಾಗಿ ಬಂದರು. ಆಗ



ಚಿತ್ರ ೮

ಬ್ರಹ್ಮನು ಅಲ್ಲಿಯೇ ಇದ್ದ ಗಾಯಿತ್ರಿಯನ್ನು ಮದುವೆಯಾಗಿ ಯಜ್ಞದಲ್ಲಿ ಭಾಗವಹಿಸುವಂತೆ ಕೇಳಿದ ಹಾಗೂ ಗಾಯಿತ್ರಿಯು "ಮೂರು ವೇದಗಳ ತಾಯಿ" ಯಾಗೆಂದು ಹರಸಿದ. ಆಗ ಅಲ್ಲಿಗೆ ಬಂದ ಸಾವಿತ್ರಿಯು ಅಲ್ಲಿದ್ದವರೆಲ್ಲರನ್ನೂ ತುಳಿದು ಹಾಕಿದಳು. ಬ್ರಹ್ಮನಿಗೆ ದೇವಾಲಯದಲ್ಲಿ ಪೂಜೆ ಆಗದಂತೆ ಶಾಪಕೊಟ್ಟಳು. ವಿಷ್ಣುವಿಗೆ ಪತ್ನಿವಿಯೋಗವಾಗುವಂತೆ, ಹಾಗೂ ಅಗ್ನಿಗೆ ಸರ್ವಭಕ್ಷಕನಾಗುವಂತೆ ಶಾಪಕೊಟ್ಟಳು. ನಂತರದಲ್ಲಿ ಗಾಯಿತ್ರಿಯು ಇದನ್ನೆಲ್ಲಾ ಸರಿಪಡಿಸಿದಳು.[೩] ಮತ್ಸ್ಯ ಪುರಾಣದಲ್ಲಿ[೪] ಸರಸ್ವತಿಯ ಉಗಮದ ಬಗೆಗೆ ಹೀಗೆ ಹೇಳಲಾಗಿದೆ. ವಿಶ್ವವೆಲ್ಲ ನೀರಿನಿಂದ ತುಂಬಿತ್ತು. ಆ ನೀರಿನಿಂದ ಒಂದು ಮೊಟ್ಟೆಯು ಹೊರಬಂದು, ಅದರಿಂದ ಪ್ರಜಾಪತಿಯು ಹುಟ್ಟಿದನು. ಹೀಗೆ ಹುಟ್ಟಿದ ಆದಿ ಪುರುಷನಾದ ಪ್ರಜಾಪತಿಯು "ಭೂರ್" ಎಂದ, ಆಗ ಭೂಮಿಯು, "ಭೂವಃ" ಎಂದಾಗ ಗಗನಮಂಡಲವು, "ಸ್ವರಟ್" ಎಂದಾಗ ಆಕಾಶವು ಹುಟ್ಟಿತು. ಜನಿತವಾದ ವಿಶ್ವದಿಂದ ಒಂದು ಸುಂದರವಾದ ಕನ್ನೆಯೊರ್ವಳು ಹುಟ್ಟಿಬಂದಳು. ತನ್ನಿಂದಲೇ ಜನಿತವಾದ ಆ ಕನ್ನೆಯನ್ನು ಬ್ರಹ್ಮ ಮದುವೆಯಾದ. ಆದ್ದರಿಂದಲೇ "ಬ್ರಹ್ಮನಿಗೆ ಸ್ವಪುತ್ರೋಪಗಮೇಚ್ಛಾಯಾ" ಎಂದು ಕರೆಯಲಾಗಿದೆ. ತನ್ನ ಮಗಳನ್ನೆ ಮದುವೆಯಾದವನು ಬ್ರಹ್ಮ.

ಸರಸ್ವತಿಯನ್ನು ಪುರಾಣಗಳು ಹಾಗೂ ಉಪನಿಷತ್ತುಗಳು ಜಗತ್ತಿನ ತಾಯಿ ಮತ್ತು ವೇದಗಳ ಮೂಲ ಹಾಗೂ ಶಕ್ತಿಯೆಂದು ಹೊಗಳಿವೆ ತ್ವಂ ದೇವಿ ಸರ್ವಲೋಕಾನಾಂ ಮಾತಾ ವೇದಾರಣೀ ಶುಭಾ. ಸರ್ವವಿದ್ಯೆಯ ಸ್ವರೂಪವು ಅವಳೆ ಆಗಿದ್ದಾಳೆ.[೫] ಜಗತ್ತಿನ ತೃಷೆಯನ್ನು ನೀರಿನ ಮೂಲಕ ಹೋಗಲಾಡಿಸುತ್ತಾಳೆ ಮಕ್ಕಳಿಗೆ ತಾಯಿ ಹಾಲನ್ನು ಒದಗಿಸುವಂತೆ ಸರಸ್ವತಿಯು ಮೇಘದ ರೂಪದಲ್ಲಿ ಧರೆಗೆ ನೀರನ್ನು ಒದಗಿಸುತ್ತಾಳೆ. ನೀರು ಬರೀ ನೀರಾಗಿರದೆ ಅದು ಜೀವದ ಜೀವಾಳ, ಅದಿಲ್ಲದೆ ಜೀವನವು ಸಾಧ್ಯವಾಗಲಾರದು. ನೀರಿನಿಂದ ಬೆಳೆ, ನೀರಿನಿಂದ ಆಕಾಶ, ನೀರಿನಿಂದ ಜೀವ. ಹೀಗೆ ನೀರು ಸರ್ವಲೋಕವ್ಯಾಪಿಯಾದರಿಂದ "ಸರ್ವಲೋಕಾನಾಂ ಮಾತಾ" ಎಂದು ಕರೆಯಲಾಗಿದೆ.

ಸರಸ್ವತಿಯನ್ನು ಪುರಾಣಗಳಲ್ಲಿ ಹಲವಾರು ರೂಪಗಳಲ್ಲಿ ನೋಡಲಾಗಿದೆ. ಸರಸ್ವತಿಯನ್ನು ಹಲವಾರು ಹೆಸರುಗಳಿಂದ ಕರೆಯಲಾಗಿದೆ. ಭಾರತಿ, ಮಹಾವಿದ್ಯಾ, ವಾಕ್, ವಾಣಿ, ಮಹಾವಾಣಿ, ಆರ್ಯಾ, ಬ್ರಹ್ಮಿ, ಕಾಮಧೇನು, ಬೀಜಗರ್ಭಾ, ಧಾರೇಶ್ವರಿ, ವಾಗೀಶ್ವರಿ, ಶಾರದಾ, ಗಿರ್ವಾಣಿ, ಮುಂತಾದ ಹೆಸರುಗಳಿಂದ ಸರಸ್ವತಿಯನ್ನು ಕರೆಯಲಾಗಿದೆ. ಅಲ್ಲದೆ ಭವಿಷ್ಯಪುರಾಣದಲ್ಲಿ ವಾಗ್ದೇವಿ, ವಾಗ್ದೇವತಾ, ವಾಗ್ವಾದಿನಿ (೨.೪.೫), ಪದ್ಮ ಪುರಾಣದಲ್ಲಿ ಶ್ರದ್ಧಾ, ಸ್ಮೃತಶಕ್ತಿ, ಜ್ಞಾನಶಕ್ತಿ, ಕಲ್ಪನಾಶಕ್ತಿ, ಪರಾ, ನಿಷ್ಠಾ, ಸಿದ್ಧಿಯೆಂದು (೫.೨೮.೧೧೬), ವೇದಗರ್ಭಾ.ವಿದ್ಯಾ, ಮಹಾವಿದ್ಯಾ, ತ್ರಯಿವಿದ್ಯಾ, ಜಗದ್ವಾನಿ, ಜಗನ್ಮಾತಾ, ಜಗದಂಬಿಕಾ, ಸದಂಬಿಕಾ ಎಂದು ಭವಿಷ್ಯ ಪುರಾಣದಲ್ಲಿ (೨.೪.೫), ಪ್ರಕೃತಿ, ಗೋಪಿನ ರೂಪದಲ್ಲಿ ವಾಯುಪುರಾಣವು (೧.೨೩.೫೦)

ನೋಡಿವೆ.ಹೀಗೆ ಹಲವಾರು ಪುರಾಣಗಳಲ್ಲಿ ಸರಸ್ವತಿಯ ನಾಮನಿರ್ದೇಶನವಾಗಿದೆ. ಸ್ಕಂದ ಪುರಾಣದಲ್ಲಿ ಬರುವ ಕೂಹೂ ದೇವತೆಯು ಅಮವಾಸ್ಯೆಯ ರೂಪದಲ್ಲಿರುವ ದೇವತೆಯೆಂದು ಅಥವಾ ಕಪ್ಪುದೇವತೆಯೆಂದು, ಈ ದೇವತೆಯನ್ನು ಸರಸ್ವತಿಯೊಂದಿಗೆ ಸಮೀಕರಿ ಹೇಳಲಾಗಿದೆ.

ದೇವಿಭಾಗವತ ಪುರಾಣದಲ್ಲಿ ಸರಸ್ವತಿಯನ್ನು ವಿಷ್ಣುವಿನೊಂದಿಗೆ ಸಮೀಕರಿಸಲಾಗಿದೆ.

ಭಾರತೀ ಭಾರತಂ ಗತ್ವಾ ಬ್ರಾಹ್ಮಿ ಚ ಬ್ರಾಹ್ಮಣಃ ಪ್ರಿಯಾ
ವಾಗ್ಯದಧಿಷ್ಠಾತ್ರ ದೇವೀ ಸಾ ತೇನ ವಾಣೀ ಪ್ರಕೃರ್ತ್ತಿನಾ
ಸಗೋವಾಪ್ಯಾಂ ಚ ಸ್ತ್ರೇನ ಸ್ತು ಸರ್ವಂತ್ರೈವ ಹಿದದಯತೆ
ಹರಿಃ ಸರಸ್ವಾನ್ ತಸ್ಯೇಯಂ ತೇನ ನಾಮ್ನಾ ಸರಸ್ವತೀ (೧೦.೭.೨೩)

ಅಂದರೆ ಭಾರತದಿಂದ ಬಂದಿದ್ದರಿಂದ ಭಾರತೀಯೆಂದು, ಬ್ರಹ್ಮನ ಪ್ರಿಯೇ ಆಗಿದ್ದರಿಂದ ಬ್ರಾಹ್ಮಿ, ವಾಕಿನ ಅಧಿದೇವತೆಯಾದ್ದರಿಂದ ವಾಣಿ ಎಂದೂ ಸರಸ್ವಾನ ಅಥವಾ ಹರಿಯ ಜೊತೆಯಿರುವುದರಿಂದ ಸರಸ್ವತಿ ಎಂದು ವರ್ಣಿಸಲಾಗಿದೆ. ಇಲ್ಲಿ ವಿಷ್ಣುವಿನ ಸಂಬಂಧ ಕಲ್ಪಿಸಿರುವುದಲ್ಲದೆ ಸರಸ್ವತಿಯನ್ನು ಶಕ್ತಿಸ್ವರೂಪಿಣಿಯ ಪಂಚಮಹಾ ಪ್ರಕೃತಿಯಲ್ಲಿ ಒಬ್ಬಳೆಂದು ಹೇಳಲಾಗಿದೆ. ಮತ್ತು ದುರ್ಗೆ, ರಾಧಾ, ಲಕ್ಷ್ಮಿ, ಸಾವಿತ್ರಿಯರು ಅವಳ ಪ್ರಕೃತಿಯ ಇನ್ನುಳಿದ ರೂಪಗಳಾಗಿವೆ.ಸರಸ್ವತಿಯನ್ನು ಅತ್ಯಂತ ಸುಂದರಿಯೆಂದು ಮಲ್ಲಿನಾಥ ವರ್ಣಿಸಿದ್ದಾನೆ.

ಶರದಿಂದು ವಿಕಾಸ ಮಂದಹಾಸಿನೀಸ್ಫೂರದಿಂದೀವರ ಲೋಚನಾಭಿರಾಮೋ
ಅರವಿಂದ ಸಮಾನ ಸುಂದರಾಸ್ಯಾಮರವಿಂದಸನ ಸುಂದರೋ ಮುಪಾಸೇ

ಸರಸ್ವತಿಯ ಮೂರ್ತಿ ಲಕ್ಷಣವು ಒಂದು ಮುಖವನ್ನು ಹೊಂದಿರುತ್ತದೆ. ಶುಭ್ರವಾದ ಶ್ವೇತವರ್ಣವು ಅವಳ ಮೈಬಣ್ಣವಾಗಿದೆ. ಸಾಮಾನ್ಯವಾಗಿ ನಾಲ್ಕು ಕೈಗಳಿಂದ ಸರಸ್ವತಿಯನ್ನು ಚಿತ್ರಿಸಲಾಗಿರುತ್ತದೆ. ಅಕ್ಷಮಾಲೆ, ವೀಣೆ, ಪುಸ್ತಕ ಮತ್ತು ಕಮಲಗಳನ್ನು ಕೈಯಲ್ಲಿ ಹಿಡಿದಿರುತ್ತಾಳೆ. ಕರಂಡ ಮಕುಟ ಹಾಗೂ ಪ್ರಭಾಮಂಡಲವನ್ನು ಸರಸ್ವತಿಯ ರೂಪಲಕ್ಷಣದಲ್ಲಿ ಅಳವಡಿಸಲಾಗಿದೆ.[೬] ಎಂಟು ಕೈಗಳನ್ನು ಹೊಂದಿದ್ದರೆ ಅಂಕುಶ, ಪಾಶ, ಚಕ್ರ, ಘಂಟಾ, ಬಾಣ ಮತ್ತು ಬಿಲ್ಲು, ಈಟಿ, ಹಾಗೂ ನೇಗಿಲನ್ನು ಹಿಡಿದಿರಬಹುದು.

ಋಗ್ವೇದದಲ್ಲಿ ಸರಸ್ವತಿಯನ್ನು ಸಾತ್ವಿಕ ಹಾಗೂ ಘೋರರೂಪದಲ್ಲಿ ನಿರೂಪಿಸಲಾಗಿದೆ, "ಪ್ರಿಯಾಪ್ರಿಯಾಸು ಸಪ್ತಸ್ವ ಸಾ ದೃಷ್ಟಾ ಸರಸ್ವತೀ ಸ್ತೋ ದಯಾಭೂತ್ ಘೋರ ಶತೃಣಾಂ ಭಯಕಾರಿಣಿ". ಸಾತ್ವಿಕ ರೂಪದಲ್ಲಿ ಹೀಗೆ ವರ್ಣಿಸುತ್ತಾರೆ.

ಚಂದ್ರಪ್ರಭಾಂ ನೀಲಗಲ ಪ್ರಯಾನಾಂ ತ್ರೀನೇತ್ರ ರಮ್ಯಾಂ ಸುಗುಣಾಂ ಪ್ರತುಷ್ಟಾಂ

ಪದ್ಮಾಸನಾಂ ತ್ವಾಂ ಪ್ರಯುಜೇಽಕ್ಷಮಾಲಾ · ಸತ್ಪುಸ್ತಕಾಢ್ಯಾಂ ಚ ಮಯೂರಚಾರೇ

ಎಂದು ಮಂತ್ರಪೂಜೆಯಲ್ಲಿ ನಿರ್ದೇಶಿಸಲ್ಪಟ್ಟಿದೆ.[೭] ಅಲ್ಲದೆ, ಅಗ್ನಿಪುರಾಣದಲ್ಲಿ ಸರಸ್ವತಿಯು ಪುಸ್ತಕ, ಅಕ್ಷಮಾಲೆ, ವೀಣಾಧಾರಿಣಿಯಾಗಿದ್ದು, ಹಂಸವನ್ನು ವಾಹನವಾಗಿ ಹೊಂದಿದ್ದಾಳೆ. ಅಥವಾ ಕಮಲದ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿದೆ. ಸರಸ್ವತಿಯ ಮೊದಲ ಶಿಲ್ಪಗಳಲ್ಲಿ ಪುಸ್ತಕ ಹಾಗೂ ವೀಣೆಯನ್ನು ಹೊಂದಿರದೆ ಇರುವುದನ್ನು ಗಮನಿಸಬಹುದು. ಆದರೆ ನಂತರದ ಶಿಲ್ಪಗಳಲ್ಲಿ ಈ ಅಂಶಗಳು ಸೇರ್ಪಡೆಯಾಗಿವೆ. ಮೊದಲ ಅಥವಾ ಎರಡನೆಯ ಶತಮಾನಕ್ಕೆ ಸೇರಿದ ಮಥುರೆಯ ಕಾಂಕಲಿಟಿಲಾದ ಸರಸ್ವತಿಯ ವಿಗ್ರಹದಲ್ಲಿ ಮೊದಲಬಾರಿಗೆ ಪುಸ್ತಕವು ಸ್ಥಳವನ್ನು ಪಡೆದಿದೆ. ಅಲ್ಲದೆ, ಆಂಧ್ರಪ್ರದೇಶದ ಘಂಟಸಾಲದಲ್ಲಿಯ ಸರಸ್ವತಿಯ ವಿಗ್ರಹವು ಹಂಸವಾಹನವನ್ನು ಹೊಂದಿದೆಯಲ್ಲದೆ ಪಾಶವನ್ನು ಹಿಡಿದಿದೆ.[೮] ಹಂಸದ ಬದಲಾಗಿ ಸಿಂಹ ಅಥವಾ ನವಿಲು ಸಹ ವಾಹನವಾಗಿ ಬಂದಿರುವುದನ್ನು ಈ ಕಾಲದ ಶಿಲ್ಪಗಳು ತೋರಿಸಿಕೊಡುತ್ತವೆ.

ಗುಪ್ತರ ಕಾಲಾನಂತರದಲ್ಲಿ ಸರಸ್ವತಿಯ ವಿಗ್ರಹಗಳು ಹೆಚ್ಚು ವ್ಯಾಪಕವಾಗಿ ಕಂಡುಬರುತ್ತವೆ. ಅವರ ನಾಣ್ಯಗಳಲ್ಲಿಯೂ ಸಹ ಸರಸ್ವತಿಯನ್ನು ಅಚ್ಚೊತ್ತಲಾಗಿದೆ. ಇದು ಪೀಠದಂತಹ ಮಣೆಯ ಮೇಲೆ ಕುಳಿತಿದ್ದು, ಒಂದು ಕೈಯಲ್ಲಿ ಪುಸ್ತಕದ ರೀತಿಯಲ್ಲಿರುವ ಓಲೆಗರಿಗಳೆನ್ನಬಹುದಾದ ಪಟ್ಟಿಕೆಗಳನ್ನು, ಎಡಗೈಯಲ್ಲಿ ತುಂಬಿದ ತೆನೆಯನ್ನು ಹಿಡಿದಿದ್ದಾಳೆ. ಇದು ಬಹುಶಃ ಲಕ್ಷ್ಮಿಯದ್ದಾಗಿರಬಹುದೆಂದು ತರ್ಕಿಸಲಾಗಿದೆಯಾದರೂ ಅದು ಸರಸ್ವತಿಯ ವಿಗ್ರಹವಾಗಿರಬೇಕೆಂದು ಊಹಿಸಲಾಗಿದೆ. ಕಾರಣ ಒಂದು ಕಾಲದಲ್ಲಿ ಸರಸ್ವತಿಯೂ ಸಹ ಸಮೃದ್ಧಿಯ ದೇವತೆಯೇ ಆಗಿದ್ದಾಳೆ. ಅಲ್ಲದೆ ದುರ್ಗೆಯ ರೂಪದಲ್ಲಿರುವ ಸರಸ್ವತಿಯನ್ನು ಮುದ್ರಿಸಲಾಗಿರುವ ನಾಣ್ಯಗಳು ಗುಪ್ತರ ಕಾಲದಲ್ಲಿ ದೊರಕುತ್ತವೆ. ಅವು ಸಾಮಾನ್ಯವಾಗಿ ಹುಲಿಯನ್ನು ಕೊಂದು ಹಾಕುತ್ತಿರುವ ರೀತಿಯಲ್ಲಿವೆ. ಇದೇ ಕಾಲದ ವಿಜಾಸನ್ ಗುಹೆಗಳಲ್ಲಿ ಕಂಡುಬರುವ ಸರಸ್ವತಿಯ ವಿಗ್ರಹವು ಚತುರ್ಭಾಹುಗಳನ್ನು ಹೊಂದಿದ್ದು, ಪುಸ್ತಕ ಮತ್ತು ವೀಣೆಯನ್ನು ಹಿಡಿದಿದೆ.

ಮಧ್ಯಕಾಲದಲ್ಲಿ ಸರಸ್ವತಿಯ ಆರಾಧನೆಯು ವ್ಯಾಪಕರೀತಿಯಲ್ಲಿ ಕಂಡುಬರುತ್ತದೆ. ಅಲ್ಲದೆ ಭಾರಿ ಪ್ರಮಾಣದಲ್ಲಿ ಶಿಲ್ಪಗಳು ಈ ಕಾಲದಲ್ಲಿ ದೊರಕುತ್ತವೆ. ಸರಸ್ವತಿ ಪೀಠಗಳು ಸ್ಥಾಪಿತವಾಗಿರುವುದು ಇದೇ ಕಾಲದಲ್ಲಿ. ಕರ್ನಾಟಕವು ಸರಸ್ವತಿಯ ಆರಾಧನೆಯ ಪ್ರಮುಖ ಕೇಂದ್ರವಾಗಿತ್ತು. ಇಲ್ಲಿ ಈ ಕಾಲಕ್ಕೆ ಹೆಚ್ಚಿನ ಪ್ರಮಾಣದ ವಿಗ್ರಹಗಳ ದೊರಕುತ್ತವೆ. ಬಾಗಳಿ, ಹಿರೇಹಡಗಲಿ,ಇಟಗಿ, ಹಳೆಬೀಡು ಮುಂತಾದ ಕಡೆ ತುಂಬಾ ಸುಂದರವಾದ ಸರಸ್ವತಿ ವಿಗ್ರಹಗಳನ್ನು ಕಾಣಬಹುದು.

೪.೧.೨ ಲಕ್ಷ್ಮಿ

ಹಿಂದೂ ಪರಂಪರೆಯಲ್ಲಿ ಲಕ್ಷ್ಮಿಯು ಪ್ರಮುಖದೇವತೆಯಾಗಿದ್ದಾಳೆ. ವೇದಗಳ ಕಾಲದಲ್ಲಿ ಅಷ್ಟೇನು ಪ್ರಮುಖ ಸ್ಥಾನ ಹೊಂದಿರದ ಈ ದೇವತೆಯು ಋಗ್ವೇದಕ್ಕೆ ಸೇರಿಸಲಾದ ಒಂದು ಪ್ರಕ್ಷೇಪ ಸ್ತೋತ್ರದಲ್ಲಿ ಶ್ರೀ ಎಂದೂ, ಲಕ್ಷ್ಮಿ ಎಂದು ಕರೆಯಲಾಗಿರುವುದನ್ನು ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ಶ್ರೀ ಮತ್ತು ಲಕ್ಷ್ಮಿಯರು ಭಿನ್ನರೆಂದು, ಶ್ರೀಯು ವೇದಗಳ ಕಾಲದಲ್ಲಿ ಪ್ರಮುಖ ಸ್ಥಾನಹೊಂದಿದ್ದಳೆಂದು ಗುರುತಿಸಲಾಗಿದೆ. ಬ್ರಾಹ್ಮಣ ಹಾಗೂ ಮಹಾಭಾರತ ಕಾಲದಲ್ಲಿಯು ಸಹ ಭಿನ್ನರೆಂದು ತೋರುತ್ತದೆ. ಮಹಾಭಾರತದ ಅರಣ್ಯಪರ್ವದಲ್ಲಿ ಇಂದ್ರಾಣಿಯ ಜೊತೆಯಲ್ಲಿ ಇಂದ್ರನ ಅರಮನೆಯಲ್ಲಿರುವವಳೆಂದು ಹೇಳಿದ್ದರೆ, ಸಭಾಪರ್ವದಲ್ಲಿ ಲಕ್ಷ್ಮಿಯು ಕುಭೇರನ ಆಸ್ಥಾನದಲ್ಲಿ ನೆಲಸಿರುವವಳೆಂದು ಹೇಳಿದೆ. ಪ್ರಕ್ಷಿಪ್ತ ಪರ್ವವಾದ ಶಾಂತಿಪರ್ವದಲ್ಲಿ ಶ್ರೀ ಹಾಗೂ ಲಕ್ಷ್ಮಿಯರು ಬೇರೆಬೇರೆಯಾಗಿ ಕಂಡುಬಾರದೆ ಒಂದೆಯಾಗಿ ಕಂಡುಬರುತ್ತಾರೆ. ರಾಮಾಯಣದಲ್ಲಿಯೂ ಸಹ ಲಕ್ಷ್ಮಿಯು ವಿಷ್ಣುವಿನ ಪಂಥಕ್ಕೆ ಸೇರದೇ ಇರುವುದು ಕಂಡುಬರುತ್ತದೆ. ರಾವಣನು ಸೀತೆಯನ್ನು ಸೆರೆಹಿಡಿದಾಗ ಅವಳ ರೂಪವನ್ನು ನೋಡಿ "ಶ್ರೀಯೋ ಲಕ್ಷ್ಮಿಯೋ ಹರಿಯೋ ಕೀರ್ತಿಯೋ ಅಥವಾ ಅಪ್ಸರೆಯೋ" ಎಂದು ಆಶ್ಚರ್ಯ ಚಕಿತನಾಗುತ್ತಾನೆ. ಉದ್ಗಾರದಲ್ಲಿ ಬರುವ ಹೆಸರುಗಳು ಭಿನ್ನವೆಂದೇ ತೋರಿಸುತ್ತದೆ.

ಇತಿಹಾಸ ಕಾಲಕ್ಕೆ ಬಂದಾಗ ಲಕ್ಷ್ಮಿಯು ಹಾಗೂ ಶ್ರೀಯರು ಅಭಿನ್ನರಾಗಿ ಕಂಡುಬರುತ್ತಾರಲ್ಲದೆ, ಉಚ್ಚಸ್ಥಾನವು ದೊರಕಿರುವುದನ್ನು ಪ್ರಾಚ್ಯಾವಶೇಷಗಳು ಸಾಬೀತುಪಡಿಸುತ್ತವೆ. ಕುಶಾನರ ಕಾಲದಲ್ಲಿ ಶ್ರೀಲಕ್ಷ್ಮಿಯು ರೂಪವನ್ನು ನಿರ್ದಿಷ್ಟಪಡಿಸಿಕೊಂಡಿದ್ದು, ಪುರಾಣಗಳಲ್ಲಿ ತನ್ನದೆ ಪ್ರಭಾವ ಬೀರಿದ್ದಾಳೆ.

> "though the earliest literary evidence of existance of the goddess lotus - Sri Lakshmi is a late and apocryphal hymn attachaed to the Aryan Corpus of the Rigveda, this mother of the world was actually supreme in India long before the arrival of the conquerors from the North . The occlusion of the Indus civilization together with its goddess queen must have resulted from the arrival of the strictly patriarchal warriou-herdsman and the installation of their patriarchal gods. The Mother was removed from her lotus and Brahma seated in her stead, she herself relegated as in the Sshrine of Vishnu Anant Sayana to the servile position of the Brahmin wife. Nevertheless



ಚಿತ್ರ ೯

in the hearts of the native population her supremacy was maintained and with the gradual merging, through the centuries of the Vedic and Pre-vedic traditions, she returned to her original position of honour.[೯]

ಮೇಲಿನ ಹೇಳಿಕೆಯಲ್ಲಿ ಲಕ್ಷ್ಮಿಯು ಆರ್ಯರ ದೇವತೆಯಲ್ಲ ಎಂಬುದೇ ಪ್ರಧಾನವಾಗಿದೆ. ಕುಮಾರಸ್ವಾಮಿಯವರು ಲಕ್ಷ್ಮಿಯ ಕೈಯಲ್ಲಿರುವ ಕಮಲವು ನೀರು ಮತ್ತು ಫಲವಂತಿಕೆಯ ಸಂಕೇತವಾಗಿದೆ ಎಂದು ಹೇಳುತ್ತಾರೆ. ಅಲ್ಲದೆ ಕರ್ದಮ ಹಾಗೂ ಚಿಕ್ಲಿತ ಇವರು ಲಕ್ಷ್ಮಿಯ ಮಕ್ಕಳೆಂದು ಹೇಳಲಾಗಿದೆ. ಈ ಶಬ್ದಗಳ ಅರ್ಥವು ಮಣ್ಣು ಮತ್ತು ತೇವದ ಮಾನುಷಾಕಾರವೆ ಆಗಿದೆ. ಲಕ್ಷ್ಮಿಯು ಮೂಲತಃ ಕೃಷಿಗೆ ಸಂಬಂಧ ಪಟ್ಟದೇವತೆಯಾಗಿರುವುದು, ಆ ಮೂಲಕ ಸಂಪತ್ತು, ಹೆಸರನ್ನು, ಬೆಳೆಯನ್ನು ತಂದುಕೊಡುವ ದೇವತೆಯಾಗಿದ್ದಾಳೆ. ದಕ್ಷಿಣ ಭಾರತದಲ್ಲಿ ಲಕ್ಷ್ಮಿಯನ್ನು ಕೋಟೆ ರಕ್ಷಣೆಯ ದೇವತೆಯಾಗಿ ಪೂಜಿಸುತ್ತಿದ್ದರು:

the goddess lakshmi is protrayed as the tutelary deity of the city of Madurai in an early Tamil poem also Garland of Madurai. ... the massive city gate with posts carved with images of the goddess and grimy with oblations of ghee poured upon it bring safety and prosperity ot the city.[೧೦]

ಲಕ್ಷ್ಮಿಯು ಮೊದಲು ಕೃಷಿಯನ್ನು ಮಾಡುವವರ ದೇವತೆಯಾಗಿ, ನಂತರದ ಕಾಲದಲ್ಲಿ ರಕ್ಷಣೆಯ ದೇವತೆಯಾಗಿದ್ದಾಳೆ. ಆಕೆ ಭೂಮಿಯಲ್ಲಿ ಬೆಳೆಯುವ ಬೆಳೆಗೆ ಮತ್ತು ಪ್ರಾಣಿಗಳಿಗೆ ಫಲತ್ವವನ್ನು ಕೊಡುವ ದೇವತೆಯಾಗಿದ್ದಾಳೆ. ಅಲ್ಲದೆ ಹಸು, ಕುದುರೆ, ಸಂತಾನ, ಆರೋಗ್ಯ, ಐಶ್ವರ್ಯ, ಬಂಗಾರ, ಕೀರ್ತಿಗಳನ್ನು ದಯಪಾಲಿಸುವ ದೇವತೆ. ಭೂಮಿಯ ಮೇಲಿರುವ ಎಲ್ಲಾ ಜೀವಿಗಳಿಗೆ ತಾಯಿಯಾಗಿದ್ದು,ಆ ಕಾರಣದಿಂದಲೆ ಅವಳಿಗೆ ಕ್ಷಮಾ ಎಂದು ಕರೆಯಲಾಗಿದೆ. ಕ್ಷಮಾ ಎಂದರೆ ಭೂಮಿಯೆಂದೂ ಅರ್ಥವಿದೆ. ಲಕ್ಷ್ಮಿಗೂ ಸಗಣಿಗೂ ಅತ್ಯಂತ ಸಮೀಪದ ಸಂಬಂಧವಿರುವ ಹಾಗೆ ಕಂಡುಬರುತ್ತದೆ. ಲಕ್ಷ್ಮಿಯನ್ನು ಕರೀಶಿಣಿ ಎಂದು ಕರೆಯಲಾಗಿದೆ. ಮಹಾಭಾರತದ ಅನುಶಾಸನ ಪರ್ವದಲ್ಲಿ ಒಂದು ಕತೆ ಬರುತ್ತದೆ. ಅಲ್ಲಿ ಒಮ್ಮೆ ಹಸುಗಳ ದೊಡ್ಡ ಸಮೂಹವೊಂದು ಹುಲ್ಲುಗಾವಲಿನಲ್ಲಿ ಮೇಯುತ್ತಿದ್ದಾಗ ಲಕ್ಷ್ಮಿಅಲ್ಲಿಗೆ ಬಂದಳು. ಆ ಹಸುಗಳನ್ನು ಕಂಡು ಸಂತೋಷಗೊಂಡ ಲಕ್ಷ್ಮಿಯು ಯಾವ ವರಗಳನ್ನು ಬೇಕಾದರೂ ಕೇಳಿಕೊಳ್ಳಿ ಎಂದಳು. ಆದರೆ ಹುಲ್ಲುಮೇಯುವುದರಲ್ಲಿ ತಲ್ಲೀನವಾಗಿದ್ದ ಆ ಹಸುಗಳು ಅವಳ ಮಾತನ್ನು ಕೇಳಿಸಿಕೊಳ್ಳಲಿಲ್ಲ. ಮತ್ತೊಮ್ಮೆ ಲಕ್ಷ್ಮಿಯು ಬಲವಂತಪಡಿಸಿ ಕೇಳಿದಾಗ, ಆ ಹಸುಗಳು ನಮ್ಮ ಶ್ರೇಷ್ಠತೆ ನಮ್ಮ ಸಗಣಿಯಲ್ಲಿಯು

ಉಳಿಯಬೇಕೆಂದು ಕೇಳಿಕೊಂಡವು. ಲಕ್ಷ್ಮಿಯು ಹಾಗೆಯೇ ಆಗಲಿ ಎಂದು ಆಶೀರ್ವದಿಸಿದಳು. ಹಾಗಾಗಿ ಸಗಣಿ ಇಂದಿಗೂ ಮಂಗಳಕರವಾದುದೆಂದು ಪರಿಗಣಿತವಾಗಿದೆ.[೧೧] ಇಲ್ಲಿ ಲಕ್ಷ್ಮಿಗೂ ಮತ್ತು ಸಗಣಿಗೂ ಸಂಬಂಧವನ್ನು ಕಲ್ಪಿಸಿರುವುದನ್ನು ನೋಡಿದರೆ, ಮೂಲತಃ ಜನಪದರು ಆಚರಿಸುವ ಹಟ್ಟಿಯ ಆಚರಣೆಯೇ ಮೂಲವಾಗಿರಬೇಕು. ಹಟ್ಟಿಯ ಆಚರಣೆಯಲ್ಲಿ ಸಗಣಿಯು ಪ್ರಧಾನವಾದ ವಸ್ತುವಾಗಿದೆ. ಅಥವಾ ಇದು ಗೊಬ್ಬರದ ಪ್ರಾಮುಖ್ಯತೆಯನ್ನು ಸೂಚಿಸುವ ಆಚರಣೆಯಾಗಿದೆ. ಒಂದು ಹಂತದಲ್ಲಿ ಅತಂತ್ರ ಸ್ಥಿತಿಯನ್ನು ಎದುರಿಸಬೇಕಾದ ಪರಿಸ್ಥಿತಿಯು ಬಂದಿರಬೇಕು. ಅಂದರೆ, ಮೂಲ ಜನಾಂಗದ ಅನಾಧರಣೆಗೆ ಒಳಗಾಗಿ ನಿಲ್ಲಲು ನೆಲೆಯಿಲ್ಲದಾಗ ಇಂದ್ರನ ಆಶ್ರಯವನ್ನು ಕೇಳಿ ಲಕ್ಷ್ಮಿಯು ಅವನ ಅರಮನೆಯಲ್ಲಿ ಆಶ್ರಯ ಪಡೆದಿದ್ದಳು. ದ್ರಾವಿಡ ದೇವತೆಯಾದ ಲಕ್ಷ್ಮಿಯು ಆರ್ಯರ ದೇವತೆಯಾಗಿದ್ದನ್ನು ಇದು ಸೂಚಿಸುತ್ತಿರಬಹುದು.

ಪಶುಗಳ ಸಗಣಿಯು ಗೊಬ್ಬರವಾಗಿ ಭೂಮಿಯ ಫಲವತ್ತತೆಯನ್ನು ಹೆಚ್ಚು ಮಾಡುತ್ತದೆ ಎಂಬ ವಿಷಯ ಅರಿವೆಗೆ ಬಂದಾಗ ಅದರ ಪ್ರಾಮುಖ್ಯತೆ ಹೆಚ್ಚಾಯಿತು. ಅದರ ಜೊತೆಯಲ್ಲಿಯೇ ಪ್ರಾಣಿಗಳ ಸಾಗಾಣಿಕೆಯು ಅಧಿಕವಾಗಿರಬೇಕು. ಕೃಷಿ ಒಂದು ಕಾಲಕ್ಕೆ ಮನುಷ್ಯನ ಆವಶ್ಯಕತೆಯ ಅಲ್ಪಭಾಗವನ್ನು ಪೂರೈಸುತ್ತಿತ್ತು. ಆವಾಗ ಕೃಷಿಯನ್ನು ಕೈಯಿಂದ ನಡೆಸುತ್ತಿರಬೇಕು. ಆದರೆ ಅದು ಹೆಚ್ಚು ಪ್ರಮಾಣದಲ್ಲಿ ಬಳಕೆಯಾದಾಗ ಪ್ರಾಣಿಗಳು ಅವಶ್ಯಕವಾಗಿರಬೇಕು. ಹೀಗೆ ಪ್ರಾಣಿ ಮತ್ತು ಅವುಗಳ ಉಪ ಉತ್ಪನ್ನಗಳಾದ ಸಗಣಿಯನ್ನು ಉರುವಲು ಮಾಡಲು, ಗೊಬ್ಬರವಾಗಿ ಹೊಲಗಳಿಗೆ ಬಳಕೆ ಹೆಚ್ಚಾದಂತೆ ಅವುಗಳ ಮೇಲಿನ ಧಾರ್ಮಿಕವಾದ ನಂಬಿಕೆಗಳು ಅಧಿಕವಾಗಿರಬೇಕು. ಕಾಮನ ಆಚರಣೆಯು ಇಂತಹ ಆಚರಣೆಯ ಅಂಗವಾಗಿ ಹುಟ್ಟಿಕೊಂಡಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಕಾಮ ಭೂಮಿಗೆ, ಭೂಮಿಯ ಫಲವಂತಿಕೆಗೆ ಕಾರಣವಾಗಿದ್ದಾನೆ. ಅವನನ್ನು ಅವನ ರೂಪದಲ್ಲಿರುವ ಸಗಣಿಯನ್ನು ದಹಿಸಿ ಉಳಿದ ವಸ್ತುವನ್ನು ಹೊಲಗಳಿಗೆ ಚೆಲ್ಲಿದರೆ ಫಸಲು ಹೆಚ್ಚುವುದೆಂದು ಇಂದಿಗೂ ನಂಬುಗೆಯಲ್ಲಿ ಬಂದಿದೆ. ಅಲ್ಲದೆ ಕಾಮ ಸಂತಾನಾಭಿವೃದ್ಧಿಯ ದೇವತೆಯಲ್ಲವೆ.

ಹಟ್ಟಿ ಪೂಜೆ ಅಥವಾ ಹಟ್ಟಿ ಲಕ್ಕಮ್ಮನ ಪೂಜೆಯನ್ನು ಕೂಡಾ ಇಲ್ಲಿ ಗಮನಿಸಿದರೆ ಲಕ್ಷ್ಮಿಗೂ ಇರುವ ಸಂಬಂಧ ಗೊತ್ತಾಗಬಹುದು. ಹಟ್ಟಿಪೂಜೆ ಆದಿಮ ಮಾನವನ ಪೂಜಾ ವಿಧಾನಗಳ ಪಳಯುಳಿಕೆಯಾಗಿ ಕಂಡುಬರುತ್ತದೆ. ಈ ಹಬ್ಬದಲ್ಲಿ ಪ್ರಧಾನವಾಗಿ ಪೂಜೆಗೊಳ್ಳುವುದು ಹಸು ಅಥವಾ ದನಕರುಗಳು ಹಾಗೂ ಸಗಣಿ. ಈ ಸಗಣಿಯನ್ನು ಲಕ್ಕಿಯ ಹೂವಿನಿಂದ ಪೂಜಿಸಲಾಗುತ್ತದೆ. ಲಕ್ಕಿಯ ಗಿಡದಲ್ಲಿ ಲಕ್ಷ್ಮಿಯು ನೆಲಸಿರುತ್ತಾಳೆ ಎಂಬ ನಂಬಿಕೆ ಜನಪದರಲ್ಲಿ ಇಂದಿಗೂ ಇದೆ. ಲಕ್ಕಿಯ ರೂಪವೇ ಲಕ್ಷ್ಮಿಯಾಗಿರುವ ಸಾಧ್ಯತೆಗಳಿವೆ. ಲಕ್ಷ್ಮಿಗೆ ಪದ್ಮಾವತಿ ಎಂದು ಕರೆಯಲಾಗಿದೆಯಲ್ಲವೆ. ಡಾ. ಹಂಪ.ನಾಗರಾಜಯ್ಯನವರು ಪದ್ಮಾವತಿಯನ್ನು ಕುರಿತು ಚರ್ಚಿಸುತ್ತಾ, ಆಕೆ ಲೊಕ್ಕಿ ಅಥವಾ ಲಕ್ಕಿದೇವತೆಯು ವನದೇವತೆ ಹಾಗೂ ವೃಕ್ಷದೇವತೆಯೆಂದು, ಸ್ಥಳೀಯ ದೇವತೆಯಾಗಿದ್ದ

ಲಕ್ಕಿಯು ಪದ್ಮಾವತಿಯ ರೂಪದಲ್ಲಿ ವಿಲೀನವಾದಳೆಂದು ಹೇಳುತ್ತಾರೆ.[೧೨] ಈ ಹಿನ್ನೆಲೆಯಲ್ಲಿ ನೋಡಿದಾಗಲೂ ಸಹ ಲಕ್ಷ್ಮಿಯು ಈ ಮಣ್ಣಿನಲ್ಲಿ ಹುಟ್ಟಿ ಆರ್ಯರ ಪ್ರಭಾವದಿಂದ ವೈದಿಕ ಪರಂಪರೆಗೆ ಸೇರ್ಪಡೆಯಾಗಿದ್ದಾಳೆ. ಶ್ರೀಯು ಮೂಲತಃ ಆರ್ಯರ ದೇವತೆಯಾಗಿದ್ದು, ದ್ರಾವಿಡ ದೇವತೆಯಾದ ಲಕ್ಷ್ಮಿಯೊಡನೆ ಸೇರಿಹೋಗಿದ್ದಾಳೆ.

ಲಕ್ಷ್ಮಿಯನ್ನು ಸಿಂಧೂನಾಗರೀಕತೆಯ ಕಾಲಕ್ಕೆ ತೆಗೆದುಕೊಂಡು ಹೋಗಲಾಗಿದೆ. ಅಲ್ಲಿಕಂಡುಬರುವ ಅಶ್ವತ್ಥ ವೃಕ್ಷಕ್ಕೂ ಲಕ್ಷ್ಮಿಗೂ ಸಂಬಂಧ ಕಲ್ಪಿಸುತ್ತಾರೆ. ಅಶ್ವತ್ಥ ವೃಕ್ಷದ ಎರಡು ಟೊಂಗೆಯ ಮಧ್ಯದಲ್ಲಿ ನಿಂತಿರುವ ಸ್ತ್ರೀಯ ವಿಗ್ರಹವು ಲಕ್ಷ್ಮಿಯವಿಗ್ರಹವಾಗಿರಬೇಕು ಎಂದು ಮೇಕೆಯವರು ಅಭಿಪ್ರಾಯಪಡುತ್ತಾರೆ.[೧೩] ಹಾಗೆಯೆ ಜಾನ್ ಮಾರ್ಷಲ್ ಅವರು ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತರಾದರೂ ಅದು ದೀಪಲಕ್ಷ್ಮಿಯಾಗಿರಬೇಕು ಎನ್ನುತ್ತಾರೆ. ಕಾರಣ ಸ್ತ್ರೀ ವಿಗ್ರಹಗಳ ತಲೆಯ ಮೇಲೆ ಎರಡು ಕಡೆ ಓಲಾಡುವ ಬಟ್ಟಲಗಳನ್ನು ಹೊಂದಿರುವ ವಿಗ್ರಹಗಳನ್ನು ಅವರು ದೀಪಲಕ್ಷ್ಮಿ ಎಂದು ಕರೆದಿದ್ದಾರೆ.[೧೪] ಆದರೆ ಆ ಕಾಲಕ್ಕಾಗಲೆ ಲಕ್ಷ್ಮಿಯ ಆವಿಷ್ಕಾರವಾಗಿತ್ತೇ ಇಲ್ಲವೇ ಎಂಬುದು ಬೇರೆ ವಿಷಯವಾದರೂ ಲಕ್ಷ್ಮಿಯ ಪ್ರಾಚೀನ ರೂಪದ ಪಳಯುಳಿಕೆಯಾಗಿರುವ ಹಾಗೂ ಫಲಸಮೃದ್ಧಿಯ ದೇವತೆಯಾಗಿರುವುದಂತು ದಿಟವಾದುದು.

ಲಕ್ಷ್ಮಿಯ ಉಗಮದ ಬಗೆಗೆ ಪುರಾಣಗಳು ವಿಭಿನ್ನ ರೀತಿಯಲ್ಲಿ ಕಲ್ಪನೆಮಾಡುತ್ತವೆ. ಅದರಲ್ಲಿ ಪ್ರಮುಖವಾದುದೆಂದರೆ, ವಿಷ್ಣುಪುರಾಣ. ಇಲ್ಲಿ ದೇವದಾನವರು ಕ್ಷೀರಸಾಗರವನ್ನು ಮಥಿಸಿದಾಗ ಹದಿನಾಲ್ಕು ವಸ್ತುಗಳು ಹೊರಬಂದವು. ಅದರಲ್ಲಿ ಲಕ್ಷ್ಮಿಯು ಒಬ್ಬಳು. ಹುಟ್ಟುವಾಗಲೇ ಪೂರ್ಣವಾಗಿ ಬೆಳೆದು ಬಂದ ಲಕ್ಷ್ಮಿಯು ಕಾಂತಿಯುಕ್ತಳಾಗಿದ್ದಳು. ಅವಳನ್ನು ನೋಡಿದ ಋಷಿಗಳು ಸಂತೋಷದಿಂದ ಕುಣಿದಾಡಿದರು. ಸುರನದಿಗಳು ಲಕ್ಷ್ಮಿಯೊಡನೆ ಸೇರಿಕೊಂಡವು. ಆನೆಗಳು ಕುಂಬದಿಂದ ನೀರನ್ನು ಸಿಂಪಡಿಸಿದವು. ಶಿವನು ಲಕ್ಷ್ಮಿಯನ್ನು ವರಿಸಲು ಮುಂದೆ ಬಂದ ಆದರೆ, ಲಕ್ಷ್ಮಿಯು ವಿಷ್ಣುವಿನ ವಕ್ಷಸ್ಥಲವನ್ನು ಅಲಂಕರಿಸಿದಳು.

ಲಕ್ಷ್ಮಿಯು ಮೂಲತಃ ಶೈವ ಪರಂಪರೆಗೆ ಸೇರಿದವಳಾಗಿರಬೇಕು. ಯಾಕೆಂದರೆ ಲಕ್ಷ್ಮಿಯನ್ನು ಪ್ರಧಾನವಾಗಿ ಪೂಜಿಸುವ ಲಕ್ಷ್ಮಿತೀರ್ಥಗಳಲ್ಲಿ ಎಲ್ಲಿಯೂ ವಿಷ್ಣುಪರವಾದ ಅಂಶಗಳು ಕಂಡುಬರುವುದಿಲ್ಲ. ಇಲ್ಲಿ ಕಂಡುಬರುವ ವಿಗ್ರಹಗಳು ಶಾಕ್ತಪರಂಪರೆಗೆ ಸೇರಿದವುಗಳಾಗಿವೆ.[೧೫] ದ್ರೌಪದಿಯು ಶಕ್ತಿಯ ಅಂಶವಾಗಿದ್ದು, ಅವಳನ್ನು ಲಕ್ಷ್ಮಿಯ ಅವತಾರವೆನ್ನಲಾಗಿದೆ. ಅಲ್ಲದೆ ಸ್ಕಂದನಿಗೂ ಲಕ್ಷ್ಮಿಗೂ ಹತ್ತಿರದ ಸಂಬಂಧವನ್ನು ಕಲ್ಪಿಸಲಾಗಿದೆ. ಸ್ಕಂದ ಇಂದ್ರನ ನಂತರದ ಪ್ರಬಲ ದೇವತೆಯಾಗಿ ಪುರಾಣಗಳ ಕಾಲಕ್ಕೆ ಕಂಡುಬರುತ್ತಾನೆ. ಮೂರು ಲೋಕಗಳ ಪ್ರಬಲ ದೈವವಾಗಿದ್ದ, ಹೋರಾಟದ ಸಂಕೇತವಾಗಿದ್ದ ಇಂದ್ರನು ತನ್ನ ಸ್ಥಾನವನ್ನು ಸ್ಕಂದನಿಗೆ ಬಿಟ್ಟುಕೊಟ್ಟನು. ನಂತರದಲ್ಲಿ ಸ್ಕಂದನು ಎಲ್ಲಾ ದೈವಗಳ ಒಡೆಯನೆಂದು ಅಭಿಷಕ್ತನಾಗಿ ಹೊರಹೊಮ್ಮಿದನು. ಅಲ್ಲದೆ ಸ್ಕಂದ



ಚಿತ್ರ ೧೦





ಚಿತ್ರ ೧೧, ೧೨

ಶಿವನ ಗಣಕ್ಕೆ ಸೇರಿದ ದೇವತೆ, ಮಿಗಿಲಾಗಿ ಅವನ ಪುತ್ರನೆಂದು ಖ್ಯಾತನಾಗಿದ್ದಾನೆ. ಸ್ಕಂದನು ದೇವಸೇನಾಳನ್ನು ಮದುವೆಯಾದ. ಈ ದೇವಸೇನಾಳನ್ನು ಶಷ್ಠಿ, ಲಕ್ಷ್ಮಿ, ಆಶಾ, ಸುಖಪ್ರದಾ, ಸಿನಿವಾಲಿ, ಕುಹೂ, ಅಪರಾಜಿತೆ ಮುಂತಾಗಿ ಮಹಾಭಾರತದ ಅರಣ್ಯಪರ್ವದಲ್ಲಿ ಕರೆಯಲಾಗಿದೆ. ಹೀಗೆ ಇಂದ್ರ, ಕುಬೇರ, ಸ್ಕಂದ ದೈವಗಳೊಡನೆ ಸಂಬಂಧವನ್ನು ಹೊಂದಿರುವುದು ಮೊದಲ ಭಾಗದ ಸಾಹಿತ್ಯದಲ್ಲಿ ಕಂಡುಬರುತ್ತದೆ. ನಂತರದ ಸಾಹಿತ್ಯದಲ್ಲಿ ಮಾತ್ರ ವಿಷ್ಣುವಿನೊಡನೆ ಸೇರಿಕೊಂಡಾಗ ಅವಳಿಗೆ ಒಂದು ನಿರ್ಧಿಷ್ಟವಾದ ಸ್ಥಾನಸಿಕ್ಕಿರುವುದು. ಮೊದಲ ಕಾಲಘಟ್ಟದಲ್ಲಿ ವೈಷ್ಣವ ಸಾಂಪ್ರದಾಯವು ಸ್ತ್ರೀಗೆ ಪ್ರಮುಖವಾದ ಸ್ಥಾನವನ್ನು ಕೊಟ್ಟಿರಲಿಲ್ಲವೆಂದೇ ತೋರುತ್ತದೆ. ಅಲ್ಲದೆ ಅದು ಹೆಚ್ಚು ಸಾಂಪ್ರದಾಯಿಕವಾಗಿ ಗಡುಸುತನವನ್ನು ತೋರಿಸುತ್ತಾ ಬಂದಿತು. ವೈಷ್ಣವ ಪಂಥದಲ್ಲಿ ಏಕದೇವತಾ (Monotheistic) ಪರಿಕಲ್ಪನೆಯೇ ಪ್ರಧಾನವಾದುದು.ಇಲ್ಲಿ ವಿಷ್ಣುವೇ ಪ್ರಧಾನ. ಉಳಿದ ಎಲ್ಲವು ಅವನ ಅಂಶಗಳು. ಆ ಕಾರಣದಿಂದ ಶಾಕ್ತಪರಂಪರೆಯಲ್ಲಿ ಬರುವ ಮಧ್ಯ ಮಾಂಸ ಮೈಥುನದಂತಹ ಆಚರಣೆಗಳ ಬಗೆಗೆ ಅದು ಎಂದೂ ಸಹಮತ ಹೊಂದಿರಲಿಲ್ಲ. ಆ ಕಾರಣದಿಂದಲೂ ಅದು ಶಕ್ತಿಯ ಆರಾಧನೆಯನ್ನು ದೂರವಿಟ್ಟಿತ್ತು. ಎಸ್.ಎಸ್. ಭಟ್ಟಾಚಾರ್ಯ ಅವರು ಹೇಳುವಂತೆ :

> Vaisnavism was not very successful in bringing Shaktism close alliance with it. This was due to the fact that Vaisnavism faild to embace within itself all the tribal elements associated with Mother Goddess cult with Saisvism could do no account of its popular character. The fearful forms of the goddess, the cult of blood and wine, the ritual of sex and many other allied practies could not suit the Vaisnavit religious approch. [೧೭]

ಲಕ್ಷ್ಮಿ ಪೂಜೆಯಲ್ಲಿ ಹಾಗೂ ಗ್ರಾಮಗಳ ಆಚರಣೆಯಲ್ಲಿ ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿರುವುದನ್ನು ಕಾಣಬಹುದು.ಲಕ್ಷ್ಮಿಯ ರೂಪ ನಿರ್ದೇಶನ ಮಾಡುವಾಗ ಅವಳು ಬಂಗಾರದಂತೆ ಹೊಳೆಯುವ ಹೊಂಬಣ್ಣದ ದೇಹವನ್ನು, ಜಿಂಕೆಯಂತೆ ಸೊಗಯಿಸುವ ರೂಪವನ್ನು, ಬಂಗಾರ ಬೆಳ್ಳಿಯ ಮಾಲೆಗಳನ್ನು ತೊಟ್ಟ ಚಂದ್ರನಂತೆ ಕಂಗೊಳಿಸುವ ದೇವತೆಯೆಂದು ಶ್ರೀ ಸೂಕ್ತ ವರ್ಣಿಸುತ್ತದೆ.

> ಹಿರಣ್ಯ ವರ್ಣಾಂ ಹರೀಣಿಂ ಸುವರ್ಣಾ ರಜತ ಸ್ರಜಾಂ
> ಚಂದ್ರಾಂಹಿರಣ್ಮಯೀಂ ಜಾತವೇದೋ ಮಮಾವಹ

ಕಮಲಕ್ಕೂ ಲಕ್ಷ್ಮಿಗೂ ನಿಕಟ ಸಂಬಂಧವಿದೆ ಎಂಬುದನ್ನು ಹಿಂದೆ ನೋಡಿದ್ದೇವೆ. ಲಕ್ಷ್ಮಿಯನ್ನು ಪದ್ಮದ ಸಂಕೇತರೂಪದಲ್ಲಿ ನೋಡಲಾಗಿದೆ. ಕಮಲ ಫಲವಂತಿಕೆ ಹಾಗೂ ಸೌಭಾಗ್ಯದ ಸಂಕೇತ. ಆದ್ದರಿಂದಲೇ

ಲಕ್ಷ್ಮಿಯನ್ನು ಕಮಲದಲ್ಲಿ ಹುಟ್ಟಿದವಳು, ಕಮಲದಮೇಲೆ ಕುಳಿತಿರುವವಳು, ಕಮಲದಂತ ತೊಡೆಗಳನ್ನು ಉಳ್ಳವಳು, ಕಮಲದ ಕಣ್ಣುಳ್ಳವಳು ಎಂದೆಲ್ಲಾ ಸ್ತುತಿಸಲಾಗಿದೆ. ಕಮಲವಿಲ್ಲದೆ ಲಕ್ಷ್ಮಿಯನ್ನು ಹಿಂದೂ ಪರಂಪರೆಯು ಕಲ್ಪಿಸಿಕೊಂಡಿದ್ದು ತುಂಬಾ ಅಪರೂಪ.

ಪದ್ಮಪ್ರಿಯೇ ಪದ್ಮಿನಿ ಪದ್ಮಹಸ್ತೇ ಪದ್ಮಾಲಯೇ ಪದ್ಮದಳಾಯತಾಕ್ಷಿ
ವಿಶ್ವಪ್ರಿಯೇ ವಿಶ್ವಮನೋನುಕೂಲೇ ತ್ವತ್ಪಾದಪದ್ಮಂ ಮಯಿ ಸನ್ನಿದತ್ಸ್ವ

ಎಂದು ಲಕ್ಷ್ಮಿಯನ್ನು ಸ್ತುತಿಸಲಾಗಿದೆ.[೧೭] ಲಕ್ಷ್ಮಿಯನ್ನು ಅಭಿಲಶಿತಾರ್ಥ ಚಿಂತಾಮಣಿಯು ದ್ವಿಭುಜಾಯಾಗಿ ಚಿತ್ರಿಸುತ್ತದೆ. ಕಮಲ ಹಾಗೂ ಶ್ರೀಫಲವನ್ನು ಕೈಯಲ್ಲಿ ಹಿಡಿದಿರುತ್ತಾಳೆ. ಶಿಲ್ಪರತ್ನದ ಪ್ರಕಾರ ಲಕ್ಷ್ಮಿಯು ಶ್ವೇತವರ್ಣದವಳಾಗಿದ್ದು, ದ್ವಿಭುಜೆಯಾಗಿರುವಳು. ಅತ್ಯಂತ ಬೆಲೆಬಾಳುವ ಆಭರಣಗಳನ್ನು ತೊಟ್ಟಿರುತ್ತಾಳೆ. ವಿಷ್ಣುವಿನ ಜೊತೆಯಲ್ಲಿ ಇದ್ದರೆ ಮಾತ್ರ ಎರಡು ಕೈಗಳನ್ನು ಹೊಂದಿರುತ್ತಾಳೆ. ಸ್ವತಂತ್ರವಾಗಿ ಬಂದರೆ ಮಾತ್ರ ಚತುರ್ಭುಜೆ ಅಥವಾ ಅಷ್ಟಭುಜೆಯಾಗಿದ್ದು, ಶಂಕ, ಗಧಾ, ಪದ್ಮ, ಖೇಟಕ, ಮಾತುಲಿಂಗ, ಶ್ರೀಫಲ ಮುಂತಾದವುಗಳನ್ನು ಕೈಯಲ್ಲಿ ಹಿಡಿದಿರುತ್ತಾಳೆ. ಪರ್ಯಂಕಾಸನ ಅಥವಾ ಪದ್ಮಾಸನದಲ್ಲಿ ಕುಳಿತಿರುವುದು ಸಾಮಾನ್ಯ. ಆದರೂ ಕೆಲವು ಬಾರಿ ನಿಂತಿರುವಂತೆ ಹೇಳಲಾಗಿದೆ.

ಮಹಾಲಕ್ಷ್ಮಿ, ಧನಲಕ್ಷ್ಮಿ, ಧೈರ್ಯಲಕ್ಷ್ಮಿ, ವೀರಲಕ್ಷ್ಮಿ, ವಿದ್ಯಾಲಕ್ಷ್ಮಿ, ಸಂತಾನಲಕ್ಷ್ಮಿ, ಮತ್ತು ಭಾಗ್ಯಲಕ್ಷ್ಮಿ ಎಂದು ಅಷ್ಟಲಕ್ಷ್ಮಿಯರನ್ನು ಕಲ್ಪಿಸಿಕೊಳ್ಳಲಾಗಿದೆ. ಇದಲ್ಲದೆ ಲಕ್ಷ್ಮಿಯನ್ನು ಹಲವಾರು ರೂಪಗಳಲ್ಲಿ ಕಲ್ಪಿಸಿಕೊಳ್ಳಲಾಗಿದೆ. ಬ್ರಹ್ಮಲಕ್ಷ್ಮಿ, ಶ್ರೀಲಕ್ಷ್ಮಿ, ಗಜಲಕ್ಷ್ಮಿ, ಮುಂತಾದವನ್ನು ಹೆಸರಿಸಬಹುದು. ಇವರು ಮನುಷ್ಯನ ಭೌತಿಕ ಗೆಲುವನ್ನು ತಂದುಕೊಡುವವರು. ಹಾಗೂ ಅದೃಷ್ಟ ಮತ್ತು ಸಂಪತ್ತನ್ನು ಸಂಪಾದಿಸಿಕೊಡುವವಳಾಗಿದ್ದಾಳೆ. ಲಕ್ಷ್ಮಿಯ ಇನ್ನೊಂದು ರೂಪವೆಂದರೆ ಅಲಕ್ಷ್ಮಿಯದು. ಈ ಅಲಕ್ಷ್ಮಿಯ ರೂಪವು ಪ್ರಾಚೀನ ಪರಂಪರೆಯಾಗಿದೆ. ಅಲಕ್ಷ್ಮಿಯನ್ನು ಜ್ಯೇಷ್ಠಾಲಕ್ಷ್ಮಿ, ನಿರ್ಭಾಗ್ಯ ಲಕ್ಷ್ಮಿ, ದರಿದ್ರ ಲಕ್ಷ್ಮಿ, ಮೂದೇವಿ, ಕಾಲಾಡಿ ಮುಗುಡಿ, ತೌವ್ವೆ ಎಂದು ಕರೆಯುತ್ತಾರೆ. ಕೈಯಲ್ಲಿ ಕಸಬರಿಗೆ, ಉದ್ದನೆಯ ಮೂಗು, ಇಳಿಬಿದ್ದಿ ತುಟಿಗಳು, ಸೋತು ಜೋಲಾಡುವ ಸ್ತನಗಳು, ಎದ್ದುಕಾಣುವ ಹೊಟ್ಟೆ, ಒಂದು ಕೈಯಲ್ಲಿ ಕಮಲದ ಹೂವು ಹಿಡಿದಿರುತ್ತಾಳೆ. ಆಕೆಯವಾಹನವು ಕತ್ತೆ, ಧ್ವಜ ಕಾಗೆಯದ್ದಾಗಿದೆ.[೧೮] ಇದು ಅಲಕ್ಷ್ಮಿಯ ರೂಪವಾಗಿದೆ. ಇವಳು ಕಷ್ಟಗಳನ್ನು ತರುವ ದೇವತೆ, ದೀಪ ಹಚ್ಚದ ಮನೆಗೆ ನುಗ್ಗುವವಳಾಗಿದ್ದಾಳೆ.

ಲಕ್ಷ್ಮಿಯ ಇನ್ನೊಂದು ಪ್ರಸಿದ್ಧವಾದ ರೂಪವೆಂದರೆ ಗಜಲಕ್ಷ್ಮಿಯದ್ದು. ಇತಿಹಾಸದಲ್ಲಿ ಲಕ್ಷ್ಮಿಗೆ ಆನೆಗಳು ಸೊಂಡಿಲಿನಿಂದ ನೀರನ್ನು ಹಾಕುತ್ತಿರುವಂತೆ ಚಿತ್ರಿಸಿರುವ ವಿಗ್ರಹಗಳು ಕ್ರಿ.ಪೂ. ಮೂರನೆಯ ಶತಮಾನದಿಂದ


ದೊರಕುತ್ತವೆ. ಗಜಲಕ್ಷ್ಮಿಯ ಈ ವಿಗ್ರಹಗಳು ಜನಪ್ರಿಯವಾಗಿರುವುದು ಅಂದಿನ ವ್ಯಾಪಾರಿಗಳ ಇಷ್ಟದೈವವಾಗಿರುವುದರಿಂದ ನಾಣ್ಯಗಳ ಮೇಲೆ ಮುದ್ರಿತವಾಗಿರುವುದನ್ನು ಕಾಣಬಹುದು. ಅಮರಾವತಿಯಲ್ಲಿ ದೊರಕಿರುವ ಶ್ರೀ ಲಕ್ಷ್ಮಿಯ ವಿಗ್ರಹವು ದಕ್ಷಿಣ ಭಾರತದ ಅತೀ ಪ್ರಾಚೀನ ವಿಗ್ರಹವಾಗಿದೆ ಎನ್ನುತ್ತಾರೆ ಕುಮಾರಸ್ವಾಮಿಯವರು. ಲಕ್ಷ್ಮಿಯ ರೂಪವು ಗುಪ್ತರ ಕಾಲದಲ್ಲಿ ಪ್ರಭುದ್ದತೆಯನ್ನು ಪಡೆಯಿತು. ಸುಮಾರು ಕ್ರಿ.ಪೂ. ೨ ಹಾಗೂ ೧ನೆಯ ಶತಮಾನದಲ್ಲಿ ಬರ್ಹುತ್, ಬೋಧಗಯಾ, ಸಾಂಚಿ, ಮುಂತಾದ ಕಡೆ ಲಕ್ಷ್ಮಿ ಕಂಡುಬರುತ್ತವೆ. ಬರ್ಹುತ್‌ನಲ್ಲಿ ಕಂಡುಬರುವ ಲಕ್ಷ್ಮಿಯ ವಿಗ್ರಹವನ್ನು ಶ್ರೀ ರೂಪವಾಗಿರುವ ಶ್ರೀಮದೇವತಾ ರೂಪದಲ್ಲಿ ಬಿಂಬಿಸಲಾಗಿದೆ. ಸಾಂಚಿಯಲ್ಲಿ ಕಮಲಾಲಯ ರೂಪದಲ್ಲಿ ಬಿಡಿಸಲಾಗಿದೆ.ಕ್ರಿ.ಪೂ. ಎರಡು ಶತಮಾನಗಳ ಹಿಂದೆಯೇ ಗಜಲಕ್ಷ್ಮಿಯನ್ನು ಬಾಗಿಲುವಾಡಗಳಲ್ಲಿ ಬಿಡಿಸಲಾಗಿದೆ. ಆನೆ ಮತ್ತು ಕುಂಭಗಳು ಮೋಡ ಹಾಗೂ ಮಳೆಯನ್ನು ಸೂಚಿಸುವ ಚಿನ್ಹೆಗಳಾಗಿವೆ.

೪.೧.೩. ದುರ್ಗಾ

ಭಾರತದ ಮಾತೃದೇವತಾ ಆರಾಧನೆಯಲ್ಲಿ ಅತ್ಯುಚ್ಛ ಸ್ಥಾನವನ್ನು ಮುಟ್ಟಿದ ಹಾಗೂ ಗಾಢ ಪ್ರಭಾವ ಬೀರಿದ ದೇವತೆ ಎಂದರೆ ದುರ್ಗಾ. ಶಿವನ ಆರಾಧನೆಯನ್ನು ಸಹ ಒಂದ ಹಂತದಲ್ಲಿ ಹಿಮ್ಮೆಟ್ಟಿಸುವಂತ ಶಕ್ತಿಯನ್ನು ಈ ಶಕ್ತಿ ಆರಾಧನೆ ಹೊಂದಿದೆ ಎಂದರೆ ಅತಿಶಯೋಕ್ತಿಯೇನಲ್ಲ. ಗ್ರಾಮದೇವತೆಗಳ ಸ್ವರೂಪದಲ್ಲಿಯೂ ದುರ್ಗೆಯ ರೂಪವಡಗಿದ್ದರೂ ಅದು ಶಿಷ್ಟೀಕರಣಗೊಂಡು ಅವತಾರಗಳ ರೂಪದಲ್ಲಿ ಮರು ಸೃಷ್ಟಿಗೊಂಡಿರುವುದು ಒಂದು ರೀತಿಯ ವಿಸ್ಮಯ ಹುಟ್ಟಿಸುತ್ತದೆ. ಈ ರೀತಿಯ ವೈವಿಧ್ಯತೆ ಬೇರೆಯ ಯಾವುದೇ ದೇವತೆಗಳಿಗೆ ಇಲ್ಲ. ಶಕ್ತಿಯ ರೂಪವನ್ನು ಹಲವಾರು ರೀತಿಯಲ್ಲಿ ಹೇಳಲಾಗಿದೆ. ಅದು ದುರ್ಗಾ ಆಗಿರಬಹುದು ಅಥವಾ ಪಾರ್ವತಿ,ಗೌರಿ, ಕಾಳಿ, ಮಹಿಷಮರ್ದಿನಿಯಾಗಿರಬಹುದು. ನಾನಾ ರೂಪಗಳಿಂದ ಪೂಜಿಸಿದರು ಅದರ ಹಿಂದೆ ಇರುವ ಶಕ್ತಿ ಮಾತ್ರ ಒಂದೇ ಆಗಿದೆ.

ದುರ್ಗೆಯು ತನ್ನ ರೂಪವನ್ನು ಸಾಕಾರಗೊಳಿಸಿಕೊಂಡಿದ್ದು 'ಮಹಾಭಾರತ' ಹಾಗೂ 'ಹರಿವಂಶ'ಗಳಲ್ಲಿ ಬರುವ ಸ್ತುತಿಗಳಲ್ಲಿ. ಅಲ್ಲಿಯವರೆಗೆ ದುರ್ಗೆಯು ವೈದಿಕ ರಂಗವನ್ನು ಪ್ರವೇಶಿಸುವ ಅವಕಾಶ ಸಿಕ್ಕಿರಲಿಲ್ಲ. ಈ ಎರಡು ಕಾವ್ಯಗಳಲ್ಲಿ ಸಿಕ್ಕ ಅವಕಾಶವು ಸಹ ಕ್ಷುಲ್ಲಕ ಹಾಗೂ ಕ್ರೂರ ರೂಪದ ಹಿನ್ನೆಲೆಯಲ್ಲಿಯೆ. ಆದರೆ ನಂತರದ ಕಾಲಕ್ಕೆ ಸ್ವತಂತ್ರವಾದ ಅಸ್ತಿತ್ವವನ್ನು ಹಾಗೂ ಕೃತಿಗಳನ್ನು ಹೊಂದಿದ ದೇವತೆಯಾಗಿದ್ದಾಳೆ.

ಉಮಾ, ಗೌರಿ, ದುರ್ಗೆಯರ ಉಲ್ಲೇಖವು ಹಲವಾರು ಕಡೆ ಬರುವುದನ್ನು ಹಿಂದೆ ನೋಡಿದ್ದೇವೆ. ಅದು ಮಹಾಭಾರತವಾಗಿರಬಹುದು, ಪುರಾಣಗಳಾಗಿರಬಹುದು ಅಥವಾ ಕಾವ್ಯವಾಗಿರಬಹುದು ಇಲ್ಲಿ ದುರ್ಗೆಯ ರೂಪ



ಚಿತ್ರ ೧೩



ಚಿತ್ರ ೧೪

ಅಂತಿಮವಾದ ಸ್ವರೂಪವನ್ನು ಹೊಂದಿದ್ದು, ಈ ಕಾಲದಲ್ಲಿ. ಸುಮಾರು ಕ್ರಿ.ಶ. ಆರಂಭದ ಕಾಲಕ್ಕಾಗಲೆ ಶಾಕ್ತಪರಂಪರೆಯು ರೂಪುಪಡೆಯುತ್ತಿತ್ತು. ಉಮಾ ರೂಪದ ದೇವತೆಯು ಮಧ್ಯಕಾಲದ ವೈದಿಕ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುತ್ತಳಾದರೂ ಪುರಾಣ ಹಾಗೂ ಕಾವ್ಯಗಳ ಕಾಲಕ್ಕೆ ಬಂದಾಗ ತನ್ನ ರೂಪವನ್ನು ವಿಸ್ತರಿಸಿಕೊಳ್ಳುತ್ತಾಳೆ. ಹಿಮವಂತ ಹಾಗೂ ಮೇನೆಯರ ಮಗಳಾದ ಉಮಾ, ವೈದಿಕ ರುದ್ರನ ಹೆಂಡತಿಯಾಗಿದ್ದಾಳೆ. ಉಮೆಯನ್ನು ಪಾರ್ವತಿ ಎಂದೂ ರಾಮಾಯಣದಲ್ಲಿ ಕರೆಯಲಾಗಿದೆ (೧.೩೬.೨೧). ಶೈಲರಾಜಪುತ್ರಿಯಾದ ಪಾರ್ವತಿಯನ್ನು ಗಿರಿಪುತ್ರಿ, ಗಿರಿರಾಜತನಯಾ, ಗಿರಿರಾಜಪುತ್ರಿ, ಶೈಲಸುತೆ, ಕನ್ಯಾ, ಹೀಗೆ ಅನೇಕ ಹೆಸರುಗಳಿಂದ ರಾಮಾಯಣದಲ್ಲಿ ಕರೆಯಲಾಗಿದೆ. ಅಂತಯೇ ಮಹಾಭಾರತದಲ್ಲಿಯೂ ಸಹ ಪಾರ್ವತಿ, ಮಾಹೇಶ್ವರಿ, ರುದ್ರಾಣಿ, ಗೌರಿ, ಆರ್ಯಾ, ಅಂಬಿಕಾ, ರುದ್ರಪತ್ನಿ, ಮಹಾಭೀಮ, ರುದ್ರಾಣಿ, ಹಾಗೂ ವಿಶೇಷವಾಗಿ ದುರ್ಗಾ ಎಂದು ಇನ್ನೂ ಹಲವಾರು ನಾಮಗಳಿಂದ ಉಲ್ಲೇಖಿತವಾಗಿದ್ದಾಳೆ. ಇಲ್ಲಿ ದುರ್ಗೆಯನ್ನು ರುದ್ರಪತ್ನಿ ಮಹಾದೇವಪತ್ನಿ ಎಂದು ಕರೆಯಲಾಗಿರುವುದನ್ನು ಗಮನಿಸಿದರೆ ಆ ಕಾಲಕ್ಕಾಗಲೇ ಶಿವನ ಪರಿವಾರ ದೇವತೆಯಾಗಿ ಪರಿವರ್ತನೆಯನ್ನು ಹೊಂದಿದ, ಹಾಗೂ ಕ್ಷುಲ್ಲಕ ದೇವತೆಗಳೆಂದು ಕರೆಯಿಸಿಕೊಳ್ಳುವ ದೇವತೆಗಳು ಶಿವನೂ ಕೂಡಾ ಹೊಂದಿದ್ದ. ಹಾಗೆ ನೋಡಿದರೆ, ಶಿವನು ಸಹ ಆರ್ಯರ ದೇವತೆಯೇನಲ್ಲ. ಅವನು ಈ ನೆಲದ ಆದಿಮ ಪುರುಷನೆ ಆಗಿದ್ದಾನೆ. ಮೂಲತಃ ಕೇಡಿನ ದೇವತೆಯಾಗಿರಬಹುದಾದ ಇವರು ತಮ್ಮ ಸುತ್ತ ರಕ್ತವನ್ನು ಕೇಳುವ ದೇವತೆಗಳ ಸಮೂಹವನ್ನು ಹೊಂದಿದಂತೆ ಕಾಣುತ್ತದೆ. ಅಂತಹ ದೇವತೆಗಳಲ್ಲಿ ದುರ್ಗಾ, ಅಂಬಿಕಾ, ಮುಂತಾದ ದೇವತೆಗಳನ್ನು ಹೆಸರಿಸಬಹುದು.

ಮಹಾಭಾರತದ ವಿರಾಟ ಹಾಗೂ ಭೀಷ್ಮ ಪರ್ವಗಳಲ್ಲಿ ಬರುವ ಸ್ತುತಿಗಳು ಆದಿಮ ಶಕ್ತಿಯ ಸ್ವರೂಪವೇ ಆಗಿವೆ. ವಿರಾಟಪರ್ವದಲ್ಲಿ ಯುಧಿಷ್ಠರ ದೇವಿಯನ್ನು ಸ್ತುತಿಸಿದರೆ, ಭೀಷ್ಮ ಪರ್ವದಲ್ಲಿ ಅರ್ಜುನ ಜಯವನ್ನು ದೊರಕಿಸಿಕೊಡುವಂತೆ ತ್ರಿಭುವನೇಶ್ವರಿ ದೇವಿ ದುರ್ಗಾಳನ್ನು ಸ್ತುತಿಸುತ್ತಾರೆ. ಮಹಾಭಾರತದಲ್ಲಿ ಸುಮಾರು ನೂರಾತೊಂಬತ್ತು ದೇವತೆಯ ಹೆಸರುಗಳು ದೊರಕುತ್ತವೆ ಎನ್ನಲಾಗಿದೆ. ಅವುಗಳಲ್ಲಿ ಹಲವಾರು ನಾಮಗಳು ಸ್ಥಳಿಯ ಬುಡಕಟ್ಟುಗಳಲ್ಲಿ ಕಂಡುಬರುವ ಹೆಸರುಗಳಾಗಿವೆ. ಅಲ್ಲದೆ ಅವುಗಳೆಲ್ಲವು ಒಂದೇ ರೂಪವಾದ ದುರ್ಗೆಯಲ್ಲಿ ಐಕ್ಯವಾಗುತ್ತವೆ. ಆರ್ಯಾ, ಕಪಾಲಿ,ಕರಾಣಿ, ಕಾತ್ಯಾಯಿನಿ, ಕಾಪಾಲಿಕಾ, ಕುಮಾರಿ, ಕೈಟಭನಾಶಿನಿ, ಕಾಳಿ, ಕೋಕಮುಖಾ, ಕೌಷಿಕಾ, ಚಂಡಾ, ಚಂಡಿ, ಜಯಾ, ಜಾಟವೇದಿನಿ, ತಾರಿಣಿ, ಬ್ರಹ್ಮವಿದ್ಯಾ, ಮಂದರವಾಸಿನಿ, ಮಹಾಕಾಳಿ, ಮಹಾದೇವಿ, ಮಹಿಷಾಸುರಮರ್ದಿನಿ, ವಿಜಯ, ವರವರ್ಣಿನಿ, ವಿರೂಪಾಕ್ಷಿ, ಶಾಕಾಂಬರಿ, ಸ್ಕಂದಮಾತಾ, ಹಿರಣ್ಯಾಕ್ಷಿ, ಹೀಗೆ ಅನೇಕ ಹೆಸರುಗಳು ಇಲ್ಲಿ ಉಲ್ಲೇಖವಾಗಿರುವುದನ್ನು ನೋಡಬಹುದು. 'ಹರಿವಂಶ'ದ "ಆರ್ಯಸ್ತವ"ದಲ್ಲಿ ದೇವಿಯನ್ನು ವಿಂದ್ಯಾವಾಸಿನಿ ದೇವಿ ಎಂದೇ ಕರೆಯಲಾಗಿದೆ.

(ಹರಿವಂಶ, ೨.೩೭) ಅಲ್ಲದೆ ಭೂತಮಾತಾ, ಭೂತಪ್ರಿಯಾ ಎಂದು ದುರ್ಗೆಯನ್ನು ಕರೆದಿದ್ದು, ಇವಳಿಗೆ ಮಧ್ಯ, ಮಾಂಸ ಹಾಗೂ ನರಬಲಿ, ಪ್ರಾಣಿ ಬಲಿಯನ್ನು ಕೊಟ್ಟು ತೃಪ್ತಿಪಡಿಸಲಾಗುತ್ತಿತ್ತು ಎಂದು ಹರಿವಂಶದಲ್ಲಿ ಉಲ್ಲೇಖವಾಗಿದೆ. ದೇವಿಯನ್ನು "ಶಬರೈರ್ಬರ್ಬರಶ್ಚೈವ ಪುಳಿಂದೈಶ್ಚ ಸುಪೂಜಿತಾ ಎಂದು ಶಬರ, ಬರ್ಬರ ಹಾಗೂ ಪುಳಿಂದ ಎಂಬ ಬುಡಕಟ್ಟುಗಳ ಜನರು ಪೂಜಿಸುವ ದೇವತೆಯೆಂದು ಕರೆಯಲಾಗಿದೆ. ಡಾ.ಚಟ್ಟೋಪಾದ್ಯಾಯ ಅವರು ಹೇಳುವಂತೆ :

> The association of the goddess with the Vindhyas region is interesting, for the range was the home of the various Proto-Austroloid tribes, while else where the goddess is expressely associated with the Sabaras and the Pulindas who lived on the same range. The description clearly shows that a Mother Goddess of the Proto-Austroloid tribes was now being merged with the great Aryan Mother-Goddess, and the Saktas were imbibing un-Aryan habits.[೦೯]

ಹರಿವಂಶದಂತೆಯೆ ಬಾಣಭಟ್ಟನ ಚಂಡಿಶತಕದಲ್ಲಿಯು ದುರ್ಗೆಯನ್ನು ವಿಂಧ್ಯಾವಾಸಿನಿ ದುರ್ಗಾ ಎಂದು, ವಾಕ್ಪತಿಯು ಕೂಡಾ ಗೌಡಪ್ರದೇಶದ ವಿಂದ್ಯಾಪರ್ವತದಲ್ಲಿ ವಾಸಿಸುವವಳು ಎಂದಿದ್ದಾನೆ. ಇನ್ನೊಂದು ಕಡೆ ಕಾಂತಾರವಾಸಿನಿದೇವಿ, ಕಾಡಿನಲ್ಲಿ ವಾಸಿಸುವವಳು, ಯಾರ ಕೈಗೆ ಸಿಗದವಳು, ಗುಹ್ಯಾತಿ ಗುಹ್ಯವಾದವಳು ಎಂದೆಲ್ಲಾ ಕರೆಯಲಾಗಿದೆ. ದುರ್ಗಾ ಎನ್ನುವ ಶಬ್ದವು ಸಹ ಇದೇ ಅರ್ಥವನ್ನು ಕೊಡುತ್ತದೆ. ಅಂದರೆ, ಹತ್ತಲಿಕ್ಕೆ ಬಾರದ, ಕಠಿಣವಾದ ಪ್ರದೇಶ ಎಂಬರ್ಥವು ಇಲ್ಲಿದೆ. ಹಾಗಾಗಿ ಇಲ್ಲಿ ದುರ್ಗೆಯು ಪ್ರಧಾನವಾಗಿ ಕೋಟೆ ಎಂಬರ್ಥವನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡಿರುವ ಹಾಗಿದೆ. ಹಾಗಾದರೆ ದ್ರಾವಿಡರ 'ಕೋಟ್ಟ' ಅಥವಾ 'ಕೋಟೆ' (ದುರ್ಗ)ಯು ಸಂಸ್ಕೃತ 'ದುರ್ಗಾ'ವಾಗಿರಬಹುದೆ ಎಂಬುದನ್ನು ಗಮನಿಸಿದರೆ ದುರ್ಗಾಳ ಮೂಲ ಗೊತ್ತಾಗಬಹುದು. ದುರ್ಗಾದೇವಿಯು ಕೋಟೆಯ ಅದಿದೈವವಲ್ಲವೇ. ಬಿ. ಸಿ. ಮಜುಂದಾರ ಅವರು ಬಹು ಹಿಂದೆಯೆ ದುರ್ಗಾಳ ಮೂಲದ ಬಗೆಗೆ ಸಂದೇಹ ವ್ಯಕ್ತಪಡಿಸುತ್ತಾ ದುರ್ಗಾ;

> ...it appears that when Durga was merely a non-Aryan tribal goddess her non-sanskritic name was also either Durga or something which has a similar sound. The reason for this supposition is that for want of some orhtodox grammatical explanation had to be thought out. Derivation of the name has been given in



ಚಿತ್ರ ೧೫

the following words: *Durgat Tarayase Durge tat tvam Durga Smritajanaih.* Whether Durga had an independent existence as a tribal goddess and only later became one and the same with Vindhyavasini in the process of evolution at the fusion of tribes, is not easy to ascertain. That there was once a Kumari Durga, not belonging to the household of Siva, is borne out by the interpolated stotras in the Mahabharata.[೨೦]

ಆರ್ಯರು ಮೂಲತಃ ಪಶುಪಾಲಕರು ಎಂಬುದು ತಿಳಿದ ವಿಷಯ. ಅವರು ಭಾರತಕ್ಕೆ ಬಂದಾಗ ಗ್ರಾಮ ಅಥವಾ ನಗರಜೀವನ ಅವರಿಗೆ ಗೊತ್ತಿರಲಿಲ್ಲ. ಅವರು ಇನ್ನೂ ಅಲೆಮಾರಿಗಳಾಗಿ ಪಶುಪಾಲನ ವೃತ್ತಿಯನ್ನು ಅವಲಂಬಿಸಿ ಕಾಡಿನಲ್ಲಿ ವಾಸಿಸುತ್ತಿದ್ದ ಜನಾಂಗವಾಗಿದ್ದವರು. ಆ ಕಾರಣದಿಂದ ಅವರು ರಕ್ಷಣೆಗೆ ಬೆಂಕಿ ಹಾಗೂ ನಿಸರ್ಗ ನಿರ್ಮಿತವಾದ ರಕ್ಷಣೆಯ ಸಾಧನಗಳಾದ ನದಿ, ಹಾಗೂ ಬೆಟ್ಟಗಳ ಬುಡದಲ್ಲಿ ವಾಸಿಸುತ್ತಿದ್ದರು. ಋಗ್ವೇದದಲ್ಲಿ ನೀರು ಮತ್ತು ಬೆಂಕಿಯು ಅವರ ರಕ್ಷಣೆಯನ್ನು ಒದಗಿಸುತ್ತಿದ್ದವೆಂದು ಹೇಳಲಾಗಿದೆ. ಆದರೆ ಇಲ್ಲಿ ವಾಸಿಸುತ್ತಿದ್ದ ಮೂಲ ನಿವಾಸಿಗಳು ಗ್ರಾಮ ಜೀವನ ಅಥವಾ ನಗರ ಜೀವನಕ್ಕೆ ಪರಿವರ್ತಿತರಾದವರು. ಹಾಗೂ ಅವರ ನಗರ ನಿರ್ಮಿತಿಯ ಕೌಶಲ್ಯವನ್ನು ನೋಡಿದರೆ ರಕ್ಷಣೆಯ ಸಾಧನಗಳು ಯಾವರೀತಿಯಾಗಿದ್ದವು ಎಂಬುದು ಗೊತ್ತಾಗುತ್ತದೆ. ಋಗ್ವೇದದಲ್ಲಿ ಅಸುರರೊಡನೆ ನಿರಂತರವಾಗಿ ಯುದ್ಧಮಾಡುತ್ತಿದ್ದಂತೆ ಉಲ್ಲೇಖ ಬರುತ್ತದೆ. ಅಲ್ಲಿ ಅವರು ಸೋಲನ್ನು ಅನುಭವಿಸುತ್ತಿದ್ದರು. ಯಾಕೆಂದರೆ ಇಲ್ಲಿಯ ನಿವಾಸಿಗಳು ತಮ್ಮ ರಕ್ಷಣೆಗೆ ಬೇಕಾದ ಚೂಪಾದ ಆಯುಧಗಳನ್ನು ಹೊಂದಿದವರಾಗಿದ್ದರು. ರಥಗಳನ್ನು ಕುದುರೆಗಳಿಂದ ನಡೆಸುವವರಾಗಿದ್ದು, ಶಕ್ತಿಶಾಲಿಗಳಾದ ಇವರು ತುಂಬಾ ಸಂಪತ್ತನ್ನು ಹೊಂದಿದ್ದರು ಎಂದು ವರ್ಣಿಸಲಾಗಿದೆ. ಮಿಗಿಲಾಗಿ ಕೋಟೆಗಳನ್ನು ಕಟ್ಟಿಕೊಂಡಿದ್ದರಿಂದ ಅವರನ್ನು ಜಯಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಋಗ್ವೇದ ಹೇಳುತ್ತದೆ. ಅಂದರೆ ದ್ರಾವಿಡರ ಕಲ್ಪನೆಯಾದ ಕೋಟೆಯು ಆರ್ಯರಿಗೆ ಅಸಾಧ್ಯವಾಗಿ ಕಂಡಿರಬೇಕು.[೨೧]

ಸಿಂಧೂ ನಾಗರಿಕತೆಯಲ್ಲಿ ದುರ್ಗೆಯ ರೂಪವನ್ನು ಹೋಲುವ ವಿಗ್ರಹಗಳನ್ನು ಕಾಣಬಹುದಾಗಿದೆ ಎನ್ನಲಾಗಿದೆ. ಕಾಲಿಬಂಜನ್‌ನಲ್ಲಿ ದೊರಕಿರುವ ಮುದ್ರೆಯೊಂದರಲ್ಲಿ ಇರುವ ವಿಗ್ರಹವು ದುರ್ಗೆಯದ್ದಾಗಿರಬಹುದೆಂದು ಗುರುತಿಸಲಾಗಿದೆ. ಇಲ್ಲಿ ಇಬ್ಬರು ವೀರರು ಎಂದು ಹೇಳಬಹುದಾದ ಇವರು ಮುಡಿಯನ್ನು ಹಿಂದೆ ಕಟ್ಟಿದ್ದಾರೆ. ಕೈಯಲ್ಲಿ ಈಟಿಯ ರೀತಿಯಲ್ಲಿರುವ ಉದ್ದವಾದ ಆಯುಧಗಳನ್ನು ಇಬ್ಬರೂ ಹಿಡಿದಿದ್ದಾರೆ. ಮಧ್ಯದಲ್ಲಿ ಒಬ್ಬಳು ನಿಂತಿದ್ದು, ಅವಳು ಬಳೆ, ಉದ್ದವಾದ ನಿಲುವಂಗಿಯ ರೀತಿಯಲ್ಲಿರುವ ತೊಡುಗೆಯನ್ನು ತೊಟ್ಟಿದ್ದು, ತಲೆಯಲ್ಲಿ ಕವಡೆಗಳ ವಸ್ತುಗಳಿಂದ ಅಲಂಕೃತವಾಗಿದ್ದಾಳೆ. ಇವಳನ್ನು ದೇವತೆಯೆಂದು ಕರೆಯಬಹುದಾಗಿದ್ದು ಅವಳನ್ನು ಈ

ಯೋಧರು ಇನ್ನೊಂದು ಕೈಯಿಂದ ಹಿಡಿದಿದ್ದಾರೆ. ಎರಡೂ ಪಕ್ಕದಲ್ಲಿ ಮನುಷ್ಯರೂಪಿಯಾದ ಹುಲಿಗಳು ನಿಂತಿವೆ.ಈ ವಿಗ್ರಹವನ್ನು ಆದಿಮ ರೂಪದ ದುರ್ಗೆಯನ್ನು ಸೂಚಿಸುತ್ತಿರಬಹುದು. ದುರ್ಗೆಯ ರೂಪವೆಂದು ತೆಗೆದುಕೊಂಡರೆ ದುರ್ಗೆಯನ್ನು ಹೋರಾಟದ ದೇವತೆಯಾಗಿದ್ದಿರಬಹುದೆಂದು ತರ್ಕಿಸಬಹುದಾಗಿದೆ. ಈ ವಾದವನ್ನು ಸಮರ್ಥಿಸಲು ಈಗಲೂ ದುರ್ಗೆಯನ್ನು ಜನಪದರು ಕೋಟೆಯ ರಕ್ಷಣೆಯ ದೇವತೆಯೆಂದು ಕರೆಯಲಾಗುವುದನ್ನು ನೋಡಬಹುದು. ಅಲ್ಲದೆ ತಮಿಳು ಪ್ರಾಚೀನ ಸಾಹಿತ್ಯದಲ್ಲಿ ದುರ್ಗೆಯನ್ನು ಕೋಟೆಯ ದೇವತೆಯೆಂದು ಕರೆಯಲಾಗಿದೆ. ಸಿಂಹ ಅಥವಾ ಹುಲಿಯು ದೇವತೆಯ ವಾಹನವಾಗಿರುವುದು ಕೋಟೆಯ ರಕ್ಷಣೆಗೆ ಸಂಬಂಧಿಸಿದ್ದಾಗಿದೆ. the goddess and her garuding lions are specifically connected with the city wall.[೨೨] ಎನ್ನಲಾಗಿದೆ. ಅಂತೆಯೆ, ದುರ್ಗಾ, ತ್ರಿಪುರಾ, ಕೊಟ್ಟವಿ, ಅಪರಾಜಿತಾ, ಶಾರದಾ ಈ ಹೆಸರುಗಳು ಬಲಿಷ್ಠತೆಯ ಸಂಕೇತವಾಗಿರುವ ದುರ್ಗ, ಕೋಟೆ, ಅಪರಾಜಿತಾಪುರ, ಶಾರದಾಪುರ ಎಂಬಂತಹ ಅರ್ಥಗಳ ಮೂಲವೇ ಆಗಿದೆ. ಪುರಗಳು ಹರಪ್ಪ ಸಂಸ್ಕೃತಿಯಲ್ಲಿ ಪ್ರಧಾನವಾಗಿರುವುದನ್ನು ಕಾಣುವುದರಿಂದ ಅಲ್ಲಿ ದುರ್ಗೆಯನ್ನು ಕೋಟೆಯ ಅಥವಾ ನಗರದ ರಕ್ಷಣೆಯ ದೇವತೆಯಾಗಿ ಆರಾಧಿಸುತ್ತಿರಬೇಕು.ಭಟ್ಟಾಚಾರ್ಯ ಅವರು ಹೇಳುವಂತೆ;

> Durga ...associated with inaccessible regions, and it is also possible that she was originally conceived of as the protectress of forts (Durga) However, fanciful explanation of Durga was invented on etymological ground by associating her with the slaying of a demon called Durgama.[೨೩]

ದುರ್ಗಮನೆಂಬ ರಾಕ್ಷಸನನ್ನು ಕೊಂದ ಕತೆಯು ಸ್ಕಂದ ಪುರಾಣದಲ್ಲಿ ಬರುತ್ತದೆ. ದುರ್ಗನೆಂಬ ರಾಕ್ಷಸನು ದೇವತೆಗಳಿಗೆ ತೊಂದರೆ ಕೊಡುತ್ತಿದ್ದ. ಶಿವನು ದೇವಿಯನ್ನು ದುರ್ಗನನ್ನು ಸಂಹರಿಸುವಂತೆ ಕೇಳಿಕೊಂಡನಂತೆ. ದೇವಿಯು ತನ್ನ ಅಂಶರೂಪವಾದ ಕಾಲರಾತ್ರಿಯನ್ನು ದುರ್ಗನನ್ನು ಸಂಹರಿಸಲು ಕಳುಹಿಸಿದಳು. ಆದರೆ ದೈತ್ಯನು ಅವಳಿಗೆ ಬಗ್ಗಲಿಲ್ಲ. ನಂತರ ದೇವಿಯ ತಾನೆ ಬಂದು ಆ ರಾಕ್ಷಸನನ್ನು ಕೊಂದು ಹಾಕಿದಳು. ಅಂದಿನಿಂದ ಪಾರ್ವತಿಗೆ ದುರ್ಗಾ ಎಂದು ಕರೆಯಲಾಯಿತಂತೆ. ಭಟ್ಟಾಚಾರ್ಯ ಹೇಳುವಂತೆ ಇದೊಂದು fanciful explanation ಆದ ಕತೆಯಷ್ಟೆ. ಇದಕ್ಕೆ ಪೂರಕವಾದ ಕೊಟವಿ, ಅಥವಾ ಕೊಜ್ಜವಿಯನ್ನು ಇಲ್ಲಿ ನೋಡಬಹುದು.

ಉತ್ತರ ಭಾರತದಲ್ಲಿ ಕ್ರಿ.ಶ.ದ ಆರಂಭಕಾಲದಿಂದಲೂ ಕೊಟವಿಯ ಕೆಲವು ವಿಗ್ರಹಗಳು ಕಂಡುಬರುತ್ತವಾದರೂ, ಅವುಗಳನ್ನು ನಿರ್ದಿಷ್ಟವಾಗಿ ಇವು ಕೊಟವಿಯ ವಿಗ್ರಹಗಳೆಂದು ಹೇಳಲು

ಸಾಧ್ಯವಾಗದಿರಬಹುದು. ಆದರೆ ಆ ಕಾಲದ ಸಾಹಿತ್ಯದಲ್ಲಿ ಅನೇಕ ಕಡೆ ಉಲ್ಲೇಖಗೊಂಡಿರುವುದು ಕಂಡುಬರುತ್ತದೆ. ಉಗ್ರದೇವತೆಯಾದ ಇವಳನ್ನು ದುರ್ಗೆ, ಅಂಬಿಕಾ, ಚಂಡಿಕಾ ದೇವತೆಯರ ಜೊತೆಯಲ್ಲಿ ಸೇರಿಸಲಾಗಿದೆ.ಕೊಟವಿ, ಕೊಟರೀ ಅಥವಾ ಕೊಟರಾ ಎಂಬ ರೂಪಗಳು ವಿಷ್ಣುಪುರಾಣ, ಭಾಗವತ ಪುರಾಣ ಹಾಗೂ ಹರಿವಂಶಗಳಲ್ಲಿ ಉಲ್ಲೇಖಿತವಾಗಿವೆ. ಬಾಣಾಸುರನೆಂಬ ಅಸುರನು ಶೋಣತಪುರವನ್ನು ರಾಜಧಾನಿಯಾಗಿ ಮಾಡಿಕೊಂಡು ರಾಜ್ಯವಾಳುತ್ತಿದ್ದಾಗ, ಶಿವನನ್ನು ಬೇಡಿ, "ನನ್ನನ್ನು ಪಾರ್ವತಿಯ ಮಗನೆಂದು ಪರಿಗಣಿಸಿ ಶತ್ರುಗಳನ್ನು ಕೊಲ್ಲಲು ಸಹಸ್ರಬಾಹುಗಳನ್ನು ಅನುಗ್ರಹಿಸ"ಬೇಕೆಂದು ಬೇಡಿದನು. ಅದಕ್ಕೆ ಶಿವನು ಒಪ್ಪಿಗೆ ಕೊಟ್ಟು ಅನುಗ್ರಹಿಸಿದನು. ಹೀಗೆ ಅನುಗ್ರಹಿತನಾದ ಬಾಣನು ರಾಜ್ಯವನ್ನು ನಿರ್ವಹಿಸುತ್ತಿರಲು, ಇವನ ಮಗಳಾದ ಉಷಸ್ (ವೇದಕಾಲದ ಉಷಸ್ ಅಲ್ಲ) ಕೃಷ್ಣನ ಮೊಮ್ಮಗನಾದ ಅನಿರುದ್ಧನನ್ನು ಪ್ರೇಮಿಸಿ ಮದುವೆಯಾಗಿ ಮನೆಯಲ್ಲಿ ತಂದಿಟ್ಟುಕೊಂಡಳು. ಇದು ಬಾಣನಿಗೆ ಗೊತ್ತಾಗಿ ಅನಿರುದ್ಧನನ್ನು ತನ್ನರಮನೆಯಲ್ಲಿ ಬಂದಿಯಾಗಿಟ್ಟುಕೊಂಡ. ಕೃಷ್ಣನು ಮೊಮ್ಮಗನನ್ನು ಬಿಡಿಸಿಕೊಳ್ಳಲು ಬಾಣನೊಡನೆ ಯುದ್ಧವನ್ನಾರಂಭಿಸಿದ. ಬಾಣನು ಕೊಟವಿಯ ಸಹಾಯನ್ನು ಕೇಳಿದಾಗ ಬಾಣನ ಸಹಾಯಕ್ಕೆ ಕೊಟವಿ ಬರುತ್ತಾಳೆ. ನಗ್ನವಾಗಿ ಬಂದ ಕೊಟವಿಯನ್ನು ಕಂಡ ಕೃಷ್ಣನು

> ಮುನ್ನತೋ ಬಾಣನಾಶಾಯ ತತಶ್ಚಕ್ರಂ ಮಧುದ್ವಿಷಃ
> ನಗ್ನಾ ದೈತೇಯವಿದ್ಯಾಭೂತ ಕೊಟರೀ ಪುರತೋಹರಃ
> ತಾಮಗ್ರತೋ ಹರಿರ್ದೃಷ್ಟ್ವಾ ಮೀಲಿತಾಕ್ಷಸ್ಸುದರ್ಶನಂ[೨೪]

ಅಂತೆಯೆ, ಭಾಗವತ ಪುರಾಣದಲ್ಲಿಯು ಸಹ ಕೊಟವಿಯನ್ನು "ತನ್ಮಾತಾ ಕೊಟಕಾ ನಾಮ ನಗ್ನಾ ಮುಕ್ತ ಶಿರೋರುಹಾ ಪುರೋವತಸ್ಥೆ ಪುತ್ರಾ ಪ್ರಾಣರಿ" (X.63.20) ರಕ್ಷಣೆಗಾಗಿ ಕೊಟವಿಯು ಲಜ್ಜೆಗೆಟ್ಟು ನಗ್ನಳಾಗಿ, ಕೂದಲನ್ನು ಹರಡಿಕೊಂಡು ಬಂದಾಗ ಕೃಷ್ಣ ನಾಚಿ ತನ್ನ ಆಯುಧವಾದ ಚಕ್ರವನ್ನು ಮುಖಕ್ಕೆ ಮರೆ ಮಾಡಿಕೊಂಡನಂತೆ. ಇದೇ ರೀತಿಯ ವಿವರಣಯನ್ನು ಹರಿವಂಶ (೧೧೨.೯೭ರಿಂದ೧೧೧) ದಲ್ಲಿಯು ನೋಡಬಹುದು. ಆದರೆ ಹರಿವಂಶದಲ್ಲಿ ಯುದ್ಧಮಾಡುತ್ತಿದ್ದ ಕಾರ್ತಿಕೇಯನನ್ನು ರಕ್ಷಿಸಲು ಕೊಟವಿ ಬರುತ್ತಾಳೆ. ವಿಷ್ಣುಪುರಾಣ, ಹಾಗೂ ಭಾಗವತ ಪುರಾಣಗಳಲ್ಲಿ ಶಿವನ ಕುಟುಂಬದ ದೇವತೆಯಾಗಿ ಬರುವುದಿಲ್ಲ. ಆದರೆ ಹರಿವಂಶದಲ್ಲಿ ಶಿವನ ಕುಟುಂಬದ ದೇವತೆಯಾಗಿ ಬರುತ್ತಾಳೆ. ಅಲ್ಲದೆ ಕೊನೆಯಲ್ಲಿ ಅನಿರುದ್ಧನು ದೇವಿಯನ್ನು ಸ್ತುತಿಸುತ್ತಾ ಮಹಾದೇವಿ, ದೇವಿದುರ್ಗಾ, ಚಂಡಿ, ಕಾತ್ಯಾಯಿನಿ ಎಂದು ಸ್ತುತಿಸುತ್ತಾನೆ. ನಾವು ಮುಖ್ಯವಾಗಿ ಗಮನಿಸಬೇಕಾಗಿರುವುದು ಹರಿವಂಶವು ಕ್ರೂರ ಎನ್ನಬಹುದಾದ ದೇವತೆಯನ್ನು ತನ್ನ ಪರಿಧಿಗೆ ತೆಗೆದುಕೊಳ್ಳುತ್ತಿರುವುದನ್ನು ನೋಡಬಹುದು. ಉಗ್ರದೇವತೆಯಾದ ಇವಳು ಚಂಡಿ, ಅಂಬಿಕಾ, ದುರ್ಗೆಯ

ಜೊತೆಯಲ್ಲಿಸೇರಿಹೊಗುತ್ತಾಳೆ. 'ಅಮರಕೋಶ 'ದಲ್ಲಿ "ಸ್ತ್ರೀ ನಗ್ನಿಕಾ ಕೊಟವಿ ಸ್ಯಾತ್"ಎಂದು, ಹೇಮಚಂದ್ರನ 'ಅಭಿಜ್ಞಾನ ಚಿಂತಾಮಣಿ'ಯಲ್ಲಿ ಉಡಿಗೆಯಿಲ್ಲದೆ, ಹರಡಿದ ಕೂದಲಿನಿಂದ ಕೂಡಿದ್ದು, ಲಜ್ಜೆಯಿಲ್ಲದೆ ತಿರುಗಾಡುವವಳು ಅವಳನ್ನು ಕೊಟವಿ ಎಂದು ಕರೆದಿದ್ದಾನೆ. 'ರಾಜತರಂಗಿಣಿ' ಯಲ್ಲಿ ಕೂಡಾ ನಗ್ನತೆಯನ್ನು ಹೊಂದಿರುವವಳು ಉನ್ಮತ್ತವತಿ ಎಂದು ಕರೆಯಲಾಗಿದೆ.

ಸಂಪ್ರೇರಿತಃ ಕುಶಚಿಹ್ನೈಃ ಶಸ್ತ್ರಾಭ್ಯಾಸಂ ಚಕಾರ ಸಃ

ಪಾಟಯನ್ ಕ್ಷುರಿಕಾಘಾತೈಃ ಕೊಟವೀ ಸ್ತನ ಕೊಟರವ

ದಕ್ಷಿಣ ಹಾಗೂ ಉತ್ತರಭಾರತದಲ್ಲಿ ಕಂಡು ಬರುವ ಕೊಜ್ಜವಿ,ಕೋರವಿ,ಕೊಠವಿ, ಕೊಟವಿ, ಕೊಟ್ಟವಿ, ಕೊಟಾರಾ ಮುಂತಾಗಿ ಕರೆಯಲಾಗುವ ದೇವತೆಯ ಆರಾಧನೆಯು ದುರ್ಗಾ ಪರಂಪರೆಗೆ ಹತ್ತಿರವಾಗಿ ಕಂಡುಬರುತ್ತದೆ. ಒಂದು ಕಾಲಕ್ಕೆ ಉತ್ತರ ಭಾರತದಲ್ಲಿ ವ್ಯಾಪಕವಾಗಿ ಇತ್ತೆಂದು ನಂಬಲಾಗಿರುವ ಕೊಟವಿಯ ಕಲ್ಪನೆಯು ಗುಪ್ತರ ಕಾಲದಲ್ಲಿ ಪ್ರಭಲವಾಗಿತ್ತು. ಕೊಟವಿಯ ವಿಗ್ರಹಗಳೆಂದು ನಂಬಲಾಗಿರುವ ಹಲವಾರು ವಿಗ್ರಹಗಳು ಅಹಿಚ್ಛತ್ರದಲ್ಲಿ ದೊರಕುತ್ತವೆ. ಅವುಗಳನ್ನು ವಿಶ್ಲೇಷಣೆ ಮಾಡಿರುವ ವಿ.ಎಸ್. ಅಗ್ರವಾಲ ಅವರು ಕೊಟವಿಯ ವಿಗ್ರಹಗಳ ರೂಪದ ಬಗೆಗೆ ಹೀಗೆ ಹೇಳುತ್ತಾರೆ.

> . . .a nude woman either moveing with a bent body in a dishevelled and disconsolate posture, or simply standing, with right hand drawn parallel to the body and the left akimbo.[೨೫]

ಕೊಟವಿಯ ವಿಗ್ರಹಗಳು ಸಾಮಾನ್ಯವಾಗಿ ನಗ್ನವಾಗಿರುತ್ತವೆ. ಹಾಗೂ ಹರಡಿದ ಕೂದಲನ್ನು ಹೊಂದಿದ್ದು ಕ್ರೂರತೆಯ ದೇವತೆಯಾಗಿವೆ. ಹಲವಾರು ಪುರಾಣ ಹಾಗೂ ಕಾವ್ಯಗಳಲ್ಲಿ ಕೊಟ್ಟವಿ, ಕೌಟವಿ, ಕೊಟರಾ,ಕೊಟ್ಟಕಿರಿಯಾ ಹಾಗೂ ಕಟ್ಟಮಹಿಕಾ ಎಂದೆಲ್ಲಾ ಕರೆಯಲಾಗಿದೆ. ಇಲ್ಲಿ ಈ ದೇವತೆಯು ಕ್ರೂರವಾದ ರೂಪವನ್ನು ಹೊಂದಿದ್ದಾಳೆಯಲ್ಲದೆ ಹೋರಾಟದ ದೇವತೆಯಾಗಿ ಚಿತ್ರಿಸಲಾಗಿದೆ. ವಿಷ್ಣು ಪುರಾಣ (V.32-3), ಭಾಗವತ ಪುರಾಣ (X.62-3), ಹರಿವಂಶ (112. 97-101), ಹಾಗೂ ಮತ್ಸ್ಯ ಪುರಾಣದಲ್ಲಿ (13-12 ನಂತರದಲ್ಲಿ) ಕೊಟವಿ ಸಂಪ್ರದಾಯಗಳ ಉಲ್ಲೇಖವಿದೆ. ಈ ಕೊಟವಿಯ ಕಲ್ಪನೆಯು ಮುಂದೆ ದುರ್ಗೆಯ ಪರಂಪರೆಯಲ್ಲಿ ಸಂಮಿಶ್ರಣವಾಗಿರುವ ಹಾಗೆ ಕಂಡುಬರುತ್ತದೆ. ಅಲ್ಲದೆ ಅಗ್ರವಾಲ ಅವರು ಉತ್ತರದಲ್ಲಿ ಕಂಡುಬರುವ ಈ ಕೊಟವಿಯು ಹಾಗೂ ದ್ರಾವಿಡರಲ್ಲಿ ಕಂಡು ಬರುವ ಕೊಜ್ಜವಿಯು ಒಂದೇ ಎನ್ನುತ್ತಾರೆ.

> the north Indian Kotavi is the same as Korravai, the goddess worshipped by the ancient Tamils, is highly probable. It is not only suggested b the obvious phonetic similarities of the two names but also by the consideration of the facts that Korravai seems to have been the earliest and most important goddess of the ancient Tamils. that she was intimately connected with battlefiled and had a pronounced demonicalstrain in her character, and finally that, in her later history in South India, she too was identified with Durga and absorbed into the Sivaite pantheon.[೨೬]

ಕೊರ್ರವಿಯು ಮೂಲತಃ ಯುದ್ಧದೇವತೆಯಾಗಿ ತಮಿಳು ಸಾಹಿತ್ಯದಲ್ಲಿ ಕಂಡುಬರುತ್ತಾಳೆ. ಯುದ್ಧದ ಸಂದರ್ಭದಲ್ಲಿ ಜನರನ್ನು ರಕ್ಷಿಸುವ ದೇವತೆಯಾಗಿದ್ದು, ಹರಪ್ಪ ಸಂಸ್ಕೃತಿಯಲ್ಲಿ ಕಂಡುಬರುವ ದೇವತೆಯ ವಿಸ್ತೃತ ರೂಪವಾಗಿರಬಹುದೆಂದು ಊಹಿಸಲಾಗಿದೆ. ಕೊಜ್ಜವಿ ಅಥವಾ ಕೊಟ್ಟವೈ ಎಂದು ಕರೆಯುವ ಈ ದೇವತೆಯ ಬಗೆಗೆ 'ತೊಳ್ಕಾಪ್ಪಿಯಂ'ನಲ್ಲಿ ಉಲ್ಲೇಖ ಸಿಗುತ್ತದೆ. ಹೋರಾಟ ಅಥವಾ ಯುದ್ಧಾನಂತರದಲ್ಲಿ ಬಂದು ಹಾಗೂ ಬೇಟೆಯ ನಂತರದಲ್ಲಿ ಪೂಜಿಸುವ ದೈವವೆಂದು ಹೇಳಲಾಗಿದೆ. ಎಂದರೆ, ವಿಜಯವನ್ನು ತಂದು ಕೊಡುವ ದೇವತೆಯಾಗಿದ್ದಾಳೆ. ಸಂಗಮ ಯುಗದ ಮತ್ತೊಂದು ಕೃತಿಯಾದ 'ಕುಱುನ್ತೊೀಕೈ'ಯಲ್ಲಿ ಕೊರ್ರವಿಯನ್ನು "ಚೂಳಿ" ಎಂದು ಕರೆಯಲಾಗಿದೆ. ಅಲ್ಲದೆ ಇಲ್ಲಿಯ ಹೆಂಗಸರು ತಮ್ಮ ಗಂಡಂದಿರು ವಿಜಯವನ್ನು ಸಾಧಿಸಿ, ಏನೂ ಅಪಾಯವಾಗದಂತೆ ಮರಳಿ ಬರುವಂತೆ ಈ ದೇವತೆಯನ್ನು ಪ್ರಾರ್ಥಿಸಲಾಗುತ್ತಿತ್ತು ಎಂಬುದನ್ನು ಶ್ರೀನಿವಾಸನ್ ಅವರು ಉಲ್ಲೇಖಿಸುತ್ತಾರೆ.[೨೭] ಹತ್ತನೆಯ ಶತಮಾನದ ಪೂರ್ವದ ಇನ್ನೊಂದು ಕೃತಿ 'ವೆಣ್ಬಾಮಾಲೈ' ಯಲ್ಲಿಕೊರ್ರವಿಯು ಪ್ರಮುಖ ದೇವತೆಯಾಗಿ ಕಂಡುಬರುತ್ತಾಳೆ. ಪಶುಪಾಲನೆಯ ಹಂತದಲ್ಲಿರುವ ಕೆಲವು ಬುಡಕಟ್ಟುಗಳಲ್ಲಿ ತುರುಗೊಳ್ ಪ್ರಕರಣಗಳು ಹೆಚ್ಚಿದ್ದು, ಪ್ರತಿನಿತ್ಯ ಹೋರಾಟದ ಜೀವನವಾಗಿತ್ತು. ಈ ಜನರ ಜೀವನವನ್ನು ಮತ್ತು ಅಂದಿನ ಹೋರಾಟದ ಚಿತ್ರಣವನ್ನು ಈ ಕೃತಿ ನೀಡುತ್ತದೆ. ಕೊರ್ರವಿಯು ಹೀಗೆ ಕೋಟೆಯ ಮೇಲೆ ಎರಗಿಬರುವ ವೈರಿಗಳನ್ನು ಎದುರಿಸಿ ಅವರೊಡನೆ ಹೋರಾಡಿ ವಿಜಯವನ್ನು ತಂದುಕೊಡುವಳೆಂದು ಇಲ್ಲಿ ಹೇಳಲಾಗಿದೆ. ಅಸಂಖ್ಯವಾದ ತನ್ನ ಸಹಚರರೊಡನೆ, ತನ್ನ ಬಲಿಷ್ಠವಾದ ಸಿಂಹವಾಹನವನ್ನು ಏರಿ, ಒಂದು ಕೈಯಲ್ಲಿ ಬಂಗಾರದ ಅರಗಿಣಿಯನ್ನು, ಮತ್ತೊಂದು ಕೈಯಲ್ಲಿ ಜಿಂಕೆಯನ್ನು ಹಿಡಿದು ಯುದ್ಧಕ್ಕೆ ಹೋಗುತ್ತಿದ್ದಳು. ಯುದ್ಧದಲ್ಲಿ ಸೆರೆಸಿಕ್ಕವರನ್ನು ತಂದು ತನ್ನ ಅನುಚರರಾದ ಭೂತ,ಪ್ರೇತಾದಿಗಳಿಗೆ ಪ್ರಾಣಿಗಳ ಜೊತೆಯಲ್ಲಿ ಬಲಿಕೊಡುತ್ತಿದ್ದಳು.[೨೮]

'ಶಿಲಪ್ಪದಿಕಾರಂ'ನಲ್ಲಿ ಐಯಣಾರ ಮರವಾರ ಎಂಬ ಬೇಟೆಯಾಡುವ ಬುಡಕಟ್ಟುಗಳಲ್ಲಿ ಕೊರ್ರವಿಯು ಅದಿದೈವವಾಗಿ ಕಂಡುಬರುತ್ತಾಳೆ. 'ಶಿಲಪ್ಪದಿಕಾರಂ' ಕಾಲಕ್ಕೆ ಕೊರ್ರವಿಯು ವೈದಿಕ ಪರಂಪರೆಯಲ್ಲಿ ಈಗಾಗಲೆ ಮೈದಾಳಿದ ಕಾಳಿ ಮತ್ತು ದುರ್ಗೆಯರೊಡನೆ ಸೇರಿಹೋಗಿರುವುದು ಇಲ್ಲಿಯ ವಿಷಯವಾಗಿದೆ.[೨೯] ಕೋವಲನ್ ಹಾಗೂ ಅವನ ಪ್ರೇಯಸಿ ಕಣ್ಣಿಕೆಯು ದಣಿದು ನಡೆದುಬರುತ್ತಿರುವಾಗ ಒಂದು ಆಲಯ ಸಿಗುತ್ತದೆ. ಕೆಂಡದಂತಹ ಕಣ್ಣುಗಳನ್ನು, ಹೊರಚಾಚಿದ ನಾಲಿಗೆ ಹೀಗೆ ಉಗ್ರವಾದ ಮೂರ್ತಿಯನ್ನು ಅವರು ನೋಡುತ್ತಾರೆ. ಇವಳನ್ನು ಕೊರ್ರವಿಯೆಂದು, ಇವಳು ಕಳ್ಳರಿಗೆ,ದಾರಿಹೋಕರನ್ನು ಸುಲಿಗೆ ಮಾಡುವವರಿಗೆ ಭಯಂಕರವಾದ ದೇವತೆಯೆಂದು ಇಲ್ಲಿ ಹೊಗಳಲಾಗಿದೆ. ಒಳಿತನ್ನು ಮಾಡಿದಾಗ ಬದಲಿಗೆ ರಕ್ತದ ಬಲಿಯನ್ನು ಬಯಸುವವಳಾಗಿದ್ದಾಳೆ.[೩೦] ಅದೇ ಕೃತಿಯಲ್ಲಿ ಇನ್ನೊಂದು ಕಡೆ ಹೀಗೆ ಹೊಗಳಲಾಗಿದೆ. ಚಂದ್ರನನ್ನು ಮುಡಿಯಲ್ಲಿ ಧರಿಸಿರುವವಳು, ಭ್ರೂಮಧ್ಯದಲ್ಲಿ ಮೂರನೆಯ ಕಣ್ಣನ್ನು ಹೊಂದಿರುವವಳು, ಅವು ಅಚಲಿತವಾಗಿವೆ. ಅವಳ ತುಟಿಯು ರಕ್ತವರ್ಣದಂತೆ ಇದ್ದು, ಹಲ್ಲುಗಳು ಶ್ವೇತವರ್ಣವನ್ನು ಹೊಂದಿ ಹೊಳೆಯುತ್ತವೆ. ಹಾವನ್ನು ಸ್ತನಬಂಧವಾಗಿ ಹಾಗೂ ಕಟಿಬಂಧವಾಗಿ ಹೊಂದಿದ್ದಾಳೆ. ಕೊರಳು ನೀಲವರ್ಣವಾಗಿದೆ. ಕಾರಣ ವಿಷವನ್ನು ಕುಡಿದವಳಾಗಿದ್ದಾಳೆ. ಆನೆಯ ಚರ್ಮವನ್ನು ಹೊದ್ದು, ಹುಲಿಯ ಚರ್ಮವನ್ನು ಉಟ್ಟಿದ್ದಾಳೆ. ಅವಳ ಆಯುಧಗಳು ಬಿಲ್ಲುಬಾಣ, ಖಡ್ಗ, ತ್ರಿಶೂಲಗಳು. ಮಹಿಷನನ್ನು ಕೊಂದು ಮಹಿಷಮರ್ದಿನಿಯಾಗಿರುವ ದೇವಿಯು ಸಿಂಹವಾಹನವನ್ನು ಏರಿದ್ದಾಳೆ. ದುರ್ಗಾ, ಲಕ್ಷ್ಮಿ ಹಾಗೂ ಸರಸ್ವತಿಯ ಸ್ವರೂಪವಾದ ಇವಳು ಹೋರಾಟದಲ್ಲಿ ವಿಜಯವನ್ನು ತಂದು ಕೊಡುವವಳಾಗಿದ್ದಾಳೆ.[೩೧]

ಕೊರ್ರವಿ ಅಥವಾ ದುರ್ಗಾಳನ್ನು ದ್ರಾವಿಡರು ಪ್ರಾಚೀನ ಕಾಲದಿಂದಲೂ ಆರಾಧಿಸಿಕೊಂಡು ಬರುತ್ತಿರುವ ದೇವತೆಯಾಗಿದ್ದಾಳೆ. ಮೂಲತಃ ಬೇಟೆಯನ್ನು ಉಪಕಸುಬಾಗಿ ಇಟ್ಟುಕೊಂಡ, ಹಾಗೂ ದನಗಾಹಿ ಜನಾಂಗದವರು ಈ ದೇವತೆಯನ್ನು ಆರಾಧಿಸಿಕೊಂಡು ಬಂದರೂ ಸಹ ಅದು ಎಲ್ಲರೂ ಆರಾಧಿಸುವ ದೈವವಾಗಿತ್ತೆಂಬುದನ್ನು ತಮಿಳು ಪ್ರಾಚೀನ ಸಾಹಿತ್ಯದಲ್ಲಿ ನೋಡಬಹುದು. ಯುದ್ಧ ಮತ್ತು ಹೋರಾಟದಲ್ಲಿ ವಿಜಯವನ್ನು ತಂದುಕೊಡುವ ದೇವತೆಯಾಗಿರುವ ಇವಳಿಗೆ ರಕ್ತತರ್ಪಣವನ್ನು ಕೊಡಲಾಗುತ್ತಿತ್ತು. ಆ ಮೂಲಕ ಹುಲಸಿನ ದೇವತೆಯಾಗಿಯೂ ಕಂಡುಬರುತ್ತಾಳೆ. ಕೊಜ್ಜುವಿ ಶಬ್ದವು ಕೊಜ್ಜಂ ಎಂಬ ಶಬ್ದದಿಂದ ಬಂದುದಾಗಿದೆ. ಇದರ ಅರ್ಥ ವಿಜಯ. ಈ ಶಬ್ದಗಳು ಕೊಲ್[೩೨] ಎಂಬ ಮೂಲ ಧಾತುವಿನಿಂದ ಬಂದುದಾಗಿದೆ. ಕೊಜ ವಿಗೂ ಸ್ಕಂದನಿಗೂ ಸಂಬಂಧವಿರುವುದು ಮೇಲಿನ ಗ್ರಂಥಗಳಲ್ಲಿ ಉಲ್ಲೇಖ ಕಂಡುಬರುತ್ತದೆ. ಕೊರ್ರವಿಯು ಸ್ಕಂದನ ತಾಯಿಯಾಗಿರುವುದು ಗಮನೀಯವಾದ ಅಂಶವಾಗಿದೆ. ಸ್ಕಂದ ದ್ರಾವಿಡರ ದೇವತೆಯಾಗಿದ್ದು, ಅವನು ಕೂಡಾ ಯುದ್ಧದ ಅಧಿದೈವವಾಗಿದ್ದಾನೆ.

ಈ ಎಲ್ಲಾ ಹಿನ್ನೆಲೆಯಲ್ಲಿ ನೋಡಿದಾಗ ದುರ್ಗಾ ದೇವತೆಯು ಕೋಟೆಯ ರಕ್ಷಣೆಯ ಅಥವಾ ಹೋರಾಟದಲ್ಲಿ ವಿಜಯವನ್ನು ತಂದುಕೊಡುವ ದೇವತೆಯಾಗಿ ಕಂಡುಬರುತ್ತಾಳೆ. ಅಲ್ಲದೆ ಉತ್ತರದ ಕೊಟವಿ ಹಾಗೂ ದಕ್ಷಿಣದ ಕೊಱ್ಱವಿಯರು ಸಮಾನವಾದ ಅಂಶಗಳನ್ನು ಹೊಂದಿದ್ದಾರೆ. ಅದು ಯುದ್ಧದಲ್ಲಿ ವಿಜಯದ ಸಂಕೇತದ ರೂಪದಲ್ಲಿ ಕಂಡುಬರುವ ದೇವತೆಯಾಗಿ, ಉತ್ತರದ ಕೊಟವಿಗಿಂತ ದಕ್ಷಿಣದ ಕೊಱ್ಱವಿಯು ಹೆಚ್ಚು ಪ್ರಾಚೀನವಾದ ಲಕ್ಷಣಗಳನ್ನು ಹೊಂದಿದ್ದಾಳೆ. ಈ ಎಲ್ಲಾ ಕಾರಣಗಳಿಂದ ದುರ್ಗೆಯ ಪ್ರಾಚೀನ ರೂಪವೇ ಈ ಕೊರವಿಯಾಗಿರಬಹುದು.

ಪ್ರಾಚೀನ ಶಿಷ್ಟಸಾಹಿತ್ಯಗಳಲ್ಲಿ ಅದರಲ್ಲೂ ಪುರಾಣಗಳಲ್ಲಿ ದುರ್ಗೆಯ ಉಗಮಕ್ಕೆ ಸಂಬಂಧಿಸಿದಂತೆ ಅನೇಕ ಕತೆಗಳನ್ನು ಹೆಣೆಯಲಾಗಿದೆ. ಸ್ಕಂದ ಪುರಾಣದಲ್ಲಿ ಬರುವ ಕತೆಯು ಹೀಗಿದೆ. ದುರ್ಗನೆಂಬ ರಾಕ್ಷಸನು ದೇವತೆಗಳಿಗೆ ತೊಂದರೆಯನ್ನು ಕೊಡಲು ಪ್ರಾರಂಭಿಸಿದ. ಅದಕ್ಕೆ ಪಾರ್ವತಿಯು ಈ ದುರ್ಗನನ್ನು ಕೊಲ್ಲಲು ತನ್ನ ಅಂಶವಾದ ಕಾಳರಾತ್ರಿಯನ್ನು ಕಳುಹಿಸಿದಳು. ಆದರೆ ರಾಕ್ಷಸ ಅವಳನ್ನು ಸೋಲಿಸಿದ. ಪಾರ್ವತಿಯೇ ವಿಂಧ್ಯಾಪರ್ವತದಲ್ಲಿ ಹೋರಾಟಕ್ಕಿಳಿದಳು. ದುರ್ಗನು ಆನೆಯ ರೂಪದಲ್ಲಿ ಬಂದ, ಆಗ ದೇವಿ ತನ್ನ ಉಗುರುಗಳಿಂದ ತುಂಡು ಮಾಡಿದಳು. ಮತ್ತೆ ರಾಕ್ಷಸನು ಕೋಣನ ರೂಪದಲ್ಲಿ ಯುದ್ಧಕ್ಕಿಳಿದ. ಆಗ ದೇವಿಯು ತ್ರಿಶೂಲದಿಂದ ಕೊಂದು ಹಾಕಿದಳು. ದುರ್ಗನನ್ನು ಕೊಂದದ್ದರಿಂದ ದುರ್ಗಾ ಎಂಬ ಹೆಸರು ಬಂದಿತು. ಮಾರ್ಕಂಡೇಯ ಪುರಾಣದಲ್ಲಿ ದುರ್ಗೆಯ ಉಗಮದ ಬಗೆಗೆ ಬೇರೆಯಾದ ವಿವರಣೆ ಸಿಗುತ್ತದೆ. ರಾಕ್ಷಸನನ್ನು ಸಂಹರಿಸಲು ಎಲ್ಲಾ ದೇವತೆಗಳು ಸೇರಿ ಒಂದು ರೂಪವನ್ನು ತಳೆದರು. ಅದು ಆದಿಶಕ್ತಿಯ ರೂಪವಾಗಿ ನಿಂತಿತು. ಹೀಗೆ ತಳೆದ ರೂಪಕ್ಕೆ ಎಲ್ಲಾ ದೇವತೆಗಳು ತಮ್ಮತಮ್ಮ ಆಯುಧಗಳನ್ನು ಕೊಟ್ಟರು. ನಂತರ ಮಹಿಷನನ್ನು ಕೊಲ್ಲಲು ದೇವಿಯು ಸನ್ನದ್ಧಳಾದಳು.

ಕಾಶ್ಯಪೀಯ ಶಿಲ್ಪಸೂತ್ರವು ದುರ್ಗೆಯ ನಾನಾ ರೂಪಗಳನ್ನು ಹೀಗೆ ವರ್ಣಿಸುತ್ತದೆ. ನಾಲ್ಕು ಕೈಗಳನ್ನು ಹೊಂದಿದ್ದು, ಸುಂದರವಾಗಿ ಅಲಂಕರಿಸಲ್ಪಟ್ಟಿರುತ್ತಾಳೆ. ಅಲ್ಲದೆ ಸುಂದರವಾದ ಕಣ್ಣುಗಳನ್ನು ಪಡೆದಿರುವ ದೇವಿಯು ಚತುರ್ಭುಜೆಯಾಗಿರುತ್ತಾಳೆ. ಈ ನಾಲ್ಕು ಕೈಗಳಲ್ಲಿ ಹಿಂದಿನ ಬಲ ಮತ್ತು ಎಡಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಮುಂದಿನ ಎರಡು ಕೈಯಗಳು ಅಭಯ ಹಾಗೂ ಕಟ್ಯಾವಲಂಬಿತ (ಸೊಂಟದಮೇಲಿರುವ ಕೈ) ಹಸ್ತಗಳಾಗಿರುತ್ತವೆ. ಕಮಲದ ಮೇಲೆ ನಿಂತಿರುವ ದೇವಿಯು ಹಾವನ್ನು ಸ್ತನಬಂಧವಾಗಿ ಕಟ್ಟಿಕೊಂಡಿರುತ್ತಾಳೆ. ಮಯಮತದಲ್ಲಿ ದುರ್ಗೆಯನ್ನು ಕಾತ್ಯಾಯನಿ ಎಂದು ಕರೆಯಲಾಗಿದೆ. ಇಲ್ಲಿ ದೇವಿಯು ಅಷ್ಟಭುಜದವಳಾಗಿದ್ದು, ತ್ರಿನೇತ್ರಧಾರಿಯಾಗಿದ್ದಾಳೆ. ಅಲ್ಲದೆ ಚಂದ್ರನನ್ನು ಮುಡಿಯಲ್ಲಿ ಅಲಂಕರಿಸಿಕೊಂಡಿದ್ದಾಳೆ. ಸಿಂಹವನ್ನುವಾಹನವಾಗಿ ಮಾಡಿಕೊಂಡಿದ್ದಾಳೆ.ಹಸಿರು ಅವಳ ಮೈವರ್ಣವಾಗಿದೆ. ಹಳದಿಯ ಬಣ್ಣದ ಬಟ್ಟೆಗಳನ್ನು ಧರಿಸಿರುತ್ತಾಳೆ.

ಸಾಮಾನ್ಯವಾಗಿ ಶಿಲ್ಪ ಗ್ರಂಥಗಳು ದುರ್ಗೆಯನ್ನು ಚತುರ್ಭುಜೆ, ಅಷ್ಟಭುಜೆಯಾಗಿಯೂ ಅಥವಾ ಕೆಲವು ಭಾರಿ ಅದಕ್ಕಿಂತಲೂ ಹೆಚ್ಚು ಭುಜಗಳನ್ನು ಹೊಂದಿದವಳನ್ನಾಗಿ ನೋಡಿವೆ. ತ್ರಿನೇತ್ರವನ್ನು ಸಾಮಾನ್ಯವಾಗಿ ಎಲ್ಲ ಶಿಲ್ಪಗ್ರಂಥಗಳು ದುರ್ಗೆಯು ಹೊಂದಿದ್ದಾಳೆ ಎಂದು ವರ್ಣಿಸಲಾಗಿದೆ. ಮುಖ್ಯವಾಗಿ ದೇವಿಯು ಕಪ್ಪು ಬಣ್ಣವನ್ನು ಪ್ರಧಾನವಾಗಿ ಚಿತ್ರಿಸಲಾಗಿದೆ. ಕಪ್ಪುಬಣ್ಣವನ್ನು ಹೊಂದಿದ್ದರೂ ಸಹ ದೇವಿಯು ಅತ್ಯಂತ ಸುಂದರವಾದ, ದಿವ್ಯವಾದ ರೂಪವನ್ನು ಹೊಂದಿರುವವಳಾಗಿದ್ದಾಳೆ. ಈ ಸುಂದರವಾದ ದೇಹವನ್ನು ಆಭರಣಗಳು ಅಲಂಕರಿಸಲ್ಪಟ್ಟಿರುತ್ತವೆ. ಅವಳು ಉಟ್ಟಿರುವ ವಸ್ತ್ರವು ಯಾವಾಗಲೂ ಹಳದಿಯ ಅಥವಾ ಬಂಗಾರದ ಬಣ್ಣದ್ದಾಗಿರುತ್ತದೆ. ದೇವಿಯ ಶಿರೋಭೂಷಣವಾದ ಮತ್ತೊಂದು ಉಡುಗೆಯೆಂದರೆ ಕಿರೀಟ. ಕರಂಡ ಮಕುಟವು ದೇವಿಯು ಧರಿಸುವ ಕಿರೀಟ. ಎಲ್ಲಾ ಶಿಲ್ಪ ಗ್ರಂಥಗಳು ದೇವಿಯು ಹೊಂದಿರುವ ಆಯುಧಗಳನ್ನು ಉಲ್ಲೇಖಿಸುತ್ತವೆ. ಮತ್ತೂ ಅವು ಒಂದೇ ರೀತಿಯಲ್ಲಿರುವ ಆಯುಧಗಳಾದರೂ ಹಿಡಿದಿರುವ ಕೈಗಳು ಬದಲಾವಣೆಯನ್ನು ಹೊಂದಬಹುದಾಗಿದೆ. ಶಂಖ, ಚಕ್ರ, ಶೂಲ, ಧನುಷ್, ಬಾಣ, ಖಡ್ಗ, ಖೇಟಕ, ಪಾಶ, ಮುಂತಾದ ಆಯುಧಗಳು ಸಾಮಾನ್ಯವಾಗಿರುತ್ತವೆ. ಅಭಯ ಹಾಗೂ ವರದಾ ಮುದ್ರಾ ಹಸ್ತಗಳನ್ನು ಹೊಂದಿರಬಹುದು. ಕೆಲವು ಬಾರಿ ಪಾನಪಾತ್ರ (ರಕ್ತಪಾತ್ರ ಎಂದೂ ಕರೆಯಲಾಗಿದೆ) ಅಥವಾ ಕಪಾಲಗಳನ್ನು ಕೈಯಲ್ಲಿ ಹಿಡಿದಿರಬಹುದು. ಈ ರೀತಿಯ ವಿವರಣೆಗಳನ್ನು ಎಲ್ಲಾ ಶಿಲ್ಪ ಗ್ರಂಥಗಳಾದ ಅಂಶುಭೇದಾಗಮ, ಪುರಾಣಕರ್ಣಾಗಮ, ವಿಷ್ಣುಧರ್ಮೋತ್ತರ ಪುರಾಣ, ಮುಂತಾದ ಗ್ರಂಥಗಳಲ್ಲಿ ಕಾಣಬಹುದು.

ದುರ್ಗೆಯನ್ನು ಒಂಬತ್ತು ವಿವಿಧ ರೂಪಗಳಲ್ಲಿ ಕಂಡು ಪೂಜಿಸಲಾಗುತ್ತಿತ್ತೆಂದು ತೋರುತ್ತದೆ. ಅವುಗಳೆಂದರೆ, ನೀಲಕಂಠೀ, ಕ್ಷೇಮಂಕರಿ,ಹರಸಿದ್ಧಿ, ರುದ್ರಾಂಶುದುರ್ಗಾ, ವನದುರ್ಗಾ, ಅಗ್ನಿದುರ್ಗ, ಜಯದುರ್ಗಾ, ವಿಂಧ್ಯಾ ವಾಸಿನಿದುರ್ಗಾ ಹಾಗೂ ರಿಪುಮಾರಿ ದುರ್ಗಾ ಎಂದು.

ನೀಲಕಂಠೀಯು ಸಂಪತ್ತನ್ನು ಕೊಡುವವಳಾಗಿದ್ದು, ಇವಳು ನಾಲ್ಕು ಕೈಗಳನ್ನು ಹೊಂದಿರುತ್ತಾಳೆ. ಅವುಗಳಲ್ಲಿ ತ್ರಿಶೂಲ, ಖೇಟಕ, ಪಾನಪಾತ್ರೆ, ವರದ ಹಸ್ತಗಳನ್ನು ಹೊಂದಿರುತ್ತಾಳೆ.

ಕ್ಷೇಮಾಂಕರಿಯು ನವದುರ್ಗೆಯರಲ್ಲಿ ಮತ್ತೊಬ್ಬಳು. ಇವಳು ಆರೋಗ್ಯವನ್ನು ತರುವವಳು. ತ್ರಿಶೂಲ, ಪದ್ಮ, ಪಾನಪಾತ್ರೆ ಹಾಗೂ ವರದ ಮುದ್ರೆಯಲ್ಲಿರುವ ನಾಲ್ಕು ಹಸ್ತಗಳನ್ನು ಕಾಣಬಹುದು.

ಹರಸಿದ್ಧಿಯು ಸೌಮ್ಯರೂಪದ ದುರ್ಗೆಯಾಗಿದ್ದಾಳೆ. ತನ್ನ ಭಕ್ತರ ಸಕಲ ಇಷ್ಟಾರ್ಥಗಳನ್ನು ಈಡೇರಿಸುವ ಈ ದೇವಿಯು ಪಾನಪಾತ್ರೆ, ಖಡ್ಗ, ಕಮಂಡಲು ಡಮರುಗಳನ್ನು ತನ್ನ ಕೈಗಳಲ್ಲಿ ಹಿಡಿದಿರುತ್ತಾಳೆ.

ರುದ್ರಾಂಶು ದುರ್ಗಾಳು ಕಪ್ಪಾದ ಮೈಬಣ್ಣವನ್ನು, ಕೆಂಪಾದ ಬಟ್ಟೆಗಳನ್ನು ಧರಿಸಿರುತ್ತಾಳೆ. ಇವಳು ನಾಲ್ಕು ಕೈಗಳನ್ನು ಹೊಂದಿದ್ದು, ಮೇಲೆ ಹೇಳಿದ ಅವೇ ಆಯುಧಗಳನ್ನು ಹಿಡಿದಿರುತ್ತಾಳೆ.

ರುದ್ರಾಂಶು ದುರ್ಗಾ ಕಪ್ಪು ವರ್ಣವು ಇವಳ ಮೈಬಣ್ಣವಾಗಿದೆ. ಎರಡೆ ಕಣ್ಣುಗಳನ್ನು ಈ ದೇವಿಯು ಹೊಂದಿದ್ದಾಳೆ. ಕೆಂಪಾದ ಬಟ್ಟೆಯನ್ನು ಧರಿಸಿರುತ್ತಾಳೆ. ಕೀರ್ತಿಮಕುಟವು ಇವಳ ತಲೆಯ ಮೇಲಿರುವ ಕಿರೀಟವಾಗಿರುತ್ತದೆ. ಕಪ್ಪಾದ ಬಣ್ಣದಿಂದ ಕೂಡಿರುವ ಸಿಂಹವು ಇವಳ ವಾಹನವಾಗಿರುತ್ತದೆ. ಶೂಲ, ಖಡ್ಗ,, ಶಂಖ, ಮತ್ತು ಚಕ್ರಗಳು ಇವಳ ಆಯುಧಗಳಾಗಿರುತ್ತವೆ. ಇಕ್ಕೆಲಗಳಲ್ಲಿ ಚಂದ್ರ ಸೂರ್ಯರು ನಿಂತಿರುತ್ತಾರೆ.

ವನ ದುರ್ಗಾ ಇವಳ ವರ್ಣವು ಹಸಿರು.ಎಂಟು ಭುಜಗಳನ್ನು ಹೊಂದಿದ್ದು, ಶಂಖ, ಚಕ್ರ, ಖಡ್ಗ, ಖೇಟಕ, ಬಾಣ, ಧನುಷ್, ಶೂಲಗಳು ಆಯುಧಗಳಾಗಿದ್ದು, ಮತ್ತೊಂದು ತರ್ಜನಿ ಮುದ್ರೆಯಲ್ಲಿರುತ್ತದೆ.

ಅಗ್ನಿ ದುರ್ಗಾ ಬೆಳಕೆ ಇವಳ ವರ್ಣವಾಗಿರುವಂತೆ ಭಾಸವಾಗುವಂತೆ ತೋರುವ ಮೈಬಣ್ಣವನ್ನು ಹೊಂದಿರುತ್ತಾಳೆ. ಆಯುಧಗಳು ಖಡ್ಗ, ಖೇಟಕ, ಬಾಣ, ಪಾಶ, ಅಂಕುಶ, ವರದಾ ಮತ್ತು ಇನ್ನೊಂದು ತರ್ಜನಿ ಮುದ್ರೆಯಲ್ಲಿದ್ದು ಸ್ಥಾನಿಕ ಭಂಗಿಯಲ್ಲಿರುತ್ತಾಳೆ.

ಜಯ ದುರ್ಗಾ ಸಿದ್ಧಿಯನ್ನು ಕೊಡುವ ಈ ದುರ್ಗೆಯು ತ್ರಿನೇತ್ರವನ್ನು, ನಾಲ್ಕು ಕೈಗಳನ್ನು ಹೊಂದಿರುತ್ತಾಳೆ. ಶಂಖ, ಚಕ್ರ, ಖಡ್ಗ, ತ್ರಿಶೂಲಗಳು ಆಯುಧಗಳಾಗಿದ್ದು, ಕಪ್ಪಾದ ವರ್ಣದವಳಾಗಿರುತ್ತಾಳೆ. ಇವಳ ವಾಹನವು ಸಿಂಹವಾಗಿರುತ್ತದೆ. ಚಂದ್ರನನ್ನು ಮುಡಿಯಲ್ಲಿ ಧರಿಸಿರುತ್ತಾಳೆ.

ವಿಂಧ್ಯಾವಾಸಿನಿ ದುರ್ಗಾ ಅತ್ಯಂತ ಶುಭ್ರವಾದ, ಬೆಳಕಿಗಿಂತಲೂ ಪ್ರಖರವಾದ ಬಣ್ಣವನ್ನು ಪಡೆದಿರುವ ದೇವಿಯು ಕಮಲವನ್ನೇ ಪೀಠವನ್ನಾಗಿ ಮಾಡಿಕೊಂಡು ಕುಳಿತಿರುತ್ತಾಳೆ. ಮೂರನೆಯ ಕಣ್ಣನ್ನು ಹಾಗೂ ನಾಲ್ಕು ಕೈಗಳನ್ನು, ಈ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಹಾಗೂ ವರದ, ಅಭಯ ಮುದ್ರೆಗಳನ್ನು ಹೊಂದಿರುತ್ತಾಳೆ. ಎಲ್ಲಾ ಆಭರಣಗಳಿಂದ ಅಲಂಕೃತವಾಗಿರುವ ಈ ದೇವಿಯು ಚಂದ್ರನನ್ನು ಮುಡಿಯಲ್ಲಿ ಧರಿಸಿರುತ್ತಾಳೆ. ಸಿಂಹವು ಅವಳ ಪಕ್ಕದಲ್ಲಿ ನಿಂತಿರುತ್ತದೆ. ಇಂದ್ರಾದಿ ದೇವತೆಗಳು ಅವಳ ಸುತ್ತಲೂ ನಿಂತು ಪ್ರಾರ್ಥನೆ ಸಲ್ಲಿಸುತ್ತಾರೆ.

ರಿಪುಮಾರಿ ದುರ್ಗಾ ಕೆಂಪಾದ ವರ್ಣವು ಇವಳ ದೇಹದ ಬಣ್ಣವಾಗಿದ್ದು, ಭಯಂಕರವಾಗಿ ಕಂಡುಬರುತ್ತಾಳೆ. ದ್ವಿಭುಜವನ್ನು ಹೊಂದಿರುವ ದೇವಿಯು ತ್ರಿಶೂಲ ಹಾಗೂ ಮತ್ತೊಂದು ಹಸ್ತದಲ್ಲಿ ತರ್ಜನಿ ಮುದ್ರೆಯನ್ನು ಹೊಂದಿರುವವಳಾಗಿದ್ದಾಳೆ. ವೈರಿಗಳನ್ನು ಸಂಹರಿಸಲು ಈ ದೇವತೆಯನ್ನು ಪೂಜಿಸುತ್ತಾರೆ.

ಇದಲ್ಲದೆ ಇನ್ನೊಂದು ಬಗೆಯ ನವದುರ್ಗೆಯರನ್ನು *ಶೈವಾಗಮಗಳು* ಹಾಗೂ *ವರಾಹಪುರಾಣವು* ವರ್ಣಿಸುತ್ತಾದೆ. ಅವರೆಂದರೆ,

ಶೈಲಪುತ್ರಿಯು ವೃಷಭವನ್ನು ವಾಹನವಾಗಿ ಮಡಿಕೊಂಡಿರುತ್ತಾಳೆ. ಅಲ್ಲದೆ ಚಂದ್ರನು ಮುಡಿಯಲ್ಲಿರುತ್ತಾನೆ. ಶೂಲವು ಆಯುಧವಾಗಿರುತ್ತದೆ. **ಬ್ರಹ್ಮಚಾರಿಣಿಯು** ನಾಲ್ಕೆ ಕೈಗಳನ್ನುಹೊಂದಿದ್ದು, ಅವುಗಳಲ್ಲಿ ಕಮಲ, ಅಭಯ,ರುದ್ರಾಕ್ಷಿ ಹಾಗೂ ಕಮಂಡಲುಗಳನ್ನು ಹಿಡಿದಿರುತ್ತಾಳೆ. **ಸ್ಕಂದಮಾತಾ** ಅಥವಾ **ಸ್ಕಂದ ದುರ್ಗಾ** ದೇವತೆಯ ವಾಹನವು ಸಿಂಹವಾಗಿದ್ದು, ಕಮಲವನ್ನು ಎರಡೂ ಕೈಗಳಲ್ಲು ಹಿಡಿದಿರುತ್ತಾಳೆ. **ಕಾತ್ಯಾಯಿನಿ ದುರ್ಗಾ** ಸಿಂಹವಾಹನವಾಗಿರುವ ದೇವಿಯು ಚಂದ್ರಹಾಸ ಎಂಬ ಖಡ್ಗವನ್ನು ಹಿಡಿದಿರುತ್ತಾಳೆ. ಕೆಲವು ಬಾರಿ ಹುಲಿಯು ಸಹ ವಾಹನವಾಗಿರುತ್ತದೆ. **ಸಿದ್ಧಿ ಧಾತ್ರಿ** ತನ್ನ ಭಕ್ತರಗೆ ಸಿದ್ಧಿಯನ್ನು ಕೊಡುವ ದೇವಿಯು ಸಿದ್ಧರು, ಗಂಧರ್ವರು, ಯಕ್ಷರು, ಅಸುರರು ಸುರರು ಇವಳನ್ನು ಭಜಿಸುತ್ತಾರೆ. **ಕಾಲರಾತ್ರಿ ಚಂಡ** ದೇವಿಯು ನೋಡಲು ಭಯಂಕರವಾಗಿ ಕಾಣುವ ನೀಲಿಯ ಕಮಲದ ಬಣ್ಣದ ಮೈಬಣ್ಣವನ್ನು ಪಡೆದಿದ್ದಾಳೆ. **ಚಂಡಘಂಟಾ ಅಥವಾ ಚಂದ್ರ ಕಂದ** ಗ್ರಜಪ್ರವರಾರೂಢೆ (ಆಕಾಶದಲ್ಲಿ ತೇಲುವ ಅಥವಾ ಗಾಳಿಪಟದ ರೀತಿಯಲ್ಲಿರುವ)ಯಾದ ದೇವಿಯು ನೋಡಲು ಭಯಂಕರವಾಗಿರುತ್ತಾಳೆ. **ಕೂಷ್ಮಾಂಡ ದುರ್ಗಾ** ಮಧುಪಾತ್ರೆಯನ್ನು ಒಂದು ಕೈಯಲ್ಲಿ ಹಿಡಿದು ಮತ್ತೊಂದು ಕೈಯಲ್ಲಿ ಕಮಲವನ್ನು ಹಿಡಿದು, ವರದ ಹಾಗೂ ಅಭಯ ಮುದ್ರೆಗಳಲ್ಲಿ ಮತ್ತೆರುಡು ಕೈಗಳಿರುತ್ತವೆ. ರಕ್ತವನ್ನು ಮೈಗೆ ಬಳಿದುಕೊಂಡಿರುತ್ತಾಳೆ. ಕೆಲವು ಸಲ ಎರಡೂ ಕೈಗಳಲ್ಲಿ ಮಧ್ಯವನ್ನು ಹೊಂದಿರುವ ಪಾತ್ರೆಗಳನ್ನು ಹಿಡಿದಿರಬಹುದು. **ಮಹಾಗೌರಿ** ಸೌಮ್ಯದೇವತೆಯಾದ ದೇವಿಯು ಶುಭ್ರವಾದ ಬಿಳಿಯ ಬಟ್ಟೆಯನ್ನು ಧರಿಸಿರುತ್ತಾಳೆ. ಅಲ್ಲದೆ ಬಿಳಿಯ ಆನೆಯು ಇವಳ ವಾಹನವಾಗಿರುತ್ತದೆ.

ಅಗ್ನಿಪುರಾಣದಲ್ಲಿ ನವದುರ್ಗೆಯರು ಬರುತ್ತಾರೆ. ಪ್ರತಿಯೊಂದು ವಿಗ್ರಹಗಳು ಅಥವಾ ದೇವತೆಯರು ಕಮಲದಮೇಲೆ ಕುಳಿತಿದ್ದು, ಅವರು ಹದಿನಾರು ಕೈಗಳನ್ನು ಹೊಂದಿರುತ್ತಾರೆ. ಅವರುಗಳೆಂದರೆ, ರುದ್ರ ಚಂಡಾ, ಪ್ರಚಂಡಾ, ಚಂಡೋಗ್ರಾ, ಚಂಡನಾಯಿಕಾ, ಚಂಡಾ, ಚಂಡವತಿ, ಚಂಡರೂಪಾ, ಅತೀಚಂಡಿಕಾ, ಮತ್ತು ಉಗ್ರಚಂಡಿಕಾ ಎಂದು ಕರೆಯಲಾಗಿದೆ.

೪.೧.೪. ಕಾಳಿ

ದುರ್ಗೆಯ ಇನ್ನೊಂದು ಪ್ರಮುಖ ರೂಪವೆಂದರೆ ಕಾಳಿ. ಕಾಳಿಯು ವಿನಾಶದ ರೂಪವಾಗಿ ಕಂಡುಬರುತ್ತಾಳೆ. ಇಲ್ಲಿ ವಿನಾಶವೆಂದರೆ ಹೊಸ ಸೃಷ್ಟಿಯನ್ನು ಮಾಡಲು. ಅಂದರೆ, destruction is not merely for destruction but in order to create she destroys this universe. ಇಲ್ಲಿ ಸೃಷ್ಟಿಯನ್ನು ಹಾಳುಮಾಡುವುದಲ್ಲ, ಅದನ್ನು



ಚಿತ್ರ ೧೭

ಸರಿಪಡಿಸುವುದು ಈ ಶಕ್ತಿಯ ಕೆಲಸವಾಗಿದೆ. ಆದ್ದರಿಂದಲೇ ಕಾಳಿಯನ್ನು ಬೆಂಕಿಯ ರೂಪವಾಗಿ ಚಿತ್ರಿಸಲಾಗಿದೆ. ಬೆಂಕಿ ಒಂದು ಹಂತದಲ್ಲಿ ಎಲ್ಲವನ್ನು ಆಪೋಶನ ಮಾಡಿದರೂ ಸಹ ಅದು ಮುಂದೆ ಹೊಸದನ್ನು ಹುಟ್ಟಿ ಹಾಕುತ್ತದೆ. ಆದ್ದರಿಂದಲೆ ಇಲ್ಲಿ ಕಾಳಿಯನ್ನು "ಅಗ್ನೇವಿ" ಎಂದು ಕರೆಯಲಾಗಿದೆ. ಹಾಪ್ಕಿನ್ಸ್ ಅವರು ಹೇಳುವಂತೆ:

> The conception of Kali is not a permanent being but she personified destruction and is liable to come into existance when virtue is lost.[೩೩]

ವಿಶ್ವನಾಟಕದಲ್ಲಿ ಆದಿ ಶಕ್ತಿಯ ಪರವಶಗೊಳಿಸುವ ಮೂರ್ತರೂಪವೇ ಕಾಳಿ ಎನ್ನಲಾಗಿದೆ. ಶಾಕ್ತಪಂಥದಲ್ಲಿ ವಿಶೇಷವಾದ ಜನಪ್ರಿಯತೆಯನ್ನು ಗಳಿಸಿಕೊಂಡಿರುವ ಕಾಳಿಯು, ತಾಂತ್ರಿಕ ಆರಾಧನಾ ವಿಧಾನಗಳಲ್ಲಿ ಭಾವನಾತ್ಮಕವಾದ ಉಪಾಸನೆಯ ಕೇಂದ್ರವಾಗಿದ್ದಾಳೆ. ಆಕೆಯು ನಿರಾಕಾರ ರೂಪದ ಅನುಭವಗಳನ್ನು ಮೂರ್ತೀಕರಿಸುವ ಅಥವಾ ಸಶರೀರಗೊಳಿಸುವ ಶಕ್ತಿಯ ಸಂಕೇತ. ಆಕೆ ಅಧಿಕೃತವಾಗಿ ಕಾಣಿಸಿಕೊಂಡದ್ದು ದೈವ ಮತ್ತು ದೈತ್ಯ ಶಕ್ತಿಗಳ ನಡುವಣ ಯುದ್ಧದ ಸಮಯದಲ್ಲಿ ದುರ್ಗಿಯ ಹಣೆಯಿಂದ ಉದ್ಭವಿಸಿದಳೆಂದು ಹೇಳಲಾಗಿದೆ. ಕ್ರಿ.ಶ. ಸುಮಾರು ೪೦೦ರಲ್ಲಿ ರಚಿತವಾಗಿರಬಹುದಾದ *ಮಾರ್ಕಂಡೇಯ ಪುರಾಣಾಂತರ್ಗತವಾದ* '*ದೇವೀ ಮಹಾತ್ಮ್ಯ*'ಯಲ್ಲಿಯ ಯುದ್ಧ ಸಂದರ್ಭದಲ್ಲಿ ಕಾಳಿಯು ಮಹಾದೇವಿ ದುರ್ಗಿಯ ಅಂಶದಿಂದ ಜನಿತವಾದವಳು ಎಂದು ತಿಳಿಯಲಾಗಿದೆ. *ದೇವಿ ಮಹಾತ್ಮ್ಯ*ಯಲ್ಲಿ ಮೂರು ರೀತಿಯಲ್ಲಿ ದೇವತೆಯನ್ನು ಉಗಮವನ್ನು ಕಾಣಬಹುದಾಗಿದೆ. ವಿ.ಎಸ್. ಅಗ್ರವಾಲ್ ಅವರು ಹೇಳುವಂತೆ ಪೂರ್ವಚರಿತೆಯಲ್ಲಿ ದೇವಿಯು ಮಧು ಮತ್ತು ಕೈಟಭರನ್ನು ಸಂಹರಿಸುವ ಶಕ್ತಿಯಾಗಿ ಮಧ್ಯಮ ಚರಿತೆಯಲ್ಲಿ ಮಹಿಷನನ್ನು ಕೊಂದ ಮಹಿಷಾಸುರಮರ್ದಿನಿಯಾಗಿ ಹಾಗೂ ಉತ್ತರ ಚರಿತೆಯಲ್ಲಿ ಶಕ್ತಿಯು ಚಂಡ ಮುಂಡ ರಕ್ತಬೀಜ ಹಾಗೂ ಶುಂಭ ನಿಶುಂಭರನ್ನು ಕೊಂದ ಕಾಳಿಯಾಗಿ ಕಂಡು ಬರುತ್ತಾಳೆ ಎಂದಿದ್ದಾರೆ.[೩೪] ಇತರ ದೇವತೆಗಳಿಗಿಂತ ಶಕ್ತಿಯುತಳೆಂದು ತಿಳಿಯಲಾಗಿದೆ. ಮಹಾಭಾರತದಲ್ಲಿ ಇವಳನ್ನು ಸಿದ್ಧ ಸೇನಾನಿ, ಆರ್ಯಾ, ಕಪಿಲಾ, ಕಾಳಿ, ಕರಾಳಿ ಎಂದೂ ಕರೆಯಲಾಗಿದೆ. ಮಹಾಕಾಳಿಯು ಪ್ರಥಮ ಅಥವಾ ಆದ್ಯ ಶಕ್ತಿಯೆಂದು ಶಿವನ ಇನ್ನೊಂದು ರೂಪವಾದ ಮಹಾಕಾಲನ ಶಕ್ತಿ,ಸಹಚರ್ಯ ಎಂದು ವರ್ಣಿಸಲಾಗಿದೆ. ಕಾಳಿ ತಂತ್ರವೆಂಬ ತಾಂತ್ರಿಕ ಗ್ರಂಥವೊಂದರಲ್ಲಿ ಕಾಳಿಯನ್ನು ಶವವಾಹನದಲ್ಲಿ ಅಡಗಿರುವವಳೆಂದು, ಭಯಂಕರವಾಗಿ ನಾಲಿಗೆಯನ್ನು ಹೊರ ಚಾಚಿರುವವಳೆಂದು ಹಾಗೂ ವಿಕಟಾಟ್ಟಹಾಸವನ್ನು ಬೀರುವವಳೆಂದು ಕರೆಯಲಾಗಿದೆ. ಕಾಳ, ಧೂಮ್ರವರ್ಣದ ಮೈಬಣ್ಣವನ್ನು ಪಡೆದವಳಾಗಿದ್ದಾಳೆ. ಅಲ್ಲದೆ ಇವಳು ಮಾನವನ ರುಂಡಗಳನ್ನು ಕೊರಳಲ್ಲಿ ಧರಿಸಿದ್ದು, ನಾಲ್ಕು ಕೈಗಳಲ್ಲಿ ಒಂದರಲ್ಲಿ ಖಡ್ಗವನ್ನು, ಇನ್ನೊಂದರಲ್ಲಿ ರುಂಡವನ್ನು ಹಿಡಿದಿದ್ದಾಳೆ. ಮತ್ತೆರಡು ಕೈಗಳು ವರದ ಮತ್ತು ಅಭಯ ಮುದ್ರೆಗಳಲ್ಲಿ ಇವೆ. ಅವಳ ವಾಸಸ್ಥಾನವು ಮಹಾಸ್ಮಶಾಣವಾಗಿದೆ.

ಮಹಾಕಾಳಿಗೆ ಆಕೆಯ ಆದಿಮ ಸ್ವರೂಪದಲ್ಲಿ ಬಹುಮಟ್ಟಿಗೆ ಯಾವುದೇ ಪ್ರತಿಮಾತ್ಮಕ ಸ್ವರೂಪವಿಲ್ಲ. ಆಕೆ ಒಂದು ಕಲ್ಲುಬಂಡೆಯಿಂದ ಅಥವಾ ಒಂದು ದಿಬ್ಬದಿಂದ ಸಂಕೇತಿಸಲ್ಪಡುತ್ತಾಳೆ. ಸುಮಾರು ಏಳನೆಯ ಶತಮಾನದಲ್ಲಿ ವಾಯುವ್ಯ ಸರಹದ್ದಿನ ಗಾಂಧಾರ ಪ್ರಾಂತಕ್ಕೆ ಭೇಟಿ ನೀಡಿದ್ದ ಚೀನಾದ ಪ್ರವಾಸಿ ಹ್ಯೂಯೆನ್‌ತ್ಸಾಂಗ್‌ನು ವೀಣಾದೇವಿಯ ಮೂರ್ತಿಯನ್ನು ಕಡುನೀಲಿ ಬಂಡೆಯಂತಿದೆ ಎಂದು ವರ್ಣಿಸಿದ್ದಾನೆ. ನೇಪಾಳದಲ್ಲಿ ಕಾಳಿಯು ಪ್ರಚಲಿತವಾಗಿರುವುದು ಗುಹ್ಯಕಾಳಿ ಎಂಬ ಹೆಸರಿನಲ್ಲಿ. ಆಕೆ ಶಿವನ ಪಕ್ಕದಲ್ಲಿ ನೆಲೆಸಿದ್ದು, ಬಹುಮಟ್ಟಿಗೆ ಇಲ್ಲಿರುವಂತೆಯೇ, ಒಂದು ಕಲ್ಲುಬಂಡೆಯ ರೂಪದಲ್ಲಿ ಆರಾಧಿಸಲ್ಪಡುತ್ತವೆ. ಬಂಗಾಳದ ಬಹಳಷ್ಟು ದೇವಾಲಯಗಳಲ್ಲಿ ದೇವತೆಯನ್ನು ತಾರಾ ಎಂದೂ ಕರೆಯಲಾಗುತ್ತದೆ. ಉದಾಹರಣೆಗೆ, ಬಂಗಾಳದ ತಾರಾಪೀಠದಲ್ಲಿನ ವಿಗ್ರಹವು ಕಾಳಿಯ ಆದಿಮ ಸ್ವರೂಪವಾಗಿದೆ. ದೇವತೆಯು ಕಾಶ್ಮೀರದಲ್ಲಿ ತ್ರಿಪುರ ಅಥವಾ ತ್ರಿಪುರಸುಂದರಿ ಎಂದೂ ಕೇರಳದಲ್ಲಿ ಕಾಳಿ ಎಂದೂ ಪರಿಚಿತಳಾಗಿದ್ದಾಳೆ.

ಕಾಳಿಯ ಪ್ರತಿಮೆ ಕಪ್ಪುಬಣ್ಣದಂತೆ ಚಿತ್ರಿಸಲ್ಪಡುವುದು ಸಾಮಾನ್ಯ; 'ಎಲ್ಲ ಬಣ್ಣಗಳೂ ಕಪ್ಪು ಬಣ್ಣದಲ್ಲಿ ಅದೃಶಯವಾಗುವ ರೀತಿ. ಆದ್ದರಿಂದ ಎಲ್ಲ ಹೆಸರುಗಳು ಮತ್ತು ಸ್ವರೂಪಗಳು ಅವಳಲ್ಲಿ ಅದೃಶ್ಯವಾಗುತ್ತವೆ ಎನ್ನಲಾಗಿದೆ.' ತಾಂತ್ರಿಕ ವಿಧ್ಯುಕ್ತ ಆಚರಣೆಗಳಲ್ಲಿ ಆಕೆ ಆಕಾಶವನ್ನೆ ಉಡುಪಾಗಿ ಅಥವಾ ಅಂತರಿಕ್ಷವನ್ನು ಹೊದಿಕೆಯನ್ನಾಗಿ ಹೊದ್ದಂತೆ ವರ್ಣಿಸಲ್ಪಟ್ಟಿದ್ದಾಳೆ. ತನ್ನ ಪರಿಪೂರ್ಣಾವಸ್ಥೆಯಲ್ಲಿ, ಅಂದರೆ, ಮೂಲ ಪ್ರಕೃತಿ ಅಥವಾ ಆದಿಮ ಸ್ಥಿತಿಯಲ್ಲಿ ಆಕೆ ಎಲ್ಲ ವಸ್ತ್ರಗಳಿಂದಲೂ ಮುಕ್ತಳು. ಆಕೆ ಅಥವಾ ನಿಸರ್ಗ ವಸ್ತ್ರಗಳಿಲ್ಲದ ನಗ್ನಸ್ಥಿತಿ. ಅವಳು ತುಂಬಿದ ಸ್ತನಗಳಿಂದ ಕೂಡಿರುವವಳು. ಆಕೆಯ ತಾಯ್ತನವು ನಿರಂತರ ಸೃಷ್ಟಿಯ ಕ್ರಿಯೆಯಾಗಿರುತ್ತದೆ. ತನ್ನಲ್ಲೆ ಪುರುಷಾಂಗಗಳನ್ನು ಹೊಂದಿದ್ದು, ಯಾವುದೇ ಕೂಡುವಿಕೆಯಿಲ್ಲದೆ ಆಕೆ ಬ್ರಹ್ಮಾಂಡಕ್ಕೆ ಜನ್ಮ ನೀಡುತ್ತಾಳೆ. ಅವಳ ಕೆದರಿದ ತಲೆಗೂದಲು (ಎಲೋಕೇಶಿ) ದೇಹ ಮರೆಮಾಚುವ ಉಡುಪನ್ನು ರಚಿಸುತ್ತದೆ. ಇದು ಗೊತ್ತಾದ ಪರಿಮಾಣದ - ನೊರೆಯ ಅವ್ಯವಸ್ಥಿತ ಸಮುದ್ರವನ್ನು ಮೀರಿ ಸಂಘಟಿಸುವ ಕಾರ್ಯವಾದ ಅಖಂಡ ವಸ್ತುವಿನ ವಸ್ತ್ರ ಸಿದ್ಧತೆ (ರಚನೆ).

ಮಹಾಕಾಳಿ (ದೇವಿ ಮಹಾತ್ಮ್ಯದ ಅಗ್ರದೇವತೆಯಾದ ಕಾಳಿ)ಯಲ್ಲಿ ಎಲ್ಲ ವಿಘ್ನಗಳನ್ನು ನಿರ್ಮೂಲ ಮಾಡುವ ಶಕ್ತಿ, ಅತ್ಯುಗ್ರತ್ವ, ಪ್ರಚಂಡ ಸಾಮರ್ಥ್ಯವಿದೆ ಎನ್ನಲಾಗಿದೆ. ಅಲ್ಲಿ ಆಕೆಯಿರುವುದು ತೀವ್ರತೆ, ತತ್‌ಕ್ಷಣದ ಮತ್ತು ಪರಿಣಾಮಕಾರಿಯಾದ ಪ್ರತಿಕ್ರಿಯೆ. ನೇರ ದಾಳಿಯು ಎಲ್ಲವನ್ನೂ ಮಣ್ಣುಮುಕ್ಕಿಸುತ್ತದೆ. ಭಯ ಪ್ರಚೋದಕ, ದೃಢ ಮತ್ತು ನಿರ್ದಯಳಾದ ಆಕೆ ದುಷ್ಟಶಕ್ತಿಗಳನ್ನು ಸಂಹರಿಸಿದವಳಾಗಿದ್ದಾಳೆ.

ಕೆಲವು ವಿದ್ವಾಂಸರು ಸೂಚಿಸುವಂತೆ, ವೈದಿಕ ದೇವತೆಗಳಲ್ಲಿ ಅದಿತಿ ಪೂರ್ವಿಕಳು. ಸ್ವಾಮಿ ಅಭೇದಾನಂದರ ದೃಷ್ಟಿಯಲ್ಲಿ ವೈದಿಕ ದೇವತೆಯಾದ ರಾತ್ರಿಯು ಕಾಲಕಳೆದಂತೆ ಕಾಳಿಯಲ್ಲಿ ಸೇರಿಕೊಂಡಿರಬೇಕು. ಕಾಲ - ವೇಳೆಯ

ದೇವತೆಯಾಗಿರುವ ಕಲ್ಪನೆ ಮಹಾಭಾರತದಲ್ಲಿ ಸಿಗುತ್ತದೆ. ಭದ್ರ - ಕಾಳಿ ಎಂಬ ಹೆಸರಿನ ಮೊದಲ ಪ್ರಸ್ತಾಪ ದೊರೆಯುವುದು ವೈದಿಕ ಸ್ತೋತ್ರವಾದ ಗ್ರಿಹ್ಯ - ಸೂತ್ರದಲ್ಲಿ. ಐತರೇಯ ಬ್ರಾಹ್ಮಣದಲ್ಲಿನ ವಾಕ್‌ದೇವತೆಯ ನಗ್ನತೆಯು ಬಹುಶಃ ಆನಂತರದ ದಿನಗಳಲ್ಲಿ ಕಾಳಿಗೆ ಆರೋಪಿಸುವ ಹಾಗೂ ನಗ್ನತೆಯೊಂದಿಗೆ ಸಂಬಂಧ ಕಲ್ಪಿಸಿರಬಹುದಾಗಿದೆ. ಮುಂಡಕೋಪನಿಷತ್ ಕಾಳಿ ಮತ್ತು ಕರಾಳಿ ಎಂದು ಹೆಸರಿಸುತ್ತದೆ. ಆದರೆ, ಅವು (ಸೃಷ್ಟಿ - ದೈವ) ಅಗ್ನಿಯ ಏಳು ನಾಲಗೆಗಳಲ್ಲಿ ಎರಡೆಂದೂ, ಸಪ್ತಮಾತೃಕಾ ಅಥವಾ ಏಳು ದಿವ್ಯಮಾತೆಯರಲ್ಲಿ ಇಬ್ಬರು ಎಂದೂ ವರ್ಣಿಸಲ್ಪಟ್ಟಿವೆ. ಕಾಳಿಯ ಹುಟ್ಟು ಅನಾರ್ಯ (ಅವೈದಿಕ) ಮತ್ತು ವೈದಿಕ ಉಗಮಕ್ಕೆ ಕುರುಹಾಗಿದೆ. ಅಂಬಿಕಾ, ದುರ್ಗಾ ಮತ್ತು ಕಾಳಿ ಎಂಬ ಈ ರೀತಿಯ ಹೆಸರುಗಳು ಆನಂತರದ ವೈದಿಕ ಗ್ರಂಥಗಳಲ್ಲಿ ಕಾಣಿಸಿಕೊಂಡವು.

ಕಾಳಿಯ ಪ್ರಾಚೀನ ಪರಂಪರೆಯಲ್ಲಿ ಬಂದವಳೆಂಬುದರಲ್ಲಿ ಅನುಮಾನವಿಲ್ಲ. ಯಾಕೆಂದರೆ, ಮಾರ್ಷಲ್ ಅವರು ಸಿಂಧೂ ನಾಗರೀಕತೆಯಲ್ಲಿ ಕಂಡು ಬರುವ ಕೆಲವು ನಗ್ನ ಪ್ರತಿಮೆಗಳನ್ನು ಕಾಳಿಯ ಪ್ರತಿಮೆಗಳಾಗಿರಬೇಕು ಎಂದು ತರ್ಕಿಸುತ್ತಾರೆ. 'terrible and loathy images of the maligent Kali'[೩೫] ಈ ಮಾತನ್ನು ಒಪ್ಪಿದರೂ ಸಹ ಇದೇ ವಾದವನ್ನು ಭಿನ್ನ ರೀತಿಯಿಂದ ನೋಡಬಹುದೇನೋ. ವೈದಿಕ ಪರಂಪರೆಯಲ್ಲಿ ಕಾಳಿಯನ್ನು ಬೆಂಕಿಯ ಪ್ರತಿ ರೂಪವೆಂದೇ ವರ್ಣಿಸಲಾಗಿರುವುದು ಹಾಗೂ ಕಾಳಿ ಶಬ್ದವು ಕೂಡಾ ಬೆಂಕಿಯ ಅರ್ಥವನ್ನು ಕೊಡುತ್ತಿರಬಹುದೆಂದು ಕಾಣುತ್ತದೆ. ಮುಂದೆ ಅದನ್ನು ಗಮನಿಸಬಹುದು. ಈಗ ಕಾಳಿಯ ಉಗಮದ ಬಗೆಗೆ ಕೆಲವು ವಿದ್ವಾಂಸರು ಏನು ಹೇಳಿದ್ದಾರೆ ನೋಡುವಾ.

ಕಿನ್ಸ್ಲೆಯವರ ಪ್ರಕಾರ ಕಾಳಿಯು 'primarily a terrifying, demonic creature worshipped by those on the periphery of society'.[೩೬] ಸ್ವಾಮಿ ಅಭೇದಾನಂದರಂತೆ ಇವರು ಸಹ ವೇದಕಾಲದಲ್ಲಿ ಕಂಡುಬರುವ ರಾತ್ರಿಯ ದೇವತೆಯಾದ ನಿರೃತಿಯೇ ಮುಂದೆ ಕಾಳಿಯಾಗಿರಬೇಕು ಎನ್ನುತ್ತಾರೆ. ಆದರೆ ಮೂಲತಃ ಆರ್ಯೇತರ ದೇವತೆಯಾಗಿದ್ದು, ನಂತರದಲ್ಲಿ ವೈದಿಕ ಪರಂಪರೆಯಲ್ಲಿ ಸೇರಿರಬೇಕು ಎನ್ನುತ್ತಾರೆ:

> Kali the Vedic "Demoness" Nerrti, a personification of death, disease and destruction who is undoubtedly of tribal origin.[೩೭]

ಕೆಲವು ವಿದ್ವಾಂಸರು ಕಾಲ ಎಂಬುದೇ ಕಾಳಿಯಾಗಿರಬೇಕು ಎಂದು ಹೇಳುತ್ತಾರೆ. ಏಕೆಂದರೆ, ಭಾರತೀಯ ತತ್ತ್ವಶಾಸ್ತ್ರದಲ್ಲಿ ಕಾಲಕ್ಕೆ ಅತ್ಯಂತ ಮಹತ್ವದ ಸ್ಥಾನವನ್ನು ಕೊಡಲಾಗಿದೆ. ಅಥರ್ವವೇದದಲ್ಲಿಯೆ ಕಾಲವನ್ನು ವಿಶ್ವನಿಯಾಮಕವೆಂದಿದೆ (Cosmogonic Agent). ಮತ್ತು ಕಾಲವನ್ನು ಎಲ್ಲದಕ್ಕೂ ಒಡೆಯನೆಂದು ತಿಳಿಸಿದೆ.

ಶ್ವೇತಾಶ್ವತರ ಉಪನಿಷತ್ತಿನಲ್ಲಿ ವಿಶ್ವವ್ಯಾಪಾರದಲ್ಲಿ ಕಾಲದ ಮಹತ್ವವು ಹೆಚ್ಚೆಂದು ಹೇಳಿದೆ. ಅಲ್ಲದೆ ತಂತ್ರಗಳಲ್ಲಿ ಕಾಲದ ಪ್ರಮುಖವಾದ ಸ್ಥಾನವನ್ನು ಕೊಡಲಾಗಿರುವುದನ್ನು ಗಮನಿಸಬಹುದು.

> the concept of time is given prominence; it contributed to the idea of such goddesses as Kali, Mahakali, Kalaratri, etc.[೩೮]

ಲುಕೆ ಎನ್ನುವವರು ಕಾಳಿಯ ಮೂಲವನ್ನು ಗ್ರೀಕ್ ಸಬ್ದದ ಮೂಲಕ ನಿಷ್ಪತ್ತಿ ಮಾಡಲು ಪ್ರಯತ್ನಿಸುತ್ತಾರೆ. ಕಾಲ ಎನ್ನುವುದು "erm" ಎಂಬ ಗ್ರೀಕ್ ಶಬ್ದದ ಅರ್ಥವು "to rotate, to turn round, come round" ಅನ್ನುವ ಅರ್ಥಗಳನ್ನು ಕೊಡುತ್ತದೆ. ಆ ಕಾರಣಕ್ಕಾಗಿ ಕಾಳಿಯು ಸಮಯವನ್ನು ತಿಳಿಸುತ್ತಿರಬಹುದು ಎಂಬರ್ಥವನ್ನು ಕೊಡುತ್ತಾರೆ. ಅಲ್ಲದೆ,

> "....came to be interpreted as the destroyer of everything, with the result that there accrued to it the meanings 'time of death' and 'death', [೩೯]

ಇನ್ನೊಂದು ವಾದದ ಪ್ರಕಾರ ಕಾಳಿಯು ಮರಣದ ದೇವತೆ, ಕಾಲದ ದೇವತೆ ಎನ್ನುವುದು ಹಾಗೂ ಕಪ್ಪು ವರ್ಣದವಳು ಎಂದೆಲ್ಲಾ ಕರೆಯಲಾಗಿದೆ. ಕಾಳಿಯು ದ್ರಾವಿಡ ಮೂಲದ ಕರ್ ಎಂಬ ಧಾತುವಿನಿಂದ ಬಂದಿರಬೇಕು ಎಂದು ಮಜುಮ್ದಾರವರು ಹೇಳುತ್ತಾರೆ. ದ್ರಾವಿಡ ಭಾಷೆಗಳಲ್ಲಿ ಸಮಾನವಾಗಿ ಈ ಶಬ್ದ ಬಳಕೆಯಲ್ಲಿದೆ. ಕರಪ್ಪ, ಕರ್ಪು, ಕಪ್ಪು ಎನ್ನುವುದರ ಆರ್ಯೀಕರಣವೆ ಕಾಳಿಯಾಗಿರಬೇಕು ಎಂಬುದು ಅವರ ವಾದ.[೪೦] ಈ ವಾದವನ್ನು ಹಿಡಿದುಕೊಂಡು ಹೋದರೆ ಇದಕ್ಕೆ ಸರಿಯಾದ ಅರ್ಥವನ್ನು ಕಲ್ಪಿಸಬಹುದು ಎಂದು ತೋರುತ್ತದೆ. ಒಂದು ಹಂತಕ್ಕೆ ಸರಿಯಾದುದಾದರೂ ಅದೇ ಅಂತಿಮವಾದ ವಾದವಾಗುವುದಿಲ್ಲ. ಇಲ್ಲಿ ಕಾಳಿ ಎನ್ನುವುದರ ಮೂಲ ಅರ್ಥವೇ ಬೆಂಕಿ. ಆ ಅರ್ಥದಲ್ಲಿ ನೋಡಿದರೆ ಕಾಳಿಗೆ ಸರಿಯಾದ ಅರ್ಥವನ್ನು ಸ್ವಲ್ಪಮಟ್ಟಿಗೆ ಕೊಡಬಹುದು. ದ್ರಾವಿಡದಲ್ಲಿ ಕಾಳಿಗೆ ಸಮಾನವಾದ ಶಬ್ದವಿಲ್ಲ. ಆದರೆ ಕಾಳಮ್ಮ, ಕಾಳವ್ವ, ಮುಂತಾದ ಶಬ್ದಗಳು ಸಿಗುತ್ತವೆ. ಈ ಶಬ್ದಗಳು ಕಾಳು ಅಥವಾ ಬೀಜವನ್ನು ಸೂಚಿಸುವುದಿಲ್ಲ. ಕನ್ನಡದಲ್ಲಿ ಈ ರೀತಿಯಲ್ಲಿ ಅರ್ಥಕೊಟ್ಟಿರುವುದನ್ನು ಕಾಣಬಹುದು. ಆದರೆ ಇಲ್ಲಿ ಕಾಳು, ಬೀಜ ಎಂಬರ್ಥವಿರದೆ ಒಲೆ ಎಂಬರ್ಥವಿರುವ ಹಾಗೆ ತೋರುತ್ತದೆ. ಕಾಳಿ, ಕಾಳಮ್ಮ, ಮುಂತಾದ ದೇವತೆಗಳು ಕಮ್ಮಾರರು ಮೂಲ ದೈವವೆಂದು ಆರಾಧಿಸುತ್ತಾರೆ.ಅಲ್ಲದೆ ಒಲೆಯೇ ಅವರಿಗೆ ಕಾಳಮ್ಮನಾಗಿದೆ. ಈ ಕಾರಣದಿಂದ ಕಾಳಿಯನ್ನು ದ್ರಾವಿಡ ಮೂಲದಿಂದ ನೋಡಬಹುದಾದ ಸಾಧ್ಯತೆಗಳು ಹೆಚ್ಚಾಗಿವೆ.

ಮೂಲ ದ್ರಾವಿಡ (Proto-Dravida)ದಲ್ಲಿ ಈ ಶಬ್ದಕ್ಕೆ ಸಮಾನವೆಂದು ಹೇಳಬಹುದಾದ ಶಬ್ದವೆಂದರೆ "ಚುಲ್ಲಿ". ಚುಲ್ಲಿ ಎಂದರೆ ಬೆಂಕಿಯಿರುವ ಜಾಗ ಅಥವಾ ಯಜ್ಞಮಾಡುವ ಸ್ಥಳ ಎಂಬರ್ಥವನ್ನು ಕೊಡಲಾಗಿದೆ. ಅಥವಾ ಮೂರು ಕಲ್ಲುಗಳನ್ನು ಇಟ್ಟು ಬೆಂಕಿಯನ್ನು ಉರಿಸುವ ಜಾಗ ಅಥವಾ ಸಾಮಾನ್ಯವಾಗಿ ಒಲೆಯೆಂದು ಹೇಳಬಹುದು.

> The word *culli* is the most common word for the traditional Indian fireplace, which consists of three stones serving as astand on which vessels can be placed above the fire.[೪೧]

ಮೂಲ ದ್ರಾವಿಡದಲ್ಲಿ ಕುಲ್ಲಿ ಎಂದಿರಬಹುದಾದುದು ಮುಂದೆ ಚುಲ್ಲಿಯಾಗಿರಬಹುದು. 'ಚ್' ಕಾರಕ್ಕಿಂತ 'ಕ್' ಕಾರವು ಪೂರ್ವದ್ದೆಂದು ನಂಬಲಾಗಿದೆ.

ಮೂಲದ್ರಾವಿಡದಲ್ಲಿ ಇದ್ದ 'ಕ್' ಕಾರವು ಇದ್ದಕ್ಕಿದ್ದಂತೆ ಎಲ್ಲಾ ಭಾಷೆಗಳಲ್ಲಿ ಎಲ್ಲಾ ಪರಿಸರಗಳಲ್ಲಿ ಉಳಿದುಕೊಂಡು ಬಂದಿದ್ದರೆ ಈ ಸಮಸ್ಯೆಯೇ ಇರುತ್ತಿರಲಿಲ್ಲ. ಆದರೆ, ತಮಿಳು, ತೆಲುಗು, ಮಲೆಯಾಳಂ, ಭಾಷೆಗಳಲ್ಲಿ ಮಾತ್ರ ಶಬ್ದಾದಿಯ ಮೂಲ ದ್ರಾವಿಡದಲ್ಲಿ 'ಕ್', 'ಚ್' ಆಗಿಯೂ, ಉತ್ತರ ಭಾರತದ ದ್ರಾವಿಡ ಭಾಷೆಗಳಾದ ಬ್ರಾಹುಈ ಹಾಗೂ ಕುರುಖ್‌ಗಳಲ್ಲಿ 'ಖ್' ಆಗಿಯೂ ಪರಿವರ್ತಿತವಾಗಿದೆ.[೪೨] ಉದಾಹರಣೆಗೆ

ತಮಿಳ್	ಮಲೆಯಾಳಂ	ತೆಲುಗು	ಕನ್ನಡ
ಚೀಙ್	ಚೀ	ಚೀಮು	ಕೀ(ವು)
ಚೆವಿ	ಚೆವಿ	ಚೆವಿ	ಕಿವಿ

ಈ ಕಾರಣದಿಂದ ಕುಲುಮೆಯು ಕಾಳಿಯಾಗಿರುವ ಸಾಧ್ಯತೆಗಳನ್ನು ಇಲ್ಲಿ ತಳ್ಳಿಹಾಕುವಂತಿಲ್ಲ. ಕಾರಣ ಈ ಕುಲುಮೆಯನ್ನು ಕಾಳಿಯ ರೂಪದಲ್ಲಿ ಆರಾಧಿಸುವುದನ್ನು ಕಾಣಬಹುದು. ಬೆಂಕಿಯನ್ನು ಗರ್ಭದಲ್ಲಿ ಧರಿಸಿರುವಳೊ ಅವಳು ಕಾಳಿಯಾಗಿದ್ದಾಳೆ. ಸಂಸ್ಕೃತ ಭಾಷೆಯಲ್ಲಿ ಕ್ರಿ. ಪೂ. ಸುಮಾರು ೩೦೦ ವರೆಗೂ ಈ ಶಬ್ದ ಕಂಡು ಬರುವುದಿಲ್ಲ. ತಮಿಳು, ಮಲೆಯಾಳಿ, ತೆಲುಗು, ಕನ್ನಡ ಹಾಗೂ ಇತರೆ ದ್ರಾವಿಡ ಭಾಷೆಗಳಲ್ಲಿ ಈ ಶಬ್ದವು ಅಲ್ಪ ಬದಲಾವಣೆಗಳಿಂದ ಕಂಡುಬರುತ್ತದೆ. ತಮಿಳಿನಲ್ಲಿ ಉಲೈ, ಕನ್ನಡ ಹಾಗೂ ಕೊಡುಗಿನಲ್ಲಿ

ಒಲೆ ಎಂದು ಕಂಡುಬರುತ್ತದೆ.ಮೂಲ ದ್ರಾವಿಡದಲ್ಲಿ ಚುಲ್ ಅಥವಾ ಚುಲ್ಲ್ ಎಂದರೆ ಬೆಂಕಿಯಿರುವ ಜಾಗ ಎಂದೂ ಹಾಗೆಯೇ ಇದೆ ಶಬ್ದದ ಇನ್ನೊಂದು ರೂಪವಾದ ಚೂಲ್ ಎಂದರೆ ಗರ್ಭ, ಬಸಿರು, ಎಂಬಿತ್ಯಾದಿ ಅರ್ಥಗಳನ್ನು ಕೊಡುತ್ತದೆ. ಅಂದರೆ ಕಾಳಿಯು ಬೆಂಕಿಯನ್ನು ಗರ್ಭದಲ್ಲಿ ಧರಿಸಿರುವವಳು ಎಂಬರ್ಥವನ್ನು ಕೊಡಬಹುದು. ಬೆಂಗಾಳದಲ್ಲಿ ಕಾಳಿಯ ಆರಾಧನೆಯು ಹೆಚ್ಚು ವ್ಯಾಪಕವಾಗಿದ್ದರೂ ಸಹ ಅದು ಕರ್ನಾಟಕದಿಂದ ಹದಿನಾಲ್ಕು ಹದಿನೈದನೆಯ ಶತಮಾನದಲ್ಲಿಬೆಂಗಾಳಕ್ಕೆ ಹೋಗಿದೆ ಎಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಕಾಳಿಯ ಮೂಲವನ್ನು ನೋಡಿದಾಗ ಅದು ದಕ್ಷಿಣಭಾರತದಿಂದ ಉತ್ತರಕ್ಕೆ ಹೋಗಿರುವ ಸಾಧ್ಯತೆಗಳು ಹೆಚ್ಚಾಗಿವೆ.

ಸಮ್ಮೋಹನ ತಂತ್ರದ ಪ್ರಕಾರ ಕಾಳಿಯು ಭದ್ರಕಾಳಿ, ದಕ್ಷಿಣ ಕಾಳಿ, ಮಹಾಕಾಳಿ, ಮೋಕ್ಷಕಾಳಿ, ಶುದ್ಧಿಕಾಳಿ,ಗುಹ್ಯಕಾಳಿ, ಭೈರವಕಾಳಿ, ಪ್ರಳಯಕಾಳಿ ಎಂಬ ಎಂಟು ರೂಪಗಳನ್ನು ಹೊಂದಿದ್ದಾಳೆ. ಸ್ಕಂದ ಪುರಾಣವು ಕಾಳಿಯನ್ನು ಹದಿನಾರು ಕೈಗಳಿಂದ ಕೂಡಿರುವ ಭದ್ರಕಾಳಿಯ ರೂಪದಲ್ಲಿ ನೋಡುತ್ತದೆ. ಕೆಂಪಾದ ಬಟ್ಟೆ ಹಾಗೂ ರಕ್ತಚಂದನವನ್ನು ಮೈಯಿಗೆ ಬಳಿದುಕೊಂಡಿರುತ್ತಾಳೆ. ತನ್ನಸುತ್ತಲೂ ಉಗ್ರಚಂಡ, ಉಗ್ರದಂಷ್ಟ್ರ, ಕೈಟಭ ಮೊದಲಾದ ಗಣಗಳನ್ನು ಹೊಂದಿರುತ್ತಾಳೆ. ನಾಲಿಗೆ ಹೊರಚಾಚಿದ್ದು, ಹದಿನಾರು ಕೈಗಳಲ್ಲಿ ಶಂಖ, ಚಕ್ರ, ಕಮಲ, ಪರಶು, ದಂಡ, ಬಿಲ್ಲು ಬಾಣ, ರುಂಡ ತ್ರಿಶೂಲ ಶಕ್ತಿ, ಮುದ್ಗರ, ಮುಸುಲ, ವಜ್ರ, ಕೇಟ,ಮೊದಲಾದ ಆಯುಧಗಳನ್ನು ಹಿಡಿದಿರುತ್ತಾಳೆ. ಅವಳ ಸುತ್ತಲೂ ಭೂತ, ಯೋಗಿನಿಯರು, ಪಿಶಾಚರು, ಡಾಕಿಣಿಯರು, ಯಕ್ಷಿಣಿಯರು, ರಾಕ್ಷಸ, ಮೊದಲಾದ ಅಸಂಖ್ಯವಾದ ಗಣಗಳನ್ನು ಹೊಂದಿರುತ್ತಾಳೆ ಎಂದು ಈ ತಂತ್ರ ತಿಳಿಸುತ್ತದೆ. ಪುರಾಣಗಳಲ್ಲಿ ಇದೇ ರೀತಿಯ ವರ್ಣನೆ ಬರುತ್ತದೆ. ಆದರೆ ಕೆಲವು ಮಾರ್ಪಡುಗಳೊಂದಿಗೆ. ಶಿಲ್ಪಗ್ರಂಥಗಳಾದ, ಶಿಲ್ಪರತ್ನ, ವಿಷ್ಣುಧರ್ಮೋತ್ತರ ಪುರಾಣ, ಮುಂತಾದೆಡೆ ನಾಲ್ಕರಿಂದ ಹದಿನಾರು, ಹದಿನೆಂಟು, ಇಪ್ಪತ್ತು ಕೈಗಳನ್ನು ಹೊಂದಿರುವ ಹಾಗೆ ಚಿತ್ರಿಸುತ್ತವೆ. ಆಗ ಆಯುಧಗಳಲ್ಲಿ ಬದಲಾವಣೆಯನ್ನು ಕಾಣಬಹುದು.

೪.೧.೫. ಮಹಿಷಾಸುರ ಮರ್ದಿನಿ

ಭಾರತೀಯ ಶಿಲ್ಪಿಗಳಿಗೆ ಅತ್ಯಂತ ಪ್ರೀತಿಯ ಶಿಲ್ಪವೆಂದರೆ ಮಹಿಷಮರ್ದಿನಿಯ ವಿಗ್ರಹ. ಸುಮಾರು ಕ್ರಿ. ಶ. ಆರಂಭದ ಪೂರ್ವದಿಂದಲೂ ಮಹಿಷಮರ್ದಿನಿಯ ವಿಗ್ರಹಗಳು ಕಾಣಬರುತ್ತವೆ. ಅದು ವೈವಿಧ್ಯತೆಯ ಆಗರವಾಗಿರುವುಕ್ಕೆ ಕಾರಣ ಸಹಜವಾಗಿಯೇ ಅದರ ಜನಪ್ರಿಯತೆಯು ಒಂದು ಅಂಶವಾಗಿರುವುದರಿಂದಲೆ. ದುರ್ಗಾ ಅಥವಾ ಶಿವೆಯ ವಿಗ್ರಹಗಳು ಪ್ರಧಾನ ದೈವವಾಗಿ ಪೂಜೆಗೆ ಸ್ವೀಕರಿಸಲ್ಪಟ್ಟಿದ್ದನ್ನು ನೋಡಬಹುದು. ಆದರೆ ಮಹಿಷಮರ್ದಿನಿಯ ವಿಗ್ರಹಗಳು ಪ್ರಧಾನ ದೈವವಾಗಿ ಪೂಜೆಗೊಳ್ಳುವುದು ಕಂಡುಬರುವುದಿಲ್ಲ. ಬದಲಾಗಿ ಪರಿವಾರ ದೇವತೆಗಳಾಗಿ ವ್ಯಾಪಕವಾಗಿ ಕಂಡುಬರುವುದು ಮಹಿಷಮರ್ದಿನಿಯ ಜನಪ್ರಿಯತೆಯನ್ನು ತೋರಿಸುತ್ತದೆ.

ದುರ್ಗಾ ಹಾಗೂ ಮಹಿಷಮರ್ದಿನಿಯರು ಒಂದೇ ಎಂದು ಎಲ್ಲಾ ಸಾಹಿತ್ಯಗಳು ಉಲ್ಲೇಖಿಸುತ್ತವೆ. ಆದರೆ ಒಂದೇ ಎಂದು ಕಂಡುಬಂದರೂ ಸಹ ಅವು ಒಂದೇಯಾಗಿ ಕಾಣುವುದಿಲ್ಲ. ದುರ್ಗೆಗೆ ಇರುವ ಇತಿಹಾಸ ಹಾಗೂ ಸಾಂಸ್ಕೃತಿ ಮಹತ್ವಕ್ಕಿಂತ ಮಹಿಷಮರ್ದಿನಿಯ ಇತಿಹಾಸ ಹಾಗೂ ಸಾಂಸ್ಕೃತಿಕ ಮಹತ್ವದ ವ್ಯಾಪ್ತಿಯು ವಿಶಾಲವಾದುದು. ಅಂತೆಯೆ ದುರ್ಗೆಯ ಇತಿಹಾಸವನ್ನು ನೋಡಿದರೆ ಅವಳು ರಕ್ಷಣೆಯ ದೇವತೆಯಾಗಿ ಕಂಡುಬರುತ್ತಾಳೆ. ಆದರೆ ಮಹಿಷಮರ್ದಿನಿಗೆ ಆ ರೀತಿಯ ರಕ್ಷಣೆಯ ಕವಚ ಇಲ್ಲ. ಅವಳನ್ನೇನಿದ್ದರೂ ಫಲವಂತಿಕೆಯ ಹಿನ್ನೆಲೆಯಲ್ಲಿಯೇ ನೋಡಬೇಕೆಂದು ಕಾಣುತ್ತದೆ.

ಮಾರ್ಕಂಡೇಯ ಪುರಾಣದಲ್ಲಿ ಬರುವು *ದೇವಿಮಹಾತ್ಮ್ಯೆಯು* ದೇವಿಯ ಉಗಮದ ಬಗೆಗೆ ಒಂದು ಕತೆಯನ್ನು ಹೇಳುತ್ತದೆ. ಅದು ಈ ರೀತಿ ಇದೆ.* ಆ ಪುರುಷ ದೇವತೆಗಳ ಶಕ್ತಿಯಿಂದ ಮಹಾ ದೇವಿಯಾದ ದುರ್ಗಿ ಆವಿರ್ಭವಿಸಿದಳು. ಅಲ್ಲ ದೇವಾನುದೇವತೆಗಳ ಶಕ್ತಿಗಳು ಒಂದುಗೂಡಿ, ಸರ್ವದಿಕ್ಕುಗಳಿಗೂ ಜ್ವಾಲೆಗಳನ್ನೆಸೆವ ಜ್ಯೋತಿಯವರ್ಷವಾಯಿತು. ನಂತರ ಆ ಮಹಾಬೆಳಕು ತನ್ನ ಪ್ರಭೆಯಿಂದ ಮೂರೂ ಲೋಕಗಳನ್ನು ವ್ಯಾಪಿಸಿ, ಒಂದು ಆಕೃತಿಯಲ್ಲಿ ಲೀನವಾಗಿ, ಒಂದು ಹೆಣ್ಣಿನ ಸ್ವರೂಪಪಡೆಯಿತು.ದೇವಿಯು ಮಿತಿಮೀರಿದ ಸರ್ವಶಕ್ತಿಯಾಗಿ ಪಡಿಮೂಡಿದಳು. ಮೂರು ಕಣ್ಣುಳ್ಳ ದೇವತೆಯಾಗಿ ಮುಡಿಯಲ್ಲಿ ಅರ್ಧಚಂದ್ರನಿಂದ ಅಲಂಕರಿಸಲ್ಪಟ್ಟು, ಅವಳ ಅಸಂಖ್ಯ ತೋಳುಗಳಲ್ಲಿ ಜಯಸೂಚಿಸುವ ಆಯುಧಗಳು, ಅನರ್ಘ್ಯರತ್ನಗಳು, ಆಭರಣಗಳು, ವಸ್ತ್ರಗಳು, ಪಾತ್ರೆಗಳು, ಹೂಮಾಲೆಗಳು, ಜಪಮಣಿ ಮಾಲೆಗಳು, ಶಿವನ ಬೆಳಕಿನಿಂದ ಮುಖವು, ಯಮನಿಂದ ಕೂದಲು, ವಿಷ್ಣುವಿನಿಂದ ಕೈಗಳು, ಚಂದ್ರನಿಂದ ಎದೆಯು, ಇಂದ್ರನಿಂದ ಸೊಂಟದಭಾಗವು ಇನ್ನುಳಿದ ಎಲ್ಲಾ ದೇವತೆಗಳಿಂದ ಕಾಲುಗಳು ಹಾಗೂ ಆಯುಧಗಳು ಈ ಎಲ್ಲವೂ ಪುರುಷ ದೇವತೆಗಳಿಂದ ಬಳುವಳಿಯಾಗಿ ಬಂದಿದ್ದವು. ತನ್ನ ಚಿನ್ನದ ದೇಹದಿಂದ ಸಾವಿರ ಸೂರ್ಯರ ತೇಜಸ್ಸಿನೊಡನೆ ಪ್ರಜ್ವಲಿಸುತ್ತ, ಹುಲಿ ಯಾ ಸಿಂಹ ವಾಹನದ ಮೇಲೆ ಕುಳಿತ ದುರ್ಗಾಳದು, ಅನಂತ ಶಕ್ತಿಯ ವರ್ಣನೆಗಳಲ್ಲಿ ಇದು ಒಂದು ರುದ್ರದರ್ಶನವಾಗಿದೆ.

ರಾಕ್ಷಸರಲ್ಲಿ ಇದ್ದ ಅತಿಯಾದ ದರ್ಪ ಹಾಗೂ ಅಹಂಕಾರದಿಂದ ವಿಶ್ವದ ಸಮತೋಲನವನ್ನು ನಾಶಗೊಳಿಸಿರುವ, ಹಾಗೂ ವಿಶ್ವದ ಹಿಡಿತವನ್ನು ತಮ್ಮ ಅಧೀನಗೊಳಿಸಿಕೊಳ್ಳುವ ಹಾದಿಯಲ್ಲಿರುವ ಆಸುರೀ ಶಕ್ತಿಗಳನ್ನು ತೊಡೆದುಹಾಕಲು ಭಯಂಕರ ಶಕ್ತಿ ಉಗ್ರ ಯುದ್ಧಕ್ಕಾಗಿ ತುದಿಗಾಲಿನಲ್ಲಿ ಸಿದ್ಧವಾಗಿ ನಿಂತಳು ದೇವಿ. ಇದು ಜ್ಞಾನ ಮತ್ತು ಅಜ್ಞಾನ, ಸತ್ಯ ಮತ್ತು ಮಿಥ್ಯ, ಹಿಂಸಕ ಮತ್ತು ಹಿಂಸೆಗೊಳಗಾದವ ಇವರ ನಡುವಣ

* ಈ ಭಾಗವನ್ನು ಡಾ. ಶಿವಾರೆಡ್ಡಿಯವರ ಅನುವಾದದಿಂದ ತೆಗೆದುಕೊಳ್ಳಲಾಗಿದೆ.

ವಿಶ್ವಾತ್ಮಕಯುದ್ಧ. ಮಹಾದೈತ್ಯನಾದ ಮಹಿಷಾಸುರ ಮತ್ತು ಆತನ ಸೈನ್ಯದೊಡನೆ ದುರ್ಗಾದೇವಿಯು ಭೀಕರ ಕಾಳಗದಲ್ಲಿ ಹೋರಾಡುತ್ತಿರುವಂತೆ, ಭೂಮಿ ನಡುಗಿತು ಮತ್ತು ಸಮುದ್ರಗಳು ಭೋರ್ಗರೆದವು. ಕಾದಾಡುತ್ತಿರುವಾಗ ಆಕೆ ತನ್ನ ನಿಟ್ಟುಸಿರುಗಳಿಂದಲೇ ತನ್ನ ಕಡೆಯ ಸ್ತ್ರೀ ಸೈನ್ಯ ಪಡೆಗಳನ್ನು ಸೃಷ್ಟಿಸಿದಳು. ಯುದ್ಧ ಮುಗಿಯುವಷ್ಟರಲ್ಲಿ ದೇವಿಯು ಅಸುರ ಸೈನ್ಯವನ್ನು ನಾಶಮಾಡಿದ್ದಳು, ಇದು ವಿಚ್ಛಿದ್ರಕಾರಕ ಆಕ್ರಮಣದ ಸಂಕೇತ.

ಆಕೆಯ ವಿಜಯದ ನಿಟ್ಟಿನಲ್ಲಿ ಮಹಿಷಾಸುರ ಒಂದು ಕೋಣದ ರೂಪ ತಾಳಿ ದೇವತೆಯನ್ನು ಗೆಲ್ಲಲು ಮುಂದಾದ. ಮಹಾದೇವಿಯು ಮತ್ತೆಮತ್ತೆ ಆ ಕೋಣ-ರಾಕ್ಷಸನನ್ನು ನಿಜಸ್ಥಿತಿಗೆ ಪರಿವರ್ತಿಸಿದರೂ, ಪ್ರತಿಬಾರಿಯೂ ಆತ ಹೊಸಹೊಸ, ಲೆಕ್ಕವಿಲ್ಲದಷ್ಟು ಭಯಂಕರ ರೂಪಗಳನ್ನು ತಾಳುತ್ತಿದ್ದ. ಕೊನೆಗೆ, ಅನಂತ ಶಕ್ತಿ ಬೆರೆತ ಮಧ್ಯ ಕುಡಿದು, ಅದರಿಂದ ಪ್ರಾಪ್ತವಾದ ಅಮೂರ್ತ ಚೈತನ್ಯದ ಶಕ್ತಿಯಿಂದ, ದೇವಿಯು ಆ ರಾಕ್ಷಸನ ರುಂಡವನ್ನು ಕೋಣದ ದೇಹದಿಂದ ತುಂಡರಿಸಿ ಬೇರ್ಪಡಿಸಿದಳು. ಮಹಾ ರಾಕ್ಷಸನಾದ ಮಹಿಷಾಸುರ ಸತ್ತುದರಿಂದ, ದೇವಾನುದೇವತೆಗಳೆಲ್ಲ ದೇವಿಯನ್ನು ಕೊಂಡಾಡಿದರು.

ಮಹಿಷನನ್ನು ಕೊಂದ ನಂತರದಲ್ಲಿ ಚಂಡ ಮತ್ತು ಮುಂಡ, ಶುಂಭ ಮತ್ತು ನಿಶುಂಭ ಎಂಬ ದೈತ್ಯ ರಾಕ್ಷಸರ ಸೇವಕರು, ಅಂಬಿಕಾ ಇದ್ದಲ್ಲಿಗೆ ಬಂದು ಆಕೆಯ ಅತಿಶಯ ಮಾಂತ್ರಿಕ ಸ್ವರೂಪವನ್ನು ಗಮನಿಸಿ, ನಂತರ ಅವರು ಶುಂಭನಿದ್ದಲ್ಲಿಗೆ ಹೋಗಿ ಸುಂದರವಾಗಿರುವ ಸ್ತ್ರೀಯೊಡನೆ ಯುದ್ಧಕ್ಕಿಂತ ಮದುವೆಯಾಗುವುದೇ ಸೂಕ್ತವೆಂದು ಹೇಳುತ್ತಾರೆ. ದೇವಿಯ ಮನಸ್ಸನ್ನು ಗೆಲ್ಲಲು ಶುಂಭಾಸುರನು ರಾಕ್ಷಸ ಮಂತ್ರಿ ಸುಗ್ರೀವನನ್ನು ಆಕೆಯ ಬಳಿಗೆ ಮದುವೆಯಾಗಲು ಮನಸ್ಸುಮಾಡುವಂತೆ ಕೇಳಲು ಕಳುಹಿಸಿದ. ದೇವಿಯು ವಾಸಿಸುತ್ತಿದ್ದ ಪರ್ವತದ ಸುಂದರ ತಾಣಕ್ಕೆ ದೂತನು ಹೊರಟು, ನಯವಾದ ಮಾತುಗಳಲ್ಲಿ ಆಕೆಗೆ ಹೇಳಿದ: "ಓ ದೇವಿ, ಅಸುರರ ಒಡೆಯನಾದ ಶುಂಭ ಮೂರೂ ಲೋಕಗಳ ಪ್ರಭುವಾಗಿದ್ದಾನೆ. ಅಸುರ ವೈರಿಗಳನ್ನು ಜಯಸಿದವನ ಆಜ್ಞಾಪನೆಗಳನ್ನು ಎಂದಿಗೂ ದೇವತೆಗಳು ಕೂಡ ವಿರೋಧಿಸಲಾರರು, ಆತನ ಮಾತುಗಳಿಗೆ ಕಿವಿಗೊಡು. "ಮೂರು ಲೋಕಗಳೂ ನನ್ನವು. ಸುರರು ನನ್ನವಿಧೇಯರು... ತ್ರೀಲೋಕಗಳಲ್ಲಿನ ಎಲ್ಲ ಅನರ್ಘ್ಯ ರತ್ನಗಳು ನನ್ನವು. ಓ ಸುಂದರ ಹೆಣ್ಣೆ, ಸ್ತ್ರೀ ರತ್ನವೆ, ನಮ್ಮಲ್ಲಿಗೆ ಬಾ, ನಾವು ಪರಾಕಾಷ್ಠೆಯನ್ನು ಅನುಭವಿಸಬಹುದು. ನನ್ನಲ್ಲಿಗೆ ಮತ್ತು ನನ್ನ ಶೂರ ಅನುಜ ನಿಶುಂಭನಲ್ಲಿಗೆ ಬಾ, ನನ್ನ ವಶದಲ್ಲಿ ಹೋಲಿಸಲಸಾಧ್ಯ ಸಂಪತ್ತು ನಿನ್ನದಾಗುತ್ತದೆ. ಈ ಬಗೆಗೆ ಚಿಂತಿಸು, ನನ್ನ ಹೆಂಡತಿಯಾಗು." ಎಂದು ಶುಂಭ ಹೇಳಿದ ಮಾತುಗಳನ್ನು ತಿಳಿಸಿದ.

ದೇವಿಯು ಸೌಮ್ಯದಿಂದ ಉತ್ತರಿಸಿದಳು: "ನಿಜವಾಗಿಯೂ ಶುಂಭನು ಮೂರು ಲೋಕಗಳ ಪ್ರಭುವಾಗಿದ್ದಾನೆ. ಅದೇ ರೀತಿ ನಿಶುಂಭನೂ ಕೂಡ. ಆದರೆ ಭಾಷೆ ಕೊಟ್ಟಿದ್ದನ್ನು ನಾನು ಹೇಗೆ, ಯಾವ ರೀತಿ ವಂಚಿಸಲಿ ಮೂರ್ಖತನದಲಿ ಮಾಡಿಕೊಂಡ ನನ್ನ ಸ್ವಪ್ರತಿಜ್ಞೆಯನ್ನು ಕೇಳು. ಸೊಕ್ಕನ್ನು ಮುರಿದು, ಯುದ್ಧದಲ್ಲಿ



ಚಿತ್ರ ೧೭

ನನ್ನನ್ನು ಜಯಿಸಿದವ, ಈ ಜಗತ್ತಿನಲ್ಲಿ ನನ್ನ ಬಲಕ್ಕೆ ಸರಿಹೊಂದುವವ ನನ್ನ ಪತಿಯಾಗುತ್ತಾನೆ. ಆದ್ದರಿಂದ ಶುಂಭನನ್ನು ಅಥವಾ ಮಹಾ ಅಸುರ ನಿಶುಂಭನನ್ನು ಇಲ್ಲಿಗೆ ಬರಹೇಳು, ಆತ ಆದಷ್ಟು ಬೇಗ ನನ್ನ ಕೈಹಿಡಿಯುವಂತಾಗಲಿ."

ಅಂಬಿಕಾ ಕೇವಲ ಭಯಂಕರವಾದ ಆರ್ಭಟ ಮಾತ್ರದಿಂದಲೇ ಬೂದಿಮಾಡಿ ಸೋಲಿಸಿದರೆ, ಕೆರಳಿ ಕೆಂಡದಂತೆ ಉರಿಯುತ್ತಿದ್ದ ಆಕೆಯ ಸಿಂಹ ಅಸುರ ಸೈನ್ಯವನ್ನು ಧ್ವಂಸಗೊಳಿಸಿತು.ತನ್ನ ಸೇನಾಪತಿ ಮತ್ತು ಸೈನ್ಯ ನಾಶವಾದ ಸುದ್ದಿ ತಿಳಿದದ್ದೇ ತಡ, ಶುಂಭ ತನ್ನ ಸೇವಕರಾದ ಚಂಡ ಮತ್ತು ಮುಂಡರನ್ನು ದೊಡ್ಡ ಸೈನ್ಯದೊಂದಿಗೆ ಹೋಗಿ, ಆಕೆಯನ್ನು ತನ್ನಲ್ಲಿಗೆ ಕರೆತರಬೇಕು, ಅವಶ್ಯವಿದ್ದಲ್ಲಿ ಗಾಯಗೊಳಿಸಿ ಅಥವಾ ಸೆರೆಹಿಡಿದು ತನ್ನಿ ಎಂದು ಆಜ್ಞಾಪಿಸಿದ. ಪೂರ್ಣ ಶಸ್ತ್ರಸಜ್ಜಿತರಾಗಿ, ಚಂಡ ಮತ್ತು ಮುಂಡರ ನೇತೃತ್ವದಲ್ಲಿ, ಅಸುರರು, ಚಿನ್ನದ ಶೃಂಗದೆತ್ತರದಲ್ಲಿ ಸಿಂಹದ ಮೇಲೆ ಕುಳಿತು ಶಾಂತ ನಗೆ ಬೀರುತ್ತಿದ್ದ ದೇವಿಯಿದ್ದಲ್ಲಿಗೆ ನಡೆದರು. ದೇವಿಯನ್ನು ನೋಡಿದ್ದೇ ಕೆಲವು ರಾಕ್ಷಸರು ಉದ್ವೇಗದಿಂದ ಆಕೆಯನ್ನು ಹಿಡಿಯಲೆತ್ನಿಸಿದರು, ಇನ್ನುಳಿದವರು ತಮ್ಮ ಬಿಲ್ಲುಗಳನ್ನು ಚಾಚಿ, ಕತ್ತಿಗಳನ್ನು ಎಳೆಯುತ್ತ ಸಮೀಪಿಸಿದರು.

ಇದರಿಂದ ರೋಷಗೊಂಡು ಭಯಂಕರಳಾದ ಅಂಬಿಕೆಯ ಮುಖವು ಕಪ್ಪಿಕ್ಕಿತು. ಅವಳ ಉರಿಯುತ್ತಿರುವ ಹಣೆಯಿಂದ ಉಗ್ರ ದೇವತೆ ಕಾಳಿ ಆವಿರ್ಭವಿಸಿದಳು. ಕತ್ತಿ ಮತ್ತು ಪಾಶ, ರುಂಡಗಳನ್ನು ಹಿಡಿದು, ರುಂಡಮಾಲೆ ಧರಿಸಿ, ಹುಲಿಯ ಚರ್ಮಹೊದ್ದು, ಕೃಶಕಾಯದ, ಅಗಲ ಬಾಯಿಯ, ಚಾಚಿದ ನಾಲಗೆಯ, ಗುಳಿಬಿದ್ದ ಕೆಂಗಣ್ಣುಗಳ ಕಾಳಿ ಆಕಾಶಗಳನ್ನು ತನ್ನ ಗರ್ಜನೆಯಿಂದ ತುಂಬಿಸಿದಳು. ಭಯಂಕರವಾಗಿ ನಗುತ್ತ, ಆಕೆ ಅಸುರಸೈನ್ಯವನ್ನು ಕಬಳಿಸಿದಳು, ಆನೆಗಳನ್ನು ಮಾವುತರ ಸಮೇತ ಬಾಯಿಗೆಸೆದುಕೊಳ್ಳುತ್ತ, ರಥಗಳನ್ನು ಮತ್ತು ಕುದುರೆಗಳನ್ನು ತನ್ನ ಹಲ್ಲುಗಳಿಂದ ಸಿಗಿಯುತ್ತ, ಉಳಿದವರನ್ನು ತನ್ನ ಪಾದಗಳಿಂದ ತುಳಿಯುತ್ತ, ತನ್ನ ದಂಡದಿಂದ ಬಡಿಯತೊಡಗಿದಳು, ಸೈನ್ಯ ಸಂಪೂರ್ಣವಾಗಿ ನೆಲಸಮವಾಗುವವರೆಗೆ. ಮಹಾರಾಕ್ಷಸ ಚಂಡನು ಬಾಣಗಳ ಸುರಿಮಳೆಗರೆದ. ಮುಂಡನು ಸಾವಿರ ಚಕ್ರಗಳನ್ನು ಬಲವಾಗಿ ಬೀಸಿದ. ಆದರೆ ಇವೆಲ್ಲ ಉಗ್ರದೇವತೆಯ ಬಾಯಲ್ಲಿ ಮಾಯವಾಗುತ್ತಿದ್ದವು. ಈ ಸಂದರ್ಭದಲ್ಲಿ, ಕಾಳಿ ಭಯಾನಕವಾಗಿ ಆರ್ಭಟಿಸುತ್ತಿರಲು, ಆಕೆಯ ಚೂಪಾದ ಹಲ್ಲುಗಳು ಥಳಥಳಿಸುತ್ತಿದ್ದವು. ಆಕೆ ಅಗಾಧ ರೋಷದಿಂದ ನಗುತ್ತಿದ್ದಳು. ತನ್ನ ಸಿಂಹವನ್ನೇರಿ ಚಂಡನತ್ತ ನುಗ್ಗಿ, ಆತನ ಜುಟ್ಟನ್ನು ಹಿಡಿದು ತನ್ನ ಖಡ್ಗದಿಂದ ತಲೆಯನ್ನು ತರಿದು ಹಾಕಿದಳು. ಚಂಡನು ತುಂಡರಿಸಿ ಕೆಳಗೆ ಬಿದ್ದದ್ದನ್ನು ಕಂಡ ಮುಂಡ ಆಕೆಯ ಕಡೆ ನುಗ್ಗಿಬಂದನು. ಆಕೆ ಆತನನ್ನು ನೆಲಕ್ಕೆ ಕೆಡವಿ, ಆವೇಶದಲ್ಲಿ ತನ್ನ ಖಡ್ಗದಿಂದ ಕತ್ತರಿಸಿದಳು.ವೀರರಾದ ಚಂಡ ಮತ್ತು ಮುಂಡರು ಬಿದ್ದ ಮೇಲೆ ಉಳಿದ ಸೈನ್ಯ ಎಲ್ಲ ದಿಕ್ಕುಗಳಿಗೂ ಚೆಲ್ಲಾಪಿಲ್ಲಿಯಾಯಿತು.

ನಂತರದಲ್ಲಿ ಬಂದ ಶುಂಬನು ದೈತ್ಯರಾಕ್ಷಸ ಬಹು ದೊಡ್ಡ ಸೈನ್ಯದೊಂದಿಗೆ ದೇವಿಯಿರುವಲ್ಲಿಗೆ ಬಂದು ಯುದ್ಧ ಪ್ರಾರಂಭಮಾಡಿದ. ದೇವಿಯು ತನ್ನ ಬಿಲ್ಲಿನ ಹೆದೆಯನ್ನು ಎಳೆಯುತ್ತಾ ಭಯಂಕರವಾದ ಯುದ್ಧವನ್ನು ಮಾಡಿದಳು. ಅಸುರ ಸೈನ್ಯವು ದೇವಿಯ ದಾಳಿಯಿಂದ ಛಿದ್ರವಾಯಿತು. ರಕ್ತಬೀಜಾಸುರನೆಂಬ ದೈತ್ಯನ ಒಂದೊಂದು ರಕ್ತದ ಹನಿಗಳಿಂದ ಒಬ್ಬೊಬ್ಬ ದೈತ್ಯನು ಹುಟ್ಟುತ್ತಿದ್ದ. ದೈತ್ಯನ ಈ ಶಕ್ತಿಯನ್ನು ನಾಶಗೊಳಿಸಲು, ಕಾಳಿಯು ನಾಲಿಗೆಯಿಂದ ರಕ್ತಬೀಜನ ರಕ್ತವನ್ನು ಕುಡಿಯುತ್ತಿದ್ದಳು. ಕಾಳಿ ಈ ದೈತ್ಯನನ್ನು ಮುಕ್ಕಿಹಾಕಿದಳು. ನಂತರ ಶುಂಬ ಹಾಗೂ ನಿಶುಂಬರು ಮೊದಮೊದಲು ತಮ್ಮ ಶಸ್ತ್ರಗಳಿಂದ ಹೋರಾಡಿದ ದೇವತೆ ಮತ್ತು ಅಸುರ, ತರುವಾಯ ಕೈಗೆಕೈ ಮಿಲಾಯಿಸಿ ಕಾದಾಡಿದರು. ದೇವಿಯನ್ನು ಹಿಡಿದುಕೊಳ್ಳುವ ಸಲುವಾಗಿ ಶುಂಭನು ಆಕಾಶದೆತ್ತರಕ್ಕೆ ಜಿಗಿದ. ಈ ಹೋರಾಟದಲ್ಲಿ ಶುಂಭ ಮತ್ತು ಚಂಡಿಕಾ ಹಿಂದೆಂದೂ ಹೋರಾಡದಂತೆ, ಸಿದ್ಧರು ಮತ್ತು ಸಂತರು ವಿಸ್ಮಯಪಡುವಂತೆ, ಅವಳ ದೇವಿಯ ಈಟಿಯಿಂದ ಶುಂಭನು ಉರುಳಿಬೀಳುವ ಕೊನೆಯ ಕ್ಷಣದವರೆಗೂ ಕಾದಾಡಿದರು. ಹೀಗೆ ಕಾದಾಡಿದ ನಂತರದಲ್ಲಿ ಇಡೀ ದೈತ್ಯಕುಲ ನಾಶವಾದ ಮೇಲೆ ದೇವಿ ಶಾಂತವಾದಳು.

ಇದು ದೇವಿ ಮಹಾತ್ಮ್ಯಯಲ್ಲಿ ಬರುವ ದೇವಿಯ ಕತೆಯಾಗಿದೆ. ಇಲ್ಲಿ ಬರುವ ಕತೆಯಲ್ಲಿ ಪ್ರಮುಖವಾಗಿ ಗಮನಿಸಬೇಕಾದದು ಎರಡು ಅಂಶಗಳನ್ನು. ಒಂದು ಹೆಣ್ಣಿನ ಮೇಲಿನ ಪ್ರಸಕ್ತಿ ಅಥವಾ ಮದುವೆ, ಇನ್ನೊಂದು ಹೋರಾಟ. ಈ ಎರಡು ಅಂಶಗಳನ್ನು ಒಳಗೊಂಡಿರುವುದು ಇಲ್ಲಿನ ಪ್ರಾಚೀನತೆಯನ್ನು ಗಮನಿಸಲು ಮುಖ್ಯಕಾರಣವಾಗಬಹುದು. 'ದೇವಿಮಹಾತ್ಮ್ಯ'ಯ ಕಾಲಕ್ಕಾಗಲೇ ಶಕ್ತಿಯ ಪರಂಪರೆಯು ಅತ್ಯಂತ ಪ್ರಭುದ್ಧ ಮಟ್ಟವನ್ನು ತಲುಪಿತ್ತು. ಮುರಿಯವರು ಹೇಳುವ ಹಾಗೆ ಮೇಲಿನ ಕತೆಯು :

> These specimens may suffice to show the dignity to which this goddess has eventually been elevated in the estimation of her woshippers and she has attained now a higher rank in the Indian pantheon than was originally enjoyed by the daughter of Daksha and Himavant.[೪೩]

ದೇವಿಯು ಈ ಕಾಲಕ್ಕಾಗಲೇ ಶಿವ, ವಿಷ್ಣು ಹಾಗೂ ಬ್ರಹ್ಮರನ್ನು ಮೀರಿಸುವ ದೇವತೆಯಾಗಿ ಬೆಳಕಿಗೆ ಬಂದಿರುವುದನ್ನು ಕಾಣಬಹುದು. ಅಲ್ಲದೆ 'ಹರಿವಂಶ'ದಲ್ಲಿ ದೇವಿಯನ್ನು ಈ ಮೂರು ಜನರು ಸ್ತುತಿಸಿರುವುದನ್ನು ನೋಡಿದರೆ ಪ್ರಾಚೀನ ಪರಂಪರೆಯೊಂದು ವೈದಿಕ ಪರಂಪರೆಯಲ್ಲಿ ಎಷ್ಟು ಪ್ರಬಲವಾಗಿ ವಿಕಸನಗೊಂಡಿರುವುದು ಎಂದು ಗೊತ್ತಾಗುತ್ತದೆ. ಪ್ರಾಚೀನ ಕಾಲದ ಅಂದರೆ ಇತಿಹಾಸ ಪೂರ್ವದ ಕಾಲದಲ್ಲಿ ಮಾತೃದೇವತಾ ಆರಾಧನೆಯು ಪ್ರಭಲವಾಗಿತ್ತು ಎಂಬುದನ್ನು ಹಿಂದೆ ನೋಡಿದ್ದೇವೆ. ಮಾತೃ ಪ್ರಧಾನವಾದ ಕುಟುಂಬ ವ್ಯವಸ್ಥೆಯು

ಇದ್ದ ಕಾಲದಲ್ಲಿ ತಾಯಿಗೆ ಪ್ರಮುಖ ಸ್ಥಾನ ದೊರಕಿತ್ತು. ಇದು ಆದಿಮ ಸಂಸ್ಕೃತಿಯ ಪಳೆಯುಳಿಕೆ. ಅಲ್ಲದೆ ಕೃಷಿಯು ಹೆಣ್ಣಿನಿಂದಲೇ ಆರಂಭವಾಯಿತೆಂದು ಹಿಂದೆಯೆ ಗಮನಿಸಿದ್ದೇವೆ. ಅಂತೆಯೇ ಕೃಷಿಯ ಆವಿಷ್ಕಾರವಾದ ನಂತರದಲ್ಲಿ ಹೆಣ್ಣು ಧಾರ್ಮಿಕ ಕ್ಷೇತ್ರದಲ್ಲಿ ತನ್ನದೇ ಆದ ಪ್ರಧಾನವಾದ ಛಾಪನ್ನು ಹೊಂದಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಮಹಿಷಮರ್ದಿನಿಯ ರೂಪವನ್ನು ನೋಡಬಹುದು. ಹೆಣ್ಣನ್ನು ಹಾಗೂ ಭೂಮಿಯನ್ನು ಫಲವಂತಿಕೆಯ ರೂಪದಲ್ಲಿಯೆ ಕಾಣಲಾಗಿದೆ. ಯಾಕೆಂದರೆ ಈ ಎರಡರಲ್ಲಿ ಒಂದೇ ರೀತಿಯ ಅಥವಾ ಸಮಾನವಾದ ಗುಣಗಳನ್ನು ಕಾಣುವುದರಿಂದ ದೈವಿಕ ಗುಣಗಳನ್ನು ಆರೋಪಿಸಲಾಗಿದೆ. ಈ ಮೂಲಕ ಸ್ತ್ರೀಯನ್ನು ದೇವತೆಯ ರೂಪದಲ್ಲಿ ಪೂಜಿಸಲಾಗುತ್ತಿದೆ.

ನಂತರದ ಕಾಲಕ್ಕೆ ಅಂದರೆ, ಕೃಷಿಯನ್ನು ಪ್ರಧಾನವಾಗಿ ಗಂಡಿಗೆ ವರ್ಗಾಯಿಸಿದ ಮೇಲೆ ಗಂಡಿನ ಪ್ರಭುತ್ವ ಕೈಮೇಲಾಗಿರುವುದು ಕಂಡುಬರುತ್ತದೆ. ಆಗ ಒಂದು ರೀತಿಯ ಜಗ್ಗಾಟದ ಸ್ಥಿತಿ ಏರ್ಪಟ್ಟಿರಬಹುದು. ಹೆಣ್ಣು ಮೇಲೋ ಗಂಡು ಮೇಲೋ ಎಂಬ ವಿಷಯವಾಗಿರಬಹುದು. ಜನನದ ಕ್ರಿಯೆಗೆ ಗಂಡು ಪ್ರಮುಖನಾಗಿರುವುದು ಸಹಜವಾದರೂ ಈ ಹಂತದಲ್ಲಿ ಗಂಡು ಹೆಣ್ಣಿನ ಅಡಿಯಾಳಾಗಬೇಕಾಗಿತ್ತು. ಇದನ್ನು ಆದಿಮ ಶಕ್ತಿಯ ಬಿಡುಗಡೆಯ ಕಾಲ ಎಂದು ಕರೆಯಬಹುದು. ಈ ಹಂತದಲ್ಲಿ ಗಂಡು ಸಂಪೂರ್ಣವಾಗಿ ಹೆಣ್ಣಿಗೆ ದಾಸನಾಗುತ್ತಾನೆ. ಅಥವಾ ಗಂಡು ಹೆಣ್ಣಿಗೆ ಬಲಿಯಾಗಬೇಕಾದ ಹಂತವು ಇದಾಗಿದೆ. ಈ ಕಾರಣದಿಂದಲೇ ನರಬಲಿಯು ಹುಟ್ಟಿರುವ ಹಾಗೆ ಕಂಡುಬರುತ್ತದೆ. ನರ ಬಲಿಯು ಬರೀ ಬಲಿಯಾಗಿರದೆ ಮುಂದಿನ ಸಂತತಿಯ ಮುಂದುವರಿಕೆಯಾಗಿ ಕಂಡುಬರುತ್ತದೆ. ಬಲಿ ಆಚರಣೆಯು ಮಾನವನ ನಿರಂತರ ಹೊಸಸೃಷ್ಟಿಯನ್ನು, ಹೊಸತನವನ್ನು ಕಾಣುವುದೆ ಆಗಿದೆ. ಇದು ನಂತರದ ಕಾಲದಲ್ಲಿ ಹೆಣ್ಣನ್ನು ಹೊಂದಲು ಹೋರಾಟ ಮಾಡಬೇಕಾಗಿತ್ತು. ಹೋರಾಟದ ನಂತರವೇ ಹೆಣ್ಣು ದೊರಕುತ್ತಿತ್ತು. ಇಲ್ಲಿ ಯಾರು ವಿಜಯಿಯಾಗುತ್ತಾರೋ ಅವರಿಗೆ ಹೆಣ್ಣು ದೊರೆಯುತ್ತಿತ್ತು. ಮೀನಾಕ್ಷಿಯ ಮದುವೆಯ ಪ್ರಸಂಗದಲ್ಲಿ ಈ ರೀತಿಯ ಪ್ರಾಚೀನತಮವಾದ ಅಂಶಗಳನ್ನು ಕಾಣಬಹುದು:

> Minakshi was trained as a warrior princes. Upon meeting Shiva after soundly defeating his army. Miankshi bowed to the god in the knowledge that he was to become her futuer husband. The story of the battle between Shiva and Minakshi and their subsequent marriage are recnacted during a yearly 17- days ceremoney.[೪೪]

ಇದೆ ಅಂಶಗಳನ್ನು ಮಹಿಷ ಹಾಗೂ ದೇವಿಯ ಚರಿತೆಯಲ್ಲಿ ಕಾಣಬಹುದು. ಇಲ್ಲಿ ಮಹಿಷ ಅಥವಾ ದೈತ್ಯರೆಲ್ಲರೂ ದೇವಿಯನ್ನು ಮದುವೆಯಾಗಲು ಬಯಸುತ್ತಾರೆ, ಆ ಮೂಲಕ ಹೋರಾಟ ಮಾಡಬೇಕಾಗುತ್ತದೆ.

ಹೋರಾಟದಲ್ಲಿ ದೈತ್ಯರು ಸಾಯುತ್ತಾರೆ. ಈ ಕತೆಗೆ ಹಿನ್ನಲೆಯಾಗಿ ಕೆಲವು ಬುಡಕಟ್ಟುಗಳಲ್ಲಿ ಕಂಡುಬರುವ ಆಚರಣೆಗಳನ್ನು ನೋಡಬಹುದು. ಮಧ್ಯ ಪ್ರದೇಶದ ಬಸ್ತಾರದಲ್ಲಿ ಕಂಡುಬರುವ ಕೋಣದ ಕೊಂಬುಗಳನ್ನು ಧರಿಸಿ ಮಾಡುವ ಆಚರಣೆಯಲ್ಲಿ ಕೋಣ ಹಾಗೂ ದೇವಿಯನ್ನು ಹೊತ್ತು ಮೆರೆಸುತ್ತಾರೆ. ನಂತರ ಕೋಣದ ಮುಖವಾಡ ಅಥವಾ ಕೊಂಬನ್ನು ಧರಿಸಿರುವ ವ್ಯಕ್ತಿಯನ್ನು ಬಲಿಕೊಡುವ ರೀತಿಯಲ್ಲಿ ಬಲಿ ಆಚರಿಸಲಾಗುತ್ತದೆ.[೪೫] ಶ್ರೀಲಂಕದ, ಪನಾಮ ಜಿಲ್ಲೆಯ ಅಂಕೆಲಿಯಾ ಎಂಬಲ್ಲಿ ನಡೆಯುವ ಆಚರಣೆಯು ಮಹಿಷ ಹಾಗೂ ದೇವಿಯ ಗಂಡಹೆಂಡತಿಯರ ರೂಪದಲ್ಲಿ ಆಚರಿಸಿ ನಂತರದಲ್ಲಿ ಮಹಿಷನನ್ನು ಬಲಿಕೊಡುವುದನ್ನು ಗಣನಾತ್ ಒಬೆಯೆಸ್ಕರೆ ಅವರು ಹೀಗೆ ಹೇಳುತ್ತಾರೆ.

> .... The horns are intertwined with vines, ropes and coils, which provide the vegetal accoutrements, and the redemptive blood or its symbol, which is part of the ceremony, links this ritual to its original. A struggle between the teams of the goddess and of her consort ends when the consort's horn is broken. ...a combination of sexual and combatative symbolism including the participants use the abusive language, generally with incestuous innuendos, nude dancing and humiliation of the opponent in a cathartic abandonment of propriety.[೪೬]

ಕರ್ನಾಟಕದಲ್ಲಿ ಹಲವಾರು ಕಡೆ ಕೋಣವನ್ನು ದ್ಯಾಮವ್ವ ಅಥವ ಮಾರಿಯ ಗಂಡನೆಂದು ಕರೆಯುತ್ತಾರೆ. ವೈಟ್‌ಹೆಡ್ ಅವರು ಉಲ್ಲೇಖಮಾಡುತ್ತಾರೆ.[೪೭] ಕರ್ನಾಟಕದಲ್ಲಿ ಕಂಡುಬರುವ ಬ್ರಾಹ್ಮಣ ಜಾತಿಯ ಹೆಣ್ಣು ಮಾದಿಗ ಜಾತಿಯ ಗಂಡನ್ನು ಮದುವೆಯಾಗುವ ಐತಿಹ್ಯದ ಕತೆಯು ಪ್ರಸಿದ್ಧವಾಗಿದೆ. ಮಾದಿಗ ಜಾತಿಯ ಹುಡುಗನೊಬ್ಬನು ವೇದಗಳಲ್ಲಿ ಪಾಂಡಿತ್ಯ ಪಡೆದು, ಬ್ರಾಹ್ಮಣನಂತೆ ಯಜ್ಞೋಪವಿತ ಧರಿಸಿಕೊಂಡು ಬ್ರಾಹ್ಮಣನೆಂದು ಹೇಳಿಕೊಂಡು ಬ್ರಾಹ್ಮಣ ಕನ್ಯೆಯನ್ನು ಮದುವೆಯಾಗುತ್ತಾನೆ. ಒಂದು ದಿವಸ ಅವನ ಜಾತಿಯು ಯಾವುದೆಂದು ತಿಳಿದು ಶಾಪಕೊಡುತ್ತಾಳೆ. ನಂತರ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇದು ಕರ್ನಾಟಕದ ಹಾಗೂ ದಕ್ಷಿಣ ಭಾರತ ಬಹುಭಾಗಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಯಿಂದ ಕಂಡು ಬರುವ ಕತೆಯಾಗಿದೆ. ಇಲ್ಲಿ ಮಾದಿಗ ಅಥವಾ ಕೆಳಜಾತಿಯ ಜನ ಎನ್ನುವ ಅಂಶಗಳು ಆರ್ಯರು ಬಂದ ನಂತರದಲ್ಲಿ ಸೇರಿಕೊಂಡಿರುವ ಹಾಗೆ ಕಂಡುಬರುತ್ತದೆ. ಆದರೆ ಇದರ ಆದಿಮ ರೂಪವು ಮದುವೆ ಮತ್ತು ಹೋರಾಟದ ಸಂಕೇತವಾಗಿರಬೇಕು. ಅಥವಾ ಆಹಾರದ ಬದಲಾವಣೆಯಾದ ಸಂದರ್ಭದಲ್ಲಿ ಆದ ಸ್ಥಿತ್ಯಂತರಗಳ ಕತೆಯಾಗಿರಬಹುದು. ವರ್ಗ ಸಂಘರ್ಷದ ನೆಲೆಗಳು ಇಲ್ಲಿ ಕಂಡುಬರುವುದಿಲ್ಲ. (ಹಿಂದಿನ ಅಧ್ಯಯದಲ್ಲಿ ಈ ಕತೆಯ ಬಗೆಗೆ ವಿವರಣೆ ಬಂದಿದೆ.)

ತಮಿಳುನಾಡಿನ ಕನ್ನಪುರಂನಲ್ಲಿ ನಡೆಯುವ ಆಚರಣೆಯೊಂದರಲ್ಲಿ ಮಹಿಷನನ್ನು ದೇವಿಯ ಗಂಡನೆಂದೇ ಊಹಿಸಿ ಕಂಬದ ರೂಪದಲ್ಲಿ ಪೂಜಿಸಲಾಗುತ್ತದೆ. ಈ ಎಲ್ಲ ಅಂಶಗಳಿಂದ ಇದು ಮೂಲತಃ ಮದುವೆಗೆ ಸಂಬಂಧ ಪಟ್ಟಿದ್ದಾಗಿದೆ. ಅಲ್ಲದೆ ಕೆಲವು ಸಲ ಗ್ರಾಮದ ಆಚರಣೆಗಳಿಗೆ ವೈದಿಕದ ಅಂಶಗಳನ್ನು ಹಚ್ಚಿ ನೋಡುತ್ತೇವೆ.

> ... the buffalo bull as a victim with arcane consort associations is often a predominant aspect of the rite. In the tests Mahisa represents one of the many manifestations of the by-now remote ancestral progenitor.[೪೮]

ancestral progenitor ಈ ಮೂಲಪುರುಷನಿಂದಲೂ ನಾವು ಮಹಿಷಮರ್ದಿನಿಯನ್ನು ನೋಡಬಹುದು. ಓಂದೆಯೆ ಭೂಮಿಯು ಒಂದು ರೀತಿಯಲ್ಲಿ ಹೆಣ್ಣಿನ ಗುಣಗಳನ್ನು ಹೊಂದಿರುವುದರಿಂದ ಅದಕ್ಕೂ ಕೆಲವು ಸಲ ತೃಪ್ತಿಪಡಿಸಬೇಕಾಗುತ್ತಿತ್ತು ಎಂದು ಹೇಳಲಾಗಿದೆ. ಅದರಂತೆ ಬೆಳೆಯಲ್ಲಿ ವ್ಯತ್ಯಾಸವಾದರೆ, ಅಥವಾ ರೋಗರುಜಿನಗಬಳು ಕಾಣಿಸಿಕೊಂಡರೆ ಅದು ಭೂಮಿತಾಯಿಯ ಮುನಿಸಿನಿಂದ ಬಂದದ್ದು ಎಂಬ ತಿಳುವಳಿಕೆ ಈಗಲೂ ಸಹ ಚಾಲ್ತಿಯಲ್ಲಿ ಇರುವ ಹಾಗೆ ಕಂಡುಬರುತ್ತದೆ. ಆ ಕಾರಣದಿಂದಲೇ ಭೂಮಿಯನ್ನು ಹಲವಾರು ರೀತಿಯಲ್ಲಿ ಪೂಜಿಸುವುದನ್ನು ಕಾಣಬಹುದು. ಅದು ಭೂಮಿ ಹುಣ್ಣಿಮೆಯಂತ ಹಬ್ಬವಾಗಿರಬಹುದು ಅಥವಾ ಕೋಣವನ್ನು ಬಲಿಕೊಡುವ ಆಚರಣೆಯಾಗಿರಬಹುದು. ಇಲ್ಲಿ ಭೂಮಿಗೆ ತೃಪ್ತಿಪಡಿಸುವುದೇ ಆಗಿದೆ. ಅದು ಆದಿಮ ಜನಾಂಗದಲ್ಲಿ ಪ್ರಬಲವಾಗಿರಬೇಕು. ಇಲ್ಲಿ ಮನುಷ್ಯನನ್ನು ಬಲಿಕೊಡುವುದು ಭೂಮಿಯು ಹೆಚ್ಚು ಫಲವನ್ನು ಕೊಡುತ್ತದೆ ಎಂಬುದಾಗಿದೆ.

> Wherever in the ancient world the Great goddess ruled, the universal belief in the death and resurrection of her consort, the divine king, was institutionalized in rites deemed imperative for the preservation society.[೪೯]

ಬಲಿಯು ಮಾನವನಾಗಿರಬಹುದು ಅಥವಾ ಕೋಣವಾಗಿರಬಹುದು ಅದು ದೇವಿ ಮತ್ತು ಮಹಿಷರ ಪ್ರತಿನಿಧಿತ್ವವಾಗಿದೆ. ಕ್ರಿ.ಶ. ೧೯೧೭ರಲ್ಲಿ ಆರ್.ಎಚ್. ಕಾಂಬಲ್ ಅವರು ಬೆಂಗಾಳದ ಖೊಂಡಾ ಜನಾಂಗವು ಸುಮಾರು ನೂರು ಜನರನ್ನು ಈ ರೀತಿಯ ಆಚರಣೆಯಲ್ಲಿ ಬಲಿಯಾಗಿ ಅರ್ಪಿಸಿರುವುದನ್ನು ಉಲ್ಲೇಖಿಸುತ್ತಾರೆ. ಇದು ಕೃಷಿಯು ವೃದ್ಧಿಯಾಗಲು, ಮಕ್ಕಳು, ದನಕರುಗಳಿಗೆ ರೋಗರುಜಿನಗಳಿಂದ ಮುಕ್ತರಾಗಲು ತಾರಿ ಎಂಬ ದೈವಕ್ಕೆ ಬಲಿಯನ್ನು ನರರೂಪದಲ್ಲಿ ಕೊಡಲಾಗಿತ್ತು. ವಿಂದ್ಯಾ ಪರ್ವತದ ಪ್ರದೇಶದಲ್ಲಿರುವ ಶಬರ ಅಥವಾ ಶೌರರು ಎಂದು ಕರೆಯುವ ಜನಾಂಗದಲ್ಲಿ ಠಾಕೂರಾಣಿ ಎಂಬ ದೈವಕ್ಕೆ ಮಾನವನನ್ನು ಬಲಿಯಾಗಿ

ಕೊಡುತ್ತಿದ್ದರು. ನಂತರ ಮಾಂಸವನ್ನು ಎಲ್ಲರೂ ಹಂಚಿಕೊಂಡು ತಿನ್ನುತ್ತಿದ್ದರು.[೫೦] ಅಂಧ್ರಪ್ರದೇಶದಲ್ಲಿ ಕೊಯಾ ಎಂಬ ಬುಡಕಟ್ಟಿನಲ್ಲಿ ಪಾಲೆರಮ್ಮನಿಗೆ ಮನುಷ್ಯನನ್ನು ಬಲಿಯಾಗಿ ಅರ್ಪಿಸಲಾಗುತ್ತಿತ್ತು. ೧೯೩೯ರಲ್ಲಿ ರೆಡ್ಡಿ ಜನಾಂಗದಲ್ಲಿ ಭತ್ತದ ಫಸಲು ವೃದ್ಧಿಯಾಗಲು ಹೊಲದಲ್ಲಿ ಮಕ್ಕಳನ್ನು ಬಲಿಯಾಗಿ ಕೊಡಲಾಗುತ್ತಿತ್ತು.[೫೧] ಕೊಳ್ಳೇಗಾಲ ತಾಲ್ಲೂಕಿನ ಪಾಳ್ಯದಲ್ಲಿ ಮನುಷ್ಯನನ್ನು ಬಲಿಯಾಗಿ ಕೊಡುತ್ತಿದ್ದರ ಸೂಚನೆಗಳು ಸಿಗುತ್ತವೆ. ಈ ಎಲ್ಲವೂ ಒಂದಿಲ್ಲೊಂದು ರೀತಿಯಲ್ಲಿ ಬಲಿಯ ಆಚರಣೆಯು, ಬಲಿಯಾದ ವ್ಯಕ್ತಿಯ ಶಕ್ತಿಯನ್ನು ಅಥವಾ ಪುರುಷಬೀಜವನ್ನು ಅಥವಾ ಪುರುಷ ಶಕ್ತಿಯನ್ನು ಹಂಚಿಕೊಳ್ಳುವುದೇ ಆಗಿದೆ. ಆ ಮೂಲಕ ನಿರೀಕ್ಷಿತ ಫಲ ದೊರಕುತ್ತದೆ ಎಂಬುದು ಈ ಬಲಿಯ ಆಚರಣೆಯ ಹಿನ್ನೆಲೆಯಾಗಿರಬೇಕು. ಮನುಷ್ಯ ಬಲಿಯ ಬದಲಾಗಿ ಕೋಣ ಬಂದಿರುವ ಹಾಗೆ ಕಂಡುಬರುತ್ತದೆ. ಇಲ್ಲಿ ಬರುವ ಮಹಿಷ ಮತ್ತು ಹೆಣ್ಣು (ದೇವಿ) ಇದನ್ನೇ ಸಮರ್ಥಿಸುತ್ತದೆ. ಮಹಿಷನ ಕಾಮನೆ ಅತಿಯಾಗಿ ದೇವಿಯ ಮೇಲೆ ಬೀಳುವುದು, ನಂತರ ಅವನನ್ನು ಕೊಂದು ಹಾಕುವುದು ಅಲ್ಲಿಯ ಪ್ರಮುಖ ವಿಷಯ. ಆ ಮುಖಾಂತರ ಆದಿಮ ಶಕ್ತಿಯ ಮಹತ್ವವನ್ನು ತಿಳಿಸುವುದಾಗಿದೆ.

ಮಹಿಷಮರ್ದಿನಿಯ ಶಿಲ್ಪಗಳು ದೊರಕುವುದು ಹಾಗೂ ಶಿಲ್ಪಲಕ್ಷಣಗಳನ್ನು ಹೇಳುವ ಅನೇಕ ಸಾಮಗ್ರಿಗಳು ದೊರಕುತ್ತವೆ. ಶಿಲ್ಪರತ್ನ ಹಾಗೂ ಅಗ್ನಿಪುರಾಣವು ಮಹಿಷ ಮರ್ದಿನಿಯ ವಿಗ್ರಹಕ್ಕೆ ಮೂರು ಕಣ್ಣುಗಳನ್ನು ಹೊಂದಿರುತ್ತದೆ ಎಂದು ಹೇಳಿದೆ. ಜಟಾಮುಕುಟದಲ್ಲಿ ಚಂದ್ರನನ್ನು ಧರಿಸಿರುತ್ತಾಳೆ. ಅತಸಿ ಹೂವಿನ ಮೈಬಣ್ಣವನ್ನು, ನೀಲೋತ್ಪಲದ ಹಾಗಿರುವ ಕಣ್ಣುಗಳನ್ನು ದೇವಿಯು ಹೊಂದಿರುತ್ತಾಳೆ. ಮಹಿಷಮರ್ದಿನಿಯು ತ್ರಿಭಂಗಿಯಲ್ಲಿ ನಿಂತಿರುತ್ತಾಳೆ. ಹತ್ತುಕೈಗಳನ್ನು ಹೊಂದಿದ್ದು, ಅವುಗಳಲ್ಲಿ ತ್ರಿಶೂಲ, ಖಡ್ಗ, ಶಕ್ತ್ಯಾಯುಧ, ಚಕ್ರ, ಚಾಪ, ಪಾಶ, ಅಂಕುಶ, ಖೇಟಕ, ಪರಶು ಹಾಗೂ ಘಂಟಾ ಇವುಗಳನ್ನು ಹಿಡಿದಿರುತ್ತಾಳೆ. ಕೋಣನ ತಲೆಯನ್ನು ಕಡಿದಿದ್ದು, ಅಲ್ಲಿಂದ ಅರೆಹೊರಬಂದಿ ಅಸುರನಿರುತ್ತಾನೆ. ಅವನ ಕೈಯಲ್ಲಿ ಖಡ್ಗ ಮತ್ತು ಖೇಟಕಗಳನ್ನು ಹೊಂದಿದ್ದು, ಭೀಕರವಾಗಿ ಕಣ್ಣುಗಳನ್ನು ತೆರೆದಿರುತ್ತಾನೆ. ಒಂದು ಕಾಲಿನಿಂದ ದೇವಿಯು ಮಹಿಷನನ್ನು ಅಮುಕಿರುತ್ತಾಳೆ.

ವಿಷ್ಣುಧರ್ಮೋತ್ತರ ಪುರಾಣವು ಬೇರೆ ರೀತಿಯಲ್ಲಿ ರೂಪ ನಿರ್ದೇಶನ ಮಾಡುತ್ತದೆ. ಮಹಿಷಮರ್ದಿನಿಯನ್ನು ಚಂಡಿಕಾ ಎಂದು ಕರೆದಿದ್ದು, ಅವಳ ಮೈಬಣ್ಣವು ಬಂಗಾರದ ರೀತಿಯಾಗಿದೆ. ಸುಂದರವಾಗಿರುವ ದೇವಿಯು ಕೋಪಿಷ್ಟಳಾಗಿದ್ದಾಳೆ. ಸಿಂಹವಾಹನದ ಮೇಲೆ ಕುಳಿತಿರುತ್ತಾಳೆ. ಇಪ್ಪತ್ತು ಕೈಗಳನ್ನು ಚಂಡಿಯು ಹೊಂದಿರುತ್ತಾಳೆ. ಬಲಭಾಗದ ಕೈಯಲ್ಲಿ ತ್ರಿಶೂಲ, ಖಡ್ಗ, ಶಂಕ, ಚಕ್ರ, ಬಾಣ, ಶಕ್ತಿ, ವಜ್ರ, ಅಭಯ, ಅಮರು ಮತ್ತು ಛತ್ರಿಗಳನ್ನು, ಹಾಗೂ ಎಡಗೈಯಲ್ಲಿ ನಾಗಪಾಶ, ಖೇಟಕ, ಪರಶು, ಅಂಕುಶ, ಧನುಷ, ಘಂಟಾ, ಧ್ವಜ, ಗದಾ, ದರ್ಪಣ, ಮತ್ತು ಮುದ್ಗರಗಳನ್ನು ಹಿಡಿದಿರುತ್ತಾಳೆ. ಅಸುರನು ಕೋಣದ ದೇಹದಿಂದ ಹೊರಬರುತ್ತಿರುತ್ತಾನೆ.

ಪದ್ಮಪುರಾಣವು ಇವಳನ್ನು ನಂದಾ ಎಂದು ಕರೆಯುತ್ತದೆ. ಸ್ವಯಂಭು ಮನ್ವಂತರದಲ್ಲಿ ಮಹಿಷಾಸುರನನ್ನು ಮಂದರಗಿರಿಯಲ್ಲಿ ವಾಸಿಸುವ ವೈಷ್ಣವಿಯು ಕೊಂದಳೆಂದು ತಿಳಿಸುತ್ತದೆ. ಮನ್ವಂತರ ವೈವಸ್ವಯತ ಯುಗದಲ್ಲಿ ವಿಂಧ್ಯಾವಾಸಿನಿಯಾದ ನಂದೆಯು ಮತ್ತೆ ಮಹಿಷನನ್ನು ಕೊಂದು ಹಾಕಿದಳು ಎಂದು ಹೇಳುತ್ತದೆ. ದೇವಿ ಮಹಾತ್ಮೆಯಲ್ಲಿಯು ಸಹ ಮೇಲೆ ಹೇಳಿದ ವಿವರಣೆಗಳಿದ್ದು ಸಾವಿರಕೈಗಳನ್ನು ದೇವಿ ಹೊಂದಿದ್ದಳೆಂದು ತಿಳಿಸುತ್ತದೆ.

ಮಹಿಷಮರ್ದಿನಿಯ ವಿಗ್ರಹಗಳು ಕ್ರಿಸ್ತ ಶಕದ ಆರಂಭಕಾಲದಿಂದಲೂ ಸಿಗುತ್ತವೆ. ವೈವಿಧ್ಯಮಯವಾಗಿರುವ ವಿಗ್ರಹಗಳು ಉಪಲಬ್ಧವಾಗಿರುವುವು. ಅವುಗಳನ್ನು ಈ ರೀತಿ ವಿಂಗಡಿಸಿಕೊಳ್ಳಬಹುದು. ಮೊದಲ ಕಾಲದ (ಸುಮಾರು ಕ್ರಿ.ಶ.ಒಂದು ಅಥವಾ ಎರಡು) ವಿಗ್ರಹಗಳಲ್ಲಿ ಕೋಣ ಹಾಗೂ ದೇವಿಯನ್ನು ಯಾವುದೇ ವಿಶೇಷ ರೀತಿಯಲ್ಲಿ ತೋರಿಸದೇ ಸಾಮಾನ್ಯವಾದ ರೀತಿಯಲ್ಲಿ ತೋರಿಸಲಾಗಿದೆ. ಅಂದರೆ ಇಲ್ಲಿ ಒಂದು ಹೆಣ್ಣು, ಕೋಣವನ್ನು ಎತ್ತಿಹಿಡಿದು ಕೊಲ್ಲುವದಷ್ಟೆ ಇಲ್ಲಿಯ ಪ್ರಾಮುಖ್ಯತೆ. ಎರಡನೆಯ ಹಂತದಲ್ಲಿ (ಸುಮಾರು ಕ್ರಿ.ಶ.ಮೂರರಿಂದ ಏಳನೆಯ ಶತಮಾನ) ದೇವಿಯು ಮಹಿಷನನ್ನು ಕೊಲ್ಲುವ ರೀತಿಯಲ್ಲಿ ಬದಲಾವಣೆಯನ್ನು ಪಡೆದಿದ್ದು, ಕೋಣ ಬರೀ ಕೋಣವಾಗಿರದೆ ದೈತ್ಯನಾಗಿ ಕಂಡುಬರುವುದು. ಬಲಿಷ್ಠತೆಯ ರೂಪದಲ್ಲಿ ದೈತ್ಯ ಕಾಣಿಸಿಕೊಳ್ಳುತ್ತಾನೆ. ಮೂರನೆಯ ಹಂತದಲ್ಲಿ (ಸುಮಾರು ಕ್ರಿ.ಶ. ಎಂಟರಿಂದ ನಂತರದ ಕಾಲ) ಕೋಣದ ದೇಹದಿಂದ ದೈತ್ಯ ಬಿಡುಗಡೆ ಹೊಂದಿರುವುದು ಈ ಕಾಲದಲ್ಲಿ ಕಂಡುಬರುವ ವಿಗ್ರಹಗಳ ಲಕ್ಷಣವಾಗಿದೆ.

ಆರಂಭದ ಕಾಲದ ವಿಗ್ರಹಗಳನ್ನು ನೋಡಿದರೆ ಒಂದೇ ಸಂಪುಟದಲ್ಲಿ ಕೆತ್ತಲಾಗಿದೆ. ಯಾವುದೇ ಶಿಲ್ಪಗ್ರಂಥಗಳು ಹುಟ್ಟದ ಕಾಲದಲ್ಲಿ ಬಂದ ಈ ವಿಗ್ರಹಗಲ್ಲಿ ಯಾವುದೇ ವಿಶೇಷವಾದ ಅಂಶಗಳಿರುವುದಿಲ್ಲ. ಬದಲಾಗಿ ದೇವಿಯು ಕೋಣವನ್ನು ಎತ್ತಿಹಿಡಿದಿದ್ದು ದೇವಿಯ ದೇಹಕ್ಕೆ ಸಮೀಪವಾಗಿ ಕಂಡುಬರುತ್ತಾನೆ. ಬೀತ ಎಂಬಲ್ಲಿ ಮಾರ್ಷಲ್ ಅವರು ಉತ್ಖನನ ಮಾಡಿದಾಗ ದೊರಕಿದ ಗುಪ್ತರ ಕಾಲದ ವಿಗ್ರಹವು

> earliest representation of Mahisasurmardini form the Great Goddess and may be earlier than the Devi Mahatmya section of Markandeya purana, because here the goddess has only two arms and not many, and the Buffalo demon is also depicted purley as a figure of buffalo helplessly stretching its head on the ground. [೫೨]

ನಂತರದ ಕಾಲದ ವಿಗ್ರಹಗಳಲ್ಲಿ ದೇವಿಯಿಂದ ದೂರವಾಗುತ್ತಾ ದೈತ್ಯನಾಗುವ ಲಕ್ಷಣಗಳನ್ನು

ಹೊಂದುತ್ತಿರುವುದು ಕಂಡುಬರುತ್ತದೆ. ದೇವಿಮಹಾತ್ಮ್ಯೆಯಲ್ಲಿ ಅರ್ಧನಿಷ್ಕ್ರಾಂತ ಎಂದು ದೈತ್ಯನನ್ನು ಕರೆಯಲಾಗಿದೆ. ಅಂದರೆ ಮಹಿಷ ಮುಖ ಮತ್ತು ಮಾನವ ದೇಹವನ್ನು ಹೊಂದುತ್ತಿರುವ ಲಕ್ಷಣವಾಗಿದೆ. ಇದನ್ನು ಮಹಾಬಲಿಪುರಂ ಎಲ್ಲೋರಾ, ಚಿದಂಬರಂ,ಮುಂತಾದ ಕಡೆ ಕಾಣಬಹುದಾಗಿದೆ. ಇಲ್ಲಿ ದೇವಿಯ ಸ್ವರೂಪ ವಿಸ್ತೃತವಾಗುತ್ತಿರುವುದು, ಹಲವಾರು ಆಯುಧಗಳನ್ನು ಹಿಡಿಯಲು ಕೈಗಳನ್ನು ತೋರಿಸಲಾಗುತ್ತಿದೆ. ಈ ಕಾಲಕ್ಕಾಗಲೇ ಶಿಲ್ಪಲಕ್ಷಣಗಳನ್ನು ಹೊಂದುತ್ತಿರುವುದು ಈ ಕಾಲದ ವಿಶೇಷ. ಜ್ವಾಲ ಎನ್ನುವ ವಿಶೇಷ ಮುಡಿಯು ಉಲ್ಲೇಖವಾಗಿದೆ. ಅಲ್ಲದೆ ಆಲಿಢ ಭಂಗಿಯಲ್ಲಿ ನಿಂತಿರುವ ದೇವಿಯನ್ನು ಕೆತ್ತಲಾಗಿದೆ.

> a story telling relief visualising and depicting the great battle with realistic movements and actions of considerable verb animation. Rarely has their legend been visualised in a stone with such power, skill, dramatic affect. [೫೩]

ನಂತರದ ಕಾಲದ ಹಾಗೂ ಕೊನೆಯ ಘಟ್ಟದಲ್ಲಿ ದೇವಿಯ ಸ್ವರೂಪ ನಿರ್ದಿಷ್ಟಗೊಂಡಿದೆ. ದೇವಿಯು ವಿರಾಟಸ್ವರೂಪವೆಂದು ತೋರಿಸುವಹಾಗೆ ಎತ್ತರದ ದೇಹವನ್ನು ಹೊಂದಿದ್ದಾಳೆ. ದೈತ್ಯ ಸಣ್ಣದಾದ ದೇಹವನ್ನು ತೋರಿಸಲಾಗಿದೆ. ಕೈಗಳ ಸಂಖ್ಯೆ ಹೆಚ್ಚುಕಡಿಮೆಯಾಗುತ್ತಿರುವುದು ನಡೆದೆ ಇದೆ.

೪.೧.೬. ಸಪ್ತ ಮಾತೃಕೆಯರು

ಮಾತೃಆರಾಧನೆಯ ಪರಂಪರೆಯನ್ನು ಅರಿತವರಿಗೆ ಸಪ್ತ ಮಾತೃಕೆಯರ ಪರಂಪರೆಯ ಸ್ಪಷ್ಟ ಚಿತ್ರಣವಿದ್ದೆ ಇರುತ್ತದೆ. ಅಥವಾ ಮಾತೃ ಪರಂಪರೆಯು ಶಿಷ್ಟ ಸಾಹಿತ್ಯದಲ್ಲಿ ಎಷ್ಟು ವ್ಯಾಪಕವಾಗಿದೆಯೋ ಅಷ್ಟೆ ಅಥವಾ ಅದಕ್ಕೂ ಮಿಗಿಲಾಗಿ ಜನಪದ ಪರಂಪರೆಯಲ್ಲೂ ಹರಡಿಕೊಂಡಿದೆ. ಶಿವನ ಕುಟುಂಬ ವರ್ಗಕ್ಕೆ ಸೇರಿಸಲ್ಪಟ್ಟಿರುವ ಮಾತೃ ಪರಂಪರೆಯಲ್ಲಿ ಅನೇಕ ಅಂಶಗಳು ಅಡಕವಾಗಿವೆ. ಏಳು ಮಾತೃಕೆಯರೆಂದು ಸಾಮಾನ್ಯವಾಗಿ ಕರೆದರೂ ಅದು ಎಂಟು ಇರಬಹುದು ಅಥವಾ ಹದಿನಾರು ಮಾತೃಕೆಯರು, ಅದಕ್ಕೂ ಹೆಚ್ಚಿಗೆ ಇರಬಹುದು. ಶಕ್ತಿಯನ್ನು ವಿಶ್ವನಿಯಾಮಾತ್ಮಕವಾದುದು, ಅದು ಮಾತೃಸ್ವರೂಪಿಣಿಯಾದ ಭೂಮಿಯ ರೂಪವಾಗಿರಬಹುದು, ಅಥವಾ ಪ್ರಾಣಿ ರೂಪವಾಗಿರಬಹುದು, ಅಥವಾ ಸಸ್ಯರೂಪವಾಗಿರಬಹುದು, ಗ್ರಾಮರಕ್ಷಣೆಯ ಸ್ವರೂಪವಾಗಿರಬಹುದು ಹೀಗೆ ಅದು ರಕ್ಷಣೆ ಹಾಗೂ ಸಮೃದ್ಧಿಯನ್ನು ಒದಗಿಸುವ ಗುಣವಾಗಿದೆ. ವಿಶ್ವಸೃಷ್ಟಿಯಲ್ಲಿ ಸ್ತ್ರೀಯ ಪ್ರಾಧಾನ್ಯತೆಯನ್ನು ಹೇಳುವುದು ಈ ಮಾತೃಕಾ ಪರಂಪರೆಯ ಲಕ್ಷಣವಾಗಿದೆ. ವಿ.ಎಸ್ ಅಗ್ರವಾಲ ಅವರು ಹೇಳುವಂತೆ ಸಪ್ತಮಾತೃಕೆಯರು;

The earth is also the mother, the cow is also the symbol of motherhood. One's own mother is the most importent link in that chain of mothers at several levels. They are seven great principles of manifestation viz., Mind, life, matter comprised of the gross elements. These are produced by a team of seven mothers, who in the Vedas are also known as the seven sisters who form one band and take their seat on a conunon moving chariot symbolised as the human body or each solar ray or each octave sound. In the puranic imagery they are represented as Sapthamatrika goddesses personifying the powers of the seven typical Devas.[xv]

ಈ ಹಿನ್ನೆಲೆಯಲ್ಲಿ ಸಪ್ತ ಮಾತೃಕೆಯರ ಪರಂಪರೆಯನ್ನು ಪುರಾಣ ಹಾಗೂ ಜಾನಪದ ಹಿನ್ನೆಲೆಯಲ್ಲಿ ನೋಡಿದಾಗ ಅವರ ಮಹತ್ವ ಅರಿವಿಗೆ ಬರುತ್ತದೆ. ಸಪ್ತಮಾತೃಕೆಯರು ಮೊದಲು ಕಂಡುಬರುವುದು ಕ್ರಿಸ್ತಪೂರ್ವದ ಕೊನೆಯ ಭಾಗದಲ್ಲಿ. ಅದಕ್ಕೂ ಪೂರ್ವದಲ್ಲಿ ಹರಪ್ಪ ಸಂಸ್ಕೃತಿಯಲ್ಲಿ ಇತ್ತೆಂದು ಸಾಬೀತುಪಡಿಸಲು ಆಧಾರಗಳು ಸಾಕಾಗುವುದಿಲ್ಲವಾದರೂ ಸಪ್ತಮಾತೃಕೆಯರ ಬೀಜರೂಪದಲ್ಲಿ ಆ ಕಾಲಕ್ಕಾಗಲೇ ಇತ್ತು ಎಂದು ನಂಬಲು ಸಂದೇಹವಿರಲು ಸಾಧ್ಯವಿರಲಿಕ್ಕಿಲ್ಲ. ಅದರಲ್ಲೂ ಬೇಕಾದಷ್ಟು ವಾದ ವಿವಾದಗಳಿವೆ. ಇದು ಸಪ್ತಮಾತೃಕೆಯರ ಪರಂಪರೆಯದ್ದಲ್ಲ, ಯಾಗದ ಕಲ್ಪನೆಯದ್ದಾಗಿರಬೇಕು ಅನ್ನುವ ವಾದವೂ ಇದೆ. ಅಲ್ಲದೆ ಋಗ್ವೇದದಲ್ಲಿಯೇ ಸಪ್ತಮಾತೃಕೆಯರ ಕಲ್ಪನೆಯು ಅಡಗಿದೆ ಎಂಬ ವಾದವೂ ಇದೆ. ವೈದಿಕ ಪರಂಪರೆಯದ್ದೋ, ಅಥವಾ ಜಾನಪದ ಮೂಲದಿಂದ ಬಂದ ಪರಂಪರೆಯೋ ಎಂಬ ಅನುಮಾನಗಳಿವೆ.

ಸಪ್ತಮಾತೃಕೆಯರ ಪ್ರಾಚೀನತೆಯನ್ನು ಗಮನಿಸಿದಾಗ ಅದು ಕ್ರಿಸ್ತ ಶಕದ ಆಜುಬಾಜಿನಲ್ಲಿಯೇ ಮಾಹಿತಿಗಳು ಲಭ್ಯವಾಗುತ್ತವೆ. ಆದಕ್ಕೂ ಪೂರ್ವಕ್ಕೆ ಯಾವುದೇ ಮಾಹಿತಿಯು ದೊರಕುವುದಿಲ್ಲ. ಮಹಾಭಾರತದಲ್ಲಿ ದೊರಕುವ ಮಾಹಿತಿಯನ್ನು ಪ್ರಾಚೀನವಾದುದೆಂದು ಭಾವಿಸಲಾಗಿದೆ. ಅಲ್ಲಿಯೇ ಸಪ್ತಮಾತೃಕೆಯರ ಕಚ್ಚಾರೂಪ ದೊರಕುತ್ತದೆ.ಈ ಹಿಂದೆ ವೈದಿಕ ಸಾಹಿತ್ಯದಲ್ಲಿ ಕಂಡುಬರುವುದು ಭಿನ್ನ ರೂಪದಲ್ಲಿ.

೪.೧.೬.೧. ಸಪ್ತಮಾತೃಕೆಯರ ಉಗಮ ಮತ್ತು ವಿಕಾಸ

ಸಪ್ತ ಮಾತೃಕೆಯರ ವಿಗ್ರಹಾರಾಧನೆ ಪ್ರಾಚೀವಾದುದೆಂದು ನಂಬಲಾಗಿದೆ. ಜನಪದರಲ್ಲಿ ಇಂದಿಗೂ ಅದರ ಆಚರಣೆ ಕಂಡುಬರುತ್ತದೆ. ವೈದಿಕ ಸಾಹಿತ್ಯದಲ್ಲಿಯೂ ಸಹ ಸಪ್ತ ಮಾತೃಕಾ ಎಂಬ ಶಬ್ದಗಳು ಅನೇಕ



ಚಿತ್ರ ೧೮

ಕಡೆ ಸಿಗುತ್ತವೆ. ಈ ಹಿನ್ನೆಲೆಯಲ್ಲಿ ಸಪ್ತಮಾತೃಕೆಯರ ಉಗಮ, ವಿಕಾಸವು ಯಾವ ರೀತಿಯಾಗಿರಬೇಕು ಎಂಬುದನ್ನು ಎಲ್ಲಾ ಮೂಲಗಳಿಂದ ನೋಡಬಹುದು. ಹಾಗೆಯೇ ಅದರ ಮೂಲ ಯಾವುದೆಂದು ಇಲ್ಲಿ ನೋಡಬಹುದು. ಮೊದಲಿಗೆ ನಮಗೆ ಸಿಂಧೂ ನಾಗರಿಕತೆಯಲ್ಲಿ ಸಪ್ತಮಾತೃಕೆಯರ ಆರಾಧನೆ ಎಂದು ಹೇಳಬಹುದಾದ ಯಾವುದೇ ದಾಖಲೆಗಳು ದೊರಕುವುದಿಲ್ಲ. ದೊರಕುವ ಒಂದು ಮುದ್ರೆಯ ಬಗೆಗೆ ಹಲವಾರು ವಾದವಿವಾದಗಳು ಇವೆ.

ಸಿಂಧೂ ನಾಗರಿಕತೆಯ ಪ್ರದೇಶವಾದ ಮೋಹೆಂಜೋದಾರೋದಲ್ಲಿ ಪ್ರಾಚೀನವಾದ ಮಾತೃಕೆಯರದೆಂದು ಹೇಳಲಾಗುವ ಮುದ್ರೆಯೊಂದು ದೊರಕಿದೆ. ಅಶ್ವತ್ಥ ವೃಕ್ಷದ ಕವಲುಗಳ ಮಧ್ಯದಲ್ಲಿ ನಿಂತಿರುವ ಮಾನುಷಾಕೃತಿಯ ವಿಗ್ರಹವಾಗಿದೆ. ಅವಳ ಮುಂದೆ ಮಂಡಿಯೂರಿ ವ್ಯಕ್ತಿಯೋರ್ವ ಯಾಚನೆಯನ್ನು ಮಾಡುತ್ತಿರುವ ರೀತಿಯಲ್ಲಿ ಕುಳಿತಿದ್ದಾನೆ. ಅವನ ಹಿಂದೆ ಮನುಷ್ಯನ ಮುಖ ಮೇಕೆಯ ದೇಹವನ್ನು ಹೊಂದಿರುವ ಮೇಕೆಯು ನಿಂತಿದೆ. ಇವರ ಮುಂದೆ ಏಳು ಜನ ಸಾಲಾಗಿ ನಿಂತಿದ್ದಾರೆ. ಬಹುಶಃ ಅವರು ಸ್ತ್ರೀಯರಿರಬೇಕೆಂದು ಹಲವಾರು ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ. ಮಾರ್ಷಲ್ ರವರು ಇದನ್ನು ವೃಕ್ಷಾರಾಧನೆಯನ್ನು ಮಾಡುತ್ತಿರುವವರಾಗಿರಬೇಕು ಎಂದು ಊಹಿಸುತ್ತಾರೆ. ಅಲ್ಲದೆ ಕೆಳಗಿನ ಸಾಲಿನಲ್ಲಿ ನಿಂತಿರುವ ಸ್ತ್ರೀಯರು ದೇವಿಯ ಆರಾಧಕರಾಗಿದ್ದು, ಧಾರ್ಮಿಕ ನೃತ್ಯದಲ್ಲಿ ಪಾಲ್ಗೊಂಡಿರಬೇಕು ಹಾಗೂ ಪ್ರಾಣಿಯು ಯಾವುದೋ ಕ್ಷುದ್ರದೇವತೆಯಾಗಿರಬೇಕು ಎಂದು ನಿಷ್ಕರ್ಷಿಸುತ್ತಾರೆ.[೫೫]

ಅದೇ ರೀತಿಯಲ್ಲಿ ಮೇಕೆಯವರು ಈ ಮುದ್ರೆಯು ಬಲಿ ಆಚರಣೆಯ ವಿಧಾನವನ್ನು ತಿಳಿಸುತ್ತಿಲ್ಲ ಎನ್ನುವುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಅಲ್ಲದೆ ಮೇಕೆಯು ದೇವಿಯ ಇನ್ನೊಂದು ರೂಪವಾಗಿರಬೇಕು, ಯಾಕೆಂದರೆ ಈ ರೀತಿಯಲ್ಲಿರುವ ವಿಗ್ರಹಗಳು ದೇವತೆಯ ಅವತಾರವೆಂದು ತಿಳಿಯಲಾಗಿದೆ ಎನ್ನುತ್ತಾರೆ. ಅಲ್ಲದೆ ಕೆಳಗಿನ ಸಾಲಿನಲ್ಲಿರುವ ಸ್ತ್ರೀಯರು ಏಳು ದೇವತೆಗಳಾಗಿರಬೇಕು. ಇವು ಕಡಿಮೆ ದರ್ಜೆಯ ಅಥವಾ ಉಪದೇವತೆ ಅಥವಾ ಕ್ಷುಲ್ಲಕ ದೇವತೆಗಳಾಗಿರಬೇಕು ಎಂದು ಊಹಿಸುತ್ತಾರೆ. ಏಳು ಜನರುಗಳಲ್ಲಿ ಶೀತಾಲ ಮತ್ತು ಆರು ಜನ ಅವಳ ತಂಗಿಯರಾಗಿರಬೇಕು ಎಂದು ಸಂದೇಹಿಸುತ್ತಾರೆ. ಮೇಕೆ ಅವರು ಈ ವಿಗ್ರಹಗಳು ಸಪ್ತಮಾತೃಕೆಯರ ರೂಪಗಳೇ ಎಂಬ ಬಗೆಗೆ ಸ್ಪಷ್ಟವಾದ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸುವುದಿಲ್ಲ. ಆದರೆ ಎಲ್ಲೋ ಅವರ ಮನಸ್ಸಿನಲ್ಲಿ ಸಪ್ತಮಾತೃಕೆಯರ ಪರಂಪರೆಯಾಗಿರಬೇಕು ಎಂಬ ಹೊಳವನ್ನು ಅವರು ಕೊಡುತ್ತಾರೆ[೫೬] ಆದರೆ ಮಾರ್ಷಲ್ ಅವರಾಗಲೀ ಮೇಕೆಯವರಾಗಲೀ ಈ ವಿಗ್ರಹವನ್ನು ವೈದಿಕ ಪರಂಪರೆಯಲ್ಲಿ ಇಟ್ಟು ನೋಡುವುದಿಲ್ಲ. ಇದು ಸಪ್ತಮಾತೃಕೆಯರ ಪ್ರಾಗ್‌ರೂಪ (Prototype)ವಾಗಿರಬೇಕು ಎಂಬುದರಲ್ಲಿ ಸಂದೇಹವಿರುವ ಹಾಗೆ ಕಂಡುಬರುವುದಿಲ್ಲ.

ಆರ್.ಸಿ. ಮಜುಂದಾರ್ ಅವರ ಸಂಪಾದಕತ್ವದಲ್ಲಿ ಬಂದ ವೇದಯುಗದಲ್ಲಿ ಈ ಮುದ್ರೆಯ ವಿಶ್ಲೇಷಣೆಯನ್ನು ಮಾಡಲಾಗಿದೆ. ಇಲ್ಲಿ ಎ.ಡಿ.ಪುಸಾಳ್ಕರ್ ಅವರು ;

" 'ಅಶ್ವತ್ಥ' ವೃಕ್ಷದ ಕವಲೊಡೆದ ಶಾಖೆಯಲ್ಲಿ ನಿಂತಿರುವ ಆಕೃತಿಯ ಚಿತ್ರಣವು ಮಾತೃದೇವತೆಯನ್ನು ಸೂಚಿಸುವಂತೆ ಕಾಣುತ್ತದೆ. ಈ ದೇವತೆಯ ಉಪಾಸಕನು ಮೇಕೆಯೊಂದನ್ನು ಪ್ರಾಯಶಃ ಬಲಿಗಾಗಿ ತರುತ್ತಿದ್ದಾನೆ. ಮತ್ತು ಅದರ ಕೆಳಗಿನ ಅಂಕಣದಲ್ಲಿ ನಿಂತಿರುವ ಹಲವಾರು ಜನರು ಈ ಯಜ್ಞದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಅಶ್ವತ್ಥ ವೃಕ್ಷವನ್ನು ಭಾರತದಾದ್ಯಂತ ಈಗಲೂ ಪವಿತ್ರವೆಂದು ಪೂಜಿಸಲಾಗುತ್ತಿದೆ ಯಾವರೂ ಅದು ಮಾತೃದೇವತೆಯ ಉಪಾಸನೆಯೊಂದಿಗೆ ಸಂಬಂಧಪಡುವುದಿಲ್ಲ. ಮಾತೃದೇವತೆಯ ಇನ್ನೊಂದು ರೂಪವಾದ ಶಕ್ತಿ ಉಪಾಸನೆಯಲ್ಲಿ ಮೇಕೆಯ ಬಲಿ ಉಳಿದುಕೊಂಡು ಬಂದಿದ" ಎನ್ನುತ್ತಾರೆ.[೫೨]

ಅಲ್ಲದೆ ಈ ಆರಾಧನೆಯು ಶಕ್ತಿಯ ಆರಾಧನೆಯನ್ನು ತಿಳಿಸುತ್ತದೆ ಹಾಗೂ ಇಲ್ಲಿರುವ ವಿಗ್ರಹವು ಶಕ್ತಿಯದೆಂದು ಸ್ಪಷ್ಟವಾಗಿ ಹೇಳುವರಾದರೂ ಮುಂದೆ ನಿಂತಿರುವವರು ಸಾಮಾನ್ಯಜನರೆಂದು ಹೇಳುತ್ತಾರೆ. ಅಲ್ಲದೆ ಅಶ್ವತ್ಥ ವೃಕ್ಷವು ಶಕ್ತಿ ಉಪಾಸನೆಗೆ ಸಂಬಂಧಪಡುವುದಿಲ್ಲ ಎಂದು ಹೇಳುವುದು ಅಷ್ಟು ತರ್ಕಬದ್ಧವಾಗುವುದಿಲ್ಲ. ಯಾಕೆಂದರೆ ಪ್ರಾಚೀನ ನಂಬಿಕೆಯಲ್ಲಿ ಹಾಲು ಒಸರುವ ಎಲ್ಲಾ ಗಿಡಗಳು ಶಕ್ತಿಯ ಆರಾಧನೆಯಲ್ಲಿ ಬರುತ್ತವೆ. ದಕ್ಷಿಣ ಭಾರತ ಹಾಗೂ ಬೆಂಗಾಳದಲ್ಲಿ ಅಶ್ವತ್ಥ ವೃಕ್ಷವು ವನ ದುರ್ಗೆಯ ಆರಾಧನೆಯಲ್ಲಿ ಪ್ರಮುಖ ಪಾತ್ರವಹಿಸಿದೆ ಎಂಬುದನ್ನು ಮುಂದೆ ನೋಡುತ್ತೇವೆ. ಮೇಕೆಗೆ ಮನುಷ್ಯನ ಮುಖವನ್ನು ಕೊಟ್ಟಿರುವ ಬಗೆಗೆ ಅವರು ಏನನ್ನೂ ಹೇಳುವುದಿಲ್ಲ. ಡಾ. ಎಸ್.ಆರ್. ರಾವ್ ಅವರು ಯಾಗಕಾರ್ಯದಲ್ಲಿ ನಿರತನಾದ ರಾಜನೆಂದು, ಹಿಂದೆ ಇರುವುದು ಹೋತವೆಂದೂ ಕೆಳಗಡೆ ಇರುವ ಏಳು ಜನರು ಯಜ್ಞದಲ್ಲಿ ಪಾಲ್ಗೊಂಡಿರುವ ಇತರ ರಾಜರೆಂದು ಹೇಳುತ್ತಾರೆ.

ನಂತರದಲ್ಲಿ ಬಂದ ವಿದ್ವಾಂಸರು ಋಗ್ವೇದದ ಹಿನ್ನೆಲೆಯಲ್ಲಿ ಈ ಮುದ್ರೆಯನ್ನು ಇಟ್ಟು ನೋಡುವ ಪರಂಪರೆಯನ್ನು ಕಾಣಬಹುದು. ಅದರಲ್ಲಿ ಪ್ರಮುಖರಾದವರೆಂದರೆ, ವಿಜೆಸೆಕರ್, ದೀಕ್ಷಿತ್, ಧವಳಿಕರ್, ಮುಂತಾದವರು. ಋಗ್ವೇದದಲ್ಲಿ 'ಸಪ್ತಮಾತರಃ' (ಏಳು ತಾಯಂದಿರು), 'ಸಪ್ತ ಸ್ವಸಾರಃ' (ಏಳು ಸ್ವರಗಳು) ಹಾಗೂ 'ಸಪ್ತಸಿಂಧವಃ' (ಏಳು ನದಿಗಳು) ಎಂಬ ಮಾತುಗಳು ಬರುತ್ತವೆ. ಈ ಮಾತುಗಳಿಗೂ ಸಿಂಧೂ ನಾಗರಿಕತೆಯಲ್ಲಿ ಕಂಡುಬರುವ ಮುದ್ರೆಗೂ ಸಂಬಂಧ ಇರುವಹಾಗೆ ನೋಡಲಾಗಿದೆ. ಅದು ಫಲವಂತಿಕೆಯ ರೂಪದಲ್ಲಿ. ತಮ್ಮ ಲೇಖನದಲ್ಲಿ ಮುದ್ರೆಗಳಲ್ಲಿ ಕಂಡು ಬರುವ ಏಳು ವ್ಯಕ್ತಿಗಳು ಹಾಗೂ ಋಗ್ವೇದದಲ್ಲಿ ಕಂಡುಬರುವ *ಸಪ್ತಸಿಂಧವಃ* ಒಂದೇ ಇರಬಹುದು ಎನ್ನುತ್ತಾರೆ. ಋಗ್ವೇದದಲ್ಲಿ ಏಳು ನದಿಗಳು ಪ್ರಧಾನ

ಪಾತ್ರವಹಿಸಿವೆ. ಈ ಏಳು ನದಿಗಳ ಮಾನುಷ ರೂಪವೇ ಈ ಏಳು ಜನರಿರಬೇಕು. ಋಗ್ವೇದದಲ್ಲಿ ಸರಸ್ವತಿಗೆ ಫಲವಂತಿಕೆ ರೂಪವಾಗಿ ಮಾತೃದೇವತೆಯ ಸ್ಥಾನವನ್ನು ಕೊಡಲಾಗಿದೆ. ಅಶ್ವತ್ಥ ವೃಕ್ಷದ ಟೊಂಗೆಯ ಮಧ್ಯದಲ್ಲಿ ನಿಂತಿರುವ ದೇವತೆಯು ಗಂಡು ದೇವತೆಯ ವಿಗ್ರಹವಾಗಿರಬೇಕು. ಅದು ಸಂತಾನವನ್ನುಂಟುಮಾಡುವ ಅಥವಾ ಫಲವನ್ನು ಕೊಡುವ ದೇವತೆಯಾಗಿರಬೇಕು. ಆ ಕಾರಣದಿಂದಲೇ ನದಿ ಮತ್ತು ಫಲವಂತಿಕೆಯ ದೇವತೆಗಳ ಆರಾಧನೆಯು ಅಂಗವಾಗಿದ್ದು, ಹಾಗೆ ನೋಡಿದರೆ, ಫಲವಂತಿಕೆಯ ಕಲ್ಪನೆಯು ಸಿಂಧೂ ನಾಗರಿಕತೆಯದ್ದೆ ಆಗಿದ್ದರೂ ಕೂಡಾ, ವೇದಗಳ ಕಲ್ಪನೆಯು ಅದೇ ಆಗಿದೆ. ಈ ಕಾರಣದಿಂದ ಸಪ್ತಮಾತೃಕೆಯರ ಕಲ್ಪನೆಯು ಹರಪ್ಪ ಸಂಸ್ಕೃತಿಯದ್ದೆ ಆಗಿರಬಹುದು. ಇದನ್ನು ಈ ಮುದ್ರೆ ಹೇಳುತ್ತದೆ ಎಂಬುದು ಅವರ ವಾದ.[೫೮]

ಧವಳಿಕರ್ ಅವರು ಸಪ್ತಮಾತೃಕೆಯರ ಉಗಮದ ಬಗೆಗೆ ಚರ್ಚಿಸುತ್ತಾ ಈ ಮದ್ರೆಯಲ್ಲಿ ಕಂಡುಬರುವ ಏಳು ಜನರು ಋಗ್ವೇದದಲ್ಲಿ ಕಂಡು ಬರುವ ಸಪ್ತಮಾತರಃ ಎಂಬುದೇ ಆಗಿದೆ. ಇಲ್ಲಿ ಸಪ್ತಮಾತೃಕೆಯರು ಸೋಮವನ್ನು ಮಾಡುತ್ತಿರುವ ರೀತಿಯದ್ದಾಗಿದೆ ಎಂಬುದು ಅವರ ವಾದ. ಈ ವಾದಕ್ಕೆ ಕೊಡುವ ಹಿನ್ನೆಲೆಯೆಂದರೆ ಅಶ್ವತ್ಥ ವೃಕ್ಷದ ಮಧ್ಯದಲ್ಲಿ ಕುಳಿತಿರುವ ದೇವತೆಯು ಅಗ್ನಿಯಾಗಿದ್ದು, ಅವನ ಹಿಂದೆ ಇರುವುದು ವಾಹನವಾದ ಕುರಿಯಾಗಿರಬೇಕು. ಕಾರಣ ಅಗ್ನಿಯ ವಾಹನ ಗೊತ್ತಿರುವಂತೆ ಟಗರು. ಅವರ ಮುಂದೆ ಇರುವ ದೇವತೆಗಳು ಋಗ್ವೇದದಲ್ಲಿ ಹೇಳುವ ಸಪ್ತಮಾತೃಕೆಯರು ಇವರಾಗಿರಬೇಕು. ಋಗ್ವೇದದಲ್ಲಿ ಒಂದು ಮಂತ್ರ ಬರುತ್ತದೆ. ಅದು ಹೀಗಿದೆ, "ಜಜ್ಞಾನಂ ಸಪ್ತಮಾತರೋ ವೇದಾಮಶಾಸತ ಶ್ರೀಯೆ ಅಯಂ ಧ್ರುವೊ ರಯೀಣಾಂ ಚಿಕೆತ ಯತ್" (IX.102.4) ಎನ್ನುವ ಮಂತ್ರದ ಆಧಾರದಮೇಲೆ ಅವರು ಈ ಊಹೆಯನ್ನು ಮಾಡುತ್ತಾರೆ. ಅವರು ಮುಂದುವರೆದು ತಮ್ಮ ವಾದವನ್ನು ಹೀಗೆ ಬೆಳೆಸುತ್ತಾರೆ. ಸಪ್ತನದಿಗಳು ಆರ್ಯರ ಜೀವನದ ಅವಿಭಾಜ್ಯ ಅಂಗವಾದವು. ತುಷ್ಟಿ ಪುಷ್ಟಿಯ ಸ್ವರೂಪವಾದ ನದಿಗಳನ್ನು ದೇವತಾ ಸ್ವರೂಪವಾಗಿ ನೋಡಲಾಗಿದೆ. ಅದೇ ರೀತಿ ಸೋಮವನ್ನು ಈ ನದಿಗಳು ಉತ್ಪಾದಿಸುವ ಗುಣವನ್ನು ಹೊಂದಿವೆ. ಆದ್ದರಿಂದ ನದಿಗಳನ್ನು ಮಾತೃಸ್ವರೂಪದಿಂದ ನೋಡಿರುವುದರಿಂದಲೂ ಈ ಮುದ್ರೆಯಲ್ಲಿ ಕಂಡುಬರುವ ಸಾಮ್ಯತೆಯಿಂದ ಇದು ಸೋಮವನ್ನು ಉತ್ಪಾದಿಸುವ ನದಿಗಳಾಗಿವೆ. ಸಪ್ತ ಮಾತೃಕೆಯರೆಂದರೆ, "the Sapta-matrkas were essentially water deities to the Indo-Aryans."[೫೯] ಧವಳಿಕರರ ವಾದದಲ್ಲಿ ಮುಂದುವರಿಕೆಯ ಗುಣವನ್ನು ಕಾಣುವುದಿಲ್ಲ. ಅಂದರೆ ಋಗ್ವೇದ ಹಾಗೂ ಮಹಾಭಾರತಗಳ ಅಂತರದಲ್ಲಿ ಸಪ್ತಮಾತೃಕೆಯರು ಏನಾಗಿದ್ದರು, ಅವರ ಸ್ವರೂಪವೇನು ಎನ್ನುವ ಪ್ರಶ್ನೆಗಳಿಗೆ ಧವಳಿಕರ್ ಅವರಲ್ಲಿ ಉತ್ತರವಿಲ್ಲ. ಮಹಾಭಾರತ ಕಾಲಕ್ಕೆ ಬಂದಾಗಲೇ ಸಪ್ತಮಾತೃಕೆಯರ ಸ್ವರೂಪ ನಿಗದಿತಗೊಂಡದು. ಋಗ್ವೇದದಲ್ಲಿ ಹಲವಾರು ಕಡೆ ಏಳು ಮಾತೃಕೆಯರ ಉಲ್ಲೇಖ ಬರುತ್ತದೆ. ಅಗ್ನಿಯನ್ನು "ಸಪ್ತ ಜಿಹ್ವಾಃ", "ಸಪ್ತರಶ್ಮಾಯಃ", ಸಪ್ತಮಾತರಃ"

(Rg.V., 8,72.16;1.146.1;11.5.2) ಎಂದು ಕರೆಯಲಾಗಿದೆ. ಇವು ಅಗ್ನಿ ಅಥವಾ ಸೂರ್ಯರನ್ನು ಕುರಿತು ಹೊಗಳುವುದೆ ಆಗಿವೆ.

ಎಸ್.ಕೆ. ದೀಕ್ಷಿತ್ ಅವರು ಹೇಳುವಂತೆ ಕ್ರಿ. ಪೂ. ಸುಮಾರು ಸಾವಿರದ ಐದುನೂರು ವರ್ಷಗಳ ಪೂರ್ವದಲ್ಲಿ ಇವು ಈಜಿಪ್ತನಿಂದ ಬಂದಿರಬೇಕು.ಏಳು ಹಟ್ ಹೊರ್ಸ್ (Hat-hors) ಎಂಬ ದೈವಗಳು ಕಂಡುಬರುತ್ತವೆ. ಇವು ಮನುಷ್ಯನ ಒಳಿತು ಕೆಡುಕುಗಳನ್ನು ನಿರ್ಧರಿಸುತ್ತವೆ. ಇವು ಸಾಮಾನ್ಯವಾಗಿ ಒಂದು ಏಳಾಗುವ ಗುಣವನ್ನು ಹೊಂದಿವೆ. ಅಗ್ನಿಯು ಏಳು ತಾಯಂದಿರಾಗುವ, ಏಳು ನಾಲಿಗೆಯಾಗುವ ಹಾಗೂ ಏಳು ರಶ್ಮಿಗಳಾಗುವ ರೂಪಾಂತರವು ಈ ಮೂಲದಿಂದ ಬಂದಿರಬೇಕು ಎಂಬುದ ಅವರ ವಾದ.[೬೦]

ಸ್ಕಂದ ಅಥವಾ ಕುಮಾರ ಕಾರ್ತಿಕೇಯನಿಗೂ ಮಾತೃದೇವತಾ ಪರಂಪರೆಯಲ್ಲಿ ಬರುವ ಸಪ್ತಮಾತೃಕೆಯರಿಗೂ ಸಂಬಂಧವಿರುವುದನ್ನು ಮಹಾಭಾರತದಲ್ಲಿ ನೋಡಲಾಗುವುದು. ಸ್ಕಂದ ಅಥವಾ ಕಾರ್ತಿಕೇಯನಿಗೂ ಅಗ್ನಿಗೂ ಸಂಬಂಧವನ್ನು ಕಲ್ಪಿಸಲಾಗಿದೆ. ಅಗ್ನಿ ಮತ್ತು ಕೃತ್ತಿಕೆಯರ ಮಗನಾಗಿ ಚಿತ್ರಿಸಲಾಗಿದೆ. ಕೃತ್ತಿಕೆಯ ಆರು ಮುಖಗಳೇ ಕುಮಾರನ ಆರುಮುಖಗಳಾಗಿವೆ [೬೧] ಎಂಬುದು ಪುರಾಣಗಳಲ್ಲಿ ಬರುವ ಕತೆಯಾಗಿದೆ. ಮತ್ತು ಕೆಲವು ಕಡೆ ಷಣ್ಮುಖನಿಗೆ ಏಳು ಮುಖಗಳೆಂದು, ಅವ್ರ, ಅಂಬಾ, ದುಲಾ, ನಿತನ್ನಿ, ಅಭ್ರಯನ್ತಿ, ಮೇಘಯನ್ತಿ, ವರ್ಷಯನ್ತಿ, ಚುಪುರ್ಣಿಕಾ (ತೈತ್ತರಿಯ ಸಂಹಿತ, ೪.೪.೫; ತೈತ್ತರೀಯ ಬ್ರಾಹ್ಮಣ, ೩.೧.೪) ಎಂದು ಕರೆಯಲಾಗಿದೆ. ಕೃತ್ತಿಕೆಯು ಕುಮಾರನನ್ನು ಪೋಷಿಸಿ ಬೆಳಸಿದ್ದರಿಂದ ಕಾರ್ತಿಕೇಯನೆಂದು ಹೆಸರು ಬಂದಿರುವುದು. ಅಗ್ನಿಗೂ ಸ್ಕಂದನಿಗೂ ಸಂಬಂಧವನ್ನು ಕಲ್ಪಿಸುವ ಪ್ರಯತ್ನವಾಗಿದೆ. ಆದರೆ ಸ್ಕಂದ ಅಥವಾ ಕುಮಾರನು ದ್ರಾವಿಡ ದೇವತೆ ಎಂಬುದರಲ್ಲಿ ವಿದ್ವಾಂಸರಲ್ಲಿ ಸಂಶಯವಿರುವ ಹಾಗೆ ಕಂಡುಬರುವುದಿಲ್ಲ. ಈ ಕೃತ್ತಿಕೆಯು ಸಹ ಮಾತೃದೇವತೆಯಾಗಿರಬೇಕು ಎಂಬ ವಾದವು ಇದೆ. ಆದರೆ, ಕೃತ್ತಿಕೆ ಹಾಗೂ ಕಾರ್ತಿಕೇಯ ಶಬ್ದಗಳ ರೂಪಗಳ ಆಧಾರದ ಮೇಲೆ ಈ ಐತಿಹ್ಯ ಹುಟ್ಟಿರುವ ಹಾಗೆ ಕಂಡುಬರುತ್ತದೆ. ಆದರೆ, ಕಾರ್ತಿಕೇಯ, ಕೃತ್ತಿಕೆಯ ರೂಪವಾಗಿರಲಾರದು. ಕೃತ್ತಿಕೆಯು ಒಂದು ನಕ್ಷತ್ರದ ಹೆಸರಾಗಿದ್ದು, ಕಾರ್ತಿಕೇಯ ಇತ್ತೀಚಿನ ಹೆಸರಾಗಿರಬೇಕು. ಅಗ್ನಿಯ ರೂಪವೆಂದು ಹೊಗಳಲಾಗಿದ್ದರೂ ಸಹ ಅಗ್ನಿಯ ಕುಟುಂಬಕ್ಕೆ ಸೇರಲಾರ. ಕಾರಣ ಅವನೊಬ್ಬ ಯುದ್ಧದೇವತೆಯೆಂದು ಪುರಾಣಗಳಲ್ಲಿ ಉಲ್ಲೇಖಿತವಾಗಿದ್ದಾನೆ. ಹಾಗೂ ದಕ್ಷಿಣ ಭಾರತದ ಸಾಹಿತ್ಯದಲ್ಲಿ ದೇವಿಯ ಸೈನಿಕ ಮುಖಂಡನಾಗಿದ್ದಾನೆ ಎಂಬುದು ತಿಳಿಯುತ್ತದೆ. ಅಲ್ಲದೆ ಅವನೊಬ್ಬ ಯುದ್ಧದ ಆದಿ ದೇವತೆಯಾಗಿದ್ದಾನೆ. ಕಾರ್ತಿಕ ಮಾಸ ಅಥವಾ ಚಳಿಗಾಲದ ಆರಂಭಕಾಲದಲ್ಲಿ ಯುದ್ಧಗಳನ್ನು ಪ್ರಾರಂಭಿಸಲಾಗುತ್ತಿತ್ತು. ದಸರಾ ಹಬ್ಬದ ಸಾಂಕೇತಿಕ ರೂಪವೇ ಇದಾಗಿದೆ. ಈ ಸಮಯ ಯುದ್ಧಗಳನ್ನು ಮಾಡಲು ಸರಿಯಾದ ಸಮಯವಾದ ಕಾರಣ ರಾಜರುಗಳು ಯುದ್ಧಪ್ರಾರಂಭ ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ನೋಡಿದಾಗ ಕಾರ್ತಿಕ ಮಾಸದ ದೇವತೆಯು ಕಾರ್ತಿಕೇಯನಾಗಿರಬೇಕು.

ಸಪ್ತಮಾತೃ ದೇವತೆಗಳನ್ನು ವೈದಿಕ ಪರಂಪರೆಯ ಇನ್ನೊಂದು ರೂಪದಲ್ಲಿ ನೋಡಲಾಗಿದೆ. ಮಾತೃದೇವತೆಯರು ಮೂಲತಃ ಪಿತೃದೇವತೆಗಳಾಗಿರಬೇಕು. ವೆಬರ್ ಅವರು ಈ ವಾದವನ್ನು ಮಂಡಿಸುತ್ತಾರೆ. ಅವರ ಈ ವಾದಕ್ಕೆ ಪೂರಕವಾದ ಸಾಹಿತ್ಯವೆಂದರೆ ಶಾಂಖ್ಯಯನ ಗೃಹ್ಯ ಸೂತ್ರದಲ್ಲಿ ಬರುವ ಅಭ್ಯುದಯಿಕ ಶ್ರಾದ್ಧ ಹಾಗೂ ಪುರಾಣ ಮತ್ತು ಇತರ ಬ್ರಾಹ್ಮಣಗಳಲ್ಲಿ ಬರುವ ವೃದ್ಧಿ ಶ್ರಾದ್ಧ ಮತ್ತು ನಾಂಧಿಮುಖ ಶ್ರಾದ್ದಗಳು. ತಾಯಿಯಂದಿರ ಪ್ರೇತಗಳಿಗೆ ತೃಪ್ತಿ ಮಾಡುವ ಶ್ರಾದ್ಧ ಕ್ರಿಯೆಗಳಾಗಿವೆ.[೬೨] ಈ ವಾದವನ್ನು ಬ್ಲೂಮ್ಫಿಲ್ಡ ಅವರು ಭಾರತೀಯ ಧರ್ಮಗಳು ಕೃತಿಯ ಮುನ್ನುಡಿಯಲ್ಲಿ ಸಮರ್ಥಿಸುತ್ತಾರೆ.

> Suppose that certain hymn of the of the tenth book of the Rg-veda... had not come down to us, what would we learn from the rest of the collection respecting the worship of the *manes* of the departed? We might know that India paid homage to certain powers colled Pitrs..., but we could not infer from that, any more that from later worship of the ancestors, or spirits of the dead, which, as the comparative study of the beliefs, customs, and institutions of Greace and Rome shows us, was nevertheless from the remotest antiquity one of the principal sources of public and private right, one of the bases of the family and the civic community.[೬೩]

ಆದರೆ, ಹಿಂದು ಪರಂಪರೆಯಲ್ಲಿ ಹೆಣ್ಣಿಗೆ ಪಿತೃಸ್ವರೂಪಿಣಿಯಾಗುವ ಭಾಗ್ಯ ಎಂದೂ ದೊರಕಿರಲಿಲ್ಲ ಎಂಬುದನ್ನು ಗಮನಿಸಿದರೆ, ನಮಗೆ ಈ ವಾದದಲ್ಲಿ ಹುರುಳಿಲ್ಲ ಎಂದು ಗೊತ್ತಾಗಬಹುದು. ಆದರೂ ಅಲ್ಲೊಂದು ಇಲ್ಲೊಂದು ಕಡೆ ಹೆಣ್ಣಿಗೆ ಒಳ್ಳೆಯ ಸ್ಥಾನಮಾನಗಳು ದೊರಕಿವೆ. ಅದರಲ್ಲೂ ಋಗ್ವೇದದ ಕಾಲದ ಮಹಿಳೆಯರು ಧಾರ್ಮಿಕ ಕ್ರಿಯೆಯಲ್ಲಿ ಭಾಗವಹಿಸುತ್ತಿದ್ದರು. ಆದರೂ ಈ ಪಿತೃದೇವತೆಗಳನ್ನು ಮಾಡಿರುವ ಹಿನ್ನೆಲೆಯಲ್ಲಿ ಬೇರೆಯದೆ ಆದ ತಂತ್ರವಿರುವ ಹಾಗೆ ಕಾಣುತ್ತದೆ. ಕಪಾಡಿಯಾ ಅವರು ಇದನ್ನು ಗುರುತಿಸುತ್ತಾರೆ. ಅವರ ಪ್ರಕಾರ ಪಿತೃದೇವತೆಗಳಿಗೆ ಮೊದಲು ತರ್ಪಣವನ್ನು ಕೊಡುವಾಗ ಈ ಕ್ಷುಲ್ಲಕ ದೇವತೆಗಳು ತೊಂದರೆಯನ್ನು ಕೊಡದಿರಲೆಂದು ಮೊದಲೇ ಮಾತೃದೇವತೆಗಳಿಗೆ ಪೂಜೆಯನ್ನು ಅರ್ಪಿಸಲಾಗುತ್ತಿತ್ತು.[೬೪] ಮಾತೃಗಣಗಳ ಗುಂಪು ತೊಂದರೆಯನ್ನು ಕೊಡುವುದಾಗಿದೆ. ಈ ರೀತಿಯ ಕತೆಗಳನ್ನು ಜನಪದರದಲ್ಲಿ ಕಾಣಬಹುದು. ಅಂತೆಯೇ ಗಣೇಶನ ಕಲ್ಪನೆಯನ್ನೆ ತೆಗೆದುಕೊಂಡರು ಸಹ ಅವನೊಬ್ಬ ಕ್ಷುಲ್ಲಕ ದೇವತೆ. ತೊಂದರೆಗಳನ್ನು ಕೊಡದಿರಲೆಂದು ಮೊದಲಿಗೆ ಪೂಜೆಸಲ್ಲಿಸಲಾಗುತ್ತಿತ್ತು. ಆದರೆ ಮುಂದೆ ಅವನು ವಿಘ್ನನಾಶಕನಾದ. ಇಲ್ಲಿಯು ಸಹ ಅದೇ ರೀತಿಯ



ಚಿತ್ರ ೧೯

ವರ್ತನೆಯನ್ನು ಕಾಣಬಹುದು. ಈ ಹಿನ್ನೆಲೆಯಿಂದಲೂ ನೋಡಿದಾಗಲೂ ಮಾತೃ ದೇವತೆಗಳು ಕಷ್ಟಕೊಡುವ ದೇವತೆಗಳಾಗಿ ಕಂಡುಬರುತ್ತಾರೆ. ನಂತರದ ಸಾಹಿತ್ಯದಲ್ಲಿ ಮಾತೃದೇವತೆಗಳ ಜೊತೆಯಲ್ಲಿ ಗಣೇಶನನ್ನು ಸೇರಿಸಲಾಗಿರುವುದರಲ್ಲಿ ಮೇಲಿನ ಅಂಶವನ್ನು ಗುರುತಿಸಬಹುದು. ಪುರಾಣ ಹಾಗೂ ಕಾವ್ಯ ಶಿಲ್ಪಗಳಲ್ಲಿ ಗಣೇಶ, ಸ್ಕಂದ, ವೀರಭದ್ರರು ಮಾತೃದೇವತೆಯರ ಗುಂಪನ್ನು ಸೇರಿಕೊಂಡಿರುವುದು ಅವೈದಿಕ ಪರಂಪರೆಯ ದೇವತೆಗಳ ಸಮೂಹವಾಗಿರುವುದನ್ನು ಕಾಣಬಹುದು.

ಜನಪದ ಪರಂಪರೆಯಲ್ಲಿ ಈ ಪರಂಪರೆಯಲ್ಲಿ ಸಪ್ತಮಾತೃಕೆಯರನ್ನು ಏಳು ಮಕ್ಕಳತಾಯಿ ಎಂದು ಕರೆಯಲಾಗುತ್ತದೆ. ಇದನ್ನು ದೆವ್ವ ಎಂದೂ ಕರೆಯಲಾಗುವುದಲ್ಲದೆ, ವಾಸಸ್ಥಾನವು ಹಳೆಯ ಹುಣಿಸೆಮರ, ಅಥವಾ ಆಲದ ಮರವಾಗಿರುತ್ತದೆ. ಈ ಏಳುಮಕ್ಕಳ ತಾಯಿಯ ಬಗೆಗೆ ಜನಪದ ಕತೆ ಹೀಗೆ ಇದೆ, ಏಳು ಮಕ್ಕಳ ತಾಯಿ ಬರಗಾಲ ಆವರಿಸಿದಾಗ ಸತ್ತು ಹೋದಳು. ಆಕೆಯ ಮಕ್ಕಳೂ ಆಹಾರವಿಲ್ಲದೆ ಸತ್ತು ದೆವ್ವಗಳಾಗಿ ಊರ ಮುಂದಿನ ದೊಡ್ಡ ಹೊಲದಲ್ಲಿಯ ಹುಣಿಸೆ ಮರವನ್ನು ಹೊಕ್ಕವು. ಅವು ನೆಲೆಸಿದ್ದ ಹೊಲದಲ್ಲಿ ಬೆಳೆಯೂ ಹುಲುಸಾಗಿ ಬಂತು. ಆಹಾರಕ್ಕಾಗಿ ಒದ್ದಾಡುತ್ತಿದ್ದ ಆ ದೆವ್ವಗಳು ಬೆಳೆಯನ್ನೆಲ್ಲಾ ನಾಶಮಾಡಿದವು. ಹೊಲದೊಡೆಯ ಜೋಯಿಸನನ್ನು ಶಾಸ್ತ್ರ ಕೇಳಿದನು. 'ಏಳು ಮಕ್ಕಳ ತಾಯಿಯೇ ಇದಕ್ಕೆ ಕಾರಣ' ಎಂಬ ಉತ್ತರ ಬಂದಿತು. ಮತ್ತೆ ಬೆಳೆಬಂದಿತು.ಆಗಲೂ ದೆವ್ವಗಳು ಬೆಳೆಯನ್ನು ನಾಶಮಾಡಲು ತೊಡಗಿದವು. ಈ ಸುದ್ದಿಯನ್ನು ಹೊಲದೊಡೆಯ ಜೋಯಿಸರಿಗೆ ತಿಳಿಸಿದನು. ಹುಣಿಸೆಗಿಡದ ಮುಂದೆ ನಿಂತು, 'ನಿಮ್ಮಕ್ಕನು ಸಂಕಟದಲ್ಲಿರುವಳು' ಎಂದು ಕೂಗು. 'ಆಗ ಅಕ್ಕನನ್ನು ನೋಡಲು ಏಳುಮಕ್ಕಳ ತಾಯಿ ಪಕ್ಕದ ಹಳ್ಳಿಗೆ ಹೋಗುವುದು, ಪುನಃ ಅದು ಹಿಂದಿರುಗುವುದರೊಳಗೆ ಬೆಳೆಯನ್ನು ಮನೆಗೆ ತರಬಹುದು' ಎಂದು ಜೋಯಿಸ ಹೇಳಿದ. ಹೊಲದೊಡೆಯ ಈ ರೀತಿ ಕೂಗಿದಾಗ ದೆವ್ವವು ಮೂರುದಿನ ಈ ಹೊಲವನ್ನು ಬಿಡುತ್ತೇವೆಂದು ಹೇಳಿ ಹೊರಟುಹೋಯಿತು.[೬೫] ಇಲ್ಲಿ ಕತೆಯ ಒಳಗೆ ಎಲ್ಲೊ ಮಾತೃಪರಂಪರೆಯ ಅಂಶವು ಅಡಗಿರುವ ಹಾಗೆ ಕಾಣುತ್ತದೆ. ಯಾಕೆಂದರೆ, ಈ ದೈವಗಳು ರಕ್ಷಕ ದೇವತೆಗಳು ಎಂದು ಕರೆಯಲಾಗದಿದ್ದರೂ ಕಾಟಕೊಡುವ ದೇವತೆಗಳು. ಇವುಗಳಿಗೆ ಬಲಿಕೊಡಲೇ ಬೇಕು. ಕುರಿ ಅಥವಾ ಕೋಳಿಯನ್ನು ಬಲಿಕೊಟ್ಟು ನಂತರ ತಮ್ಮ ಕಾರ್ಯವನ್ನು ಮಾಡಬೇಕಾಗುತ್ತದೆ. ಅಥವಾ ಅವು ವಾಸಿಸುವ ಜಾಗವಾದ ಮರದ ಜಾಗದಲ್ಲಿ ಬಲಿ ಅಥವಾ ನೈವೇದ್ಯವನ್ನು ಕೊಡಲಾಗುತ್ತದೆ.

ಪ್ರಾಚೀನ ಪರಂಪರೆಯಾದ ಈ ಸಪ್ತಮಾತೃಕೆಯರನ್ನು "ಜನಪದರು ಏಳರಾಟವೆಂದು, ಏಳರಾಟವೆಂದರೆ ಸಪ್ತಮಾತೃಕೆಯರು ಕೊಡುವ ಕಾಟವೆಂದು" ಹೇಳಲಾಗಿದೆ. [೬೬] ಇದು ನಿಜಕೂಡ. ಮಕ್ಕಳಿಗೆ, ಗರ್ಭಿಣಿಯರಿಗೆ, ಹಸುಕರುಗಳಿಗೆ, ಫಸಲುಗಳಿಗೂ ಕೂಡಾ ಇವರಿಂದ ತೊಂದರೆ ಎಂದು ನಂಬಲಾಗಿದೆ. ಅವರಿಗೆ ತೃಪ್ತಿಯನ್ನು

ಪಡಿಸಿದಾಗ ಅವರು ರಕ್ಷಣೆಯ ದೇವತೆಯರಾಗುತ್ತಾರೆ. ಸಪ್ತ ಮಾತೃಕೆಯರನ್ನು ಊರ ಹೊರಗಿನಲ್ಲಿ ವಾಸಿಸುವ ದೇವತೆಯರೆಂದು ನಂಬಲಾಗಿದೆ. ಅವರು ಊರಿನ ಒಳಗೆ ಇರುವವರಲ್ಲ, ಕೆರೆ ಕುಂಟೆ, ಕಾಡಿನ ಪಕ್ಕ ಅವರು ವಾಸವಾಗಿರುತ್ತಾರೆಂದು. ಜನಪದರ ಪ್ರಭಲ ನಂಬಿಕೆ. ಹಾಗಾದರೆ, ಮಾತೃಕೆಯರಿಗೂ ಮರಕ್ಕೂ ಸಂಬಂಧವಿರುವ ಹಾಗೆ ಕಂಡುಬರುತ್ತದೆಯೇ ಎಂಬುದನ್ನು ಗಮನಿಸಿದಾಗ ಮರದ ಆರಾಧನೆ ಪ್ರಾಚೀನವಾಗಿರಬೇಕು. ಇಂದಿಗೂ ವೃಕ್ಷಾರಾಧನೆ ಶಕ್ತಿದೇವತಾ ಆರಾಧನೆಯೇ ಆಗಿದೆ. ಬನ್ನಿಗಿಡ, ಬೇವಿನ ಮರ, ಹಾಗೂ ಅಶ್ವತ್ಥ ಮುಂತಾದ ಮರಗಳ ಪೂಜೆಯು ಸಂತಾನ ಫಲಾಪೇಕ್ಷೆ, ಅರಿಷ್ಟಗಳ ನಿವಾರಣೆ, ಫಲಪ್ರದಾಯಕದ ಹಂಬಲವಾಗಿದೆ. ಜಾತಕ ಕತೆಗಳಲ್ಲಿ ಮಕ್ಕಳನ್ನು ಕೊಡುವ ದೇವತೆಯೆಂದು ಕರೆಯಲಾಗಿದೆ. ಹಾಗೂ ಇವರಿಗೆ ಮಾನವ ಹಾಗೂ ಪ್ರಾಣಿಗಳನ್ನು ಬಲಿಕೊಡಲಾಗುತ್ತಿತ್ತು. (ಜಾತಕ ಕತೆಗಳು ೫೦೯) ಮಹಾರಾಷ್ಟ್ರದಲ್ಲಿ ಇಂದಿಗೂ ವೃಕ್ಷವನ್ನು ಮಕ್ಕಳು ಇಲ್ಲದವರು ಮಕ್ಕಳನ್ನು ಪಡೆಯಬೇಕಾದರೆ ಮನುಷ್ಯನನ್ನು ತಿನ್ನುವ, ಹಾಗೂ ಮರದಲ್ಲಿ ವಾಸಿಸುವ ದೇವತೆಯರನ್ನು ಆರಾಧಿಸುತ್ತಾರೆ ಎನ್ನಲಾಗಿದೆ. (people desiring sons should worship the man-eating divine women called dryads (vrksikah) born in trees). ಬೆಂಗಾಳದಲ್ಲಿ ಮಾತೃಕಾ ಆರಾಧನೆಯ ರೂಪವಾದ ವೃಕ್ಷಾರಾಧನೆಯು ವ್ಯಾಪಕವಾಗಿ ಕಂಡುಬರುತ್ತದೆ. ಷಷ್ಟಿಯನ್ನು ವೃಕ್ಷರೂಪದಲ್ಲಿ ನೋಡಲಾಗಿದೆ.

> the vata is associated with Sasthi. The tree bears numerous fruits, so it is symbolized as the seat of Sasthi, the deity of fertility and many children. It is believed that the tree is the abbode of the deity and the deity is worhiped under the tree. [೬೭]

ಒಳಿತನ್ನು ತರುವ ದೇವತೆಯಾದ ಷಷ್ಟಿಯು ಸಂತಾನಾಭಿವೃದ್ಧಿಯ ದೇವತೆಯಾಗಿದ್ದಾಳೆ. ಅಲ್ಲದೆ ಅವಳಿಗೆ ಸರಿಯಾಗಿ ಪೂಜಿಸದೆ ಇದ್ದರೆ ಮಕ್ಕಳಿಗೆ ತೊಂದರೆ ಕೊಡುವ ದೇವತೆಯಾಗುತ್ತಾಳೆ. ವನದುರ್ಗಾಳ ಆಚರಣೆಯು ಬೆಂಗಾಳದಲ್ಲಿ ಕಂಡುಬರುವ ಇನ್ನೊಂದು ವೃಕ್ಷಾರಾಧನೆಯಾಗಿದೆ. ಇಲ್ಲಿ ಅಶ್ವತ್ಥ ಮರವನ್ನು ದೇವಿಯ ವಾಸಸ್ಥಾನವಾಗಿ ಕಲ್ಪಿಸಲಾಗಿದ್ದು, ಕಾಡಿನ ದೇವತೆಯನ್ನಾಗಿ ನೋಡಲಾಗಿದೆ. ಮೇಕೆ, ಕುರಿ, ಕೋಣಗಳನ್ನು ಅವಳಿಗೆ ಮತ್ತು ಅವಳ ಮಕ್ಕಳಿಗೆ ಬಲಿಕೊಡಲಾಗುತ್ತದೆ. ನವರಾತ್ರಿಯಲ್ಲಿ ಒಂದು ಭಾರಿ ನಡೆಯುವ ಆರಾಧನೆಯಲ್ಲಿ ಸ್ತ್ರೀಯರೆ ಪ್ರಧಾನವಾಗಿ ಭಾಗವಹಿಸುತ್ತಾರೆ. ತಮ್ಮ ಮಕ್ಕಳಿಗೆ, ಹುಟ್ಟುವ ಮಕ್ಕಳಿಗೆ ಹಾಗೂ ಗರ್ಭಿಣಿಯರಿಗೆ ಯಾವುದೇ ತೊಂದರೆಯನ್ನು ಕೊಡದಂತೆ ಕಾಪಿಡುವ ದೇವತೆಯಾಗಿ ಪೂಜಿಸಲಾಗುತ್ತದೆ. ಜಯದುರ್ಗಾಳನ್ನು ಇದೇ ರೀತಿಯ ಆಚರಣೆಯಲ್ಲಿ ಕಾಣಬಹುದು. ಇಲ್ಲಿ ಕುಂಭರೂಪದಲ್ಲಿ ಊರ ಹೊರಗಿನ ಹಾಳು ಮರದ ಬುಡದಲ್ಲಿ ದೇವಿಯನ್ನು ಪೂಜಿಸಲಾಗುತ್ತದೆ.

an earthern pitcher filled with water that is 'placed either at the root of a tree or in some waste place unfrequnted by human being.' Her non-brahmin priests strip themselves naked and dance before the pitcher and thereby invoke her.. Then twenty nine diagrams if mystic significance are drawn with powdered rice. On each of these diagrams are placed oblations of boiled rice and roasted fish for the goddess Jay Durga. Last of all, beasts are sacrificed. [೬೮]

ಗುಜರಾತಿನಲ್ಲಿ ಭಯಂಕರದೇವತೆಯಾದ ಭೂತಮಾತಾ ರೂಪದಲ್ಲಿ ಆಚರಿಸಲಾಗುತ್ತದೆ. ಹಳೆಯ ಮರದಲ್ಲಿ ವಾಸಿಸುವ ಈ ದೇವತೆಯು ಮಕ್ಕಳಿಗೆ ಒಳಿತನ್ನು ಹಾರೈಸುವ ದೇವತೆಯಾಗಿದ್ದಾಳೆ. ಸ್ತ್ರೀಯರುಈ ದೇವತೆಯನ್ನು ಆರಾಧಿಸುತ್ತಾರೆ. ದಕ್ಷಿಣ ಭಾರತದಲ್ಲಿಯು ಈ ರೀತಿಯ ಆರಾಧನೆಯನ್ನು ಕಾಣಬಹುದು. ಬೀದಿಯ ಬದಿಯ ಬೇವಿನ ಮರವಾಗಿರಬಹುದು. ಹೊಲದಲ್ಲಿರುವ ಬನ್ನಿಯ ಮರವಾಗಿರಬಹುದು ಅಥವಾ ಇನ್ನಾವುದೋ ಮರವಾಗಿರಬಹುದು ಅದು ಪೂಜ್ಯನಿಯ. ಕಾರಣ ಅದರಲ್ಲಿ ದೇವತೆಯರು, ಗಾಳಿಗಳು ವಾಸವಾಗಿರುತ್ತಾರೆ ಎಂಬ ನಂಬಿಕೆ ಇಂದಿಗೂ ಎಲ್ಲಾ ಹಳ್ಳಿಗಳಲ್ಲಿ ಪ್ರಬಲವಾಗಿದೆ.

ಡಾ. ದೇವರಕೊಂಡಾ ರೆಡ್ಡಿಯವರು ಸಪ್ತಮಾತೃಕೆಯ ಆರಾಧನೆಯನ್ನು ಮಂಡಿಸುವಾಗ ಶಿಷ್ಟರೂಪದಲ್ಲಿ ನೋಡಿದಂತೆ ಜನಪದ ರೂಪದಲ್ಲಿ ಕಂಡುಬರುವ ರೂಪಗಳನ್ನು ಮಂಡಿಸುತ್ತಾರೆ. ಅಲ್ಲದೆ ಗ್ರಾಮಮಟ್ಟದಲ್ಲಿ ಯಾವ ರೀತಿಯ ಆಚರಣೆಯನ್ನು ನಡೆಸುತ್ತಾರೆ ಎಂಬ ಬಗೆಗೆ ವಿವರಣೆಯನ್ನು ಕೊಡುತ್ತಾರೆ. ಇಲ್ಲಿ ಪೂಜೆಗೆ ನಿಯತ ಕಾಲವೆಂಬುದೇನು ಇಲ್ಲ. ಯಾವಾಗ ಬೇಕಾದರೂ ಪೂಜೆಯನ್ನು ಮಾಡಬಹುದು. ವಿಶೇಷವಾಗಿ ಏನಾದರೂ ಕೇಡುಂಟಾದಾಗ, ತೀವ್ರತರವಾದ ಕಾಯಿಲೆ ಬಿದ್ದಾಗ ಪೂಜೆಯನ್ನು ಮಾಡುತ್ತಾರೆ. ಇದನ್ನು ವಿಶೇಷವಾಗಿ ಹೆಂಗಸರು ಮಾತ್ರ ಮಾಡುತ್ತಾರೆ.

"ಆಕೆ ಸ್ನಾನಮಾಡಿ, ಮಡಿಬಟ್ಟೆ ಧರಿಸಿ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಕೆರೆ ಅಥವಾ ಕುಂಟೆಯ ಬಳಿಗೆ ಬರುತ್ತಾಳೆ. ನೀರಿನ ಅಂಚಿನಲ್ಲಿ ಶುದ್ಧವಾದ ಸ್ಥಳವನ್ನಾಯ್ದು, ಸಾರಿಸಿ ಉದ್ದವಾದ ಮಣ್ಣಿನ ವೇದಿಕೆಯನ್ನು ರಚಿಸಿ, ಲಕ್ಕಲಿ ಸೊಪ್ಪಿನಲ್ಲಿ ಚಪ್ಪರ ಹಾಕಿ ಮಂಟಪವನ್ನು ನಿರ್ಮಿಸುತ್ತಾರೆ. ಆನಂತರ ಉದ್ದವಾದ ತ್ರಿಕೋಣಾಕಾರದ ಕಲ್ಲುಗಳನ್ನು ತೆಗೆದುಕೊಂಡು ತೊಳೆದು, ಐದು ಅಥವಾ ಏಳು ಅಥವಾ ಒಂಬತ್ತು ಸಂಖ್ಯೆಯಲ್ಲಿವೇದಿಕೆಯ ಮೇಲಿಟ್ಟು, ಅರಿಸಿನ ಕುಂಕುಮವಿಟ್ಟು ತಂದಿರುವ ಪೂಜಾಸಾಮಗ್ರಿಗಳನ್ನು ಸಣ್ಣಕುಡಿಕೆಯ ತುಂಬ ನವಧಾನ್ಯಗಳು, ಒಲೆಗರಿಗೆ ಸುತ್ತಿದ ಕರಿಯ ಬಳೆ ಇವೆಲ್ಲವನ್ನು ಮುಂದಿಟ್ಟು ಹಣತೆಯನ್ನು ಹಚ್ಚಿ ಪೂಜಿಸುತಾರೆ".

ಅದೇ ರೀತಿ ಚಿತ್ರದುರ್ಗ ಪ್ರದೇಶದಲ್ಲಿ ನಡೆಯುವ ಆಚರಣೆಯನ್ನು ಕೊಡುತ್ತಾರೆ. ಬೇಡರು (ನಾಯಕರು) ಪೂಜಿಸುವ ಸಪ್ತ ಸಹೋದರಿಯರು ಅಂಕಾಲಮ್ಮ, ಸುಂಕಾಸಮ್ಮ, ಮಂಚಾಲಮ್ಮ, ಗಂಗಾಳಮ್ಮ, ಮುತ್ಯಾಲಮ್ಮ, ಕಂಕಾಲಮ್ಮ, ಮತ್ತು ಪಟ್ಟಾಲಮ್ಮ. ನಿಗದಿತ ಯಾವುದಾದರೂ ಒಂದು ದಿವಸ ಕುಟುಂಬ ದವರೆಲ್ಲರೂ ಸೇರಿ ಊರ ಹೊರಗಿನ ತೋಟ, ಅಥವಾ ಬೆಟ್ಟದ ಬುಡ, ಮರದ ಕೆಳಗೆ ಪೂಜೆ ಸಲ್ಲಿಸುತ್ತಾರೆ ಒಳ್ಳೆಯ ಜಾಗವನ್ನು ಹುಡುಕಿ ಸ್ವಚ್ಛಮಾಡಿ ಚಪ್ಪರವನ್ನು ನಿರ್ಮಿಸಿ, ಸುತ್ತಲೂ ಸೊಪ್ಪನ್ನು ಸಿಕ್ಕಿಸಿ ಗಾಳಿಯಿಂದ ತೊಂದರೆಯಾಗದಂತೆ ಮಾಡುತ್ತಾರೆ. ಅನತಂರ ಚಪ್ಪರದಲ್ಲಿ ಕೆಮ್ಮಣ್ಣಿನಿಂದ ಒಂದು ಉದ್ದವಾದ ವೇದಿಕೆಯನ್ನು ಚಪ್ಪರಕ್ಕೆ ಸುಮಾರು ಅಡಿ ದೂರದಲ್ಲಿ ಮತ್ತೊಂದು ಅಂಗೈ ಅಗಲದ ಹಸೆ ನಿರ್ಮಿಸುತ್ತಾರೆ. ಎಂಟು ಬೆಣಚು ಕಲ್ಲುಗಳನ್ನು ತೊಳೆದು, ಮಣ್ಣಿನ ವೇದಿಕೆಯ ಮೇಲೆ ಏಳು ಕಲ್ಲುಗಳನ್ನು ಸಾಲಾಗಿ ಕೂಡಿಸುತ್ತಾರೆ. ಉಳಿದೊಂದು ಕಲ್ಲನ್ನು ಅಂಗೈ ಅಗಲದ ವೇದಿಕೆ ಮೇಲೆ ಕೂಡಿಸುತ್ತಾರೆ. ಇದನ್ನು ಸಪ್ತಮಾತೃಕೆಯರು ಹಾಗೂ ಬಂಟನಾದ ಪೋತರಾಜನೆಂದು ಕರೆಯುತ್ತಾರೆ.[೮] ಈ ರೀತಿಯ ಆಚರಣೆಯನ್ನು ಉತ್ತರ ಕರ್ನಾಟಕದಲ್ಲಿ ಭೂಮಿ ಹುಣ್ಣಿಮೆಯ ದಿನ ಆಚರಿಸುತ್ತಾರೆ.

ಮೇಲಿನ ಎಲ್ಲಾ ಉದಾಹರಣೆಗಳಲ್ಲಿ ಪ್ರಾಚೀನವಾದ ಮಾತೃಕೆಯರ ಕಲ್ಪನೆಯನ್ನು ತಮ್ಮ ಒಡಲಲ್ಲಿ ಹುದುಗಿಸಿಕೊಂಡಿರುವ ಹಾಗೆ ಕಂಡುಬರುತ್ತದೆ. ದೇವಿ ಅಥವಾ ಶಕ್ತಿಯ ಆರಾಧನೆಯನ್ನು ಗಮನಿಸಿದಾಗ ಅವು ತೊಂದರೆ, ರೋಗರುಜಿನಗಳನ್ನು ಹುಟ್ಟುಹಾಕುವ, ಮಕ್ಕಳನ್ನು ಕೊಡುವ, ಗರ್ಭಿಣಿ ತಾಯಂದಿರಿಗೆ ನೋವು ಕೊಡುವ, ದನಕರುಗಳಿಗೆ ಕಾಟಕೊಡುವ, ಮುಂತಾದ ಕಾರ್ಯಗಳನ್ನು ಮಾಡುವ ದೇವರುಗಳಾಗಿದ್ದಾರೆ. ಅವರು ಬಹುಶಃ ಮರದಲ್ಲಿ ಅಥವಾ ಕಾಡಿನ ಅಂಚಿನಲ್ಲಿ ವಾಸಿಸುವ ದೇವತೆಗಳೆ ಆಗಿರುವರು. ಇದು ಬೆಂಗಾಳದ ವನದುರ್ಗಾ, ಗುಜರಾತಿನ ಷಷ್ಠಿ, ದಕ್ಷಿಣ ಭಾರತದ ಮರುಗಮ್ಮ, ಚೌಡಮ್ಮ, ಮಾರಮ್ಮ, ಮುಂತಾದ ದೇವತೆಗಳು, ಇವರೆಲ್ಲರೂ ಮರಗಳಲ್ಲಿ ವಾಸಿಸುವ, ಅಲ್ಲಿಂದಲೆ ತಮ್ಮ ಕಾರ್ಯಗಳನ್ನು ನೆರವೇರಿಸುವ ದೇವತೆಗಳಾಗಿದ್ದಾರೆ. ಅವರಿಗೆ ಬಲಿಯ (ಪ್ರಾಣಿ ಅಥವಾ ಆಹಾರದ) ಮುಖಾಂತರ ಪೂಜೆಸಲ್ಲಿಸಿದಾಗ ಶಾಂತರಾಗಿ ರಕ್ಷಕರಾಗುವ ದೇವತೆಗಳಾಗುವ ಅಥವಾ ರೂಪಾಂತರವಾಗುವ ಕ್ರಿಯೆಯಲ್ಲಿ ಮಗ್ನರಾಗುತ್ತಾರೆ. ಒಂದು ಏಳಾಗುವ, ಒಂದು ಒಂಬತ್ತಾಗುವುದು ಗುಣಗಳ ಆದಾನ ಪ್ರಾದಾನದಿಂದ. ಇಲ್ಲಿ ಒಂದು ದೇವತೆ ಹಲವಾರು ದೇವತೆಗಳಾಗಬಹುದು. ಸಪ್ತಮಾತೃಕೆಯರ ಕಲ್ಪನೆಯು ಈ ನೆಲೆಯಿಂದಲೇ ಬಳೆದು ಬಂದಿರಬೇಕು. ಅದು ಒಂದು ಏಳಾಗುವ, ಅಥವಾ ಎಂಟಾಗುವ, ಅಥವಾ ಒಂಬತ್ತಾಗುವುದು ಅವುಗಳ ಗುಣಸ್ವಭಾವಗಳಿಂದ. ಸಪ್ತಮಾತೃಕೆಯರು ವೈದಿಕ ಪರಂಪರೆಗೆ ಒಲಸೆಹೋದಾಗ ಅವುಗಳ ಸ್ವರೂಪ ನಿಗಿದಿಯಾಗಿರಬೇಕು. ಅಲ್ಲಿಯವರೆಗೂ ಅವು ಪ್ರಾಣಿಗಳ ರೂಪದಲ್ಲೋ ಸ್ವರೂಪರಹಿತವಾಗಿರಬೇಕು. ಒಲಸೆ ಹೋದನಂತರದಲ್ಲಿ ಅವುಗಳಿಗೆ ರೂಪಸ್ಥಿರೀಕರಣಗೊಂಡಾಗ

ಪ್ರಾಣಿಗಳ ಸಂಕೇತ ಹಾಗೆಯೆ ಉಳಿದುಕೊಂಡಿರಬೇಕು. ವೈದಿಕ ಪರಂಪರೆಗೆ ಸಪ್ತಮಾತೃಕೆಯರ ಪರಂಪರೆಯನ್ನು ತೆಗೆದುಕೊಂಡು ಹೋಗಿ ವೇದಗಳಲ್ಲಿ ಕಂಡುಬರುವ ಕೆಲವು ಮಾತುಗಳನ್ನು ಆಧಾರವಾಗಿ ಇಟ್ಟುಕೊಂಡು ನೋಡಿದರೂ ಅವುಗಳ ನಂತರದ ಸಾಹಿತ್ಯದಲ್ಲಿ ಕಂಡುಬರುವ ರೂಪಗಳಿಗೆ ಹೊಂದಿಕೆಯಾಗದ ರೀತಿಯಲ್ಲಿ ಕಂಡುಬರುತ್ತವೆ. ಅಂದರೆ ವೇದಗಳಲ್ಲಿ ಕಂಡು ಬರುವ ಏಳು ತಾಯಂದಿರು, ಏಳು ರಶ್ಮಿಗಳು ಇವೆಲ್ಲವು ಮಹಾಭಾರತದ ಶಲ್ಯಪರ್ವದಲ್ಲಿ ಮೊದಲಿಗೆ ಕಂಡುಬರುವ ಸಪ್ತಮಾತೃಕೆಯರ ರೂಪಕ್ಕೂ ಯಾವುದೇ ಸಂಬಂಧ ಕಾಣುವುದಿಲ್ಲ. ಹರಪ್ಪ ಸಂಸ್ಕೃತಿಯಲ್ಲಿ ಕಂಡುಬರುವ ವೃಕ್ಷಾರಾಧನೆಯ ರೂಪವು ಆದಿಮ ಸ್ವರೂಪದ ಮಾತೃ ದೇವತೆಯ ರೂಪವಾಗಿರಬೇಕು. ಅದು ಜನಪದ ಪರಂಪರೆಯಲ್ಲಿ ಹಾಗೆಯೆ ಉಳಿದುಕೊಂಡು ಪ್ರದೇಶಗಳಿಂದ ಪ್ರದೇಶಗಳಿಗೆ ಅಲ್ಪಬದಲಾವಣೆಯನ್ನು ಹೊಂದಿರುವ ಹಾಗೆ ಕಂಡುಬರುತ್ತದೆ. ಅದು ಶಾಕ್ತಪರಂಪರೆಯ ದೇವತೆಗಳಂತೆ ಇವರು ವೈದಿಕ ಪರಂಪರೆಯನ್ನು ಸೇರಿಕೊಂಡಿರಬೇಕು.

೪.೧.೬.೨. ಸಪ್ತಮಾತೃಕೆಯರ ಸಂಖ್ಯೆ ಮತ್ತು ಹೆಸರುಗಳು

ಸಪ್ತ ಮಾತೃಕೆಯರ ನಿಖರವಾದ ಮಾಹಿತಿ ದೊರಕುವುದು ಮಹಾಭಾರತದ ಅರಣ್ಯ ಹಾಗೂ ಶಲ್ಯಪರ್ವಗಳಲ್ಲಿ. ಅದು ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿಯಲ್ಲ. ಸ್ಕಂದನ ಹುಟ್ಟು ಮತ್ತು ದೇವಸೈನ್ಯದ ನಾಯಕನಾಗಿ ಪಟ್ಟಾಭಿಷಿಕ್ತನಾಗುವ ಸಮಯದಲ್ಲಿ ಮಾತೃಕೆಯರ ಉಲ್ಲೇಖ ಬರುತ್ತದೆ. ಕೆಲವು ಬಾರಿ ಒಂಟಿಯಾಗಿ, ಕೆಲವು ಸಲ ಗುಂಪುಗಳಲ್ಲಿ ಉಲ್ಲೇಖವಾಗುತ್ತಾರೆ.

ಮಹಾಭಾರತದ ಅರಣ್ಯಪರ್ವ(214. 11-2)ದಲ್ಲಿ ಮೊದಲ ಬಾರಿಗೆ ಈ ಕತೆ ಬರುತ್ತದೆ. ದೇವತೆಗಳ ವಂಶದಲ್ಲಿ ಹುಟ್ಟಿದ ದೇವಸೇನಾಳನ್ನು ಕೇಶಿನ್ ಎಂಬ ಅಸುರನಿಂದ ಪಾರುಮಾಡಲು ಇಂದ್ರ ನಿರ್ಧಸಿರುತ್ತಾನೆ. ಅಂತೆಯೆ ದೇವತೆಗಳನ್ನು ಹಾಗೂ ದೈತ್ಯರನ್ನು ರಕ್ಷಿಸಲು ಒಬ್ಬ ಮಗನನ್ನು ಪಡೆಯುವ ಹಂಬಲ ವ್ಯಕ್ತಪಡಿಸುತ್ತಾರೆ. ಅದಕ್ಕೆ ಇಂದ್ರನು ಸಹಮತ ಹೊಂದಿ ಅಗ್ನಿಯಲ್ಲಿ ಆ ಮಗುವನ್ನು ಪಡೆಯಲು ದಕ್ಷನ ಮಗಳಾದ ಸ್ವಾಹಳನ್ನು ತಯಾರು ಮಾಡುತ್ತಾರೆ. ಅಂತೆಯೆ ಸ್ವಾಹಾಳು ಆರು ಮುಖಗಳನ್ನು ಹೊಂದಿ ಅಗ್ನಿಯನ್ನು ಕೂಡುತ್ತಾಳೆ. ಹೀಗೆ ಕೂಡಿದಾಗಲೆಲ್ಲ ಬಿಡುಗಡೆಯಾದ ವೀರ್ಯ್ಯವನ್ನು ಹಿಮಾಲಯದ ಬುಡದಲ್ಲಿ ಇಟ್ಟುಬರುತ್ತಾರೆ. ಅದು ಪುರುಷಾಕರವನ್ನು ಹೊಂದಿ ಅತ್ಯಂತ ಬಲಿಷ್ಠವಾದ ಮಗುವಾಗಿ ಮಾರ್ಪಾಡಾಗುತ್ತದೆ. ಆ ಶಕ್ತಿಯು ಮೂರು ಲೋಕಗಳನ್ನು ಹಣಿಯುವಂತ ಶಕ್ತಿಯನ್ನು ಹೊಂದುತ್ತದೆ. ಇಂತಹ ಶಕ್ತಿಯಾಗಿದ್ದನ್ನು ಕಂಡ ಇಂದ್ರ ಆ ಶಕ್ತಿಯನ್ನು ಮರ್ದಿಸುವಂತೆ ಮಾತೃಗಣಗಳಲ್ಲಿ ಅತ್ಯಂತ ಭಯಂಕರವಾದ ಕ್ರೋಧವೇ ಆಕಾರಗೊಂಡಿರುವಂತ ಕ್ರೋಧಸಮುದ್ಭವಾಳನ್ನು ಕೇಳುತ್ತಾನೆ. ಕ್ರೋಧಸಮುದ್ಭವ ಹಾಗೂ ಕ್ರೂರಸ್ವರೂಪಿಣಿಯಾದ ಕ್ರೂರಲೋಹಿತಭೋಜನ ಎಂಬ ಮಾತೃಗಣಗಳು ಸ್ಕಂದನನ್ನು ನೋಡಿ ಕೊಲ್ಲಲು ಮನಸಾಗದೆ,ಮಗನಾಗಿ ಪೋಷಣೆ ಮಾಡಿ ಬೆಳೆಸುತ್ತಾರೆ



ಚಿತ್ರ ೨೦





ಚಿತ್ರ ೨೧ ೨೨

(III, 216. 1-2). ಹೀಗೆ ಬೆಳೆಯುತ್ತಿರುವ ಸಮಯದಲ್ಲಿ ಸ್ಕಂದನ ಜೊತೆಗೆ ಅನೇಕ ಮಾತೃಗಣಗಳು ಸೇರಿಕೊಳ್ಳುತ್ತಾರೆ. ಮಕ್ಕಳನ್ನು ಕದಿಯುವ ಹಾಗೂ ರೋಗಕಾರಕರಾಗಿದ್ದ ಇವರು ಸ್ಕಂದನ ಬಳಿ ಬಂದು ತಾವು ಒಳ್ಳೆಯವರಾಗುತ್ತೇವೆ, ನಮ್ಮನ್ನು ನಿಮ್ಮೊಡನೆ ಸೇರಿಸಿಕೊಳ್ಳಿ ಎಂದು ಕೇಳಿಕೊಳ್ಳುತ್ತಾರೆ. ಹೀಗೆ ಸ್ಕಂದನ ಜೋತೆಯಲ್ಲಿ ಸೇರಿಕೊಂಡಾಗ ಅವರು ಆ ಶಿಶುವಿನ ಏಳುಜನ ತಾಯಂದಿರಾಗಿ ಹೊರಹೊಮ್ಮುತ್ತಾರೆ.

ತತಃ ಸಂಕಲ್ಪಯ ಪುತ್ರತಮಾ ಸ್ಕಂದಂ ಮಾತೃಗಣೋಗಮತ್

ಕಾಕೀ ಚ ಹಲಿಮಾ ಚೈವ ರುದ್ರಾಥ ಬೃಹಲೀ ತಥಾ

ಆರ್ಯಾ ಪಲಾಲಾ ವೈ ಮಿತ್ರಾ ಸಪ್ತೈತಾಃ ಶಿಶುಮಾತ್ರಃ (III, 217. 6-9)

ಮುಂದೆ ಅವರು ರಾಕ್ಷಸನನ್ನು ಕೊಲ್ಲಲು ಸಹಾಯಮಾಡುತ್ತಾರೆ. ಶಲ್ಯಪರ್ವದಲ್ಲಿ(IX. 43, 44 ಅಧ್ಯಾಯಗಳಲ್ಲಿ) ಉಮಾ ಮತ್ತು ಶಿವನ ಮಗನೆಂದು ಉಲ್ಲೇಖಿಸುತ್ತಾ ಒಂದು ಕತೆಯನ್ನು ಮುಂದಿಡುತ್ತದೆ. ಅದರ ಪ್ರಕಾರ ಒಂದು ಸಲ ಶಿವನ ಚೈತನ್ಯಶಕ್ತಿಯು ಅಗ್ನಿಯಲ್ಲಿ ಬಿದ್ದಿತು. ಅಗ್ನಿಯು ಅದನ್ನು ಧರಿಸುವ ಶಕ್ತಿಯನ್ನು ಬರಿಸಲಾಗಲಿಲ್ಲ. ಆ ಕಾರಣದಿಂದ ಗಂಗೆಯಲ್ಲಿ ಬಿಸಾಕಿದ, ಆ ಶಕ್ತಿಯನ್ನು ಅವಳು ಅದನ್ನು ತಡೆಯಲಾರದೆ ಹಿಮಾಲಯದ ತುತ್ತತುದಿಗೆ ಬಿಸಾಕಿದಳು. ಅಗ್ನಿಯ ಪುತ್ರನಾದ ಇದು ಆರು ಜನಕೃತ್ತಿಕೆಯರ ಮಡಿಲಲ್ಲಿ ಬೆಳೆಯಲಾರಂಭಿಸಿತು. ಹೀಗೆ ಬೆಳೆದ ಶಕ್ತಿಗೆ ಶಿವ ಬ್ರಹ್ಮನಿಂದ ಹಲವಾರು ಶಕ್ತಿಗಳನ್ನು ಕೊಡಿಸಿದ. ಸ್ಕಂದ ಸಾವಿರಾರು ಕ್ರೂರಸ್ವರೂಪದ ಶಕ್ತಿಗಳನ್ನು ತಾಯಂದಿರಾಗಿ ಪಡೆದ.

ಏತಾಶ್ಚಾನ್ಯಾಶ್ಚಬಹವೊ ಮಾತರೋ ಭರತ ಋಷಭ

ಕಾರ್ತಿಕೆಯಾನುಯಾಯಿನ್ಯೋ ನಾನಾರೂಪಾಃ ಸಹಸ್ರಶಃ (ಮಹಾಭಾರತ, ೯.೪೫.೩೦)

ಸಹಸ್ರಾರು ತಾಯಂದಿರನ್ನು ಹೊಂದಿದ ಸ್ಕಂದ ಕುಮಾರನು ಅನೇಕ ರಾಕ್ಷಸರನ್ನು ಕೊಂದು ಹಾಕಿದ. ಈ ಮಾತೃಕೆಯರು ಕಪ್ಪಾಗಿ, ನೋಡಲು ಭಯಂಕರ ಸ್ವರೂಪದವರಾಗಿದ್ದರು. ಬೀಳುವ ರಕ್ತವನ್ನು ಕುಡಿಯುತ್ತಿದ್ದರು. ನಿರ್ಮಾಂಸಗಾತ್ರಹರಾಗಿದ್ದು, ಉದ್ದವಾದ ಉಗುರುಗಳನ್ನು, ಹೊರಚಾಚಿದ ಹಲ್ಲುಗಳನ್ನು, ಇಳಿಬಿದ್ದ ಹೊಟ್ಟೆ, ಜೋತಾಡುವ ಮೊಲೆಗಳನ್ನು, ಜೋಲಾಡುವ ಕಿವಿಗಳಿಂದ ಕೂಡಿ ಭಯಂಕರವಾಗಿದ್ದರು. ಅವರಲ್ಲಿ ಕೆಲವರು ಬಿಳಿಯಾಗಿದ್ದು, ಕೆಲವರು ಕಪ್ಪಾಗಿಯೂ, ಕೆಲವರು ಬೇರೆಬೇರೆ ಬಣ್ಣಗಳನ್ನು ಹೊಂದಿದ್ದರು. ಇವರು ತಮಗೆ ಪ್ರಿಯವಾದ ಮರಗಳಲ್ಲಿ, ಗುಹೆಗಳಲ್ಲಿ, ಬೆಟ್ಟಗಳಲ್ಲಿ, ಮೂರು ದಾರಿಗಳು ಕೂಡುವ ಜಾಗದಲ್ಲಿ ವಾಸವಾಗಿದ್ದವರು.

ವೃಕ್ಷಶ್ಚತ್ವರವಾಸೀನ್ಯಶ್ ಚತುಸ್ಪಥನಿಕೇತನಾಃ

ಗುಹಾಶ್ಮಶಾನವಾಸಿನ್ಯಃ ಶೈಲಪ್ರಸ್ರವಣಾಲಯಾಃ (IX, 45.38)

ಕ್ರೂರ ಸ್ವರೂಪದ ಮಾತೃಕೆಯರು ಸ್ಕಂದನ ಮೂಲಕ ಸೌಮ್ಯತ್ವವನ್ನು ಹೊಂದುತ್ತಿರುವುದನ್ನು ಮಹಾಭಾರತದಲ್ಲಿ ಕಾಣಬಹುದು. ಒಂದು ಕಾಲದಲ್ಲಿ ಊರ ಹೊರಗೆ ವಾಸಿಸುತ್ತಿದ್ದ ಇವರು ಸ್ಕಂದನನ್ನು ಮಗನಾಗಿ ಪಡೆಯುವುದರ ಮೂಲಕ ಊರ ದೇವತೆಗಳಾಗಿ, ಅಥವಾ ಪುರಾಣದ ದೇವತೆಗಳಾಗಿ ಮಾರ್ಪಾಡಾಗುವುದನ್ನು ಇಲ್ಲಿ ಕಾಣುತ್ತೇವೆ. ಮಕ್ಕಳನ್ನು ತಿನ್ನುವ ಅವುಗಳನ್ನು ಕಾಡುವ ಮೂಲಕ ಹಿಂಸೆಯ ದೇವತೆಗಳಾಗಿ ಇಲ್ಲಿ ಕಂಡುಬಂದು ನಂತರದಲ್ಲಿ ಇವರು "ಶಿವೆ"ಯರಾಗಿ ಕಂಡುಬರುತ್ತಾರೆ.

ಸಪ್ತಮಾತೃಕೆಯರ ಉಗಮದ ಬಗೆಗೆ ಅನೇಕ ಪುರಾಣಗಳು ವಿವಿಧ ರೀತಿಯ ಕತೆಗಳನ್ನು ಕಟ್ಟುತ್ತವೆ. ಅವುಗಳಲ್ಲಿ ಪ್ರಮುಖವಾದವೆಂದರೆ ಅಂಧಕಾಸುರ ವಧೆಯ ಪ್ರಸಂಗದಲ್ಲಿ ಬರುವ ಕತೆಯು ಪ್ರಸಿದ್ಧವಾದುದು. ಈ ಕತೆಯು ಮತ್ಸ್ಯ ಪುರಾಣ, ವರಾಹ ಪುರಾಣ, ಮುಂತಾದ ಕಡೆ ಬರುತ್ತದೆ. ಅಂಧಕಾಸುರ ಬ್ರಹ್ಮನಿಂದ ವರ ಪಡೆದು ದೇವತೆಗಳಿಗೆ ಕಿರುಕುಳ ಕೊಡಲು ಪ್ರಾರಂಭಿಸಿದ. ದೇವತೆಗಳೆಲ್ಲ ಕೈಲಾಸಕ್ಕೆ ಓಡಿಹೋಗಿ ತಮಗಾಗುತ್ತಿರುವ ತೊಂದರೆಗಳನ್ನು ತಿಳಿಸಿ, ಅವನಿಂದ ಕಾಪಾಡುವಂತೆ ಕೇಳಿಕೊಂಡರು. ಶಿವನು ಇತರ ದೇವತೆಗಳೊಡನೆ ಯುದ್ಧಸಾರಿದ. ಅಂಧಕನ ದೇಹದಿಂದ ರಕ್ತಬೀಳುತ್ತಿದ್ದರೆ, ಆ ರಕ್ತದ ಹನಿಗಳಿಂದ ರಾಕ್ಷಸರು ಹುಟ್ಟಿಕೊಳ್ಳುತ್ತಿದ್ದರು. ಹೀಗೆ ಸಾವಿರಾರು ಅಂಧಕರು ಹುಟ್ಟಿಕೊಳ್ಳುತ್ತಿರುವುದನ್ನು ನೋಡಿ ಶಿವನು ತನ್ನಂಶದಿಂದ ಸಾವಿರಾರು ದೇವಿಯರನ್ನು ಹುಟ್ಟಿಸಿದ.

ಮಾಹೇಶ್ವರಿ, ಚಾಮುಂಡಾ, ವಾರುಣೆ, ವರಾಹಿ, ನರಸಿಂಹಿ,ವೈಷ್ಣವಿ, ಚಲಚ್ರೇಕೇ,ಶತನಂದಾ, ಭಗನಂದಾ, ವಿಡಾಲಿ, ಶಕುನಿ, ರೇವತಿ, ಮೈರಕ್ತ, ಪೀಲಪಿಚ್ಚಿಕಾ, ಜಯ, ವಿಜಯಾ, ಜಯಂತಿ, ಅಪರಾಜಿತಾ, ಕಾಳಿ, ಮಹಾಕಾಳಿ, ವಯವ್ಯ, ಶಕ್ರಿ, ನಿರ್ರಿತಿ, ಶೌರಿ, ಸೌಮ್ಯ, ಶಿವಾ, ದೂತಿ, ಪಿಚ್ಚಿಲ್ಲ. ಭಗಮಾಲಿನಿ, ಬಲಾ, ಐಬಲಾ, ರಕ್ತಾ, ಸುರಭಿ ಮುಖಮಂಡಿಕಾ, ಶತನಂದಾ, ಸುನಂದಾ, ಶುಭಗಾ, ದುರ್ಭಗಾ, ಕರಲಾ, ನಂದಿನಿ, ಅದಿತಿ, ದಿತಿ, ಮಣೆ, ಮೃತ್ಯು ಕರ್ನಮೊತಿ, ಗ್ರಮ್ಯ, ಉಲೂಕಿ, ಪೂತಭಿ, ಖೇತಾ, ಸುಲೋಚನೆ, ಧೂಮಾ, ಏಕವೀರಾ, ಕರಾಲಿನಿ, ವಿಶಾಲದಂಷ್ಟ್ರಿಣೆ, ಘಟೋಧರಿ ಕಪಾಲಿ ವಜ್ರಹಸ್ತಾ, ಪಿಶಾಚಿ, ರಾಕ್ಷಸಿ, ಭೂಷಂಡಿ, ಶಂಕರಿ, ಚಂಡಾ, ಹಂಗುಲಿ, ಶ್ಯಾಮಾ, ತ್ರಿಜಟಿ, ಕುಕುರಿ, ವಿನಾಯಕಿ, ವೈತಾಲಿ, ಉನ್ನಮತ್ತೌದುಂಬರಿ, ಸಿದ್ಧಿ, ಲಲಿಹನಾ, ಕೌಕರಿ, ಗಾರ್ಧಭಿ, ಭ್ರೂಕುಟಿ, ಬಹುಪುತ್ರಿ, ವಿಚಿತ್ರರೂಪಾ, ಕಾಮರೂಪಾ, ಸಂಗಮಾ ಮುಖಾವಿಲಾ, ಮಂಗಲಾ ಮಹಾನಾಸ, ಮಹಾಮುಖಿ, ಕುಮಾರಿ, ಪಿಂಗಳಾ, ಭೀಮಾ, ಸದಾಹಾಸ, ಲೋಹಿತಮುಖಿ, ಘಂಟಾರವ, ದಂಷ್ಟ್ರಲಾ ರೋಚನಾ ಗೋಕರ್ಣಿಕಾ, ಅಜಮುಖಿ, ಮಹಾಗ್ರಿವಾ, ಮಹಾಮುಖಿ, ಉಲ್ಕಾಮುಖಿ,

ಮೋಹನಾ, ಕಂಪನಾ, ನಿರ್ಭಯಾ, ಬಹುಶಾಲಿನಿ, ಸರ್ಪಾಕರ್ಣ, ಮನೋರಮಾ, ಮಾತಂಗಿ, ಲಂಭಮೇಖಲಾ, ಪ್ರಮೋದಾ, ರಭಸಾ, ನಿಗುಂಭಾ, ರಕ್ತಕಂಪನಾ ಮಹಾಚಿತ್ರಾ, ಚಂದ್ರಸೇನಾ, ಲಂಬಹಸ್ತಾ, ದೀರ್ಘಕೇಶಿ, ಸುಚಿತ್ರಾ, ಸುಂದರಿ, ಹುಂಕಾರಿ, ಚಂದ್ರಿಕಾ, ಬಲಾಮೋಹಿನಿ, ಸಮನ್ಯ, ಮಹಾನಂದಾ,ಮಹೋದರಿ, ಮಹಾದೇವಿ, ಕುಂದಜಿಹ್ವಾ, ಚಲಜ್ಜ್ವಲಾ, ಜ್ವಲಾಮುಖಿ....... ಹೀಗೆ ಸಾವಿರಾರು ದೇವತೆಗಳನ್ನು ಹುಟ್ಟಿಸಿದರು ರಕ್ತದಿಂದ ದೈತ್ಯರು ಹುಟ್ಟುವುದು ನಿಲ್ಲಲಿಲ್ಲ. ವಿಷ್ಣುವಿನ ಸಹಾಯ ಪಡೆದುಕೊಂಡ, ವಿಷ್ಣು ತನ್ನಂಶದಿಂದ ವೈಷ್ಣವಿಯನ್ನು ಕಳುಹಿಸಿದರೆ, ಇಂದ್ರನಿಂದ ಇಂದ್ರಾಣಿ, ಬ್ರಹ್ಮನಿಂದ ಬ್ರಹ್ಮಾಣಿ, ವರಾಹ ರೂಪದಿಂದ ವಾರಾಹಿ, ಕುಮಾರನಿಂದ ಕುಮಾರಿಯು, ಮಾಹೇಶ್ವರನಿಂದ ಮಾಹೇಶ್ವರಿಯು, ಯಮನಿಂದ ಚಾಮುಂಡಾ ಹೀಗೆ ಏಳು ರೂಪಗಳು ಪುರುಷ ದೇವತೆಗಳಿಂದ ಬಂದರು. ಇವರ ಸಹಾಯದಿಂದ ಶಿವ ಈ ಅಸುರರನ್ನು ಸಂಹರಿಸಿದ. ವರಾಹಪುರಾಣದ ಪ್ರಕಾರ ಯೋಗೀಶ್ವರಿಯು ಈ ಏಳು ದೇವತೆಗಳ ಜೊತೆ ಸೇರುತ್ತಾಳೆ. ಅಲ್ಲದೆ, ಇಲ್ಲಿ ಅಷ್ಟಮಾತೃಕೆಯರನ್ನಾಗಿ ಗುರುತಿಸಲಾಗಿದೆ. ಸುಪ್ರಭೇದಾಗಮವು ಸಪ್ತಮಾತೃಕೆಯರು ಬ್ರಹ್ಮನ ಸೃಷ್ಟಿಯಾಗಿದ್ದು, ನಿರೃತನೆಂಬ ದೈತ್ಯನನ್ನು ಕೊಲ್ಲಲು ಕಳುಹಿಸಿದ್ದನು.[೨೦]

ಎಲ್ಲಾ ಪುರಾಣಗಳಲ್ಲಿ ಒಂದೇ ಕತೆಯನ್ನು ವಿವಿಧ ರೀತಿಯಲ್ಲಿ ಹೇಳಲಾಗಿದೆ. ಮೂಲತಃ ಗ್ರಾಮದೇವತೆಗಳನ್ನು ವೈದಿಕ ತೆಕ್ಕೆಗೆ ತೆಗೆದು ಕೊಳ್ಳುವ ರೀತಿಯಲ್ಲಿ ಕಂಡುಬರುತ್ತವೆ. ಅಲ್ಲದೆ ಅನೇಕ ಹೆಸರುಗಳು ಸಂಸ್ಕೃತದ ಹೆಸರುಗಳಾಗಿರದೆ ಇರುವುದನ್ನು ಇಲ್ಲಿ ಕಾಣಬಹುದು. ಅವು ಇಲ್ಲಿಯ ಮೂಲ ಜನಾಂಗದವರಲ್ಲಿ ಕಂಡುಬರುವ ಬುಡಕಟ್ಟುದೇವತೆಗಳಾಗಿರಬೇಕು. ಹೀಗೆ ರಾಕ್ಷಸರನ್ನು ಕೊಲ್ಲಲು ಇಲ್ಲಿಯ ದೇವತೆಗಳನ್ನು ಬಳಸಿಕೊಂಡಿರುವುದೇ ಆಗಿದೆ.

ಸಂಖ್ಯೆಯ ಬಗೆಗೆ ಹಾಗೂ ಅವರ ಹೆಸರುಗಳ ಬಗೆಗೆ ನಿರ್ದಿಷ್ಟವಾಗಿ ಯಾವುದೇ ಗ್ರಂಥಗಳು ಹೇಳುವುದಿಲ್ಲ. ಆದರೆ, ಸಪ್ತಮಾತೃಕೆಯರನ್ನು ಸಾಮಾನ್ಯವಾಗಿ ಏಳು ಎಂದು ನಂಬಲಾಗಿದೆ. ಆದರೆ ಅದು ಕೆಲವು ಬಾರಿ ಹದಿನಾರಾಗಿಯು ಅಥವಾ ಮೂವತ್ತಾರು ಎಂದು ಹೇಳಲಾಗಿದೆ. ಸ್ಕಂದ ಪುರಾಣ, ದೇವಿ ಪುರಾಣ, ಬ್ರಹ್ಮವೈವರ್ತ ಪುರಾಣಗಳಲ್ಲಿ ಇದು ಹೆಚ್ಚಾಗಿಯು, ನಿತ್ಯಷೋಡಶಿತಾರ್ಣವ, ಪ್ರಪಂಚಸಾರ ತಂತ್ರ, ಲಿಂಗಪುರಾಣ, ಮಂತ್ರ ಮಹೋದಧಿ, ವರಾಹ ಪುರಾಣ, ಕಥಾಸರಿತ್ಸಾಗರದಲ್ಲಿ ಸಂಖ್ಯೆಯನ್ನು ಹೇಳುವುದಿಲ್ಲ. ಬದಲಾಗಿ ನಾರಾಯಣಿ ಮೊದಲಾದ ಮಾತೃಕೆಯರು ಎಂದು ಹೇಳಲಾಗಿದೆ. ಇನ್ನೊಂದು ಅಂಶವನ್ನು ಇಲ್ಲಿ ಗಮನಿಸಬಹುದು.ಈ ಹಿಂದೆ ಕಂಡುಬಾರದೇ ಇರುವ ಮೂಲದೇವತೆಗಳ ಶಕ್ತಿಯ ರೂಪಗಳು ಮಹಾಭಾರತದ ನಂತರದಲ್ಲಿ ಮೂಲಶಕ್ತಿಯ ರೂಪಗಳಾಗಿ (Personified Energies of Gods) ಕಂಡುಬರುತ್ತಾರೆ. ಮೊದಲ ಭಾಗದಲ್ಲಿ ಯಾವುದೇ ಪುರುಷದೇವತೆಗಳ ಅಂಶವಾಗಿ ಕಂಡುಬಾರದೆ ಇರುವುದು ಕಂಡುಬಂದರೆ, ಎರಡನೆಯ ಕಾಲಘಟ್ಟದಲ್ಲಿ ಅವರು

ಪುರುಷದೇವತೆಯ ಅಂಶರೂಪವಾಗಿ, ಅಥವಾ ಅವರ ಭಾಗವಾಗಿರುವುದನ್ನು ಇಲ್ಲಿ ಗುರುತಿಸಬಹುದು. ಬೃಹತ್ಸಂಹಿತದಲ್ಲಿ ಮಾತೃಗಣ ಕರ್ತವ್ಯಃ ಸ್ವನಾಮ ದೇವಾನುರೂಪಕೃತಚಿನ್ಹಃ ಎಂದು ಹೇಳಲಾಗಿದೆ. ಅದೇ ರೀತಿ ಅಮರಕೋಶದಲ್ಲಿಯೂ ಸಹ ಇದೇ ರೀತಿ ಯಲ್ಲಿ ಹೇಳಲಾಗಿದೆಯಾದರೂ ಅವರ ಸಂಖ್ಯೆ ಏಳು ಎಂದು ನಿಗದಿತಗೊಂಡಿರುವುದು ಈ ಕೆಳಗಿನ ಶ್ಲೋಕದಿಂದ ತಿಳಿಯಬಹುದು.

ಬ್ರಾಹ್ಮೀ ಮಾಹೇಶ್ವರೀ, ಚೈವ ಕೌಮಾರೀ ವೈಷ್ಣವೀ ತಥಾ
ವಾರಾಹೀ ಚ ತಥೇಂದ್ರಾಣೀ ಚಾಮುಂಡಾ ಸಪ್ತಮಾತರಃ (ಅಮರಕೋಶ,ಮಾಹೇಶ್ವರಿ, ೮)

ಇದು ನಂತರದಲ್ಲಿ ಪ್ರಧಾನವಾಗಿ ಮುಂದುವರೆದಿರುವುದಾಗಿದೆ.

ಸಾಹಿತ್ಯದ ಕೃತಿಗಳಲ್ಲಿ ಮೊದಲ ಉಲ್ಲೇಖ ಕಂಡುಬರುವುದು ಶೂದ್ರಕನ ಮೃಚ್ಛಕಟಿಕಾ ನಾಟಕದಲ್ಲಿ. ದರಿದ್ರ ಚಾರುದತ್ತನು ಗೆಳೆಯನಾದ ವಿಧೂಷಕನಿಗೆ "ತದ್ವಯಸ್ಯ.. ಗಚ್ಛ, ತ್ವಮಪಿ ಚತುಷ್ಪಥೆ ಮಾತೃಭ್ಯೋ ಬಲಿಮುಪಹಾರ..." (ಮೃಚ್ಛಕಟಿಕಾ, ಅಂಕ ೧) ವನ್ನು ಕೊಟ್ಟು ಬಾ ಎಂದು ಹೇಳುತ್ತಾನೆ. ಹರ್ಷಚರಿತದಲ್ಲಿ ರಾಜಾ ಪಶುಪತಿಯು ಭೈರವಾಚಾರಿಯನ್ನು ನೋಡಲು ಬಂದಾಗ, ಅವನು ಬಿಲ್ವ ತೋಟದ ಮಾತೃಗೃಹದಲ್ಲಿ *"ಅಸ್ಯ ಜೀರ್ಣ ಮಾತೃಗೃಹಸ್ಯೋತ್ತರೇಣ ಬಿಲ್ವವಾಟಿಕಾ ಮಧ್ಯಾಸ್ತೆ..."* ಪೂಜಾನಿರತನಾಗಿದ್ದನ್ನು ಮೂರನೆಯ ಉಚ್ಛ್ವಾಸದಲ್ಲಿ ಬಂದಿದೆ. ಅಲ್ಲದೆ *"ಕುಚಿದ್ದೀಪಿಕಾ ದಹ್ಯಮಾನ ಕುಲಪುತ್ರಕಾ ಪ್ರಸಾದ್ಯಮಾನ ಮಾತೃಮಂಡಲಂ'* (ಹರ್ಷಚರಿತಂ, ೩ ಮತ್ತು ೫ನೆಯ ಉಚ್ಛ್ವಾಸಂ) ಎಂದೂ ಹೇಳಲಾಗಿದೆ. ಅಂದರೆ ತಮ್ಮವರ ಒಳಿತಿಗಾಗಿ ತಮ್ಮನ್ನು ತಾವೇ ಸುಟ್ಟುಕೊಂಡು ಈ ದೇವತೆಯರಿಗೆ ಬಲಿಯಾಗುತ್ತಿದ್ದರು. 'ಕಾದಂಬರಿ'ಯಲ್ಲಿಯೂ ಮಾತೃಮಂದಿರಗಳ ಉಲ್ಲೇಖಬರುತ್ತದೆ.

ವಿ. ಎಸ್ ಅಗ್ರವಾಲ ಅವರು ಸುಮಾರು ಕ್ರಿಸ್ತ ಶಕದ ಆರಂಭದ ಭಾಗದಲ್ಲಿ ದೊರಕುವ ಮಾತೃಕೆಯರನ್ನು ಪಟ್ಟಿ ಮಾಡುತ್ತಾರೆ.[೨೦] ಇವು ಕುಶಾನರ ಕಾಲಕ್ಕೆ ಸೇರಿದವಾಗಿವೆ. ಸಾಮಾನ್ಯವಾಗಿ ಈ ದೇವಿಯರನ್ನು ಒಂದು ಕಲ್ಲಿನ ಹಲಗೆಯ ಮೇಲೆ ಕೆತ್ತಲಾಗಿದೆ. ನಿಂತಿರಬಹುದು ಅಥವಾ ಕುಳಿತಿರಬಹುದು. ಬಲಹಸ್ತವನ್ನು ಅಭಯ ಮುದ್ರೆಯಲ್ಲಿ ಕೆತ್ತಲಾಗಿರುತ್ತದೆ. ಅಕ್ಕಪಕ್ಕದಲ್ಲಿ ಪುರುಷ ದೇವತೆಗಳು ಅಥವಾ ರಕ್ಷಕ ದೇವತೆಗಳು ಇದ್ದಾರೆ. ಇವರನ್ನು ವೀರಭದ್ರ ಅಥವಾ ವೀರೇಶ್ವರ ಹಾಗೂ ಗಣೇಶನೆಂದು ತಿಳಿಯಲಾಗಿದೆ. ಇಲ್ಲಿ ಮಾತೃಕೆಯರು ಸಾಮಾನ್ಯವಾದ ಮಹಿಳೆಯರ ರೀತಿಯಲ್ಲಿ ಕಂಡುಬರುತ್ತಾರೆ ವಿಶೇಷವಾದ ಯಾವುದೇ ರೀತಿಯ ಅಲಂಕಾರವಾಗಲಿ ಆಯುಧಗಳಾಗಲಿ ಇಲ್ಲದಿರುವುದು ಗಮನಿಸಬೇಕಾದ ಅಂಶವಾಗಿದೆ. ಆನಂದ ಕುಮಾರಸ್ವಾಮಿಯವರು ಹೇಳುವಂತೆ :

They are all alike, ordinary females without any distinguishing symbols or vehicles. All of them wear ear-pendants, bracelets, and anklets and are clad in long skirts instead of dhotis. The only sign of divinity is the upraised right hand granting fearlessness - a very common feature in the early stages of the development of Indian Iconography.[೨೨]

ಕ್ರಿ. ಶ. ಸು ೪೨೨.೩ರಲ್ಲಿ ಮಧ್ಯಪ್ರದೇಶದ ಗಂಗಾಧರ ಎಂಬ ಗ್ರಾಮದಲ್ಲಿ ದೊರಕಿದ ಪ್ರಾಚೀನ ಶಾಸನವೊಂದರಲ್ಲಿ ಸಪ್ತ ಮಾತೃಕೆಯರ ಉಲ್ಲೇಖ ಬರುತ್ತದೆ. ಇದರಲ್ಲಿ ರಾಜ ವಿಶ್ವವರ್ಮನ್ ವಿಷ್ಣುದೇವಾಲಯವನ್ನು ಕಟ್ಟಿಸಿದ್ದನ್ನು ಹೇಳುತ್ತಾ ಈ ಗ್ರಾಮದಲ್ಲಿ *ಮಾತೃಣಾಂಚ* ಅಂದರೆ ಮಾತೃದೇವತೆಗಳಿಗೆ ದೇವಾಲಯವೊಂದನ್ನು ಸಹ ಕಟ್ಟಿಸಿದ್ದನ್ನು ಹೇಳುತ್ತದೆ.[೨೩] ಇಲ್ಲಿ ಗ್ರಾಮದೇವತೆಯರಾಗಿದ್ದು, ಅವರನ್ನು ದೈವತೆಗಳ ಸಾಲಿನಲ್ಲಿ ಸೇರಿಸಿರುವುದು ಐತಿಹಾಸಿಕವಾಗಿ ಕಂಡುಬರುವ ವಿಷಯವಾಗಿದೆ. ಇದಲ್ಲದೆ, ಕುಮಾರಗುಪ್ತನ ಕಾಲದ ಇನ್ನೊಂದು ಶಾಸನದಲ್ಲಿ "....ಸ್ಕಂದ ಪ್ರಧಾನೈರ್ಭೂವಿ ಮಾತೃಭಿಶ್ಚ..." ಎಂದರೆ ಪ್ರಧಾನ ದೇವತೆಯಾದ ಸ್ಕಂದನೊಡನೆ ಮಾತೃದೇವತೆಯರಿಗೆ ದೇವಾಲಯವನ್ನು ಕಟ್ಟಲಾಯಿತೆಂದು ತಿಳಿಸುತ್ತದೆ[೨೪]

ಕದಂಬ ಹಾಗೂ ಬದಾಮಿಯ ಚಳುಕ್ಯರು ತಮ್ಮನ್ನು ಸ್ಕಂದನ ಆರಾಧಕರೆಂದು, ಮಾತೃದೇವತೆ ಪಾದಾರಾಧಕರೆಂದು ಕರೆದುಕೊಂಡಿದ್ದಾರೆ. ಈ ಎರಡು ವಂಶಗಳು ದಕ್ಷಿಣ ಭಾರತದ ದೊಡ್ಡ ರಾಜವಂಶಗಳು. ಈ ನೆಲದಿಂದಲೇ ಅರಳಿ ಬಂದವರಾದ ಇವರು ತಮ್ಮನ್ನು "ಸ್ವಾಮಿ ಮಹಾಸೇನ ಮಾತೃಗಣಾನುಧ್ಯಾತಾನಾಂ.." ಕದಂಬರು ಹೇಳಿಕೊಂಡಿದ್ದಾರೆ. "ಸಪ್ತ ಲೋಕ ಮಾತೃಭಿಸ್ಸಪ್ತ ಮಾತೃಭಿರಭಿವರ್ಧಿತಾನಾಂ ಕಾರ್ತಿಕೇಯ ಪರಿರಕ್ಷಣ ಪ್ರಾಪ್ತ ಕಲ್ಯಾಣ ಪರಂಪರಾಣಾಂ" ಎಂದು ಚಳುಕ್ಯರು ತಮ್ಮನ್ನು ಕರೆದುಕೊಂಡಿದ್ದಾರೆ. ದಕ್ಷಿಣ ಭಾರತದಲ್ಲಿ ಪ್ರಾಚೀನ ಮಾತೃಕಾ ಶಿಲ್ಪವು ಪುದುಕ್ಕೋಟೆಯ ಗೋಕರ್ಣೇಶ್ವರ ದೇವಾಲಯದಲ್ಲಿ ದೊರಕಿರುವುದನ್ನು ಡಾ. ದೇವರಕೊಂಡಾ ರೆಡ್ಡಿಯವರು ಉಲ್ಲೇಖಿಸುತ್ತಾರೆ.[೨೫] ಈ ದೇವಾಲಯವು ಮೂಲತಃ ಗುಹಾಲಯವಾಗಿದ್ದು, ಕೈಸಾಲೆಯ ಎಡ ಮತ್ತು ಬಲಭಾಗಗಳಲ್ಲಿ ಗಣೇಶ ಹಾಗೂ ಗಂಗಾಧರನ ಉಬ್ಬುಕೆತ್ತನೆಗಳನ್ನು ಹೊಂದಿದ್ದು ಸ್ವಲ್ಪ ಕೆಳಗೆ ಮಾತೃಕೆಯರ ವಿಗ್ರಹಗಳನ್ನು ಬಿಡಿಸಲಾಗಿದೆ. ಇವು ಸುಮಾರು ಒಂದು ಅಡಿ ಎತ್ತರವಿದ್ದು, ಯಾವ ವಿಗ್ರಹಗಳಿಗೂ ಮುಖಗಳಿಲ್ಲದಿರುವುದು ಇಲ್ಲಿಯ ವಿಶೇಷ. ಹಾಗೂ ಅವುಗಳ ಕಿರೀಟಗಳ ಮೂಲಕವೇ ಇಲ್ಲಿ ಯಾವ ದೇವತೆಗಳ ವಿಗ್ರಹವೆಂದು ಗುರುತಿಸಲಾಗುತ್ತದೆ. ಕಲ್ಯಾಣಿ ಚಾಲುಕ್ಯರ ಶೈವದೇವಾಲಯಗಳಲ್ಲಿ ಸಪ್ತಮಾತೃಕೆಯರ ಪಟ್ಟಿಕೆಗಳು ಇದ್ದೇ ಇರುತ್ತವೆ. ಹಾಗೂ ಹೊಯ್ಸಳರ ಕಾಲದಲ್ಲಿ ಸಪ್ತಮಾತೃಕೆಯರ ವಿಗ್ರಹಗಳ ಆಲಂಕಾರಿಕತೆ ಹಾಗೂ ಬಿಡಿಯಾದ ವಿಗ್ರಹಗಳು ಹೆಚ್ಚಾಗಿ ಸಿಗುತ್ತವೆ.



ಚಿತ್ರ ೨೬



ಚಿತ್ರ ೨೭

'ಮಾರ್ಕಂಡೇಯ ಪುರಾಣ'ದ 'ದೇವಿಮಹಾತ್ಮ್ಯ'ಯಲ್ಲಿ ಹಾಗೂ 'ಕಾಶ್ಯಪೀಯ' ಅಥವಾ 'ಅಂಶುಭೇದಾಗಮ'ದಲ್ಲಿ ಸಪ್ತಮಾತೃಕೆಯರ ರೂಪವನ್ನು ಕೊಡಲಾಗಿದೆ. ರೂಪಮಂಡನದ ಪ್ರಕಾರ ಸಪ್ತಮಾತೃಕೆಯರ ಶಿಲ್ಪಗಳನ್ನು ನೋಡಬಹುದು

ಬ್ರಾಹ್ಮಿ: ಬ್ರಹ್ಮನ ಅಂಶದಿಂದ ಬಂದವಳಾದ್ದರಿಂದ ನಾಲ್ಕುಮುಖಗಳನ್ನು ಹೊಂದಿದ್ದು, ಶ್ವೇತವರ್ಣದವಳಾಗಿದ್ದಾಳೆ. ಬಲಭಾಗದ ಹಸ್ತಗಳಲ್ಲಿ ಶೂಲವನ್ನು ಹಾಗೂ ಇನ್ನೊಂದು ಅಭಯ ಹಸ್ತವಾಗಿದೆ. ಎಡಭಾಗದ ಹಸ್ತಗಳಲ್ಲಿ ಅಕ್ಷಮಾಲ, ಹಾಗೂ ವರದ ಹಸ್ತವಾಗಿದೆ. ಕೆಂಪಾದ ಕಮಲದ ಮೇಲೆ ಕುಳಿತಿದ್ದು, ಹಂಸ ವಾಹನವು ಪಕ್ಕದಲ್ಲಿರುತ್ತದೆ. ಹಂಸ ಪತಾಕವು ಅವಳ ಧ್ವಜವಾಗಿರುತ್ತದೆ. ಪಿತಾಂಬರಧಾರಿಯಾಗಿರುವ ಬ್ರಾಹ್ಮಿಯು ಕರಂಡಮುಕುಟವನ್ನು ಧರಿಸಿರುತ್ತಾಳೆ. ಬ್ರಹ್ಮವೃಕ್ಷವು ಅವಳ ಸ್ಥಾನವಾಗಿರುತ್ತದೆ.

ವಿಷ್ಣುಧರ್ಮೋತ್ತರ ಪುರಾಣವು ಬ್ರಹ್ಮಿಯನ್ನು ಆರು ಕೈಯಗಳನ್ನು ಹೊಂದಿರುವಳೆಂದು, ಅಭಯ, ಪುಸ್ತಕ, ಕಮಂಡಲ ಹಾಗೂ ಅಭಯ ಹಸ್ತಗಳನ್ನು ಹೊಂದಿರುವಳೆಂದು ವರ್ಣಿಸುತ್ತದೆ. ಜಿಂಕೆಯ ಚರ್ಮವನ್ನು ಇವಳು ಹೊದ್ದಿರುತ್ತಾಳೆ.

ವೈಷ್ಣವಿ: ವೈಷ್ಣವಿಯು ವಿಷ್ಣುವಿನ ಅಂಶವನ್ನು ಹೊಂದಿರುವವಳು. ಚತುರ್ಭಾಹುಗಳಲ್ಲಿ ಚಕ್ರ ಅಭಯ ಹಸ್ತಗಳನ್ನು ಒಂದು ಭಾಗವು ಹೊಂದಿದ್ದರೆ, ಎಡಭಾಗವು ಶಂಖ ಹಾಗೂ ವರದ ಹಸ್ತಗಳನ್ನು ಪಡೆದಿರುತ್ತದೆ. ಮನೋಹರವಾದ ಮುಖಮಂಡಲವನ್ನು, ಅಂದವಾದ ಕಣ್ಣುಗಳನ್ನು ಪಡೆದಿದ್ದಾಳೆ. ವಿಷ್ಣುವಿನ ರೀತಿಯಲ್ಲಿ ಬಟ್ಟೆಗಳನ್ನು ಧರಿಸಿರುತ್ತಾಳೆ. ವಾಹನವು ಗರುಡವಾಗಿದೆ. ಕಿರೀಟ ಮಕುಟವು ಅವಳ ಮುಡಿಯನ್ನು ಅಲಂಕರಿಸಿರುತ್ತದೆ. ರಾಜವೃಕ್ಷವು ಅವಳ ವಾಸಸ್ಥಾನವಾಗಿದೆ.

ವಿಷ್ಣುಧರ್ಮೋತ್ತರ ಪುರಾಣದ ಪ್ರಕಾರ ಆರು ಕೈಗಳು, ಗಧಾ, ಪದ್ಮ, ಅಭಯ ಹಸ್ತಗಳು ಬಲಭಾಗದಲ್ಲಿದ್ದರೆ, ಎಡಭಾಗದಲ್ಲಿ ಚಕ್ರ, ವರದಮುದ್ರೆ ಹಾಗೂ ಶಂಖಗಳನ್ನು ಹಿಡಿದಿರುತ್ತಾಳೆ.

ಇಂದ್ರಾಣಿ: ಇಂದ್ರಾಣಿಯು ಇಂದ್ರನ ಸ್ವರೂಪವೇ ಆಗಿದೆ. ಮೂರು ಕಣ್ಣುಗಳು, ನಾಲ್ಕು ಕೈಗಳು, ಆ ನಾಲ್ಕು ಕೈಗಳಲ್ಲಿ ವಜ್ರ, ಶಕ್ತಿ, ಹಾಗೂ ವರದ, ಅಭಯ ಮುದ್ರೆಗಳ ಹಸ್ತಗಳಾಗಿರುತ್ತವೆ. ಇವಳ ದೇಹವು ರಕ್ತವರ್ಣವಾಗಿದ್ದು,ಕಿರೀಟ ಮಕುಟವನ್ನು ಮುಡಿದಿರುತ್ತಾಳೆ. ಗಜ ವಾಹನ ಹಾಗೂ ಧ್ವಜವೂ ಆಗಿದೆ. ಕಲ್ಪಕ ವೃಕ್ಷದಲ್ಲಿ ಇವಳ ವಾಸ.

ವಿಷ್ಣುಧರ್ಮೋತ್ತರ ಪುರಾಣವು ಸಹಸ್ರನಯನೆಯೆಂದು ಹೊಗಳುತ್ತದೆ. ಅಲ್ಲದೆ ಸುವರ್ಣದಂತ ದೇಹವನ್ನು ಹೊಂದಿದ್ದಾಳೆ. ಉಳಿದಂತೆ ರೂಪಮಂಡನದಂತೆ ಹೇಳಲಾಗಿದೆ.



ಚಿತ್ರ ೨೫



ಚಿತ್ರ ೨೬

ಚಾಮುಂಡಾ: ಸಪ್ತಮಾತೃಕೆಯರಲ್ಲಿ ಅತೀ ಪ್ರಾಚೀನ ರೂಪವನ್ನು ಇಟ್ಟುಕೊಂಡಿರುವ ದೇವತೆಯೆಂದರೆ, ಚಾಮುಂಡಾ.ಅತೀ ರಕ್ತವರ್ಣದ ದೇಹಕಾಂತಿಯನ್ನು ಹೊಂದಿರುವ ಚಾಮುಂಡಾಳು ಪುಷ್ಕಳವಾದ ಹಾಗೂ ದಟ್ಟವಾದ ಕೇಶರಾಶಿಯನ್ನು ಹೊಂದಿದ್ದಾಳೆ. ನಾಲ್ಕು ಕೈಗಳನ್ನು ಮೂರನೆಯ ಕಣ್ಣನ್ನು ಪಡೆದಿದ್ದಾಳೆ. ಕಪಾಲ, ಶೂಲಾಯುಧಗಳನ್ನು ಹಾಗೂ ಅಭಯ, ವರದಾ ಹಸ್ತಗಳಿಂದ ಕೂಡಿದವಳಾಗಿದ್ದಾಳೆ. ರುಂಡಮಾಲಾ ಧಾರಿಣಿಯಾಗಿರುವ ಚಾಮುಂಡಾ ಯಜ್ಞೋಪವೀತ ಹಾಗೂ ಹುಲಿಯ ಚರ್ಮಗಳನ್ನು ತೊಟ್ಟಿರುತ್ತಾಳೆ. ವಟವೃಕ್ಷದ ಕೆಳಗೆ ಕುಳಿತಿರುತ್ತಾಳೆ.

ವಿಷ್ಣುಧರ್ಮೋತ್ತರ ಪುರಾಣವು ಬೇರೆ ರೀತಿಯ ಚಿತ್ರಣವನ್ನು ಕೊಡುತ್ತದೆ. ಇಲ್ಲಿ ಸತ್ತದೇಹದ ಮೇಲೆ ಕುಳಿತಿರುತ್ತಾಳೆ. ಹೊರಚಾಚಿದ ಕೋರೆದಾಡಿಗಳಿಂದ ಕೂಡಿದ ಮುಖವು ಭಯಂಕರವಾಗಿದೆ. ಗುಳಿಬಿದ್ದ ಕಣ್ಣುಗಳು, ಬೆನ್ನು ಸೇರಿದ ಹೊಟ್ಟೆಯಿಂದ ಕೂಡಿದವಳಾಗಿದ್ದಾಳೆ. ಹತ್ತು ಬಾಹುಗಳಲ್ಲಿ ಮಸುಲ, ಕವಚ, ಬಾಣ, ಅಂಕುಶ, ಖಡ್ಗ, ಖೇಟಕ, ಪಾಶ, ಧರ್ಮ, ದಂಡ ಹಾಗೂ ಪರಶುಗಳನ್ನು ಕೈಯಲ್ಲಿ ಹಿಡಿದಿರುತ್ತಾಳೆ. ಕೆಲವು ಕಡೆ ಇವಳ ವಾಹನವು ಗೂಬೆ ಎನ್ನಲಾಗಿದೆ. ಶಂಖಪತ್ರ ಕುಂಡಲಗಳನ್ನು ಧರಿಸಿರುತ್ತಾಳೆ.

ಮಾಹೇಶ್ವರಿ: ಸೌಮ್ಯ ರೂಪಧಾರಿಣಿಯಾದ ಮಾಹೇಶ್ವರಿಯು ರೂಪಮಂಡನದ ಪ್ರಕಾರ ನಾಲ್ಕುಕೈಗಳನ್ನು ಹೊಂದಿದ್ದಾಳೆ. ಬಲಭಾಗದ ಕಡೆ ಶೂಲ ಹಾಗೂ ವರದಾ ಹಸ್ತಗಳಿದ್ದರೆ, ಎಡಭಾಗದಲ್ಲಿ ಅಕ್ಷಮಾಲಾ ಮತ್ತು ಅಭಯಹಸ್ತಗಳನ್ನು ಪಡೆದಿರುತ್ತಾಳೆ.

ವಿಷ್ಣುಧರ್ಮೋತ್ತರದ ಪ್ರಕಾರ ಮಾಹೇಶ್ವರಿಯು ಪಂಚಾನನೆಯಾಗಿದ್ದಾಳೆ. ಒಂದೊಂದು ಮುಖದಲ್ಲಿ ಮೂರು ಕಣ್ಣುಗಳನ್ನು ಹೊಂದಿರುವಳಂತೆ. ಚಂದ್ರನನ್ನು ಮುಡಿಯಲ್ಲಿ ಧರಿಸಿರುವ ಇವಳು ಶುಭ್ರ ಶ್ವೇತವರ್ಣದವಳು. ಷಟ್ಭುಜಗಳಲ್ಲಿ ಅಕ್ಷಸ ಸೂತ್ರ, ಡಮರು, ತ್ರಿಶೂಲ, ಘಂಟಾಗಳನ್ನು ಹಿಡಿದಿದ್ದರೆ, ಉಳಿದ ಎರಡು ಹಸ್ತಗಳು ಅಭಯ ಹಾಗೂ ವರದಾ ಮುದ್ರೆಯಲ್ಲಿರುತ್ತವೆ. ಜಟಾಮಕುಟವು ಅವಳ ಕೇಶಬಂಧದ ಶೈಲಿಯಾಗಿರುತ್ತದೆ. ವೃಷಭವನ್ನು ವಾಹನವಾಗಿಯೂ ಧ್ವಜದಲ್ಲಿರುವ ಚಿನ್ಹೆಯಾಗಿಯೂ ಹೊಂದಿದ್ದಾಳೆ. ಬಿಲ್ವವೃಕ್ಷವು ಅವಳ ವಾಸ ಸ್ಥಾನವಾಗಿದೆ.

ಕುಮಾರಿ - ಕೌಮಾರಿ: ಕಾರ್ತಿಕೇಯನ ಅಂಶವಾಗಿರುವ ಕುಮಾರಿ ಅಥವಾ ಕೌಮಾರಿಯು ಪಾಟಲವರ್ಣದ ದೇಹದ ಕಾಂತಿಯನ್ನು ಹೊಂದಿದ್ದಾಳೆ. ಇವಳ ನಾಲ್ಕು ಕೈಗಳಲ್ಲಿ ಶಕ್ತಿ, ಕುಕ್ಕುಟಗಳನ್ನು ಹಾಗೂ ಅಭಯ, ವರದಾ ಹಸ್ತಗಳನ್ನು ಹೊಂದಿರುತ್ತಾಳೆ. ವಾಹನ ಹಾಗೂ ಲಾಂಛನವು ಮಯೂರವಾಗಿದೆ. ಔದುಂಬರ ಮರವು ಅವಳ ವಾಸಸ್ಥಾನವಾಗಿರುವುದು. ವಿಷ್ಣುಧರ್ಮೋತ್ತರ ಪುರಾಣವು ಆರುಮುಖಗಳನ್ನು ಹೊಂದಿರುವಂತೆ ಹೇಳಿದೆ ಅಲ್ಲದೆ

ಹನ್ನೆರಡು ಕೈಗಳನ್ನು ಹೊಂದಿದ್ದು, ಅವುಗಳಲ್ಲಿ ಶಕ್ತಿ, ಧ್ವಜ, ದಂಡ, ಡಮರು, ಪಣ, ಘಂಟಾ, ಪದ್ಮ, ಪತ್ರ, ಪರಶುಗಳನ್ನು ಎರಡು ಹಸ್ತಗಳು ಅಭಯ ಹಾಗೂ ವರದಾ ಹಸ್ತಗಳಾಗಿರುತ್ತವೆ.

ವಾರಾಹಿ: ವಾರಾಹಿಯು ಯಮನೊಡನೆ ಸಂಬಂಧವನ್ನು ಹೊಂದಿರುವ ಹಾಗೆ ಕೆಲವು ಶಿಲ್ಪಗ್ರಂಥಗಳು ತಿಳಿಸುತ್ತವೆ. ಶಿಲ್ಪಸಂಗ್ರಹ ಎಂಬ ಗ್ರಂಥದಲ್ಲಿ ವಾರಾಹಿಯು ಯಮನ ಅಂಶದಿಂದ ಹುಟ್ಟಿರುವವಳೆಂದು ಹೇಳಿದರೆ, ಹೇಮಾದ್ರಿಯು ಯಮನ ರೂಪವೆಂದು ಹೇಳಿದ್ದಾನೆ. ಕೆಲವು ಶಿಲ್ಪಗಳಲ್ಲಿ ಇಕೆಯ ವಾಹನವು ಕೋಣವಾಗಿರುತ್ತದೆ.ಆದರೆ ವಿಷ್ಣುವಿನ ವರಾಹ ಅವತಾರಕ್ಕೂ ಇದಕ್ಕೂ ಯಾವುದೇ ಸಂಬಂಧವಿರುವ ಹಾಗೆ ಕಂಡುಬರುವುದಿಲ್ಲ. ಹಂದಿಯ ಮುಖವನ್ನು ಹೊಂದಿದ್ದು, ಕಪ್ಪಾದ ದೇಹವನ್ನು ಪಡೆದಿದ್ದಾಳೆ. ಕರಂಡ ಮಕುಟವು ತಲೆಯ ಮೇಲಿದ್ದು, ನೇಗಿಲು, ಹಾಗೂ ಶಕ್ತಿಯನ್ನು ಕೈಯಲ್ಲಿ ಹಿಡಿದಿರುತ್ತಾಳೆ. ಅವಳ ವಾಸಸ್ಥಾನವು ಕಲ್ಪಕ ಎಂಬ ಗಿಡದಲ್ಲಿ.

ಸಾಮಾನ್ಯವಾಗಿ ಸಪ್ತಮಾತೃಕೆಯರ ವಿಗ್ರಹಗಳು ಅರ್ಧಪರ್ಯಂಕಾಸನದಲ್ಲಿ ಕುಳಿತಿರುತ್ತವೆ. ಮತ್ತೊಂದು ವಿಶೇಷವೆಂದರೆ ಸಪ್ತಮಾತೃಕೆಯರ ಅಕ್ಕಪಕ್ಕದಲ್ಲಿ ಇಬ್ಬರು ಪುರುಷ ದೇವತೆಗಳಿರುವುದು. ಪಟ್ಟಿಯಲ್ಲಿ ಮಾತೃಕೆಯರು ಬಂದರೆ ಅವರ ರಕ್ಷಣಾದೇವತೆಗಳಾಗಿ ಇಬ್ಬರು ಪುರುಷರು ಕುಳಿತಿರುತ್ತಾರೆ. ಅವರಲ್ಲಿ ಒಬ್ಬ ಗಣೇಶನಾದರೆ ಇನ್ನೊಬ್ಬ ವೀರೇಶ್ವರ ಅಥವಾ ವೀರಭದ್ರನೆಂದು ಗುರುತಿಸಲಾಗಿದೆ. ರೂಪಮಂಡನವು ಇದನ್ನು ಸ್ಪಷ್ಟವಾಗಿ ಉಲ್ಲೇಖಿಸುತ್ತದೆ.

ವೀರೇಶ್ವರಶ್ಚ ಭಗವಾನ್ವೃಷಾರೂಢೋ ಧನುರ್ಧರಃ
ವೀಣಾಹಸ್ತ ತ್ರಿಶೂಲಾ ಚ ಮಾತೃಣಾಮಗ್ರತೊ ಭವೇತ್
ಮಧ್ಯಾ ಚ ಮಾತರಃ ಕಾರ್ಯಾ ಅಂತೆ ತೇಶಾಂ ವಿನಾಯಕಃ [೭೭]

ವೀರಭದ್ರ ಅಥವಾ ವೀರೇಶ್ವರನಿಗೆ ನಾಲ್ಕು ಕೈಗಳು ಇದ್ದು, ಅವುಗಳಲ್ಲಿ ಶೂಲ ಹಾಗೂ ಅಭಯ ಹಸ್ತಗಳು ಬಲಭಾಗದಲ್ಲಿ ಇದ್ದರೆ, ಎಡಭಾಗದಲ್ಲಿ ಶೂಲ ಹಾಗೂ ವರದಾ ಹಸ್ತಗಳನ್ನು ನೋಡಬಹುದು. ಜಟಾಮಕುಟವನ್ನು ಹೊಂದಿರುತ್ತಾನೆ. ದಕ್ಷಿಣ ಭಾರತದಲ್ಲಿ ಗ್ರಾಮದೇವತೆಗಳ ಆರಾಧನೆಯಲ್ಲಿ ದೇವತೆಗಳ ರಕ್ಷಕನಾಗಿ ಪೋತರಾಜು ಕಂಡುಬರುತ್ತಾನೆ. ಈ ಪೋತರಾಜುವೇ ವೀರಭದ್ರನಾಗಿರಬೇಕು ಎಂದು ಊಹಿಸಬಹುದಾಗಿದೆ. ಯಾಕೆಂದರೆ, ಪೋತರಾಜುವಿಗೂ ಹಾಗೂ ವೀರಭದ್ರನಿಗೂ ಸಂಬಂಧ ಇರುವ ಹಾಗೆ ಕಂಡುಬರುತ್ತದೆ. ಪೋತರಾಜುವನ್ನು ಗ್ರಾಮದೇವತೆಗಳ ರಕ್ಷಕ ದೇವತೆಯಾಗಿ ಹಾಗೂ ಗಂಡನ ರೀತಿಯಲ್ಲಿಯೂ ಕಂಡುಬರುತ್ತಾನೆ. ಎಲ್ಮೋರ್ ಅವರು ಹೇಳುವಂತೆ;

> Potu Razu is a mysterious person in the Telugu country; sometimes he is described as the brother, sometimes as the husband of the village goddess, and sometimes as only an attendant. Once I occasionally the villagers seem to think that the less said about him the better. But I have never met with him as an independent deity, and have always been told that sacrifice is never offered to him alone, but always in conjunction with one or more of the goddesses.[22]

ಪ್ರಾಚೀನ ಶಿಲ್ಪಗಳಲೆಲ್ಲಾ ವೀರಭದ್ರನ ವಿಗ್ರಹಗಳು ಕಂಡುಬರುವುದರಿಂದ ಜೊತೆಯಲ್ಲಿ ವಿನಾಯಕನು ಇಲ್ಲಿರುವುದರಿಂದ ಇವನನ್ನು ಭೈರವನೆಂದು ಹೇಳಲಿಕ್ಕಾಗದು. ಭೈರವನ ರೂಪ ಹಾಗೂ ಸ್ವರೂಪವು ಭಿನ್ನವಾದುದು. ವಿನಾಯಕನು ಮೂಲದಲ್ಲಿ ಗಣಗಳ ಒಡೆಯನೆಂದು ಹಾಗೂ ಅವನ ಕಾರ್ಯವೈಖರಿ ಸಪ್ತಮಾತೃಕೆಯರ ಹಿನ್ನೆಲೆಯದ್ದೇ ಆಗಿರುವುದರಿಂದ ಇಲ್ಲಿ ಭೈರವನನ್ನು ಸೇರಿಸುವುದು ಸರಿಕಾಣಲಾರದು. ಬಿಡಿಯಾದ ವಿಗ್ರಹದಲ್ಲಿ ಮಾತ್ರ ಭೈರವ ಬರುತ್ತಾನೆಯೆ ಹೊರತು ಪಟ್ಟಿಕೆಯಲ್ಲಿ ಬಂದಾಗ ವೀರಭದ್ರ ಹಾಗೂ ವಿನಾಯಕರು ಬರುತ್ತಾರೆ.ಈ ಎಲ್ಲ ಹಿನ್ನೆಲೆಯಿಂದ ನೋಡಿದರೆ ಸಪ್ತಮಾತೃಕೆಯರ ಆರಾಧನೆಯು ವ್ಯಾಪಕವಾಗಿ ಹರಡಿರುವ ಗ್ರಾಮಮೂಲದಿಂದ ಬಂದು ನಂತರ ವೈದಿಕ ದೇವತೆಗಳ ಸಾಲಿನಲ್ಲಿ ಸೇರ್ಪಡೆಯಾಗಿದೆ.

೪.೩. ಜಾನಪದ ದೈವಗಳು

ಶಿಷ್ಟದೇವತೆಗಳ ಅಧ್ಯಯನ ಒಂದು ಮಿತಿಯಲ್ಲಿ ನೆಡೆದರೆ, ಗ್ರಾಮದೇವತೆಗಳ ಅಧ್ಯಯನಕ್ಕೆ ಒಂದು ಮಿತಿಯೆಂಬುದು ಇಟ್ಟುಕೊಳ್ಳುವ ಹಾಗಿಲ್ಲ. ಅದೊಂದು ವಿಸ್ತೃತವಾದ ಜಗತ್ತು. ದಕ್ಷಿಣ ಭಾರತದಲ್ಲಂತೂ ಗ್ರಾಮದೇವತೆಗಳ ಉಪಾಸನೆ ವ್ಯಾಪಕವಾಗಿದೆ. ಹೆಣ್ಣನ್ನು ಜೀವ ಸೃಷ್ಟಿಯನ್ನು ಮಾಡುವ ಹೆಣ್ಣಾಗಿ ನೋಡದದೆ ಫಲವಂತಿಕೆಯ ಪ್ರಮುಖ ಪ್ರತಿನಿಧಿಯಾಗಿ ಕಾಣಲಾಗಿದೆ. ಭೂಮಿಯು ಭೂದೇವಿಯಾದಂತೆ ಜನ್ಮದಾತೆಯಾದ ತಾಯಿ ಶಕ್ತಿಯ ಸ್ವರೂಪವಾಗಿ ಮಾಡಿಕೊಂಡು ಆರಾಧಿಸಲಾಗುತ್ತಿದೆ. ಸೂರ್ಯ, ಚಂದ್ರ, ನಕ್ಷತ್ರ, ನದಿ, ಬೆಟ್ಟ, ಗಿಡ ಬಳ್ಳಿ, ನಿಸರ್ಗದ ಸಮಸ್ತವನ್ನು ಆರಾಧಿಸುತ್ತಾ ಬಂದಿದ್ದಾನೆ. ಅದರಂತೆ ತಾಯಿಯನ್ನು ಶಕ್ತಿಯ ರೂಪವಾಗಿ ಅಥವಾ ಜನ್ಮದಾತೆಯಾಗಿ ದೇವತೆಯ ಸ್ಥಾನದಲ್ಲಿಟ್ಟು ಪೂಜಿಸುತ್ತಾ ಬಂದಿದ್ದಾನೆ. ಗ್ರಾಮದ ಸಮಸ್ತವನ್ನು ನೋಡಿಕೊಳ್ಳಲು ತಾಯಿಯಲ್ಲದೆ ಬೇರೆ ಯಾರಿಗೆ ಆ ಸ್ಥಾನವನ್ನು ಬಿಟ್ಟು ಕೊಡಲು ಸಾಧ್ಯ.

ಕರ್ನಾಟಕದ ಜನಪದ ಬದುಕಿನಲ್ಲಿ ಮೂಲ ಶಕ್ತಿಯ ನೂರೆಂಟು ರೂಪಗಳು ಆಯಾ ಸಮುದಾಯದ ಹಿನ್ನೆಲೆಯಲ್ಲಿ ಆರಾಧನೆಗೊಳ್ಳುತ್ತಾ ಬಂದವು. ದೇವತೆಯಿಲ್ಲದ ಹಳ್ಳಿಗಳನ್ನು ಗುರುತಿಸುವುದು ಬಹಳ ಕಷ್ಟ.

ಅಷ್ಟು ವ್ಯಾಪಕವಾಗಿ ಪ್ರಭಾವ ಬೀರಿವೆ. ಒಂದೊಂದು ದೇವತೆ ಇಲ್ಲಿನವರ ಬದುಕಿನ ಒಂದೊಂದು ಎಳೆಗಳ ಪ್ರತೀಕ, ನಿಯಂತ್ರಣಕಾರರು. ಊರದೇವರು, ಸೀಮೆದೇವರು, ಗ್ರಾಮದೇವರು, ಕುಲದೇವರು, ಮನೆದೇವರು, ಅಲ್ಲದೇ ಪರಊರಿನ ಪ್ರಭಾವಿ ದೇವತೆಗಳು ಕೂಡ ಇವರಿಗೆ ಬೇಕು. ತಮ್ಮ ನೋವು ನಲಿವುಗಳಲ್ಲಿ ಸಹಭಾಗಿಯಾದವರು ಈ ಗ್ರಾಮದೇವತೆಯರು. ಕೊಲ್ಲಾಪುರದ ಮಹಾಲಕ್ಷ್ಮಿಯಾಗಿರಬಹುದು, ಮೈಸೂರಿನ ಚಾಮುಂಡಿ, ಮಾರಿಕಾಂಬೆ, ಮೂಕಾಂಬಿಕೆ, ಕಾಳಮ್ಮ, ಹುಲಿಗಮ್ಮ, ಊರಮ್ಮ, ಚೌಡಮ್ಮ, ಎಲ್ಲಮ್ಮ,ಮುಂತಾದ ದೇವತೆಗಳಲ್ಲದೆ ಇನ್ನೂ ಅನೇಕ ದೇವತೆಗಳು ಇದ್ದಾರೆ. ಸಾಮಾನ್ಯವಾಗಿ ಮಂಗಳವಾರ, ಶುಕ್ರವಾರ ಈ ದೇವತೆಗಳ ವಾರವಾಗಿದ್ದು, ಅಮವಾಸ್ಯೆ, ಹುಣ್ಣಿಮೆಯಂದು ವಿಶೇಷವಾಗಿ ಆರಾಧಿತರಾಗುತ್ತಾರೆ. ಹೀಗೆ ನೂರಾರು ದೇವತೆಗಳು ಅವರ ಬದುಕಿನಲ್ಲಿ ಹಾಸುಹೊಕ್ಕಾಗಿದ್ದಾರೆ. ಇಂತಹ ಹಲವಾರು ದೇವತೆಗಳನ್ನು ಅಧ್ಯಯನ ಮಾಡುವುದು ಇಲ್ಲಿನ ಅಧ್ಯಯನಕ್ಕೆ ಹೊರತಾಗಿದ್ದು, ಕೆಲವು ಪ್ರಾತಿನಿಧಿಕವೆನ್ನಬಹುದಾದ ಎಲ್ಲಮ್ಮ, ಮಾತಂಗಿ, ಮಾರಿ ದೇವತೆಗಳ ಮಹತ್ವವನ್ನು ಇಲ್ಲಿ ನಿರ್ವಚಿಸಬಹುದಾಗಿದೆ.

೪.೨.೧. ಎಲ್ಲಮ್ಮ

ಕರ್ನಾಟಕದ ಪ್ರಭಾವಿ ದೇವತೆಗಳಲ್ಲಿ ಅತೀ ಮುಖ್ಯವಾದ ದೇವತೆ ಎಂದರೆ ಎಲ್ಲಮ್ಮ. ಮತ್ಸ್ಯ ಪುರಾಣ, ವಾಯು ಪುರಾಣ, ಮಾರ್ಕಂಡೇಯ ಪುರಾಣ, ಸ್ಕಂದ ಪುರಾಣಗಳಲ್ಲಿ ಎಲ್ಲಮ್ಮನ ರೂಪವೆಂದು ಹೇಳಲಾಗುವ ರೇಣುಕೆಯ ರೂಪದ ಸುಳಿವು ಸಿಗುತ್ತದೆ ಎನ್ನಲಾಗಿದೆ. ಈ ಪುರಾಣಗಳಲ್ಲಿ ಸೇರುವಷ್ಟು ಎಲ್ಲಮ್ಮ ಬೆಳೆದಿರುವುದು ಗಮನೀಯವಾದ ಅಂಶವಾಗಿದೆ. ಪುರಾಣಾಂತರ್ಗತವಾದ ಶಿಷ್ಟರೂಪವಾದ ದೇವಿಯ ರೂಪಕ್ಕೂ ಜನಪದರಲ್ಲಿ ಕಂಡು ಬರುವ ರೂಪಕ್ಕೂ ವ್ಯತ್ಯಾಸವಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಮಾತೃಮೂಲೀಯವಾದ ಎಲ್ಲಮ್ಮನಿಗೂ ಪಿತೃಮೂಲದ ರೇಣುಕೆಯ ಕತೆಗೂ ಬಹಳ ಅಂತರವಿದೆ. ಇದನ್ನು ಮುಂದೆ ನೋಡಬಹುದು. ಶಿಷ್ಟೀಕರಣಗೊಂಡ ಅಥವಾ ಶಿಷ್ಟೀಕರಣಗೊಳಿಸಲ್ಪಟ್ಟ ಕತೆಯನ್ನು ಮೊದಲು ಗಮನಿಸುವಾ.

ಜಮದಗ್ನಿಯ ಆಶ್ರಮವು ವಿಂಧ್ಯೆಯ ಕೆಳ ಪ್ರದೇಶವಾದ ನರ್ಮದಾ ಎಈ ನದಿಯ ಬಗೆಗೆ ಸ್ಪಷ್ಟವಾದ ಕಲ್ಪನೆ ನನಗೆ ಗೊತ್ತಿಲ್ಲ. ನದಿಯ ಬಯಲು ಜಾಗದಲ್ಲಿ ಇತ್ತು. ಜಮದಗ್ನಿಯು ಮಹಾ ಕೋಪಿಷ್ಠ. ಅವನ ಹೆಂಡತಿ ರೇಣುಕಾ ಮಹಾ ಪತಿಪರಾಯಣೆಯರಲ್ಲಿ ಮಹಾಪತಿವ್ರತೆ. ಅವಳು ತನ್ನ ಗಂಡನ ಪೂಜಾ ಕೈಂಕರ್ಯಕ್ಕಾಗಿ ಪ್ರತಿನಿತ್ಯವೂ ನೀರು ತರುತ್ತಿದ್ದಳು. ಅದು ಮರಳಿನಲ್ಲಿ ಅಥವಾ ಬಟ್ಟೆಯಲ್ಲಿ ಕೊಡವನ್ನು ಮಾಡಿಕೊಂಡು ಹಾವಿನ ಸಿಂಬೆಯ ಮೇಲಿಟ್ಟುಕೊಂಡು ನೀರುತರುತ್ತಿರುತ್ತಾಳೆ. ಹಾಗೆ ತರುತ್ತಿರುವಾಗ ಒಮ್ಮೆಯಾದರೂ ಒಂದು ತೊಟ್ಟು ನೀರು ಹೊರಗೆ ಒಸರುತ್ತಿರಲಿಲ್ಲ. ಒಂದು ದಿನ ಹೀಗೆಯೇ ಅವಳು ನೀರು ತರಲೆಂದು ನದಿಗೆ ಹೋಗಿದ್ದಳು.

ಅಲ್ಲಿ ಜಲಕ್ರೀಡೆಯನ್ನು ಆಡುತ್ತಾ, ಮುಕ್ತವಿಲಾಸದಲ್ಲಿ ತೊಡಗಿರುವ ಸುಂದರವಾದ ಗಂಧರ್ವ ದಂಪತಿಗಳನ್ನು ನೋಡಿದಳು. ಗಂಧರ್ವನ ಸುಂದರವಾದ ತಾರುಣ್ಯ ರೂಪ ಅವಳ ಮನಸ್ಸನ್ನು ಸ್ವಲ್ಪ ವಿಚಲಿತವಾಗುವಂತೆ ಮಾಡಿ, ಕ್ಷಣ ರೇಣುಕೆಯ ಮನಸ್ಸು ಅವನಲ್ಲಿ ಎಳಸಿತು. ತ್ವರಿತವಾಗಿ ನೀರು ಕೊಂಡೊಯ್ಯಬೇಕೆಂಬ ಅರಿವಿರಲಿಲ್ಲ. ನಂತರ ಎಚ್ಚೆತ್ತು ನಡೆದ ಘಟನೆಯು ಅವಳಿಗೆ ಆಘಾತವನ್ನುಂಟು ಮಾಡಿತು. ತ್ವರಿತವಾಗಿ ನೀರನ್ನು ಕೊಂಡೊಯ್ಯಲು ನೀರನ್ನು ತುಂಬಿ ಆಶ್ರಮದ ದಾರಿ ಹಿಡಿದಳು. ಆದರೆ ನೀರು ಆಶ್ರಮ ಮುಟ್ಟುವ ಮೊದಲೆ ಸೋರಿ ಅವಳ ಅಂಗಾಂಗಳೆಲ್ಲ ಒದ್ದೆಯಾದವು. ಆ ಅವಸ್ಥೆಯಲ್ಲಿ ಬಂದ ಪತ್ನಿಯನ್ನು ನೋಡಿದ ಜಮದಗ್ನಿಗೆ ವಿಪರೀತ ಕೋಪವುಂಟಾಯಿತು.

ಏನು ನಡೆಯಿತು ಎಂಬುದನ್ನು ಸ್ಪಷ್ಟವಾಗಿ ಮನಗಂಡ ಜಮದಗ್ನಿಯು ತನ್ನ ಮಕ್ಕಳನ್ನು ಕರೆದು ರೇಣುಕೆಯ ತಲೆ ಹಾರಿಸುವಂತೆ ಆಜ್ಞಾಪಿಸಿದ. ನಾಲ್ವರು ಮಕ್ಕಳು ಈ ಕೃತ್ಯವೆಸಗದೆ ನಿರಾಕರಿಸುತ್ತಾರೆ. ಹೀಗೆ ನಿರಾಕರಿಸಲ್ಪಟ್ಟ ಮಕ್ಕಳು ಜಮದಗ್ನಿಯ ಕೋಪಕ್ಕೆ ಬಲಿಯಾಗಿ ಸುಟ್ಟು ಭಸ್ಮವಾಗುತ್ತಾರೆ. ಐದನೆಯ ಮಗ ಪರಶುರಾಮನು ತಂದೆಯ ಆದೇಶದಂತೆ ತಾಯಿಯ ತಲೆಯನ್ನು ಕಡಿದು ಹಾಕುತ್ತಾನೆ.ಇದರಿಂದ ಸಂತೃಪ್ತನಾದ ಜಮದಗ್ನಿಯು ಮಗನಿಗೆ ಏನು ಬೇಕು ಬೇಡು ಎಂದಾಗ ಸುಟ್ಟು ಹೋದ ತನ್ನ ಸಹೋದರರು, ಸತ್ತು ಬಿದ್ದ ತನ್ನ ತಾಯಿ ಮರಳಿ ಜೀವಂತವಾಗುವಂತೆ ಬೇಡುತ್ತಾನೆ. ಅದಕ್ಕೆ ಸಮ್ಮತಿಸಿದ ಜಮದಗ್ನಿಯು ಸಿಡಿದ ತಲೆಯನ್ನು ಹುಡುಕಿತಂದು ನಿನ್ನ ತಾಯಿಯ ದೇಹಕ್ಕೆ ಜೋಡಿಸು ಆಗ ಅವಳಿಗೆ ಜೀವ ಬರುತ್ತದೆ ಎಂದ. ತಕ್ಷಣ ತಾಯಿನ ಶಿರವನ್ನು ಹುಡುಕಿಕೊಂಡು ಹೊರಟ ಪರುಶುರಾಮನಿಗೆ ತಾಯಿಯ ಶಿರವು ಸಿಗುವುದಿಲ್ಲ. ನಿರಾಶೆಯಿಂದ ಮರಳಿ ಬರುವಾಗ ದಾರಿಯಲ್ಲಿ ತಾಯಿಯ ಶಿರದಂತೆ ಕಾಣುವ ಇನ್ನೊಂದು ಶಿರವನ್ನು ತಂದು ಹಿಂದು ಮುಂದು ಯೋಚಿಸದೆ ಅದನ್ನು ತನ್ನ ತಾಯಿಯ ದೇಹಕ್ಕೆ ಅಂಟಿಸಲು ಪ್ರಯತ್ನಿಸಿದ. ಅದನ್ನು ಮನಗಂಡ ಜಮದಗ್ನಿಯು ಆ ಶಿರವನ್ನು ರೇಣುಕೆ ಹಚ್ಚಿಸದೆ, ತನ್ನ ಇಚ್ಛಾಶಕ್ತಿಯಿಂದಲೆ ರೇಣುಕೆಗೆ ಜೀವವನ್ನು ಕೊಟ್ಟ. ತಾನು ತಂದ ಶಿರವು ಹೊಲೆಯರ ಹೆಣ್ಣಿನ ಶಿರವಾಗಿದ್ದನ್ನು ಅರಿತ ಪರಶುರಾಮ ಅದನ್ನು ತಂದ ತಪ್ಪಿಗಾಗಿ ಶೋಕಿಸಿದ. ಹಾಗೂ ತನ್ನ ತಾಯಿಯ ಬದುಕಿಗಾಗಿ ಕೆಳಜಾತಿಯ ಹೆಣ್ಣಿನ ಪ್ರಾಣಹರಣಮಾಡಿದ್ದ ತಪ್ಪಿಗಾಗಿ ಆ ಶಿರವನ್ನು ಅಲ್ಲಿಯೇ ಪ್ರತಿಷ್ಠಾಪಿಸಿದ, ರೇಣುಕೆಯ ಭಕ್ತರು ರೇಣುಕೆಯ ದರ್ಶನಕ್ಕೆ ಮುನ್ನವೇ ನಿನ್ನ ದರ್ಶನ ಪಡೆಯುವಂತೆ, ಹಾಗೂ ರೇಣುಕೆಗೆ ನೈವೇದ್ಯವನ್ನು ಅರ್ಪಿಸುವ ಮೊದಲು ನಿನಗೆ ಮೊದಲು ನೈವೇದ್ಯವನ್ನು ಅರ್ಪಿಸುವರು ಎಂದು ವಚನ ನೀಡಿದ. ಅವಳೆ ಮುಂದೆ ಮಾತಂಗಿ ಎಂದು ಹೆಸರು ಪಡೆದಳು. (ಈ ಭಾಗವನ್ನು ಡಾ. ವಿಠಲರಾವ್ ಗಾಯಕ್‌ವಾಡ ಅವರು ಮರಾಠಿಯಿಂದ ಅನುವಾದ ಮಾಡಿದ ಲಜ್ಜಾಗೌರಿ ಅಪ್ರಕಟಿತ ಕೃತಿಯಿಂದ ತೆಗೆದುಕೊಳ್ಳಲಾಗಿದೆ.)

ಇನ್ನೊಂದು ರೂಪದಲ್ಲಿ ಎಲ್ಲಮ್ಮ ಒಲಿದು ತಂದೆತಾಯಿಯರ ಮನಸ್ಸಿಗೆ ವಿರುದ್ಧವಾಗಿ ಆದ ಮದುವೆ ಇದು.ಪತಿಸೇವೆ ಮಾಡುತ್ತಾ ಪತಿಪರಾಯಣೆಯಾಗಿ, ಗಂಡನಿಂದ ದೈಹಿಕ ಸುಖವನ್ನು ಪಡೆಯದೆ ಸೇವೆಮಾಡುತ್ತಿರುತ್ತಾಳೆ. ಒಂದು ದಿನ ಗಂಧರ್ವ ದಂಪತಿಗಳ ರತಿಕ್ರಿಡೆಯನ್ನು ಕಂಡುಮನೋವಿಕಲ್ಪವಾಗುತ್ತದೆ. ಮನೋವಿಕಲ್ಪದಿಂದ ಪರಿಣಾಮವಾಗಿ ಗಂಡನಿಂದ ಕುಷ್ಟರೋಗ ಹೊಂದುವಂತೆ ಶಾಪಗ್ರಸ್ತಳಾಗುತ್ತಾಳೆ. ಶಾಪಗ್ರಸ್ತಳಾದ ರೇಣುಕೆ ಎಲ್ಲರಿಂದ ತಿರಸ್ಕೃತಳಾಗುತ್ತಾಳೆ. ಮುಂದೆ ಎಕ್ಕಯ್ಯ ಹಾಗೂ ಜೋಗಯ್ಯರಿಂದ ಗುಣಹೊಂದುತ್ತಾಳೆ. ಕುಷ್ಟರೋಗ ಪೀಡಿತಳಾದ ರೇಣುಕೆಯನ್ನು ಊರಿನಿಂದ ಹೊರಹಾಕಲಾಗುತ್ತದೆ. ಆಹಾರ ಸಂಗ್ರಹಣೆಯ ಹಂತದಲ್ಲಿ ಇದ್ದ ಗುಂಪುಗಳು ವ್ಯವಸಾಯಕ್ಕೆ ಸ್ಥಿತ್ಯಂತರಗೊಂಡ ಹುಲಗೆಮ್ಮನಿಂದ ರಕ್ಷಣೆ ಪಡೆಯುತ್ತಾಳೆ.

ಎಲ್ಲಮ್ಮನ ಕತೆಯಲ್ಲಿ ಕಂಡುಬರುವ ಹಲವಾರು ರೂಪಗಳಲ್ಲಿ ಇದು ಒಂದು. ಮನು ಧರ್ಮಶಾಸ್ತ್ರದಲ್ಲಿ ಹೇಳಲಾಗುವ ಸೂತ್ರಗಳನ್ನು ಚಾಚು ತಪ್ಪದೆ ಪರಿಪಾಲಿಸುವ ಹೆಂಡತಿಯಾಗಿ ಕಾಣಬರುವ ರೇಣುಕೆಯು ಆರ್ಯಕನ್ಯೆಯಾಗಿ ಕಾಣುತ್ತಾಳೆ. ಆದರೆ ಮೂಲದಲ್ಲಿ ಎಲ್ಲಮ್ಮ ಎಂದು ಪತ್ನಿಯಾಗಿರದೆ ನಿತ್ಯ ಕನ್ನೆಯಾಗಿಯೇ ಕಾಣುತ್ತಾಳೆ. ಜಗತ್ತಿನ ಮಾತೃದೇವತೆಯರ ಕಲ್ಪನೆಯಲ್ಲಿ ಇದು ಸತ್ಯ. ಎಲ್ಲಾ ಗ್ರಾಮದೇವತೆಯರ ಜೀವನದಲ್ಲಿಯೂ ಸಹ ಸತ್ಯವಾದುದು. ಯಾಕೆಂದರೆ, ಹೆಣ್ಣು ಎಲ್ಲವನ್ನು ಉದರದಲ್ಲಿ ಹೊತ್ತು ತರುವವಳಾದರೂ, ಅಖಂಡ ರೂಪದಿಂದ ಕನ್ಯೆಯೇ. ಆಕೆ ಪುರುಷತ್ವವನ್ನು ಅನೇಕ ಸಂಬಂಧಗಳಿಂದ ಪೋಷಿಸುವವಳಾದರೂ, ಆಕೆಯ ಕೌಮಾರ್ಯಕ್ಕೆ ಎಂದೂ ಚ್ಯುತಿ ಬರುವುದಿಲ್ಲ. ಎಲ್ಲಮ್ಮನ ಪಾರಂಪರಿಕ ಗೀತೆಗಳಲ್ಲಿ ಅವಳ ಕೌಮಾರ್ಯ ಕನ್ನೆತನದ ಉಲ್ಲೇಖವು ಮತ್ತೆ ಮತ್ತೆ ಬರುತ್ತದೆ. ಇದರ ಪೂರ್ವಾಪರಗಳನ್ನು ವಿಸ್ತರಿಸಲು ಹೋಗುವುದಿಲ್ಲ.

ಶಿಷ್ಟದೇವತೆಗಳಾದ ಕಾಳಿ,ಮಹಿಷಮರ್ದಿನಿ, ದುರ್ಗಾ, ಮೀನಾಕ್ಷಿ, ಹೀಗೆ ಹಲವಾರು ದೇವತೆಗಳಲ್ಲಿ ಶಿವ ಗಂಡನಾಗಿ ಕಂಡುಬಂದರೂ ಕೆಲವು ಸಲ ಗಂಡನನ್ನು ಮೆಟ್ಟಿಹಾಕುವ ಹೆಣ್ಣಾಗಿ ಕಾಣುತ್ತಾಳೆ. ಆದರೆ ಪಾರ್ವತಿ,ಗೌರಿ ಮುಂತಾದ ರೂಪಗಳಲ್ಲಿ ಶಿವನ ಅರ್ಧಾಂಗಿನಿಯಾಗಿ, ಪತಿಯ ನೆರಳಿನಲ್ಲಿ ನಡೆಯುವ ಸತಿಯಾಗಿ ಕಾಣುತ್ತಾಳೆ. ಮೂಲ ರೂಪದಲ್ಲಿ ಅವರೆಲ್ಲರೂ ಕನ್ಯೆಯರಾಗಿಯೆ ಕಾಣುತ್ತಾರೆ. ನಂತರದಲ್ಲಿ ಹೆಂಡತಿಯರಾಗಿ ಕಾಣುತ್ತಾರೆ. ಆದಿಮ ರೂಪದಲ್ಲಿ ಅವರೆಲ್ಲರೂ ಹೆಣ್ಣಿನ ಪರಮಾಧಿಕಾರವನ್ನು ರೂಢಿಸಿಕೊಂಡವರು. ನಂತರದ ಕಾಲಘಟ್ಟದಲ್ಲಿ ಹೆಂಡತಿಯರನ್ನಾಗಿ ಮಾಡುವ ಪ್ರಯತ್ನದಲ್ಲಿ ಮೂಲದ ಅನೇಕ ಅಂಶಗಳು ಇಲ್ಲಿ ಉಳಿದುಕೊಂಡು ಬಂದಿವೆ. ಮಾತೃಮೂಲೀಯವಾದ ಸಮಾಜದಲ್ಲಿ ಸ್ತ್ರೀ ಪ್ರಧಾನ ಪಾತ್ರವಹಿಸುತ್ತಿದ್ದಳು. ಅದು ಆಹಾರ ಸಂಗ್ರಹಣೆಯ ಹಂತದಲ್ಲಿ ಇರಬಹುದು, ಅಥವಾ ಕೃಷಿ ಪ್ರಧಾನವಾದ ಸಮಾಜದಲ್ಲಿ ಇರಬಹುದು ಸ್ತ್ರೀ ಹೆಚ್ಚಿನ

ಸ್ಥಾನಮಾನವನ್ನು ಹೊಂದಿದ್ದಳು. ಆ ಕಾರಣದಿಂದಲೇ ಸ್ತ್ರೀಯನ್ನು ಭೂಮಿಗೆ ಹೆಣ್ಣನ್ನು ಹೋಲಿಸಿ ಆರಾಧಿಸುವ ಪ್ರಕ್ರಿಯೆ ಕಂಡುಬರುತ್ತದೆ. ವಿಸ್ತೃತವಾಗಿ ಹಿಂದಿನ ಅಧ್ಯಾಯದಲ್ಲಿ ನೋಡಲಾಗಿದೆ.

ಇಲ್ಲಿ ಎಲ್ಲಮ್ಮನ ಕಲ್ಪನೆಯಲ್ಲಿಅನೇಕ ಅವಸ್ಥಾಂತರಗಳು ಒಳಸೇರಿರುವುದು ಕಂಡುಬರುತ್ತದೆ. ಹಿಂದಿನ ಕತೆಯಲ್ಲಿ ನೋಡಿದಂತೆ ಎಲ್ಲಮ್ಮನನ್ನು ಗಡಿಯಲ್ಲಿ ಇಡಲ್ಪಟ್ಟವಳ ರೀತಿಯಲ್ಲಿ ನೋಡಲಾಗಿದೆ. ಈ ದೇವತೆಯನ್ನು ಮಾತ್ರ ಕೇಂದ್ರಿತವಾದ ಹಾಗೂ ಪುರುಷ ಪ್ರಧಾನವಾದ ಸಮಾಜದ ಸಂಕೀರ್ಣವಾದ ಘಟ್ಟದಲ್ಲಿದ್ದವಳೆಂದು ವ್ಯಾಖ್ಯಾನಿಸಲಾಗಿದೆ. "ತಮ್ಮ ಅನ್ನವನ್ನು ಹೆಕ್ಕಿ ತಿನ್ನುತ್ತಿದ್ದ ಗುಂಪು, ನೆಲೆನಿಂತ ಮೇಲೆ ಅದನ್ನು ಬಿಟ್ಟು, ವ್ಯವಸಾಯ ಮಾಡಿ ತಮ್ಮ ಆಹಾರವನ್ನು ಗಳಿಸುತ್ತಿದ್ದಾಗ, ಅವರು ನೆಲೆನಿಂತ ಜೀವನದ ವ್ಯವಸಾಯ ವೃತ್ತಿಯ ಅಧಿದೇವತೆ ಹುಲಿಗಮ್ಮನನ್ನು ತಮ್ಮ ದೇವತೆಯನ್ನಾಗಿ ಮಾಡಿಕೊಂಡರು. ಆದರೆ ಅನಾವೃಷ್ಟಿ, ರೋಗ ಮುಂತಾದವುಗಳಿಂದಾಗಿ ಅವರು ತಮ್ಮ ಅನ್ನವನ್ನು ಸಂಪೂರ್ಣವಾಗಿ ವ್ಯವಸಾಯದಿಂದ ಗಳಿಸಲಾರದೇ ಹೋದಾಗ, ಹಿಂದೆ ಹೆಕ್ಕಿ ತಿನ್ನುತ್ತಿದ್ದಂತೆ ಅಡವಿಯಲ್ಲಿ ಸಿಗುತ್ತಿದ್ದ ಹಣ್ಣು ಹಂಪಲುಗಳನ್ನು ಸಂಪಾದಿಸುತ್ತಿದ್ದರು. ಹೀಗೆ ಎರಡೂ ಬಗೆಯ ಜೀವನ, ಎರಡೂ ಬಗೆಯ ದೇವರುಗಳು ಅವರಿಗೆ ಅವಶ್ಯಕವಾಗಿದ್ದವು. ಅವರು ಕಾಡಿಗೆ ಹೋಗುವಾಗ ಊರ ಗಡಿಯಲ್ಲಿರುವ ಎಕ್ಕೆವ್ವನ ಪೂಜೆ ಮಾಡಿ, ಆಕೆಯ ಅನುಗ್ರಹ ಬೇಡಿದರು. ಕಾಡಿನಿಂದ ಬೇಟೆಯಾಡಿ ಊರೊಳಗೆ ಬರುವ ಮುನ್ನ ಮತ್ತೆ ಈ ದೇವತೆಗೆ ಎಡೆ, ಆಹುತಿ ನೀಡುತ್ತಿದ್ದರು. ಹೀಗೆ ಈ ದೇವತೆ ನೆಲೆನಿಂತ ಹಾಗೂ ಅಲೆಮಾರಿ ಈ ಎರಡೂ ಜೀವನದ ಅಂಚಿನಲ್ಲಿದ್ದವಳು. ಇಂತಹ ಹಂತದಲ್ಲಿ ಅವರು ಪೂಜಿಸುತ್ತಿದ್ದ ದೇವತೆ, ಎಲ್ಲಮ್ಮ ಎಲ್ಲೆಯಲ್ಲಿಯ ಅಮ್ಮ." [೭೮]

ಎಲ್ಲಮ್ಮ ಎಂಬ ಕಲ್ಪನೆಯು ಎಲ್ಲೆಯನ್ನು ರಕ್ಷಿಸುವ ದೇವತೆಯಾಗಿಯೂ ಹುಲಗಮ್ಮನನ್ನು ಕೃಷಿಯ ದೇವತೆಯನ್ನಾಗಿ ನೋಡಲಾಗಿದೆ. ಗ್ರಾಮದೇವತೆಗಳ ಅಥವಾ ಮಾತೃದೇವತೆಯ ಕಲ್ಪನೆಯಲ್ಲಿ ಫಲವಂತಿಕೆ ಹಾಗೂ ರಕ್ಷಣೆ ಪ್ರಧಾನವಾಗಿ ಕಂಡು ಬರುವ ಅಂಶಗಳು. ಮಾತೃದೇವತೆಯ ಆರಾಧನೆಯ ಇನ್ನೊಂದು ರೂಪವೆ ವೃಕ್ಷಾರಾಧನೆ. ವೃಕ್ಷಾರಾಧನೆಯನ್ನು ಹಾಗೂ ಫಲವಂತಿಕೆ ಆರಾಧನೆಯನ್ನು ಎಲ್ಲಮ್ಮ ಹಾಗೂ ಹುಲಗಮ್ಮನ ಆರಾಧನಾ ಕಲ್ಪನೆಯನ್ನು ಈ ಹಿನ್ನೆಲೆಯಲ್ಲಿಯೆ ನೋಡಿದರೆ ಇನ್ನೂ ಹೆಚ್ಚಿನ ಅಂಶಗಳು ಬೆಳಕಿಗೆ ಬರಬಹುದು.

ಎಲ್ಲಮ್ಮ ಎಂಬುದು ಎಲ್ಲೆಯನ್ನು ಸೂಚಿಸುವ ಹಾಗೆ ಕಂಡುಬರುವುದಿಲ್ಲ. ಪ್ರಾಚೀನರಲ್ಲಿ ಕಂಡುಬರುವಂತೆ ಇದು ಹೆಚ್ಚಿನ ಮಟ್ಟಿಗೆ ಫಲವಂತಿಕೆಯ ದೇವತೆಯಾಗಿಯೇ ಇದ್ದಾಳೆ. ಭೂಮಿದೇವತೆಯ ರೂಪದಲ್ಲಿ ಆರಾಧಿಸುತ್ತಿದ್ದ ಈ ಕಲ್ಪನೆಯು ಮುಂದಿನ ಅವಸ್ಥಾಂತರಗಳಲ್ಲಿ ಎಲ್ಲೆಯನ್ನು ಸೇರಿದೆ. ಆಹಾರ ಸಂಗ್ರಹಣೆಯ ಹಂತದಲ್ಲಿ ಮಾತೃದೇವತೆಯ ಆರಾಧನೆಯು ನೆಲೆನಿಂತ ಹಂತ ಅಥವಾ ಕೃಷಿಯ ಹಂತದಲ್ಲಿ ವಿಸ್ತೃತವಾದ

ರೂಪವನ್ನು ಪಡೆಯುತ್ತದೆ. ಅದು ಮೊದಲ ಹಂತದಲ್ಲಿ ದೇಹದ ಕೆಲವು ಅಂಗಗಳಿಗೆ ಮಾತ್ರ ಪ್ರಾಧಾನ್ಯತೆಯನ್ನು ಕೊಟ್ಟರೆ, ಮುಂದಿನ ಹಂತದಲ್ಲಿ ಸಮಸ್ತವೂ ಆರಾಧನೆಯ ವಸ್ತುವಾಗುತ್ತದೆ. ಈ ಸಮಸ್ತವನ್ನು ಮಾತೃ ಸ್ವರೂಪದಲ್ಲಿಯೇ ನೋಡಲಾಗಿದೆ. ಕಾಡು, ಹೊಲ ಕಣ, ಊರು, ಈ ಮೂರೂ ತಾಣಗಳು ಮನುಷ್ಯನ ಕಾರ್ಯ ಪ್ರದೇಶಗಳಾಗಿದ್ದು, ಅಲ್ಲಿಯ ದೈವಗಳು ಅವನಿಗೆ ಅನುಕೂಲ ಅಥವಾ ಅನಾನುಕೂಲವಾಗುತ್ತವೆ. ಅನುಕೂಲ ಮತ್ತು ಅನಾನುಕೂಲ ದೇವತೆಗಳ ವಾಸಸ್ಥಾನವು ಮರವಾಗಿರುತ್ತದೆ, ಅಥವಾ ಬೆಟ್ಟಗುಡ್ಡ, ಅಥವಾ ಕೆರೆಕುಂಟೆ, ಒಟ್ಟಿನಲ್ಲಿ ಊರಹೊರಗಿನ ಜಾಗವು ಅವರ ವಾಸಸ್ಥಾನವಾಗಿರುತ್ತದೆ. ಇದು ಎಲ್ಲಾ ದೇವತೆಗಳಿಗೂ ಅನ್ವಯವಾಗುವಂತ ಅಂಶವಾಗಿದೆ. ಅಲ್ಲದೆ ಗ್ರಾಮದೇವತೆಗಳು ಸಾಮಾನ್ಯವಾಗಿ ಕ್ರೂರ ಎನ್ನಬಹುದಾದ ಗುಣವನ್ನು ಹೊಂದಿರುವಂತಹವು. ಅವುಗಳನ್ನು ತೃಪ್ತಿ ಪಡಿಸಿದಾಗ ಮಾತ್ರ ಅವು ಅನುಕೂಲಕರವಾದ ದೇವತೆಗಳಾಗುತ್ತವೆ. ಇಲ್ಲದಿದ್ದರೆ, ರೋಗವನ್ನು ತರುವುದು, ಬೆಳೆಯನ್ನು ಹಾಳುಮಾಡುವುದು, ಮಳೆಯನ್ನು ಬಾರದ ರೀತಿಯಲ್ಲಿ ಮಾಡುವುದು, ಈ ದೇವತೆಗಳು ಮಾಡುವ ಕೆಲಸಗಳು.

ಒಂದು ಕಾಲದಲ್ಲಿ ಭೂಮಿಯ ಫಲವಂತಿಕೆಯನ್ನು ಸ್ತ್ರೀಯ ಫಲವಂತಿಕೆಯ ರೀತಿಯಲ್ಲಿ ನೋಡಲಾಗಿದೆ. ಅಂದರೆ, ಬೆಳೆಯನ್ನು ವೃದ್ಧಿಸಲು ಮಾನವನ ಬಲಿಯನ್ನು ಕೊಡಲಾಗುತ್ತಿತ್ತು. ಮುಂದೆ ಅದು ಪ್ರಾಣಿ ಬಲಿಯ ರೂಪದಲ್ಲಿ ಪರಿವರ್ತಿತವಾಯಿತು. ಈ ಬಲಿಯ ಆಚರಣೆಯು ಪುರುಷನ ಅಧಿಕಾರದಿಂದ ಮೂಲರೂಪವನ್ನು ಬಿಟ್ಟುಕೊಟ್ಟಿತು. ಒಂದು ಕಾಲಕ್ಕೆ ಕೃಷಿಕರೆನಿಸಿಕೊಂಡ ಇಲ್ಲಿಯ ಮೂಲ ಜನಾಂಗವು ಆರ್ಯರ ಪ್ರಾಬಲ್ಯದಿಂದ ಕೆಲಸಗಾರರು ಅವರ ದೃಷ್ಟಿಯಲ್ಲಿ ಶೂದ್ರರಾಗಿ ಪರಿವರ್ತಿತರಾದರು. ಅವರ ದೇವರುಗಳು ಇನ್ನೂ ಕೇಳಬೇಕಾಗಿಲ್ಲ. ಅತ್ಯಂತ ನೀಚಸ್ಥಾನವನ್ನು ಹೊಂದಿದವು. ದೇವತೆಗಳು ಆರಾಧಿಸಲ್ಪಡುವುದು ಈ ಕೃಷಿಕರಲ್ಲಿಯೇ. ಬಹುತೇಕ ದೇವತೆಗಳಿರುವುದು ಹಾಗೂ ಆರಾಧಿಸಲ್ಪಡುವದು ಈ ಶೂದ್ರಜನಾಂಗದಲ್ಲಿ. ಅನೇಕ ಹೆಸರುಗಳಿಂದ ಕರೆಯಲಾಗುವ ಈ ದೇವತೆಗಳಿಗೆ ನಿತ್ಯಪೂಜೆ ಸಲ್ಲಿಸಲಾಗುತ್ತದೆ. ರೋಗರುಜಿನಗಳ ಪ್ರಾಬಲ್ಯಕ್ಕೆ ಈ ದೇವತೆಗಳೆ ಕಾರಣವೆಂಬುದು ಒಂದು ನಂಬಿಕೆ. ಹಾಗಾಗಿ ಊರಿನ ಜನರು ಇವರ ದೇವರುಗಳಿಗೆ ನಡೆದುಕೊಳ್ಳುತ್ತಾ, ಆ ದೇವರುಗಳಿಗೆ ಧನ,ಧಾನ್ಯ, ಕುರಿ, ಕೋಣ,ಇತ್ಯಾದಿ ಬಲಿಕೊಟ್ಟು ಅವುಗಳನ್ನು ಒಲಿಸಿಕೊಳ್ಳುತ್ತಿದ್ದರು.

ಮುಂದೆ ಅದು ವೈದಿಕ ಪ್ರಭಾವದಿಂದ ಜನರು ತಮ್ಮ ಸಂಸ್ಕೃತಿಯನ್ನು ಬದಲಾವಣೆ ಮಾಡಿಕೊಂಡಂತೆ, ದೈವಗಳು ಸುಸಂಸ್ಕೃತರಾಗುವ ಪ್ರಕ್ರಿಯೆ ಒಂದು ಕಡೆ ನಡೆದರೆ, ಮತ್ತೊಂದು ಕಡೆ ಅವುಗಳನ್ನು ಹಾಗೆಯ ಉಳಿಸಿಕೊಂಡು ಬರುವ ಕ್ರಿಯೆಗಳು ಏಕಕಾಲದಲ್ಲಿ ನಡೆಯುತ್ತ ಬಂದವು. ಹೀಗೆ ಮನುಷ್ಯ ಆಹಾರ, ಉಡುಗೆ ತೊಡುಗೆಗಳು ಬದಲಾವಣೆ ಹೊಂದಿದ ಹಾಗೆ ದೇವತೆಗಳು ಸಂಸ್ಕೃತೀಕರಣಗೊಳ್ಳತೊಡಗಿದವು. ಈ ದೈವಗಳ

ಆರಾಧಕರು ಬ್ರಾಹ್ಮಣ ಪೂಜಾರಿಗಳನ್ನು ನೇಮಿಸಿಕೊಂಡರು, ಇಲ್ಲಿಯ ಆಚರಣೆಗಳು ಸಂಸ್ಕೃತ ಸಂಪ್ರದಾಯದಂತೆ ನಡೆಯತೊಡಗಿದವು. ಜನಪದ ಮಟ್ಟದಲ್ಲಿದ್ದ ಮಾತೃದೇವತೆಯಾದ ಎಲ್ಲಮ್ಮನನ್ನು ಸಂಸ್ಕೃತವಾದ ಮಟ್ಟಕ್ಕೆ ಎತ್ತರಿಸಿ, ಜಗದಂಬೆ, ಪಾರ್ವತಿ, ಶಕ್ತಿಮಾತೆ ಎಂದು ವೈಭವೀಕರಿಸಲಾಯಿತು.

ಆದರೆ ಮೂಲದಲ್ಲಿ ಇಲ್ಲಿಯ ಜನಾಂಗದವರ ಅಧಿದೈವವಾದ ಈ ದೇವತೆಯು ವೈದಿಕ ಪರಂಪರೆಯವರೆಗೆ ಕೀಳು ದೇವತೆಯಾಗಿದ್ದು, ನೀಚ ಆಚರಣೆಯ ಪ್ರತೀಕವಾಗಿತ್ತು. ಕೆಳವರ್ಗದವರನ್ನು ಸಂಬೋಧಿಸುವಾಗ ಹಾಗೂ ಸ್ತ್ರೀಯರನ್ನು ಕರೆಯುವಾಗ ಸಾಮಾನ್ಯವಾಗಿ ಎಲ ಅಥವಾ ಎಲಗೆ ಶಬ್ದವನ್ನು ಬಳಸುತ್ತವೆ. ಕುಮಾರವ್ಯಾಸನು ಈ ಶಬ್ದವನ್ನು ಸಭಾಪರ್ವದ ಹದಿನಾಲ್ಕನೆಯ ಸಂಧಿಯ ೭೩ನೆಯ ಪದ್ಯದಲ್ಲಿ ಬಳಸಿದ್ದಾನೆ.

ಬಂದನಿವನಬುಜಾಕ್ಷಿಯಿದಿರಲಿ
ನಿಂದನೆಲೆಗೇ ಗರುವತನವಿದು
ಹಿಂದೆ ಸಲುವುದು ಸಲ್ಲದಿದು ಕುರುರಾಜ ಭವನದಲಿ
ಇಂದು ಮರೆನಡೆ ನಮ್ಮ ತೊತ್ತಿರ
ಮುಂದೆ ಮೆರೆ ನಡೆ ಮಂಚದಿಂದಿಳಿ
ಯೆಂದುಜರೆದನು ಕೌರವಾನುಜನಾ ಮಹಾಸತಿಯ

ಇಲ್ಲಿ ಕುಮಾರವ್ಯಾಸ ಬಳಸಿರುವುದು ತೊತ್ತಿರುಗಳಿಗೆ ಅಂದರೆ ಸೇವಕರಿಗೆ. ಸೇವಕರಿಗೆ ಕರೆಯಬಹುದಾದ ರೀತಿಯಲ್ಲಿ 'ಮಹಾಸತಿ'ಯಾದ ದ್ರೌಪದಿಯನ್ನು ಹಾಗೆ ಕರೆಯಬಾರದಾಗಿತ್ತು ಎನ್ನುವ ಭಾವವು ಕುಮಾರವ್ಯಾಸನಲ್ಲಿ ಕಾಣಬಹುದು. ಯಾಕೆಂದರೆ, ಎಲ ಅಥವಾ ಎಲಗೆ ಎಂಬುದು ಹೀನಾರ್ಥವಾಗಿದ್ದು, ಅದನ್ನು ಕೆಳವರ್ಗದವರಿಗೆ ಬಳಸುವ ಶಬ್ದವಾಗಿರುವುದನ್ನು ಕಾಣಬಹುದು. ಇಲ್ಲಿ ಅವ್ವ ಎಲಗೆ ಆಗಿದ್ದಾಳೆ, ಅಥವಾ ಕೀಳಾಗಿದ್ದಾಳೆ. ಅದಕ್ಕೆ ಸ್ವಲ್ಪ ಶಿಷ್ಟಗೊಳಿಸಿದಾಗ ಅಂದರೆ ಅವ್ವ ಅಥವಾ ಅಮ್ಮ ನಾಮವಾಚಕವನ್ನು ಸೇರಿಸಿಕೊಂಡಾಗ ಎಲ್ಲವ್ವ ಅಥವಾ ಎಲ್ಲಮ್ಮ ಆಗಿರುವ ಸಾಧ್ಯತೆಗಳಿವೆ. ಕೆಳವರ್ಗದ ಜನರಲ್ಲಿ ಎಲಗ, ಎಲಗಪ್ಪ, ಮುಂತಾದ ಹೆಸರುಗಳನ್ನು ಇಂದಿಗೂ ಕಾಣಬಹುದು. ಈ ಹೆಸರು ಉಚ್ಚವರ್ಗದವರು ಕೊಟ್ಟ ಹೆಸರಾಗಿರುವುದನ್ನು ಗಮನಿಸಬಹುದು. ಆ ಕಾರಣದಿಂದ ಎಲ್ಲಮ್ಮ ಮೂಲತಃ ಇಲ್ಲಿಯ ಜನಾಂಗದವರು ಪೂಜಿಸುತ್ತಿದ್ದ ದೇವತೆಯಾಗಿದ್ದು, ನಂತರದಲ್ಲಿ ಅದೊಂದು ಕ್ಷುಲ್ಲಕ ದೇವತೆಯಾಗಿ ಕಾಣಿಸಿಕೊಳ್ಳುತ್ತಾಳೆ.

ಈ ರೀತಿಯ ಊಹೆಮಾಡಲು ಮುಖ್ಯ ಕಾರಣ ಎಲ್ಲಮ್ಮನ ಕತೆ ಹಾಗೂ ಆಚರಣೆಗಳಲ್ಲಿ ಕಂಡುಬರುವ ಅಂಶಗಳೇ ಕಾರಣವಾಗಿವೆ. ಊರಹೊರಗೆ ಇರುವ ದೇವತೆಯಾಗಿದ್ದು ಅವಳ ಸ್ವಭಾವದಿಂದ. ಇದೊಂದು ಕ್ರೂರ

ದೇವತೆಯಾಗಿದ್ದುದರಲ್ಲಿ ಅನುಮಾನ ಇಲ್ಲ. ಮರದಲ್ಲಿಯೋ, ಬೆಟ್ಟದಲ್ಲಿ ವಾಸಿಸುತ್ತಿದ್ದ ಈ ದೇವತೆಯನ್ನು ಇಲ್ಲಿಯ ಮೂಲ ಜನಾಂಗ ಆರಾಧಿಸುತ್ತಿದ್ದರು. ನೀರು ವೃಕ್ಷಸಂಬಂಧಿ, ಗುಡ್ಡದವಾಸ, ಹಾವು, ಮುಂತಾದ ನಿದರ್ಶನಗಳು ಕೂಡಾ ಮೂಲ ಜನಾಂಗದ ಸಂಸ್ಕೃತಿಯನ್ನು ಬಿಂಬಿಸುತ್ತವೆ. ದುಷ್ಟಳೂ ರೋಗಗ್ರಸ್ತಳೂ ಎಂದು ಹೆಸರು ಪಡೆದ ಎಕ್ಕಮ್ಮ ದೇವತೆ ಹೀಗೆ ಊರಿನಿಂದ ಸ್ಥಳಾಂತರಹೊಂದಿ, ಊರಲ್ಲಿ ಇರಲು ಶಕ್ತಿ ಸಾಲದೆ, ಗುಡ್ಡದ ಮೇಲೆ ನೆಲೆಯೊಂದನ್ನು ಹುಡುಕುತ್ತಾ ಇರುವಾಗ ಅವಳಿಗೆ ಎಕ್ಕಯ್ಯ ಮತ್ತು ಜೋಗಯ್ಯ ಎಂಬ ಮಹಾತ್ಮರ ದರ್ಶನವಾಗಿ, ಅವರ ಪ್ರಭಾವಕ್ಕೆ ವಶವಾಗಿ, ಅವರ ಸೇವೆಗೆ ನಿಲ್ಲುತ್ತಾಳೆ. ಈ ಕತೆಯು ಸಹ ಅಂತರಾಳದಲ್ಲಿ ಪುರುಷ ಕೇಂದ್ರಿತವಾದ ಸಮಾಜದಲ್ಲಿಯ ಪುರುಷ ಶಕ್ತಿಯ ಮೇಲಾಟದ ಅಂಶಗಳನ್ನ ಹೊಂದಿದೆ. ಕುಷ್ಟ ರೋಗ ಎನ್ನುವುದನ್ನು ಒಂದು ಸಂಕೇತವಾಗಿ ತೆಗೆದುಕೊಂಡಾಗಲೂ ಮೇಲಿನ ಅಂಶವನ್ನೇ ಸಮರ್ಥಿಸುತ್ತದೆ. ಇನ್ನು ರೇಣುಕೆಯ ಕತೆಯನ್ನು ಹೆಚ್ಚು ಹೇಳುವಹಾಗಿಲ್ಲ. ಅದೊಂದು ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳ ಹಿನ್ನೆಲೆಯಲ್ಲಿ ನೋಡಿದಾಗಲೂ ಸಹ ಇಲ್ಲಿಯ ಸಮಾಜದ ಮೇಲಿನ ಹಿಡಿತವೇ ಆಗಿದೆ.

"ಹೆಕ್ಕಿ ತಿನ್ನುವ ಜೀವನವನ್ನುಬಿಟ್ಟು ಮುಂದೆ ಹತ್ತಿರದ ಗ್ರಾಮಗಳಿಗೆ ಬಂದು, ಒಂದೆಡೆ ನೆಲೆನಿಂತು, ಹೊಲ ತೋಟ ಮಾಡಿಕೊಂಡು ತಮ್ಮ ಆಹಾರವನ್ನು ಗಳಿಸಲು ಪ್ರಾರಂಭಿಸಿದರು. ಹೀಗೆ ನೆಲೆನಿಂತಾಗ ಅವರು ಆಗಲೇ ಈ ಗ್ರಾಮಗಳಲ್ಲಿ ವಾಸವಾಗಿದ್ದ ಗುಂಪುಗಳ ಪ್ರಭಾವಕ್ಕೆ ಒಳಗಾಗಿ ಅವರ ಸಂಸ್ಕೃತಿಯಲ್ಲಿ ಬದಲಾವಣೆ ಹೊಂದಲು ಪ್ರಾರಂಭಿಸಿದರು. ಇದರಿಂದಾಗಿ ತಮ್ಮ ಪೂರ್ವದ ವೃತ್ತಿಯ ದೇವತೆಯಾದ ಎಕ್ಕಮ್ಮನನ್ನು ಊರ ಹೊರಗೆ ಅಂದರೆ ಗಡಿಯಲ್ಲಿ ಬಿಟ್ಟು ಬಂದರು. ಮತ್ತು ಹೊಸವೃತ್ತಿಯಾದ ವ್ಯವಸಾಯದ ಅಧಿದೇವತೆಯಾದ ಹುಲಿಗೆಮ್ಮನ ಸಂಪ್ರದಾಯಕ್ಕೆ ಸೇರಿದವರಾದರು.....ಹೆಕ್ಕಿತಿನ್ನುವ ಜೀವನವನ್ನು, ಇದಕ್ಕೆ ಅಧಿದೇವತೆಯಾದ ಎಕ್ಕಮ್ಮನನ್ನು ಬಿಟ್ಟು ವ್ಯವಸಾಯ ಹಾಗೂ ವ್ಯವಸಾಯದ ಅಧಿದೇವತೆಯಾದ ಹುಲಿಗಮ್ಮನ ದೇವತಾ ಸಂಪ್ರದಾಯಕ್ಕೆ ಸೇರಿದ್ದರಿಂದ ತಮ್ಮ ಪೂರ್ವದ ದೇವತೆಯನ್ನು ಅನಾದರಿಸಿದರು. ಹೀಗೆ ತನ್ನ ಭಕ್ತರು ತನ್ನನ್ನು ಬಿಟ್ಟು, ಪೂಜೆ ಆಹುತಿ ನೀಡದೆ ಅನಾದರಿಸಿದ್ದರಿಂದ ಕೋಪಗೊಂಡ ಈಕೆ ಊರ ಗಡಿಯೊಳಗೆ ನುಗ್ಗಿ ಬಂದು ಜನರಿಗೆ, ಪೈರಿಗೆ, ಪ್ರಾಣಿಗಳಿಗೆ ರೋಗ ತಂದು, ಕಾಡಿಗೆ ಹೋದವರಿಗೆ ತೊಂದರೆ ಕೊಡಲು ಪ್ರಾರಂಭಿಸಿದಾಗ ಜನರು ತಮ್ಮ ತಪ್ಪನ್ನು ಅರಿತು ಆಕೆಗೆ ಮುಂದಾಗಿಯೇ ಪೂಜೆ ಆಹುತಿಗಳನ್ನು ಊರಗಡಿಯಲ್ಲಿಯೇ ಅರ್ಪಿಸಿ, ತಮಗೆ ತೊಂದರೆ ಕೊಡಬಾರದೆಂದು ಬೇಡಿಕೊಳ್ಳಲಾರಂಭಿಸಿದರು"[೨೯] ಎಂದಿದ್ದಾರೆ. ಇದರಲ್ಲಿ ಗಮನಿಸಬಹುದಾದ ಒಂದು ಸಂದಿಗ್ಧತೆ ಎಂದರೆ ಈ ಮಾತುಗಳನ್ನು ಯಾವ ರೀತಿ ಅರ್ಥೈಸಕೊಳ್ಳಬೇಕು ಎಂಬುದು. ಕೃಷಿ ಹಾಗೂ ಆಹಾರ ಸಂಗ್ರಹಣೆಯ ಹಂತಗಳಲ್ಲಿ ಕಾಲದ ಅಂತರ ಕಾಣಿಸದೇ ಇರುವುದು. ಅಲ್ಲದೆ ಇಗಾಗಲೆ ಕೃಷಿಗೆ ಪರಿವರ್ತಿತವಾದ ಒಂದು ಗುಂಪು ಇದ್ದು, ಇನ್ನೊಂದು ಗುಂಪು ಆಹಾರ ಸಂಗ್ರಹಣೆಯ ಹಂತದಲ್ಲಿ ಇರುವ

ಗುಂಪು. ಈ ಎರಡೂ ಗುಂಪುಗಳಿಗೆ ಬೇರೆಬೇರೆಯದೆ ಆದ ದೇವತೆಗಳಿರುವುದು. ಆದರೆ ಎಲ್ಲಮ್ಮ ಹಾಗೂ ಹುಲಗಮ್ಮ ಫಲವಂತಿಕೆ ಹಾಗೂ ಸಮೃದ್ಧಿಯ ದೇವತೆಯಾಗಿದ್ದಾರೆ ಎಂಬುದನ್ನು ಗಮನಿಸಿಬೇಕು.

ಹುಲಗಮ್ಮನನ್ನು ಕೃಷಿ ಸಮೃದ್ಧಿಯ ದೇವತೆಯಾಗಿ ಗುರುಮೂರ್ತಿಯವರು ನೋಡಿದ್ದಾರೆ. ಕಣ ಹಾಗೂ ಹೊಲಗಳ ರಕ್ಷಕ ದೇವತೆಯೆಂಬುದು ಸರಿಯಾದುದು. ಹುಲಿಗಿಲ, ಹುಲಗ, ಹುಲುಗ ಎಂದು ಕರೆಯುವ ಒಂದು ಮರದ ಹೆಸರಾಗಿದೆ. ಹೊಂಗೆಯ ಮರದ ರೀತಿಯಲ್ಲಿರುವ ಮರ ಎಂದು ಕನ್ನಡ ಕನ್ನಡ ನಿಘಂಟು ತಿಳಿಸುತ್ತದೆ. ಇದು ಹೊಲದ ಅಥವಾ ಕಣದಲ್ಲಿ ನೆರಳನ್ನು ಕೊಡುವ ಮರದ ಬುಡದಲ್ಲಿ ಕಲ್ಲನ್ನಿಟ್ಟು ಆರಾಧಿಸುವ ಪದ್ಧತಿ ಜನಪದರಲ್ಲಿ ಇಂದಿಗೂ ರೂಡಿಯಲ್ಲಿದೆ. ಮರದಲ್ಲಿ ದೆವ್ವಗಳು ಅಥವಾ ದೇವರು ವಾಸಿಸುತ್ತಾರೆ ಎಂಬ ನಂಬಿಕೆ ಪ್ರಾಚೀನವಾದುದು ಹಾಗೂ ಭಾರತದ ಹಲವಾರು ಬುಡಕಟ್ಟುಗಳಲ್ಲಿ ಪ್ರಬಲವಾದ ನಂಬಿಕೆಯೂ ಆಗಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಹುಲಗಮ್ಮನು ಮೂಲತಃ ವೃಕ್ಷದೇವತೆಯೇ ಆಗಿ ನಂತರದಲ್ಲಿ ಒಬ್ಬ ಮಾತೃದೇವತೆಯಾಗಿ ಕಂಡುಬರುತ್ತಾಳೆ. ಅವರೆ ಕೊನೆಯಲ್ಲಿ ಹೇಳುವಂತೆ ಎಲ್ಲಮ್ಮನ ಸಂಪ್ರದಾಯ ರೇಣುಕಾ ದೇವಿಯ ಸಂಪ್ರದಾಯದೊಡನೆ ಬೆರೆಯುವುದಕ್ಕೆ ಮುನ್ನ ಒಂದು ತೀರಾ ಸ್ಥಳೀಯವಾದ ಜನಪದ ಸಂಪ್ರದಾಯವಾಗಿತ್ತು. ಅದು ಅಲ್ಲದೇ ಮಾರಮ್ಮ, ದುರುಗಮ್ಮ, ಹುಲಿಗೆಮ್ಮ, ಮಾತಂಗಿ, ಮುಂತಾದ ಅನೇಕ ಮಾತೃದೇವತೆಗಳಂತೆ ಎಲ್ಲಮ್ಮನೂ ಒಬ್ಬ ಸ್ಥಳೀಯ ದೇವತೆಯಾಗಿದ್ದಳು.

ಜನಪದರಲ್ಲಿ ರೇಣುಕೆಯ ಕಥೆ ಹಿಂದೂ ಪರಂಪರೆಯನ್ನು ಅನುಸರಿಸಿ ಕಟ್ಟಲಾದ ಕಥೆಯಾಗಿದೆ. ಇದು ಹೊರ ಆವರಣವಾದರೆ ಮೂಲದಲ್ಲಿ ಎಲ್ಲಮ್ಮನ ಆಚರಣೆ ಮತ್ತು ನಂಬಿಕೆಗಳೇ ಮುಖ್ಯವಾದವು. ಸಾಮಾನ್ಯವಾಗಿ ಎಲ್ಲ ಗ್ರಾಮದೇವತೆಗಳಿಗೂ ಕೆಳದೇವತೆಗಳಿಗೆ ಇರುವ ಎಲ್ಲ ಲಕ್ಷಣಗಳು ಮತ್ತು ಆಚರಣೆಗಳು ಎಲ್ಲಮ್ಮನ ವಿಷಯದಲ್ಲಿ ಕಂಡುಬರುತ್ತವೆ. ರೋಗರುಜಿನಗಳ, ಉಪದ್ರವಗಳನ್ನು ಕೊಟ್ಟು ನಂತರ ಸರಿಯಾದ ರೀತಿಯಲ್ಲಿ ಅವಳನ್ನು ತೃಪ್ತಿಪಡಿಸಿದರೆ ಅವುಗಳ ಪರಿಹಾರಕಳಾಗಿ ಕೆಳಸ್ತರದ ಜನರ ನಂಬಿಗಸ್ಥ ದೇವತೆಯಾಗಿ ಜನಜನಿತಳಾಗಿದ್ದಾಳೆ. ನಂತರದ ಕಾಲಘಟ್ಟದಲ್ಲಿ ಎಲ್ಲಮ್ಮನನ್ನು ಉನ್ನತೀಕರಣಗೊಳಿಸಿ ಪತಿಪರಾಯಣೆಯಾದ ಹೆಣ್ಣನ್ನಾಗಿ ಸ್ವೀಕರಿಸಲಾಗಿದೆ.

೪.೨.೨. ಮಾತಂಗಿ

ಮಾತಂಗಿ ಮೂಲತಃ ಮಾದಿಗರ ದೈವವಾಗಿದೆ. ಮಾದಿಗರು ಚರ್ಮದ ಕೆಲಸಮಾಡುವ ಕುಶಲಕರ್ಮಿಗಳು. ಮಾದಿಗರು ತಾವು ಮಾತಂಗಿಯ ಮಕ್ಕಳೆಂದು ಕರೆದುಕೊಳ್ಳುತ್ತಾರೆ. ಮಾದಿಗ (ಮತಂಗ) ಎಂಬ ಹೆಸರು, ಆಂಧ್ರ ಮತ್ತು ಕರ್ನಾಟಕಗಳಲ್ಲಿ ಹೆಚ್ಚಾಗಿ ಕಂಡುಬರುವ ಇವರು ಮಾತಂಗಿಯ ಅಥವಾ ದೇವಿಯ ಉಪಾಸಕರಾಗಿದ್ದಾರೆ.

ಮಾತಂಗಿಯನ್ನು ಪರಶುರಾಮ ಸೋಲಿಸಿದಾಗ ಅವಳು ಮಾದಿಗನೊಬ್ಬನ ಮನೆಯ ಚರ್ಮಹದಮಾಡುವ ಕರಿಬಾನಿಯ ಕೆಳಗೆ ಅವಿತುಕೊಂಡಳಂತೆ. ಆ ಕಾರಣದಿಂದ ಮಾದಿಗರು ಕರಿಬಾನಿಯನ್ನು ಮಾತಂಗಿಯ ಪ್ರತಿನಿಧಿಯಾಗಿ ಪೂಜಿಸುತ್ತಾರೆ. ಮಾಂಸ ಹೆಂಡಗಳನ್ನು ನೈವೇದ್ಯವಾಗಿ ಕರಿಬಾನಿಗೆ ಅರ್ಪಿಸುತ್ತಾರೆ. ಮಾತಂಗಿಯನ್ನು ಮಾತಂಗಿ, ಮಾತಂಗೆವ್ವ, ದೋಣೆಮಾತಂಗಿ, ಮಾತಂಗ ಕನ್ನೆ, ಮುಂತಾಗಿ ಕರೆಯಲಾಗುತ್ತದೆ. ಪ್ರತಿಯೊಂದು ಊರಿನ ಮಾದರ ಕೇರಿಯಲ್ಲಿ ಮಾತಂಗಿ ಇದ್ದೇ ಇರುತ್ತಾಳೆ. ನೆಲದಲ್ಲಿ ಹೂತ ಬಾನಿಗಳು ಅಥವಾ ಮಣ್ಣಿನ ಕೊಡಗಳು ಅಥವಾ ಮಣ್ಣಿನ ಮಡಿಕೆಯ ಆಕಾರದ ಎರಡು ಬಾನಿಗಳಿದ್ದು ಅವಕ್ಕೆ ಶಿಖರಾಕಾರದ ಕುಡಿಕೆಗಳನ್ನು ಇಡಲಾಗಿರುತ್ತದೆ. ಬುಟ್ಟಿ (ಅಡ್ಲಿಗೆ)ಯಲ್ಲಿ ಮುಖವಾಡಗಳು ಅಥವಾ ಬೆಳ್ಳಿಯ ಮುಖವನ್ನು ಇಟ್ಟ ಪ್ರತಿಮೆಗಳು ಮುಂತಾದವುಗಳನ್ನು ಮಾತಂಗಿಯ ರೂಪವೆಂದು ಕರೆಯಲಾಗುತ್ತದೆ. ಮಾತಂಗಿಯನ್ನು ಸಾಮಾನ್ಯವಾಗಿ ಮಾದರ ಕೇರಿಯಲ್ಲಿಯ ಬೇವಿನಮರದ ಕಟ್ಟೆಯ ಮೇಲೆ ಪ್ರತಿಷ್ಠಾಪಿಸಲಾಗಿರುತ್ತದೆ. ಕೆಲವೆಡೆ ಮಾತಂಗಿಗೆ ಪ್ರತ್ಯೇಕವಾದ ದೇವಾಲಯವನ್ನು ಕಟ್ಟಲಾಗಿರುತ್ತದೆ.

ಮಾತಂಗಿ ಮಾತೃಪೂಜೆಯ ಪ್ರಾಚೀನ ಪರಂಪರೆಯ ಮೂಲರೂಪವೆಂದು ಕರೆಯಬಹುದು. ಇದು ನೇಪಾಳದಲ್ಲಿ ಜೀವಂತ ಕುಮಾರಿ ಪೂಜೆಯೆಂದು ಕರೆದುಕೊಂಡರೆ ಕರ್ನಾಟಕ ಹಾಗೂ ಆಂಧ್ರದಲ್ಲಿ ಮಾತಂಗಿ ಆರಾಧನೆಯೆಂದು ಕರೆಯಲಾಗುತ್ತದೆ. ಮಾತೃಮೂಲ ಕುಟುಂಬ ವ್ಯವಸ್ಥೆಯ ಪ್ರಾತಿನಿಧಿಕ ರೂಪವೆಂದನೀ ಆಚರಣೆಯನ್ನು ಕರೆಯಬಹುದು. ಯಾಕೆಂದರೆ ಈ ವ್ಯವಸ್ಥೆಯ ಕುಟುಂಬದಲ್ಲಿ ತಾಯಿಯೇ ಪರಮಾಧಿಕಾರವನ್ನು ಹೊಂದಿರುತ್ತಾಳೆ. ಧಾರ್ಮಿಕವಾದ ಹಾಗೂ ಸಾಮಾಜಿಕವಾದ ಎಲ್ಲಾ ಕಾರ್ಯಗಳಲ್ಲಿ ಅವಳಿಲ್ಲದೆ ಯಾವುದೆ ಕಾರ್ಯಮಾಡಲು ಸಾಧ್ಯವಾಗುವುದಿಲ್ಲ. ಅಂತೆಯೇ ಇಲ್ಲಿಯೂ ಅವಳು ಧಾರ್ಮಿಕ ಕಾರ್ಯಗಳಲ್ಲಿ ದೇವಿಯ ಪ್ರತಿನಿಧಿತ್ವವನ್ನು ವಹಿಸುತ್ತಾಳೆ. ದೇವದಾಸಿ, ಬಸವಿ, ಜೋಗಿತಿಯರು ಎಂದು ಕರೆಯಬಹುದಾದರೂ, ಮಾತಂಗಿಯ ಆರಾಧನೆಯಲ್ಲಿ ಅವರಿಗಿಲ್ಲದ ಹೆಚ್ಚಿನ ಮಹತ್ವವು ಈ ಮಾತಂಗಿಯಾದವಳಿಗೆ ಇರುತ್ತದೆ. ಹೀಗೆ ದೀಕ್ಷೆಯನ್ನು ಹೊಂದಿದ ಸ್ತ್ರೀಯನ್ನು ಸಾಕ್ಷಾತ್ ಮಾನವ ರೂಪದ ಮಾತಂಗಿಯೆ ಎಂದು ಕರೆಯಲಾಗುತ್ತದೆ. ಅವರ ಆಯ್ಕೆಯ ವಿಧಾನ ಕರ್ನಾಟಕ ಹಾಗೂ ಅಂಧ್ರದಲ್ಲಿ ಅಲ್ಪ ಸ್ವಲ್ಪ ಬದಲಾವಣೆಯ ರೂಪದ್ದಾಗಿದೆ.

"ಮಾತಂಗಿಯಾಗುವವಳ ಆಯ್ಕೆಯನ್ನು ತುಂಬಾ ಎಚ್ಚರಿಕೆಯಿಂದ ನಡೆಸಲಾಗುತ್ತದೆ. ಈ ಆಯ್ಕೆಯ ವಿಧಾನವು ವಂಶಪಾರಂಪರೆಯಿಂದ ಆದುದಲ್ಲ. ಕೆಲವು ವೇಳೆ ಹಿಂದೆ ಆದ ಮಾತಂಗಿಯ ವಂಶದವರಿಗೆ ಪ್ರಾಶಸ್ತ್ಯ ಕೊಡಲಾಗುವುದಾದರೂ ಅವಳು ತನ್ನ ಶಕ್ತಿಯನ್ನು ತೋರಿಸಬೇಕಾಗುತ್ತಿತ್ತು. ಅವಳ ಆಯ್ಕೆ ಒಪ್ಪಿತವಾದಾಗ ಅವಳು ಮುಖಕ್ಕೆ ಕುಂಕುಮ ಅರಿಶಿಣಗಳನ್ನು ಧಾರಾಳವಾಗಿ ಬಳಿದುಕೊಂಡು ಬೇವಿನ ಎಲೆಗಳನ್ನು ತನ್ನ ಸುತ್ತ ಕಟ್ಟಿಕೊಳ್ಳುತ್ತಾಳೆ. ಅವಳು ಅವಿವಾಹಿತಳಾಗಿರಬೇಕು. ಆದರೆ ಕನ್ಯೆಯಾಗಿಯೇ ಇರಬೇಕೆಂಬ ಕಡ್ಡಾಯವಿಲ್ಲ.

ಮಾತಂಗಿ ಆಯ್ಕೆಯ ಸಂದರ್ಭದಲ್ಲಿ ಒಕ್ಕಲಿಗ ಪೂಜಾರಿ ನೇತೃತ್ವವಹಿಸುತ್ತಾನೆ. ಮನೆಯ ಅಂಗಳದಲ್ಲಿ ಒಂದು ಭಾಗವನ್ನು ಸಗಣಿ ಹಾಕಿ ಸಾರಿಸುತ್ತಾರೆ. ಅದರ ಮೇಲೆ ಕೆಂಪು, ಹಳದಿ, ಬಿಳಿಯ ರಂಗೋಲಿಯಿಂದ ಕಮಲದ ಹೂ ಬರೆಯುತ್ತಾರೆ. ಇದಕ್ಕೆ ರಾಗಿ ಅಥವಾ ಅಕ್ಕಿಯ ಹಿಟ್ಟಿನಿಂದ ಅಂಚು ಕಟ್ಟುತ್ತಾರೆ. ಈ ಚಿತ್ರದ ಮೇಲೆ ಐದು ಮಡಕೆಗಳನ್ನು, ಮಧ್ಯದಲ್ಲಿ ಐದು ಮಡಕೆಗಳ ಪಕ್ಕದಲ್ಲಿ ವಿಭೂತಿ ಉಂಡೆಗಳು, ಹೊಸಬಟ್ಟೆ, ಅರಿಶಿಣದ ಕೊಂಬು, ಕರ್ಪೂರ, ಬಾಳೆಹಣ್ಣು ಇಡುತ್ತಾರೆ. ನಾಲ್ಕು ಮಡಕೆಗಳ ಸುತ್ತ ಒಂದು ದಾರಸುತ್ತಿ ಮಧ್ಯದ ಮಡಕೆಗೆ ಕಟ್ಟುತ್ತಾರೆ. ಈ ಆಚರಣೆಗೆ ಹಿಂದಿನ ಐದು ದಿನಗಳೂ ಮಾತಂಗಿಯಾಗುವವಳು ಹಣ್ಣು, ಹಾಲನ್ನು ಮಾತ್ರ ಸೇವಿಸಬೇಕು. ಅವಳಿಗೆ ಬಿಳಿಸೀರೆ ಉಡಿಸಿ, ಮಧ್ಯದ ಮಡಕೆಯ ಹತ್ತಿರ ಕೂರಿಸುತ್ತಾರೆ. ಒಂದು ಬಿದಿರು ಬುಟ್ಟಿಯಲ್ಲಿ ಎಲ್ಲಮ್ಮನ ಎರಡು ಪಾದಗಳ ಮರದ ಅಥವಾ ಮಣ್ಣಿನ ಪ್ರತಿರೂಪ, ಕಬ್ಬಿಣದ ದೀಪ, ಒಂದು ಬೆತ್ತ ಇವುಗಳನ್ನಿಟ್ಟು ಮಡಕೆಯನ್ನು ಇಟ್ಟು, ಅದನ್ನು ಅವಳ ತಲೆಯ ಮೇಲೆ ಹೊರಿಸುತ್ತಾರೆ. ಆಸಾದಿ ಎಲ್ಲಮ್ಮನ ಹಾಡುಗಳನ್ನು ಹೇಳುತ್ತಾನೆ. ಒಕ್ಕಲಿಗ ಪೂಜಾರಿಯು ಅವಳ ಮೇಲೆ ಅಕ್ಕಿ ಚೆಲ್ಲಿ, ಅವಳ ಕೊರಳಿಗೆ ಎಲ್ಲಮ್ಮನ ಮತ್ತು ಪರಶುರಾಮನ ಬೊಟ್ಟುಗಳನ್ನು ಕಟ್ಟುತ್ತಾನೆ. ಹೊಸ ಮತ್ತು ಹಳೆಯ ಮಾತಂಗಿಗಳು 'ಎಕ್ಕಲ್ಲೆ ಜೋಗವ್ವ' ಎಂದು ಕೂಗುತ್ತಾರೆ. ಮಾತಂಗಿಯರು, ಆಸಾದಿಗಳು ಹೆಂಡಕುಡಿಯುವುದರೊಂದಿಗೆ ಸಮಾರಂಭ ಮುಗಿಯುತ್ತದೆ."[೮೦]

ಆಂಧ್ರದಲ್ಲಿ ಇದು ಅಲ್ಪ ಬದಲಾವಣೆಯಿಂದ ಆಯ್ಕೆಯು ವಿಧಾನ ಕಾಣಿಸಿಕೊಳ್ಳುತ್ತದೆ. ಯಾವುದಾದರೂ ಒಂದು ಹಳ್ಳಿಯಲ್ಲಿ ಮಾತಂಗಿಯನ್ನು ನಿಯಮಿಸುವ ಕಾರ್ಯವನ್ನು ಹಮ್ಮಿಕೊಂಡಿದ್ದರೆ, ಆ ಹಳ್ಳಿಯಲ್ಲಿರುವ ಎಲ್ಲಾ ಅವಿವಾಹಿತ ಹೆಣ್ಣು ಮಕ್ಕಳನ್ನು ಮಾತಮ್ಮ ಅಥವಾ ಮಾತಂಗಿ ದೇವಿಯ ದೇವಾಲಯದೆದುರು ಸೇರಿಸುತ್ತಾರೆ. ಅನಂತರ ಡೋಲಿನ ನಾದದೊಡನೆ ದೇವಿ ಸ್ತುತಿ, ಪ್ರಾರ್ಥನೆ ನಡೆಯುತ್ತದೆ. ದೇವಿಯು ತನ್ನ ಇಚ್ಛಾನುಸಾರ ಒಬ್ಬ ಕುಮಾರಿಯ ಮೂಲಕ ಪ್ರತ್ಯಕ್ಷಳಾಗಬೇಕೆಂಬುದೇ ಅವರು ಮಾಡುವ ಪ್ರಾರ್ಥನೆಯಾಗಿರುತ್ತದೆ. ನಂತರದಲ್ಲಿ ಯಾರಾದರೊಬ್ಬ ಕುಮಾರಿಯು ತನ್ನ ಮೈದುಂಬಿದಂತೆ ವರ್ತಿಸಿದರೆ ದೇವಿ ತನ್ನ ರೂಪವನ್ನು ಆಯ್ಕೆ ಮಾಡಿಕೊಂಡಳು ಎನ್ನುತ್ತಾರೆ. ಆರಿಸಿಕೊಂಡ ಕುಮಾರಿಯನ್ನು ಇನ್ನೂ ಅನೇಕ ಪರೀಕ್ಷೆಗಳಿಗೆ ಒಳಪಡಿಸಲಾಗುತ್ತದೆ. ಭೂಮಿಯ ಮೇಲೆ, ರಂಗೋಲಿ ಬರೆದು, ಅದರ ಮೇಲೆ ಆಕೆಯನ್ನು ಕೂಡಿಸಿ, ಸಮೀಪದಲ್ಲಿ ಮೊಸರು ತುಂಬಿದ ಪಾತ್ರೆಗಳನ್ನು ಇಡಲಾಗುವುದು. ದೇವಿ ಮೈದುಂಬಿದ್ದರೂ ಸ್ವತಃ ತನ್ನನ್ನು ಸಾವರಿಸಿಕೊಂಡು ತನ್ನ ಇಚ್ಛೆ ಬಂದ ಆಸನವನ್ನು ಅಲಂಕರಿಸುತ್ತಾಳೆ. ಆ ಆಸನದ ಸುತ್ತ ಬಹಳ ಹತ್ತಿರವಾಗಿ ಮತ್ತೆ ನಾಲ್ಕು ತುಂಬಿದ ಮೊಸರಿನ ಪಾತ್ರೆಗಳಿದ್ದು, ಆ ಪಾತ್ರೆಗಳಿಗೆ ಹಗ್ಗಕಟ್ಟಿ ಅದರ ಮತ್ತೊಂದು ತುದಿಯನ್ನು ಮೇಲಿನ ಚಪ್ಪರಕ್ಕೆ ಹಗ್ಗದಿಂದ ಕಟ್ಟಲಾಗಿರುತ್ತದೆ.ಹೀಗೆ ಕಟ್ಟಲಾಗಿರುವ ಪಾತ್ರೆಗಳ ನಡುವೆ ಅವುಗಳಿಗೆ ಏನೂ ಆಗದಂತೆ ಓಡಾಡುವಲ್ಲಿ ಯಶಸ್ವಿಯಾದರೆ ಮಾತ್ರ ಮಾತಂಗಿ ದೀಕ್ಷೆಯ ಸತ್ವಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದಾಳೆಂದು ಭಾವಿಸುವರು. ಹೀಗೆ

ದೀಕ್ಷೆಪಡೆದ ಕುಮಾರಿಗೆ ಒಂದು ಬುಟ್ಟಿ, ನಾಗಕಾಷ್ಟ, ನಿಂಬೆಗಿಡದ ಕೊಂಬೆ ಹಾಗೂ ಕವಡೆಗಳನ್ನು ಪೋಣಿಸಿರುವ ಹಗ್ಗ ಮೊದಲಾದ ಮಾತಂಗಿಯ ಲಾಂಛನಗಳನ್ನು ಕೊಡಲಾಗುತ್ತದೆ. ಹೀಗೆ ಪಡೆದ ನಂತರದಲ್ಲಿ ಸಾಕ್ಷಾತ್ ಮಾತಂಗಿದೇವಿ ಎಂದು ಪರಮಾದರದಿಂದ ಗೌರವಿಸಲ್ಪಡುತ್ತಾಳೆ.

ಇದೆ ಇನ್ನೊಂದು ಕಡೆ ಮಾತಂಗಿಯ ದೀಕ್ಷಾ ಪ್ರಕಾರ ತೀರಾ ಭಿನ್ನವಾಗಿದೆ. ಇಲ್ಲಿ ಒಂದು ಹುತ್ತವನ್ನು ಶೋಧಿಸಿ ಅಗೆದು ದೀಕ್ಷೆಗೆ ಆಯ್ಕೆಯಾದ ಕುಮಾರಿಯನ್ನು ಅದರೊಳಗೆ ಕೂರಿಸಿಒಂದು ಬುಟ್ಟಿಯನ್ನು ಮುಚ್ಚಲಾಗಿರುತ್ತದೆ. ಆಸಾದಿಗಳು ಹಾಗೂ ಹಿಂದಿನ ಮಾತಂಗಿಯರು ದೇವಿಯನ್ನು ಕುರಿತು ಹಾಡುತ್ತಾರೆ. ಹಾಗೆ ಹಾಡುತ್ತಿರುವಾಗಲೆ ಹುತ್ತದಲ್ಲಿ ಕುಳಿತ ಕುಮಾರಿಯ ಮೇಲೆ ದೇವಿಯ ಬಂದು, ತನ್ನ ತಲೆಯ ಮೇಲಿರುವ ಬುಟ್ಟಿಯನ್ನು ದೂರಕ್ಕೆಸೆದು, ಹೊರಬರುತ್ತಾಳೆ. ನಂತರದಲ್ಲಿ ಮಾದಿಗರು ಈ ದೇವಿಯನ್ನು ಆರಾಧಿಸುತ್ತಾರೆ ಅಲ್ಲದೆ ಅವಳಿಗೆ ಲಾಂಛನಗಳನ್ನು ಕೊಡುತ್ತಾರೆ. ಹೀಗೆ ಮಾತಂಗಿ ದೀಕ್ಷೆಯನ್ನು ಪಡೆದ ಮೇಲೆ ಪ್ರತಿಯೊಬ್ಬ ಮಾತಂಗಿ ಕನ್ಯೆಯನ್ನು ವೃಕ್ಷದೊಡನೆ ಮದುವೆ ಮಾಡಲಾಗುತ್ತದೆ.

ಮಾತಂಗಿಯಾದವಳು ಎಲ್ಲಾ ಹಬ್ಬಗಳ ಹಿಂದಿನ ಶುದ್ಧೀಕರಣ ಆಚರಣೆಗಳ ನೇತೃತ್ವ ವಹಿಸಿಕೊಂಡಿರುತ್ತಾಳೆ. ಗ್ರಾಮದೇವತೆಗಳ ಹಬ್ಬಬಂದರೆ ಮಾತಂಗಿ ಅಲ್ಲಿಬರುತ್ತಾಳೆ. ಅವಳ ಕವಡೆ ಹಾರವನ್ನು ಮೂರು ದಿನ ಬಾನಿಯಲ್ಲಿ ಇಡಲಾಗುತ್ತದೆ. ಹಬ್ಬದ ದಿನ ತೆಗೆದು ಅವುಗಳನ್ನು ಧರಿಸುತ್ತಾಳೆ. ಅಲ್ಲಿಯೇ ಇಟ್ಟಿದ್ದ ಕತ್ತಿ, ಮರದ ಪಾದುಕೆ, ಹಾಗೂ ತ್ರಿಶೂಲಗಳನ್ನು ಕೈಯಲ್ಲಿ ಹಿಡಿದು ಹೊರಡುತ್ತಾಳೆ. ಹಬ್ಬದ ಯಜಮಾನ ಹಾಗೂ ಅವನ ಬಂಧುಗಳು ಸಾಲಾಗಿ ನಿಲ್ಲುತ್ತಾರೆ. ಮಾತಂಗಿ ನೆರೆದ ಜನರ ಸುತ್ತ ಒಡಾಡಿ ಏನೇನೋ ಅರ್ಥವಿಲ್ಲದ ಮಾತುಗಳನ್ನು ಆಡುತ್ತಾಳೆ. ಅವರ ಮೇಲೆ ಉಗಿಯುತ್ತಾ, ಕೈಯಲ್ಲಿರುವ ದಂಡದಿಂದ ಸ್ಪರ್ಶಿಸುತ್ತಾಳೆ. ಈ ಸ್ಪರ್ಶ ಹಾಗೂ ಉಗುಳು ಅವರಲ್ಲಿಯ ಅಶುದ್ಧತೆಯನ್ನು ಹೋಗಲಾಡಿಸುತ್ತದೆ ಎಂದು ನಂಬುತ್ತಾರೆ. ಬ್ರಾಹ್ಮಣರ ಅಂಗಳದ ಒಂದು ಜಾಗದಲ್ಲಿ ಸಗಣಿಯಿಂದ ಸಾರಿಸಿ ಅದರ ಮೇಲೆ ಬುಟ್ಟಿಯನ್ನು ಇಡಲಾಗುತ್ತದೆ. ಮಾಡಿದ ಅಡುಗೆಯನ್ನು ಅದಕ್ಕೆ ತುಂಬಿ, ಅದರ ಮೇಲೆ ಸಣ್ಣದಾದ ದೀಪವನ್ನು ಇಡಲಾಗುತ್ತದೆ. ನಂತರ ಮಾತಂಗಿ ಮಡಿಕೆಯನ್ನು ಇಟ್ಟು ಅದರಲ್ಲಿ ಹೆಂಡವನ್ನು ತುಂಬಿಸುವಂತೆ ಹೇಳುತ್ತಾಳೆ, ಆದರೆ ಬ್ರಾಹ್ಮಣ ನೀರನ್ನು ಮಾತ್ರ ತುಂಬುವೆನೆಂದು ಕೇಳಿಕೊಳ್ಳುತ್ತಾನೆ. ನೀರು ತುಂಬಿದ ಬಿಂದಿಗೆಯನ್ನು ಹಿಡಿದು ನೆರೆದ ಜನರಮೇಲೆಲ್ಲಾ ಸಿಡಿಯುವಂತೆ ಮಾಡುತ್ತಾಳೆ. ನಂತರದಲ್ಲಿ ಮಾತಂಗಿ ಹೋದಮೇಲೆ ಆ ಜಾಗವನ್ನು ಪವಿತ್ರಗೊಳಿಸಿಕೊಳ್ಳುತ್ತಾರೆ.

ಈ ರೀತಿಯ ಆಚರಣೆಗಳ ಸಂದರ್ಭದಲ್ಲಿ ಹಾಡುವ ಹಾಡುಗಳು ಎಲ್ಲಮ್ಮನಿಗೆ ಸಂಬಂಧಿತವಾಗಿರುವುದನ್ನು ಕರ್ನಾಟಕ ಹಾಗೂ ಆಂಧ್ರದಲ್ಲಿ ಕಂಡುಬರುವುದನ್ನು ಗಮನಿಸಬೇಕು. ಇಲ್ಲಿ ಮಾತಂಗಿ ಒಂದು ದೈವವಾಗಿ

ಬರುವುದಿಲ್ಲ. ಬದಲಾಗಿ ಅವಳ ಪ್ರತಿನಿಧಿಯಾಗಿ ಕಂಡುಬರುತ್ತಾಳೆ. ಎಲ್ಲಮ್ಮನೆ ಇಲ್ಲಿ ಆ ದೈವ. ಹಿಂದೆ ಹೇಳಿದಂತೆ ಈ ಎಲ್ಲಮ್ಮ ಕೆಳವರ್ಗದ ದೈವವಾಗಿದ್ದು, ಎಲ್ಲೆಯನ್ನು ಪ್ರತಿನಿಧಿಸುವುದಿಲ್ಲ. ಬದಲಾಗಿ ಮಾದಿಗರ ದೈವವಾಗಿಯೇ ಅಥವಾ ಫಲವಂತಿಕೆಯ ದೇವತೆಯಾಗಿ ಕಾಣುತ್ತಾಳೆ. ಮದುವೆಯ ಸಂದರ್ಭದಲ್ಲಿ ಈ ಮಾತಂಗಿಗೆ ಉಡಿತುಂಬುವುದು ಈ ಕಾರಣದಿಂದಲೇ. ಅಲ್ಲದೆ ಮಾತಂಗಿಯು ಯಾರೊಡನೆಯಾದರೂ ಮುಕ್ತವಾಗಿ ದೈಹಿಕ ಸಂಬಂಧವನ್ನು ಹೊಂದಿರಬಹುದು. ಇದು ಪ್ರಾಚೀನ ಸಂಪ್ರದಾಯದ ಪಳಯುಳಿಕೆಯಾಗಿದೆ. ಕೃಷಿಯನ್ನು ಪ್ರಧಾನವಾಗಿ ಅವಲಂಭಿಸಿದ ಕಾಲದಲ್ಲಿ ಹೆಣ್ಣು ಅತ್ಯಂತ ಗೌರವಯುತವಾದ ಸ್ಥಾನವನ್ನು ಪಡೆದಿದ್ದಳು. ಕೃಷಿಯ ಆಚರಣೆಯಲ್ಲಿ ಪ್ರಧಾನ ಪಾತ್ರದ ಮುಂದುವರಿಕೆಯಾಗಿ ಮಾತಂಗಿಯ ಆಚರಣೆಯಲ್ಲಿ ಹೆಣ್ಣನ್ನು ಕಾಣಬಹುದಾಗಿದೆ.

ಅಡಿಟಿಪ್ಪಣಿಗಳು

೧. Sri Aurabindo, on the Veda, p

೨. ರಾಮಚಂದ್ರರಾವ್, ಎಸ್. ಕೆ., ೧೯೭೫, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಪು. ೧೮೬

೩. Wilkins, S.J., 1882, Hindu Mythology- Veda and Purana, p. 97

೪. ಸೃಷ್ಟಿ ಪ್ರಕರಣ, ಅಧ್ಯಾಯ ೩, ೩೧ರ ನಂತರದ ಶ್ಲೋಕಗಳು

೫. ಪದ್ಮಪುರಾಣ, ೫. ೨೭.೧೧೮.

೬. ರೂಪಮಂಡನ, ೫.೬೧. ಉದ್ಧರಣೆ, ಎಸ್. ಕೆ. ರಾಮಚಂದ್ರರಾವ್, ೧೯೭೫, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಪು. ೧೮೭

೭. ಅದೇ ಪು. ೧೮೫

೮. Journal of the Indian History, Vol. XLI.pt. III, 689-90

೯. Zimmer,H., Myths and symbols in Indian art and civilization, p. 96

೧೦. Basham, The wonder that was India, p 203-4

೧೧. ಕಂಬಾರ,ಡಾ. ಚಂದ್ರಶೇಖರ, ೧೯ಸಂ.ಕನ್ನಡ ಜಾನಪದ ವಿಶ್ವಕೋಶ, ಪು. ೧೭೫೨

೧೨. ನಾಗರಾಜಯ್ಯ, ಡಾ. ಹಂಪಾ, ೧೯೯೭, ಸಾಂತರು ಒಂದು ಅಧ್ಯಯನ, ಪು.೨೩೫

೧೩. Mackay, E., 1943, Early Indian Civilization, 58-9

೧೪. Marshall,J., 1931, Mohenjodaro and Indus Civilization, vol. I. p. 260

೧೫. ಎಸ್.ಕೆ. ರಾಮಚಂದ್ರ ರಾವ್, ೧೯೭೫, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಪುಟ.೧೫೭

೧೬. Bhattacharayya, N.N., 1992, History of the Tantric Religion, p. 173

೧೭. ಉದ್ಧರಣೆ, ಎಸ್. ಕೆ. ರಾಮಚಂದ್ರರಾವ್, ೧೯೭೫, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಪು. ೧೮೫

೧೮. ಎಸ್. ಕೆ. ರಾಮಚಂದ್ರರಾವ್, ೧೯೭೫, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಪು. ೧೮೭

೧೯. Chattopadhyaya, S.,1962, The Evolution of Theistic Sects in Ancient India, p.101-20. JRAS, 1905, p.357

೨೦. Parpola, Asko., 1994, Deciphering the Indus script, p. 150.

೨೧. ಅದೇ, p. 150

೨೨. Bhattacharyya, N.N., 1992, History of the Tantric Religon, p. 208

೨೩. ವಿಷ್ಣುಪುರಾಣ, ೫.೩೩.೩೬,೩೭

೨೪. Agrawala, Terracotta Figurines of Ahichchhatra, etc., AI, 4, 1947-8, p. 151

೨೫. ಅದೇ, p. 151 and off

೨೬. Srinivasan, 1960, Some Aspects of Religion as revealed by Early Monuments and literature of the South India, p. 21

೨೭. Pope, Rev. G.U., 1899, Extracts from the Tamil purra-porul Venba Malai and the Purranannurru, JRAS, p. 225

೨೮. Venkataraman, K.R., Sakti cult in South India,in Battacharya ed., TheCultural Heritage of India IV, P. 252

೨೯. Pope, Rev. G.U., Extracts from the Tamil purra-porul Venba Malai and the Purranannurru, JRAS, 1899, p. 225

೩೦. ಶಿಲಪ್ಪದಿಕಾರಂ, ಸಂ. ಸ್ವಾಮಿನಾಥ ಅಯ್ಯರ,ಪು. ೩೧೪ ನಂತರದ ಪುಟಗಳು

೩೧. Burrow and Emeneaw, ADEB, p.146, No.1803

೩೨. Hopkins, 1915, Epic Mythology, p. 76

೩೩. V.S.Agrawala, purna, vol 1, Jan, 1963, 69

೩೪. Marshall,J., MIC, Vol.I, 50

೩೫. Kinsley, David., 1975, Freedom from Death in the Worship of Kali, p.no. 22-3

೩೬. ಅದೇ, p. 185

೩೭. Bhattacharyya, N.N., 1992 History of the Tantric Religion, p. 175

೩೯. Luke, K., 1976, Indo-Iranian Terms, Journal of Dharma 1(4)

೪೦. Mazumdar, B.C., 1927, The History of Bengali Language, p. 76

೪೧. Parpola, Asko., 1994, *Deciphering the Indus Script, page no. 217*

೪೨. ಸವದತ್ತಿಮಠ, ಸಂಗಮೇಶ ಡಾ., ೧೯೯ , ತೌಲನಿಕ ದ್ರಾವಿಡ ಭಾಷಾ ವಿಜ್ಞಾನ, ಪು. ೯೯

೪೩. Muri, J., 1860-71, Original Sanskrit Text, IV, p.436

೪೪. Gatwood, Lynn E., 1985, Devi and the Spouse Goddess, p. 156

೪೫. Jain Chakresh, Eve's Weekly, Sep, 1989

೪೬. Obeyeseker, Gananath., The Cult of the Goddess Pattini, 1983, pp384 - 2 2 , quoted; The Divine and Demonicac, p191

೪೭. Whitehead, Henry., 1976, The village Gods of South India, 39-40.

೪೮. Berkson, Carmel., 1995, The Divine and Demoniac, p. 192-3

೪೯. ಅದೇ, p. 153

೫೦. Hopkins,E.W.,1896, The Religions of India, p.527, 535

೫೧. Sathyanarayana, K., 1975, A Study of the History and culture of the Andhras, p.57

೫೨. Srivastava, M.C.P., 1975, Mother Goddess, p. 112

೫೩. Gangoli, O.C., The Art of the Pallavas, p.19

೫೪. Devimahatmya:Glorification of the Goddess, 1963, p.

೫೫. Marshall, John, Mohejodaro and the Indus Civilization, vol. I. p.63-5, plt.XII 18

೫೬. Mackay, E.J.H., Furher Excavatioons at Mohenjodaro, I. p. 337-8

೫೭. ವೇದಯುಗ,೧೯೯೭, ಪು.೨೧೭

೫೮. Wigesekar, O.H., "Rg-Vedic River goddess and an Indus Vally Seal", Dr.Kunhan Raja Presentation Volum, p 428

೫೯. Dhavalikar, M.K., "The Origin of Sapt-Matrkas", DBCRI, XXI, 1960-1, p. 19

೬೦. Dikshit, S.K., 1957(?), The Mother Goddess, p.112

೬೧. Hopkins,1915, Epic Mythology, p.229

೬೨. ಕಾಣೆ, ಹಿಂದೂ ಧರ್ಮಶಾಸ್ತ್ರ, ೪.೫೨೫, ೯

೬೩. Barth, A., 1921, The religions of India, preface, p.XV

೬೪. Kapadia, K.M., 1947, Hindu Kinship, p.539)

೬೫. ಕಂಬಾರ, ಚಂದ್ರಶೇಖರ, ೧೯೮೫, ಕನ್ನಡ ಜಾನಪದ ವಿಶ್ವಕೋಶ, ಪು. ೨೪೮

೬೬. ದೇವರಕೊಂಡಾ ರೆಡ್ಡಿ, ಸಪ್ತಮಾತೃಕೆಯರು, ಲಕ್ಷ್ಮಣ ತೆಲಗಾವಿ,ಸಂ. ೧೯೮೭, ಹರಿತಿಸಿರಿ, ಪು.೯೫

೬೭. Mahapatra,P.K., 1972, The Folk Cults of Bengal, p. 144

೬೮. Mitra, S.C., 1922, On the Cult of the Tree Goddess in Eastern Bengal, Man in India, 2: p. 230

೬೯. ದೇವರಕೊಂಡಾ ರೆಡ್ಡಿ, ಸಪ್ತಮಾತೃಕೆಯರು, ತೆಲಗಾವಿ, ಲಕ್ಷ್ಮಣ.,ಸಂ. ೧೯೮೭, ಹರಿತಿಸಿರಿ, ಪು.೯೬

೭೦. Rao, T.A.G., EHI, Vol.I., pt.II, p. 381-2

೭೧. Agrwal, V.S., A catalogue of the Brahmanical Images in Mathura Art, P.60

೭೨. Coomaraswamy, A.K., Yaksas, I., p. 29

೭೩. Fleet, CII, III, No.12

೭೪. ಅದೇ, No.12

೭೫. ಡಾ.ದೇವರಕೊಂಡಾ ರೆಡ್ಡಿ, ಸಪ್ತಮಾತೃಕೆಯರು, ತೆಲಗಾವಿ, ಲಕ್ಷ್ಮಣ.,ಸಂ. ೧೯೮೭, ಹರಿತಿಸಿರಿ, ಪು.೯೬

೭೬. Rao, T.A.G., EHI, Vol.I., pt.II, p. 154

೭೭. Elmore, W.T., 1984, Dravidian Gods in Modern Hinduism, p 17

೭೮. ತೆಲಗಾವಿ. ಲಕ್ಷ್ಮಣ.(ಸಂ). ೧೯೯೧. ಸಂಶೋಧನ. ಪು. ೨೮೮

೭೯. ಆದೇ. ಪು. ೨೭೭

೮೦. ಕಂಬಾರ, ಚಂದ್ರಶೇಖರ, ೧೯೮೫, ಸಂ. ೨, ಪು. ೧೫೯೦

ಆರಾಧನೆ ೫

ಮಾತೃದೇವತಾ ಆರಾಧನೆಗೆ ಕಾರಣಗಳು

ಈ ಅಧ್ಯಯದಲ್ಲಿ ಮಾತೃದೇವತೆಯರ ಬೆಳವಣಿಗೆಗೆ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗೆ ಹೇಗೆ ಕಾರಣವಾಗಿರುವವು ಎಂಬದನ್ನು ಚರ್ಚಿಸಲಾಗುವುದು. ಮಾತೃದೇವತಾ ಆರಾಧನೆಯಲ್ಲಿ ಹೆಣ್ಣು ಪ್ರಧಾನ ಪಾತ್ರವಹಿಸಿರುವುದು ಕಂಡುಬರುವದಲ್ಲದೆ, ಅದರ ಉಗಮಕ್ಕೂ ಅವಳೇ ಕಾರಣಳಾಗಿದ್ದಳು ಎಂಬುದು ಗೊತ್ತಿರುವ ವಿಷಯ. ಆದರೆ ಉಗಮ ಹಂತದಲ್ಲಿಯಷ್ಟೆ ಹೆಣ್ಣು ಪ್ರಧಾನ ಪಾತ್ರವಹಿಸಿದರೂ ನಂತರದ ಕಾಲದಲ್ಲಿ ಹೆಣ್ಣು ಅಷ್ಟೇ ಪ್ರಧಾನವಾಗಿ ಈ ಆರಾಧನೆಯಲ್ಲಿ ಭಾಗವಹಿಸಿರುವುದನ್ನು ನೋಡಬಹುದು. ನಂತರದ ಕಾಲದಲ್ಲಿಹೆಣ್ಣಿನ ಈ ಸ್ಥಾನವು ಕಳೆದು ಹೋಗಿರುವುದನ್ನು, ಆ ಸ್ಥಾನವನ್ನು ಗಂಡು ಪಡೆದುಕೊಂಡಿರುವುದೆ ಆಗಿದೆ. ವೇದಗಳಲ್ಲಿ ಹಾಗೂ ವೇದೋತ್ತರ ಕಾಲದಲ್ಲಿ ನಂತರ ಹಿಂದೂ ಪರಂಪರೆಯೆಂದು ಕರೆಯುವ ಇಂದಿನ ಕಾಲದವರೆಗೂ ಹಾಗೂ ಬುಡಕಟ್ಟುಗಳಲ್ಲಿ ಕಂಡುಬರುವ ಸಾಮಾಜಿಕ ಜೀವನದಲ್ಲಿ ಸ್ತ್ರೀಯರ ಸ್ಥಾನಮಾನಗಳೇನು ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೫.೧. ಮಾತೃಪ್ರಧಾನ ಸಮಾಜ

ದೇವತೆಗಳ ಕಲ್ಪನೆ ಮೂಲತಃ ಸಂತಾನ ಅಥವಾ ಫಲವಂತಿಕೆಯ ರೂಪವಾಗಿ ಬೆಳೆದು ಬಂದಿರುವ ಕಲ್ಪನೆಯಾಗಿದೆ. ಕೃಷಿ ಆವಿಷ್ಕಾರದೊಡನೆ ದೇವತೆಗಳ ಬೆಳವಣಿಗೆಯು ಆಗಿದೆ. ಹೀಗೆ ಬೆಳೆದು ಬಂದ ದೇವತೆಗಳು ಕಾಲಘಟ್ಟದಲ್ಲಿ ಅವುಗಳಲ್ಲಿ ಕೆಲವೊಂದು ಸೌಮ್ಯತೆಯನ್ನು ಹೊಂದಿದರೆ, ಕೆಲವೊಂದು ಕ್ರೂರದೇವತೆಗಳಾಗಿ ಕಂಡುಬರುತ್ತಾರೆ. ಅಲ್ಲದೆ ಕೆಲವು ದೇವತೆಗಳಿಗೆ ಗಂಡ ಇದ್ದರೆ, ಕೆಲವು ದೇವತೆಗಳಿಗೆ ಗಂಡಿನ ಹಂಗೆ ಕಂಡುಬರುವುದಿಲ್ಲ. ಅಲ್ಲದೆ ಅವು ಸ್ವತಂತ್ರವಾಗಿ ತಮ್ಮನ್ನು ಗುರುತಿಸಿಕೊಳ್ಳುತ್ತವೆ. ಆದರೆ, ಕೆಲವು ದೇವತೆಗಳು ಸಂಪೂರ್ಣವಾಗಿ ತಮ್ಮತನವನ್ನು ಕಳೆದುಕೊಂಡು ಇನ್ನೊಂದು ದೇವತೆಯ ಹೆಂಡತಿಯಾಗಿ ಕಂಡುಬರುತ್ತಾರೆ. ಇಲ್ಲಿ ಮೂರು ರೀತಿಯ ದೇವತೆಗಳು ಕಂಡುಬರುತ್ತಾರೆ. ಮೊದಲನೆಯ ಗುಂಪಿನಲ್ಲಿ ಕ್ರೂರ ಹಾಗೂ ಸೌಮ್ಯತೆಗಳೆರಡನ್ನೂ ತಮ್ಮಲ್ಲಿ ಇಟ್ಟುಕೊಂಡು ಜನತೆಯ ಬದಿಯಲ್ಲಿಯೇ ಇರುವ ದೇವತೆಗಳು ಇಲ್ಲಿದ್ದಾರೆ. ಅವರು ಗ್ರಾಮದೇವತೆಗಳ ಸ್ವರೂಪವಾಗಿರಬಹುದು. ಅದೆ ರೀತಿಯ ಕಾಳಿ, ಸಪ್ತಮಾತೃಕೆಯರಾಗಿರಬಹುದು. ಈ ಗುಂಪು ಎಂದೂ ತಮ್ಮ ಸ್ವತಂತ್ರವನ್ನು ಕಳೆದುಕೊಳ್ಳಲಿಲ್ಲ. ಶಿವನ ಸಂಗಾತಿಯಾಗಿರಬೇಕು ಎಂದು ಕಂಡರೂ ಅವರು ಅಷ್ಟೆ ದೂರವನ್ನು ಇಟ್ಟುಕೊಂಡಿರುತ್ತಾರೆ. ಎರಡನೆಯ ಗುಂಪಿನಲ್ಲಿ ಗಂಡಿನ ಅಡಿಯಾಳಾಗಿ ಅವನ ಹಿಂದೆ ನಡೆಯುವ ದೇವತೆಗಳು. ಇಲ್ಲಿ ಸರಸ್ವತಿ, ಲಕ್ಷ್ಮಿ, ಪಾರ್ವತಿ, ಇಂದ್ರಾಣಿ ಮುಂತಾದ ದೇವತೆಯರನ್ನು ಗುರುತಿಸಿಕೊಳ್ಳಬಹುದು. ಅದೇ ರೀತಿ ಮೂರನೆಯ ಗುಂಪಿನಲ್ಲಿ ಕ್ರೂರತೆಯೆಂದು ಹೇಳಲಿಕ್ಕಾಗದು, ಪ್ರಧಾನವಾಗಿ ಸೌಮ್ಯತೆಯನ್ನೆ ತನ್ನಲ್ಲಿ ಇಟ್ಟುಕೊಂಡು ಆದಿಶಕ್ತಿ ಸ್ವರೂಪದ ದೇವತೆಗಳಾಗಿ ಅಂದರೆ ಬೇಡಿದ್ದನ್ನೆಲ್ಲಾ ಕೊಡುವ ದೇವತೆಯ ರೂಪವಾಗಿ ಕಂಡುಬರುತ್ತಾರೆ.ಕಾಮಧೇನುವಾಗಿ ಬೇಡಿದ್ದನ್ನೆಲ್ಲಾ ಕೊಡುವ, ದುಷ್ಟಶಿಕ್ಷಣ ಶಿಷ್ಟರಕ್ಷಣೆಯ ದೇವತೆಯಾಗಿ ಕಂಡುಬರುವ ಮಹಿಷಮರ್ದಿನಿ, ದುರ್ಗೆಯ ರೂಪಗಳನ್ನು ಇಲ್ಲಿ ಗುರುತಿಸಬಹುದು.

ಉಗಮ ಹಂತದಲ್ಲಿ ಫಲ, ಸಂತಾನರಕ್ಷಣೆಯ ದೇವತೆಯಾಗಿ ಮಾತ್ರ ಕಂಡುಬಂದರೆ, ವಿಕಾಸದ ಹಂತದಲ್ಲಿ ಹೆಂಡತಿಯರಾಗುವ, ಮಗಳಾಗುವ, ಪತಿಪರಾಯಣೆಯಾಗುವ ಲಕ್ಷಣಗಳನ್ನು ತೋರಿಸುತ್ತವೆ. ಆ ಮೂಲಕ

ತನ್ನ ಸಂಪೂರ್ಣವಾದ ಅಸ್ತಿತ್ವವನ್ನು ಕಳೆದುಕೊಳ್ಳಲಿಕ್ಕೆ ಕಾರಣಗಳೇನು? ಅದೇ ರೀತಿ ಉಗಮದ ಹಂತದಲ್ಲಿ ಇಡೀ ವಿಶ್ವದಲ್ಲೆ ಪ್ರಮುಖವಾಗಿ ಕಂಡುಬಂದ ದೇವತೆಗಳು ವಿಕಾಸದ ಹಂತದಲ್ಲಿ ಯಾಕೆ ತಮ್ಮ ಸ್ಥಾನವನ್ನು ಕಳೆದುಕೊಂಡುವು? ಎಂಬಂತಹ ಪ್ರಶ್ನೆಗಳನ್ನು ಕೇಳಿಕೊಳ್ಳಬಹುದು. ಇದಕ್ಕೆ ಪ್ರಮುಖವಾದ ಅಂಶಗಳನ್ನು ಗುರುತಿಸಬಹುದು. ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಆದ ಬದಲಾವಣೆಗಳು. ಅದರಲ್ಲಿ ಮೊದಲನೆಯದು ಮಾತೃ ವ್ಯವಸ್ಥೆಯಿಂದ ಪಿತೃಪ್ರಧಾನ ವ್ಯವಸ್ಥೆಗೆ ಸಮಾಜ ಸ್ಥಿತ್ಯಂತರವಾಗಿದ್ದು ಮಾತೃದೇವತೆಯ ಬೆಳವಣಿಗೆಯಲ್ಲಿ ಪ್ರಮುಖವಾದ ಪಾತ್ರವಹಿಸಿರುವುದನ್ನು ನೋಡಬಹುದು. ಹೀಗೆ ಸ್ಥಿತ್ಯಂತರಗೊಂಡ ಸಮಾಜದಲ್ಲಿ ಆದ ಬದಲಾವಣೆಗಳು. ಅಂದರೆ ಅದು ಜಾತಿ ವ್ಯವಸ್ಥೆಯಾಗಿರಬಹುದು, ಮದುವೆ ಪದ್ಧತಿಯ ಅಳವಡಿಕೆಯಾಗಿರಬಹುದು, ಕುಟುಂಬ ವ್ಯವಸ್ಥೆಯಾಗಿರಬಹುದು. ಅಥವಾ ಆರ್ಥಿಕವಾಗಿ ಗಂಡು ಸಬಲನಾಗುವುದರ ಮೂಲಕ ಸಮಾಜವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವ ಮೂಲಕ ಮಾತೃದೇವತೆಯ ಆರಾಧನೆಯನ್ನು ತನ್ನ ವಶಕ್ಕೆ ತೆಗೆದುಕೊಂಡಿರುವ ಹಾಗೆ ಕಂಡುಬರುತ್ತದೆ.

ಇಲ್ಲಿ ಎಲ್ಲವನ್ನೂ ಇದೇ ದೃಷ್ಟಿಯಿಂದ ನೋಡಲಿಕ್ಕಾಗುವುದಿಲ್ಲ. ಕಾರಣ ಕೆಲವು ವೇಳೆ ಗಂಡು ತನ್ನ ಪಾರಮ್ಯವನ್ನು ತೋರಿಸಿದರೂ ಸಹ ಅದು ಎಲ್ಲೋ ಆಳದಲ್ಲಿ ಹೆಣ್ಣಿನ ಪಾರಮ್ಯವು ಉಳಿದುಕೊಂಡು ಬಂದಿರುವುದಿದೆ. ಶಿವನ ಸಹಾಯವಿಲ್ಲದೆ ಗಣೇಶನ ಜನನ ಹುಟ್ಟಿಸುವ ಕ್ರಿಯೆ ಪುರುಷನನ್ನು ತಿರಸ್ಕರಿಸುವುದೇ ಆಗಿದೆ. ಅಲ್ಲದೆ ವಾಮಾಚಾರದ ಆರಾಧನೆಯಲ್ಲಿ ಪುರುಷ ಸ್ತ್ರೀಯಾಗಿಯೇ ಆಚರಣೆ ಮಾಡಬೇಕು. *ಆಚಾರಭೇದತಂತ್ರ* ಹೇಳುವಂತೆ

> ಪಂಚತತ್ತ್ವಂ ಖಪುಷ್ಪಂಚ ಪೂಜಯೇತ್ ಕುಲಯೋಷಿತಂ
> ವಾಮಾಚಾರೊ ಭವೆತ್ತತ್ರ ವಾಮಾ ಭೂತ್ವಾ ಯಜೇತ್ ಪರಾಂ

ವಾಮಾ ಎಂದರೆ ಹೆಣ್ಣು. *ದೇವಿಭಾಗವತ* ಹೇಳುವಂತೆ ಹೆಣ್ಣಿನ ರೂಪವನ್ನು ಧರಿಸಿದರೆ ಮಾತ್ರ ವಿಷ್ಣು ಹಾಗೂ ಶಿವನು ಕೂಡಾ ಆದಿಪರಾಶಕ್ತಿಯನ್ನು ನೋಡಲು ಸಾಧ್ಯ. ಈ ರೀತಿಯ ಸಂಘರ್ಷಗಳನ್ನು ಆಧುನಿಕ ಹಾಗೂ ಪ್ರಾಚೀನ ಪಂಡಿತರು ಗುರುತಿಸಿದ್ದಾರೆ. ಆರ್. ಜಿ. ಭಂಡಾರ್ಕರ್ ಅವರು ಶಕ್ತಿಯ ಆರಾಧನೆಯನ್ನು ಸ್ತ್ರೀಪ್ರಧಾನ ನೆಲೆಯಲ್ಲಿಯೇ ಗುರುತಿಸುತ್ತಾರೆ.

> The ambition of every pious follower of the system is to become identical with Tripurasundari, and one of his religious exercises it to habituate himself to think that God is a woman. Thus the followers of the Sakti school justify their

> appellation by the belief that god is a woman and it ought to be the aim of all to become a woman.[೧]

ಆರ್ಯಪೂರ್ವ ಭಾರತದಲ್ಲಿ ಸ್ತ್ರೀಯರ ಧಾರ್ಮಿಕ ಕ್ಷೇತ್ರದಲ್ಲಿ ಪಾತ್ರ ಹೇಗಿತ್ತು ಎಂಬುದನ್ನು ನೋಡಲು ಯಾವುದೇ ಆಧಾರಗಳಿಲ್ಲ. ಆದರೆ ಶಾಕ್ತ ಪಂಥವು ಆದಿಮತೆಯನ್ನು ಹೊಂದಿರುವುದರಿಂದ ಈ ಕಾಲಕ್ಕೆ ಮಹಿಳೇ ಪ್ರಾಧಾನ್ಯತೆ ಇತ್ತು ಎಂದು ಗ್ರಹಿಸಬಹುದು. ಸ್ಥಳೀಯ ಧಾರ್ಮಿಕ ಚರಿತ್ರೆಯನ್ನು ಗಮನಿಸಿದಾಗಲೂ ಸಹ ಸ್ತ್ರೀಯರು ಗ್ರಾಮ ಸಮಾಜದಲ್ಲಿ ಪ್ರಮುಖ ಪಾತ್ರವಹಿಸಿರುವುದರಿಂದಲೇ ಶಕ್ತಿ ಆರಾಧನೆಯು ಪ್ರಭಲವಾಗಿ ಕಂಡುಬರುತ್ತದೆ. ಅವಳನ್ನು ಇಡೀ ಮಾನವ ಶಕ್ತಿಯ ಸ್ವರೂಪವಾಗಿ ನೋಡಲಾಗಿದೆ. ಅಲ್ಲದೆ ಸ್ತ್ರಿ ಜನನಾಂಗವು ಇಡೀ ಮನುಷ್ಯನ ಸುಖ ಸಮೃದ್ಧಿಯ ಸ್ಥಾನವನ್ನಾಗಿ ನೋಡಲಾಗಿದೆ. ಪೂಜಾರಣಿಯಾಗಿ ಅಥವಾ ಭೂತ ಪ್ರೇತಗಳನ್ನು ಒಲಿಸಿಕೊಳ್ಳುವ ಶಕ್ತಿಯು ಸ್ತ್ರೀಗೆ ಮಾತ್ರ ಇದೆ ಎಂದು ನಂಬಿದ ಕಾಲವೊಂದಿತ್ತು. ಆ ಕಾರಣದಿಂದಲೇ ಸ್ತ್ರೀಗೆ ಸಮಾಜದಲ್ಲಿ ಪ್ರಮುಖಸ್ಥಾನವನ್ನು ಕೊಡಲಾಗಿತ್ತು. ಧಾರ್ಮಿಕ ವಿಶ್ವಕೋಶಲ್ಲಿ ಹೇಳಿರುವಂತೆ:

> Female deities have often enjoyed the highest place among the gods. This depends upon the nature of social orgnaisation and the respect in which women are held. Clan life in which the Mother is the head of the group is likely to lift the Mother Goddess into a spureme position.[೨]

ಮಾತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಹೊರಜಗತ್ತಿನಲ್ಲಿ ನಡೆಯುವ ಹೋರಾಟವೊಂದನ್ನು ಬಿಟ್ಟು ಉಳಿದ ಎಲ್ಲಾ ಕೆಲಸಗಳನ್ನು ಅಂದರೆ ಮಕ್ಕಳ ಪೋಷಣೆಯಿಂದ ಹಿಡಿದು ಹಣಕಾಸಿನ ಸ್ಥಿತಿಗತಿಗಳನ್ನು ಸ್ತ್ರೀಯರೇ ನೋಡಿಕೊಳ್ಳುತ್ತಿದ್ದರು. ಆ ಕಾರಣದಿಂದಲೆ ಮಕ್ಕಳನ್ನು ಗುರುತಿದ್ದುದು ತಾಯಿ ಕಡೆಯಿಂದ. ಸಮುದಾಯಗಳಲ್ಲಿ ವಾಸಮಾಡುತ್ತಿದ್ದಾಗ ಗಂಡಿನ ಮಹತ್ವವು ತಿಳಿಯುತ್ತಿರಲಿಲ್ಲ. ಗಂಡೇ ಹುಟ್ಟಿಗೆ ಕಾರಣ ಎಂಬ ಅಂಶ ತಿಳಿದಾಗಲೂ ಸಹ ತಾಯಿಯು ಕುಟುಂಬ ವ್ಯವಸ್ಥೆಯ ಮೇಲೆ ಹೊಂದಿದ ಹಿಡಿತ ಕಡಿಮೆಯಾಗಿರಲಿಲ್ಲ. ಸಮುದಾಯಗಳ ಆಚರಣೆಗಳು ಅದರಲ್ಲೂ ಕೃಷಿಯ ಮೇಲಿನ ಅವಲಂಬನೆಯ ಹಂತದಲ್ಲಿಯಂತೂ ಹೆಣ್ಣು ಪ್ರಭುತ್ವವನ್ನು ಸಾಧಿಸಿದ್ದಳು. ಗಳಿಕೆಯ ಮೂಲಗಳೆಲ್ಲವೂ ತಾಯಿಯ ಮೂಲಕವೆ ನಡೆಯುತ್ತಿದ್ದ ಕಾರಣ ಹೆಣ್ಣು ಪ್ರಮುಖವಾಗಿದ್ದಳು. ಕೃಷಿ ಒಂದು ಹಂತದಲ್ಲಿ ದೊಡ್ಡ ಪ್ರಮಾಣದಲ್ಲಿ ಬಳಕೆಯಾದಾಗ ಒಡೆತನದ ಪ್ರಶ್ನೆ ಹುಟ್ಟಿತೆಂದು ತೋರುತ್ತದೆ.ಸಂಪತ್ತಿನ ಕ್ರೋಢಿಕರಣ ಹೊಂದಲು ಕೃಷಿ ಅವಕಾಶ ಮಾಡಿಕೊಟ್ಟಿತು. ಕೃಷಿಯು

ಹೆಚ್ಚಿನ ಪ್ರಮಾಣದಲ್ಲಿ ವ್ಯಾಪಿಸುತ್ತಿದ್ದಂತೆ ಭೂಮಿಯ ಹುಡುಕಾಟಕ್ಕೆ ಗಂಡು ತೊಡಗಿರಬೇಕು. ಭೂಮಿಯನ್ನು ಹೊಂದಲು ಹೋರಾಟ ಮಾಡಬೇಕಾಗುತ್ತಿತ್ತು. ಒಂದು ಸಮುದಾಯದಿಂದ ಇನ್ನೊಂದು ಸಮುದಾಯಗಳ ಮೇಲೆ ನಿರಂತರವಾದ ಹೋರಾಟ ಗಂಡಿನ ಅವಲಂಬನೆಗೆ ಎಡೆಮಾಡಿಕೊಟ್ಟಿರಬೇಕು. ಭೂಮಿ ಮತ್ತು ಅದಕ್ಕೆ ಸಂಬಂಧಿಸಿದಂತೆ ಪಶುಸಂಪತ್ತು, ಹಾಗೂ ಹೆಣ್ಣನ್ನು ಹೊಂದಲು ಯುದ್ಧಗಳು ಆರಂಭವಾಗಿರಬೇಕು. ಹೀಗೆ ಗಂಡು ತನ್ನ ಪ್ರಭುತ್ವವನ್ನು ಹೊಂದಲು ಅವಕಾಶ ಸಿಕ್ಕಿತು. ಆ ಕಾರಣದಿಂದಲೇ ತಾಯಿಯು ತನ್ನ ಸ್ಥಾನವನ್ನು ಕಳೆದುಕೊಳ್ಳಲು ಸಾಧ್ಯವಾಯಿತು. ತಾಯಿಯ ಸ್ಥಾನ ಕಳೆದುಕೊಂಡಿದ್ದರಿಂದ ಸಮುದಾಯಗಳಲ್ಲಿ ದೇವತೆಯರು ತಮ್ಮ ಸ್ಥಾನವನ್ನು ಎರಡನೆಯ ಸ್ಥಾನಕ್ಕೆ ಬಿಟ್ಟುಕೊಡಬೇಕಾಯಿತು. ಪೂಜಾರಿಣಿಯ ಸ್ಥಾನವಾಗಿರಬಹುದು, ಕುಟುಂಬದ ಸ್ಥಾನವಾಗಿರಬಹುದು, ಅಥವಾ ಉಚ್ಚಸ್ಥಾನವನ್ನು ಹೊಂದಿರುವ ದೇವತೆಯಾಗಿರಬಹುದು ಈ ಎಲ್ಲವೂ ತಮ್ಮ ಸ್ಥಾನಮಾನವನ್ನು ಕಳೆದುಕೊಳ್ಳಲು ಪ್ರಾರಂಭವಾಯಿತು. ಮಾತೃಕೇಂದ್ರಿತವಾದ ಸಮಾಜದಿಂದ ಪಿತೃಪ್ರಧಾನ ವ್ಯವಸ್ಥೆಗೆ ಸ್ಥಿತ್ಯಂತರಗೊಂಡಾಗ ವಿಶ್ವದ ಎಲ್ಲಾ ಸಂಸ್ಕೃತಿಗಳಲ್ಲಿ ಮಾತೃದೇವತೆಯ ಸ್ಥಾನ ಕೆಳಗಿಳಿದಿರುವುದನ್ನು ಕಾಣಬಹುದು. ಸೆಮಿಟಿಕ್ ಮೂಲದ ಜನಾಂಗಗಳಾದ ಅರಮಿಯನ್, ಫಿನಿಷಿಯನ್, ಅರಬ್, ಮತ್ತು ಅಸ್ಸೀರಿಯನ್ ಜನಾಂಗಗಳ ಸಮಾಜಿಕ ಪದ್ಧತಿಯಲ್ಲಿ ಪಿತೃಪ್ರಧಾನ ಸಮಾಜಕ್ಕಿಂತ ಮಾತೃ ಪ್ರಧಾನ ಸಮಾಜದ ಮೂಲಕವೇ ಅಂತಸ್ತಿನ ಪ್ರಭಾವ ನಡೆಯುತ್ತಿತ್ತು.

> There is a large body of evidence to show that the Semites before their separation passed through a matriarchal form of society. All those traits which are the oldest and most permanent in the character of Ashtart-Ishtar are those which for other resons we must predicate of the anicent Semitic tribal mother.[೩]

ಪ್ರೇಝರ್ ಅವರು ಕೂಡಾ ಪ್ರಾಚೀನ ಸೆಮಿಟಿಕ್ ಜನಾಂಗಗಳಲ್ಲಿ ಮಾತೃ ಪ್ರಧಾನ ಸಮಾಜದ ವ್ಯವಸ್ಥೆಯಿದ್ದದ್ದನ್ನು ಸಮರ್ಥಿಸುತ್ತಾರೆ.ಪ್ರಾಚೀನ ಪುರಾತತ್ತ್ವ ದಾಖಲೆಗಳ ಆಧಾರದಿಂದ ಇದನ್ನು ಸಮರ್ಥಿಸುತ್ತಾರೆ.

> In later times father kin had certainly displaced mother-kin among the Semitic worshippers of Astarte, and probably the same change had taken place among the Phrygian worshippers of Cybele. Yet the older custom lingered in Lycia down to the historical period; and we may conjecture that in former times it was widely spread through Asia Minor.[೪]

ಪಿತೃಪ್ರಧಾನ ವ್ಯವಸ್ಥೆಗೆ ಹೋದಾಗ ಹಲವಾರು ಬದಲಾವಣೆಗಳು ಆದದ್ದನ್ನು ಕಾಣಬಹುದು. ನಾರಿಯರ ಸ್ಥಾನ ಮಾನಗಳು ಬಿದ್ದುಹೋದವು. ಅಲ್ಲದೆ ಅವರು ಒಂದು ರೀತಿಯ ದಾಸ್ಯದ ಬದುಕನ್ನು ಹೊಂದುವುದೇ ಆಗಿದೆ. ಅರೇಬಿಯನ್ ಕತೆಗಳಲ್ಲಿ ಪುರುಷ ದೇವತೆಗಳು ಹಾಗೂ ಸ್ತ್ರೀ ದೇವತೆಗಳು ಜೋಯಾಗಿ ಬರುತ್ತಾರೆ ಇಲ್ಲಿ ಸ್ತ್ರೀ ದೇವತೆಯೇ ಹಿರಿದಾದ ಸ್ಥಾನವನ್ನು ಪಡೆದಿರುತ್ತಾಳೆ ಮತ್ತು ದೇವರುಗಳು ಅವಳ ಮಿಥ್ಯಾ (the god cannot be her baal) ರೂಪವಾಗಿರುವುದಿಲ್ಲ. ಅಲ್ಲದೆ, ಹಲವುಬಾರಿ ಮಾತೃದೇವತೆಯು ಪತ್ನಿಯಾಗದೆ ತಾಯಿಯಾಗಿ ಕಂಡು ಬರುತ್ತಾಳೆ. ದೇವರು ಅವಳ ಮಗು.ಮುಂದುವರೆದು ಇದು ಸ್ತ್ರೀದೇವತೆಯು ಪುರುಷ ದೇವತೆಯಾಗಿ ಮಾರ್ಪಾಡಾಗುವುದನ್ನು ಕಾಣಬಹುದು. ಅಲ್ಲದೆ, ತಿರಸ್ಕಾರಕ್ಕೂ ಕಾರಣವಾಗುವುದನ್ನು ಕಾಣಬಹುದು. ಇಜಿಪ್ಷಿನ್ ಇತಿಹಾಸದಲ್ಲಿಯೂ ಈ ರೀತಿಯ ಬೆಳವಣಿಗೆಯನ್ನು ಗುರುತಿಸಲಾಗಿದೆ.

> The union of Osiris with his sister Isis was not a freak of the story-teller's fancy: It reflected a social custom which was itself based upon practical considerations of the most solid kind. When we reflect that this practice of mother-kin as opposed to father-kin survived down to the latest times of antiquity, not in an obscure or barbarous tribes, but in a nation whose immemorial civilisation was its glory and wonder of the world, we may without being extravagant, suppose that a similar practice formerly prevailed in Syria and Phrygia, and that it accounts for a superiority of goddess over the god in the divine partnership of Adonis and Astrate, of Attis and Cybele.[೫]

ಭಾರತದ ಆರ್ಯ ಪೂರ್ವ ಸಮಾಜದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಯಾವುದೇ ಆಕರಗಳಿಲ್ಲ. ಇಂದಿನ ಹಲವಾರು ಬುಡಕಟ್ಟುಗಳ ಸಮಾಜವನ್ನು ನೋಡಿದಾಗ ಮಾತೃ ಪ್ರಧಾನ ಸಮಾಜದ ಹಲವಾರು ಅಂಶಗಳು ಕಂಡುಬರುತ್ತವೆ. ಹಾಗೂ ಆರ್ಯ ಅಥವಾ ವೈದಿಕ ಪ್ರಭಾವ ಇದ್ದಾಗಲೂ ಸಹ ಇಂದಿಗೂ ಮಾತೃಪ್ರಧಾನ ಸಮಾಜದ ಬೇರುಗಳನ್ನು ಹಲವಾರು ಬುಡಕಟ್ಟುಗಳು ಉಳಿಸಿಕೊಂಡು ಬಂದಿರುವ ಹಾಗೆ ಕಂಡುಬರುತ್ತದೆ. ಉದಾಹರಣೆಗೆ, ಈಶಾನ್ಯ ಹಾಗೂ ವಾಯುವ್ಯ ಭಾರತದ ಗಡಿಗಳಲ್ಲಿ ಇಂದಿಗೂ ಕಂಡುಬರುತ್ತದೆ. ಈಶಾನ್ಯ ಭಾರತದ ಖಸಿಸ್ ಜನಾಂಗಗಳಲ್ಲಿ ಇಂದಿಗೂ ಮಾತೃಪ್ರಧಾನ ವ್ಯವಸ್ಥೆ ಕಂಡುಬರುತ್ತದೆ. ಅಲ್ಲದೆ ಕೇರಳದ ನಾಯರ ಅಥವಾ ತರ್ವಾಡ ಎಂದು ಕರೆಯುವ ಜನಾಂಗದಲ್ಲಿ ತಾಯಿಯೇ

ಪ್ರಧಾನ ಪಾತ್ರವಹಿಸುತ್ತಾಳೆ. ಹಿರಿಯ ಮಗಳಿಗೆ ತಾಯಿ ಆಸ್ತಿಯ ಬಹುಭಾಗ ದೊರಕುತ್ತದೆ. ಅಂತೆಯೆ, ಖಸಿಸ್ ಜನಾಂಗದಲ್ಲಿ ಪೂಜಾರಿಣಿ (ಲ್ಯಾನ್ಗಡೊಹ್)ಯು ಧಾರ್ಮಿಕ ಕಾರ್ಯಕ್ರಮಗಳಲ್ಲಿ ತುಂಬಾ ಮುಖ್ಯಳಾಗಿರುತ್ತಾಳೆ. ಅವಳ ಸಹಾಯಕನಾಗಿ ಒರ್ವ ಪುರುಷನಿರುತ್ತಾನೆ.ಒಂದು ವೇಳೆ ಅವನಿಗೆ ಸರಿಯಾದ ಸಂಬಂಧವನ್ನು ಹೊಂದಿರದ ಹೆಣ್ಣು ಇರದಿದ್ದರೆ ಅವನು ಈ ಪೂಜಾರಿಯ ಸ್ಥಾನವನ್ನು ಆಗ ಬಿಡಬೇಕಾಗುತ್ತದೆ.[೬]

ವಾಯುವ್ಯ ಭಾರತದ ಗರೋ ಜನಾಂಗದಲ್ಲಿಯೂ ಸಹ ಮಾತೃಪ್ರಧಾನ ವ್ಯವಸ್ಥೆಯನ್ನು ನೋಡಬಹುದು. ಇಲ್ಲಿಯೂ ತಾಯಿಯ ಮೂಲಕವೇ ಕುಟುಂಬದ ಹಿರಿಯ ಮಗಳಿಗೆ ಆಸ್ತಿಯ ಹಕ್ಕು ದೊರಕುತ್ತದೆ. ಅಲ್ಲದೆ ಗಂಡಿಗೆ ಇಲ್ಲಿ ಪ್ರಧಾನವಾದ ಸ್ಥಾನವನ್ನು ಕೊಡಲಾಗಿಲ್ಲ. ಇಲ್ಲಿಯ ಕುಟುಂಬಗಳನ್ನು ಮಹಾರಿಯರು ಎಂದು ಕರೆಯಲಾಗುತ್ತದೆ. ಮಹಾರಿಯ ಎಂದರೆ ಮಾತೃಮೂಲದವನೆಂದು ಅರ್ಥೈಯಿಸಲಾಗಿದೆ. ಕೇರಳದಲ್ಲಿಯ ನಾಯರ್‌ಗಳಲ್ಲಿ ಮಾತೃವಂಶೀಯ ಕುಟುಂಬ ವ್ಯವಸ್ಥೆಯಿದ್ದು, ಇದನ್ನು ಕುಟುಂಬಗಳನ್ನು ತರವಾಡು ಎಂದು ಕರೆಯಲಾಗುತ್ತದೆ. ಈ ತರವಾಡದಲ್ಲಿ ಒಬ್ಬ ಸ್ತ್ರೀ, ಆಕೆಯ ಗಂಡು, ಮತ್ತು ಹೆಣ್ಣುಮಕ್ಕಳು, ಹಾಗೂ ಅವಳ ಹೆಣ್ಣುಮಕ್ಕಳ ಮಕ್ಕಳು ಇರುತ್ತಾರೆ. ತರವಾಡಿನಲ್ಲಿ ಮಕ್ಕಳೆಲ್ಲರಿಗೂ ಆಸ್ತಿಯಲ್ಲಿ ಪಾಲು ಇದೆಯಾದರೂ ಅದು ಅವಿಭಾಜ್ಯವಾದುದು. ಅಲ್ಲದೆ ನಯರಹೆಣ್ಣು ಅಮ್ಮಾಯಿಯು ಹಲವಾರು ಗಂಡಂದಿರನ್ನು ಹೊಂದುವ ಅವಕಾಶಗಳನ್ನು ಇಟ್ಟುಕೊಂಡಿದ್ದಾಳೆ. ಗಂಡುಗಳು ಯಾವಾಗಬೇಕಾದರೂ ಬಂದು ಇದ್ದು ಹೋಗಬಹುದು.[೭] ದಕ್ಷಿಣ ಭಾರತದ ಹಲವಾರು ಜನಾಂಗಗಳಲ್ಲಿಈ ಮಾತೃಪ್ರಧಾನ್ಯತೆಯನ್ನು ಕಾಣಬಹುದು. ಉದಾಹರಣೆಗೆ, ಅಂಬಟ್ಟನ್, ಅಂಪಲವಾಸಿ, ಚಕ್ಕಾರ್, ಕವಟಿ, ಕ್ರಿಷ್ಣವಕ್ಕರ್, ಕುಡುನಿ, ಕರುವಂ, ಕುರುಕಲ್, ಮಲಯರಾಯನ್, ಮಾರವನ್, ಮಳಯಾಳಿ, ಪಳಿಯಾನ್,ಪಣನ್, ಪರವನ್, ಪಟ್ಟರಿಯಾ, ಪುಷ್ಪಕನ್, ಪರಯಾನ್ ಪುಲಯನ್, ಸಮನ್ತನ್, ಉಲ್ಲದೊನ್, ವರಿಯಾರ್, ವಿಲ್ಲರು,ವಿಸ್ಕನ್, ಅಗಸ, ಬೇಡರು, ಬೆಸ್ತಾ, ಗುಡಿಗಾರ, ಹೆಳವ, ಹೊಲೆಯ, ಕುಂಬಾರ, ಮಾದಿಗ, ನಟ್ಟುವಾನರು, ವಣ್ಣನರು, ಚೆರುಮಾನ್, ಗೌಡರು, ಕಲ್ಲನ್, ಕಲಸಿ, ಕೊರಗರು, ಕೊಟ್ಟೆ, ವೆಲ್ಲಾಲರು, ಮಾಲಿ, ಮನ್ನನ್, ಮಾಪ್ಪಿನ, ತಿಯಾನ್,[೮] ಮುಂತಾದ ಜನಾಂಗಗಳು ದಕ್ಷಿಣ ಭಾರತದಲ್ಲಿ ಕಂಡುಬರುವ ಮಾತೃವಂಶೀಯರಾದರೆ, ಉತ್ತರ ಭಾರತದಲ್ಲಿ ಕಂಡುಬರುವ ಹಲಬಾ, ಕೈಕಾ, ಕರ್ಮಿ, ಮಾಂಗ್, ರಜ್ಜಹರ್, ಮೊದಲಾದ ಜನಾಂಗಗಳಲ್ಲಿ ಮಾತೃಪ್ರಧಾನ ಸಮಾಜವು ಇದೆ.[೯]

ಪ್ರಾಚೀನ ಭಾರತದದಲ್ಲಿ ಕಂಡುಬರುವ ಸ್ತ್ರೀ ಸಾಮ್ರಾಜ್ಯ ಅಥವಾ ಸ್ತ್ರೀ ರಾಜ್ಯಗಳನ್ನು ಕುರಿತಂತೆ ಹಲವಾರು ಪುರಾಣಗಳಲ್ಲಿ ಉಲ್ಲೇಖ ಕಾಣುತ್ತೇವೆ. ಗರುಡಪುರಾಣ ಹಾಗೂ ವಿಕ್ರಮಾಂಕದೇವ ಚರಿತೆಯಲ್ಲಿ ಈ ಬಗೆಯ ರಾಜ್ಯಗಳ ಉಲ್ಲೇಖವಿದೆ. ಅಲ್ಲೆ ಹುಯಾನ್‌ತ್ಸಂಗ್‌ನು ಈ ರೀತಿಯ ರಾಜ್ಯಗಳಿದ್ದುದನ್ನು ಹೇಳಿದ್ದಾನೆ. ಕೇರಳಕ್ಕೆ ಹೊಂದಿಕೊಂಡಂತೆ ಇರುವ ರಾಜ್ಯಗಳಲ್ಲಿ ಈ ಬಗೆಯ ಸ್ತ್ರೀ ಪ್ರಧಾನವಾದ ಸಮಾಜಗಳು ಹಾಗೂ ಅವರಿಂದಲೇ

ಆಡಳಿತ ನಡೆಯುತ್ತದೆ ಎಂದು ಮೆಗಸ್ತೆನಿಸ್ ಕೂಡಾ ಉಲ್ಲೇಖಿಸುತ್ತಾನೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಈ ಮಾತೃಪ್ರಧಾನವಾದ ಸಮಾಜವು ಆಳವಾಗಿ ಬೇರುಬಿಟ್ಟುಕೊಂಡಿರುವುದು ಇಂದಿಗೂ ಕಂಡುಬರುತ್ತದೆ. ಅದರಲ್ಲೂ ದಕ್ಷಿಣ ಭಾರತದಲ್ಲಿ ಅದೂ ಹೆಚ್ಚು ಆಳವಾಗಿರುವುದು ಇಲ್ಲಿ ಕಂಡುಬರುವ ಮದುವೆಯ ಆಚರಣೆಗಳು, ಕುಟುಂಬ ವ್ಯವಸ್ಥೆಗಳು, ಹಬ್ಬದ ಆಚರಣೆಗಳು ಸಾಬೀತುಪಡಿಸುತ್ತವೆ. ಅಲ್ಲದೆ ಗ್ರಾಮದೇವತೆಗಳು ಇದನ್ನು ಪುಷ್ಟೀಕರಿಸುತ್ತವೆ. ಒಟ್ಟಿನಲ್ಲಿ ಮಾತೃ ಸಮಾಜವು ಮಾತೃದೇವತೆಗಳ ಆರಾಧನೆಯಲ್ಲಿಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿತ್ತು ಎಂಬುದನ್ನು ತಿಳಿಯಬಹುದಾಗಿದೆ. ಜೆಮಸ್ ಅವರು ಹೇಳುವಂತೆ;

> Whether or not this reflects a primeval sysmtem of matriarchal social organization, as is by no means improbable, the fact remains that the goddess at first had precedence over the young god with whom she was associated as her son or husband or lover...That as infant is the offspring of the mother could never be in doubt, however its origin and generation may have been explained, if, indeed, there was any speculation on the subject in its physcial aspects. The role of the father might be very obscure and even non-existent, but that of the mother was not open to question, being merely a matter of observation... Woman with her inexplicable nature and unaccountable attributes and functions, such as menstruation, pregnancy, childbirth and lactation, has been a mysterious person, calling forth a numinous reaction and evaluation, permeated with religious sentiments, rendering her at once sacred and tabu.[೧೦]

ಮೊದಲೆ ಹೇಳಿದಂತೆ ಕೃಷಿ ಹಾಗೂ ಅದರ ಉಪಭೋಗಗಳಿಂದ ಮಾತೃಸಮಾಜ ತನ್ನ ಅವನತಿಯನ್ನು ಹೊಂದುತ್ತಾ ನಡೆದಂತೆ ಪಿತೃಪ್ರಧಾನ ಸಮಾಜದ ಕಡೆ ಮುಖ ಮಾಡಿತು. ಹೀಗೆ ಪಿತೃಪ್ರಧಾನ ವ್ಯವಸ್ಥೆಗೆ ಸ್ಥಿತ್ಯಂತರಗೊಂಡಾಗ ತಾಯಿಯ ಬದಲಾಗಿ ತಂದೆಗೆ ಹೆಚ್ಚು ಮನ್ನಣೆ ದೊರೆಯಿತು. ಮಾತೃಪ್ರಧಾನ ಸಾಮಾಜಿಕ ವ್ಯವಸ್ಥೆಯಿಂದ ಪಿತೃಪ್ರಧಾನ ವ್ಯವಸ್ಥೆಗೆ ಸ್ಥಿತ್ಯಂತರ ಗೊಂಡಿದ್ದನ್ನು *as the great historical defeat of the faminine sex* ಎಂದು ಹೇಳಲಾಗಿದೆ. ಕಾಲಕ್ರಮೇಣ ಸ್ತ್ರೀಯರ ಜೀವನದ ಸುವರ್ಣದಿನಗಳು ಮಾಯವಾಗುತ್ತಾ ಹೋದವು. ಪುರುಷ ಪ್ರಾಧಾನ್ಯತೆಯಿಂದ ಸ್ತ್ರೀಯರ ಮೇಲಿನ ಗೌರವ ಹಾಗೂ ಸ್ವಾತಂತ್ರಗಳು ಕಡಿಮೆಯಾಗುತ್ತಾ ಬಂದವು. ಗಂಡಿಗೆ ಯಾವ ರೀತಿಯಿಂದಲೂ ಸಮಾನಳಲ್ಲವೆಂದೂ, ಅವಳು ಮನೆಯ

ಕೆಲಸಮಾಡಲು ಮಾತ್ರ ಲಾಯಕಾದವದಳು ಅಲ್ಲದೆ ಮಕ್ಕಳನ್ನು ಪಡೆಯಲು ಗಂಡೇ ಪ್ರಮುಖ ಪಾತ್ರವಹಿಸುತ್ತಾನೆ, ಇಲ್ಲಿ ಹೆಣ್ಣಿನ ಪಾತ್ರವೇನು ಇಲ್ಲ ಎಂಬ ಅಂಶಗಳು ಪ್ರಮುಖವಾಗಿ ಹೆಣ್ಣಿನ ಗತಿ ಅಧೋಗತಿಗಿಳಿಯಿತು. ಗೃಹಕೃತ್ಯದ ಕೆಲಸಗಳಿಂದಾಗಿಯೇ ಮೊದಲು ಮನೆಯ ಯಜಮಾನಿಕೆಯಿನ್ನು ಹೊಂದಿದ್ದ ಹೆಂಗಸು ಈಗ ಆದೇ ಕೆಲಸಗಳಿಂದಾಗಿ ಮನೆಯಲ್ಲಿ ತನ್ನ ಪ್ರಥಮ ಸ್ಥಾನವನ್ನು ಕಳೆದುಕೊಳ್ಳಬೇಕಾಯಿತು. ಅಂದರೆ, ಈಗ ಗೃಹಕೃತ್ಯದ ಕೆಲಸಗಳು ತಮ್ಮ ಮೊದಲಿನ ಗೌರವವನ್ನು ಕಳೆದುಕೊಂಡವು. ಅಂದರೆ ಜೀವನಾವಶ್ಯಕ ವಸ್ತುಗಳನ್ನು ಸಂಗ್ರಹಿಸುವ ಗಂಡಸಿನ ಕೆಲಸವೇ ಪ್ರಾಮುಖ್ಯವಾಗಿ ಆದರ ಮುಂದೆ ಗೃಹಕೃತ್ಯವು ಪೇಲವವಾಯಿತು.[೧೧]

ಗಂಡಿಗೆ ಸಮಾಜವು ಸರ್ವ ಅಧಿಕಾರಗಳನ್ನು ಕೊಟ್ಟಿತು. ಆ ಮೂಲಕ ಹೆಣ್ಣು ಗಂಡಿಗೆ ಅಡಿಯಾಳಾಗಬೇಕಾಯಿತು. ಗಂಡು ಎಷ್ಟೇ ಕೆಟ್ಟವನಾಗಿರಲಿ ಪತಿಪರಾಯಣೆಯ ರೀತಿಯಲ್ಲಿ ಬದುಕಬೇಕಾಯಿತು. ಗಂಡು ಎಷ್ಟು ಬೇಕಾದರೂ ಹೆಣ್ಣುಗಳನ್ನು ಮದುವೆಯಾಗಬಹುದಾಗಿತ್ತು. ಆದರೆ ಹೆಣ್ಣಿಗೆ ಗಂಡನೊಬ್ಬನೆ, ಅವನೆ ದೈವವಾಗುವ ಮೂಲಕ ಪಾತಿವ್ರತ್ಯದ ಅಗತ್ಯತೆಯನ್ನು ಘಟ್ಟಿಗೊಳಿಸಲಾಯಿತು. ಹೆಣ್ಣು ಪ್ರಧಾನವಾದ ಸ್ಥಾನವನ್ನು ಹೊಂದಿದಾಗ ಸಮಾಜದ ಒಳಿತಿಗಾಗಿ ಗಂಡು ಬಲಿಯಾಗುತ್ತಿದ್ದ. ಆಗ ಗಂಡು ಸಂತಾನ ಕಡಿಮೆಯಾಗಿರಬೇಕು. ಆ ಕಾರಣದಿಂದ ಹಲವಾರು ಗಂಡಂದಿರನ್ನು ಹೊಂದಿರುತ್ತಿರಬೇಕು. ಆದರೆ, ಗಂಡಿನ ಪ್ರಾಬಲ್ಯದಿಂದ ಹೆಣ್ಣಿನ ದಹನ ಮಾಡಲು ತೊಡಗಿದ. "ಸ್ತ್ರೀಗೆ ಪಾತಿವ್ರತ್ಯವೊಂದೇ ಅಗತ್ಯವಾದ ಗುಣ ಎಂಬ ಭಾವನೆ ಬೆಳೆಯಿತು. ಅಂದರೆ, ಸ್ತ್ರೀ ಸಂಪೂರ್ಣ ಸಾಕ್ಷಾತ್ಕಾರ ಪಡೆಯುವುದು ಕೇವಲ ಪತಿವ್ರತೆಯಾಗಿದ್ದರೆ ಮಾತ್ರ, ಆದ್ದರಿಂದ ಸ್ತ್ರೀ ಪತಿವ್ರತೆಯಾಗಿರಬೇಕು ಎಂಬ ವಿಚಾರಕ್ಕೆ ಹೆಚ್ಚು ಪ್ರಾಶಸ್ತ್ಯ ದೊರಕಿತು. ಇದರಿಂದಾಗ ಅನೇಕ ಅನಿಷ್ಟ ಪರಿಣಾಮಗಳು ಉಂಟಾದವು. ಇದುವರೆಗೂ ರೂಢಿಯಲ್ಲಿದ್ದ ಗಂಡ ಸತ್ತಮೇಲೆ ಮತ್ತೊಬ್ಬನನ್ನು ಮದುವೆಯಾಗಬಹುದಾದ ವ್ಯವಸ್ಥೆಯು ತಪ್ಪಿಹೋಯಿತು. ಜೊತೆಗೆ ಪಾತಿವ್ರತ್ಯದ ಔನ್ನತ್ಯವು ಸಹಗಮನ ಪದ್ಧತಿಗೆ ಎಡೆಮಾಡಿಕೊಟ್ಟಿತು." [೧೨]

ಅಲ್ಲದೆ ಒಬ್ಬನಿಗೊಬ್ಬಳು ವ್ಯವಸ್ಥೆಯಿಂದ ಕ್ರಮೇಣ ಏಕಪತ್ನಿತ್ವದ ದಿಕ್ಕಿಗೆ ಬದಲಾವಣೆ ಇವುಗಳ ಮೂಲಕ ಗಂಡಸು ತನ್ನ ಸ್ಥಾನವನ್ನು ಭದ್ರಗೊಳಿಸುತ್ತಾ ಮುನ್ನಡೆದ. ಈ ಬೆಳವಣಿಗೆಯು ಹಳೆಯ ಮಾತೃಪ್ರಧಾನ ಪದ್ಧತಿಯಲ್ಲಿ ಬಿರುಕನ್ನು ತಂದಿತು. ಹೆಣ್ಣಿನ ಪಾವಿತ್ರ್ಯ ಮತ್ತು ವಿಧೇಯತೆ ಆಸ್ತಿಯ ಉತ್ತರಾಧಿಕಾರಿಯನ್ನು ಗುರುತಿಸುವಲ್ಲಿ ಉಪಯೋಗವಾದವು. ತಾಯಿಯ ಹಕ್ಕಿನ ಉತ್ಪಾಟನೆಯು ಮಹಿಳಾ ಜಗತ್ತಿನ ಚಾರಿತ್ರಿಕ ಸೋಲಾಯಿತು. ಮನೆಯ ಆಡಳಿತ ಸೂತ್ರವನ್ನು ಈಗ ಗಂಡಸೇ ಸ್ವಾಧೀನ ಪಡಿಸಿಕೊಂಡ. ಹೆಂಗಸು ಈಗ ಗುಲಾಮಳಾಗಿ ಗಂಡಸಿನ ಭೋಗದ ವಸ್ತು ಮಾತ್ರವಾಗಿ ಕೇವಲ ಮಕ್ಕಳನ್ನು ಹೆರುವ ಯಂತ್ರವಾಗಿ ಪರಿವರ್ತನೆಗೊಂಡಳು.

೫.೨. ವೇದಕಾಲದಲ್ಲಿ ಮಹಿಳೆಯರ ಸ್ಥಾನಮಾನ

ವೇದಗಳ ಕಾಲೀನ ಸಮಾಜವನ್ನು ಅರ್ಥೈಸಿಕೊಳ್ಳಲು ಹಲವಾರು ಆಕರಗಳಿದ್ದರು ಅವುಗಳನ್ನು ಅರ್ಥೈಸುವಾಗ ಹಲವಾರು ತೊಡಕುಗಳಿವೆ ಎಂದೇ ತೋರುತ್ತದೆ. ಯಾಕೆಂದರೆ ನಮಗೆ ಬೇಕಾದ ಹಾಗೆ ಅವುಗಳಿಗೆ ಅರ್ಥಕೊಡುವ ಸಾಧ್ಯತೆಗಳಿವೆ. ಆ ಕಾರಣದಿಂದಲೇ ಅವುಗಳಿಗೆ ಒಂದೇ ರೀತಿಯ ವ್ಯಾಖ್ಯಾನಗಳು ಕಂಡುಬರುವುದಿಲ್ಲ. ವೇದಗಳಲ್ಲಿ ಎರಡೂ ರೀತಿಯ ಅಂದರೆ ಹೆಣ್ಣಿನ ಒಳಿತನ್ನು ಗುರುತಿಸುವ ಹಾಗೆಯೆ ಕೆಲವು ನಿರ್ಬಂಧಗಳನ್ನು ಹಾಕಿರುವುದನ್ನು ಕಾಣಬಹುದು. ಋಗ್ವೇದದಲ್ಲಿ ಬಹುಪಾಲು ಹೆಣ್ಣನ್ನು ಗೌರವ ಭಾವನೆಯಿಂದಲೇ ನೋಡಿದೆ ಎನ್ನಬಹುದು. ಅದೇ ರೀತಿ ಕೆಲವು ಕಡೆ ಅವಳ ಸ್ಥಾನ ನೀಚಮಟ್ಟಕ್ಕಿಳಿದಿರುವುದನ್ನು ನೋಡಬಹುದು. ವೇದಗಳು ಒಂದೇ ಕಾಲದಲ್ಲಿ ರಚಿತವಾದವಲ್ಲ. ಹಲವಾರು ಜನರಿಂದ, ದೀರ್ಘಕಾಲದಲ್ಲಿ ರಚಿತವಾದವು. ಆದ್ದರಿಂದ ವೇದಗಳಲ್ಲಿ ಒಂದೇ ರೀತಿಯ ಸಮಾಜವನ್ನು ನೋಡಲು ಸಾಧ್ಯವಾಗುವುದಿಲ್ಲ. ಪುರುಷ ಕೇಂದ್ರಿತವಾದ ಸಮಾಜದಲ್ಲಿ ಕಂಡುಬರುವ ಹೆಣ್ಣಿನ ದಾಸ್ಯವನ್ನು ಇಲ್ಲಿಯೂ ಕಾಣಬಹುದು. ಋಗ್ವೇದದಲ್ಲಿ ಕಂಡುಬರುವ ಸಮಾಜಿಕ ವ್ಯವಸ್ಥೆಯು ಅಥರ್ವಣ ವೇದದಲ್ಲಿ ಕಂಡುಬರಲು ಸಾಧ್ಯವಿಲ್ಲ. ಇನ್ನೊಂದು ಅಂಶವನ್ನು ಗಮನದಲ್ಲಿ ಇಟ್ಟುಕೊಂಡು ನಾವು ಈ ಕ್ಷೇತ್ರಕ್ಕೆ ಕಾಲಿಡಬೇಕಾಗುತ್ತದೆ. ಅದೆಂದರೆ, ಈ ಕೃತಿಗಳು ಭಾರತೀಯ ಸಾಮಾಜಿಕ ಜೀವನವನ್ನು ಪ್ರಧಾನವಾಗಿ ಇಟ್ಟುಕೊಂಡು ರಚಿತವಾದವಲ್ಲ. ಅವುಗಳು ಆಚರಣೆ ಮತ್ತು ಬಲಿಗಳನ್ನು ಕುರಿತಂತೆ ಮಾಹಿತಿಯನ್ನು ಒದಗಿಸುತ್ತವೆ ಹೊರತು, ಸಾಮಾಜಿಕ ಜೀವನವನ್ನು ಕುರಿತು ಮಾಹಿತಿಯನ್ನು ಒಂದಗಿಸುವುದಿಲ್ಲ. ಅಲ್ಲೊಂದು ಇಲ್ಲೊಂದು ಕಡೆ ಜೀವನದ ಅಥವಾ ಸಂಸಾರದ ಬಗೆಗೆ ಹೇಳಲಾಗಿದೆ. ಅವುಗಳನ್ನು ಕ್ರೋಢೀಕರಿಸಿ ನೋಡಿದಾಗ ಅವುಗಳ ಒಟ್ಟಂದ ನಮಗೆ ತಿಳಿಯುತ್ತದೆ.

ಋಗ್ವೇದದ ಮೊದಲ ಭಾಗದ ಜನರು ಪಶುಪಾಲಕರಾಗಿದ್ದು, ಕೃಷಿಯ ಕಡೆ ಅಷ್ಟಾಗಿ ಒಲಿದಿರಲಿಲ್ಲ. ಆರ್ಯರಸಾಮಾಜಿಕ ವ್ಯವಸ್ಥೆಯು ಅವಿಭಕ್ತ ಕುಟುಂಬವಾಗಿತ್ತು. ಇಲ್ಲಿ ಸ್ತ್ರೀಯರು ಪುರುಷರಷ್ಟೆ ಸರಿಸಮಾನವಾದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಸ್ತ್ರೀಯರಿಗೆ ಪಶುಸಂಪತ್ತನ್ನು ಕಾಪಿಡುವುದು ಹೊಣೆಯಾಗಿತ್ತು. ಯಜ್ಞಯಾಗಾದಿಗಳಲ್ಲಿ ಭಾಗವಹಿಸುತ್ತಿದ್ದರಾದರು, ಸ್ವತಂತ್ರವಾಗಿ ಈ ಕಾರ್ಯಗಳನ್ನು ಮಾಡಲು ಅವರಿಗೆ ಯಾವುದೇ ಅಧಿಕಾರವಿರಲಿಲ್ಲ. ಯಜ್ಞವನ್ನು ಜೊತೆಯಾಗಿ ಮಾಡಿದಾಗ ಮಾತ್ರ ಅದರ ಫಲದೊರಕುತ್ತದೆ ಎಂದು ಋಗ್ವೇದದ ಮಂತ್ರಗಳು ತಿಳಿಸುತ್ತವೆ. ತನ್ನ ಪತ್ನಿಯ ಅನುಮತಿಯಿಂದಲೇ ಈ ಯಜ್ಞಗಳಲ್ಲಿ ಗಂಡು ಭಾಗವಹಿಸುತ್ತಿದ್ದರಾದರು, ಅದು ಸಂತಾನದ ವೃದ್ಧಿಗಾಗಿ ಮಾತ್ರ. ಹೆಣ್ಣು ಅಥವಾ ಹೆಂಡತಿಯನ್ನು ವೇದಗಳ ಕಾಲದಲ್ಲಿ ಮೂರು ರೀತಿಯಲ್ಲಿ ಹೆಸರಿಸುತ್ತದೆ. ಜಯ, ಜಾನಿ, ಮತ್ತುಪತ್ನಿಯೆಂದು.. ಜಯ ಎಂದರೆ, ಗಂಡನನ್ನು ಪ್ರೀತಿಸುವವಳು, ಜಾನಿ ಎಂದರೆ, ಮಕ್ಕಳ ತಾಯಿ ಎಂದು, ಹಾಗೂ ಪತ್ನಿಯು ಬಲಿ ಆಚರಣೆಗಳಲ್ಲಿ ಭಾಗವಹಿಸುವವಳೆಂದು.[೧೩]

ಋಗ್ವೇದದ ಹತ್ತನೆಯ ಮಂಡಲದಲ್ಲಿ ಬರುವ ಋಕ್‌ಗಳಲ್ಲಿ ಸ್ತ್ರೀಯನ್ನು ಯಾವ ರೀತಿಯಲ್ಲಿ ನೋಡಲಾಗಿದೆ ಎಂಬುದನ್ನು ತಿಳಿಸುತ್ತವೆ. ಋಗ್ವೇದದ ೧೦. ೮೫. ೨೩ ರಲ್ಲಿ ಬರುವ ಈ ಮಂತ್ರದಲ್ಲಿ ಕನ್ನೆಯ ತಂದೆಯು ಗಂಡಿನ ಬಳಿಗೆ ಕನ್ನೆಯನ್ನು ಪ್ರಾರ್ಥಿಸಲು ಹೋಗುವ ನಮ್ಮ ಮಿತ್ರರ ಮಾರ್ಗಗಳು ಕಂಟಕರಹಿತವಾಗಿಯೂ ನೇರವಾಗಿಯೂ ಇರುವಂತೆಯೂ, ಆರ್ಯಮನು ಭಗನೂ ನಮ್ಮನ್ನು ಸುಖಕರವಾದ ಮಾರ್ಗದಲ್ಲಿ ನೆಡೆಯಸುವಂತೆಯೂ ಕೇಳಿಕೊಳ್ಳುವ ಮಂತ್ರವಾಗಿದೆ.

ಅನೃಕ್ಷರಾ ಋಜವಃ ಸನ್ತು ಪನ್ಥಾ ಯೇಭಿಃ ಸಖಾಯೋ ಯನ್ತಿ ನೋ ವರೇಯಮ್
ಸಮರ್ಯಮಾ ಸಂ ಭಗೋ ನೋ ನಿನೀಯಾತ್ಸಂ ಜಾಸ್ಪತ್ಯಂ ಸುಯಮಮಸ್ತು ದೇವಾಃ [೧೪]

ಇನ್ನೊಂದು ಮಂತ್ರದಲ್ಲಿ ಪೂಷನು ಹೆಣ್ಣನ್ನು ಹಿಡಿದು ಗಂಡನ ಮನೆಗೆ ಕಳುಹಿಸಲಿ, ಅಶ್ವಿನಿ ದೇವತೆಗಳು ರಥದಲ್ಲಿ ಕರೆದುಕೊಂಡು ಹೋಗಲಿ, ಹೀಗೆ ಕರೆದುಕೊಂಡು ಹೋದ ನಂತರದಲ್ಲಿ ಈ ಹೆಣ್ಣು ಗಂಡನ ಮನೆಯನ್ನು ಬೆಳಗುವ, ಮನೆಯವರಿಗೆ ಸರಿಯಾದ ಮಾರ್ಗದರ್ಶಕಳಾಗಿರುವ, ತನ್ನ ಗಂಡನ ಮನಸ್ಸಿನ ಇಚ್ಛೆಗನುಗುಣವಾಗಿರುವದು ಹೆಣ್ಣಿನ ಕರ್ತವ್ಯವಾಗಿದೆಯೆಂದು ಹೇಳಲಾಗಿದೆ.

ಪೂಷಾ ತ್ವೇತೋ ನಯತು ಹಸ್ತಗೃಹ್ಯಾಶ್ವಿನಾ ತ್ವಾ ಪ್ರ ವಹತಾಂ ರಥೇನ
ಗೃಹಾನ್ಗಚ್ಛ ಗೃಹಪತ್ನೀ ಯಥಾಸೋ ವಶಿನೀ ತ್ವಂ ವಿದಥಮಾ ವದಾಸಿ [೧೫]

ಋಗ್ವೇದದ ಇನ್ನೊಂದು ಮಂತ್ರದಲ್ಲಿ ಮಕ್ಕಳನ್ನು ಹೊಂದಿ ಅವರೊಡನೆ ಪ್ರೀತಿಯಿಂದ ಇರಬೇಕು. ಮನೆಯನ್ನು ರಕ್ಷಿಸುವ ಜವಾಬ್ದಾರಿಯು ನಿನ್ನದಾಗಿರಲಿ, ಗಂಡನ ಮನಸ್ಸಿಗೆ ಸದಾ ಸುಖವನ್ನುಂಟು ಮಾಡುತ್ತಿರಬೇಕು. ವೃದ್ಧರಾದ ಮೇಲೆ ಮಕ್ಕಳಿಗೆ ಸರಿಯಾದ ಮಾರ್ಗದರ್ಶಕಳಾಗಿರಬೇಕು ಹೇಳಲಾಗಿದೆ.

ಇಹಂ ಉಪ್ರಿಯಂ ಪ್ರದಯಾ ತೇ ಸಮೃಧ್ಯತಾಮಸ್ಮಿನ್ ಗೃಹೇ ಗಾರ್ಹಪತ್ಯಾಯ ಜಾಗೃಹಿ
ಏನಾ ಪತ್ಯಾ ತನ್ವಂ ಸಂ ಸೃಜಸ್ವಾಧಾ ಜಿವ್ರೀ ವಿದಥಮಾ ವದಾಥಃ [೧೬]

ಗಂಡು ಹೆಣ್ಣನ್ನು ವರಿಸುವಾಗ ಹೇಳುವ ಮಾತು ಗಮನೀಯವಾದುದು. ಇಲ್ಲಿ ಹೆಣ್ಣನ್ನು ವರಿಸುವುದು ತಮ್ಮ ಶ್ರೇಯಸ್ಸಿಗಾಗಿ, ಆ ಕಾರಣದಿಂದ ಗಂಡಹೆಂಡತಿಯರು ಒಳ್ಳೆಯ ಸಂಬಂಧವನ್ನು ಹೊಂದಿ ಬಹುಕಾಲ ಬಾಳಬೇಕು. ಆ ಕಾರಣಕ್ಕಾಗಿ ದೇವತೆಗಳು ನಿನ್ನನ್ನು ನನಗೆ ದಾನಮಾಡಿದ್ದಾರೆ. ಉತ್ತಮ ಜೀವನ ನಡೆಸಲು ತಮ್ಮನ್ನು ಮದುವೆ ಮಾಡುತ್ತಿದ್ದಾರೆ ಎಂಬರ್ಥದ ಮಂತ್ರ ಋಗ್ವೇದದಲ್ಲಿ ಬರುತ್ತದೆ.

ಗೃಭ್ಣಾಮಿ ತೇ ಸೌಭಗತ್ವಾಯ ಹಸ್ತಂ ಮಯಾ ಪತ್ಯಾ ಜರ ದಷ್ಟಿರ್ಯಥಾಸಃ
ಭಗೋ ಆರ್ಯಮಾ ಸವಿತಾ ಪುರಸ್ಧಿರ್ಮಹ್ಯಂ ತ್ವಾದುರ್ಗಾರ್ಹ ಪತ್ಯಾಯ ದೇವಾಃ [೧೭]

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿಗೆ ಯಾವುದೇ ಸ್ವಾತಂತ್ರವಿರುವುದಿಲ್ಲ ಎಂಬುದು ಮುಂದೆ ಗೊತ್ತಾಗುತ್ತದೆಯಾದರೂ ಅದರ ಹೊಳವುಗಳು ಋಗ್ವೇದದಲ್ಲಿಯೇ ಕಂಡುಬರುತ್ತವೆ. ಉಪದೇಶವನ್ನು ಮಾಡುವ, ಅವಳು ಯಾವುದೇ ರೀತಿಯಲ್ಲಿ ಸಾಂಸಾರಿಕ ಚೌಕಟ್ಟನ್ನು ಮೀರಿ ಹೋಗದಿರುವಂತೆ ನಿರ್ಬಂಧಗಳನ್ನು ವಿಧಿಸುವುದು ಮುಂದಿನ ಧರ್ಮಶಾಸ್ತ್ರಗಳಲ್ಲಿ ಇವೆ. ಇಲ್ಲಿ ಆ ರೀತಿಯ ನಿರ್ಬಂಧಗಳಾಗಿರದೆ, ಉಪದೇಶದ ರೀತಿಯಲ್ಲಿ ಕಾಣುತ್ತವೆ. ಹೆಣ್ಣಿಗೆ ಹಲವಾರು ಉಪದೇಶದ ಮಾತುಗಳು ಋಗ್ವೇದದಲ್ಲಿ ಬರುತ್ತವೆ. ಅಂತ ಒಂದು ಮಂತ್ರ ಹೀಗಿದೆ. ಕೆಟ್ಟ ದೃಷ್ಟಿಯಿಲ್ಲದೆ ನೀನು ಗಂಡನನ್ನು ಸಮೀಪಿಸು. ಗಂಡನಿಗೆ ಕೇಡನ್ನು ಬಯಸಬೇಡ. ಪಶುಗಳಿಗೆ ಹಿತಕರಳಾಗಿರು. ಸುಮುಖವಾಗಿ ಒಳ್ಳೆಯ ವರ್ಚಸ್ಸುಳ್ಳವಳಾಗಿರು. ವೀರಪುತ್ರರನ್ನು ಪಡೆ. ದೇವಪೂಜೆಯಲ್ಲಿ ಆಸಕ್ತಿಯುಳ್ಳವಳಾಗಿರು.

ಅಘೋರಚಕ್ಷುರಪತಿಘ್ನ್ಯೇದಿ ಶಿವಾ ಪುಶುಭ್ಯ: ಸುಮನಾಃ ಸುವರ್ಚಾ
ವೀರಸೂರ್ದೇವಕಾಮಾ ಸ್ಯೋನಾ ಶಂ ನೋ ಭವ ದ್ವಿಪದೇ ಶಂ ಚತುಷ್ಪದೇ [೧೮]

ಇನ್ನೊಂದು ಮಂತ್ರದಲ್ಲಿ ಹೆಣ್ಣು ಸಂಸಾರವನ್ನು ನಿರ್ವಹಿಸುವದು, ತನ್ನ ಬಂಧುಗಳನ್ನು ಆಧರಿಸುವುದು, ಅವರ ಸೇವೆಯಲ್ಲಿ ನಿರತರಾಗಿರಬೇಕು ಎಂದು ಹೇಳುತ್ತದೆ. ಅದನ್ನು ಹೆಚ್ಚು ಗೌರವದಿಂದ ಹೇಳುವಲ್ಲಿರುವ ಹಿಂದಿನ ಅರ್ಥವು ಪರಾಧೀನತೆಯ ಅಪ್ರತ್ಯಕ್ಷ ರೂಪವೇ ಆಗಿದೆ. ಆ ಮಂತ್ರ ಹೀಗಿದೆ. ಮಾವನಿಗೆ ಸಾಮ್ರಾಜ್ಞಿಯಾಗಿರು ಅತ್ತೆಗೆ ಸಾಮ್ರಾಜ್ಞಿಯಾಗಿರು, ನಾದಿನಿಯರಿಗೆ ಮತ್ತು ಮೈದುನರಿಗೆ ಸಾಮ್ರಾಜ್ಞಿಯಾಗಿರು. ಮನೆಯಲ್ಲಿರುವ ಪರಿವಾರದವರೊಂದಿಗೆ ಗೃಹಪತ್ನಿಯ ಅಂದರೆ, ಮನೆಯೊಡತಿಯಂತೆ ಅಧಿಕಾರದೊಡನೆ ಮಾತನಾಡು ದ್ವಿಪದಿಗಳ ಮತ್ತು ಚತುಷ್ಪದಿಗಳ ಅಂದರೆ, ಪಶುಪಕ್ಷಿಗಳ ವಿಷಯದಲ್ಲಿ ಕಲ್ಯಾಣಿಯಾಗಿರು ಎಂದು ಹೇಳುತ್ತಲೇ ಸೇವೆಯನ್ನು ಮಾಡಲೇಬೇಕಾದ ಅನಿವಾರ್ಯತೆಯತ್ತ ನೂಕುತ್ತದೆ.

ಸಮ್ರಾಜ್ಞೇ ಶ್ವಶುರೇ ಭವ ಸಮ್ರಾಜ್ಞೇ ಶ್ವಶ್ರ್ವಾಂ ಭವ
ನನಾನ್ದರಿ ಸಮರಾಜ್ಞೀ ಭವ ಸಮ್ರಾಜ್ಞೀ ಅಧಿ ದೇವೃಷು [೧೯]

ಪತ್ನಿಯ ಸ್ಥಾನಮಾನಗಳು ಇಲ್ಲಿ ಉನ್ನತವಾಗಿ ಬಿಂಬಿಸಲಾಗಿದೆಯಾದರೂ ಅಂತರಾಳದಲ್ಲಿ ಎಲ್ಲಿಯೊ ಕೆಲವು ಅವನತಿಯ ಅಂಶಗಳೂ ಕಂಡುಬರುವುದದನ್ನು ಗಮನಿಸಬಹುದು. ಹಿಂದೆ ಹೇಳಿದಂತೆ ಈ ರೀತಿಯಲ್ಲಿ ಹೇಳುವಾಗಲೇ ಇದರ ಹಿಂದೆ ಯಾವುದೊ ಸೂಕ್ಷ್ಮಗಳು ಅಡಗಿವೆ ಅನ್ನಿಸದೆ ಇರದು. ಯಾಕೆಂದರೆ, ಹೆಣ್ಣು ತಂದೆಯ, ಗಂಡಿನ ಹಾಗೂ ಮಗನ ಸಂರಕ್ಷಣೆಯಲ್ಲಿಯೇ ಇರಬೇಕಾಗುವ ಅನಿವಾರ್ಯತೆ ಅವಳಿಗೆ ಈಗಾಗಲೆ ಬಂದೊದಗಿರುವ ಸಾಧ್ಯತೆಯು ಇಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ತಂದೆಯಾದವನು ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸುವಾಗಲೆಲ್ಲ ಈ ಉಪದೇಶಗಳು ಬೇಕಾಗುತ್ತವೆ. ಶಕುಂತಲೆಯನ್ನು ಬೀಳ್ಕೊಡುವಾಗ ಕಣ್ವರ

ಮಾತು ಈ ಮೇಲೆ ಉದ್ಧೃತವಾದ ಮಂತ್ರಗಳಲ್ಲಿ ಕಾಣುವುದಿಲ್ಲವೆ. ಹೀಗೆ ಹೇಳುವಾಗಲೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿಗೆ ಯಾವ ರೀತಿಯ ಸ್ಥಾನ ದೊರಕಿರುವುದನ್ನು ನೋಡಬಹುದು. "ನೀನು ಯಾವ ಪತಿಯನ್ನು ಪಡೆಯಬೇಕೆಂದು ಸೂರ್ಯೆಯು ಇಚ್ಛಿಸಿದ್ದಳೋ ಅಂಥ ಪತಿಗೇ ಸವಿತೃ ಅವಳನ್ನು ಒಪ್ಪಿಸಿದಳು ಎಂಬ ವರ್ಣನೆಯು ದಾಂಪತ್ಯದ ಪ್ರಥಮ ಸೋಪಾನ ಪರಸ್ಪರ ಪ್ರೇಮವೆಂಬುದನ್ನು ತಿಳಿಸುತ್ತದೆ. ಈ ಪ್ರೇಮ ಕೇವಲ ದೇಹ ಸೌಂದರ್ಯವನ್ನು ಅವಲಂಬಿಸಿರಬಾರದು. ಅದನ್ನು ಮೀರಿ ಇಬ್ಬರ ಹೃದಯ ಒಂದಾಗಬೇಕು" [೨೦] ಮಾತರಿಶ್ವಾದಿ ಸಕಲ ದೇವತೆಗಳೂ ನಮ್ಮಿಬ್ಬರ ಹೃದಯ ಒಂದಾಗಿ ಕಲೆಯುವಂತೆ ಅನುಗ್ರಹಿಸಲಿ.[೨೧] ನಾನು ಸಾಮ, ನೀನು ಋಕ್, ನಾನು ದ್ಯುಲೋಕ ನೀನು ಪೃಥ್ವಿ, ಎನ್ನುವ ಮಂತ್ರಗಳು ದಂಪತಿಗಳು ಅನನ್ಯ ಸಾಮರಸ್ಯ ಸಂಬಂಧವನ್ನು ವರ್ಣಿಸುತ್ತವೆ. ನನ್ನ ಸೌಭಾಗ್ಯಕ್ಕಾಗಿ ನಿನ್ನ ಕೈಯನ್ನು ಹಿಡಿಯುತ್ತೇನೆ. ಸುಮಂಗಲಿಯಾದ ನೀನು ಗೃಹವನ್ನು ಪ್ರವೇಶಿಸು.[೨೨] ಸಂತೋಷದಾಯಕಳಾದ ಪತ್ನಿಯಿಂದ ಯಾವಾಗಲೂ ವಿರಹವಿಲ್ಲದೆ ಪುತ್ರಪೌತ್ರಾದಿಗಳ ಜೊತೆಯಲ್ಲಿ ದೀರ್ಘಕಾಲ ಸಂತೋಷವನ್ನು ಅನುಭವಿಸುವುದಕ್ಕಿಂತ ಅಧಿಕವಾದ ಸೌಖ್ಯವಿಲ್ಲ[೨೩] ಎಂದು ಹೇಳಿದಾಗಲೂ ಅದರ ಪಕ್ಕದಲ್ಲಿಯೇ ಬಲವಂತವಾಗಿಯೂ ಸೆರೆ ಸಿಕ್ಕ ಹೆಂಗಸರನ್ನು ಬಲವಂತವಾಗಿ ಮದುವೆಯಾಗುವ ಪರಂಪರೆಯು ಇತ್ತು ಎಂಬುದನ್ನು ಗಮನಿಸಬೇಕಾಗುತ್ತದೆ. ಇಟ್ಟುಕೊಂಡ ಹೆಂಗಸಿನ ಜೀವ ಹಾಗೂ ಸ್ವಾತಂತ್ರಗಳಿಗೆ ಯಾವುದೆ ಬೆಲೆ ಇರಲಿಲ್ಲ.

ಅವಳೊಂದು ಭೋಗದ ವಸ್ತುವಾಗಿರುವುದು ವೇದಗಳಲ್ಲಿ ಕಂಡುಬರುತ್ತದೆ. ಇಂದ್ರನ ಬಗೆಗೆ ಹೇಳುವಾಗ ಅವನು "ನಮಗೆ ಬೇಕಾದ ಹೆಣ್ಣುಗಳನ್ನು ಕೊಡುವವನು. ಇಂದ್ರನಿಗಿಂತ ಮಿಗಿಲಾದವರು ಇಲ್ಲ. ಅವನು ಹೆಂಡತಿಯಿಲ್ಲದವರಿಗೆ ಹೆಣ್ಣುಗಳನ್ನು ಕೊಟ್ಟಿದ್ದಾನೆ. ಯುದ್ಧದಲ್ಲಿ ಗೆಲುವು ಪಡೆದವರು ಲೂಟಿಯ ವಸ್ತುಗಳಂತೆ ಹಾರಿಸಿತಂದ ಹೆಣ್ಣುಗಳನ್ನು ಹಂಚಿಕೊಳ್ಳುತ್ತಿದ್ದರು. ಹೆಣ್ಣೊಬ್ಬಳನ್ನು ಆಭರಣಗಳಿಂದ ಶೃಂಗರಿಸಿ ಗೆದ್ದವರ ಪಾಳೆಯಕ್ಕೆ ಒಪ್ಪಿಸಿದ"[೨೪] ಎಂಬಂತಹ ಪ್ರಸ್ತಾಪಗಳು ಋಗ್ವೇದದಲ್ಲಿ ಬಂದಿವೆ.ಅಲ್ಲದೆ ಋಗ್ವೇದದ ಹತ್ತನೆಯ ಮಂಡಲದಲ್ಲಿ ಹೆಣ್ಣನ್ನು ಜೂಜಿನಲ್ಲಿ ಪಣವಾಗಿ ಇಟ್ಟ ಸೂಚನೆಯನ್ನು ಕೊಡುತ್ತದೆ. ಜೂಜುಗಾರನು ಜೂಜಿನಲ್ಲಿ ಸೋತಾಗ ಪಣವಾಗಿ ಒಡ್ಡತೊಡಗಿದ್ದರು. ಅವನು ಸೋತಾಗ ಆ ಹೆಣ್ಣು ಇತರರು ಮುಟ್ಟುವ, ಚುಂಬಿಸುವ ವಸ್ತುಗಳಾಗುತ್ತಿದ್ದಳು. ಇಂತಹ ಜೂಜುಕೋರರ ಉಲ್ಲೇಖವು ಋಗ್ವೇದದ ಹಲವಾರು ಕಡೆ ಬರುತ್ತದೆ. ಸೂಳೆಯರು ಈ ಕಾಲಕ್ಕಾಗಲೇ ಸಾಕಷ್ಟು ಪ್ರಮಾಣದಲ್ಲಿ ಇದ್ದರು. ಪಿತೃಪ್ರಧಾನ ವ್ಯವಸ್ಥೆಯು ಸ್ವಚ್ಛಂದ ಹಾಗೂ ಸಹಜ ಪರಿಣಾಮವೇ ಈ ಸೂಳೆಯರನ್ನು ಮಾಡುವುದೇ ಆಗಿದೆ. "ಅಪ್ಸರೆಯರ ಬಗೆಗಿನ ಉಲ್ಲೇಖಗಳೂ ಬಹುಶಃ ಗಣಿಕೆಯರು ಎಂಬ ಅರ್ಥದಲ್ಲಿಯೇ ಬರುತ್ತದೆ. ಗಣಿಕೆಯರ ಒಂದು ವರ್ಗವೇ ಎದ್ದು ನಿಂತಿತ್ತು. ಉಷೆಯನ್ನು ಕುರಿತ ಹೇಳಿರುವ ಮಂತ್ರಗಳಲ್ಲಿ ತೆರೆದ ಎದೆಯಲ್ಲಿ ನರ್ತಿಸುವ ನಾರಿ" [೨೫] ಎಂದು ವರ್ಣಿಸಲಾಗಿದೆ. ಇದು

ಮುಂದೆ ನರ್ತಕಿಯರ ವರ್ಗವನ್ನು ಹುಟ್ಟುಹಾಕಲು ಕಾರಣವಾಗಿರಬಹುದು.

ಆರ್ಯ ಸಮಾಜದಲ್ಲಿ ಹೆಣ್ಣು ಹುಟ್ಟುವಾಗಲೆ ಪೂರ್ವಾಗ್ರಹ ತೋರಲಾಗಿದೆ. ಋಗ್ವೇದ ಹಾಗೂ ಅಥರ್ವಣ ವೇದಗಳಲ್ಲಿ ಹೆಣ್ಣುಮಗು ಹುಟ್ಟದಿರಲಿ ಎಂಬ ಪ್ರಾರ್ಥನೆಗಳಿವೆ. ಮಗು ಹುಟ್ಟುವಾಗ ಹೆಣ್ಣನ್ನು ಮಾಡದಿರಲಿ, ಅಥವಾ ಪ್ರಜಾಪತಿಯು ಗರ್ಭದಲ್ಲಿರುವ ಹೆಣ್ಣು ಮಗುವನ್ನು ಎಲ್ಲಿಯಾದರೂ ಇಟ್ಟು ಇಲ್ಲಿ ಗಂಡುಮಗುವನ್ನು ಇಡಲಿ ಎಂಬ ಬೇಡಿಕೆಯ ಮಾತುಗಳಿವೆ. ಇದು ಹೆಣ್ಣಿನ ಅವನತಿಯ ಆರಂಭದ ಸಂಕೇತವಷ್ಟೇ ಅಲ್ಲ ಸಮಾಜದ ಅವನತಿಯ ದ್ಯೋತಕವು ಆಗಿದೆ. ಇದು ಇಂದಿಗೂ ಮುಂದುವರೆದಿದೆ. ಪುರುಷ ಪ್ರಾಧಾನ್ಯತೆಯ ಅಂಕುರಾರ್ಪಣೆಯ ಕಾಲವೂ ಆಗಿ ಬೆಳೆಯಿತು.

ಮದುವೆ ಅಥವಾ ವಿವಾಹ ಎಂಬುದು ಈ ಕಾಲಕ್ಕಾಗಲೇ ಹೆಚ್ಚು ವ್ಯಾಪಕವಾಗಿ ಬೆಳೆದ ಸಂಸ್ಥೆಯಾಗಿತ್ತು. ಇದು ಪ್ರಾಚೀನ ಕಾಲದಿಂದಲೂ ನಡೆದುಬಂದ ಸಂತಾನದ ವೃದ್ಧಿಯನ್ನಷ್ಟೆ ಇಟ್ಟುಕೊಂಡು ಹುಟ್ಟುಹಾಕಿದ ವ್ಯವಸ್ಥೆಯಾಗಿದೆ.

> Brahamanic ideology, the goals of marriage are dharma,("religious duty"), praja ("progeny"), and rati("pleasure"); that sex is last in importance, and only a low caste sudra would marry primarily for pleasure.[೨೬]

ಒಂದು ಹೆಣ್ಣು ಮದುವೆಯಾಗಿ ಗಂಡನ ಮನೆ ಸೇರಿದ ನಂತರ ಅವಳು ಗಂಡನ ಮನೆಯ ಆಸ್ತಿಯಾಗುತ್ತಿದ್ದಳು. ಅವಳು ಕುಟುಂಬದ ಕ್ಷೇತ್ರ ಅಂದರೆ ಹೊಲವಾಗಿ ಕುಟುಂಬದ ಮಕ್ಕಳ ಬೆಳೆಯನ್ನು ಬೆಳೆಯಬೇಕಾಗಿತ್ತು. ಅವಳು ಕುಟುಂಬದ ಸಂತಾನ ವೃದ್ಧಿಗೆ ಕಾರಣವಾಗುವುದನ್ನು ಗಂಡನ ಸಾವು ತಡೆಗಟ್ಟುತ್ತಿರಲಿಲ್ಲ. ಮಕ್ಕಳನ್ನು ಹೇರುವ ವಯಸ್ಸಿನಲ್ಲಿ ಅವಳು ವಿಧವೆಯಾದರೆ ಅವಳ ಮೈದುನ ಗಂಡನ ಹತ್ತಿರದ ಸಂಬಂಧಿ ಅವಳನ್ನು ಮದುವೆಯಾಗುತ್ತಿದ್ದ. ಔಪಚಾರಿಕವಲ್ಲದಿದ್ದರೂ ನಿಯೋಗದ ಮೂಲಕ ಮಕ್ಕಳನ್ನು ಹೇರುವಂತೆ ಮಾಡುತ್ತಿದ್ದ.[೨೭] ಇಲ್ಲಿ ಕಾಮಕ್ಕೆ ಪ್ರಾಶಸ್ತ್ಯ ಇಲ್ಲ. ಆದಿಮ ಜನಾಂಗದಲ್ಲಿ ಕಾಮಕ್ಕೆ ಮಹತ್ವವಿದೆ ಎಂದು ನಾವು ಹೇಳಿದರೂ ಸಹ ಅದು ಒಂದು ಹಂತಕ್ಕಷ್ಟೆ ಸಹಕಾರಿಯಾಗಬಹುದು. ಅದರಲ್ಲೂ ಸಂತಾನದ ಮುಂದುವರಿಕೆಯ, ಸಮೃದ್ಧಿಯ ಆಶಯಗಳು ತುಂಬಿಕೊಂಡಿವೆ. ವಿವಾಹ ಸಂಸ್ಥೆಗಿಂತ ಬುಡಕಟ್ಟುಗಳಲ್ಲಿ ಕಂಡುಬರುವ ವಿವಾಹವು ದೇಹ ಮತ್ತು ಮನಸ್ಸುಗಳ ಮಿಲನವಾಗಿರುತ್ತದೆ. ಗಂಡು ಹೆಣ್ಣುಗಳು ಒಪ್ಪಿಗೆಯ ಮೂಲಕ ಸೇರುತ್ತಾರೆ. ಆ ಮೂಲಕ ಈ ಮನಸ್ಸು ಮತ್ತು ದೇಹಗಳ ಹೊಂದಾಣಿಕೆಯು ಸಾಧ್ಯ. ಆದರೆ, ವೈದಿಕ ವಿವಾಹ ಪದ್ಧತಿಯಲ್ಲಿ ಈ ರೀತಿಯ ಹೊಂದಾಣಿಕೆ ಯಾವತ್ತು ಕಂಡುಬರಲು ಸಾಧ್ಯವೇ ಇಲ್ಲ.

ಅದು ತಂದೆಯೆನಿಸಿಕೊಂಡಾತ ತನ್ನ ಭಾರವನ್ನು ಕಳೆದುಕೊಳ್ಳುವುದೇ ಆಗಿದೆ. ಇಲ್ಲಿ ಮನಸ್ಸಿಗಿಂತ ದೇಹದ ಮಿಲನಕ್ಕೆ ಹೆಚ್ಚು ಒತ್ತುಕೊಡಲಾಗಿರುವುದನ್ನು ನೋಡಬಹುದು. ಯಾವಾಗ ವಿವಾಹ ಎಂಬ ಸಂಸ್ಥೆಯ ರೂಪವನ್ನು ಕೊಡಲಾಯಿತೋ ಆಗ ಅದು

> ಧರ್ಮೋದ್ಧಾರ ಹಾಗೂ ವಂಶಾಭಿವೃದ್ಧಿಯೇ ಹೊರತು ಕಾಮಪಿಪಾಸೆಯನ್ನು ತಣಿಸುವುದಲ್ಲ. ಧರ್ಮದ ತೊಟ್ಟಿಲಾಗಿರುವ ಭಾರತ ವಂಶಾಭಿವೃದ್ಧಿಯನ್ನು ಆದ್ಯಕರ್ತವ್ಯವೆಂದು ಭಾವಿಸಿದೆ. ವಿವಾಹದಿಂದ ಬಯಸಬೇಕಾದುದು ಕೇವಲ ಕಾಮವಲ್ಲ, ಅರ್ಥವಲ್ಲ, ಧರ್ಮವೂ ಒಂದಿರುವುದು. ಇವುಗಳು ಒಂದೊಂದೇ ಅಲ್ಲ. ಧರ್ಮ, ಅರ್ಥ, ಕಾಮಗಳ ಸಮನ್ವಯ ಈ ವಿವಾಹ [೨೭]

ಈ ಪುರುಷಾರ್ಥಗಳು ಯಾರಿಗಾಗಿ, ಹೆಣ್ಣಿನ ಶ್ರೇಯಕ್ಕಾಗಿಯೇ, ಅಥವಾ ಸಮಾಜದ ಒಳಿತಿಗಾಗಿಯೇ ಎಂದು ಕೇಳಿಕೊಂಡಾಗ ಇದು ಗಂಡಿನ ಸ್ವಾರ್ಥಕ್ಕಾಗಿ ಮಾಡಿಕೊಂಡ ಸಂಸ್ಥೆಯಾಗಿ ಕಾಣುತ್ತದೆ. ಹೆಣ್ಣಿನ ಗುಣಸ್ವಭಾವಗಳ ಮೇಲೆ ನಿಗಾ ಇಡುವ ಅವಳು ಇನ್ನೊಬ್ಬರ ವಸ್ತುವಾಗದಂತೆ ಮಾಡುವ, ತನ್ನ ಅಧೀನತೆಯಲ್ಲಿಟ್ಟುಕೊಳ್ಳುವುದೇ ಆಗಿದೆ. ವಿವಾಹವು ಗಂಡಸಿಗಾಗಿ ತನ್ನನ್ನು ಸಮರ್ಪಿಸಿಕೊಳ್ಳುವ ದೈನ್ಯದ ಸ್ಥಿತಿಯಾಗಿದೆ. ಆರಂಭದ ವೇದಗಳಲ್ಲಿ ಈ ರೀತಿಯಲ್ಲಿಯೇ ಈ ವಿವಾಹದ ಲಕ್ಷಣಗಳು ಕಂಡುಬರುತ್ತವೆ. ಋಗ್ವೇದದಲ್ಲಿ ವೈವಾಹಿಕ ಜೀವನದಲ್ಲಿ ಹೆಣ್ಣು ಮಾತ್ರ ತನ್ನ ಪಾವಿತ್ರ್ಯವನ್ನು ಕಾಪಾಡಿಕೊಳ್ಳಲು ಪ್ರತಿಜ್ಞೆಯನ್ನು ಪಡೆಯಲಾಗುತ್ತಿತ್ತು. ಆದರೆ ಗಂಡು ಆ ರೀತಿಯ ಪ್ರತಿಜ್ಞೆಯನ್ನು ಮಾಡುತ್ತಿರಲಿಲ್ಲ ಎಂಬುದು ಗಮನಿಸಬೇಕಾದ ಅಂಶ. ಆ ಮೂಲಕ ಪಾತಿವ್ರತ್ಯ, ಗಂಡನೊಡನೆ ಸುಟ್ಟುಹಾಕುವುದು ಮುಂತಾದ ಕೃತಿಗಳು ಆರಂಭವಾದವು.

ಗಂಡು ಹಲವಾರು ಪತ್ನಿಯರನ್ನು ಹೊಂದಬಹುದಿತ್ತು. ಋಗ್ವೇದದಲ್ಲಿ ಈ ಬಗೆಯ ಅನೇಕ ಸೂಚನೆಗಳು ದೊರಕುತ್ತವೆ. ದಾಸರ ಅಥವಾ ದಸ್ಯುಗಳಿಂದ ಗೆದ್ದು ತರಲಾಗಿದ್ದ ಕನ್ನೆಯರನ್ನು ದಾಸಿಯ ರೂಪದಲ್ಲಿ ತರಲಾಗಿದ್ದರೂ ಅವರು ಮುಂದೆ ಪತ್ನಿಯರಾಗಿ ಮುಂದುವರೆದ ಹಾಗೆ ಕಂಡುಬರುತ್ತದೆ. ಅಲ್ಲದೆ ಇಂದ್ರನನ್ನು ವರ್ಣಿಸುವಾಗ ಅನೇಕ ಪತ್ನಿಯರನ್ನು ಹೊಂದಿದ್ದು, ಬೇರೆ ಬೇರೆ ಭವನಗಳಲ್ಲಿ ಇಟ್ಟುಕೊಂಡಿದ್ದನೆಂದು ಹೇಳಲಾಗಿದೆ. ನಾರಿಯರು ಸಹ ಸವತಿಯರ ನಡುವಣ ತನ್ನ ಸ್ಥಾನವನ್ನು ಒಪ್ಪಿಕೊಂಡಿರುವ ಹಾಗೆ ಕಂಡುಬರುತ್ತದೆ.

ಬಾಲ್ಯವಿವಾಹ ಹಾಗೂ ವಿಧವೆಯರ ಬಗೆಗೆ ಋಗ್ವೇದದಲ್ಲಿ ಏನೂ ಪ್ರಸ್ತಾಪಗಳಿಲ್ಲ. ಇದು ಮುಂದಿನ ಧರ್ಮಶಾಸ್ತ್ರಗಳಲ್ಲಿ ಕಂಡುಬರುವ ಪದ್ಧತಿಯಾಗಿದೆ. ಯೋಗ್ಯನಾದ ವರ ದೊರೆಯದಿದ್ದ ಪಕ್ಷದಲ್ಲಿ ಕನ್ಯೆಯು ಕಡೆಯವರೆಗೂ ತನ್ನ ತಂದೆಯ ಮನೆಯಲ್ಲಿ ಕನ್ಯೆಯಾಗಿಯೇ ಉಳಿಯಬೇಕಾಗಿತ್ತು.[೨೮] ಚಿಕ್ಕವಯಸ್ಸಿನಲ್ಲಿ

ವಿಧವೆಯಾದರೆ ಗಂಡನ ತಮ್ಮನೋ ಅಥವಾ ಸಮೀಪದ ಬಂಧುವೋ ಮರು ವಿವಾಹವಾಗುತ್ತಿದ್ದನು. ಸತ್ತವರನ್ನು ಸಮಾಧಿ ಮಾಡುತ್ತಿದ್ದರು, ಆದರೆ ಸುಡುವ ಪದ್ಧತಿಯ ಅಥರ್ವಣವೇದದ ನಂತರದಲ್ಲಿ ಕಂಡುಬರುತ್ತದೆ. "ಗಂಡ ತೀರಿಕೊಂಡಾಗ, ಅವನ ಪತ್ನಿ ಉರಿಯದಿರುವ ಚಿತೆಯನ್ನೇರುತ್ತಿದ್ದಳು ಹಾಗೂ ದೇಹದೊಂದಿಗೆ ಮಲಗಿರುತ್ತಿದ್ದಳು. ಚಿತೆಗೆ ಬೆಂಕಿಯನ್ನಿಡುವುದಕ್ಕೆ ಮೊದಲು ಅಲ್ಲಿಂದ ಇಳಿದು ಬಂದು, ತನ್ನ ಗಂಡನ ಕೈಯಿಂದ ಬಿಲ್ಲನ್ನು ಸ್ವೀಕರಿಸಿದ್ದ ಅಥವಾ ಸ್ವೀಕರಿಸಬೇಕಾಗಿದ್ದ ಮೈದುನನನ್ನು ಆ ಕ್ಷಣದಲ್ಲಿ ವರಿಸುತ್ತಿದ್ದಳು. ತನ್ನ ಮೊದಲ ವಿವಾಹ ಸಂದರ್ಭದಲ್ಲಿ 'ಆಕೆಗೆ ದೇವೃಕಾಮ' (ಅಂದರೆ ಮೈದುನನನ್ನು ವರಿಸುವವಳು) ಎಂಬ ವಿಶೇಷಣವನ್ನು ಕೊಡಲಾಗಿದೆ."[೧೯] ಇಲ್ಲಿ ಎರಡು ಅಂಶಗಳು ಗೊತ್ತಾಗುತ್ತವೆ ಒಂದು ಸ್ತ್ರೀಯು ಸಹಗಮನವನ್ನು ಮಾಡುತ್ತಿರಲಿಲ್ಲ, ಹಾಗೂ ವಿಧವೆಯಾಗಿಯೇ ಜನ್ಮಪರ್ಯಂತರವಾಗಿ ಬದುಕಬೇಕಾಗಿರಲಿಲ್ಲ ಎಂಬುದು.

ವೈದಿಕ ಪರಂಪರೆಯು ಒಂದು ರೀತಿಯ ಗುಮಾನಿಯ ಗುಣವನ್ನು ಹೊಂದಿರುವುದಾಗಿದೆ. ತನ್ನಲ್ಲಿ ಒಳಿತನ್ನು ಹೊಂದಿದೆ ಎಂದಾಗಲೂ ಅದರ ಆಳದಲ್ಲಿ ಕೆಡುಕಿನ ಮೂಲವೇ ಅಡಗಿಕೊಂಡಿದೆ. Marriage in India is a complete union of male and female; sexual, mental and spiritual. ಹೀಗೆ ಹೇಳಿದಾಗಲೂ ನಂಬಬಾರದು, ನಂಬಲಾರದೆ ಇರಲಾಗುವುದಿಲ್ಲ. ಯಾಕೆಂದರೆ ಹೆಣ್ಣು ಸಹನೆಗೆ ಪ್ರತೀಕವಾಗಿರುವಂತಹಳು. ಡಾ. ಎಸ್. ರಾಧಾಕೃಷ್ಣನ್ ಅವರು ಹೇಳುವಂತೆ;

> There are certain functions which man cannot undertake. This specialisation does not rob women of their femininity; or does it spoil the natural relationship of men and women. Man is the creator and women the lover. Her special qualities are grace and tenderness, peace and affection, surrender and sacrifice. Brutality, violence, anger, hatred are not her typical features. Masculine dominance is not natural. [೨೦]

ಒಟ್ಟಿನಲ್ಲಿ ಹೇಳಬಹುದೆಂದರೆ ವೇದಗಳ ಕಾಲದಲ್ಲಿ ಸ್ತ್ರೀಯು ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಸ್ವಲ್ಪಮಟ್ಟಿಗೆ ಸ್ವತಂತ್ರವಾಗಿ ಉಸಿರಾಡುವ, ಯೋಚಿಸುವ ಅಧಿಕಾರವನ್ನು ಪಡೆದಿದ್ದಳು. ಯಜ್ಞಯಾಗಾದಿಗಳಲ್ಲಿ ಪುರುಷನ ಜೊತೆಯಲ್ಲಿ ಪಾಲ್ಗೊಳ್ಳುತ್ತಿದ್ದಳು. ಮನೆಯ ಒಡೆತನ ಅವಳದ್ದಾಗಿತ್ತು. ಪಶುಸಂಪತ್ತು, ಹಣಕಾಸಿನ ವ್ಯವಹಾರ ಸ್ವಲ್ಪಮಟ್ಟಿಗೆ ಇವಳದ್ದಾಗಿತ್ತು. ವಿದ್ಯಾಭ್ಯಾಸವನ್ನು ಪುರುಷನ ಸಮಾನವಾಗಿ ಮಾಡುತ್ತಿದ್ದಳು. ಮುಟ್ಟಿನ ಕಲ್ಪನೆ ಅವಳನ್ನು ಇನ್ನು ಅಶುಚಿಯನ್ನಾಗಿ ಮಾಡಿರಲಿಲ್ಲ. ಯುದ್ಧದಲ್ಲಿ ಭಾಗವಹಿಸುತ್ತಿದ್ದಳು. ರಾಜಖೇಲನ ಮಡದಿಯಾದ ವಿಶಪಾಲ ಎಂಬುವವಳು ಯುದ್ಧದಲ್ಲಿ ಭಾಗವಹಿಸಿ ಕಾಲನ್ನು ಕಳೆದುಕೊಂಡಿದ್ದ

ಉಲ್ಲೇಖ ಋಗ್ವೇದದಲ್ಲಿ ಬರುತ್ತದೆ. ಇಂದ್ರಸೇನನ ಮಡದಿ ಮುದ್ಗಲಾ ಎಂಬುವವಳು ಕಳ್ಳರು ಹಸುಗಳನ್ನು ಕೊಂಡೊಯ್ಯುತ್ತಿರುವಾಗ ಅವರೊಡನೆ ಹೋರಾಡಿ ಪಶು ಸಂಪತ್ತನ್ನು ಮರಳಿ ಪಡೆದ ವಿವರ ಬರುತ್ತದೆ. ಉಷಸ್ ದೇವತೆಯು ಇಂದ್ರನೊಡನೆ ಹೋರಾಡಿ ಸೋತ ವಿವರ ಋಗ್ವೇದದಲ್ಲಿ ಬರುತ್ತದೆ.

"ಸೂರ್ಯ ಆಕಾಶದ ನಡುನೆತ್ತಿಗೇರುವಂತೆ, ನನ್ನ ಸೌಭಾಗ್ಯವೂ ಊರ್ಧ್ವಮುಖಿಯಾಗಿ ಪರಿಣಮಿಸಿದೆ, ನನ್ನ ಸವತಿಯರು ಮಣ್ಣಿನಲ್ಲಿ ಬಿದ್ದು ಹೊರಳಾಡುತ್ತಿದ್ದಾರೆ. ನನ್ನ ಮಕ್ಕಳು ದಿಕ್ಕುಗಳಿಗೆ ಒಡೆಯರಾಗಿದ್ದಾರೆ. ನನ್ನ ಪತಿಯಾದ ಇಂದ್ರ ನಾನು ಅರ್ಪಿಸಿದ ಹವಿಸ್ಸಿನಿಂದಲೇ ಶಕ್ತಿಯನ್ನು ಪಡೆದುಕೊಳ್ಳುತ್ತಾನೆ".[೩೧] ಎನ್ನುವ ಮಾತುಗಳನ್ನು ಋಗ್ವೇದಲ್ಲಿ ಕಾಣಬಹುದು. ಈ ರೀತಿಯ ಮಾತುಗಳು ಸ್ತ್ರೀಯರ ಬಗೆಗಿನ ಗೌರವವನ್ನು ಹೆಚ್ಚಿಸುವವಾದರೂ ಅವರಿಗೆ ಸ್ವತಂತ್ರವನ್ನು ಕೊಟ್ಟಿರಲಿಲ್ಲ. ಅಲ್ಲದೆ ಈ ಮಾತುಗಳಲ್ಲಿ ಅವನತಿಯತ್ತ ಸಾಗುವ ದಾರಿಯು ಕಾಣುತ್ತದೆ. ಸ್ತ್ರೀಯರು ರಾಜ ಸಭೆಗಳಲ್ಲಿ ಭಾಗವಹಿಸುವ ಅವಕಾಶವನ್ನು ನಿರಾಕರಿಸಲಾಗಿತ್ತು. ಕಾರಣ ಅವರ ಬುದ್ಧಿಯ ಮೇಲೆ ನಂಬಿಕೆಯನ್ನು ಇಡಲಾಗಿರಲಿಲ್ಲ. ಪುರುಷ ಋಷಿಗಳಂತೆ ನಾರಿಯರು ಸಹ ಬ್ರಹ್ಮಚರ್ಯವನ್ನು ಸಾಧಿಸಿಕೊಂಡವರಾಗಿದ್ದರು. ತಪೋನುಷ್ಠಾನ ಪರಾಯಣರಾಗಿದ್ದ ಇವರು ಋಷಿಗಳು ಹೌದೂ, ಕವಿಗಳೂ ಆಗಿದ್ದವರು. ಘೋಷಾ, ಅಪಾಲಾ, ವಿಶ್ವವಾರಾ, ಲೋಪಾಮುದ್ರಾ, ಶಚೀ ಪೌಲೋಮಿ, ಹಾಗೂ ನದಿ ದೇವತೆಯಾದ ಸರಸ್ವತಿಯನ್ನು ವಾಕ್‌ದೇವತೆಯನ್ನಾಗಿ ಉನ್ನತೀಕರಣಗೊಳಿಸಿದ ಅಂಭೃಣಿಯ ಮಗಳಾದ ವಾಗ್ ಮೊದಲಾದ ನಾರಿಯರಿಂದ ರಚಿತವಾದ ಅನೇಕ ಋಕ್‌ಗಳು ಇಂದಿಗೂ ಉಳಿದುಕೊಂಡುಬಂದಿವೆ.ವಿಶ್ವವರಾ ಎಂಬುವವಳು ಅಗ್ನಿಯನ್ನು ಕುರಿತು ಮಂತ್ರಗಳನ್ನು ರಚಿಸಿ, ಯಜ್ಞದಲ್ಲಿ ಋತ್ವಿಕ ಕಾರ್ಯವನ್ನು ತಾನೇ ನೆರವೇರಿಸಿದಳು. "ವಾಗಂಭೃಣೆಯಂತೂ ಚರಾಚರಗಳ ಭಾಗ್ಯಯವಿಧಾಯಿಕೆ ಯಂತಿದ್ದಾಳೆ. ಅವಳ ವಾಣಿ ದಶದಿಕ್ಕುಗಳಲ್ಲಿಯೂ ಮೊಳಗುತ್ತದೆ 'ಬ್ರಹ್ಮ ದ್ವೇಷಿಗಳನ್ನು ಕೊಲ್ಲುವ ಸಲುವಾಗಿ ನಾನು ರುದ್ರನ ಧನುಸ್ಸಿಗೆ ಹೆದೆಯೇರಿಸಿ ನಿಲ್ಲುತ್ತೇನೆ. ಜನರಿಗೆ ಒಳಿತನ್ನುಂಟುಮಾಡುವ ಸಲುವಾಗಿಯೇ ನಾನು ಸೂರ್ಯನನ್ನು ಕ್ಷಿತಿಜದ ಅಕ್ಷದಲ್ಲಿ ತಂದಿರಿಸುತ್ತೇನೆ' ".[೩೨] ಎನ್ನುವ ಮಂತ್ರಗಳು ಸ್ತ್ರೀಯರು ಹೊಂದಿರುವ ಘನತೆಯನ್ನು ತೋರಿಸುತ್ತವೆ. ಇದನ್ನು ಸಮಾಜದ ಎಲ್ಲಾ ಮಹಿಳೆಯರಿಗೂ ಹೇಳಲಿಕ್ಕಾಗದು. ಕೆಲವು ಜನರಿಗೆ ಮಾತ್ರ ಈ ಅವಕಾಶ ದೊರಕಿತ್ತು. ಬಹುಸಂಖ್ಯಾತರ ಸ್ಥಾನ ಕೆಳಗಿನಮಟ್ಟದ್ದಾಗಿತ್ತು.

ಇಷ್ಟಾಗಿಯೂ ಭಾರತೀಯ ನಾರಿಯರನ್ನು ಸಮಕಾಲೀನ ಭಿನ್ನ ನಾಗರಿಕತೆಯ ಸ್ತ್ರೀಯರೊಡನೆ ಹೋಲಿಸಿದರೆ ಇವರ ಸ್ಥಾನ ಹೆಚ್ಚು ಉನ್ನತವಾಗಿತ್ತು. "ಬ್ಯಾಬಿಲೋನಿಯಾದಲ್ಲಿ ನಾರಿಯರ ಸ್ಥಾನ ಬಹುಶಃ ವೇಶ್ಯೆಯ ಸ್ಥಾನವೇ ಆಗಿತ್ತು. ಹೋಮರನ ಕಾವ್ಯಗಳಲ್ಲಿ ಕಂಡುಬರುವ ನಾರಿ ಅತೀವ ಸ್ವಾತಂತ್ರ್ಯದ ಪ್ರತೀಕವಾಗಿದ್ದರೂ, ಋಗ್ವೇದದ ಕಾಲದ ನಾರಿ ಹೊಂದಿದ್ದ ಅಧಿಕಾರಗಳೊಂದಿಗೆ ಹೋಲಿಸಿ ನೋಡಿದಾಗ

ಕೀಳಾಗಿಯೂ ಕಾಣುತ್ತಾಳೆ. ಗ್ರೀಸಿನ ಉತ್ಕರ್ಷ ಕಾಲದ ನಾರಿಯ ಸ್ಥಿತಿಯಂತೂ ಕರುಣಾಜನಕವೇ ಆಗಿತ್ತೆಂಬುದರಲ್ಲಿ ಅನುಮಾನವೇನೂ ಇಲ್ಲ. ಪರ್ದಾಪದ್ಧತಿ, ಅನಧಿಕಾರತ್ವ, ಬಹುಸ್ತ್ರೀವಿವಾಹ ಇವೇ ಮೊದಲಾದ ಅನೇಕ ಕೆಟ್ಟ ಸಂಪ್ರದಾಯಗಳಿಗೆ ಅವಳು ಬಲಿಯಾಗಿದ್ದಳು. . . . ಇವರೊಡನೆ ಋಗ್ವೇದ ಕಾಲದ ನಾರಿಯ ಸ್ಥಾನಮಾನಗಳನ್ನು ಹೋಲಿಸಿದಾಗ ಉನ್ನತವೇ ಆಗಿದ್ದವು; ಆಕೆಯ ಅಧಿಕಾರಗಳು ಇತರರು ಬಯಸಿ ಕರುಬುವಂಥವೇ ಆಗಿದ್ದವು". [೩೩]

೫.೩. ವೇದೋತ್ತರ ಕಾಲ

ವೇದೋತ್ತರ ಕಾಲದಲ್ಲಿ ಉಪನಿಷತ್ತುಗಳು, ಸ್ಮೃತಿಗಳು ಹಾಗೂ ಧರ್ಮಶಾಸ್ತ್ರಗಳನ್ನು ಇಲ್ಲಿ ನೋಡಬಹುದು. ಕ್ರಿ.ಪೂ.ಸು. ೭ರಿಂದ ೧ನೆಯ ಶತಮಾನದಲ್ಲಿ ಮೂಡಿಬಂದ ಸಾಹಿತ್ಯವಾಗಿದೆ. ಮಹಾಕಾವ್ಯಗಳನ್ನು ಇಲ್ಲಿಯೇ ಇಟ್ಟು ನೋಡಬಹುದಾದರೂ ಮಹಾಭಾರತದಲ್ಲಿ ಹಿಂದೂ ಪರಂಪರೆಯ ಜೋತೆಯಲ್ಲಿಯೇ ಬೆಳೆದು ಬಂದ ಇಲ್ಲಿ ಇಂಡಿಜೀನಸ್ ಎನ್ನಬಹುದಾದ ಹಲವಾರು ಸಾಮಾಜಿಕ ಕಲ್ಪನೆಗಳು ಇಲ್ಲಿ ಬಿಂಬಿತವಾಗಿವೆ. ಆದ್ದರಿಂದ ವೈದಿಕ ಪರಂಪರೆಯಲ್ಲಿ ಮಹಾಭಾರತವನ್ನು ಬೇರೆಯಾಗಿಯೆ ನೋಡಬೇಕಾಗುತ್ತದೆ. ಅದರಲ್ಲಿ ಹಲವಾರು ಬುಡಕಟ್ಟುಗಳ ಸಾಮಾಜಿಕ ಅಂಶಗಳು ಸೇರಿಕೊಂಡು ಹೋಗಿವೆ. ಅಲ್ಲಿ ಬಹುಪತ್ನಿತ್ವವಿದೆ, ಬಹುಪತಿತ್ವವಿದೆ, ಅನಾಗರಿಕ ಎನ್ನಬಹುದಾದ ಅನೇಕ ವಿಷಯಗಳಿವೆ. ಈ ಕಾರಣಕ್ಕಾಗಿ ಮಹಾಭಾರತವನ್ನು ಭಿನ್ನರೀತಿಯಿಂದಲೇ ನೋಡಬೇಕಾಗುತ್ತದೆ.

ಉಪನಿಷತ್ತುಗಳು ಸಾಮಾಜಿಕ ಜೀವನಕ್ಕೂ ಯಾವುದೇ ರೀತಿಯ ಸಂಬಂಧವನ್ನು ಹೊಂದಿಲ್ಲ. ಇಲ್ಲಿರುವುದೆಲ್ಲವು ಆದಿಭೌತಿಕವಾದ ಅಥವಾ ಧಾರ್ಮಿಕವಾದ ಅಂತರ್ಮುಖತೆಯ ಅನಾವರಣವಾಗಿದೆ. ದೇವರು ಮತ್ತು ಅದರ ಕಲ್ಪನೆಯ ಹುಡುಕಾಟವಾಗಿದೆ. ಸುಮಾರು ೧೫೦ ಉಪನಿಷತ್ತುಗಳಲ್ಲಿ ಸಾಮಾಜಿಕ ಜೀವನದ ಅನಾವರಣ ಇಲ್ಲಿ ಕಂಡುಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ.

ಋಗ್ವೇದದ ಕಾಲದಲ್ಲಿಯೇ ಸ್ತ್ರೀಯರಿಗೆ ಸ್ವಾತಂತ್ರ್ಯವಿರಲಿಲ್ಲ ಎಂದ ಮೇಲೆ ಉಪನಿಷತ್ತು ಹಾಗೂ ಸೂತ್ರಗಳ ಕಾಲದಲ್ಲಿ ಯಾವ ರೀತಿಯಾದ ಸ್ಥಿತಿ ಇರಬಹುದೆಂದು ಊಹಿಸಬಹುದು. ಆದರೆ, ಉಪನಿಷತ್ತುಗಳಲ್ಲಿ ಮೇಲೆ ಹೇಳಿದಂತೆ ಅಲ್ಲಿ ಪ್ರಮುಖವಾಗಿ ಚರ್ಚಿತವಾಗುವ ವಿಷಯವೆಂದರೆ, ಪರಾತ್ಪರದ ಚಿಂತಿಯೇ ಹೊರತು ಸಾಮಾಜಿಕ ಜೀವನವಲ್ಲ. ಆದರೂ ಸ್ತ್ರೀಯರ ಹೆಸರುಗಳು ಕಂಡುಬರುತ್ತವೆ. ಅವರಲ್ಲಿ ಪ್ರಮುಖವಾದ ಹೆಸರುಗಳೆಂದರೆ, ಲೋಪಮುದ್ರಾ, ಗಾರ್ಗಿ, ಮೈತ್ರೇಯಿ, ಮೊದಲಾದವರು. ಸ್ತ್ರೀಯರು ತಾತ್ವಿಕ ಚಿಂತನೆಯಲ್ಲಿ ಭಾಗವಹಿಸಿ, ಗಂಡಿಗಿಂತ ತಾನೂ ಏನು ಕಡಿಮೆಯಿಲ್ಲ ಎಂದು ತೋರಿಸಿಕೊಟ್ಟಿದ್ದಾರೆ. ಬ್ರಹ್ಮವಾದಿನಿಯಾದ ಗಾರ್ಗಿ

ಜನಕನ ಪರಿಷತ್ತಿನಲ್ಲಿ ಗಂಡನಾದ ಯಾಜ್ಞವಲ್ಕನನ್ನು ತನ್ನ ವಿದ್ವತ್ತಪೂರ್ಣವಾದ ಮಾತುಗಳಿಂದ ಉತ್ತೇಜಿಸುತ್ತಾಳೆ. ಅಲ್ಲದೆ ಅವನು ಕ್ಷುದ್ರನಾಗುವಂತೆ ಮಾಡುತ್ತಾಳೆ. ಲೋಕದ ಸಾಂಸಾರಿಕ ಜೀವನವು ಕ್ಷಣಿಕವೆಂದು, ಅಸತ್ಯವೆಂದು, ಹಾಗೂ ಅದು ಅನಿತ್ಯವೆಂದೂ ಭಾವಿಸಿ ಅಮರತ್ವವನ್ನು ಕೊಡುವಂತೆ ಗಂಡನನ್ನು ಕೇಳಿಕೊಳ್ಳುತ್ತಾಳೆ. ಬ್ರಹ್ಮಜ್ಞಾನಿಯಾದ ಗಾರ್ಗಿಗೆ ಸವತಿಯೊಬ್ಬಳು ಇದ್ದುದರಿಂದ ಅವಳ ಸಂಸಾರವೇನು ಸುಖಕರವಾಗಿರಲಿಲ್ಲವೆಂದು ತೋರುತ್ತದೆ.

ಬೃಹದಾರಣ್ಯಕೋಪನಿಷತ್ತಿನಲ್ಲಿ ಯಾವ ಹೆಣ್ಣು ಗಂಡ ಹಾಕಿದ ನಿಯಮಗಳನ್ನು ಯಥಾವತ್ತಾಗಿ ಪಾಲಿಸದಿದ್ದರೆ ಅಂತ ಹೆಣ್ಣನ್ನು ಬಲಪ್ರಯೋಗದಿಂದಲಾದರೂ ಸರಿ, ಬಹಿಷ್ಕಾರ ಹಾಕಿಯಾದರೂ ಸರಿ ಶಿಕ್ಷಿಸಬೇಕು ಎಂದು ಹೇಳುತ್ತದೆ. ಸತ್ಯಕಾಮನ ತಾಯಿ ಜಾಬಾಲಿಯು ಬೇರೆಯವರ ಮನೆಕೆಲಸಮಾಡಿಕೊಂಡು ಜೀವನ ನೆಡೆಸುತ್ತಿರುವ ಹಾಗೆ ಕಂಡುಬರುತ್ತದೆ. ಗೌತಮನ ಕಡೆ ಸತ್ಯಕಾಮ ಅಧ್ಯಯನ ಮಾಡಲು ಹೋದಾಗ ನಿನ್ನ ಗೋತ್ರ ಯಾವುದು ಎಂದು ಕೇಳಿದಾಗ ಗೊತ್ತಿರದ ಸತ್ಯಕಾಮ ತಾಯಿ ಬಳಿ ಬಂದು ತನ್ನ ಗೋತ್ರ ಯಾವುದು ಎಂದಾಗ ಜಾಬಾಲಿಯು ಯೌವನದಲ್ಲಿ ಯಾರದೋ ಮನೆಯಲ್ಲಿ ಕೆಲಸ ಮಾಡುವಾಗ ನೀನು ಹುಟ್ಟಿದೆ ಎಂದು ಹೇಳುತ್ತಾಳೆ. ನಂತರ ಗೌತಮನು ಮೊತರದಲ್ಲಿ ಛಾತ್ರನನ್ನಾಗಿ ಸ್ವೀಕರಿಸುತ್ತಾನೆ. ಈ ಘಟನೆಯು ಅಂದಿನ ಮಹಿಳೆಯರ ಸಾಮಾಜಿಕ ಜೀವನವನ್ನು ತೋರಿಸುತ್ತಿರಬಹುದು.

ಆರ್ಯರು ಇಲ್ಲಿ ವ್ಯವಸ್ಥಿತವಾಗಿ ನೆಲೆಯೂರಿದ ನಂತರದಲ್ಲಿ ಮತ್ತೆ ಸುಮಾರು ಕ್ರಿ.ಪೂ. ಐದನೆಯ ಶತಮಾನದಿಂದ ಆಕ್ರಮಣಗಳು ಪ್ರಾರಂಭವಾದುದನ್ನು ನೋಡಬಹುದು. ಇರಾನಿನ ರಾಜಾಧಾರಾ ಐದನೆಯ ಶತಮಾನದಲ್ಲಿ ಸಿಂಧ್ ಹಾಗೂ ಪಂಜಾಬ್ ಪ್ರಾಂತ್ಯಗಳನ್ನು ಆಕ್ರಮಿಸಿಕೊಂಡ. ನಂತರದಲ್ಲಿ ಸು. ಕ್ರಿ. ಪೂ. ೩೨೬ರಲ್ಲಿ ಅಲೆಗ್ಸಾಂಡರ್ ಭಾರತದ ಮೇಲೆ ಆಕ್ರಮಣವನ್ನು ಮಾಡಿ, ಪಂಜಾಬನ್ನು ಪಡೆದಿದ್ದ. ನಂತರದಲ್ಲಿ ಸುಮಾರು ಕ್ರಿ.ಪೂ. ೧೮೦ರಲ್ಲಿ ದೆಮಿತ್ರಯಸನು ತನ್ನ ಅಳಿಯನಾದ ಮಿನಾಂಡರನೊಂದಿಗೆ ದಾಳಿ ನಡೆಸಿ, ಪಾಟಲಿಪುತ್ರವನ್ನು ವಶಪಡಿಸಿಕೊಂಡಿದ್ದ. ಅಲ್ಲದೆ ಗ್ರೀಕರು ತಮ್ಮ ನಗರ ಸಂಸ್ಕೃತಿಯನ್ನು ಇಲ್ಲಿ ಅಂಕುರಿಸಲು ಸನ್ನಾಹ ಮಾಡಿದ್ದರು. ಇದು ಅಲ್ಲದೆ ಶಕರು ವರ್ಣಾಶ್ರಮ ಪರಂಪರೆಯನ್ನು ನಿರ್ಮೂಲನೆ ಮಾಡಿದ್ದರು. ಹೀಗೆ ಒಂದರ ಮೇಲೊಂದರ ದಾಳಿಯನ್ನು ಈ ಸಾಮಾಜಿಕ ವ್ಯವಸ್ಥೆಯು ಭರಿಸಲು ಹೆಣಗಾಡಬೇಕಾಯಿತು. ತನ್ನ ಉಳಿವಿಗಾಗಿ ಅನೇಕ ನಿರ್ಬಂಧಗಳನ್ನು ಹಾಕಿಕೊಳ್ಳಬೇಕಾಯಿತು. ಅಲ್ಲದೆ ಬೌಧಾಯನ ಮತ್ತು ಆಪಸ್ತಂಬರಂತ ಸೂತ್ರಕಾರರು, ವಶಿಷ್ಠ, ಪಾಣಿನಿ, ಮನು, ಪತಂಜಲಿ, ಚಾಣಕ್ಯ, ಪುಷ್ಯಮಿತ್ರ, ಇನ್ನೂ ಅನೇಕ ಧರ್ಮಶಾಸ್ತ್ರಕಾರರ ಯುಗವಾಗಿತ್ತು.

ಈ ಕಾಲವನ್ನು ಸಂಧಿಗ್ಧತೆಯ ಕಾಲವೆಂದು ಅಥವಾ ಸಂಘರ್ಷದ ಕಾಲವೆಂದು ಕರೆಯಬಹುದು. ವಿದೇಶಿಯ ಆಕ್ರಮಣ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಆದ ಬದಲಾವಣೆಗಳಿಂದ "ನಾರಿಯರ ಸ್ಥಿತಿಗತಿಗಳೂ ತುಂಬ ಕೆಟ್ಟನೆಲೆಗೆ ಇಳಿದವು. ಅವರಿಗೆ ಎದುರಾದ ಆಪತ್ತನ್ನು ನಾಡಿಗೆ ಮತ್ತು ಸಮಾಜಕ್ಕೆ ಒದಗಿದ ಆಪತ್ತು ಎಂದು ಭಾವಿಸಿ, ಸೂತ್ರಕಾರರು ಅವುಗಳನ್ನು ಪುನರ್ ವ್ಯವಸ್ಥೆಗೊಳಿಸುವ ಕಾರ್ಯವನ್ನು ಕೈಗೊಂಡರು. ಆದರೂ ಅವರು ಕಲ್ಪಿಸಿದ ಕಟ್ಟುಪಾಡುಗಳ ಪ್ರತೀಕವೇ ಆಗಿಬಿಟ್ಟಿತ್ತು."[೩೪] ಹೊಸಬಗೆಯ ಕಟ್ಟುಪಾಡುಗಳು ಹುಟ್ಟಿಕೊಂಡವು. ಮದುವೆಯ ಬಗೆಗೆ ಇದ್ದ ಸ್ವಲ್ಪ ಒಳಿತಿನ ಅಂಶಗಳಿಗೆ ಕಡಿವಾಣದ ಚೌಕಟ್ಟನ್ನು ಹಾಕಲಾಯಿತು. ಹಿಂದೆ ಕಾಣಬಾರದ ವಿವಾಹ ಪದ್ಧತಿಗಳು ಇಲ್ಲಿ ಹೊಸದಾಗಿ ಸೇರ್ಪಡೆಯಾಗಿರುವುದನ್ನು ನೋಡಬಹುದು. ಗೌತಮನ ಪ್ರಕಾರ ಬ್ರಹ್ಮ,ದೈವ, ಆರ್ಷ ಪ್ರಾಜಾಪತ್ಯ, ಗಾಂಧರ್ವ, ಅಸುರ, ರಾಕ್ಷಸ ಹಾಗೂ ಪೈಶಾಚ ಎಂಬ ಎಂಟು ಬಗೆಯ ವಿವಾಹ ಪದ್ಧತಿಗಳು ಉಂಟು. ಅವುಗಳಲ್ಲಿ ರಾಕ್ಷಸ ಹಾಗೂ ಪೈಶಾಚ ವಿವಾಹಗಳು ಸಮಾಜದಲ್ಲಿ ಮನ್ನಣೆ ಪಡೆದಿರಲಿಲ್ಲ. ಇಲ್ಲಿ ಸ್ಥಳೀಯ ಜನಾಂಗಗಳಲ್ಲಿ ಕಂಡುಬರುವ ವಿವಾಹ ಪದ್ಧತಿಗಳನ್ನು ಸೇರಿಸಿಕೊಂಡಿರುವ ಹಾಗೆ ಕಂಡುಬರುತ್ತದೆ. ವಿವಾಹವೆಂಬ ಪರಿಕಲ್ಪನೆಯು ಉದಾತ್ತವಾದ ಕಲ್ಪನೆಯಿಂದಲೇ ಹುಟ್ಟಿರಬಹುದು. ಅದು ಎರಡು ಜೀವಗಳ ಕೂಡುವಿಕೆಯಾಗಿದ್ದರು, ಅದೊಂದು ಸಾಮಾಜಿಕ ಕರ್ತವ್ಯವು ಆದಾಗ ಅಲ್ಲಿ ಪತಿವ್ರತಾ ಧರ್ಮದ ಉಗಮವಾಯಿತು.

"ಸತಿಗೆ ನಿರಂತರವೂ ಪತಿಯದೇ ಚಿಂತೆ, ಪತಿಯ ಪಾದಸೇವೆಯೇ ಪುಣ್ಯಕ್ಕೆ ಹಾದಿ, ಪತಿಯಿಲ್ಲದೆ ಯಾವ ವ್ರತವೂ ಸಿದ್ಧಿಸುವುದಿಲ್ಲ. ಯಾವ ಸುಖವೂ ರುಚಿಸದು. ಸತಿಯ ಉಸಿರೇ ಪತಿ, ಪತಿ ಮಡಿದರೆ ಜೀವನದಲ್ಲಿ ಸುಖಸಂತೋಷಗಳನ್ನು ಬದಿಗೊತ್ತಿ, ಕಂಗಾಲಾಗಿ ಮೊರೆಯಿಡುತ್ತಾಳೆ. ಯಾವ ಸತಿಗೇ ಆಗಲಿ ತನ್ನ ಜೀವನ ಸರ್ವಸ್ವದಲ್ಲಿ ಬಹುಮುಖ್ಯವಾದ, ಅತ್ಯಮೂಲ್ಯವಾದ ಹಾಗೂ ಮಂಗಳಕರವಾದ ಸೌಭಾಗ್ಯ ಚಿಹ್ನೆಯೆಂದರೆ ಪವಿತ್ರವಾದ ಮಾಂಗಲ್ಯ ಮತ್ತು ಅರಿಸಿನ ಕುಂಕುಮ. ಪತಿಯಿಲ್ಲದ ಬಾಳು ಕೊರಡಿನಂತೆ ಬರಡು ಹಾಗೂ ಶೂನ್ಯ. ಬಾಳಿದರೆ ಮತ್ತೈದೆಯಾಗಿ ಬಾಳಿ, ಪತಿಗೆ ಮುಂಚೆ ಮೃತ್ಯುವನ್ನಪ್ಪಿದಲ್ಲಿ ಆಕೆಯ ಬಾಳಿಗೊಂದು ಅರ್ಥವಿರುತ್ತದೆಂಬ ಭಾವನೆಯೇ ಸ್ತ್ರೀಯರು ಮುತ್ತೈದೆಯರಾಗಿ ಅರಿಸಿನ ಕುಂಕುಮ, ಮಾಂಗಲ್ಯ, ಓಲೆ, ಬಳೆ, ಮೂಗುತಿಗಳ ಸಮೇತರಾಗಿ ಮರಣ ಹೊಂದಲು ಅಪೇಕ್ಷಿಸುವಂತೆ"[೩೫] ಪ್ರಚೋದಿಸಿದವು.

ಅಲ್ಲದೆ, ಋಗ್ವೇದ ಕಾಲದಲ್ಲಿ ಹುಡುಗಿಯು ತಾರುಣ್ಯಾವಸ್ಥೆಗೆ ಬಂದಮೇಲೆಯೇ ವಿವಾಹಮಾಡುವುದು ರೂಢಿಯಲ್ಲಿತ್ತು. ಆದರೆ ಗೌತಮನು ವಿವಾಹವು ಒಂದೇ ವಯಸ್ಸಿನ (ಪ್ರವರ) ಹುಡುಗಿ ಹುಡಗರಾಗಿರ ಬಾರದೆಂದು, ಕನ್ಯೆಯು ಹುಡುಗನಿಗಿಂತ ಚಿಕ್ಕವಳಿರಬೇಕೆಂದು ಹೇಳುತ್ತಾನೆ. ಹಾಗೂ ಅವರೂ ಒಂದೇ ವರ್ಣದವರಾಗಿರಬೇಕೆಂದು, ಅಂತರ್ ವರ್ಣದ ವಿವಾಹಕ್ಕೆ ಅಸಮ್ಮತಿಯನ್ನು ಸೂತ್ರಕಾರರು ಸೂಚಿಸಿದ್ದಾರೆ.

ಆದರೂ ಒಂದು ವೇಳೆ ಮದುವೆಯಾದ ಪಕ್ಷದಲ್ಲಿ ತನಗೆ ಬರುವ ಪಿತ್ರಾರ್ಜಿವಾಗಿ ಬರುವ ಆಸ್ತಿಯನ್ನು ಸಂಪೂರ್ಣವಾಗಿ ಬಿಟ್ಟುಕೊಡಬೇಕಾಗುತ್ತಿತ್ತು. ಬೃಹಸ್ಪತಿಯು ಮೂವತ್ತರ ಗಂಡು ಹತ್ತರ ಹೆಣ್ಣನ್ನು ಮದುವೆಯಾಗಬೇಕು ಎನ್ನುತ್ತಾನೆ. ಅದನ್ನು ಮತ್ತೊಷ್ಟು ಬೆಳೆಸುತ್ತಾ ಇಪ್ಪತ್ತರ ಹುಡುಗನು ಏಳು ವಯಸ್ಸಿನ ಹುಡುಗಿಯನ್ನು ಮದುವೆಯಾಗಬಹುದು ಎನ್ನುತ್ತಾನೆ. ಎಂಟು ವರ್ಷದ ಹುಡುಗಿಯನ್ನು 'ಗೌರಿ'ಯೆಂದಿದ್ದು, ಅವಳನ್ನು ಮದುವೆ ಮಾಡಿಕೊಟ್ಟರೆ ತಂದೆಗೆ ಸ್ವರ್ಗ, ಒಂಬತ್ತು ವರ್ಷದ ಹುಡುಗಿ 'ರೋಹಿಣಿ' ಯನ್ನು ಮದುವೆ ಮಾಡಿಕೊಟ್ಟರೆ ವೈಕುಂಠ, ಹತ್ತು ವರ್ಷದ ಕನ್ನೆ 'ಕನ್ಯಕ'ಳನ್ನು ಮದುವೆ ಮಾಡಿಕೊಟ್ಟರೆ ಬ್ರಹ್ಮಲೋಕವು, ಹಾಗೂ ಹನ್ನೆರಡರ ಕನ್ನೆ 'ವೃಷಾಲಿ'ಯನ್ನು ಮದುವೆ ಮಾಡಿಕೊಟ್ಟರೆ ಗೌರವ ದೊರಕುತ್ತದೆ ಎಂದು ಹೇಳಲಾಗಿದೆ. ಇಲ್ಲಿ ಹನ್ನೆರಡು ವರ್ಷವಾದ ಮೇಲೆ ಮದುವೆ ಮಾಡಿಕೊಡದಿದ್ದರೆ ಅವಮಾನ ಅಗೌರವ ದೊರಕುತ್ತದೆ ಎಂಬ ಉದ್ದೇಶವಿದೆ. ಮನು ಕೂಡಾ ಇದೇ ರೀತಿಯಲ್ಲಿ ಹೇಳುತ್ತಾನೆ. ಅವನು ಗಂಡು ಇಪ್ಪತ್ತರಿಂದ ಇಪ್ಪತ್ನಾಲ್ಕಾಗಿರಬೇಕು, ಹೆಣ್ಣು ಎಂಟು ವಯಸ್ಸಾಗಿರಬೇಕು ಎಂದು ಹೇಳುತ್ತಾನೆ. ವಾಶಿಷ್ಠನಂತೂ ಇನ್ನೂ ಮುಂದುವರೆದು ಹೆಣ್ಣುಮಗುವು ಬೆತ್ತಲೆಯಾಗಿರುವಾಗಲೇ ಮದುವೆ ಮಾಡಿಬಿಡಬೇಕು ಎನ್ನುತ್ತಾನೆ. ಇದರ ಪರಿಣಾಮವಾಗಿ "ಅಷ್ಟಾವರ್ಷಾ ಭವೇದ್ಗೌರಿ" ಎಂಬ ಪರಂಪರೆಯ ಬೆಳೆಯಲು ಕಾರಣವಾಯಿತು. In a large part of Hindu society pre-puberty marriages are regarded as ideal. Woman in an Virginity is conisidered to be the most desired quality of a bride.[೩೪] (೩೪. Dube, 1963, p. 181) ಇದರ ಪರಿಣಾಮವಾಗಿ ಸ್ತ್ರೀಯ ವಿದ್ಯಾಭ್ಯಾಸ ಕುಂಠಿತಗೊಂಡಿತು. ಎಲ್ಲಕ್ಕಿಂತಲೂ ಮಿಗಿಲಾಗಿ ಪಾತಿವ್ರತ್ಯಕ್ಕೆ ಹೆಚ್ಚಿನ ಮಹತ್ವ ಕೊಡಲಾಯಿತು. ಹೆಣ್ಣಿನ ಸಾಮಾಜಿಕ, ಆರ್ಥಿಕ ಅಧಿಕಾರವನ್ನು ಕಸಿದುಕೊಂಡಿದ್ದಲ್ಲದೆ ವೈಯಕ್ತಿಕವಾಗಿ ಯೋಚಿಸುವ ಸಾಮಾರ್ಥ್ಯವನ್ನು ಕಸಿದುಕೊಂಡವು.

ಸೂತ್ರಕಾರರು ಕಲ್ಪಿಸಿದ ಕಟ್ಟುಪಾಡುಗಳು ಅತಿಯಾಗಿ ಸ್ತ್ರೀಯರ ಪರಿಸ್ಥಿತಿ ಚಿಂತಾಜನಕವಾಯಿತು. ಯಾಕೆಂದರೆ, ದಾಳಿಯಿಂದ ಮಾನ ಪ್ರಾಣ ರಕ್ಷಣೆಯ ನೆಪದಲ್ಲಿ ಕನ್ನೆಯನ್ನು ಆದಷ್ಟು ಬೇಗ ಮದುವೆ ಮಾಡಿಕೊಡುವಂತೆ ಮಾಡಲಾಯಿತು. ಕಾರಣ ಗಂಡ ಕಷ್ಟಕಾಲದಲ್ಲಿ ಹೆಂಡತಿಯನ್ನು ಸಾಕಿದ ರೀತಿಯಲ್ಲಿ ತನ್ನ ಮಗಳನ್ನು ರಕ್ಷಿಸಲಾರ ಮತ್ತು ಕನ್ಯೆತನದ ಪಾವಿತ್ರವು ಹಾಳಾದರೆ ಮುಂದೆ ಯಾರೂ ಮದುವೆಯಾಗರು ಎಂಬ ಭಯವು ಇದಕ್ಕೆ ಕಾರಣವಾಗಿರಬೇಕು. ಅದರ ಪರಿಣಾಮವಾಗಿ ಬಾಲ್ಯ ವಿವಾಹ ರೂಢಿಗೆ ಬಂದಿತು. ಇದಕ್ಕೆ ವ್ಯತಿರಿಕ್ತವಾಗಿ ಶುಶ್ರುತನು ಹದಿನಾರು ವಯಸ್ಸಿನ ನಂತರದಲ್ಲಿ ಮದುವೆ ಮಾಡಿಕೊಡಬೇಕು. ಇಲ್ಲದಿದ್ದರೆ ಹುಟ್ಟುವ ಮಗು ಸರಿಯಾದ ಬೆಳವಣಿಗೆಯನ್ನು ಹೊಂದದೇ ಇರಬಹುದು, ಹುಟ್ಟಿದರೂ ಅದು ಆರೋಗ್ಯಪೂರ್ಣವಾದ ದೇಹವನ್ನು ಪಡೆಯಲು ಸಾಧ್ಯವಾಗದಿರಬಹುದು ಎಂದು ಹೇಳುತ್ತಾನೆ. ಅಲ್ಲದೆ

ಹೊಟ್ಟೆಯಲ್ಲಿ ಸತ್ತು ಹೋಗಲುಬಹುದು. ವೈದ್ಯಶಾಸ್ತ್ರ ಧರ್ಮಶಾಸ್ತ್ರದ ವಿರುದ್ಧ ಮಾತಾನಾಡಿದ ಕಾರಣ ವೈದ್ಯಕೀಯ ಮಾಡುವವರನ್ನು ಧರ್ಮಬಾಹಿರರನ್ನಾಗಿ ಹೀಗಳೆಯಲಾಗಿದೆ.

ಕಿರಿಯ ವಯಸ್ಸಿಗೆ ಮದುವೆಯನ್ನು ಮಾಡುವುದರಿಂದ ಹೆಣ್ಣು ಪವಿತ್ರವಾಗಿ ಉಳಿಯುತ್ತಾಳೆ. ಆ ಮೂಲಕ ಪತಿವ್ರತ ಭಾವನೆ ಬೆಳೆಯಿತು. ಹೀಗೆ ಬೆಳೆದ ಕಲ್ಪನೆಯು ಪರರನ್ನು ನೋಡದ ಹಾಗೆ ಪರದಾ ಪದ್ಧತಿಯನ್ನು ಜಾರಿಗೊಳಿಸಲಾಯಿತು. ಎಲ್ಲ ವಿಧದಲ್ಲಿಯೂ ಗಂಡಿಗೆ ವಿಧೇಯಳಾಗಿರಬೇಕು. ಗಂಡ ಊಟಮಾಡಿ ಬಿಟ್ಟ ತಟ್ಟೆಯಲ್ಲಿ ಊಟಮಾಡಬೇಕು, ಅದನ್ನು ಪ್ರಸಾದವೆಂದು ಸ್ವೀಕರಿಸಬೇಕು. ಅಲ್ಲದೆ ಒಂದು ವೇಳೆ ಗಂಡ ಪರಸ್ತ್ರೀ ಸಂಗಡ ಇರಬೇಕು ಎಂದು ಬಯಸಿದರೆ ಹೆಂಡತಿಯಾದವಳು ಅದಕ್ಕೆ ಸಹಕರಿಸಬೇಕು ಎನ್ನುವ ಹಂತ ತಲುಪಿತು.

Instances are recorded in the Puranic literature where a husband demanded his wife to take him to the house of a prostitute on her shoulder, and the wife willingly did it.[೩೭]

ಮುಂದೆ ಈ ಪತಿವ್ರತೆಯ ಭಾವನೆ ಎಂತಹ ಹಂತಕ್ಕೆ ತಲುಪಿತು ಎಂದರೆ ಗಂಡ ಸತ್ತರೆ ಅವನ ಜೊತೆಯಲ್ಲಿಯೇ ಅವಳು ಚಿತೆಯನ್ನೇರಬೇಕು ಎಂದು ಧರ್ಮಶಾಸ್ತ್ರಕಾರರು ಹೇಳುತ್ತಾರೆ. ಇದರಲ್ಲು ಸಹಮತ ಅವರಲ್ಲಿ ಕಂಡುಬರುವುದಿಲ್ಲ. ಬ್ರಾಹ್ಮಣ ಪುರುಷ ಸತ್ತರೆ, ಅವನ ಸತಿಯಾದವಳು ಸಹಗಮನ ಮಾಡಬಾರದು. ಬೇರೆ ವರ್ಣಗಳ ಹೆಂಗಸು ಮಾತ್ರ ಮಾಡಲೇಬೇಕಾದ ಕರ್ತವ್ಯವಾಗಿದೆ. ಬ್ರಾಹ್ಮಣ ಸ್ತ್ರೀ ಗಂಡನೊಡನೆ ಸಹಗಮನ ಮಾಡಿದರೆ ಗಂಡ ಹೆಂಡತಿ ಇಬ್ಬರೂ ಸ್ವರ್ಗಕ್ಕೆ ಹೋಗುವುದಿಲ್ಲ ಎಂದು ಪೈಪಿನಾಶಿ ಹಾಗೂ ಆಂಗಿರಸ ಹೇಳಿದರೆ, ಮನು ಸ್ವಲ್ಪ ಉದಾರಿಯಾಗಿ ಕಾಣುತ್ತಾನೆ. ಅವನ ಪ್ರಕಾರ ಗಂಡಸತ್ತ ಹೆಣ್ಣು ಅವನ ಸ್ಮರಣೆಯಲ್ಲೇ ಕಾಲಕಳೆಯಬೇಕು. ಕನಸು ಮನಸ್ಸಿನಲ್ಲೂ ಬೇರೊಬ್ಬನನ್ನು ನೆನಸಬಾರದು. ಅಂತಹವಳು ಮಾತ್ರ ಸ್ವರ್ಗಕ್ಕೆ ಹೋಗುತ್ತಾಳೆ ಎನ್ನುತ್ತಾನೆ ಮನು. ಹೀಗೆ ಸತ್ತವರನ್ನು ದೇವತೆಗಳನ್ನು ಮಾಡಿ ಪೂಜಿಸುವದು ಬಂದಾಗ ಅದಕ್ಕೆ ಇನ್ನು ವ್ಯಾಪಕವಾದ ಬೆಂಬಲ ಹಾಗೂ ಪ್ರೋತ್ಸಾಹ ದೊರೆತಂತಾಯಿತು.

Pativrata: an ideal of unquestioning loyalty. Hindu values emphasize unassertiveness in behavior, humility, and submissiveness to the husband.[೩೭]

ಪತಿವ್ರತದ ಮೂಲಕ ಸ್ತ್ರೀಯರನ್ನು ಪುರುಷ ತನ್ನ ಸುಪರ್ದಿಗೆ ಸಂಪೂರ್ಣವಾಗಿ ತೆಗೆದುಕೊಂಡು. "ಯತ್ರನಾರ್ಯಸ್ತು ಪೂಜ್ಯಂತೇ ರಮಂತೆ ತತ್ರ ದೇವತಾ" ಎಂದು ಹೇಳುತ್ತಲೇ ಅವಳ ಎಲ್ಲಾ ಅಧಿಕಾರಗಳನ್ನು ಕಸಿದುಕೊಳ್ಳಲಾಯಿತು. "ಎಳೆಯ ವಯಸ್ಸಿನ ಹೆಣ್ಣು ಪರದೆಯ ಹಿಂದಿರಬೇಕು. ಗಂಡನ ಅಪ್ಪಣೆಯಿಲ್ಲದೆ ಅವಳು

ಹೊರಗೆ ಹೋಗಬಾರದು. ಹೊರಗೆ ಹೋಗಲೇಬೇಕಾದ ಪ್ರಸಂಗ ಬಂದರೆ ಅವಳು ಸರಿಯಾಗಿ ಬಟ್ಟೆಯನ್ನು ಧರಿಸಿರಬೇಕು. ಜೋರಾಗಿ ನಡೆಯಬಾರದು. ವ್ಯಾಪಾರಿ ಮುದುಕ, ವೈದ್ಯ ಇವರನ್ನುಹೊರತು ಪಡಿಸಿ ಬೇರೆಯವರೊಂದಿಗೆ ಮಾತನಾಡಬಾರದು. ನಡೆಯುವಾಗ ನಗಬಾರದು ಮತ್ತು ಮಾತನಾಡಬಾರದು. ಯಾವುದೇ ಅಂಗಚೇಷ್ಟೆಗಳನ್ನು ಮಾಡಬಾರದು. ದೇಹದ ಯಾವ ಭಾಗವು ಕಾಣದಂತೆ ಸದಾ ಎಚ್ಚರದಿಂದ ಇರಬೇಕು. ಮನೆಯಲ್ಲಿ ಇದ್ದಾಗ ಗಂಡನನ್ನು ನೆರಳಿನಂತೆ ಹಿಂಬಾಲಿಸಬೇಕು. ತೊತ್ತಿನಂತೆ ಗಂಡನ ಆಜ್ಞೆಯಲ್ಲಿ ಇರಬೇಕು. ಗಂಡನ ಊಟವಾದ ಮೇಲೆ ತಾನು ಊಟಮಾಡಬೇಕು. ದಿನವೆಲ್ಲಾ ಮನೆಯ ಕೆಲಸಗಳಲ್ಲಿ ಕಳೆಯಬೇಕಲ್ಲದೆ, ತನ್ನ ಅನುಕೂಲ, ನೆಮ್ಮದಿಗಳನ್ನು ಮರೆತು ಗಂಡನ ಇಷ್ಟಾನಿಷ್ಟಗಳಿಗೆ ಜಾಗೃತಳಾಗಿರಬೇಕು." ಇವು ಶುಕ್ರಾಚಾರ್ಯರು ಸ್ತ್ರೀಯರಿಗೆ ವಿಧಿಸುವ ನಿಯಮಗಳಾಗಿವೆ. ಜೀವನದುದ್ದಕ್ಕೂ ಸ್ತ್ರೀ ಹೀಗೇ ಇರಬೇಕು. ಬಾಲ್ಯದಲ್ಲಿ ತಂದೆಯ ಆಸರೆಯಲ್ಲಿ, ಯೌವನದಲ್ಲಿ ಗಂಡನ ನೆರಳಿನಲ್ಲಿ, ಮುಪ್ಪಿನಲ್ಲಿ ಮಕ್ಕಳ ಆಸರೆಯಲ್ಲಿಇರಬೇಕಾಯಿತು. ಮನು ಹೇಳುವಂತೆ;

ಪಿತಾ ರಕ್ಷತಿ ಕೌಮಾರೇ, ಭರ್ತಾ ರಕ್ಷತಿ ಯೌವನೇ
ರಕ್ಷಂತಿ ಸ್ಥವಿರೇ ಪುತ್ರಾ ನ ಸ್ತ್ರೀ ಸ್ವಾಂತ್ರ್ಯಮರ್ಹತಿ[೩೮]

ಇಲ್ಲಿಗೆ ನಿಲ್ಲಲಿಲ್ಲ. ಒಂದು ಕಾಲಕ್ಕೆ ಪವಿತ್ರವೆಂದು ಭಾವಿಸಲಾಗಿದ್ದ ಮುಟ್ಟು ಈಗ ಅಪವಿತ್ರವೆಂದು ಭಾವಿಸಲಾಯಿತು. ಮುಂದುವರೆದು, ಮಹಿಳೆಯರು ಸಾಮಾನ್ಯವಾಗಿ ಅಶುಚಿಯರಾಗಿರುತ್ತಾರೆ. ಅದರಲ್ಲೂ ಋತುಸ್ರಾವದ ಕಾಲದಲ್ಲಿ, ಗರ್ಭಿಣಿಯರಿದ್ದಾಗ ಮತ್ತು ಬಾಣಂತಿತನದಲ್ಲಿ ಅವರು ಅಶುದ್ಧರು. ಹೊಕ್ಕಳ ಕೆಳಗೆ ಮಹಿಳೆಯರು ಯಾವಾಗಲೂ ಮೈಲಿಗೆ. ಅಂತಹ ಅಶುದ್ಧ ವ್ಯಕ್ತಿಗಳು ಸತ್ತವರಿಗೆ, ಶುದ್ಧಾತ್ಮರಿಗೆ ಶುದ್ಧ, ಪವಿತ್ರವಾದ ತರ್ಪಣವನ್ನರ್ಪಿಸುವ ಕಾರ್ಯ ನಿರ್ವಹಿಸಲು ಸಂಪೂರ್ಣವಾಗಿ ಅನರ್ಹರಾಗುತ್ತಾರೆ ಎನ್ನಲಾಗಿದೆ.[೩೯] ಒಂದು ರೀತಿಯಲ್ಲಿ ಸಾಮಾಜಿಕವಾಗಿ ಬಹಿಷ್ಕೃತ ಜೀವನವನ್ನು ಸ್ತ್ರೀ ನಿರ್ವಹಿಸುತ್ತಿದ್ದರೆ, ಪರೋಕ್ಷವಾಗಿ ಅವರ ಲೈಂಗಿಕ ಜೀವನವನ್ನು ಅವರು ಸಂಪೂರ್ಣವಾಗಿ ಮರೆಮಾಚುವಂತಾಯಿತು. ಕಾಮದ ಮೇಲಿನ ಹಿಡಿತದಿಂದ ಸ್ತ್ರೀಗೆ ಅಥವಾ ಸಮಾಜ ಒಂದು ರೀತಿಯ ತಲ್ಲಣಕ್ಕೆ ಕಾರಣವಾಯಿತೆಂದು ತೋರುತ್ತದೆ.

The Hindu female role ideal of pativrata pertains to sex and aggression control, implementing the ideal in the socialization process entails the radical porscription of sexual and aggressive activity, which on the personality level demands the radical and continue repression of sex and aggression drives.[೪೦]

ಒಟ್ಟಿನಲ್ಲಿ ಹೇಳಬೇಕೆಂದರೆ ವೈದಿಕ ಅಥವಾ ಹಿಂದೂ ಪರಂಪರೆಯಲ್ಲಿ ಸ್ತ್ರೀಯು ಕೆಲವು ಸಲ ಮಿಂಚಿದ್ದಾಳೆ. ಆದರೆ, ಹೆಚ್ಚು ನೋವನ್ನು ಅನುಭವಿಸಿದ್ದಾಳೆ. ವಿನೋಬಾ ಭಾವೆ ಹೇಳುವಂತೆ; "ಪುರುಷರು ಪ್ರಪಂಚದ ವ್ಯವಾಹರಗಳನ್ನು ಸಂಪೂರ್ಣವಾಗಿ ಕುಲಗೆಡಿಸಿದ್ದಾರೆ. ಅವುಗಳನ್ನು ಸರಿಪಡಿಸುವುದು ಇನ್ನೂ ಅವರಿಂದಾಗಿಲ್ಲ. ಇನ್ನು ಅವರಿಗಿರುವ ಒಂದೇ ಮಾರ್ಗವೆಂದರೆ ಎಲ್ಲಾ ಅಧಿಕಾರ ಸೂತ್ರಗಳನ್ನು ಸ್ತ್ರೀಗೆ ಬಿಟ್ಟುಕೊಡುವುದಾಗಿದೆ."[೮೦]

೫.೨.೧. ಬುಡಕಟ್ಟು ಹಾಗೂ ದ್ರಾವಿಡ ಸಮಾಜ

ಹಿಂದೂ ಧಾರ್ಮಿಕ ರೀತಿ ರಿವಾಜುಗಳನ್ನು ಒಪ್ಪಿಕೊಂಡಿದ್ದರೂ ಸಹ ಹಲವಾರು ವಿಷಯಗಳಲ್ಲಿ ತನ್ನದೇ ಆದ ರೂಪಗಳನ್ನು ಅಳವಡಿಸಿಕೊಂಡಿದೆ. ಬ್ರಾಹ್ಮಣ ಧಾರ್ಮಿಕ ಚೌಕಟ್ಟುಗಳು ಉತ್ತರದಿಂದ ದಕ್ಷಿಣಕ್ಕೆ ಹರಿದುಬಂದಂತವುಗಳು. ಅವುಗಳ ಪ್ರಾಬಲ್ಯ ಇಲ್ಲಿ ಭಾರೀ ಪ್ರಮಾಣದಲ್ಲಿ ಆಗಿದೆ. ಜಾತಿ ಪದ್ಧತಿಯಲ್ಲಿ ನಾವು ಕಾಣಬಹುದು. ಅದೇ ರೀತಿ ಧಾರ್ಮಿಕ ಚರಿತ್ರೆಯಲ್ಲಿ ಅಗಾಧವಾದ ಪ್ರಮಾಣದಲ್ಲಿ ಪರಿಣಾಮ ಉಂಟಾಗಿವೆ. ಆದರೆ ಕುಟುಂಬ ವ್ಯವಸ್ಥೆಯಲ್ಲಿ ಅಷ್ಟು ಪ್ರಮಾಣದಲ್ಲಿ ಆಗಿರುವ ಹಾಗೆ ಕಂಡುಬರುವುದಿಲ್ಲ.

ದ್ರಾವಿಡ ಸಮಾಜದಲ್ಲಿ ಹೆಣ್ಣಿನ ಸ್ಥಾನ ಉಚ್ಛಮಟ್ಟದಲ್ಲಿತ್ತು. ಉತ್ತರದಲ್ಲಿ ಕಂಡುಬರುವ ಹಾಗೆ ಪರದಾ ಪದ್ಧತಿಯಾಗಲಿ, ಮನೆಯಲ್ಲಿಯೇ ಇಡುವುದಾಗಲಿ ಇಲ್ಲಿ ಕಂಡುಬರುವುದಿಲ್ಲ. ಒಂದು ಹಂತದಲ್ಲಿ ವಿಧವಾ ವಿವಾಹವು ಸಾಮಾನ್ಯವಾಗಿತ್ತು ಎನ್ನಲಾಗಿದೆ. ಶ್ರೀಮಂತ, ಬ್ರಾಹ್ಮಣ ಹಾಗೂ ಕ್ಷತ್ರಿಯ ಜನಾಂಗಗಳು ಹಿಂದೂ ಧಾರ್ಮಿಕ ಪದ್ಧತಿಗಳನ್ನು ಒಪ್ಪಿಕೊಂಡರು, ಕೆಲಸಮಾಡುವ ವರ್ಗ ಅಥವಾ ಶೂದ್ರ ವರ್ಗವು ಅಷ್ಟು ಸುಲಭವಾಗಿ ಹಿಂದೂ ಧಾರ್ಮಿಕ ಪದ್ಧತಿಗಳನ್ನು ಒಪ್ಪಿಕೊಳ್ಳಲಿಲ್ಲ. ಕಾರಣ ಗಂಡು ಎಷ್ಟು ಕುಟುಂಬದಲ್ಲಿ ಮುಖ್ಯನೋ ಅಷ್ಟೇ ಪ್ರಮಾಣದಲ್ಲಿ ಹೆಣ್ಣು ಮುಖ್ಯಳಾಗುತ್ತಾಳೆ. ಹೊಲದಲ್ಲಿ ಗಂಡಿನ ಪಕ್ಕದಲ್ಲಿ ಹೆಣ್ಣು ಉತ್ತುವದರಿಂದ ಹಿಡಿದು ಬೆಳೆದ ಬೆಳೆಯನ್ನು ಮನೆಗೆ ತರುವ ತನಕ, ಮತ್ತೂ ಮುಂದಿನ ವರ್ಷದವರೆಗೆ ಅದರ ಕಡೆ ಗಮನ ಕೊಡುವ ಕೆಲಸವು ಅವಳದೆ ಆಗಿರುತ್ತದೆ. ಮನೆಗೆಲಸಗಳನ್ನು ಹೆಣ್ಣು ಮಾಡಿದರೆ, ಕಟ್ಟಿಗೆ, ನೀರು ತರುವುದು, ದನಕರುಗಳನ್ನು ನೋಡಿಕೊಳ್ಳುವುದು ಈ ವರ್ಗದಲ್ಲಿ ಗಂಡುಮಾಡಲೇ ಬೇಕಾದ ಕೆಲಸಗಳಾಗುತ್ತವೆ.

ಹೆಣ್ಣು ವೈದಿಕ ಅಥವಾ ಹಿಂದು ಪರಂಪರೆಯಲ್ಲಿ ಮಾರುವ ವಸ್ತುವಾದರೆ ಇಲ್ಲಿ, ಸ್ವತಂತ್ರವಾದ ಅಸ್ತಿತ್ವವನ್ನು ಹೊಂದುವಂತ ಅವಕಾಶವನ್ನು ಇಟ್ಟುಕೊಂಡವಳಾಗಿದ್ದಳು. ವ್ಯವಸಾಯವನ್ನು ತಾನೂ ಮಾಡುತ್ತಿದ್ದರಿಂದ ಆರ್ಥಿಕವಾಗಿ ಸಬಲಳಾಗಿರುತ್ತಿದ್ದಳು. Women often handle the family finances and engage in independent financial transactions, including money borrowing, leading ... family authority tends to be rather equally divided between husband and wife.[೮೧] ಈ ಎಲ್ಲಾ

ಕಾರಣಗಳಿಂದ ಹೆಣ್ಣು ಬಲಿಷ್ಠವಾಗಿ ಕಂಡುಬರುತ್ತಾಳೆ. ಅಲ್ಲದೆ, ಒಂಟಿಯಾಗಿ ಯಾರ ಸಹಾಯವಿಲ್ಲದೆ ತಿರುಗಾಡಬಲ್ಲವಳಾಗಿದ್ದಳು. ಕಾರಣ ಗಂಡಿನ ಹಾಗೆ ಮನೆ ಒಳಗಿನ ಹೊರಗಿನ ಕೆಲಸಗಳನ್ನು ಹೆಣ್ಣು ಮಾಡುತ್ತಿದ್ದರಿಂದ.

ಬುಡಕಟ್ಟುಗಳಲ್ಲಿ ವಿವಾಹವು ಹಲವಾರು ರೀತಿಯಲ್ಲಿ ನಡೆಯುತ್ತವೆ. ತೆರವನ್ನು ಕೊಟ್ಟು ಹೆಣ್ಣನ್ನು ತರುವುದು ಭಾರತದ ಪ್ರಾಚೀನ ಜನಾಂಗಗಳಲ್ಲಿ ಅತೀ ವ್ಯಾಪಕವಾಗಿ ಕಂಡುಬರುವ ವಿವಾಹ ಸಂಪ್ರಾದಯಗಳಲ್ಲಿ ಪ್ರಮುಖವಾದುದು. ವರನ ಕಡೆಯವರು ವಧುವಿನ ತಂದೆಗೆ ಹಣದ ಮೂಲಕವೂ ಅಥವಾ ವಸ್ತುವಿನ ರೂಪದಲ್ಲಿಯೋ ತೆರವನ್ನು ಕೊಡಬಹುದು. ಅದು ಸಾಕುಪ್ರಾಣಿಯ ರೂಪದಲ್ಲಿರಬಹುದು,ಅಥವಾ ಉಡುಪು, ಆಯುಧ, ಮುಂತಾದವುಗಳ ರೂಪದಲ್ಲಿರಬಹುದು. ಭಾವೀ ಮಾವನ ಮನೆಯಲ್ಲಿ ಮೂರು ವರ್ಷ ದುಡಿಯುವ ಮೂಲಕ ಅಥವಾ ಸೇವೆ ಮಾಡುವುದನ್ನು ತೋರಿಸಿ ಆ ಮೂಲಕ ಮದುವೆಯಾಗುವ ಸಂಪ್ರಾದಯ ಕೆಲವು ಬುಡಕಟ್ಟುಗಳಲ್ಲಿದೆ. ಅಲ್ಲದೆ ಕೆಲವು ಬುಡಕಟ್ಟುಗಳಲ್ಲಿ ಗಂಡಿನ ಸಾಮರ್ಥ್ಯವನ್ನು ಗಮನಿಸಿ ಹೆಣ್ಣನ್ನು ಮದುವೆ ಮಾಡಿಕೊಡುವುದಿದೆ. ಕೆಲವು ಆದಿವಾಸಿಗಳಲ್ಲಿ ಗಂಡು ಹೆಣ್ಣು ಪ್ರೀತಿಸಿ ಓಡಿಹೋಗಿ ಮದುವೆಯಾಗುವುದು ರೂಢಿಯಲ್ಲಿದೆ. ಎರಡು ಮೂರು ತಿಂಗಳ ನಂತರ ತಿರುಗಿಬಂದಾಗ ಅವರ ತಂದೆತಾಯಿಗಳು ಗಂಡಹೆಂಡರೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಮತ್ತೆ ಕೆಲವು ಜನಾಂಗಗಳಲ್ಲಿ ತಂದೆ ಅನುಮತಿ ಕೊಡದಿದ್ದಾಗ ಗಂಡು ಬಲಾತ್ಕಾರವಾಗಿ ಹೆಣ್ಣಿಗೆ ಕುಂಕುಮವನ್ನು ಹಣೆಗೆ ಹಚ್ಚುತ್ತಾನೆ. ಅಲ್ಲದೆ ಅವರು ಆ ಊರನ್ನು ಬಿಟ್ಟು ಬೇರೆ ಊರಿನಲ್ಲಿ ವಾಸಮಾಡಲು ಆರಂಭಿಸಿದಾಗ, ಹೆಣ್ಣಿನ ತಂದೆ ಕರೆದುಕೊಂಡು ಬಂದು ಅವರು ಗಂಡಹೆಂಡಿರೆಂದು ಒಪ್ಪಿಕೊಳ್ಳುತ್ತಾನೆ. ಅಲ್ಲದೆ ಒಪ್ಪಿ ಮದುವೆಯಾಗುವೆನೆಂದು ಹೇಳಿ ನಂತರ ಹುಡುಗ ಕೈಬಿಟ್ಟಾಗ ಹುಡುಗಿ ಹುಡುಗನ ಮನೆಗೆ ಬಂದು ಒಂದು ಮೂಲೆಯಲ್ಲಿ ಅತಿಕ್ರಮಿಸಿ ಕುಳಿತುಬಿಡುತ್ತಾಳೆ. ಹುಡುಗನ ತಾಯಿ ಎಷ್ಟೇ ಜೋರು ಮಾಡಿದರೂ ಹೋಗುವುದಿಲ್ಲ. ನಂತರ ಅಲ್ಲಿಯ ಜನ ಹುಡುಗಿಗೆ ಮದುವೆಯನ್ನು ನೆರವೇರಿಸುತ್ತಾರೆ. ಇವು ಬುಡಕಟ್ಟುಗಳಲ್ಲಿ ಕಂಡುಬರುವ ವಿವಾಹ ಪದ್ಧತಿಗಳಾಗಿವೆ.

ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿ ಸೋದರಮಾವನ ಮಗಳು, ಸೋದರತ್ತೆಯ ಮಗಳು, ಅಕ್ಕನ ಮಗಳನ್ನು (Cross-cousin) ಮದುವೆಯಾಗುವುದು ಹೆಚ್ಚುಕಂಡುಬರುತ್ತದೆ. ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಈ ರೀತಿಯ ಮದುವೆಯು ಆರೋಗ್ಯಪೂರ್ಣ ಸಂಬಂಧವನ್ನು ಹೊಂದಲು ಕಾರಣವಾಗಿದೆಯಲ್ಲದೆ, ಇಲ್ಲಿ ಹೆಣ್ಣಿನ ಮೇಲಿನ ದಬ್ಬಾಳಿಕೆಗೆ ಕಾರಣವಾಗುವುದಿಲ್ಲ. ಈ ಸೋದರ ಸಂಬಂಧಿ ವಿವಾಹವು ಹಿಂದು ಪರಂಪರೆಯಲ್ಲಿ ಬರುವ ಹೆಣ್ಣಿನ ಮೇಲಿನ ನಿರ್ಬಂಧಗಳಿಂದ ಮುಕ್ತವಾದ ವಾತಾವರಣವನ್ನು ಸೃಷ್ಟಿಸಲು ಕಾರಣವಾಯಿತು. ಗೊತ್ತಿರುವ ಮನೆಗೆ ಹೆಣ್ಣು ಬರುತ್ತಾಳೆ. ಗಂಡ ಎನಿಸಿಕೊಳ್ಳುವವನ ಒಡನಾಟ

ಹತ್ತಿರವಾಗಿರುತ್ತದೆ. ಲೈಂಗಿಕವಾಗಿ ಯಾವುದೇ ರೀತಿಯ ಕಿರುಕುಳ ಇಲ್ಲಿ ಕಾಣಿಸದು. ಯಾಕೆಂದರೆ ಗಂಡು ಹೆಣ್ಣು ನಾಚುವ ಅಥವಾ ದೂರ ಸರಿಯುವ ಪ್ರಸಂಗ ಇಲ್ಲಿ ಬಾರದು. ಗಣನಾಥ ಅವರು ಹೇಳುವಂತೆ:

> ... The bride moves into a known household, among familiar kinsmen, generally in a locality not too far from her parental home. Contact with the parents can be continued after marriage much more effectively than in areas where the sapinda rule prevails. Hence we may forumlate a general rule: the closer the kinship tie before marriage, the easier the adjustment to the in-law roles after marriage.[೬೩]

ಇಲ್ಲಿಗೆ ಬರುವ ಹೆಣ್ಣಿಗೆ ಈ ಮನೆಯು ಬೇರೆಯ ಮನೆಯ ವಾತಾವರಣವಾಗಿ ಕಂಡುಬರುವುದಿಲ್ಲ. ಯಾಕೆಂದರೆ ಈ ಹಿಂದೆ ಅನೇಕ ಬಾರಿ ಇಲ್ಲಿ ಬಂದು ಹೋಗುತ್ತಿದ್ದಳು. ಅಲ್ಲದೆ ಅತ್ತೆ ಮಾವ ಹಾಗೂ ಗಂಡ ಇವರು ತನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಾರೆಯೇ ಇಲ್ಲವೇ ಎಂಬ ಆತಂಕಗಳು ಯಾವುದು ಇರುವುದಿಲ್ಲ. ಇನ್ನೊಂದು ಪ್ರಮುಖವಾದ ಅಂಶವೆಂದರೆ ಲೈಂಗಿಕವಾದ ಹೆಚ್ಚಿನ ಮಟ್ಟಿಗೆ ಯಾವುದೇ ಅತೃಪ್ತಿಯ ಬಾವನೆ ಕಾಣಲು ಸಾಧ್ಯವಾಗುವುದಿಲ್ಲ. ಹೆಚ್ಚುಕಡಿಮೆ ಸಮಾನವಾದ ತೃಪ್ತಿಯನ್ನು ಹೊಂದಿರುತ್ತಾರೆ. ಸಾಮಾನ್ಯವಾಗಿ ಆರ್ಥಿಕವಾಗಿ ಹೆಚ್ಚು ಸಬಲವಾದಂತೆ ಕೆಲವು ಮಾರ್ಪಾಡುಗಳು ಈ ಸಮಾಜಗಳಲ್ಲಿ ಕಾಣಿಸಿಕೊಳ್ಳಬಹುದು. ಆದರೆ ಬಹುತೇಕವಾಗಿ ಮೂಲರೂಪಗಳನ್ನು ಉಳಿಸಿಕೊಂಡುಬಂದಿರುವ ಹಾಗೆ ಕಾಣುತ್ತದೆ. ದಕ್ಷಿಣ ಭಾರತದಲ್ಲಿ ಈಗ ಪುರುಷಕೇಂದ್ರಿತವಾದ ಸಮಾಜದ ರೂಪಗಳು ಕಂಡುಬಂದರು, ಅದರ ಅಂತರಾಳದಲ್ಲಿ ಇಂದಿಗೂ ಸ್ತ್ರೀ ಕೇಂದ್ರಿತವಾದ ಸಮಾಜದ ಬೇರುಗಳು ಗಟ್ಟಿಯಾಗಿ ನೆಲೆಗೊಂಡಿವೆ ಎನ್ನಲಾಗಿದೆ. ಆ ಕಾರಣದಿಂದಲೇ ಕನ್ಯಾಕುಮಾರಿಯಂತ ಪ್ರಾಚೀನದೇವತೆ ಬೆಳೆದು ಬರಲು ಸಾಧ್ಯವಾಯಿತು. ಅದೇ ರೀತಿ ಮನುಷ್ಯ ರೂಪದಲ್ಲಿರುವ ಮಾತಂಗಿಯು ಬ್ರಾಹ್ಮಣನ ಮೇಲೆ ಉಗಿದರು ಅದು ಪವಿತ್ರವಾದುದೆಂದು ಭಾವಿಸುವಷ್ಟು ಪ್ರಭಲವಾಯಿತು. ಇಲ್ಲಿ ಸಂದಿಗ್ಧತೆಗಳು ಇಲ್ಲವೆಂದೇನೂ ಇಲ್ಲ. ಹಲವಾರು ಸಂಶಯಗಳು ಇರಬಹುದಾದರೂ ಇಲ್ಲಿ ಅವುಗಳ ಚರ್ಚೆಗೆ ಅವಕಾಶಗಳು ಇಲ್ಲ. ಅದು ಮಿತಿಯೂ ಕೂಡಾ.

ಅಡಿಟಿಪ್ಪಣಿಗಳು

೧. Bhandarkar, R.G., 1936, Collected Works, Vol. 4, p. 208 .

೨. Starbuck, Encyclopaedia of Relgion and Ethics, Vol.5, p.828

೩. ಅದೇ. Vol. 2 p. 15

೪. Frazer, J.G., 1907, The Golden Bowe, Adonis Attis Osiris, p. 394-5

೫. ಅದೇ, p. 398

೬. Gurdon, P.R.T., 1907,The Khasis,London, p.32

೭. ನಂಜಮ್ಮಣ್ಣಿ, ಎಂ., ೧೯೮೨, ಭಾರತೀಯ ಸಾಮಾಜಿಕ ಸಂಸ್ಥೆಗಳು, ಪು ೧೬೦

೮. Thurston, 1909, Castes and Tribes of Southern India, vol. II,III, IV, V&VII;
Nanjundayya, H.V.and A.K. Iyar, 1928-35, Mysore Tribes and Castes, vol.II, III

೯. Russell, R.V., 1916, Tribes and Castes of the Central Province of India, vol. II,III

೧೦. James, E.O., 1959, The Cult of Mother Goddess, p. 228-9

೧೧. ಉಪಾಧ್ಯಾಯ. ೧೯೮೬, ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ. ಅನು ಪ್ರಧಾನ ಗುರುದತ್ತ, ಪುಟ. ೧೦೦

೧೨. ನಂಜಮ್ಮಣ್ಣಿ, ಎಂ., ೧೯೮೨, ಭಾರತೀಯ ಸಾಮಾಜಿಕ ಸಂಸ್ಥೆಗಳು, ಪು ೧೬೦

೧೩. ಉಪಾಧ್ಯಾಯ, ಉಮೆನ್ ಇನ್ ಋಗ್ವೇದ, ೧೯೭೪

೧೪. ಋ.೧೦.೮೫.೨೩

೧೫. ಋ.೧೦.೮೫.೨೭

೧೬. ಋ.೧೦.೮೫.೩೫

೧೭. ಋ.೧೦.೮೫.೩೭

೧೮. ಋ.೧೦.೮೫.೪೪

೧೯. ಋ.೧೦.೮೫.೪೫

೨೦. ಚಕ್ರವರ್ತಿ, ಜಿ.ಎನ್., ೧೯೯೮,ಋಕ್‌ಸಂಹಿತಾಸಾರ, ಕೇ. ಸಾ. ಅಕಾಡೆಮಿ, ಪುಟ ೬೩

೨೧. ಋ. ೧೦. ೮೫. ೪೭

೨೨. ಋ. ೧೦. ೮೫. ೩೬

೨೩. ಚಕ್ರವರ್ತಿ, ಜಿ.ಎನ್., ಪುಟ ೬೩

೨೪. ವೀರಣ್ಣ, ಸಿ., ೧೯೯೯, ಕನ್ನಡ ಕಾವ್ಯ ಕಂಡ ಹೆಣ್ಣು, ಪು. ೧೨

೨೫. ಉಪಾಧ್ಯಾಯ. ಪೂರ್ವೋಕ್ತ. ಪುಟ.೨೮೨

೨೬. Kapadia, 1955, p .159

೨೭. ನಂಜಮ್ಮಣ್ಣಿ, ಎಂ., ಪು ೧೬೨

೨೮. ಋ. ೧.೧೧೭.೭

೨೯. ಉಪಾಧ್ಯಾಯ, ಪೂರ್ವೋಕ್ತ, ಪು.೨೮೩

೩೦. Radhakrishnan, S., 1947, Religion and Society, p. 139-40

೩೧. ಉಪಾದ್ಯಾಯ, ಪೂರ್ವೋಕ್ತ, ಪುಟ.೨೮೧

೩೨. ಋಗ್ವೇದ ೧೦. ೧೨೫. ೬.

೩೩. ಉಪಾದ್ಯಾಯ, ಪೂರ್ವೋಕ್ತ, ಪು.೨೮೩

೩೪. ಅದೇ, ಪುಟ.೨೮೭

೩೫. ನಂಜಮ್ಮಣ್ಣಿ, ಎಂ., ಪೂರ್ವೋಕ್ತ, ಪು ೧೭೭

೩೬. Kapadia, 1955, p. 161

೩೭. ಅದೇ, ೧೬೨

೩೮. ಮನುಸ್ಮೃತಿ, ೯.೩.

೩೯. ವೀರಭದ್ರಪ್ಪ, ಬಿ.ವಿ.,೨೦೦೦, ವೇದಗಳಲ್ಲಿ ಜನಸಾಮಾನ್ಯರು, ೯೬

೪೦. Obeyesekere. Gananath.,1987,The Cult of the Goddess Pattini, p.441

೪೧. ನಂಜಮ್ಮಣ್ಣಿ, ಎಂ., ೧೯೮೨, ಭಾರತೀಯ ಸಾಮಾಜಿಕ ಸಂಸ್ಥೆಗಳು, ಪು ೧೭೭

೪೨. Harper, E.B., 1964, Reitual Pollution as an Intergrator of Caste and Religion-in Religion in South Asia

೪೩. Obeyesekere, Gananath.,1987,The Cult of the Goddess Pattini, p.441

ಸಮಾರೋಪ

ತಾಯಿಯನ್ನು ಮಾತೃಸ್ವರೂಪಿಣಿಯಾದ ದೇವತೆಯೆಂದು ತಿಳಿಯಲಾದುದು ಮೂಲಭೂತವಾದ ಕಲ್ಪನೆಯೆಂದು ಭಾವಿಸಲಾಗಿದೆ. ಇದು ಪ್ರಾಚೀನ ಕಾಲದಿಂದಲೂ ಪ್ರಪಂಚದ ಎಲ್ಲಾ ಭಾಗಗಳಲ್ಲಿ ಈ ನಂಬಿಕೆ ವ್ಯಾಪಕವಾಗಿ ಕಂಡುಬರುತ್ತದೆ. ಪ್ರಾಚೀನ ಸಮಾಜದಲ್ಲಿ ಹೆಣ್ಣಿಗೆ ಹೆಚ್ಚಿನ ಮಹತ್ವವನ್ನು ಕೊಡಲಾಗಿತ್ತು. ಕಾರಣ ಸಾಮಾಜಿಕ ಜವಾಬ್ದಾರಿಗಳು ಗಂಡಿಗಿಂತ ಹೆಚ್ಚಿಗಿದ್ದವು. ಅಲ್ಲದೆ, ಹೆಣ್ಣಿಗೆ ಪ್ರಕೃತಿಕೊಟ್ಟ ಕೊಡುಗೆಯೆಂದರೆ ತಾಯ್ತನ. ತಾಯ್ತನವು ಒಂದು ನಿಗೂಢವಾದ ಕ್ರಿಯೆಯಾಗಿ ಪ್ರಾಚೀನ ಜನರಿಗೆ ಕಂಡಿತು. ಅಲ್ಲದೆ ಅದು ಒಂದು ರೀತಿಯಲ್ಲಿ ದೈವತ್ವದ ನೆಲೆಯನ್ನು ಅವಳಲ್ಲಿ ಅರಸಲು ಕಾರಣವೂ ಆಗಿದೆ. ಯಾಕೆಂದರೆ, ತಾಯ್ತನವೆಂಬುದು ತನ್ನ ಹಿಂದಿನವರನ್ನು ಅಂದರೆ ಪಿತೃಗಳನ್ನು ಹೊತ್ತುತರುವ ವಾಹಕವಾಗಿ ಕಾಣಲಾಗಿದೆ. ಆ ಕಾರಣದಿಂದ ಗರ್ಭವನ್ನು, ಯೋನಿಯನ್ನು ದೊಡ್ಡ ಪ್ರಮಾಣದಲ್ಲಿ ತೋರಿಸಲಾಗುತ್ತಿತ್ತು. ಅಂತೆಯೇ, ಹೆಣ್ಣಿನ ದೇಹವು ಅತ್ಯಂತ ನಿಗೂಢವಾದರೆ, ಅದಕ್ಕಿಂತಲೂ ನಿಗೂಢವಾದದ್ದು ತಾಯ್ತನ. ಹಾಗೆಯೆ ನಿಗೂಢತೆ, ಅಸ್ಪಷ್ಟತೆ ಸ್ಪಷ್ಟತೆಯ ಸಾಕಾರ ರೂಪವೇ ತಾಯಿ ಅಥವಾ ನಿಸರ್ಗವಾಗಿದೆ ಎಂಬ ಮಾತು ಮಾತೃತ್ವದ ಮಹತ್ವವನ್ನು ತೋರಿಸುತ್ತದೆ. ನಿಸರ್ಗಕ್ಕೂ ಹಾಗೂ ತಾಯಿಗೂ ಇರುವ ಅಂತರ ತುಂಬಾ ಕಡಿಮೆ. ನಿಸರ್ಗವು ತನ್ನಲ್ಲಿರುವ ಸಮಸ್ತವನ್ನು ಮಾನವನಿಗೆ ಕೊಟ್ಟರೆ, ತಾಯಿ ತನ್ನ ಎದೆಯ ಹಾಲಿನಿಂದ ಪೋಷಿಸಿ ಬೆಳೆಸುತ್ತಾಳೆ. ಸಾವಿರಾರು ವರ್ಷಗಳ ಹಿಂದಿನ ವಿಗ್ರಹಗಳು ಮಾತೃತ್ವದ ಹಿರಿಮೆಯನ್ನು ನಿರೂಪಿಸುತ್ತವೆ.

ಸುಮಾರು ೨೬,೦೦೦ ವರ್ಷಗಳ ಹಿಂದಿನ (Cape province, South Africa) ಒಂದು ಗುಹಾ ರೇಖಾ ಚಿತ್ರದಲ್ಲಿ ಮೂರು ಚಿತ್ರಗಳನ್ನು ಬಿಡಿಸಲಾಗಿದೆ. ಅವುಗಳಲ್ಲಿ ಒಂದು ಚಿತ್ರವು ಗಂಡಸರು ಮೀನಿನ ಬೇಟೆಯಾಡುತ್ತಿದ್ದರೆ, ಇನ್ನೊಂದು ಚಿತ್ರದಲ್ಲಿ ನಾಯಿಗಳ ಜೊತೆಯಲ್ಲಿರುವ ಚಿತ್ರದಲ್ಲಿ ಗಂಡಸರ ಬೇಟೆಯಾಡಿದ ಪ್ರಾಣಿಯನ್ನು ಹೊತ್ತು ತರುತ್ತಿರುವ ಚಿತ್ರವಿದೆ. ಇನ್ನೊಂದು ಚಿತ್ರದಲ್ಲಿ ಹೆಂಗಸೊಬ್ಬಳು ಚೂಪಾದ ಕಟ್ಟಿಗೆಯ ಸಹಾಯದಿಂದ ಗೆಡ್ಡೆಯೊಂದನ್ನು ಅಗೆಯುತ್ತಿರುವಂತೆ ಚಿತ್ರಿಸಲಾಗಿದೆ. ಈ ಚಿತ್ರವು ಕೃಷಿಯ ಆರಂಭವನ್ನು ಯಾರು ಮಾಡಿದರೂ ಎಂಬುದನ್ನು ನಿರೂಪಿಸುತ್ತಿದೆ. ಹೆಣ್ಣಿನಿಂದಲೇ ಕೃಷಿಯು ಆರಂಭವಾಯಿತೆಂದು ನಂಬಲಾಗಿದೆ. ಈ ನಂಬಿಕೆಗೆ ಪುರಾವೆಯನ್ನು ಒದಗಿಸುತ್ತದೆ. ಪ್ರಾಚೀನ ಜನರ ಬದುಕಿಗೆ ಕೃಷಿಯ ಆವಿಷ್ಕಾರದಿಂದ ಒಂದು ರೀತಿಯ ನೆಲೆನಿಂತ ಜೀವನವನ್ನು

ನಡೆಸಲು ಕಾರಣವಾಯಿತು. ಅಲ್ಲದೆ ಸಾಮಾಜಿಕ ಉನ್ನತೀಕರಣಕ್ಕೆ ಪ್ರೇರಕವಾಯಿತು. ಧಾರ್ಮಿಕ ಕ್ರಿಯೆಯಲ್ಲಿ ಹಿಂದಿಗಿಂತಲೂ ಈಗ ಹೆಣ್ಣಿ ಪಾತ್ರ ಹಿರಿದಾಯಿತು. ಹೆಣ್ಣು ಹಾಗೂ ಭೂಮಿಯನ್ನು ಒಂದೇ ರೂಪವೆಂಬಂತೆ ನೋಡಲಾಯಿತು. ಕಾರಣ ಹೆಣ್ಣಿನ ಸಮಾನ ಗುಣಗಳು ಭೂಮಿಯಲ್ಲಿ ಕಂಡುಬರುವುದರಿಂದ ದೇವತೆಯ ರೂಪದಲ್ಲಿ ಕಾಣಲಾಯಿತು. ಆದರೆ ಮುಂದಿನ ಹಂತದಲ್ಲಿ ತಾಯಿಗಿರುವ ಮಾನ್ಯತೆಯು ತಂದೆಗೆ ವರ್ಗಾಯಿಸಲ್ಪಟ್ಟಿತು. ಮೊದಲ ಹಂತದಲ್ಲಿ ತಾಯಿಯು ಜನನ ಕ್ರಿಯೆಯಲ್ಲಿ ಸ್ವತಂತ್ರ್ಯವೆಂದು ಭಾವಿಸಿದ್ದರೆ, ನಂತರದ ಕಾಲಘಟ್ಟದಲ್ಲಿ ಪುರುಷನೇ ಪ್ರಧಾನವೆಂದು ತಿಳಿಯಲಾಯಿತು. ಈ ಕಾರಣದಿಂದ ಬೀಜವನ್ನು ನೆಡುವುದು ತಂದೆ, ಅದಕ್ಕೆ ಜಾಗಕಲ್ಪಿಸುವುದು ಮಾತ್ರ ತಾಯಿಯ ಕಾರ್ಯ ಎಂಬ ನಂಬಿಕೆ ಬೆಳೆಯಿತು. ಅಲ್ಲದೆ ಕೃಷಿಕಾಲಘಟ್ಟದ ಜೀವನ ಹೋರಾಟದ ಜೀವನವಾಯಿತು. ಯುದ್ಧ ಮತ್ತು ಸಂಘರ್ಷದ ಜೀವನದ ಕಾಲ ಇದಾದರಿಂದ ಇಲ್ಲಿ ಹೆಣ್ಣಿಗಿಂತ ಪುರುಷನೇ ಶ್ರೇಷ್ಠವೆಂದು ತಿಳಿಯಲಾಯಿತು. ಆ ಕಾರಣದಿಂದ ಮಾತೃಮೂಲದಿಂದು ಪಿತೃಮೂಲಕ್ಕೆ ಸಮಾಜ ಬದಲಾವಣೆ ಹೊಂದಿದ ಪ್ರಯುಕ್ತ ಮಾತೃದೇವತೆಯರ ಸ್ಥಾನವು ಬದಲಾಯಿತು. ಒಂದು ಕಾಲದಲ್ಲಿ ಸ್ತ್ರೀಯರೇ ಪ್ರಬಲವಾಗಿದ್ದ ಈಜಿಪ್ತ್, ಇಸ್ರೇಲ್, ಮೆಡಿಟರೇನಿಯನ್ನಿನ ಸುತ್ತಮುತ್ತಣ ದೇಶಗಳಲ್ಲಿ ಹಾಗೂ ಯುರೋಪ್‌ನ ದೇಶಗಳಲ್ಲಿ ಮಾತೃದೇವತಾ ಆರಾಧನೆಯು ನೆಲಕಚ್ಚಿತು.

ಮಾತೃದೇವತೆ ಆರಾಧನೆಯ ಕಲ್ಪನೆಯು ಇತರೆ ದೇಶಗಳಲ್ಲಿ ನಾಗರಿಕತೆ ಬೆಳೆದಂತೆ ಶಕ್ತಿ ಆರಾಧನೆಯ ಪ್ರಾಮುಖ್ಯವು ಇಳಿಮುಖವಾಗತೊಡಗಿದರೆ, ಭಾರತದಲ್ಲಿ ಅದು ವಿಸ್ತೃತವಾಗುತ್ತಾ ನಡೆಯಿತು. ಸಿಂಧೂ ನಾಗರಿಕತೆಯ ಪೂರ್ವಕಾಲದಿಂದಲೂ ಮಾತೃ ದೇವತೆಯ ಆರಾಧನೆಯು ವ್ಯಾಪಕವಾಗಿ ಬೆಳೆದು ಬಂದಿರುವುದು ಹಾಗೂ ಆರ್ಯರೂ ಸಹ ಇಲ್ಲಿನ ಜನತೆಯಲ್ಲಿಯ ಅಂಶಗಳನ್ನು ತಮ್ಮಲ್ಲಿ ಅಳವಡಿಸಿಕೊಂಡಿದ್ದರಿಂದ ಅದು ಇನ್ನೂ ಹೆಚ್ಚು ಮಹತ್ವವನ್ನು ಹೊಂದಿತು. ಸಿಂಧೂ ನಾಗರಿಕತೆಯಲ್ಲಿ ಮಾತೃ ದೇವತಾ ಆರಾಧನೆಯು ವ್ಯಾಪಕವಾಗಿ ಇತ್ತು ಎಂಬುದನ್ನು ತಿಳಿಸಲು ಹಲವಾರು ಸಾಮಗ್ರಿಗಳು ದೊರಕುತ್ತವೆ. ಅಲ್ಲಿ ದೊರಕುವ ಸ್ತ್ರೀಯರ ವಿಗ್ರಹಗಳು ಹೆಣ್ಣಿಗೆ ಮಹತ್ವದ ಸ್ಥಾನವನ್ನು ಹೊಂದಿದ್ದನ್ನು ಹಾಗೂ ಧಾರ್ಮಿಕವಾದ ಆಚರಣೆಯಲ್ಲಿ ಪೂಜಾರಿಣಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಳೆಂಬುದನ್ನು ತಿಳಿಸುತ್ತವೆ. ಅಲ್ಲದೆ ಪುರುಷ ಮತ್ತು ಶಕ್ತಿಯ ರೂಪವಾದ ಲಿಂಗ ಮತ್ತು ಯೋನಿಯ ರೂಪದಲ್ಲಿ ಆರಾಧಿಸಲಾಗುತ್ತಿತ್ತು ಎನ್ನಲಾಗಿದೆ. ಇದನ್ನು ಮುಂದೆ ಶಕ್ತಿಯ ರೂಪದಲ್ಲಿ ನೋಡಲಾಗಿದೆ. ಶಕ್ತಿ ಎನ್ನುವುದು ಚೈತನ್ಯ, ಪ್ರಭಾವ ಅಥವಾ ಕಾರ್ಯನಿರ್ವಹಣಾ ಸಾಮರ್ಥ್ಯದ ಸಂಕೇತ. ಶಕ್ತಿಯ ಮೂಲಕವೆ ಎಲ್ಲಾ ಬಗೆಯ ಕಾರ್ಯಗಳು ನಡೆಯುತ್ತವೆ. ಅದನ್ನು 'ಮಹಾದೇವಿ', 'ಜಗದಂಬಾ' ಎಂದು ಮಾತೃ ಸ್ವರೂಪಿಣಿಯಾಗಿ, ಜಗತ್ತಿನ ಚರಾಚರಗಳ ಉಗಮಕ್ಕೆ ಪ್ರೇರಕವಾದ ಶಕ್ತಿಯನ್ನಾಗಿ ನೋಡಲಾಗಿದೆ. ಅಂದರೆ ಪುರುಷ ಮತ್ತು ಸ್ತ್ರೀ ತತ್ತ್ವಗಳು ವಿಶ್ವೋತ್ಪತ್ತಿಗೆ ಕಾರಣ. ಅದನ್ನೆ ಶಿವ ಶಕ್ತಿಯ ರೂಪದಲ್ಲಿ ಸಂಕೇತಗೊಳಿಸಲಾಗಿದೆ. ಶಕ್ತಿ ಆರಾಧನೆಯು ಅಥವಾ ಶಾಕ್ತರ ಪೂರ್ವಾಪರವು ಸಿಂಧೂ

ನಾಗರಿಕತೆಯಲ್ಲಿ ಅಡಗಿಕೊಂಡಿದೆ. ಪುರುಷ ಮತ್ತು ಪ್ರಕೃತಿಯ ಕಲ್ಪನೆಯು ಭಾರತೀಯ ಅನೇಕ ವಿಚಾರ ಧಾರೆಗಳಿಗೆ ಮೂಲವಾಗಿದೆ. ಶಕ್ತಿ ಆರಾಧನೆಯ ಸ್ಥಳಗಳಲ್ಲಿ ಈ ರೀತಿಯ ದೃಷ್ಟಾಂತಗಳನ್ನು ನೋಡಬಹುದಾಗಿದೆ. ಇಲ್ಲಿ ಲಿಂಗ ಮತ್ತು ಹೆಣ್ಣಿನ ವಿಗ್ರಹಗಳು ಜೊತೆಯಲ್ಲಿರುವುದನ್ನು ಗುರುತಿಸಬಹುದು.

ಆರ್ಯರಲ್ಲಿ ಮಾತೃದೇವತೆಯ ಆರಾಧನೆಯ ಕಲ್ಪನೆಗಳು ಹೆಚ್ಚು ಕಂಡುಬರುವುದಿಲ್ಲ. ಕಾರಣ ಆರ್ಯರ ಸಂಸ್ಕೃತಿಯು ಪುರುಷ ಪ್ರಧಾನ ನೆಲೆಯದ್ದಾಗಿದ್ದು, ಇಲ್ಲಿ ಪುರುಷ ದೈವಗಳು ಹೆಚ್ಚಾಗಿ ಕಂಡುಬರುತ್ತವೆ. ಸ್ಟಾರ್‌ಬಕ್ ಅವರ ಅಭಿಪ್ರಾಯದಂತೆ ವೇದಗಳಲ್ಲಿ ಚಿತ್ರಿತವಾಗುವ ಜೀವನವು ಬಹುಮಟ್ಟಿಗೆ ಪುರಾತನವಾದ ವಿದ್ಯಮಾನದಲ್ಲಿ ದೇವತೆಗಳ ನಡುವೆ ದೇವಿಯರಿಗೆ ಬಹು ಅಮುಖ್ಯವಾದ ಸ್ಥಾನವಿದೆ. ಆದರೆ ಜನತೆ ಶಾಂತಜೀವನವನ್ನು ಕೈಕೊಂಡು ಕೃಷಿಯ ಉದ್ಯಮದಲ್ಲಿ ತೊಡಗಿದ ಬಳಿಕ ಸ್ತ್ರೀದೇವತೆಗಳ ಆರಾಧನೆಯು ಅತ್ಯಂತ ಪ್ರಮುಖವಾದ ಸ್ಥಾನಕ್ಕೇರಿತು ಎಂದಿದ್ದಾರೆ. ಆರ್ಯರ ಮೊದಲ ಕಾಲಘಟ್ಟದಲ್ಲಿ ಪುರುಷ ದೇವತೆಗಳು ಹೆಚ್ಚಾಗಿ ಕಾಣಬರುವುದಕ್ಕೆ ಕಾರಣ ಪುರುಷಮೂಲ ಸಮಾಜ ವ್ಯವಸ್ಥೆಯ ಜೊತೆಯಲ್ಲಿ ಅವರು ಪುಶುಪಾಲನ ವೃತ್ತಿಯಲ್ಲಿ ನಿರತರಾಗಿದ್ದರಿಂದ. ಆದರೆ ಮುಂದೆ ಇಲ್ಲಿಯ ಮೂಲ ನಿವಾಸಿಗಳೊಡನೆ ಅವರು ಹೊಂದಾಣಿಕೆಯ ಜೀವನವನ್ನು ನಡೆಸಲೇ ಬೇಕಾಯಿತು. ಆ ಕಾರಣದಿಂದ ಇಲ್ಲಿಯ ಮೂಲನಿವಾಸಿಗಳ ದೇವತೆಗಳು ಅವರ ಜೀವನದಲ್ಲಿ ಪ್ರವೇಶಮಾಡಿದವು. ಆರ್ಯರರಲ್ಲಿ ಕೆಲವು ಸ್ತ್ರೀದೇವತೆಗಳು ಕಂಡುಬರುತ್ತಾರೆ. ಉಷಸ್, ಅದಿತಿ, ದಿತಿ, ಪೃಥ್ವಿ, ಅನುಮತಿ, ಆಪ್‌ದೇವತೆ, ಸರಸ್ವತಿ, ವಾಕ್, ಇಂದ್ರಾಣಿ, ಶಚಿ, ರಾತ್ರಿ, ರಾಕಾ, ಸಿನೀವಾಲಿ, ಇಳಾ, ಸೂನೃತಿ, ನಿರೃತಿ, ಮುಂತಾದ ದೇವತೆಯರು ಕಂಡುಬರುತ್ತಾರೆ. ಆದರೆ, ಅವರಿಗೆ ಸಂಪೂರ್ಣವಾದ ಸ್ವಾತಂತ್ರ್ಯಕಂಡುಬರುವುದಿಲ್ಲ. ಒಂದಿಲ್ಲೊಂದು ರೀತಿಯಲ್ಲಿ ಪುರುಷ ದೇವತೆಯರ ಅಡಿಯಾಳಾಗಿ ಕಾಣಬರುತ್ತಾರೆ. ಆದರೆ ಅಂದಿನ ಸಮಕಾಲೀನ ಸಮಾಜಗಳಲ್ಲಿ ಅಂದರೆ ಬುಡಕಟ್ಟುಗಳು, ಹಾಗೂ ದ್ರಾವಿಡ ಸಮಾಜಗಳಲ್ಲಿ ಮಾತೃದೇವತೆಗಳು ಯಾರ ಹಂಗಿಲ್ಲದೆ ಸ್ವತಂತ್ರವಾಗಿ ಕಂಡುಬರುತ್ತಾರೆ.

ಸುಮಾರು ಕ್ರಿ.ಪೂ.೪ ಮತ್ತು ೩ರ ಆಜುಬಾಜಿನಲ್ಲಿ ಹಿಂದೂ ಪರಂಪರೆಯೆಂದು ಕರೆಯಲಾಗುವ ಪರಂಪರೆಯು ರೂಪಗೊಳ್ಳತೊಡಗಿದ್ದು, ಆ ಕಾಲಕ್ಕಾಗಲೇ ಇಲ್ಲಿಯ ಮೂಲನಿವಾಸಿಗಳ ದೇವತೆಗಳು ಈ ಪರಂಪರೆಗೆ ಸೇರಿಕೊಳ್ಳತೊಡಗಿದವು. ದುರ್ಗಾ, ಕಾಳಿ, ಮಹಿಷಮರ್ದಿನಿ, ಲಕ್ಷ್ಮಿ, ಮುಂತಾದ ಅನೇಕ ದೇವತೆಗಳು ತಮ್ಮ ಮೂಲ ರೂಪದಿಂದಲೆ ಪ್ರವೇಶಪಡೆದರೂ ನಂತರದಲ್ಲಿ ಶಿಷ್ಟೀಕರಣಗೊಂಡು ಸಂಸ್ಕೃತಿಕರಿಸಲ್ಪಟ್ಟವು. ಮಹಾಭಾರತದಲ್ಲಿ ಮೊದಲಬಾರಿಗೆ ಕಾಣಿಸಿಕೊಳ್ಳುವ ದೇವತೆಗಳನ್ನು ಕ್ರೂರರೂಪದಲ್ಲಿಯೆ ನೋಡಲಾಗಿದೆ. ನಂತರದಲ್ಲಿ ಬಂದ ಹರಿವಂಶದಲ್ಲಿಯೂ ಸಹ ಬೇಡ, ಶಬರ ಪುಳಿಂದರ ದೇವತೆಯೆಂದು ಕರೆಯಲಾಗಿದೆ. ಕಾರಣ ದುರ್ಗಾ ಅಥವಾ ಇನ್ನಾವುದೇ ದೇವತೆಗಳು ಮೂಲ ರೂಪದಲ್ಲಿ ಸ್ಥಳೀಯ ದೇವತೆಗಳ ಅಥವಾ ಗ್ರಾಮದೇವತೆಗಳ ರೂಪವಾಗಿಯೇ

ಬೆಳೆದು ಬಂದು ನಂತರದಲ್ಲಿ ವೈದಿಕ ಪರಂಪರೆಯನ್ನು ಪ್ರವೇಶ ಪಡೆದವು. ಅಲ್ಲದೆ ಈ ಕಾಲಕ್ಕಾಗಲೇ ಸಾಮ್ರಾಜ್ಯಗಳು ಬೆಳವಣಿಗೆಯನ್ನು ಹೊಂದಿದ್ದವಲ್ಲದೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿಲಾಗಿತ್ತು. ಹಿಂದೂ ಪರಂಪರೆಯು ತನ್ನೆಲ್ಲಾ ಶಕ್ತಿಯನ್ನು ಒಂದು ಗೂಡಿಸಿಕೊಂಡು ಶಕ್ತಿಯುತವಾಗಿ ಬೆಳೆಯುತ್ತಲಿತ್ತು. ಅದರೆ ಜೊತೆಯಲ್ಲಿಯೇ ದೇವತೆಗಳಿಗೆ ಒಂದು ಸ್ಪಷ್ಟವಾದ ರೂಪವನ್ನು ಕೊಡುವ ಶಿಲ್ಪಗ್ರಂಥಗಳು ಹುಟ್ಟಿಕೊಂಡವು. ದೇವಿಯ ಮಹಾತ್ಮೆಯನ್ನು ಸಾರುವ ಸ್ವತಂತ್ರವಾದ ಕೃತಿಗಳು ಹುಟ್ಟಿಕೊಂಡವು. ಮಾರ್ಕಂಡೇಯ ಪುರಾಣದಲ್ಲಿ ಬರುವ ದೇವಿಮಹಾತ್ಮೆಯಂತ ಕೃತಿ ದೇವಿಯನ್ನು ಕುರಿತು ರಚಿಸಲಾಗಿರುವ ಕೃತಿಯಾಗಿದೆ. ಸಿಂಧೂ ನಾಗರಿಕತೆ ಅವನತಿಯ ನಂತರದಲ್ಲಿ ಸುಮಾರು ಒಂದೂವರೆ ಸಾವಿರ ವರ್ಷಗಳ ನಂತರದಲ್ಲಿ ದೇವಿಯ ಆರಾಧನೆಯು ಮರುಹುಟ್ಟು ಪಡೆಯುವುದು ಈ ಕೃತಿಯಿಂದ. ಇಲ್ಲಿಯವರೆಗೂ ವೈದಿಕ ಪರಂಪರೆಯ ಪುರುಷ ದೇವತೆಗಳೆ ಹೆಚ್ಚು ಪ್ರಭಾವಶಾಲಿಯಾಗಿದ್ದವು. ಆದರೆ ಜನಪದರಲ್ಲಿ ಗ್ರಾಮದೇವತೆಗಳು ಹೆಚ್ಚು ಕ್ರಿಯಾಶಿಲವಾಗಿದ್ದು, ತಮ್ಮ ಸ್ಥಾನವನ್ನು ಪುರುಷದೇವತೆಗಳಿಗೆ ಬಿಟ್ಟುಕೊಟ್ಟಿರಲಿಲ್ಲ. ಇದು ತಮಿಳು ಸಾಹಿತ್ಯದಲ್ಲಿ ಕಂಡುಬರುವ ವಿಷಯವಾಗಿದೆ. ಇಲ್ಲಿ ದೇವಿಯು ಶಿವನ ಸಂಗಾತಿಯಾಗಿಯೂ ಕಂಡುಬಾರದಿರುವುದು ಒಂದು ವಿಶೇಷವೆನ್ನಬಹುದು.

ಈ ಶಾಸ್ತ್ರಗ್ರಂಥಗಳಲ್ಲದೆ ಚಾರಿತ್ರಿಕವಾಗಿ ಅನೇಕ ಸಾಮಗ್ರಿಗಳು ದೊರಕುತ್ತವೆ. ಹರಪ್ಪ ಸಂಸ್ಕೃತಿಯಲ್ಲಿ ಕಂಡುಬರುವ ವಿಗ್ರಹಗಳ ಮಾದರಿಯಲ್ಲಿ ಅಥವಾ ಮುಂದುವರಿಕೆಯ ರೀತಿಯಲ್ಲಿ ದೇವತೆಗಳ ವಿಗ್ರಹಗಳು ಮೌರ್ಯರ ಕಾಲದಲ್ಲಿಯು ಸಹ ಕಂಡುಬರುತ್ತವೆ. ನವಡತೊಲಿ (ಮಹೇಶ್ವರ), ಲೌರಿಯಾ ನಂದಗ್ರಹ ಮುಂತಾದ ಪ್ರದೇಶಗಳಲ್ಲಿ ಇಂತಹ ವಿಗ್ರಹಗಳನ್ನು ಕಾಣಬಹುದು. ಅಲ್ಲದೆ ತಕ್ಷಶಿಲಾ, ಕೊಸಂ, ಮುಂತಾದ ಪ್ರದೇಶಗಳಲ್ಲಿ ಈ ರೀತಿಯ ವಿಗ್ರಹಗಳು ಕಂಡುಬರುತ್ತವೆ.

ಗುಪ್ತರ ಕಾಲಕ್ಕೆ ಬಂದಾಗ ದೇವತೆಗಳ ಗಡಣವೇ ಎದ್ದು ನಿಲ್ಲುತ್ತದೆ. ಮೊದಲು ಸ್ವತಂತ್ರವಾಗಿ ಕಂಡುಬರುವ ದೇವತೆಗಳು ಈ ಕಾಲದಲ್ಲಿ ಪುರುಷದೇವತೆಗಳ ಹೆಂಡತಿಯರಾಗಿ ಸ್ಥಾನಾಂತರ ಹೊಂದುತ್ತಾರೆ. ಲಕ್ಷ್ಮಿಯಂತ ದೇವತೆಯು ಮೊದಲು ಸ್ವತಂತ್ರವಾಗಿ ಹಾಗೂ ಸಮೃದ್ಧಿಯ ದೇವತೆಯಾಗಿ ಕಂಡುಬಂದರೆ, ನಂತರದಲ್ಲಿ ವಿಷ್ಣುವಿನ ಪತ್ನಿಯಾಗಿ ಪರಿವರ್ತನೆ ಹೊಂದುತ್ತಾಳೆ. ಪಾರ್ವತಿ, ದುರ್ಗಾ, ಕಾಳಿ, ಮುಂತಾದ ರೂಪಗಳಲ್ಲಿ ಕಾಣುವ ಶಕ್ತಿಯು ಶಿವನ ಮಡದಿಯಾಗಿ ಸಂಪೂರ್ಣವಾದ ರೂಪವನ್ನು ಪಡೆಯುತ್ತಾಳೆ. ಈ ಕಾಲಕ್ಕೆ ಹಲವಾರು ಹೊಸರೂಪಗಳು ಕಂಡುಬರುತ್ತವೆ.

ಮಾತೃದೇವತೆಯ ಇನ್ನೊಂದು ಪ್ರಮುಖ ರೂಪವೆಂದರೆ, ಗ್ರಾಮದೇವತೆಗಳು. ಗ್ರಾಮದೇವತೆಗಳ ಅಧ್ಯಯನವೆಂದರೆ ಒಂದು ರೀತಿಯಲ್ಲಿ ಮಾತೃದೇವತೆಯ ಮೂಲಸ್ವರೂಪದ ಅಧ್ಯಯನವೆನ್ನಬಹುದು.

ಮಾತೃದೇವತೆಯರ ಆದಿಮ ಕೊಂಡಿಗಳಾಗಿ ಕಂಡುಬರುವ ಅನೇಕ ರೂಪಗಳು ಶಿಷ್ಟೀಕರಣಗೊಂಡು ಶಿಷ್ಟದೇವತೆಗಳಾಗಿರುವುದನ್ನು ನಾವು ಇಲ್ಲಿ ಕಂಡುಕೊಳ್ಳಬಹುದು. ಗ್ರಾಮದೇವತೆಗಳ ಆರಾಧನೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಅಥವಾ ಅವುಗಳ ಅಧ್ಯಯನಕ್ಕೆ ತೊಡಗುವುದು ಐತಿಹ್ಯಗಳ ಮೂಲಕವೆ. ಗ್ರಾಮದೇವತೆಗಳ ಉಗಮ ಮತ್ತು ಬೆಳವಣಿಗೆಯನ್ನು ಈ ಮೂಲಕವೆ ಗ್ರಹಿಸಲಾಗಿದೆ. ಅಲ್ಲದೆ ಗ್ರಾಮದೇವತೆಗಳ ಲಕ್ಷಣವನ್ನು ಇಲ್ಲಿ ಗಮನಿಸಲಾಗಿದೆ.

ಮಾತೃದೇವತೆಗಳ ಅಧ್ಯಯನವು ಶಿಷ್ಟ ಹಾಗೂ ಗ್ರಾಮದೇವತೆಗಳನ್ನು ಒಳಗೊಂಡಿರುವುದರಿಂದ ಇಲ್ಲಿ ಅವುಗಳ ವರ್ಗೀಕರಣವನ್ನು ತೆಗೆದುಕೊಳ್ಳಲಾಗಿದೆ. ಈ ಎರಡು ದೇವತಾ ಸಮೂಹಗಳು ಒಂದೇ ಮೂಲರೂಪದಿಂದ ಬಂದಿದ್ದರೂ ಸಹ ಅವುಗಳು ಒಂದು ಹಂತದಲ್ಲಿ ಭಿನ್ನವಾಗಿಯೇ ಕಾಣುತ್ತವೆ. ಹಲವಾರು ವಿದ್ವಾಂಸರು ಭಿನ್ನ ನೆಲೆಗಳಲ್ಲಿ ದೇವತೆಗಳ ವರ್ಗೀಕರಣವನ್ನು ಮಾಡಿಕೊಂಡಿದ್ದಾರೆ. ಶಿಷ್ಟದೇವತೆಗಳಾಗಿರಲಿ, ಗ್ರಾಮದೇವತೆಗಳಾಗಿರಲಿ ಅವುಗಳ ಪ್ರಾದೇಶಿಕವಾಗಿ ಭಿನ್ನತೆಯನ್ನು ಹೊಂದಿದ್ದರೂ ಸಹ ಭಾವನೆ ಅಥವಾ ಆಚರಣೆಯ ವಿಧಾನಗಳಲ್ಲಿ ಒಂದೇಯಾಗಿರುವುದರಿಂದ ಈ ಹಿನ್ನೆಲೆಯನ್ನಿಟ್ಟುಕೊಂಡು ಗ್ರಾಮದೇವತೆಗಳು ಹಾಗೂ ನಾಡದೇವತೆಗಳೆಂದು ಪ್ರಧಾನವಾಗಿ ವಿಂಗಡಿಸಿಕೊಳ್ಳಲಾಗಿದೆ. ಅವುಗಳಲ್ಲಿ ಮತ್ತೆ ಉಪವಿಭಾಗಗಳನ್ನಾಗಿ ಮಾಡಿಕೊಂಡು ಫಲನಂತಿಕೆಯ ಅಥವಾ ಸಮೃದ್ಧಿಯ ದೇವತೆಗಳು, ರಕ್ಷಣೆಯ ಹಾಗೂ ಮಾನುಷ ರೂಪದ ದೇವತೆಗಳೆಂದು ವಿಂಗಡಿಸಿಕೊಳ್ಳಲಾಗಿದೆ. ನಾಡದೇವತೆಗಳೆಂದು ಶಿಷ್ಟದೇವತೆಗಳನ್ನು ಮಾಡಿಕೊಂಡು ಅವುಗಳಲ್ಲಿ ವೈದಿಕ ಹಾಗೂ ಶಿಷ್ಟೀಕರಣಗೊಂಡ ದೇವತೆಗಳೆಂದು ವಿಂಗಡಿಸಿಕೊಳ್ಳಲಾಗಿದೆ.

ಕೆಲವು ಶಿಷ್ಟ ಹಾಗೂ ಗ್ರಾಮದೇವತೆಗಳನ್ನು ತೆಗೆದುಕೊಂಡು ಅಧ್ಯಯನ ಮಾಡಲಾಗಿದ್ದು ಅವುಗಳ ಬಗೆಗೆ ಹೊಸ ಹೊಳವುಗಳನ್ನು ಕೊಡಲು ಪ್ರಯತ್ನಿಸಲಾಗಿದೆ. ಸರಸ್ವತಿ, ಲಕ್ಷ್ಮಿ, ದುಗಾ, ಕಾಳಿ ಮಹಿಷಮರ್ದಿನಿ, ಸಪ್ತಮಾತೃಕೆಯರು ಹಾಗೂ ಗ್ರಾಮದೇವತೆಗಳಾದ ಎಲ್ಲಮ್ಮ ಹಾಗೂ ಮಾತಂಗಿಯನ್ನು ಇಲ್ಲಿ ವಿಶೇಷ ಅಧ್ಯಯನಕ್ಕೆ ಒಳಪಡಿಸಲಾಗಿದೆ. ದುರ್ಗಾ, ಕಾಳಿ, ಮಹಿಷಮರ್ದಿನಿ, ಹಾಗೂ ಸಪ್ತಮಾತೃಕೆಯರು ಈ ನೆಲೆದಿಂದ ಹೇಗೆ ವೃದ್ಧಿಯನ್ನು ಹೊಂದಿದರು ಹಾಗೂ ಮೂಲದಲ್ಲಿ ಅವರು ಯಾವ ರೀತಿಯಲ್ಲಿ ರೂಪವನ್ನು ಪಡೆದಿದ್ದರು ಎಂಬುದನ್ನು ತಿಳಿಸಲಾಗಿದೆ. ದುರ್ಗಾ ದೇವತೆಯು ಮೂಲದಲ್ಲಿ ಕೋಟೆಯನ್ನು ರಕ್ಷಿಸುವ ದೇವತೆಯಾಗಿದ್ದು ನಂತರದಲ್ಲಿ ಹಿಂದೂ ಪರಂಪರೆಯನ್ನು ಸೇರಿದ ನಂತರದಲ್ಲಿ ದುರ್ಗಮನನ್ನು ಕೊಂದಳೆಂದು ಆ ಕಾರಣಕ್ಕಾಗಿ ದುರ್ಗೆಯಾದಳು ಎನ್ನಲಾಗಿದೆ. ಇದು ಶಬ್ದದ ರೂಪ ಸಾಮ್ಯದಿಂದ ಮಾಡಿಕೊಂಡ ರೂಪಾಂತರವಾಗಿದೆ. ಅದೇ ರೀತಿ ಕಾಳಿ. ಕಾಳಿಯು ಬೆಂಕಿಯ ದೇವತೆಯಾಗಿದ್ದು, ದ್ರಾವಿಡ ಶಬ್ದದಿಂದ ಹಾಗೂ ಸಮಾಜದಿಂದ ಕಾಳಿಯನ್ನು ಪಡೆಯಲಾಗಿರುವುದನ್ನು ಇಲ್ಲಿ ನೋಡಲಾಗಿದೆ. ಅದೇ ರೀತಿ ಎಲ್ಲಮ್ಮನನ್ನು ಸಹ ಇಲ್ಲಿ ಭಿನ್ನವಾಗಿಯೆ ನೋಡಲಾಗಿದೆ. ಮೂಲತಃ ಊರಮ್ಮನಾಗಿದ್ದ ಎಲ್ಲಮ್ಮನನ್ನು

ಎಲ್ಲೆಯ ದೇವತೆಯನ್ನಾಗಿ ಮಾಡಲಾಗಿರುವುದು ಕೆಳವರ್ಗದವರನ್ನು ಒಂದು ರೀತಿಯಲ್ಲಿ ವಂಚಿಸುವುದೇ ಆಗಿದೆ. ಮಾತಂಗಿ ಒಂದು ದೇವತೆಯಾಗಿ ಆರಾಧಿಸುವ ಆರಾಧನಾ ಕ್ರಿಯೆಯಾಗಿ ಕಾಣದೆ ಅದನ್ನು ಒಂದು ಜೀವಂತ ದೇವತೆಯ ಅಥವಾ ದೇವತೆಯ ಪ್ರತಿರೂಪವಾಗಿ ನೋಡಲಾಗಿದೆ.

ಈ ಎಲ್ಲ ದೇವತೆಗಳು ಭಾರತದಲ್ಲಿ ಯಾಕೆ ಹೆಚ್ಚಾಗಿ ಕಾಣಬರುತ್ತಾರೆ? ಇದಕ್ಕೆ ಕಾರಣಗಳೇನು? ದ್ರಾವಿಡರಲ್ಲಿ ಯಾಕೆ ಸ್ತ್ರೀದೇವತೆಗಳು ಪ್ರಧಾನವಾಗಿ ಕಾಣುತ್ತಾರೆ? ಯಾಕೆ ವೈದಿಕ ಅಥವಾ ಆರ್ಯರಲ್ಲಿ ಸ್ತ್ರೀದೇವತೆಗಳು ಕಾಣುವಿದಿಲ್ಲ?ಎಂಬಂತಹ ವಿಷಯಗಳನ್ನು ತೆಗೆದುಕೊಳ್ಳಲಾಗಿದೆ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಮತ್ತೂ ಸಾಮಾಜಿಕ ಪರಿಸರವನ್ನು ಪ್ರಧಾನವಾಗಿ ಇಟ್ಟುಕೊಂಡು ಆಯಾ ಸಮಾಜಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಮಾತೃಪ್ರಧಾನ್ಯತೆ ಹಾಗೂ ಕೃಷಿ ಪ್ರಧಾನ ಸಮಾಜಗಳಲ್ಲಿ ಹೆಚ್ಚಾಗಿ ಮಾತೃದೇವತಾ ಆರಾಧನೆ ಕಂಡುಬರುತ್ತದೆ. ದ್ರಾವಿಡ ಹಾಗೂ ಇನ್ನಿತರೆ ಬುಡಕಟ್ಟುಗಳಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವ ಮಾತೃಮೂಲೀಯ ಅಂಶಗಳು ಇದನ್ನು ಸಾಬೀತು ಪಡಿಸುತ್ತವೆ. ಇಂದಿನ ಎಲ್ಲಾ ಬುಡಕಟ್ಟುಗಳು ಮಾತೃಪ್ರಧಾನವಾದ ಸಾಮಾಜಿಕ ಪರಿಸರವನ್ನು ಉಳಿಸಿಕೊಂಡು ಬಂದಿವೆ ಎಂಬುದನ್ನು ಹೇಳಲಿಕ್ಕಾಗದಿದ್ದರು ಅವರ ಆಚಾರಣೆಗಳಲ್ಲಿ ಕಂಡುಬರುವ ಇದಕ್ಕೆ ಪೂರಕವಾಗಿ ಇನ್ನಿತರೆ ಅಂಶಗಳನ್ನು ತೆಗೆದುಕೊಳ್ಳಲಾಗಿದೆ.

ಅನುಬಂಧದಲ್ಲಿ ಬೌದ್ಧರಲ್ಲಿ ಮಾತೃದೇವತೆಯರ ಆರಾಧನೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಅಲ್ಲದೆ ಇನ್ನೊಂದು ಅನುಬಂಧದಲ್ಲಿ ಭಾರತದಲ್ಲಿ ಜನಾಂಗಗಳು ಯಾವ ರೀತಿಯಲ್ಲಿ ವಲಸೆಯನ್ನು ನಡೆಸಿದವು ಎಂಬುದನ್ನು ಕೊಡಲಾಗಿದೆ. ಯಾಕೆಂದರೆ, ಜನಾಂಗಗಳ ವಲಸೆಯ ಅರಿವು ಇರದೆ ಇದ್ದರೆ ಮಾತೃದೇವತೆಯರ ಅಧ್ಯಯನ ಪೂರ್ಣವಾಗುವುದಿಲ್ಲ. ಆ ಕಾರಣಕ್ಕಾಗಿ ವಲಸೆಯನ್ನು ಅನುಬಂಧದಲ್ಲಿ ಸೇರಿಸಲಾಗಿದೆ. ಶಕ್ತಿ ಆರಾಧನೆಯ ಪೀಠಗಳನ್ನು ಅನುಬಂಧದಲ್ಲಿ ಸೇರಿಸಲಾಗಿದೆ. ಸ್ತ್ರೀ ಸರ್ವಶಕ್ತಿಗೆ ಸಂಬಂಧಿಸಿದ ಪುರಾವೆಗಳು ಭಾರತದಾದ್ಯಂತ ವ್ಯಾಪಕವಾಗಿ ಪ್ರಚಲಿತದಲ್ಲಿವೆ. ಪ್ರಕೃತಿ ಅಥವಾ ಜೀವ ಶಕ್ತಿ ಪೂಜೆ, ಮಾತೃ ಅಥವಾ ಕನ್ಯಾಪೂಜೆ, ಮಹಾದೇವತೆ ಅಥವಾ ಅಂತಿಮ ಸ್ಥಿತಿಯ ಪೂಜೆಯಾಗಿರುವ ಮಾತೃದೇವತೆಯ ಆರಾಧನೆಯನ್ನು ಪೀಠಗಳ ರೂಪದಲ್ಲಿ ನೋಡಲಾಗಿದೆ. ಅಂತಹ ಪೀಠಗಳು ಭಾರತದ ಮಾತೃ ಆರಾಧನೆಯ ಪ್ರಾಚೀನ ರೂಪಗಳೆಂದು ಗ್ರಹಿಸಲಾಗಿದೆ.

ಒಟ್ಟಿನಲ್ಲಿ ಮಾತೃದೇವತೆಯರ ಉಗಮ ಮತ್ತು ವಿಕಾಸದ ಹಂತಗಳಲ್ಲಿ ಅನೇಕ ಅವಸ್ಥಾಂತರಗಳು ಕಾರಣವಾಗಿವೆ. ಭಾರತದಲ್ಲಿಯಂತೂ ಮಾತೃದೇವತೆಯರೂ ಇಂದಿಗೂ ಪ್ರಮುಖವಾದ ಸ್ಥಾನವನ್ನು ಪಡೆದಿದ್ದಾರೆ. ಈ ನಿಟ್ಟಿನಲ್ಲಿ ಕನ್ನಡದಲ್ಲಿ ಇದು ಮೊದಲ ಪ್ರಯತ್ನ. ಹಲವಾರು ಮಿತಿಗಳ ನಡುವೆಯು ಸ್ವಲ್ಪಮಟ್ಟಿಗೆ ಯಶಸ್ಸನ್ನು ಸಾಧಿಸಿದ್ದೇನೆ ಎಂಬ ಆಶಾಭಾವನೆಯನ್ನು ಹೊಂದಿದ್ದೇನೆ.

ಅನುಬಂಧಗಳು

ಅನುಬಂಧ ೧

ಬೌದ್ಧ ಧರ್ಮದಲ್ಲಿ ಮಾತೃದೇವತಾ ಆರಾಧನೆ

ಮನುಷ್ಯನ ಇರುವಿಕೆಯಲ್ಲಿಯೇ ದುಃಖವಡಗಿದೆ, ಅದು ಆಸೆಯ ಫಲ.ಆಸೆಯೇ ದುಃಖಕ್ಕೆ ಮೂಲ. ಆಸೆಯನ್ನು ಹತ್ತಿಕ್ಕುವುದೇ ದುಃಖವನ್ನು ತೊಡೆದು ಹಾಕುವುದಕ್ಕೆ ದಾರಿ. ಆ ಮೂಲಕ ಮೋಕ್ಷವನ್ನು ಸಾಧಿಸಬಹುದು ಎಂದು ಬೋಧಿಸಿದ ಬುದ್ಧ ಜಾತಿ ವ್ಯವಸ್ಥೆಯನ್ನು, ವೈದಿಕ ಸಮಾಜದ ಅನಿಷ್ಟಪರಂಪರೆಗಳನ್ನು ಖಂಡಿಸಿ ತನ್ನದೇ ಆದ ಧಾರ್ಮಿಕ ಪಂಥವನ್ನು ಹುಟ್ಟುಹಾಕಿದ. ಆ ಮೂಲಕ ಹಿಂದು ಅಥವಾ ವೈದಿಕ ಪರಂಪರೆಗೆ ಸೆಡ್ಡುಹೊಡೆದು ನಿಂತ ಈ ಧಾರ್ಮಿಕ ಪಂಥವು ದೇವತಾ ಆರಾಧನೆಯನ್ನು ಖಂಡಿಸಿದ್ದು ಮಾತ್ರವಲ್ಲದೆ ಪುನರ್ ಜನ್ಮವನ್ನು ನಿರಾಕರಿಸಿತು. ಒಂದು ಕಾಲಕ್ಕೆ ದೇವತಾ ಆರಾಧನೆಯನ್ನು ವಿರೋಧಿಸಿದ ಈ ಪರಂಪರೆಯಲ್ಲಿ ಅವನ ಅನುಯಾಯಿಗಳು ಅವನನ್ನೇ ದೈವದ ಸ್ವರೂಪವನ್ನಾಗಿ ಮಾಡಿ ಅರಾಧಿಸಿದ್ದು ಒಂದು ವಿಪರ್ಯಾಸ. ಪೂಜೆಯ ಬದಲಾಗಿ ಧ್ಯಾನವನ್ನು, ಕಲ್ಪಕ್ಕಿಂತ ನೀತಿಯನ್ನು ಅನುಸರಿಸುವವರಾಗಿದ್ದ ಇವರು ಹಿಂದು ಪಂಥದಲ್ಲಿ ಅನೇಕ ಮಾರ್ಪಾಡುಗಳಿಗೂ ಇವರು ಕಾರಣರಾಗಿದ್ದವರು. ನಂತರದಲ್ಲಿ, "ಬುದ್ಧನೆ ದೇವರು; ಲೋಕೋತ್ತರವಾದವನು ಮಾತ್ರವಲ್ಲ, ಲೋಕಾನುಗ್ರಹಕಾರಕ, ವಿಶಿಷ್ಟ ಸಂಪದಭ್ಯುದಯಗಳೂ ಅವನ ಕರುಣೆಯಿಂದ ಒದಗುವುದು ಸಾಧ್ಯ; ದೇವದೇವತೆಯರು, ಯಕ್ಷ ಯಕ್ಷಿಯರೆಲ್ಲರೂ ಅವನ ಅನುಚರರು, ಆಜ್ಞಾಧಾರಕರು, ಅವನ ಪರಿವಾರದಲ್ಲಿ ಸೇರಿದವರು"(ಎಸ್.ಕೆ. ರಾಮಚಂದ್ರ ರಾವ್, ೧೯೭೫, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಪುಟ.೩೦೦) - ಈ ಕಲ್ಪನೆಗೆ ಅನುಗುಣವಾಗಿ ಬುದ್ಧನ ಪೂಜಾಮೂರ್ತಿಗಳು, ಅದಕ್ಕೆ ಪೂರಕವಾಗಿ ಆರಾಧಾನಾ ಪದ್ಧತಿಗಳು, ಪೂಜಾನಿಯಮಗಳು, ಹಾಗೂ ಅಭಯ ವರದಹಸ್ತಗಳನ್ನು ಹೊಂದಿರುವ ಬುದ್ಧನ ಮೂರ್ತಿಗಳು ಬೆಳೆದು ಬಂದವು.

ಬೌದ್ಧ ಧರ್ಮವು ಎರಡು ಉಪಪಂಗಡಗಳಾಗಿ ನಂತರದಲ್ಲಿ ಒಡೆದವು. ಅದರಲ್ಲಿ ಒಂದು ಹೀನಾಯಾನವು ಬುದ್ಧನನ್ನು ಮನುಷ್ಯತ್ವದ ನೆಲೆಯಲ್ಲಿ ನೋಡಿತು. ಅಂದರೆ ಬುದ್ಧ ಒಬ್ಬ ಸಾಮಾನ್ಯಮನುಷ್ಯನಾಗಿ ಹುಟ್ಟಿದವನು. ಸಾಮಾನ್ಯರಂತೆ ಬದುಕದೆ ವಿಶೇಷವಾಗಿ ಬದುಕಿದನಾದರೂ ಸಾಮಾನ್ಯರ ಕಷ್ಟಸುಖಗಳಿಗೆ ಮಿಡಿಯುವ ಹೃದಯವನ್ನು ಹೊಂದಿದವನು. ಈ ಕಷ್ಟಗಳನ್ನು ಮೀರಲು ಪರಿಹಾರವನ್ನು ಸೂಚಿಸಿದವನು ಎಂಬುದು ಅವರ

ವಾದ. ಇನ್ನೊಂದು ಮಹಾಯಾನವಾಗಿದ್ದು. ಇದರಲ್ಲಿ ಬುದ್ಧನನ್ನು ಅಸಾಮಾನ್ಯ ರೂಪದಲ್ಲಿ ನೋಡಲಾಗಿದೆ. ಅವನು ದೈವಿಕ ಗುಣವನ್ನು ಹೊಂದಿದವನು, ಮಹಾದೇವತೆ. ಎಲ್ಲ ದೇವತೆಗಳಿಗೂ ಒಡೆಯನಾದವನು. ಜಗತ್ತು ಎನ್ನುವುದು ಭ್ರಮೆ ಅಥವಾ ಮಿಥ್ಯ. ಇದನ್ನು ಮೀರಿ ನಿರ್ವಾಣಸ್ಥಿತಿಯನ್ನು ಹೊಂದುವುದೆ ಇಲ್ಲಿ ಮುಖ್ಯವಾದ ವಿಷಯವಾಗಿದೆ. ಇದನ್ನು ಶೂನ್ಯಸಿದ್ಧಾಂತವೆಂದು ಕರೆಯಲಾಗಿದೆ. ಇಲ್ಲಿ ಕೆಲವು ಒಳ್ಳೆಯ ಕೆಲಸಗಳಿಂದ (ಪಾರಮಿತಾಗಳು) ಅಥವಾ ಅವುಗಳನ್ನು ಸಾಧಿಸುವ ಮೂಲಕ ಎಲ್ಲರೂ ನಿರ್ವಾಣವನ್ನು ಹೊಂದಬಹುದಾಗಿತ್ತು. ಈ ಕಾರಣದಿಂದ ಮೋಕ್ಷಾಪೇಕ್ಷೆಯಿಂದ ಇಲ್ಲಿಗೆ ಜನರ ಗುಂಪು ಜಾಸ್ತಿಯಾಯಿತು. ಅಲ್ಲದೆ ಮಹಾಯಾನ ಎಂಬುದು ಇದನ್ನೇ ಹೇಳುತ್ತದೆ. ಮೋಕ್ಷದ ವಾಹನವಾಗಿ, ಎಲ್ಲರನ್ನೂ ಕೊಂಡೊಯ್ಯುವ ವಾಹನವಾಗಿ ಕೆಲಸಮಾಡಿತು. ಬುದ್ಧನ ವಿಗ್ರಹಗಳನ್ನು ತನ್ನ ಸುತ್ತ ಬೆಳೆಯುತ್ತಲಿದ್ದ ಭಕ್ತಿ ಪಂಥದ ಗುಣಗಳನ್ನು ಬೌದ್ಧ ಧರ್ಮವು ಅಳವಡಿಸಿಕೊಂಡು ರೂಪಗೊಳ್ಳುತ್ತಿರುವುದನ್ನು ಇಲ್ಲಿ ನಾವು ನೋಡಬಹುದು. ಈ ಕಾಲಕ್ಕಾಗಲೇ ವೈಷ್ಣವ ಪಂಥವು ಪ್ರಭಲವಾಗಿ ಬೆಳೆಯುತ್ತಿತ್ತು. ಸಾಮಾನ್ಯ ಮನುಷ್ಯನು ಇಲ್ಲಿ ಭಾಗವಹಿಸುವ, ಸ್ತೂಪಗಳಿಗೆ ಪೂಜೆ ಸಲ್ಲಿಸುವ, ಮೋಕ್ಷಸಾಧಿಸುವ ಕ್ರಿಯೆ, ಮುಂತಾದ ಕ್ರಿಯೆಗಳು ಧರ್ಮವು ಕ್ಷೀಣಿಸುತ್ತಿರುವ ಸಂಕೇತದಂತೆ ಬುದ್ಧನ ಅನುಯಾಯಿಗಳಿಗೆ ತೋರಿರಬೇಕು. ಅಲ್ಲದೆ ವೈಷ್ಣವ ಪಂಥದಲ್ಲಿ ಅವತಾರಗಳು ಮೂಲಕ ದೇವರನ್ನು ವೈಭವೀಕರಿಸಲಾಗುತ್ತಿತ್ತಲ್ಲದೆ ಮಹಾ ದೇವರಾಗಿ, ಎಲ್ಲಾದೇವತೆಗಳಿಗಿಂತಲೂ ಮಿಗಿಲಾದ ದೇವರನ್ನಾಗಿ ಮಾಡಲಾಗುತ್ತಿತ್ತು. ಆ ಕಾರಣಕ್ಕೆ ಬುದ್ಧನನ್ನು ದೇವತೆಗಳಲ್ಲಿ ಮಹಾಪುರುಷನನ್ನಾಗಿ ಮಾಡುವ ಕ್ರಿಯೆ ನಡೆಯಿತು.

ಧರ್ಮಕಾಯ, ಸಂಭೋಗ ಕಾಯ, ಹಾಗೂ ನಿರ್ಮಾಣ ಅಥವಾ ರೂಪಕಾಯವೆಂದು ಹೆಸರಿಸಲಾಯಿತು. ಧರ್ಮಕಾಯವು ಬುದ್ಧನ ಮೂಲಕಾಯವಾಗಿದ್ದು, ಇಲ್ಲಿ ನಿರಾಕಾರವಾಗಿದ್ದು ದೇಹವನ್ನು ಹೊಂದದೇ ಇರುವುದಾಗಿದೆ. ಪರಮಾತ್ಮ ಎಂದು ಹೇಳಬಹುದಾದ ಸ್ವರೂಪವಾಗಿದೆ. ಸಂಭೋಗ ಕಾಯವು ಅತ್ಯಂತ ಪರಮ ಭಕ್ತರ ಮನಸ್ಸಿಗೆ ಅನಂದವನ್ನು ಉಂಟುಮಾಡಲು ದೇವರ ರೂಪಧಾರಿಯಾಗಿ ಕಾಣಿಸಿಕೊಳ್ಳುವ ರೂಪವಾಗಿದೆ. ರೂಪಕಾಯ ಅಥವಾ ನಿರ್ಮಾಣ ಕಾಯವು ಎಲ್ಲ ಭಕ್ತರಿಗೂ ಸುಖ ಶಾಂತಿಗಳನ್ನು ಕೊಡಲು ಮಾನುಷ ರೂಪವನ್ನು ಹೊಂದಿ, ಜರಾಮರಣವನ್ನು ಹೊಂದುವ ವ್ಯಕ್ತಿಯಾಗಿ ಕಾಣಿಸಿಕೊಳ್ಳುವುದಾಗಿದೆ. ಈ ಬುದ್ಧನು ಕೂಡಾ ಈ ರೂಪಕಾಯವನ್ನು ಹೊಂದಿರುವ ವ್ಯಕ್ತಿಯಾಗಿದ್ದಾನೆ. ಇವನ ರೀತಿಯಲ್ಲಿ ಬೇರೆ ಕಡೆಗಳಲ್ಲೂ ಹುಟ್ಟಬಹುದು. ಬೋದಿಸತ್ವ ರೂಪವು ಮಹಾಯಾನದಲ್ಲಿ ಪ್ರಮುಖವಾದ ಅಂಶವಾಗಿದೆ. ಈ ಬೋಧಿಸತ್ತ್ವರ ಮೂಲಕವೇ ಜಗತ್ತಿನ ಪಾಲನೆ ಪೋಷಣೆ ನಡೆಯುತ್ತದೆ. ಅವಲೋಕಿತೇಶ್ವರ, ಮಂಜುಶ್ರೀ, ವಜ್ರಪತಿ, ಸಮಂತಭದ್ರ, ಆಕಾಶಗರ್ಭ, ಮಹಾಸ್ಥಾನಪ್ರಾಪ್ತ, ಬೈಶಜ್ಯರಾಜ, ಮೈತ್ರೇಯ ಇವರೇ ಎಂಟು ಬೋಧಿಸತ್ತ್ವರು.ಬೋಧಿಸತ್ತ್ವರು ಕಾಣಿಸಿಕೊಂಡು ಜೀವರಿಗೆ ಮುಕ್ತಿಮಾರ್ಗವನ್ನು ಉಪದೇಶಿಸುತ್ತಾರೆ. ರೂಪ, ವೇದನಾ, ಸಂಜ್ಞಾ, ಸಂಸ್ಕಾರ, ವಿಜ್ಞಾಗಳೆಂಬ ಐದು ಸ್ಕಂದಗಳಿದ್ದು, ಪ್ರತಿ ಸ್ಕಂದಕ್ಕೂ ಐದು ಜನ ಧ್ಯಾನಿಬುದ್ಧರು ಅಧಿಪತಿಯೆಂದು

ಹೇಳಲಾಗಿದೆ. ಈ ಧ್ಯಾನಿಬುದ್ಧರನ್ನು ಕಮಲಯುಗಲದ ಪೀಠದಮೇಲೆ, ಸಿದ್ಧಾಸನದಲ್ಲಿ, ಧ್ಯಾನಮುದ್ರೆಯಲ್ಲಿ, ಭಿಕ್ಷುಗಳಂತೆ ಉಡುಪು ಧರಿಸಿ ಕುಳಿತಂತೆ ಚಿತ್ರಿಸಲಾಗಿರುತ್ತದೆ. ಒಬ್ಬೊಬ್ಬ ಧ್ಯಾನಿ ಬುದ್ಧರಲ್ಲಿ ಮೂಲಪ್ರಕೃತಿಯ ಅಂಶಗಳಾಗಿ ಅಥವಾ ಸ್ಕಂದಗಳಾಗಿ ವಿರೋಚನ, ಅಕ್ಷೋಭ್ಯ, ರತ್ನಸಂಭವ, ಅಮಿತಾಭ, ಹಾಗೂ ಅಮೋಘಸಿದ್ಧಿ ಎಂಬ ರೂಪಗಳನ್ನು ಸಂಕೇತಿಸಲಾಗಿದೆ. ಪ್ರತಿ ಧ್ಯಾನಿಬುದ್ಧನಿಗೂ ಶಕ್ತಿದೇವತೆಗಳು ಇರುತ್ತಾರೆ.

ವೈರೋಚನನಿಂದ ನಾಮಸಂಗೀತಿ ಎಂಬ ದೇವತೆಯು ಹುಟ್ಟುತ್ತಾನೆ. ಉಳಿದ ದೇವತೆಗಳು ಸ್ತ್ರೀ ದೇವತೆಗಳಾಗಿರುತ್ತವೆ. ಅವರಲ್ಲಿ ಮಾರೀಚೀ ಎಂಬ ದೇವತೆಯು ಪ್ರಮುಖಳಾಗಿರುತ್ತಾಳೆ. ಇವಳನ್ನು ವೈರೋಚನನ ಮಡದಿಯೆಂದು ಚಿತ್ರಿಸಲಾಗಿದೆ. ಮಾರೀಚೀಯು ಸೂರ್ಯದೇವತೆಯಾಗಿದ್ದು, ಹಂದಿಯ ಮುಖವನ್ನು ಹೊಂದಿರುತ್ತಾಳೆ. ಇವಳ ರಥವನ್ನು ಏಳು ಹಂದಿಗಳು ಎಳೆಯುತ್ತವೆ. ಇವಳ ಆರು ವಿವಧ ರೂಪಗಳು ಅಶೋಕಕಾನ್ತಾ, ಆರ್ಯಮಾರೀಚಿ, ಮಾರೀಚೀಪಿಚುವಾ, ಉಭಯವರಾಹನನಾ, ದಶಭೂಜಸಿತ ಮತ್ತು ವಜ್ರಧಾತ್ವೀಶ್ವರೀ. ವೈರೋಚನನ ಇನ್ನಿಬ್ಬರು ಪ್ರಮುಖದೇವತೆಯರೆಂದರೆ, ವಜ್ರವಾರಾಹಿ ಹಾಗೂ ಚುಂಡಾ. ವಜ್ರವಾರಾಹಿಯನ್ನು ಬಾಲಗ್ರಹದೇವತೆ ಎಂದು ಕರೆಯಲಾಗಿದೆ. ಇವರಲ್ಲದೆ ಇನ್ನೂ ಅನೇಕ ಉಪದೇವತೆಗಳು ಇಲ್ಲಿ ಕಂಡುಬರುತ್ತಾರೆ. ಅಮೋಘಸಿದ್ಧಿಯಿಂದ ವಜ್ರಾಮೃತ ದೇವತೆಯು ಹುಟ್ಟುತ್ತಾಳೆ. ಇಲ್ಲಿ ಪ್ರಮುಖವಾಗಿ ಕಾಣುವ ದೇವತೆಯೆಂದರೆ, ತಾರಾ ಮತ್ತು ಅವಳ ಸಂಗಾತಿಯರು. ಅವರುಗಳೆಂದರೆ, ಖದಿರವಾಣೀ ತಾರಾ, ಮಹಾಶ್ರೀ ತಾರಾ, ಷಡ್ಭುಜ ಸಿತತಾರಾ, ಧಂಡ ತಾರಾ ಮತ್ತು ಸಿತತಾರಾ ಎಂಬ ತಾರಾದೇವತೆಯ ರೂಪಗಳು ಕಾಣುತ್ತವೆ. ಅವರುಗಳಿಗೂ ಉಪದೇವತೆಗಳು ಇದ್ದಾರೆ. ಉದಾಹರಣೆಗೆ ಖದಿರವಾಣೀಗೆ ಅಶೋಕಕಾನ್ತಾ ಮಾರೀಚೀ ಮತ್ತು ಏಕಜಟಾ, ಹಾಗೂ ಮಹಾಶ್ರೀ ತಾರಾಗೆ ಜಾಂಗುಲಿ ಮತ್ತು ಮಹಾಮಾಯೂರೀ ಎಂಬ ಉಪದೇವತೆಗಳನ್ನು ಹೊಂದಿದ್ದಾರೆ. ತಾರಾ ದೇವತೆಯರು ಹಲವಾರು ಕೈಗಳನ್ನು ಹೊಂದಿರುವಂತೆ ಶಾಸ್ತ್ರ ಗ್ರಂಥಗಳು ಉಲ್ಲೇಖಿ ಸುತ್ತವೆ. ಸೀತ ತಾರಾಳು ಬಿಳಿಯ ಬಣ್ಣವನ್ನು ಹಾಗೂ ನಾಲ್ಕು ಕೈಗಳನ್ನು ಹೊಂದಿರುತ್ತಾಳೆ. ಅದೇ ಷಡ್ಭುಜತಾರಾಳಿಗೆ ಆರುಕೈಗಳನ್ನು ಹೊಂದಿರುವಂತೆ ಚಿತ್ರಿಸಲಾಗಿದೆ. ಹಾಗೂ ವಿವಿಧ ಪ್ರಾಣಿಗಳು ಈ ದೇವತೆಗಳ ವಾಹನವಾಗಿರುತ್ತವೆ.

ರತ್ನಸಂಭವನಿಂದ ಜಂಭಲ ಹಾಗೂ ಉಚ್ಛುಶ್ಮ ದೇವತೆಯರು ಹುಟ್ಟುತ್ತಾರೆ. ಜಂಭಲ ದೇವತೆಯು ಒಬ್ಬ ಯಕ್ಷನಾಗಿದ್ದು ಹಿಂದೂ ಪರಂಪರೆಯ ಕುಬೇರನನ್ನು ಹೋಲುತ್ತಾನೆ. ಇವನ ಸಂಗಾತಿಯೆಂದರೆ, ವಸುಧಾರಾ. ಇವಳು ಧಾನ್ಯದೇವತೆಯಾಗಿದ್ದಾಳೆ. ಇತರೆ ದೇವತೆಗಳೆಂದರೆ ವಜ್ರಯೋಗಿನಿ ಹಾಗೂ ಮಹಪ್ರತಿಸರಾ ಎಂಬ ದೇವತೆಗಳು ಕಂಡುಬರುತ್ತಾರೆ. ಈ ಧ್ಯಾನಿಬುದ್ಧರಿಂದ ಹುಟ್ಟುವ ದೇವತೆಗಳಲ್ಲಿ ತಾರಾ ದೇವತೆಯೇ ಪ್ರಮುಖವಾಗಿ ಕಾಣುತ್ತಾಳೆ. ಅಲ್ಲದೆ, ಅವಲೋಕಿತೇಶ್ವರನ ಹೆಂಡತಿಯಾಗಿ ಅಥವಾ ಉಳಿದ ಪುರುಷದೇವತೆಗಳ ಹೆಂಡತಿಯರನ್ನು ತಾರಾ ಎಂದೇ ನಿರ್ದೇಸನಮಾಡಲಾಗಿದೆ.

ಅನುಬಂಧ ೨

ಜನಾಂಗದ ವಲಸೆ

ಭಾರತದಲ್ಲಿ ಕಂಡುಬರುವ ಪಂಗಡಗಳನ್ನು ಡಾ. ಬಿ. ಎಸ್. ಗುಹ ಅವರು ಒಂಬತ್ತು ಉಪಪಂಗಡಗಳೊಂದಿಗೆ ಆರು ಪ್ರಧಾನವಾದ ಜನಾಂಗಗಳನ್ನು ಗುರುತಿಸುತ್ತಾರೆ. (ವೇದಯುಗ, ೧೯೯೭, ಪುಟ. ೧೫೪-೧೫೬)

೧. ನೆಗ್ರಿಟೋ

೨. ಪ್ರೋಟೋ ಆಸ್ಟ್ರನಾಯ್ಡ್

೩. ಮಂದೋಲಾಯ್ಡ್‌ಪೋಲಿಯೋ ಮಂಗೋಲಾಯ್ಡ್, ಉದ್ದನೆಯ ತಲೆ, ಮತ್ತು ಮೋಟು ತಲೆ

೪. ಮೆಡಿಟರೇನಿಯನ್ನರು ಪೇಲಿಯೋ ಮೆಡಿಟರೇನಿಯನ, ಮೆಡಿಟರೇನಿಯನ್ ಮತ್ತು ಓರಿಯಂಟನ್ ಮಾದರಿ

೫ ಪಶ್ಚಿಮದ ಮೋಟುತಲೆಯವರು ಆಲ್ಪಿನೆಯ್ಡ್, ಡಿನಾರಿಕ್ ಮತ್ತು ಆರ್ಯನಾಯ್ಡ್

೬ ನಾರ್ಡಿಕ್

ಮೊದಲನೆಯ ನೆಗ್ರಿಟೋಗಳು ಈಗ ಭಾರತದಲ್ಲಿ ಕಂಡುಬರುವುದಿಲ್ಲ. ಆದರೆ ಅವರ ಒಂದು ವರ್ಗ ಅಂಡೋಮಾನ್ ದ್ವೀಪದಲ್ಲಿ ಕಂಡು ಬರುತ್ತದೆ. ಕೇರಳದ ಕೆಲವು ಬೆಟ್ಟಗಳಲ್ಲಿ ಹಾಗೂ ಆಸ್ಸಾಂನ ನಾಗಾಬುಡಕಟ್ಟುಗಳಲ್ಲಿ ಕಂಡು ಬರುತ್ತದೆ. ಇವರು ಹಾಲು ಬರುವಂಥ ವೃಕ್ಷಗಳ ಆರಾಧಕರಾಗಿದ್ದರು. ಆಫ್ರಿಕಾ, ಇಟಲಿ, ನ್ಯೂ ಗಿನಿ, ಅಂತೆಯೇ ದಕ್ಷಿಣ ಭಾರತ ಹಾಗು ಆಸ್ಸಾಂ ಪ್ರದೇಶಗಳಲ್ಲಿ ಮರದಿಂದ ಹಾಲಿನಂತ ದ್ರವ ಒಸುರವ ಗಿಡಗಳನ್ನು ಆರಾಧಿಸುವ ಪರಂಪರೆಯವರಾಗಿದ್ದಾರೆ (ಹಟನ್, ೧೯೬೩, ೨೨೩)

ಎರಡನೆಯ ಪಂಗಡವು ಪ್ರೋಟೋ ಆಸ್ಟ್ರಲಾಯ್ಡ್ ಪಶ್ಚಿಮದಿಂದ ಭಾರತಕ್ಕೆ ಬಂದವರು. ಇವರು ಇಂದಿನ ಭಾರತದ ಅನೇಕ ಆದಿವಾಸಿ ಜನರಲ್ಲಿ ಅವರು ಇಂದಿಗೂ ಉಳಿದುಕೊಂಡು ಬಂದಿದ್ದಾರೆ. ಇವರು ಭಾರತೀಯ ಸಮಾಜದ ಕೆಳಜಾತಿಗಳಾಗಿ ವಾಸಮಾಡುತ್ತಿದ್ದಾರೆ. ಮುಂಡಾ ಮತ್ತು ಮೋನ್‌ಖ್ಮೇರ್ ಭಾಷೆಗಳನ್ನು

ಮಾತನಾಡುತ್ತಾರೆ. ಇವರು ನವಶಿಲಾಯುಗ ಸಂಸ್ಕೃತಿಯಿಂದ ಬೆಳೆದುಬಂದವರಾದ ಇವರು ಲಿಂಗ ಎಂದು ಕರೆಯುವ ಕೋಲಿನಿಂದ ಅಥವಾ ಗುದ್ದಲಿಯಿಂದ ವ್ಯವಸಾಯ ಮಾಡುವ ಜನಾಂಗವಾಗಿದ್ದಾರೆ. ಇವರು ಭತ್ತವನ್ನು ಬೆಳೆಯುತ್ತಿದ್ದ ವ್ಯವಸಾಯಗಾರರಾಗಿದ್ದವರು. ಶಿಶ್ನ ಆರಾಧಕರಾಗಿದ್ದಿರಬಹುದು (ಎನ್.ಎನ್. ಭಟ್ಟಾಚಾರ್ಯ, ೧೯೭೩, ೧೮) .

ಮೂರನೆಯದಾದ ಪಂಗಡವೆಂದರೆ, ಮಂಗೋಲಾಯ್ಡ್. ಅಸ್ಸಾಂ ಹಾಗೂ ಬರ್ಮಾಗಡಿಪ್ರದೇಶ ಹಾಗೂ ಸಿಕ್ಕಿಂ ಮತ್ತು ಭೂತಾನಗಳಲ್ಲಿ ಕಂಡು ಬರುವ ಜನಾಂಗವಾಗಿದೆ. ಇವರು ಆಹಾರ ಸಂಗ್ರಹಣಕಾರರಾಗಿದ್ದು, ಮಾತೃಪ್ರಧಾನ ಧರ್ಮವನ್ನು ಹೊಂದಿದವರಾಗಿದ್ದರು.

ನಾಲ್ಕನೆಯ ಪಂಗಡದವರೆಂದರೆ ಮೆಡಿಟರೇನಿಯನ್ನರು. ಮಧ್ಯಭಾರತದಲ್ಲಿ, ಉತ್ತರ ಭಾರತದಲ್ಲಿ, ಪಶ್ಚಿಮ ಭಾರತದಲ್ಲಿ ಬಹುಶಃ ಪೂರ್ವ ಭಾರತದಲ್ಲಿಯೂ ಈ ಜನಾಂಗ ಕಂಡುಬರುತ್ತದೆ. ಇವರು ನೂತನ ಶಿಲಾಯುಗದಿಂದ (ಸು.ಕ್ರಿ.ಪೂ.೧೨,೦೦೦ದಿಂದ ೧೦,೦೦೦) ಭಾರತದ ಉಪಖಂಡದಲ್ಲಿ ಕಂಡುಬರುತ್ತಾರೆ.ಇವರು ಈ ಕಾಲಕ್ಕಾಗಲೇ ಅಲೇಮಾರಿತನದಿಂದ ದೂರ ಸರಿದು, ಕೃಷಿಯನ್ನು ಅವಲಂಬಿಸಿ ಜೀವನ ಮಾಡುತ್ತಿರಬಹುದು. ಇವರು ಕಪ್ಪ ಚರ್ಮದವರು, ಕುಳ್ಳಗಿನ ದೇಹವನ್ನು ಹೊಂದಿದ್ದವರಾಗಿದ್ದವರು. ಶಿವ ಪಂಥ ಮತ್ತು ಯೋಗಪದ್ಧತಿಗಳು, ಮಾತೃ ದೇವತಾ ಆರಾಧನೆಯು ಈ ಜನರ ಧಾರ್ಮಿಕ ಜೀವನದ ಲಕ್ಷಣಗಳಾಗಿದ್ದಂತೆ ತೋರುತ್ತದೆ. ಮಧ್ಯ ಏಷ್ಯಾದ ಪರ್ವತ ಪ್ರಾಂತಗಳಲ್ಲಿ ಮೋಟು ತಲೆಯ ಜನರು ವಿಕಾಸಗೊಂಡಿರಬಹುದು ಎಂದು ಡಾ. ಗುಹ ಅವರು ಅಭಿಪ್ರಾಯ ಪಡುತ್ತಾರೆ. ಇವರು ಬಂಗಾಳ, ಒರಿಸ್ಸ, ಕಾಥೆವಾಡ, ಕರ್ನಾಟಕ, ಹಾಗೂ ತಮಿಳು ನಾಡುಗಳಲ್ಲಿ ಈ ಜನಾಂಗ ಕಂಡು ಬರುತ್ತದೆ.

ಕೊನೆಯ ಹಾಗೂ ಅಂತಿಮವಾಗಿ ಬಂದವರು ಎಂದರೆ ನಾರ್ಡಿಕ್ ಜನರ ಗುಂಪು. ಇವರು ಯುರೇಸಿಯನ್ ಸ್ಟೆಪ್ಪೀ ಪ್ರದೇಶದವರು. ಭಾರತ ಇತಿಹಾಸದಲ್ಲಿ ಭಾಷೆ, ಸಂಸ್ಕೃತಿ, ರಾಜಕೀಯ, ಹೀಗೆ ತಮ್ಮದೇ ಆದ ಅಸ್ತಿತ್ವವನ್ನು ಈ ಪ್ರದೇಶದ ಮೇಲೆ ಪಡಿಮೂಡಿಸಿದವರು. ಹಿಂದು ನಾಗರಿಕತೆ ಎಂದು ಕರೆಯಲಾಗುತ್ತಿರುವ ಇಂದಿನ ಸಮಾಜವನ್ನು ನಿರ್ಮಾಣಮಾಡಿದವರು. ಹೀಗೆ ಹಲವಾರು ನಾಗರಿಕತೆಯ ಜನರ ಒಗ್ಗೂಡುವಿಕೆಯಿಂದ ಈ ಭಾರತದ ಸಂಸ್ಕೃತಿ ಬೆಳೆದಿದೆ. ಇವರಿಂದಲೇ ಈ ಸಂಸ್ಕೃತಿ, ಧಾರ್ಮಿಕತೆ ಬೆಳೆಯಿತು ಎಂದು ಹೇಳಲು ಸಾಧ್ಯವಿಲ್ಲ. ಯಾಕೆಂದರೆ, ಎಲ್ಲಾ ಜನಾಂಗಗಳ ಸಂಸ್ಕೃತಿಗಳು ಮಿಳಿತವಾಗಿವೆಯಲ್ಲದೇ, ಪ್ರಭಾವವನ್ನು ಬೀರಿವೆ. ಮಧ್ಯಭಾರತ, ಉತ್ತರ ಭಾರತ, ಪಶ್ಚಿಮ ಭಾರತದಲ್ಲಿ ಹಾಗೂ ಪೂರ್ವಭಾರತದಲ್ಲಿಯೂ ಒಂದು ಕಾಲದಲ್ಲಿ ದ್ರಾವಿಡ ಭಾಷೆಯು ಸಾಕಷ್ಟು ವಿಸ್ತಾರವಾಗಿ ಹರಡಿದ್ದಿತು

ಅನುಬಂಧ ೩

ಶಕ್ತಿ ಪೀಠಗಳು

ಪುರಾಣಗಳು ಶಕ್ತಿ ಪೀಠಗಳ ಉಗವನ್ನು ಕುರಿತುಕತೆಯೊಂದನ್ನು ಈ ರೀತಿ ಹೇಳುತ್ತವೆ. ದಕ್ಷಪ್ರಜಾಪತಿಯು ಶಿವನನ್ನು ಬಿಟ್ಟು ಯಜ್ಞನವನ್ನು ಮಾಡುತ್ತಾನೆ. ಅಲ್ಲಿಗೆ ಶಿವನನ್ನು ಕರೆಯುವುದಿಲ್ಲ. ಆದರೆ ಪಾರ್ವತಿಯು ತನ್ನ ತಂದೆ ಮಾಡುವ ಯಜ್ಞವನ್ನು ನೋಡಲು ಹೋಗುತ್ತಾಳೆ. ಅಲ್ಲಿ ಅವಮಾನಿತಳಾಗಿ ಪ್ರಾಣ ತ್ಯಜಿಸುತ್ತಾಳೆ. ಶಿವನಿಗೆ ಸತಿಯು ಪ್ರಾಣತ್ಯಾಗ ಮಾಡಿದ್ದು ತಿಳಿದು ಕ್ರೋಧಗೊಳ್ಳುತ್ತಾನೆ. ಭೀಷಣ ರೂಪ ತಾಳಿದ ಶಿವನು ದಕ್ಷನ ಯಜ್ಞನವನ್ನು ನಾಶಮಾಡುತ್ತಾನೆ. ಸತಿಯನ್ನು ಕಳೆದುಕೊಂಡ ಶಿವ ಅವಳ ದೇಹವನ್ನು ಹೊತ್ತುಕೊಂಡು ಅಲೆಯುತ್ತಾನೆ. ಇದು ಪ್ರಪಂಚದ ಅಸಮತೋಲನಕ್ಕೆ ಕಾರಣವಾಗುತ್ತದೆ. ಇದನ್ನು ತಿಳಿದ ವಿಷ್ಣು ಶಿವನಿಂದ ಸತಿಯ ದೇಹವನ್ನು ಚಕ್ರದಿಂದ ಚೂರು ಮಾಡುತ್ತಾನೆ. ಹೀಗೆ ಛಿದ್ರಗೊಂಡು ಸತಿಯ ದೇಹದ ಭಾಗಗಳು ದೇಶದ ಹಲವಾರು ಕಡೆ ಬಿದ್ದವು. ಈ ರೀತಿ ಬಿದ್ದ ದೇಹದ ಭಾಗಗಳನ್ನು ದೇವಿಯ ಪ್ರತಿರೂಪವೆಂದು ಭಾವಿಸಲಾಗಿದೆ. ಅಲ್ಲದೆ ಮುಂದೆ ಅವುಗಳೇ ಶಾಕ್ತಪೀಠಗಳಾದವೆಂದು ಈ ಪುರಾಣಗಳು ಹೇಳುತ್ತವೆ.

ಪೃಥ್ವಿಯನ್ನು ಮಾತೆ, ಆದಿಮಾತೆ ಎಂದು ಕರೆಯಲಾಗಿದೆ. ಅವಳ ಆದಿಮಾತೃತ್ವಕ್ಕೆ ಪ್ರಾಧಾನ್ಯ ಕೊಡುವ ಈ ಶಾಕ್ತಪೀಠಗಳು ಮೂಲತಃ ಯೋನಿ ಆರಾಧನೆಯ ಕೇಂದ್ರಗಳಾಗಿವೆ. ನಾನಾ ರೂಪುರಂಗಿನಿಂದ ಮತ್ತು ರಸ ಗಂಧಗಳಿಂದ ತುಂಬಿರುವ ವನಸ್ಪತಿಯ ಗರ್ಭವನ್ನು ಹೊತ್ತವಳಾಗಿರುವ ಪೃಥ್ವಿ, ಅಂತೆಯೇ ನಾನಾ ವಿಕಾರ ವಿಚಾರಗಳಿಂದಲೂ, ಸಂಕಲ್ಪ ವಿಕಲ್ಪಗಳಿಂದಲೂ ತುಂಬಿರುವ ಮಾನವ ಜನಾಂಗವನ್ನು ತನ್ನ ಗರ್ಭದಲ್ಲಿಹೊರುವ ಸ್ತ್ರೀ ಇವರಿಬ್ಬರಲ್ಲಿಯೂ ಪ್ರಾಚೀನ ಕಾಲದಿಂದಲೂ ಏಕತ್ವ ಹಾಗೂ ಸಾಧರ್ಮ್ಯವನ್ನು ಕಲ್ಪಿಸಲಾಗಿದೆ. ರಜೋದರ್ಶನ, ಪುಷ್ಪಿತಾವಸ್ಥೆ, ಫಲದಾಯಿಕ ಗುಣ, ಋತು, ಇತ್ಯಾದಿ ಅಂಶಗಳು ಸ್ತ್ರೀಯ ಫಲವಂತಿಕೆಯ ಸಂಕೇತಗಳು ಭೂಮಿಗೂ ಆರೋಪಿಸಲಾಗಿದೆ. ಈ ರೀತಿಯ ಸ್ತ್ರೀಯಲ್ಲಿ ಕಾಣುವ ಸೃಜಿಸುವ ಗುಣವನ್ನು ಭೂಮಿಗೂ ಆರೋಪಿಸುವ ಪ್ರವೃತ್ತಿಯು ಜಗತ್ತಿನ ಎಲ್ಲಾ ಮಾನವ ಜನಾಂಗಗಳಲ್ಲಿ ಕಂಡುಬರುವ ಸಂಗತಿ.

ತ್ರಿಕೋನಾಕಾರದ ಯೋನಿ - ಯಂತ್ರ, ಹೆಣ್ಣಿನ ಅತೀ ಪ್ರಾಚೀನ ಚಿನ್ಹೆ, ಅಥವಾ ಸಂಕೇತ. ಮಹಾಮಾತೆಯನ್ನು ಎಲ್ಲ ಜೀವಗಳ ಮೂಲ, ಅನಂತಗರ್ಭವನ್ನಾಗಿ ಚಿತ್ರಿಸುತ್ತದೆ. ಯೋನಿಯನ್ನು ಪವಿತ್ರಕ್ಷೇತ್ರ. ಗೂಢ ಶಕ್ತಿಗಳ ಪ್ರವೇಶ ಬಿಂದು, ಅನಂತ ಗುಪ್ತವಿದ್ಯೆಗಳ ಬಾಗಿಲು ಎಂದು ಸ್ತುತಿಸಲಾಗುತ್ತದೆ. ಯೋನಿತಂತ್ರದಲ್ಲಿ, ಯೋನಿಯು ಹತ್ತು ಅಂಶಗಳನ್ನು ಹೊಂದಿದೆ ಎಂದು ವರ್ಣಿಸಲಾಗಿದೆ. ಪ್ರತಿಯೊಂದು ಅಂಶ(ಭಾಗ)ವೂ ದೇವಿಯ ವ್ಯಕ್ತಿತ್ವದೊಂದಿಗೆ ಸಂಬಂಧ ಹೊಂದಿದೆ. ಯೋನಿ ಪೂಜೆ ಅಥವಾ ಜನನಾಂಗ ಹಾಗೂ ಸ್ತನ ಧಾರ್ಮಿಕ ಕ್ರಿಯಾಚರಣೆಯಲ್ಲಿ ಜೀವಂತ ಹೆಣ್ಣಿನ ಸ್ತನ, ಜನನಾಂಗ ಅಥವಾ ಅದನ್ನು ಸಂಕೇತಿಸುವ ಚಿತ್ರ ಕಲ್ಲು, ಮರ, ಅಥವಾ ಲೋಹ, ಇವು ದೇವತೆಯ ಸಂಕೇತವಾಗಿ ಆರಾಧಿಸಲ್ಪಡುತ್ತವೆ.

ಮಹಾಭಾರತದಲ್ಲಿ ಮೊದಲಭಾರಿಗೆ ಮೂರು ಶಾಕ್ತ ಪೀಠಗಳ ಉಲ್ಲೇಖ ಕಂಡುಬರುತ್ತದೆ. ಅವುಗಳೆಂದರೆ, ಭೀಮಸ್ಥಾನ (ಪಂಜಾಪ), ಉದ್ಯಾತ ಪರ್ವತ (ಗಯಾಪ್ರಾಂತ್ಯ) ಮತ್ತು ಸ್ತನಕುಂಡ (ಆಸ್ಸಾಂ). ಇವುಗಳನ್ನು ಯೋನಿಪೂಜೆಯ ಮೂಲಸ್ಥಾನಗಳೆಂದು ಕರೆಯಲಾಗಿದೆ. ಯಾಕೆಂದರೆ, ಈ ಮೂರು ಸ್ಥಾನಗಳಲ್ಲಿ ಸತಿಯ ಯೋನಿಯು ಹಾಗೂ ಸ್ತನವು ಬಿದ್ದುದೆಂದು ಪುರಾಣಗಳು ಉಲ್ಲೇಖಿಸುತ್ತವೆ.

ಅಸ್ಸಾಂನ ಗೌಹಾತಿ ಬಳಿಯ ಕಾಮಾಕ್ಯ ಎಂಬಲ್ಲಿನ ಒಂದು ಪ್ರಸಿದ್ಧ ದೇವಾಲಯ ಯೋನಿ ಪೂಜೆಗೆ ಮೀಸಲಾಗಿದೆ. ಕಾಳಿಕಾ ಪುರಾಣಗಳು ಮತ್ತು ಯೋಗಿನಿ ತಂತ್ರಗಳು ಹೇಳುವಂತೆ, ತನ್ನ ಪ್ರೀತಿಯ ಪತ್ನಿ ಸತಿ, ತೀರಿಕೊಂಡಾಗ ದುಃಖ ತಡೆಯಲಾರದ ಶಿವ ಸತಿಯ ಶವವನ್ನು ಭುಜಗಳ ಮೇಲೆ ಹೊತ್ತು ಮರುಳನಾಗಿ ನರ್ತಿಸುತ್ತಾ ಇಡೀ ಭೂಮಂಡಲವನ್ನೆಲ್ಲ ಸಂಚರಿಸಿದ. ಶಿವನ ದುಃಖ ಭಾರವನ್ನು ಇಳಿಸುವ ಸಲುವಾಗಿ ವಿಷ್ಣು ಶಿವನನ್ನು ಅನುಸರಿಸಿ, ಆತನ ಸತಿಯ ದೇಹವನ್ನು ಚೂರುಚೂರಾಗಿ ಕತ್ತರಿಸಿದ. ಎಲ್ಲಿ ಆಕೆಯ ದೇಹದ ಅವಶೇಷಗಳು ಮತ್ತು ಕೈಕಾಲುಗಳು ನೆಲಕ್ಕೆ ಬಿದ್ದವೋ, ಅಲ್ಲಿ ಐವತ್ತೊಂದು ಶಕ್ತಿ ಪೀಠಗಳು, ತೀರ್ಥಯಾತ್ರಾ ಕೇಂದ್ರಗಳು ಅಸ್ತಿತ್ವಕ್ಕೆ ಬಂದವು. ಸತಿಯ ಜನನಾಂಗ ಕಾಮಾಕ್ಯದಲ್ಲಿ ಬಿದ್ದಿತು.ಆ ಸ್ಥಳವನ್ನು ಸೂಚಿಸಲು, ಬೆಟ್ಟದ ತುದಿಯಲ್ಲಿ ಒಂದು ದೇವಾಲಯವನ್ನು ಕಟ್ಟಲಾಗಿದೆ. ಇಲ್ಲಿ ದೇವತೆಯ ಯಾವ ಪ್ರತಿಮೆಯೂ ಇಲ್ಲ. ಆದರೆ ದೇವಾಲಯದ ಒಳಗೆ ಅದೊಂದು ಯೋನಿಯಾಕಾರದ ಬಿರುಕುಳ್ಳ ಕಲ್ಲು, ಶಕ್ತಿಯ ಯೋನಿಯನ್ನು ಪೂಜಿಸುವಂತೆ ಇದೆ. ಆ ಗುಹೆಯಲ್ಲಿಯೇ ಸ್ವಾಭಾವಿಕವಾದ ನೀರಿನ ಬುಗ್ಗೆಯೊಂದಿದ್ದು, ಅದು ಆ ಬಿರುಕನ್ನು ಒದ್ದೆಯಾಗಿರುವಂತೆ ಮಾಡಿದೆ. ಅಂಬುವಾಚಿ ಉತ್ಸವವು (ಜುಲೈ - ಆಗಸ್ಟ್), ಮಾನ್ಸೂನ್ ಮಳೆಯ ಮೊದಲ ಅಬ್ಬರದ ನಂತರ, ಒಂದು ದೊಡ್ಡ ಉತ್ಸವವನ್ನು ಇಲ್ಲಿ ಆಚರಿಸಲಾಗುತ್ತದೆ. ನೀರು ಕೆಂಪಾಗಿ, ಕಬ್ಬಿಣದ ಆಕ್ಸೈಡ್‌ನೊಂದಿಗೆ ಹರಿಯುತ್ತದೆ. ಅದನ್ನು ಶಾಸ್ತ್ರೋಕ್ತವಾದ ಆಚರಣೆಯಾಗಿ ಕುಡಿಯುವುದು ದೇವಿಯ ರಜಸ್ ಅಥವಾ ರಿತು, ಅಂದರೆ ಅವಳ ಮುಟ್ಟಿನ ರಕ್ತ, ಕುಡಿಯುವುದನ್ನು ಸಂಕೇತಿಸುತ್ತದೆ. ಅದೇ ರೀತಿ ಕೇರಳದಲ್ಲಿ ಟ್ರಿಪ್ಪು ಖರರಟ್ಟು

(Trippukharattu) ಅಂದು ಕರೆಯಲಾಗುವ ಉತ್ಸವವನ್ನು ವರ್ಷಕ್ಕೆ ಎಂಟು ಹತ್ತು ಬಾರಿ ನಡೆಸುತ್ತಾರೆ. ಈ ಅವಧಿಯಲ್ಲಿ ದೇವತೆಯ ಪ್ರತಿಮೆಗೆ ಕೆಂಪು ಬಟ್ಟೆ ಸುತ್ತುತ್ತಾರೆ. ಇದನ್ನು ಯಾತ್ರಿಕರು ಒಂದು ಪವಿತ್ರ ಸ್ಮಾರಕ ವಸ್ತುವೆಂದು ಪರಿಗಣಿಸಿ ಅತ್ಯಂತ ಉತ್ಸಾಹದಿಂದ ಹುಡುಕಿಕೊಂಡು ಬರುತ್ತಾರೆ. ಕಾಶ್ಮೀರದಲ್ಲಿ ರಾಜ್ಞೀಸ್ನಾಪನ ಎಂದು ಆಚರಿಸಲಾಗುತ್ತದೆ. ಇನ್ನು ಬೇರೆ ಸ್ಥಳಗಳಲ್ಲಿ, ಸಹಜವಾದ ಗುಹೆಗಳನ್ನು ಒಳಗೊಂಡಿರುವ ಕಲ್ಲಿನ ರಚನೆಗಳು ಪವಿತ್ರವೆಂದು ಆಚರಿಸಲ್ಪಡುತ್ತವೆ.

ನಂತರದ ಕಾಲಘಟ್ಟಗಳಲ್ಲಿ ಈ ಶಕ್ತಿ ಪೀಠಗಳ ಸಂಖ್ಯೆಯು ಬೆಳೆಯ ತೊಡಗಿತು. ಮೂರು ಶಾಕ್ತ ಪೀಠಗಳಿಗೆ ಮತ್ತೊಪ್ಪು ಪೀಠಗಳು ಸೇರಿಕೊಂಡವು. ಜಾಲಂದರ,(ಸ್ತನ) ಒಡಿಯಾಣ (ಎರಡು ವಸ್ತುಗಲು), ಪೂರ್ಣಗಿರಿ (ಭುಜಗಳು) ಹಾಗೂ ಕಾಮರೂಪ (ತಲೆ)ವೆಂದು ನಾಲ್ಕದಿಕ್ಕುಗಳಿಗೆ ನಾಲ್ಕು ಪೀಠಗಳನ್ನು ಕಾಳಿಕಾ ಪುರಾಣ ತಿಳಿಸುತ್ತದೆ. ಅಲ್ಲದೆ ಈ ನಾಲ್ಕರ ಜೊತೆಯಲ್ಲಿ ಮತ್ತೆ ಮೂರು ಪೀಠಗಳಾದ ದೇವೀಕೂಟ(ಪಾದ), ಕಾಮಗಿರಿ(ಗುಹ್ಯಭಾಗ), ಕಾಮರೂಪ(ಹೊಕ್ಕಳು). ಹನ್ನಂದನೆಯ ಶತಮಾನದಲ್ಲಿ ವಾರಣಾಸಿ, ಜ್ವಲಂತಿ,ಮಾಯಾವತಿ, ಮಧುಪುರಿ ಅಯೋಧ್ಯ ಹಾಗೂ ಕಾಂಚಿಗಳು ಸೇರಿಕೊಂಡರೆ, ಅದು ಮುಂದೆ ೧೦೮ ಪೀಠಗಳೆಂದು ಬೆಳೆದವು.

೧. ವಿಶಾಲಾಕ್ಷಿ	ವಾರಣಾಸಿ	೨.ಲಿಂಗಧಾರಿಣಿ	ನೈಮಿಶಾರಣ್ಯ
೩. ಲಲಿತದೇವಿ	ಪ್ರಯಾಗ	೪. ಕಾಮಾಕ್ಷಿದೇವಿ	ಗಂಧಮಾದನ ಪರ್ವತ
೫. ಕುಮುದಾದೇವಿ	ಮಾನಸಸರೋವರ	೬. ವಿಶ್ವಾಖ್ಯದೇವಿ	ಅಂಬಾರ
೭. ಗೋಮತಿದೇವಿ	ಗೋಮಾಂತ	೮. ಕಾಮಚಾರೀಣಿದೇವಿ	ಮಂದರಗಿರಿ
೯. ಮದೋತ್ಕಟದೇವಿ	ಚಿತ್ರರಥ	೧೦. ಜಯಂತಿದೇವಿ	ಹಸ್ತಿನಾಪುರ
೧೧. ಗೌರಿದೇವಿ	ಕನ್ಯಾಕುಬ್ಜ	೧೨. ರಂಭಾದೇವಿ	ಮಲಯಪರ್ವತ
೧೩. ಕೀರ್ತಿದೇವಿ	ಏಕಾಂಬಕ	೧೪. ವಿಶ್ವಾದೇವಿ	ವಿಶ್ವೇಶ್ವರ
೧೫. ಪೂರುಹೂತಾದೇವಿ	ಪುಷ್ಕರಾವರ್ತ	೧೬. ಮಾರ್ಗದಾಯಿನಿ	ಕೇದಾರತೀರ್ಥ
೧೭. ನಂದಾದೇವಿ	ಹಿಮಂತದ	೧೮. ಭದ್ರಕರ್ಣಿಕಾದೇವಿ	ಗೋಕರ್ಣ
೧೯. ಭವಾನಿ	ಸ್ಥಾನೇಶ್ವರ	೨೦. ಬಿಲ್ವಪತ್ರಿಕಾದೇವಿ	ಬಿಲ್ವಲತೀರ್ಥ
೨೧. ಮಾಧವಿದೇವಿ	ಶ್ರೀಶೈಲಗಿರಿ	೨೨. ಭದ್ರಾದೇವಿ	ಭದ್ರೇಶ್ವರತೀರ್ಥ
೨೩. ಜಯಾದೇವಿ	ವರಾಹಶೈಲತೀರ್ಥ	೨೪. ಕಮಲಾದೇವಿ	ಕಮಲಾಲತೀರ್ಥ
೨೫. ರುದ್ರಾಣಿದೇವಿ	ರುದ್ರಕೋಟಿತೀರ್ಥ	೨೬. ಕಾಳಿದೇವಿ	ಕಾಳಂಜರಬೆಟ್ಟ
೨೭. ಕಪಿಲಾದೇವಿ	ಮಹಾಲಿಂಗತೀರ್ಥ	೨೮. ಮುಕ್ತೇಶ್ವರಿದೇವಿ	ಮರ್ಕೋಟ

೨೯.	ಮಹಾದೇವಿ	ಸಾಲಿಗ್ರಾಮತೀರ್ಥ	೩೦.	ಜಲಪ್ರಿಯಾದೇವಿ	ವಲಿಂಗತೀರ್ಥ
೩೧.	ಕುಮಾರಿದೇವಿ	ಮಾಯಾಪುರಿ	೩೨.	ಲಲಿತಾದೇವಿ	ಸಂತಾನತೀರ್ಥ
೩೩.	ಉತ್ಪಲಾಕ್ಷಿ	ಸಹಸ್ರಾಕ್ಷತೀರ್ಥ	೩೪.	ಮಹೋತ್ಪಾಲದೇವಿ	ಕಮಲಾಕ್ಷತೀರ್ಥ
೩೫.	ಮಂಗಲಾದೇವಿ	ಗಂಗಾ	೩೬.	ವಿಮಲಾದೇವಿ	ಪುರುಷೋತ್ತಮ
೩೭.	ಅಮೋಘಾಕ್ಷಿ	ವಿಪಾಶಾ	೩೮.	ಪಾತಾಳದೇವಿ	ಪುಂಡರವರ್ಧನ
೩೯.	ನಾರಾಯಣದೇವಿ	ಸುಪಾರ್ಶ್ವತೀರ್ಥ	೪೦.	ಭದ್ರಸುಂದರೀದೇವಿ	ವಿಕೂಟತೀರ್ಥ
೪೧.	ವಿಪುಲಾದೇವಿ	ವಿಪುಲಾತೀರ್ಥ	೪೨.	ಕಲ್ಯಾಣದೇವಿ	ಮಲಯಾಚಲ
೪೩.	ಕೋಟದೇವಿ	ಕೋಟತೀರ್ಥ	೪೪.	ಸುಗಂಧಾದೇವಿ	ಮಾಧವವನ
೪೫.	ತ್ರೈಸಂಧ್ಯಾದೇವಿ	ಗೋದಾಶ್ರಮತೀರ್ಥ	೪೬.	ರತಿಪ್ರಿಯಾದೇವಿ	ಗಂಗಾಧ್ವಾರ
೪೭.	ಶಿವಾನಂದದೇವಿ	ಶಿವಕುಂಡತೀರ್ಥ	೪೮.	ನಂದಿನಿದೇವಿ	ದೇವಿಕಾತಟ
೪೯.	ರುಕ್ಮಿಣಿದೇವಿ	ದ್ವಾರಾವತೀಪುರ	೫೦.	ರಾಧಾದೇವಿ	ವೃಂದಾವನ
೫೧.	ದೇವಿಕಾದೇವಿ	ಮಥುರಾಪುರ	೫೨.	ಪರಮೇಶ್ವರಿದೇವಿ	ಪಾತಾಳ
೫೩.	ಸೀತಾದೇವಿ	ಚಿತ್ರಕೂಟ	೫೪.	ವಿಂಧ್ಯಾವಾಸಿನಿದೇವಿ	ವಿಂಧ್ಯಾಚಲ
೫೫.	ಏಕವೀರಾದೇವಿ	ಸಹ್ಯಾದ್ರಿಗಿರಿ	೫೬.	ಚಂಡಿಕಾದೇವಿ	ಹರಿಶ್ಚಂದ್ರ
೫೭.	ರಮಣಾದೇವಿ	ರಾಮತೀರ್ಥ	೫೮.	ಮೃಗಾವತಿದೇವಿ	ಯಮುನಾ
೫೯.	ಮಹಾಲಕ್ಷ್ಮಿದೇವಿ	ಕರವೀರಪುರ	೬೦.	ಉಮಾದೇವಿ	ವಿನಾಯಕತೀರ್ಥ
೬೧.	ಆರೋಗ್ಯಾದೇವಿ	ವೈದ್ಯನಾಥಧಾಮ	೬೨.	ಮಹೇಶ್ವರಿದೇವಿ	ಮಹಾಕಾಲಪುರ
೬೩.	ಅಭಯಾದೇವಿ	ವಿಷ್ಣುತೀರ್ಥ	೬೪.	ಸ್ವಾಹಾದೇವಿ	ಮಹೇಶ್ವರಕ್ಷೇತ್ರ
೬೫.	ಪ್ರಚಂಡಾದೇವಿ	ಭಗಲಾಖಂಡತೀರ್ಥ	೬೬.	ಅಮೃತಾದೇವಿ	ವಿಂಧ್ಯಾಕಂದರಾ
೬೭.	ಮಾಂಡವಿದೇವಿ	ಮಾಂಡ್ಕವ್ಯತೀರ್ಥ	೬೮.	ಚಂಡಿಕಾದೇವಿ	ಮಕರಂದರತೀರ್ಥ
೬೯.	ವರಾರೋಗಾದೇವಿ	ಸೋಮೇಶ್ವರತೀರ್ಥ	೭೦.	ಪುಷ್ಕರಾವತೀದೇವಿ	ಪ್ರಭಾಸಕ್ಷೇತ್ರ
೭೧.	ದೇವಮಾತಾದೇವಿ	ಸರಸ್ವತಿ	೭೨.	ಮಹಾಭಾಗಾದೇವಿ	ಸಮುದ್ರತಟವರ್ತಿ
೭೩.	ಪಿಂಗಳೇಶ್ವರಿದೇವಿ	ಪಯೋಷ್ಣಿ	೭೪.	ಸಿಂಹಿಕಾದೇವಿ	ಕೃತಪಾಚತೀರ್ಥ
೭೫.	ಯಶಷ್ಕರಿದೇವಿ	ಕಾರ್ತಿಕೇಯತೀರ್ಥ	೭೬.	ಲೋಲಾದೇವಿ	ಉತ್ಕಲಾವರ್ತ
೭೭.	ಸುಭದ್ರಾದೇವಿ	ಶೋನಸಂಗಮ	೭೮.	ಮಾತಾ	ಸಿದ್ಧಪುರ
೭೯.	ಅಂಗನಾಲಕ್ಷ್ಮಿದೇವಿ	ಭರತಾಶ್ರಮತೀರ್ಥ	೮೦.	ವಿಶ್ವಮುಖದೇವಿ	ಜಾಲಂತರತೀರ್ಥ

೮೧. ತಾರಾದೇವಿ	ಕಿಷ್ಕಿಂಧಾಕ್ಷೇತ್ರ	೮೨. ತುಷ್ಟಿದೇವಿ	ದೇವಧಾರುವನ
೮೩. ಮೇಧಾದೇವಿ	ಕಾಶ್ಮೀರದೇಶ	೮೪. ಭೀಮಾದೇವಿ	ಹಿಮಾಲಯ
೮೫. ಪುಷ್ಟಿದೇವಿ	ವಿಶ್ವೇಶ್ವರಪುರ	೮೬. ಶುದ್ಧಿದೇವಿ	ಕಪಾಲಮೋಚನ
೮೭. ಮಾತಾದೇವಿ	ಕಾವ್ಯಾವರೋಹಣತೀರ್ಥ	೮೮. ಧ್ವನಿದೇವಿ	ಶಂಖೋದ್ಧಾರತೀರ್ಥ
೮೯. ಧೃತಿದೇವಿ	ಪಿಂಡಾರಕತೀರ್ಥ	೯೦. ಕಾಲಾದೇವಿ	ಚಂದ್ರಭಾಗಾ
೯೧. ಶಿವಕಾರಿಣಿದೇವಿ	ಆಛ್ಛೋದತೀರ್ಥ	೯೨. ಅಮೃತಾದೇವಿ	ವೇಣಿ
೯೩. ಉರ್ವಾದೇವಿ	ಬದರೀ ತೀರ್ಥ	೯೪. ಓಷದೀದೇವಿ	ಉತ್ತರಕುರುಪ್ರದೇಶ
೯೫. ಕುಶೋಧಕದೇವಿ	ಕುಶದ್ವೀಪ	೯೬. ಮನ್ಮಥಾದೇವಿ	ಮನ್ಮಥಕುಂಡ
೯೭. ಸತ್ಯವಾದಿನಿದೇವಿ	ಮುಕುಟತೀರ್ಥ	೯೮. ವಂದನೀಯದೇವಿ	ಅಶ್ವತ್ಥ
೯೯. ನಿಧಿದೇವಿ	ವೈಶ್ರವಣಾಲಯತೀರ್ಥ	೧೦೦.ಗಾಯಿತ್ರಿದೇವಿ	ವೇದವಾದನತೀರ್ಥ
೧೦೧.ಪಾರ್ವತೀದೇವಿ	ವಾಜಿ	೧೦೨.ಇಂದ್ರಾಣಿ	ದೇವಲೋಕ
೧೦೩.ಸರಸ್ವತಿದೇವಿ	ಬ್ರಹ್ಮಮುಖ	೧೦೪.ಪ್ರಭಾದೇವಿ	ಸೂರ್ಯಬಿಂಬ
೧೦೫.ವೈಷ್ಣವದೇವಿ	ಮಾತಾ	೧೦೬.ಅರುಂಧತಿ	ಸತಿ
೧೦೭.ತಿಲೋತ್ತಮಾ	ಸ್ತ್ರೀ	೧೦೮.ಬ್ರಹ್ಮಕಲಾ	ಚಿತ್ತ

ಅನುಬಂಧ ೪

ಗ್ರಂಥಸೂಚಿ

ಅಮೃತ ಸೋಮೇಶ್ವರ, ೧೯೯೮, ಭಗವತೀ ಆರಾಧನೆ, ಪ್ರಕೃತಿ ಪ್ರಕಾಶನ, ಕೋಟೆಕಾರು, ದ.ಕ.

ಕಂಬಾರ, ಚಂದ್ರಶೇಖರ (ಸಂ), ೧೯೮೫, ಕನ್ನಡ ಜಾನಪದ ವಿಶ್ವಕೋಶ, ಬೆಂಗಳೂರು

೧೯೮೦, ನಮ್ಮ ಜಾನಪದ, ಬೆಂಗಳೂರು

ಗೋಪಾಲಕೃಷ್ಣ ಹೆಗಡೆ, ೧೯೮೩, ಶಿರಸಿಯ ಶ್ರೀ ಮಾರಿಕಾಂಬೆ, ಬೆಂಗಳೂರು

ಚಕ್ರವರ್ತಿ, ಜಿ.ಎಸ್., ೧೯೯೮, ಋಕ್‌ಸಂಹಿತಾಸಾರ, ಕೇ. ಸಾ. ಅಕಾಡೆಮಿ, ನವದೆಹಲಿ

ಚಿದಾನಂದಮೂರ್ತಿ, ಎಂ., ೧೯೭೭, ಗ್ರಾಮೀಣ, ಬೆಂಗಳೂರು

ಛಾಯಾ ದಾತಾರ್ (ಮರಾಠಿ ಮೂಲ) ಕನ್ನಡಕ್ಕೆ ಸರಸ್ವತೀ ರಿಸಬೂಡ, ೧೯೯೨, ಸ್ತ್ರೀ ಪುರುಷ, ಬೆಂಗಳೂರು

ಜೋಶಿ, ಶಂ.ಬಾ., ೧೯೭೧, ಋಗ್ವೇದಸಾರ ನಾಗಪ್ರತಿಮಾ ವಿಚಾರ, ಮೈಸೂರು

ದಾಸೇಗೌಡ, ಜಿ.ವಿ., ೧೯೭೮, ಕನ್ನಡ ಐತಿಹ್ಯಗಳು, ಮಂಡ್ಯ

ನಂಜಮ್ಮಣ್ಣಿ, ಎಂ., ೧೯೮೨, ಭಾರತೀಯ ಸಾಮಾಜಿಕ ಸಂಸ್ಥೆಗಳು, ಮೈಸೂರು

ನಲ್ಲೂರು ಪ್ರಸಾದ್ (ಸಂ), ೧೯೮೧, ನಲ್ಲೂರು ದೊರೆಕಾಳಿ, ಬೆಂಗಳೂರು

ನಾಗರಾಜಯ್ಯ, ಹಂಪ., ಡಾ., ೧೯೯೭, ಸಾಂತರರು ಒಂದು ಅಧ್ಯಯನ, ಹೊಂಬುಜ

೧೯೭೬, ಯಕ್ಷಯಕ್ಷಿಯರು, ಬೆಂಗಳೂರು

ನಾಗೇಶ್, ಎಚ್.ವಿ., ೧೯೮೧, ಗ್ರಾಮವ್ಯಾಸಂಗ, ಧಾರವಾಡ

ನಾಯಕ, ಎನ್. ಆರ್., ೧೯೮೩. ಶಕ್ತಿ ದೇವತೆಗಳು, ಐ.ಬಿ. ಎಚ್. ಪ್ರಕಾಶನ, ಬೆಂಗಳೂರು

ಬಡಿಗೇರ, ವಾಸುದೇವ, ೨೦೦೦, ಶಿರಸಂಗಿ ಕಾಳಮ್ಮ, ಹೊಸಪೇಟೆ

ಬಡಿಗೇರ, ವೀರೇಶ ಡಾ., ೧೯೯೯, ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು, ಅಥಣಿ

೧೯೯೭, ಅಡಿಗಲ್ಲು, ಕಾಮಲಾಪುರ

ಬೇವಿನಕಟ್ಟೆ, ಮಂಜುನಾಥ ಡಾ., ೧೯೯೬, ಮಾತಂಗಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೯೯೪, ಜನಪದ ಸಂಸ್ಕೃತಿ, ತೇಜಸ್ವಿ ಪ್ರಕಾಶನ, ಹ್ಯಾರಡ,ಪೂವಿನ ಹಡಗಲಿ

ಬೋರಲಿಂಗಯ್ಯ, ಹಿ.ಚಿ., ೧೯೭೯, ಉಜ್ಜನಿ ಚೌಡಮ್ಮ, ಬೆಂಗಳೂರು

೨೦೦೦, ಬುಡಕಟ್ಟು ದೈವಾರಾಧನೆ, ವಿದ್ಯಾರಣ್ಯ

ಬರ್ಟ್ರೆಂಡ್ ರಸೆಲ್, ಮೂಲ ಅನು.ಪಿ.ವಿ.ನಾರಾಯಣ, ೧೯೭೫,. ಮದುವೆ ಮತ್ತು ನೀತಿ, ಬೆಂಗಳೂರು

ಭಟ್ಟ, ಎಸ್. ಆರ್., ೧೯೮೧, ಪ್ರಾಚೀನ ಭಾರತದಲ್ಲಿ ಜನಜೀವನ, ಬೆಂಗಳೂರು

ಮಜುಂದಾರ್,ಆರ್.ಸಿ.(ಪ್ರ.ಸಂ), ೧೯೯೭, ವೇದಯುಗ, ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಬೆಂಗಳೂರು

ಮನು ಚಕ್ರವರ್ತಿ, ೧೯೯೩, ಭಾರತೀಯ ಸ್ತ್ರೀವಾದ, ಹೆಗ್ಗೋಡು

ಮಲ್ಲಿಕಾರ್ಜುನ ಲಠ್ಠೆ, ೧೯೭೦, ಜಾನಪದ ಕಾವ್ಯದಲ್ಲಿ ಜೀವನ ಧರ್ಮ, ಧಾರವಾಡ

ರಾಮಚಂದ್ರ ರಾವ್, ಎಸ್. ಕೆ. ೧೯೭೫, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ

೧೯೮೧, ಭಾರತೀಯ ದೇವಾಲಯಗಳ ಜಾನಪದ ಮೂಲ, ಬೆಂಗಳೂರು

೧೯೮೩, ಕನ್ನಡನಾಡಿನ ಧಾರ್ಮಿಕ ಪರಂಪರೆ, ಬೆಂಗಳೂರು

ಲಕ್ಕಪ್ಪಗೌಡ, ಎಚ್.ಜೆ. ಮತ್ತು ಬಸವರಾಜ ನೆಲ್ಲಿಸರ, ೧೯೯೩, ಮಲ್ಲಿಗೆ ಮೊಗ್ಗು ಸುರಿದಾವೆ, ತರೀಕೆರೆ

ಲಿಂಗಯ್ಯ, ಡಿ., ೧೯೮೪, ಕರ್ನಾಟಕದ ಗ್ರಾಮದೇವತೆಗಳು, ಬೆಂಗಳೂರು

೧೯೭೬, ಕೊಂತಿ ಪೂಜೆ, ಬೆಂಗಳೂರು

ವಸಂತಕುಮಾರ್, ಎಂ.ಸಿ.(ಸಂ), ೧೯೭೦, ಮಳಲಿ ಗಿಡ್ಡಮ್ಮ, ಮೈಸೂರು

ವೀರಣ್ಣ, ಸಿ., ೧೯೯೯, ಕನ್ನಡ ಕಾವ್ಯ ಕಂಡ ಹೆಣ್ಣು, ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು.

ಸಿದ್ದಲಿಂಗಯ್ಯ ಡಾ., ೧೯೯೭, ಗ್ರಾಮದೇವತೆಗಳು, ಮೂಲ ಭಾರತಿ ಪ್ರಕಾಶನ, ಬೆಂಗಳೂರು

ಸುಬ್ಬಣ್ಣ ರೈ.ಎ., ೧೯೯೮, ಗಾಳೆಮ್ಮ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಶಿವರಾಮ ಕಾರಂತ, ೧೯೬೯, ನಾಗರಿಕತೆಯ ಹೊಸ್ತಿಲಲ್ಲಿ, ಬೆಂಗಳೂರು

ಶ್ರೀಪಾದ ಅಮೃತ ಡಾಂಗೆ, ೧೯೮೩, ಅನು.ಎಂ.ಅನಂತಕೃಷ್ಣ ಹೆಬ್ಬಾರ್,ಎನ್. ರಾಮಚಂದ್ರ ಉಡುಪ, ಭಾರತ ಸಂಘ ಜೀವನದಿಂದ ಗುಲಾಮಗಿರಿಗೆ, ಅಭಿವ್ಯಕ್ತಿ ಪ್ರಕಾಶನ, ಮಂಗಳೂರು

ಹಕಾರಿ, ದೇವೇಂದ್ರಕುಮಾರ, ಸಿ., ೧೯೮೫, ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, ಬೆಂಗಳೂರು

ಹಿರೇಮಠ, ಎಸ್.ಎಸ್., ೨೦೦೦, ದಲಿತ ಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೯೯೩, ಜಾತ್ರೆಗಳು, ಹೊಸಪೇಟೆ

ಹೆಗಡೆ, ಡಾ. ಎಲ್. ಆರ್., ೧೯೯೭, ಬಿಂಬ ಪ್ರತಿಬಿಂಬ, ಡಾ.ಎಲ್.ಆರ್.ಹೆಗಡೆ ಕೃತಿ ಪ್ರಕಾಶನ ಸಮಿತಿ, ಶಿರಸಿ

Agrawala, V.S., 1963, **Mathura Museum Catalogue,** pt, III, JUPHS

1963, **The Glorification of the Great Goddess,** varanasi

Ajit Mookerjee, 1988, **Kali** The Feminine Force , Thames and Hudson, London

Altekar, A.S., 1954, **The Coinage of the Guta Emire**, Bombay

1991, **The position of women in Hindu Civilization,** Delhi

Alexander Marshack, 1972, **The Roots of Civilization,** London

Anne Baring and Jules Cashford,(Ed.), 1993, **The Myth of the Goddess:** Evolution of an Image, Arkana, Penguin Books

Asko Parpola, 1994, **Deciphering the Indus Scrit,** Cambridge University Press

Babb, Lawrence A., 975, **The Divine Hierarchy**, New Yark

Barth, A., 1882, **The Religions of India**, tr. by Rev. J.Wood, London

Basham, A.L., 1961, **The Wonder that was India, A** Survey of the culture of the Indian Sub-Continent before coming of the Muslims, London

Bhandarkar, R.G., 1965, **Vaisnavism, Sainism and Minor Reiligion system,** Collected works of Sir, Bhandarkar, Vol-IV, Bhandarkar Oriental Research institute, Varanasi

Bhattacharyya, B.C., 1921, **Indian Images,** Calcutta

Bhattacharyya, N. N., 1974, **History of Sakta Religion,**

1977, **Indian Mother Goddess,** Delhi

1992, **History of the Tantric Religion**, Manohar, New Delhi

Chattohadhyya, Debirasad 1959, **Lokayata: A Study in Ancient Indian Materialism,** New Delhi

Caldwell,Rt. Rev.Robert, 1956, **A Comparative Grammar of the Dravidian or South India Family of Languages** Madras

Cambell, Joseph., 1959, **The Masks of God;** Primitive Mythology,London

1973, **The Hero with a Thousand Faces,** prinveton

Carmel Berkson, 1995, **The Divine and Demoniac,** Oxford University Press, Delhi

Chattopadhyaya, S., 1962, **The Evolution of Theistic Sects in Ancient India**, Calcutta

Coburn, Thomas B., 1988, **Devi - Mahatmya**: The Crystallization of the Goddess Tradition, Mottilal Banarsidass, Delhi

Coomaraswamy, A.K., 1980, Yaksas, Munshiram Manoharlal Publishers, New Delhi

David Pilbeam, (Ed.), 1995, **The Combridge Encyclopedia of Human Evolution,** Combridge University press, Ney York,

Dikshit, S.K., 1957 ?, **The Mother Goddess**, London

Dhavalikar, M.K.,1963, **The Origin of the Saptamatrikas**, BDCRI

Elmore, W. T., 1984, **Dravidian Gods In Modern Hinduism,** Asian Educational Services, New Delhi

Frazer, Sir, J.G., 1972, **Golden Bough**, New yark

1972, **Golden Bough; Adonis, Attis, Osris,** Newyark

Gurdon, P.R.T., 1907, **The Khasis**, London,

Gatwood, Lynn E., 1985, **Devi and the Spouse Goddess** [women, Sexuality and marriage in India], The Riverdale Company Inc., Riverdale, Maryland,

Ghosh, Niranjan., 1984, **Sri Sarasvthi** In Indian Art and Literature, Sri Satguru Publication, Delhi

Harper, E.B., 1964, **Religion in South Asia**, University of Washington Press

Hopkins, E.W., 1915, **Epic Mythology**, Strasburg,

Hopkins,Thomas, and Alf Hiltebeitel, 1987, **Indus Valley Religion**,VII,

James, E.O., 1957, **TheCultof the Mother Goddess, An Archaeologyical And Documentary Study**, London

Jayakar, pupul., 1989, **The Earth Mother,** Peguin Books India (p) Ltd, New Delhi

Juntington, Susan L., 1999, **The Art of Acnient India:** Buddhist, Hindu, Jain, Weather Hill, New Yord

Jyotsna Chawla, 1990, **The Rgvedic Deities and Their Iconic Forms,** Delhi

Kapadia, K.M., 1947, **Hindu Kinship,** Bombay

Kane, P.V., 1962, **History of Dharmasastra**, 5 vols, Poona,

Karel Werner (Ed.), 1993, **Love Divine** Studies in Bhakti and Devotional Mysticism, Curzon Press, Church Road, Richmond Surrey, TW9 2QA,

Karve, I., 1965, **Kinship Organization in India,** Asia Publishing House, New Delhi

Kinsley, David., 1986, **Hindu Goddesses;** Visions of the Divine Feminine in the Hindu Tradition, Los Angeles

1975, **Freedom from Death in the Worship of Kali,** Numen

Kramrisch, Stella, 1975, **History of Religion,** 14, no.4

Krishna Sastri, H., 1986, **South Indian Imaes of Gods and Goddess,** Asian Educational Services , New Delhi

Kosambi, D.D., 1962, **Myth and Reality**, Bombay

1965, **Ancient India: A History of its Culture and Civilization**, NewYork

Macdonell, A.A., 1963, **The Vedi Mythology,** Varanasi

Mackay, EJ.H., 1936, **Indus Civilisation,** New Yark

1939, **Further Excavations at Mohenjodaro, 2 Vols.,** London

Majumdar, R.C., (G.Ed.,), 1989, **The Vedic Age:** The History and Culture of the Indian People, Bharathiya Vidya Bhavan, Bombay

Marshall, J.H., 1931, **Mohenjodaro and the Indus Civiliasation, 3 Vols.,** London

Max Muller, F., 1956, **The Veda**, Calcutta

Maxwell, T.S., 1997, **The Gods of Asia** Image, Text, and Meaning, Oxford University press, Delhi

Misra, O.P., 1989, **Iconography of the Saptamatrikas,** Agama Prakashan, Delhi

Mitra, S.C., 1922, On the Cult of the Tree-Goddeess in Eastern Bengal, **Man in India,2**

Monier-Williams, 1891, **Brahmanism and Hinduism**, London

Mukhopadyay, Somnath, 1984, **Chandi,** In Art and Iconography, Agam Kala Prakhashan, Delhi

Nagendra K. Singh (Ed.), 2000, **Encyclopeadia of Hinduism,** Anmol Publications Pvt.Ltd., New Delhi,

Neumann, Erich, 1955, **The Great Mother,** London

Obeyesekere, Gananath, 1984, **The Cult of the Goddess Pattini,** Motilal Banarsidass, Delhi

Opert, Gustav, 1893, **Onthe Original Inhabitants of Bharatavaras-India,** London

Pintchman, Tracy, 1987, **The Rise of the Goddess In the Hindu Tradition,** Sri Satguru Publication, Delhi

Philip Rawson, 1988, **The Art of Tantra,** Thames and Hudson Ltd., London,

Radhakrishnan, S., 1962, **Indian Philosophy** Vol.I&II, London

Rajeshwari, D.R., 1989, **Sakti Iconographya,** New Delhi

RamGopal, 1959, **India of Vedic Kalpa Sutras,** Delhi

Rao, T.A. Gopinath, 1914&16, **Elements of Hindu Iconography**, 2 volms, Madras

Rajashwari , D.R., 1989, **Sakti Iconography,** Intellectual Publishing House, NewDelhi

Russell, R.V., 1916, **Tribes and Castes of the Central Province of India,** vol. II,III,

Sathynarayana, K., 1975, **A Study of the hisotry and Culture of the Andhras**, New Delhi

Simone De Beauvoir, 1988, **The Second Sex**, pan books Tran.& ed., Parshley H.M.

Shasi. S., (Ed.), 1996, **Encyclopeadia of Indica,** Anmol Publications P Ltd, New Delhi,

Srinivas Iyengar, P.T., 1929, **Hisotry of the Tamils, from the earliest Times to 600A.D.** Madras

Srinivasan, K.R., 1960, **Some Asects of Religion as revealed by Early Monuments and Literature of the South India,** Madras

Srivastava, M.C.P., 1979, **Mother Goddess:** In Indian art archaeology & Literature, Agam Kala Prakashan, Delhi

Steve Jones, Robert Martir and David Pilbeam (Ed.), 1995, **The Combridge Encyclopedia of Human Evelution,** London

Subodh Kapoor Ed., 2000, **The Hindu:**Encyclopaedia of Hinduism, Cosmo Publication, New Delhi

Tiwari, J.N., 1985, **Goddess Cults in Ancient India** (with special reference to the firt seven centuries A.D.), Delhi

Trivedi, R.D., 1981, **Iconography of Parvthi,** Agama Kala Prakashan, Delhi

Tyler, Stephen A., 1973, **India: An Anthropological persctive**, Goodyear Regional Anthropology Series, Edward Norbeck (ed) Pacific Palisades

Upadhyaya, B.S.,1974, **Women in Rigveda**, New Delhi

Vats, M.S., 1940, **Excavations at Harppa,** Calcutta

Vibha Tripathi, & Ajeet K Srivstava, 1994, **The Indus Terracottas,** Sharada Publishig House, Delhi

Ward, Barbara (Ed.), 1963, **A Sociological review. In Women in the new Asia,** UNESCO,Paris

Wilkins, W.J., 1882, **Hindu Mythology,** Calcutta

Wheelar R.E. Mortimer, 1953, **Indus Civiliastion,** Cambridge

Whitehead, R. Rev. Henry, 1921, **The Villager Gods of South India,** Calcutta

ಪತ್ರಿಕೆಗಳು

ಕರ್ನಾಟಕ ಭಾರತಿ, ಧಾರವಾಡ

ಜಾನಪದ, ಮೈಸೂರು

ಜಾನಪದ ಜಗತ್ತು, ಬೆಂಗಳೂರು

ಜಾನಪದ ಸಾಹಿತ್ಯ ದರ್ಶನ, ಧಾರವಾಡ

ಸಾಧನೆ, ಬೆಂಗಳೂರು

ಸುಧಾ ವಿಶೇಷಾಂಕ

Ancient India Bulletin of the Achaeological Survey of India

Archaeological Survey of India (Annual Reports)

Antiquity

Folk-Lore

Indian Archeology -A Review

Indian Culture

Journals of the Asiatic Society of Bengal, Calcutta

Journal of Branch of the Royal Asiatic Society, Bombay

Journal of the Royal Asiatic Society of Great Britain and Ireland, London

AKSHARA GRANTHALAYA
ACC.NO. 051661